# THE BOOK WAS DRENCHED

UNIVERSAL LIBRARY
OU_202181
UNIVERSAL LIBRARY

**OSMANIA UNIVERSITY LIBRARY**

Call No. K 349·547 V34N   Vol VIII   Accession No. K 4484

Author [illegible]

Title [illegible]   1948

This book should be returned on or before the date last marked below.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೨೯

ಶ್ರೀವೇದವ್ಯಾಸರಿಂದ ರಚಿತವಾದ

# ನಾರದೀಯ ಮಹಾಪುರಾಣ

(ಕನ್ನಡ ಅರ್ಥಾನುವಾದ ವಿವರಣೆಗಳ ಸಹಿತ)

## ಭಾಗ—೮

ಉತ್ತರಭಾಗ

(೧—೩೭ ಅಧ್ಯಾಯಗಳು)

ಪಂಡಿತಶಿರೋಮಣಿ,
ಮಹಾವಿದ್ವಾನ್, ಪಂಡಿತರತ್ನಂ, ವಿದ್ವನ್ಮಣಿ,
**ದೊಡ್ಡಬಳ್ಳಾಪುರಂ ವಾಸುದೇವಾಚಾರ್ಯ.**
ಅನುವಾದಕ.

ಮೈಸೂರು
ಶ್ರೀಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್
೧೯೪೮

# ಭೂಮಿಕೆ

ಉತ್ತರಭಾಗವು ಮಾಂಧಾತರಾಜವಸಿಷ್ಠಮುನಿಗಳ ಸಂವಾದರೂಪವಾಗಿದೆ. ಇದರಲ್ಲಿ ಎಂಬತ್ತೆರಡು ಅಧ್ಯಾಯಗಳಿವೆ. ಮೊದಲನೆಯ ಮೂವತ್ತೇಳು ಅಧ್ಯಾಯಗಳಲ್ಲಿ ರುಕ್ಮಾಂಗದ ಮಹಾರಾಜನ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದೆ. ಪವಿತ್ರವಾದ ಆ ಚರಿತ್ರೆಯೇ ಎಂಟನೆಯದಾದ ಈ ಸಂಪುಟದ ವಿಷಯವು.

ರುಕ್ಮಾಂಗದ ಮಹಾರಾಜನು ತ್ರೇತಾ-ದ್ವಾಪರಯುಗಗಳ ಸಂಧಿಕಾಲದಲ್ಲಿ ಜಂಬೂದ್ವೀಪಾಧಿಪತಿಯಾಗಿದ್ದನು. ಆ ಮಹಾರಾಜನ ರಾಜ್ಯಭಾರವೈಖರಿ, ದಿಗ್ವಿಜಯ ಮತ್ತು ಜೀವನಚರಿತ್ರೆಗಳನ್ನು ವಿವರಿಸುವ ನೆಪದಿಂದ ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ನೀತಿಗಳೆಲ್ಲವೂ ಇಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ. ರಾಜಧರ್ಮ, ಭೃತ್ಯಕರ್ತವ್ಯ, ಸ್ತ್ರೀಧರ್ಮ, ಪತಿವ್ರತೆಯ ವೈಶಿಷ್ಟ್ಯ, ದಾಂಪತ್ಯಜೀವನ, ಮಕ್ಕಳು ತಂದೆತಾಯಿಗಳಲ್ಲಿ ನಡೆದುಕೊಳ್ಳಬೇಕಾದ ರೀತಿ, ವಿಧವಾಧರ್ಮ, ಏಕಾದಶೀವ್ರತದ ಮಹಿಮೆ, ದೇವಭಕ್ತಿ, ಇಷ್ಟಾರ್ಥಸಾಧನೆಗೋಸ್ಕರ ಸಂದರ್ಭಾನುಗುಣವಾಗಿ ಅನುಸರಿಸಬಹುದಾದ ಉಪಾಯ ಮುಂತಾದ ಬಹು ವಿಷಯಗಳು ಇಲ್ಲಿ ಅಡಗಿವೆ.

ಈ ವಿಷಯಗಳನ್ನು ಚೆನ್ನಾಗಿ ಮನನರಿತು ಅದರಂತೆ ಆಚರಣೆ ಮಾಡುವುದರಿಂದ ಮಾನವನು ಐಹಿಕಜೀವನವನ್ನು ಸುಖಮಯವಾಗಿ ಕಳೆದು ಶಾಶ್ವತ ಸುಖಸಂಪತ್ತನ್ನೂ ಹೊಂದುವನು.

ಇಂತಹ ಅಮೂಲ್ಯ ವಿಷಯಗಳನ್ನೊಳಗೊಂಡಿರುವ ಈ ಪುರಾಣವನ್ನು ಕನ್ನಡ ಭಾಷೆಯಲ್ಲಿ ಪರಿವರ್ತಿಸಿ ಸಂಸ್ಕೃತಭಾಷೆಯನ್ನರಿಯದವರೂ ಸಹ ತತ್ವಜ್ಞಾನವನ್ನು ಸಂಪಾದಿಸಲು ಅವಕಾಶವನ್ನು ಕಲ್ಪಿಸಿರುವ ಶ್ರೀಮದ್ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ರವರ ಸನ್ನಿಧಾನದಲ್ಲಿ ಕೃತಜ್ಞತೆಯನ್ನರ್ಪಿಸಿ ನಮ್ಮ ಮಹಾಪ್ರಭುಗಳಿಗೆ ಪುರಾಣದೇವತೆಯಾದ ಭಗವಂತನು ಆಯುರಾರೋಗ್ಯ ಸತ್ಸಂತಾನಾದಿ ಸಂಪತ್ತುಗಳನ್ನನುಗ್ರಹಿಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು,
ಸರ್ವಧಾರಿ ಸಂ॥ ಭಾದ್ರಪದ ಪೂರ್ಣಿಮಾ,

18—9—1948

ಪಂಡಿತಶಿರೋಮಣಿ, ಮಹಾವಿದ್ವಾನ್,
ಪಂಡಿತರತ್ನಂ, ವಿದ್ವನ್ಮಣಿ,
**ಡಿ. ವಾಸುದೇವಾಚಾರ್ಯ**
ಅನುವಾದಕ.

# ವಿಷಯಾನುಕ್ರಮಣಿಕೆ


ಪುಟಸಂಖ್ಯೆ

**ಒಂದನೆಯ ಅಧ್ಯಾಯ**

ಏಕಾದಶಿಯ ಮಹಿಮೆ 1—6

**ಎರಡನೆಯ ಅಧ್ಯಾಯ**

ದಶಮಿಯವೇಧೆ, ಹರಿವಾಸರ, ಶ್ರವಣದ್ವಾದಶಿ, ಯುಗಾದಿಗಳ ವಿವರಣೆ 7—18

**ಮೂರನೆಯ ಅಧ್ಯಾಯ**

ರುಕ್ಮಾಂಗದನ ಚರಿತ್ರೆ.
ಅವನು ತನ್ನ ಪ್ರಜೆಗಳೆಲ್ಲರಿಂದಲೂ ಏಕಾದಶೀವ್ರತವನ್ನು ಮಾಡಿಸುತ್ತಿದ್ದುದು.
ಆದರಿಂದ ಯಮಲೋಕವು ಬರಿಯದಾಗಿ, ಯಮರಾಜನು ಬ್ರಹ್ಮದೇವರಬಳಿಗೆ ಹೋದುದು. 19—33

**ನಾಲ್ಕನೆಯ ಅಧ್ಯಾಯ**

ಯಮನು ತನ್ನ ಪರಾಭವವನ್ನು ಬ್ರಹ್ಮನಿಗೆ ಹೇಳಿದುದು 34—40

**ಐದನೆಯ ಅಧ್ಯಾಯ**

ಯಮನ ವಿಲಾಪವು ಮುಂದುವರೆದುದು 41—44

**ಆರನೆಯ ಅಧ್ಯಾಯ**

ಬ್ರಹ್ಮನು ಯಮನಿಗೆ ಹೇಳಿದ ಉತ್ತರ 45—49

**ಏಳನೆಯ ಅಧ್ಯಾಯ**

ಯಮನ ಪುನಃ ಪ್ರಾರ್ಥನೆ.
ಬ್ರಹ್ಮನು ಮೋಹಿಯನ್ನು ಸೃಷ್ಟಿಸಿ ಅವಳಿಗೆ ಕರ್ತವ್ಯವನ್ನು ಉಪದೇಶಿಸಿದುದು 50—67

ಪುಟಸಂಖ್ಯೆ

**ಎಂಟನೆಯ ಅಧ್ಯಾಯ**

ಮಂದರಪರ್ವತ ವರ್ಣನೆ 68—73

**ಒಂಬತ್ತನೆಯ ಅಧ್ಯಾಯ**

ರುಕ್ಮಾಂಗದನು ತನ್ನ ಮಗನಾದ ಧರ್ಮಾಂಗದನಿಗೆ ರಾಜ್ಯಭಾರವನ್ನು ವಹಿಸಿ, ಅವನ ಧಾರ್ಮಿಕರಾಜ್ಯಭಾರಕ್ರಮವನ್ನು ನೋಡಿ ತೃಪ್ತನಾಗಿ, ಬೇಟೆಗೆ ಹೋಗುವೆನೆಂದು ತನ್ನ ಪತ್ನಿಗೆ ಹೇಳಿದುದು 74—84

**ಹತ್ತನೆಯ ಅಧ್ಯಾಯ**

ಸಂಧ್ಯಾವಳಿಯು ತನ್ನ ಪತಿಗೆ ಈ ಸಂದರ್ಭದಲ್ಲಿ ಮೃಗಹಿಂಸೆಯು ಕರ್ತವ್ಯವಲ್ಲವೆಂದು ಹೇಳಿದುದು.

ರುಕ್ಮಾಂಗದನು ಹಿಂಸೆಮಾಡುವುದಿಲ್ಲವೆಂದು ಹೆಂಡತಿಗೆ ಭರವಸೆ ಕೊಟ್ಟು ವಾಮದೇವಾಶ್ರಮಕ್ಕೆ ಹೋಗಿ ಅವರನ್ನು ಕುರಿತು ತನ್ನೀಸಕಲವೈಭವಕ್ಕೂ ಕಾರಣವಾದ ಸುಕೃತ ವಾವುದೆಂಬುದನ್ನು ಪ್ರಶ್ನಿಸಿದುದು 85—99

**ಹನ್ನೊಂದನೆಯ ಅಧ್ಯಾಯ**

ವಾಮದೇವನು ರುಕ್ಮಾಂಗದರಾಜನ ಪೂರ್ವಜನ್ಮದ ಅಶೂನ್ಯಶಯನ ವ್ರತವನ್ನು ವಿವರಿಸಿದುದು.

ರುಕ್ಮಾಂಗದನು ಅಲ್ಲಿಂದ ಹೊರಟು ಮಂದರಪರ್ವತದಲ್ಲಿದ್ದ ಮೋಹಿನಿಯನ್ನು ಕಂಡು ಮಾತನಾಡಿದುದು 100—111

**ಹನ್ನೆರಡನೆಯ ಅಧ್ಯಾಯ**

ರುಕ್ಮಾಂಗದನು ತನ್ನನ್ನು ವರಿಸಲು ಮೋಹಿನಿಯು ಬೇಡಿದ ವರವನ್ನು ಕೊಡುವೆನೆಂದು ಪ್ರತಿಜ್ಞೆಮಾಡಿದುದು 112—119

**ಹದಿಮೂರನೆಯ ಅಧ್ಯಾಯ**

ರುಕ್ಮಾಂಗದ ಮೋಹಿನಿಯರ ವಿವಾಹ.

ಸೌತಿಯರ ಸಹವಾಸದಲ್ಲಿ ಆಗುವ ದುಃಖವಿವರಣೆ.

ಪುಟಸಂಖ್ಯೆ

ರುಕ್ಮಾಂಗದನು ಮೋಹಿನಿಯೊಡನೆ ತನ್ನ ಪಟ್ಟಣವನ್ನು ಕುರಿತು ಹೊರಟುದು 120—125

**ಹದಿನಾಲ್ಕನೆಯ ಅಧ್ಯಾಯ**

ರುಕ್ಮಾಂಗದನು ತನ್ನ ಕುದುರೆಯ ಗೊರಸಿಗೆ ಸಿಕ್ಕಿಬಿದ್ದಿದ್ದ ಹಲ್ಲಿಯನ್ನು ಪಚರಿಸಿ, ಅದರ ಪೂರ್ವಜನ್ಮದ ವೃತ್ತಾಂತವನ್ನು ಕೇಳಿ, ಅದಕ್ಕೆ ಶ್ರವಣದ್ವಾದಶಿಯ ಪುಣ್ಯವನ್ನು ಧಾರೆಯೆರೆದು ವೈಕುಂಠವನ್ನು ಹೊಂದುವಂತೆ ಮಾಡಿದುದು 126—142

**ಹದಿನೈದನೆಯ ಅಧ್ಯಾಯ**

ರುಕ್ಮಾಂಗದನು ರಾಜಧಾನಿಯ ಬಳಿಗೆ ಬಂದುದನ್ನು ತಿಳಿದು ಧರ್ಮಾಂಗದನು ಬಂದು ತಂದೆಯನ್ನು ಇದಿರುಗೊಂಡುದು.
ರಾಜನು ಪ್ರಜೆಗಳ ಕುಶಲವನ್ನು ಕೇಳಿದುದು.
ಪುತ್ರಧರ್ಮ ರಾಜಧರ್ಮಗಳ ವಿವರಣೆ 143—154

**ಹದಿನಾರನೆಯ ಅಧ್ಯಾಯ**

ಧರ್ಮಾಂಗದನು ತಂದೆಯಿಂದ ಮೋಹಿನಿಯ ವಿವಾಹವೃತ್ತಾಂತವನ್ನು ಕೇಳಿ, ಆ ಮೋಹಿನಿಯನ್ನು ಸತ್ಕರಿಸಿದುದು
ಅವನು ತಾಯಿಗೆ ಪತಿವ್ರತಾಧರ್ಮವನ್ನು ಹೇಳುತ್ತಾ ಶೂದ್ರಪತ್ನಿಯ ಕಥೆಯನ್ನು ತಿಳಿಸಿದುದು 155—174

**ಹದಿನೇಳನೆಯ ಅಧ್ಯಾಯ**

ಮಗನಿಗೆ ಸಕಲರಾಜ್ಯಭಾರವನ್ನೂ ವಹಿಸಬೇಕೆಂದು ಮೋಹಿನಿಯು ರುಕ್ಮಾಂಗದನನ್ನು ಒತ್ತಾಯಪಡಿಸಿದುದು 175—187

**ಹದಿನೆಂಟನೆಯ ಅಧ್ಯಾಯ**

ರುಕ್ಮಾಂಗದನು ಮೋಹಿನಿಯೊಡನೆ ವಿಹರಿಸಲು ತಡೆಮಾಡಿದ ಅವನ ಇತರಪತ್ನಿಯರೆಲ್ಲರನ್ನೂ ಧರ್ಮಾಂಗದನು ಸಮಾಧಾನ ಮಾಡಿದುದು 188—199

ಪುಟಸಂಖ್ಯೆ

**ಹತ್ತೊಂಬತ್ತನೆಯ ಅಧ್ಯಾಯ**

ರುಕ್ಮಾಂಗದನು ತನ್ನ ಮಗನಿಗೆ ರಾಜಧರ್ಮವನ್ನು ಉಪದೇಶಿಸಿ ಅಧಿಕಾರವನ್ನು ವಹಿಸಿ ಮೋಹಿನಿಯೊಡನೆ ವಿಹರಿಸಿದುದು.

ಧರ್ಮಾಂಗದನ ರಾಜ್ಯಭಾರವಿವರಣೆ 200—211

**ಇಪ್ಪತ್ತನೆಯ ಅಧ್ಯಾಯ**

ಧರ್ಮಾಂಗದನು ದಿಗ್ವಿಜಯಮಾಡಿ ತಂದ ಸಂಪತ್ತನ್ನು ತಂದೆಗೊಪ್ಪಿಸಿದುದು 212—218

**ಇಪ್ಪತ್ತೊಂದನೆಯ ಅಧ್ಯಾಯ**

ಧರ್ಮಾಂಗದನು ಕರೆದುತಂದಿದ್ದ ಕನ್ಯೆಯರನ್ನು ಅವನಿಗೇ ಕೊಟ್ಟು ರುಕ್ಮಾಂಗದನು ಮದುವೆಮಾಡಿದುದು 219—227

**ಇಪ್ಪತ್ತೆರಡನೆಯ ಅಧ್ಯಾಯ**

ಬಹುವರ್ಷಗಳು ಮೋಹಿನಿಯೊಡನೆ ವಿಹರಿಸಿದ ರುಕ್ಮಾಂಗದನು ಕಾರ್ತಿಕಮಾಸದಲ್ಲಿ ಉಪವಾಸವ್ರತಾಚರಣೆಗೆ ಸಮ್ಮತಿಯನ್ನು ಕೇಳಲು, ಮೋಹಿನಿಯು ಇಚ್ಛೆಯಂತೆ ಕಾರ್ತಿಕಮಹಿಮೆಯನ್ನು ವಿವರಿಸಿದುದು 228—246

**ಇಪ್ಪತ್ತುಮೂರನೆಯ ಅಧ್ಯಾಯ**

ಮೋಹಿನಿಯ ಇಷ್ಟಪ್ರಕಾರ ರಾಜನು ಸಂಧ್ಯಾವಳಿಯಿಂದ ಕೃಚ್ಛ್ರವ್ರತವನ್ನು ಮಾಡಿಸಿದುದು.

ದಿನತ್ರಯವ್ರತವನ್ನು ಮಾಡಬೇಕೆಂದು ಧರ್ಮಾಂಗದನು ಸಾರಿಸಿದುದನ್ನು ಕೇಳಿದ ರುಕ್ಮಾಂಗದನು ಮಂಚವನ್ನು ಬಿಟ್ಟು ಇಳಿಯಲು, ಮೋಹಿನಿಯು ಇದೇಸಮಯವೆಂದರಿತು ವ್ರತವನ್ನು ಮಾಡಕೂಡದೆಂದು ನಿರ್ಬಂಧಿಸಿದುದು.

ಸತ್ಯವಚನದ ಮಹಿಮೆಯ ವರ್ಣನೆ 247—267

ಪುಟಸಂಖ್ಯೆ

**ಇಪ್ಪತ್ತನಾಲ್ಕನೆಯ ಅಧ್ಯಾಯ**

ರಾಜರೇ ಮುಂತಾದವರು ಏಕಾದಶೀ ಉಪವಾಸ ಮಾಡಬಾರ ದೆಂದು ಹೇಳಿದ ಮೋಹಿನೀಗೌತಮಾದಿಗಳ ಮತವನ್ನು ರುಕ್ಮಾಂಗದನು ಖಂಡಿಸಿ ಉಪವಾಸವು ಯುಕ್ತವೆಂದು ವರ್ಣಾಶ್ರಮಧರ್ಮಗಳ ವಿವರಣೆಸಹಿತವಾಗಿ ತಿಳಿಸಿದುದು 268—279

**ಇಪ್ಪತ್ತೈದನೆಯ ಅಧ್ಯಾಯ**

ಮೋಹಿನಿಯು ತನ್ನ ಇಷ್ಟದಂತೆ ರಾಜನು ಉಪವಾಸ ಬಿಡ ಲಿಲ್ಲವೆಂದು ಕುಪಿತಳಾಗಿ ಗಂಡನನ್ನು ಧಿಕ್ಕರಿಸಿಹೊರಡಲು ಧರ್ಮಾಂಗದನು ಅವಳನ್ನು ಸಮಾಧಾನಮಾಡಿ ತಂದೆಯ ಬಳಿಗೆ ಕರೆತಂದುದು 280—299

**ಇಪ್ಪತ್ತಾರನೆಯ ಅಧ್ಯಾಯ**

ರುಕ್ಮಾಂಗದನು ತನ್ನ ಮಗನಿಗೆ ಮೋಹಿನಿಯ ದುರಾಗ್ರಹವನ್ನು ವಿವರಿಸಿ ಏಕಾದಶಿಯಲ್ಲಿನ ಭೋಜನವು ಯುಕ್ತವಲ್ಲ ವೆಂದು ಹೇಳಿದುದು 300—304

**ಇಪ್ಪತ್ತೇಳನೆಯ ಅಧ್ಯಾಯ**

ಸಂಧ್ಯಾವಳಿಯು ಮೋಹಿನಿಯನ್ನು ಸಮಾಧಾನಪಡಿಸುತ್ತ ಪತಿವಚನ ಪಾಲನೆಯ ವಿಷಯದಲ್ಲಿ ಕಟ್ಟಿಗೆ ಹುಳುವಿನ ಕಥೆಯನ್ನು ಹೇಳಲಾರಂಭಿಸಿದುದು 305—337

**28—31 ಅಧ್ಯಾಯಗಳು.**

ಕಾಷ್ಠೀಲೋಪಾಖ್ಯಾನ (ಕಟ್ಟಿಗೆಹುಳುವಿನ ಕಥೆ) 338—408

**ಮೂವತ್ತೆರಡನೆಯ ಅಧ್ಯಾಯ**

ರಾಜನು ಏಕಾದಶಿಯಲ್ಲಿ ಊಟಮಾಡದಿದ್ದರೆ ಅವನ ಮಗನ ತಲೆಯನ್ನು ಕತ್ತರಿಸಬೇಕೆಂಬ ಬೇರೆವರವನ್ನು ಮೋಹಿ ನಿಯು ಕೇಳಿದುದು 409—422

ಪುಟಸಂಖ್ಯೆ

ಮೂವತ್ತುಮೂರನೆಯ ಅಧ್ಯಾಯ

ಧರ್ಮಾಂಗದನು ತನ್ನನ್ನು ಸಂಹರಿಸಿ ಸತ್ಯವಚನವನ್ನು ಪಾಲಿಸೆಂದು ತಂದೆಯನ್ನು ಬೇಡಿದುದು 423—438

ಮೂವತ್ತುನಾಲ್ಕನೆಯ ಅಧ್ಯಾಯ

ರುಕ್ಮಾಂಗದನು ಮಗನನ್ನು ಕೊಲ್ಲಲು ಕತ್ತಿಯನ್ನೆತ್ತಿದಾಗ ನಾರಾಯಣನು ಪ್ರತ್ಯಕ್ಷನಾಗಿ ಆ ಮೂವರನ್ನೂ ತನ್ನ ಲೋಕಕ್ಕೆ ಕರೆದುಕೊಂಡು ಹೋದುದು 439—446

ಮೂವತ್ತೈದನೆಯ ಅಧ್ಯಾಯ

ರಾಜಪುರೋಹಿತನು ಕುಪಿತನಾಗಿ ಮೋಹಿಯನ್ನು ಸುಟ್ಟು ಬೂದಿಮಾಡಿದುದು 447—466

ಮೂವತ್ತಾರನೆಯ ಅಧ್ಯಾಯ

ಮೋಹಿನಿಯು ಸೂಕ್ಷ್ಮರೂಪದಿಂದ ಹೊರಟು ಎಲ್ಲಿಯೂ ಸ್ಥಾನವು ದೊರೆಯದೆ ತನ್ನ ತಂದೆಯ ಬಳಿಗೆಹೋಗಿ ತನಗೆ ಸ್ಥಾನವನ್ನು ಕೊಡಿಸಬೇಕೆಂದು ಬೇಡಿದುದು 467—480

ಮೂವತ್ತೇಳನೆಯ ಅಧ್ಯಾಯ

ಬ್ರಹ್ಮಾದಿದೇವತೆಗಳು ಮೋಹಿನಿಗೆ ದಶಮಿಯ ಪ್ರಾಂತಭಾಗವಾದ ಅರುಣೋದಯದಲ್ಲಿ ಸ್ಥಾನವನ್ನು ಅನುಗ್ರಹಿಸಿದುದು.

ಬ್ರಹ್ಮನು ಪುರೋಹಿತನನ್ನು ಸಮಾಧಾನಪಡಿಸಿ ಮೋಹಿನಿಗೆ ದೇಹವನ್ನು ಕೊಟ್ಟು ತೀರ್ಥಯಾತ್ರೆಗೆ ಅವಳನ್ನು ಕರೆದೊಯ್ಯುವಂತೆ ಪುರೋಹಿತನಿಗೆ ಹೇಳಿದುದು 481—496

॥ ಶ್ರೀಃ ॥

# ನಾರದೀಯಪುರಾಣಂ

## ಉತ್ತರಭಾಗಃ

## ಪ್ರಥಮೋಽಧ್ಯಾಯಃ

ಪಾಂತು ವೋ ಜಲದಶ್ಯಾಮಾಃ ಶಾರ್ಙ್ಗಜ್ಯಾಘಾತಕರ್ಕಶಾಃ ।
ತ್ರೈಲೋಕ್ಯಮಂಡಪಸ್ತಂಭಾಶ್ಚತ್ವಾರೋ ಹರಿಬಾಹವಃ ॥ ೧ ॥

ಸುರಾಸುರಶಿರೋರತ್ನನಿಘೃಷ್ಟಮಣಿರಂಜಿತಂ ।
ಹರಿಪಾದಾಂಬುಜದ್ವಂದ್ವಮಭೀಷ್ಟಪ್ರದಮಸ್ತು ನಃ ॥ ೨ ॥

ಮಾಂಧಾತೋವಾಚ

ಪಾಪೇಂಧನಸ್ಯ ಘೋರಸ್ಯ ಶುಷ್ಕಾರ್ದ್ರಸ್ಯ ದ್ವಿಜೋತ್ತಮ ।
ಕೋ ವಹ್ನಿರ್ದಹತೇ ತಸ್ಯ ತದ್ಭವಾನ್ ವಕ್ತುಮರ್ಹತಿ ॥ ೩ ॥

---

### ಒಂದನೆಯ ಅಧ್ಯಾಯವು

೧. ಮೇಘದಂತೆ ಶ್ಯಾಮಬಣ್ಣವುಳ್ಳ, ಬಿಲ್ಲಿನಹೆದೆಯು ತಾಕಿ ಜಡ್ಡುಗಟ್ಟಿ ಕಠಿನವಾಗಿರುವ, ಮೂರು ಲೋಕಗಳೆಂಬ ಮಂಟಪಗಳಿಗೆ ಕಂಬದಂತಿರುವ ಶ್ರೀಹರಿಯ ನಾಲ್ಕು ಬಾಹುಗಳು ನಿಮ್ಮನ್ನು ರಕ್ಷಿಸಲಿ.

೨. ದೇವಾಸುರರ ಶಿರಸ್ಸಿನಲ್ಲಿರುವ ಚೂಡಾಮಣಿಯಿಂದ ಘರ್ಷಿಸಲ್ಪಟ್ಟ ಮಣಿಯಿಂದ ಕೆಂಪಾಗಿರುವ ಹರಿಯ ಪಾದಕಮಲಗಳೆರಡು ನಮಗೆ ಅಭೀಷ್ಟದಾಯಕಗಳಾಗಲಿ.

೩. ಮಾಂಧಾತನು ಹೇಳಿದನು:—ಬ್ರಾಹ್ಮಣೋತ್ತಮನೇ! ಒಣಗಿದ ಅಥವಾ ಹಸಿಯದಾದ ಎಂದರೆ ಅಜ್ಞಾನದಿಂದ ಅಥವಾ ಜ್ಞಾನಪೂರ್ವಕವಾಗಿ ಮಾಡಿದ ಉಗ್ರಪಾಪಗಳೆಂಬ ಕಟ್ಟಿಗೆಯನ್ನು ಯಾವ ಅಗ್ನಿಯು ದಹಿಸುತ್ತದೆ? ಅದನ್ನು ನೀನು ನನಗೆ ಹೇಳಬೇಕು.

ನಾಜ್ಞಾತಂ ತ್ರಿಷು ಲೋಕೇಷು ಚತುರ್ಮುಖಸಮುದ್ಭವ ।
ವಿದ್ಯತೇ ತವ ವಿಪ್ರೇಂದ್ರ ತ್ರಿವಿಧಸ್ಯ ಸುನಿಶ್ಚಿತಂ ॥ ೪ ॥

ಅಜ್ಞಾತಂ ಪಾತಕಂ ಶುಷ್ಕಂ ಜ್ಞಾತಂ ಚಾರ್ದ್ರಮುದಾಹೃತಂ ।
ಭಾವ್ಯಂ ವಾಪ್ಯಥವಾಽತೀತಂ ವರ್ತಮಾನಂ ವದಸ್ವ ನಃ ॥ ೫ ॥

ವಹ್ನಿನಾ ಕೇನ ತದ್ಭಸ್ಮ ಭವೇದೇತನ್ಮತಂ ಮಮ ।

ವಸಿಷ್ಠ ಉವಾಚ

ಶ್ರೂಯತಾಂ ನೃಪಶಾರ್ದೂಲ ವಹ್ನಿನಾ ಯೇನ ತದ್ಭವೇತ್ ॥ ೬ ॥
ಭಸ್ಮ ಶುಷ್ಕಂ ತಥಾಽಽರ್ದ್ರಂ ಚ ಪಾಪಮಸ್ಯ ಹ್ಯಶೇಷತಃ ॥ ೭ ॥

ಅವಾಪ್ಯ ವಾಸರಂ ವಿಷ್ಣೋರ್ಯೋ ನರಃ ಸಂಯತೇಂದ್ರಿಯಃ ।
ಉಪವಾಸಪರೋ ಭೂತ್ವಾ ಪೂಜಯೇನ್ಮಧುಸೂದನಂ ॥ ೮ ॥

---

೪. ಚತುರ್ಮುಖಪುತ್ರನಾದ ಬ್ರಾಹ್ಮಣಶ್ರೇಷ್ಠನೇ! ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿ ಮೂರು ಲೋಕಗಳಲ್ಲಿಯೂ ನಡೆದುದೆಲ್ಲವೂ ನಿನಗೆ ನಿಶ್ಚಯವಾಗಿ ತಿಳಿದಿದೆ. ನಿನಗೆ ತಿಳಿಯದಿರುವುದಾವುದೂ ಇಲ್ಲ. ಇದು ನಿಶ್ಚಯವು!

೫-೭. ತಿಳಿಯದೇ ಮಾಡಿದ ಪಾಪವು ಶುಷ್ಕವೆಂತಲೂ, (ಅಧಿಕ ದುಃಖಪ್ರದವಲ್ಲ) ತಿಳಿದು ಮಾಡಿದ ಪಾಪವು ಆರ್ದ್ರವು (ಅಧಿಕ ದುಃಖಪ್ರದ) ಎಂತಲೂ ಉಕ್ತವಾಗಿದೆ. ಭವಿಷ್ಯತ್ತು, ಅತೀತ ಮತ್ತು ವರ್ತಮಾನಗಳಾದ ಪಾಪಗಳೆಲ್ಲವೂ ಯಾವ ಅಗ್ನಿಯಿಂದ ಸುಟ್ಟು ಬೂದಿಯಾಗುವುದೆಂಬುದನ್ನು ನನಗೆ ಹೇಳು.

ವಸಿಷ್ಠನು ಹೇಳಿದನು:— ನೃಪಶ್ರೇಷ್ಠನೇ! ಪ್ರಾಣಿಯ ಶುಷ್ಕ ಅಥವಾ ಆರ್ದ್ರವಾದ ಪಾಪಗಳೆಲ್ಲವೂ ಯಾವ ಅಗ್ನಿಯಿಂದ ಭಸ್ಮವಾಗುವುದೆಂಬುದನ್ನು ಹೇಳುವೆನು ಕೇಳು.

೮-೯. ಯಾವ ಮನುಷ್ಯನು ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ವಿಷ್ಣುವಾಸರ ಎಂದರೆ ಏಕಾದಶೀದಿನದಲ್ಲಿ ಧಾತ್ರೀ ಸ್ನಾನಮಾಡಿ

**ಸ ಧಾತ್ರೀಸ್ನಾನಸಹಿತೋ ರಾತ್ರೌ ಜಾಗರಣಾನ್ವಿತಃ |**
**ವಿಶೋಧಯತಿ ಪಾಪಾನಿ ಕಿತವೋ ಹಿ ಯಥಾ ಧನಂ || ೯ ||**

**ಏಕಾದಶೀಸಮಾಖ್ಯೇನ ವಹ್ನಿನಾ ಪಾತಕೇಂಧನಂ |**
**ಭಸ್ಮತಾಂ ಯಾತಿ ರಾಜೇಂದ್ರ ಅಪಿ ಜನ್ಮಶತೋದ್ಭವಂ || ೧೦ ||**

**ನೇದೃಶಂ ಪಾವನಂ ಕಿಂಚಿನ್ನರಾಣಾಂ ಭೂಪ ವಿದ್ಯತೇ |**
**ಯಾದೃಶಂ ಪದ್ಮನಾಭಸ್ಯ ದಿನಂ ಪಾತಕಹಾನಿದಂ || ೧೧ ||**

**ತಾವತ್ಪಾಪಾನಿ ದೇಹೇಽಸ್ಮಿಂಸ್ತಿಷ್ಠಂತಿ ಮನುಜಾಧಿಪ |**
**ಯಾವನ್ನೋಪವಸೇಜ್ಜಂತುಃ ಪದ್ಮನಾಭದಿನಂ ಶುಭಂ || ೧೨ ||**

**ಅಶ್ವಮೇಧಸಹಸ್ರಾಣಿ ರಾಜಸೂಯಶತಾನಿ ಚ |**
**ಏಕಾದಶ್ಯುಪವಾಸಸ್ಯ ಕಲಾಂ ನಾರ್ಹಂತಿ ಷೋಡಶೀಂ || ೧೩ ||**

---

ಉಪವಾಸ ನಿರತನಾಗಿ ಮಧುಸೂದನನನ್ನು ಪೂಜಿಸಿ ರಾತ್ರಿ ಜಾಗರಣೆ ಮಾಡುವನೋ ಅಂತಹ ಮನುಷ್ಯನು, ಜೂಜುಗಾರನು ಹಣವನ್ನು ನಾಶಪಡಿಸಿಕೊಳ್ಳುವಂತೆ ತನ್ನ ಪಾಪಗಳೆಲ್ಲವನ್ನೂ ಕಳೆದುಕೊಳ್ಳುವನು.

೧೦. ರಾಜೇಂದ್ರನೇ! ನೂರಾರು ಜನ್ಮಗಳಲ್ಲಿ ಸಂಪಾದಿಸಿದ ಪಾಪವೆಂಬ ಕಟ್ಟಿಗೆಯೆಲ್ಲವೂ ಏಕಾದಶಿಯೆಂಬ ಬೆಂಕಿಯಿಂದ ಭಸ್ಮೀಭಾವವನ್ನು ಹೊಂದುವುದು.

೧೧. ದೊರೆಯೇ! ಮನುಷ್ಯರಿಗೆ ಪದ್ಮನಾಭದಿನ ಎಂದರೆ ಏಕಾದಶಿಯಂತಹ ಪಾಪನಾಶಕವಾದ ಪವಿತ್ರದಿನವು ಬೇರಾವುದೂ ಇಲ್ಲ.

೧೨. ನರೇಶ್ವರನೇ! ಮನುಷ್ಯನು ಶುಭವಾದ ಏಕಾದಶೀ ದಿನದಲ್ಲಿ ಉಪವಾಸ ಮಾಡುವವರೆಗೂ ಅವನ ಶರೀರದಲ್ಲಿ ಪಾಪಗಳಿರುತ್ತವೆ.

೧೩. ಸಾವಿರಾರು ಅಶ್ವಮೇಧಗಳು ಮತ್ತು ನೂರಾರು ರಾಜಸೂಯಯಾಗಗಳು ಇವೆಲ್ಲವೂ ಏಕಾದಶೀ ಉಪವಾಸ ವ್ರತದ ಹದಿನಾರನೆಯ ಒಂದು ಭಾಗಕ್ಕೂ ಸಮವಾಗಲಾರವು.

ಏಕಾದಶೇಂದ್ರಿಯೈಃ ಪಾಪಂ ಯತ್ಕೃತಂ ಭವತಿ ಪ್ರಭೋ ।
ಏಕಾದಶ್ಯುಪವಾಸೇನ ತತ್ಸರ್ವಂ ವಿಲಯಂ ವ್ರಜೇತ್ ॥ ೧೪ ॥

ಏಕಾದಶೀಸಮಂ ಕಿಂಚಿತ್ಪಾಪನಾಶಂ ನ ವಿದ್ಯತೇ ।
ವ್ಯಾಜೇನಾಪಿ ಕೃತಾ ರಾಜನ್ನ ದರ್ಶಯತಿ ಭಾಸ್ಕರಿಂ ॥ ೧೫ ॥

ಸ್ವರ್ಗಮೋಕ್ಷಪ್ರದಾ ಹ್ಯೇಷಾ ರಾಜ್ಯಪುತ್ರಪ್ರದಾಯಿನೀ ।
ಸುಕಲತ್ರಪ್ರದಾ ಹ್ಯೇಷಾ ಶರೀರಾರೋಗ್ಯದಾಯಿನೀ ॥ ೧೬ ॥

ನ ಗಂಗಾ ನ ಗಯಾ ಭೂಪ ನ ಕಾಶೀ ನ ಚ ಪುಷ್ಕರಂ ।
ನ ಚಾಪಿ ಕೌರವಂ ಕ್ಷೇತ್ರಂ ನ ರೇವಾ ನ ಚ ದೇವಿಕಾ ॥ ೧೭ ॥

ಯಮುನಾ ಚಂದ್ರಭಾಗಾ ಚ ಪುಣ್ಯಾ ಭೂಪ ಹರೇರ್ದಿನಾತ್ ।
ಅನಾಯಾಸೇನ ರಾಜೇಂದ್ರ ಪ್ರಾಪ್ಯತೇ ಹರಿಮಂದಿರಂ ॥ ೧೮ ॥

---

೧೪. ಧಣಿಯೇ! ಹನ್ನೊಂದು ಇಂದ್ರಿಯಗಳಿಂದ ಮಾಡಲ್ಪಟ್ಟ ಪಾಪವೆಲ್ಲವೂ ಏಕಾದಶಿಯ ಉಪವಾಸದಿಂದ ನಾಶವನ್ನು ಹೊಂದುತ್ತವೆ.

೧೫. ಏಕಾದಶಿಗೆ ಸಮಾನವಾದ ಪಾಪನಾಶಕ ವ್ರತವು ಬೇರೊಂದಿಲ್ಲ. ಆವುದಾದರೊಂದು ನೆಪದಿಂದಲಾದರೂ ಏಕಾದಶಿಯ ಉಪವಾಸಮಾಡಿದರೆ ಅದೂ ಸಹ ಯಮದರ್ಶನವಾಗದಂತೆ ಮಾಡುವುದು ಎಂದರೆ ಸದ್ಗತಿಯನ್ನು ಕೊಡುತ್ತದೆಂದು ಭಾವ.

೧೬. ಈ ಏಕಾದಶಿಯು ಸ್ವರ್ಗ, ಮೋಕ್ಷ, ರಾಜ್ಯ, ಪುತ್ರ, ಒಳ್ಳೆಯ ಹೆಂಡತಿ ಮತ್ತು ಶರೀರಾರೋಗ್ಯ ಇವುಗಳನ್ನುಂಟುಮಾಡುತ್ತದೆ.

೧೭-೧೮. ಗಂಗೆ, ಗಯೆ, ಕಾಶೀ, ಪುಷ್ಕರ, ಕುರುಕ್ಷೇತ್ರ, ನರ್ಮದಾ, ದೇವಿಕಾ, ಯಮುನೆ, ಭೀಮರಥೀ ಇವೆಲ್ಲವೂ ಹರಿದಿನಕ್ಕಿಂತಲೂ ಹೆಚ್ಚಾಗಿ ಪುಣ್ಯವನ್ನು ಕೊಡಲಾರವು. ಎಂದರೆ ಹರಿದಿನವು ಇವೆಲ್ಲಕ್ಕಿಂತಲೂ ಉತ್ತಮವೆಂದೂ, ಅದು ಅವಶ್ಯವಾಗಿ ಆಚರಣೀಯವೆಂತಲೂ ಅಭಿಪ್ರಾಯ.

ರಾತ್ರೌ ಜಾಗರಣಂ ಕೃತ್ವಾ ಸಮುಪೋಷ್ಯ ಹರೇರ್ದಿನಂ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ವ್ರಜೇನ್ನರಃ ॥ ೧೯ ॥

ದಶೈವ ಮಾತೃಕೇ ಪಕ್ಷೇ ದಶ ರಾಜೇಂದ್ರ ಪೈತೃಕೇ ।
ಭಾರ್ಯಾಯಾ ದಶ ಪಕ್ಷೇ ಚ ಪುರುಷಾನುದ್ಧರೇತ್ತಥಾ ॥ ೨೦ ॥

ಆತ್ಮಾನಮಪಿ ರಾಜೇಂದ್ರ ಸ ನಯೇದ್ವೈಷ್ಣವಂ ಪುರಂ ।
ಚಿಂತಾಮಣಿಸಮಾ ಹ್ಯೇಷಾ ಅಥವಾಪಿ ನಿಧೇಃ ಸಮಾ ॥ ೨೧ ॥

ಸಂಕಲ್ಪಪಾದಪಪ್ರಖ್ಯಾ ವೇದವಾಕ್ಯೋಪಮಾಽಥವಾ ।
ದ್ವಾದಶ್ಯಾಂ ಯೇ ಪ್ರಪನ್ನಾ ಹಿ ನರಾ ನರವರೋತ್ತಮ ॥ ೨೨ ॥

ತೇ ದ್ವಂದ್ವಬಾಹವೋ ಜಾತಾ ನಾಗಾರಿಕೃತವಾಹನಾಃ ।
ಸ್ರಗ್ವಿಣಃ ಪೀತವಸ್ತ್ರಾಶ್ಚ ಯೇ ಯಾಂತಿ ಹರಿಮಂದಿರಂ ॥ ೨೩ ॥

---

ಏಕಾದಶಿಯ ಉಪವಾಸದಿಂದ ಅನಾಯಾಸವಾಗಿ ಹರಿಮಂದಿರ ಎಂದರೆ ವೈಕುಂಠಲೋಕಪ್ರಾಪ್ತಿಯಾಗುವುದು.

೧೯. ಹರಿದಿನದಲ್ಲಿ ಉಪವಾಸ ಮಾಡಿ ರಾತ್ರಿ ಜಾಗರಣೆ ಮಾಡುವವನು ಸಕಲಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕಕ್ಕೆ ಹೋಗಿ ಸುಖಪಡುವನು.

೨೦-೨೩. ಏಕಾದಶಿಯ ಉಪವಾಸವು ತಾಯಿಯ ಕಡೆ ಹತ್ತು, ತಂದೆಯ ಪಕ್ಷದಲ್ಲಿ ಹತ್ತು, ಹೆಂಡತಿಯ ವರ್ಗದಲ್ಲಿ ಹತ್ತು ಈ ರೀತಿ ಮೂವತ್ತುಮಂದಿ ಪಿತೃಗಳನ್ನು ಉದ್ಧರಿಸುವುದು. ಅಷ್ಟೇ ಅಲ್ಲ. ತನ್ನನ್ನೂ ಸಹ ವಿಷ್ಣುಲೋಕಕ್ಕೆ ಒಯ್ಯುವುದು.

ಈ ಏಕಾದಶಿಯು ಚಿಂತಾಮಣಿ ಅಥವಾ ನಿಧಿ ಇಲ್ಲವೇ ಕಲ್ಪವೃಕ್ಷ ಅಥವಾ ವೇದವಾಕ್ಯಗಳಿಗೆ ಸಮವಾದುದು.

ನರವರೋತ್ತಮನೇ ! ದ್ವಾದಶಿಯ ದಿನದಲ್ಲಿ ಭಕ್ತಿಯಿಂದ ಹರಿಯನ್ನಾರಾಧಿಸುವ ಮನುಷ್ಯರು ಚತುರ್ಬಾಹುಗಳು, ಗರುಡವಾಹನರು, ಮಾಲಾ ಮತ್ತು ಪೀತಾಂಬರಧಾರಿಗಳೂ ಆಗಿ ಹರಿಮಂದಿರಕ್ಕೆ ಹೋಗಿ ಅವನ ಸಾರೂಪ್ಯವನ್ನು ಪಡೆಯುವರು.

ಏಷ ಪ್ರಭಾವೋ ಹಿ ಮಯಾ ದ್ವಾದಶ್ಯಾಃ ಪರಿಕೀರ್ತಿತಃ |
ಪಾಪೇಂಧನಸ್ಯ ಘೋರಸ್ಯ ಪಾವಕಾಖ್ಯೋ ಮಹೀಪತೇ || ೨೪ ||

ಹರೇರ್ದಿನಂ ಸದೋಪೋಷ್ಯಂ ನರೈರ್ಧರ್ಮಪರಾಯಣೈಃ |
ಇಚ್ಛದ್ಭಿರ್ವಿಪುಲಾನ್ಭೋಗಾನ್ಪುತ್ರಪೌತ್ರಾದಿಕಾಂಸ್ತಥಾ || ೨೫ ||

ಹರಿದಿನಮಿಹಮರ್ತ್ಯೋ ಯಃ ಕರೋತ್ಯಾದರೇಣ
ನರವರ ಸ ತು ಕುಕ್ಷಿಂ ಮಾತುರಾಪ್ನೋತಿ ನೈವ |
ಬಹುವೃಜಿನಸಮೇತೋಽಕಾಮತಃ ಕಾಮತೋ ವಾ
ವ್ರಜತಿ ಪದಮನಂತಂ ಲೋಕನಾಥಸ್ಯ ವಿಷ್ಣೋಃ || ೨೬ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ದ್ವಾದಶೀ
ಮಾಹಾತ್ಮ್ಯವರ್ಣನಂ ನಾಮ ಪ್ರಥಮೋಽಧ್ಯಾಯಃ

---

೨೪. ದೊರೆಯೇ! ಘೋರಪಾಪವೆಂಬ ಕಟ್ಟಿಗೆಗೆ ಅಗ್ನಿಯೆಂಬ ಈ ದ್ವಾದಶೀಪ್ರಭಾವವು ನಿನಗೆ ಉಕ್ತವಾಯಿತು.

೨೫. ಪುತ್ರಪೌತ್ರಾದಿಸಂಪತ್ತು ಮತ್ತು ಬಹುಭೋಗಗಳನ್ನೂ ಅಪೇಕ್ಷಿಸುವ, ಧರ್ಮಪರಾಯಣರಾದ, ಮನುಷ್ಯರು ಯಾವಾಗಲೂ ಹರಿದಿನದಲ್ಲಿ ಉಪವಾಸಮಾಡಬೇಕು.

೨೬. ನರಶ್ರೇಷ್ಠನೇ! ಈ ಲೋಕದಲ್ಲಿ ಹರಿದಿನೋಪವಾಸವನ್ನು ಭಕ್ತಿಯಿಂದಾಚರಿಸುವ ಮನುಷ್ಯನು ಎಷ್ಟು ಪಾಪಗಳನ್ನು ಮಾಡಿದ್ದರೂ ಅವನು ಪುನಃ ಮಾತೃಗರ್ಭದಲ್ಲಿ ಪ್ರವೇಶಿಸುವುದಿಲ್ಲ. ಅವನು ಬಯಸಲಿ ಅಥವಾ ಬಯಸದಿರಲಿ ಲೋಕದೊಡೆಯನಾದ ವಿಷ್ಣುವಿನ ಲೋಕವನ್ನು ಹೊಂದುವುದು ಖಂಡಿತ.

ಇಂತು ಶ್ರೀನಾರದೀಯ ಪುರಾಣೋತ್ತರಭಾಗದಲ್ಲಿ ದ್ವಾದಶೀಮಹಿಮೆಯ
ವರ್ಣನವೆಂಬ ಮೊದಲನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಶ್ರೀ ಹರಿಪ್ರಾರ್ಥನಾದಿಯಾಗಿ ಈ ಅಧ್ಯಾಯವು ಆರಂಭಿಸಲ್ಪಟ್ಟು ಸಕಲ ಪಾಪನಾಶಕವಾವುದೆಂಬ ಮಾಂಧಾತೃರಾಜನ ಪ್ರಶ್ನೆಗೆ ಉತ್ತರವಾಗಿ ವಸಿಷ್ಠರಿಂದ ಏಕಾದಶೀ ವ್ರತಮಹಿಮೆಯು ವಿಧಾನಸಹಿತ ವರ್ಣಿಸಲ್ಪಟ್ಟಿದೆ.

# ದ್ವಿತೀಯೋಽಧ್ಯಾಯಃ

---

## ವಸಿಷ್ಠ ಉವಾಚ

ಇಮಮೇವಾರ್ಥಮುದ್ದಿಶ್ಯ ನೈಮಿಷಾರಣ್ಯವಾಸಿನಃ ।
ಪಪ್ರಚ್ಛುರ್ಮುನಯಃ ಸೂತಂ ವ್ಯಾಸಶಿಷ್ಯಂ ಮಹಾಮತಿಂ ॥ ೧ ॥

ಸ ತು ಪೃಷ್ಟೋ ಮಹಾಭಾಗ ಏಕಾದಶ್ಯಾಃ ಸುವಿಸ್ತರಂ ।
ಮಾಹಾತ್ಮ್ಯಂ ಕಥಯಾಮಾಸ ಉಪವಾಸವಿಧಿಂ ತಥಾ ॥ ೨ ॥

ತದ್ವಾಕ್ಯಂ ಸೂತಪುತ್ರಸ್ಯ ಶ್ರುತ್ವಾ ದ್ವಿಜವರೋತ್ತಮಾಃ ।
ಮಾಹಾತ್ಮ್ಯಂ ಚಕ್ರಿಣಶ್ಚಾಪಿ ಸರ್ವಪಾಪೌಘಶಾಂತಿದಂ ॥ ೩ ॥

---

## ಎರಡನೆಯ ಅಧ್ಯಾಯವು

೧. ವಸಿಷ್ಠನು ಹೇಳಿದನು—ನೈಮಿಷಾರಣ್ಯವಾಸಿಗಳಾದ ಮುನಿಗಳು ಮಹಾಜ್ಞಾನಿಯೂ, ವ್ಯಾಸಶಿಷ್ಯನೂ ಆದ ಸೂತನನ್ನು ಕುರಿತು ಇದೇ ವಿಷಯದಲ್ಲಿ ಪ್ರಶ್ನೆಮಾಡಿದರು.

೨. ಮಹಾಶಯನಾದ ಆ ಸೂತನು ಮುನಿಗಳ ಪ್ರಶ್ನೆಯನ್ನು ಲಾಲಿಸಿ ಏಕಾದಶಿಯ ಮಾಹಾತ್ಮ್ಯ ಮತ್ತು ಉಪವಾಸವಿಧಾನವನ್ನು ಸಹ ವಿಸ್ತಾರವಾಗಿ ಹೇಳಿದನು.

೩-೬. ಸೂತಪುತ್ರನ ಆ ಮಾತನ್ನು ಕೇಳಿ ದ್ವಿಜಶ್ರೇಷ್ಠರು ಸಕಲಪಾಪಸಮೂಹಗಳನ್ನೂ ಶಮನಮಾಡುವಂತಹ ಚಕ್ರಪಾಣಿಯ ಮಾಹಾತ್ಮ್ಯೆಯ ವಿಷಯದಲ್ಲಿ ನಿರ್ದೋಷರಾದ ಸೂತಪುರಾಣಿಕರನ್ನು ಕುರಿತು ಪುನಃ ಪ್ರಶ್ನೆಮಾಡಿದರು.

ಪುನಃ ಪಪ್ರಚ್ಛಪರಮಲಂ ಸೂತಂ ಪೌರಾಣಿಕಂ ನೃಪ |
ಅಷ್ಟಾದಶಪುರಾಣಾನಿ ಭವಾನ್ ಜಾನಾತಿ ಮಾನದ || ೪ ||

ಕಾನೀನಸ್ಯ ಪ್ರಸಾದೇನ ಮಹಾಭಾರತಮಪ್ಯುತ |
ತನ್ನಾಸ್ತಿ ಯನ್ನ ವೇತ್ಸಿ ತ್ವಂ ಪುರಾಣೇಷು ಸ್ಮೃತಿಷ್ವಪಿ || ೫ ||

ಚರಿತೇ ರಘುನಾಥಸ್ಯ ಶತಕೋಟಿಪ್ರವಿಸ್ತರೇ |
ಅಸ್ಮಾಕಂ ಸಂಶಯಃ ಕಶ್ಚಿತ್ ಹೃದಯೇ ಸಂಪ್ರವರ್ತತೇ || ೬ ||

ತಂ ಭವಾನರ್ಹತಿಚ್ಛೇತ್ತುಂ ಯಾಥಾರ್ಥ್ಯೇನ ಸುವಿಸ್ತರಾತ್ |
ತಿಥೇಃ ಪ್ರಾಂತಮುಪೋಷ್ಯಂ ಸ್ಯಾದಾಹೋಸ್ವಿನ್ಮೂಲಮೇವ ಚ || ೭ ||

ದೈವೇ ಪೈತ್ರೇ ಸಮಾಖ್ಯಾಹಿ ನಾವೇದ್ಯಂ ವಿದ್ಯತೇ ತವ |

ಸೌತಿರುವಾಚ

ತಿಥೇಃ ಪ್ರಾಂತಂ ಸುರಾಣಾಂ ಹಿ ಉಪೋಷ್ಯಂ ಪ್ರೀತಿವರ್ಧನಂ || ೮ ||

---

ಓ ಮಾನದಾತೃವಾದ ಸೂತನೇ! ವ್ಯಾಸರ ಅನುಗ್ರಹದಿಂದ ನೀನು ಅಷ್ಟಾದಶ ಪುರಾಣಗಳನ್ನೂ ಮತ್ತು ಮಹಾಭಾರತವನ್ನೂ ಸಹ ತಿಳಿದಿರುವೆ.

ಸ್ಮೃತಿಪುರಾಣಗಳು, ರಘುನಾಥನ ಚರಿತ್ರೆಯನ್ನು ನಿರೂಪಿಸುವ ಶತಕೋಟಿ ವಿಸ್ತಾರವಾದ ರಾಮಾಯಣ ಇವುಗಳಲ್ಲಿ ನೀನು ತಿಳಿಯದಿರುವ ವಿಷಯ ವಾವುದೂ ಇಲ್ಲ.

೬-೯. ನಮ್ಮ ಮನಸ್ಸಿನಲ್ಲಿ ಒಂದಾನೊಂದು ಸಂಶಯವು ಮೂಡಿದೆ. ತತ್ವವನ್ನು ವಿವರಿಸಿ ಅದನ್ನು ಪರಿಹರಿಸಲು ನೀನೇ ಸಮರ್ಥನು.

ದೇವತೃಪ್ತ್ಯರ್ಥವಾಗಿ ಅಥವಾ ಪಿತೃತೃಪ್ತ್ಯರ್ಥವಾಗಿಯಾಗಲಿ ತಿಥಿಯ ಕೊನೆಯ ಭಾಗದಲ್ಲಿ ಉಪವಾಸ ಮಾಡಬೇಕೇ? ಅದನ್ನು ನಿರ್ಣಯವಾಗಿ ತಿಳಿಸು. ನಿನಗೆ ತಿಳಿಯಧಿರುವುದಾವುದೂ ಇಲ್ಲ.

ಮೂಲಂ ತಿಥೇಃ ಪಿತ್ರ್ಯಾಣಾಂ ತು ಕಾಲಜ್ಞೈಃ ಪ್ರಿಯಮೀರಿತಂ ।
ಅತಃ ಪ್ರಾಂತಮುಪೋಷ್ಯಂ ಹಿ ತಿಥೇರ್ದಶಫಲೇಪ್ಸುಭಿಃ ॥ ೯ ॥

ಮೂಲಂ ಹಿ ಪಿತೃತೃಪ್ತ್ಯರ್ಥಂ ವಿಜ್ಞೇಯಂ ಧರ್ಮಕಾಂಕ್ಷಿಭಿಃ ।
ಪೂರ್ವವಿದ್ಧಾ ನ ಕರ್ತವ್ಯಾ ದ್ವಿತೀಯಾ ಚಾಷ್ಟಮೀ ತಥಾ ॥ ೧೦ ॥

ಷಷ್ಠೀ ಚೈಕಾದಶೀ ಭೂಪ ಧರ್ಮಕಾಮಾರ್ಥಲಿಪ್ಸುಭಿಃ ।
ಪೂರ್ವವಿದ್ಧಾ ದ್ವಿಜಶ್ರೇಷ್ಠಾಃ ಕರ್ತವ್ಯಾ ಸಪ್ತಮೀ ಸದಾ ॥ ೧೧ ॥

ದರ್ಶಶ್ಚ ಪೌರ್ಣಮಾಸಶ್ಚ ಪಿತುಃ ಸಾಂವತ್ಸರಂ ದಿನಂ ।
ಪೂರ್ವವಿದ್ಧಾನಿಮಾಂಸ್ತ್ಯಕ್ತ್ವಾ ನರಕಂ ಪ್ರತಿಪದ್ಯತೇ ॥ ೧೨ ॥

---

ಸೌತಿಯು ಹೇಳಿದನು—ಏಕಾದಶೀ ತಿಥಿಯ ಕೊನೆಯ ಭಾಗದಲ್ಲಿ ಮಾಡುವ ಉಪವಾಸವು ದೇವತೆಗಳ ಪ್ರೀತಿಯನ್ನು ವೃದ್ಧಿಗೊಳಿಸುವುದು. ತಿಥಿಯ ಮೂಲಭಾಗದ ಉಪವಾಸವು ಪಿತೃಗಳಿಗೆ ಪ್ರಿಯವಾದುದು ಎಂಬುದಾಗಿ ಕಾಲಜ್ಞರಿಂದ ಉಕ್ತವಾಗಿದೆ. ಆದಕಾರಣ ಅಧಿಕವಾಗಿ ತಿಥಿಯ ಫಲವನ್ನು ಬಯಸುವವರು ತಿಥಿಯ ಪ್ರಾಂತಭಾಗದಲ್ಲಿ ಉಪವಾಸಮಾಡಬೇಕು.

೧೦-೧೨. ತಿಥಿಯ ಮೂಲಭಾಗದಲ್ಲಿ ಮಾಡುವ ಉಪವಾಸವು ಪಿತೃತೃಪ್ತಿದಾಯಕವೆಂದು ಧರ್ಮಾಕಾಂಕ್ಷಿಗಳು ತಿಳಿಯಬೇಕು.

ಧರ್ಮ, ಕಾಮ, ಅರ್ಥಗಳನ್ನು ಬಯಸುವವರು ಪೂರ್ವತಿಥಿಗಳಿಂದ ವಿದ್ಧವಾದ ಬಿದಿಗೆ, ಅಷ್ಟಮಿ, ಷಷ್ಠೀ ಮತ್ತು ಏಕಾದಶೀ ತಿಥಿಗಳಲ್ಲಿ ವ್ರತವನ್ನು ಆಚರಿಸಬಾರದು.

ದ್ವಿಜಶ್ರೇಷ್ಠರೇ! ಯಾವಾಗಲೂ ಸಪ್ತಮಿ, ಅಮಾವಾಸ್ಯೆ, ಪೂರ್ಣಿಮಾ, ಪಿತೃವಾರ್ಷಿಕಶ್ರಾದ್ಧದಿನ ಇವು ಪೂರ್ವವಿದ್ಧವಾದುವುಗಳೇ ಗ್ರಾಹ್ಯವಾಗುವುವು.

ಹಾನಿಂ ಚ ಸಂತತೇರ್ಭೂಪ ದೌರ್ಭಾಗ್ಯಂ ಸಮವಾಪ್ನುಯಾತ್ ।
ಏತಚ್ಛ್ರುತಂ ಮಯಾ ವಿಪ್ರಾಃ ಕೃಷ್ಣದ್ವೈಪಾಯನಾತ್ಪುರಾ ॥ ೧೩ ॥

ಆದಿತ್ಯೋದಯವೇಲಾಯಾಂ ಯಾ ಕಾಚಾಪಿ ತಿಥಿರ್ಭವೇತ್ ।
ಪೂರ್ವವಿದ್ಧಾ ತು ಮಂತವ್ಯಾ ಪ್ರಭೂತಾ ನೋದಯಂ ವಿನಾ ॥ ೧೪ ॥

ಪಾರಣೇ ಮರಣೇ ನೄಣಾಂ ತಿಥಿಸ್ತಾತ್ಕಾಲಿಕೀ ಸ್ಮೃತಾ ।
ಪಿತ್ರ್ಯೇಽಸ್ತಮಾನವೇಲಾಯಾಂ ಸ್ಪರ್ಶೇ ಪೂರ್ಣಾ ನಿಗದ್ಯತೇ ॥ ೧೫ ॥

ನ ತತ್ರೋದಯಿನೀ ಗ್ರಾಹ್ಯಾ ದೈವಸ್ಯೋದಯಿಕೀ ತಿಥಿಃ ।
ಪ್ರತ್ಯಹಂ ಶೋಧಯೇತ್ಪ್ರಾಜ್ಞಸ್ತಿಥಿಂ ದೈವಜ್ಞಚಿಂತಕಾತ್ ॥ ೧೬ ॥

---

ದೊರೆಯೇ! ಪೂರ್ವವಿದ್ಧವಾದ ಈ ತಿಥಿಗಳನ್ನು ಬಿಟ್ಟರೆ ನರಕವಾಗುವುದು. ಮತ್ತು ಸಂತಾನಹಾನಿ, ದೌರ್ಭಾಗ್ಯಗಳೂ ಉಂಟಾಗುವುವು. ಇದನ್ನು ಪೂರ್ವದಲ್ಲಿ ಕೃಷ್ಣದ್ವೈಪಾಯನವ್ಯಾಸರಿಂದ ನಾನು ಕೇಳಿ ತಿಳಿದಿರುವೆನು.

೧೪. ಸೂರ್ಯೋದಯಕಾಲದಲ್ಲಿ ಹಿಂದಿನ ತಿಥಿಯು ಸ್ವಲ್ಪವಾಗಿದ್ದು ಅನಂತರ ಉದಯಸ್ಪರ್ಶವಿಲ್ಲದೇ ಯಾವ ತಿಥಿಯು ಬರುವುದೋ ಅದನ್ನು ಪೂರ್ವವಿದ್ಧತಿಥಿ ಎಂದು ತಿಳಿಯಬೇಕು.

೧೫-೧೬. ಪಾರಣೆ ಮತ್ತು ಮನುಷ್ಯರ ಮರಣಗಳಲ್ಲಿ ಆ ಕಾಲದಲ್ಲಿದ್ದ ತಿಥಿಯೇ ಗ್ರಾಹ್ಯವು.

ಪಿತೃಕರ್ಮವಿಷಯದಲ್ಲಿ ಅಸ್ತಮಾನಕಾಲದವರೆಗೂ ಇರುವ ತಿಥಿಯು ಪೂರ್ಣವೆನಿಸುವುದು. ಪಿತೃಕರ್ಮದಲ್ಲಿ ಉದಯಮಾತ್ರವ್ಯಾಪಿಯಾದ ತಿಥಿಯು ಗ್ರಾಹ್ಯವಲ್ಲ. ಪ್ರಾಜ್ಞರು ಪ್ರತಿದಿನವೂ ದೈವಜ್ಞರ ಸಲಹೆಯಿಂದ ತಿಥಿಯನ್ನು ಶೋಧಿಸಿ ತಿಳಿಯಬೇಕು.

ತಿಥಿಪ್ರಮಾಣಂ ವಿಪ್ರೇಂದ್ರಾಃ ಕ್ಷಪಾಕರದಿವಾಕರೌ ।
ಚಂದ್ರಾರ್ಕಚಾರವಿಜ್ಞಾನಾತ್ಕಾಲಂ ಕಾಲವಿದೋ ವಿದುಃ ॥ ೧೭ ॥

ಪೂರ್ವಾಯಾಃ ಸಂಗದೋಷೇಣ ನ ಯೋಗ್ಯಾಸ್ತಾಃ ಪ್ರಪೂಜನೇ ।
ವರ್ಜಯಂತಿ ನರಾಸ್ತಜ್ಞಾ ಯಾಮಾಂಶ್ಚ ಚತುರೋ ದ್ವಿಜಾಃ ॥ ೧೮ ॥

ಅತ ಊರ್ಧ್ವಂ ಪ್ರವಕ್ಷ್ಯಾಮಿ ಸ್ನಾನಪೂಜಾವಿಧಿಕ್ರಮಂ ।
ನ ದಿವಾ ಶುದ್ಧಿಮಾಪ್ನೋತಿ ತದಾ ರಾತ್ರೌ ವಿಧೀಯತೇ ॥ ೧೯ ॥

ದಿನಕಾರ್ಯಮಶೇಷಂ ಹಿ ಕರ್ತವ್ಯಂ ಶರ್ವರೀಮುಖೇ ।
ವಿಧಿರೇಷ ಮಯಾ ಖ್ಯಾತೋ ನರಾಣಾಮುಪವಾಸಿನಾಂ ॥ ೨೦ ॥

---

೧೭. ಬ್ರಾಹ್ಮಣಶ್ರೇಷ್ಠರೇ! ತಿಥಿಯಮಾನ, ಚಂದ್ರಸೂರ್ಯರ ಸ್ಥಿತಿ ಇವುಗಳನ್ನು ಮತ್ತು ಚಂದ್ರಸೂರ್ಯರ ಚಾರವಿಜ್ಞಾನದಿಂದ ಉದಯಾಸ್ತ ಕಾಲವನ್ನೂ ಸಹ ಕಾಲಜ್ಞರು ತಿಳಿದಿರುವರು.

೧೮. ದ್ವಿಜರೇ! ಪೂರ್ವತಿಥಿಯ ಸಂಬಂಧವೆಂಬ ದೋಷದಿಂದ ಆ ತಿಥಿಗಳು ಪೂಜಾದಿಗಳಿಗೆ ಯೋಗ್ಯವಾಗಲಾರವು. ಆದಕಾರಣ ಅದರ ಮಾನ ವನ್ನು ತಿಳಿದವರು ನಾಲ್ಕು ಯಾಮಗಳನ್ನು ಬಿಡುತ್ತಾರೆ.

೧೯-೨೦. ಇನ್ನು ಮುಂದೆ ಸ್ನಾನಪೂಜಾವಿಧಿಕ್ರಮಗಳನ್ನು ಹೇಳು ವೆನು. ಹಗಲು ಶುದ್ಧ ತಿಥಿಯು ಸಿಕ್ಕದಿರುವಾಗ ರಾತ್ರಿಯಲ್ಲಿ ಪೂಜೆ ಮುಂತಾದುವು ವಿಹಿತವಾಗಿದೆ.

ಹಗಲುಕರ್ತವ್ಯವಾದುದೆಲ್ಲವನ್ನೂ ಪ್ರದೋಷಕಾಲದಲ್ಲಿ ಮಾಡಬೇಕು. ಉಪವಾಸಮಾಡುವ ಮನುಷ್ಯರಿಗೆ ಈ ಕ್ರಮವು ವಿಹಿತವಾಗಿದೆ.

ಅಲ್ಪಾಯಾಮಥ ವಿಪ್ರೇಂದ್ರಾ ದ್ವಾದಶ್ಯಾಮರುಣೋದಯೇ ।
ಸ್ನಾನಾರ್ಚನಕ್ರಿಯಾ ಕಾರ್ಯಾ ದಾನಹೋಮಾದಿಸಂಯುತಾ ॥ ೨೧ ॥

ತ್ರಯೋದಶ್ಯಾಂ ಹಿ ಶುದ್ಧಾಯಾಂ ಪಾರಣೇ ಪೃಥಿವೀಫಲಂ ।
ಶತಯಜ್ಞಾಧಿಕಂ ವಾಽಪಿ ನರಃ ಪ್ರಾಪ್ನೋತ್ಯಸಂಶಯಂ ॥ ೨೨ ॥

ಏತಸ್ಮಾತ್ಕಾರಣಾದ್ವಿಪ್ರಾಃ ಪ್ರತ್ಯೂಷಃ ಸ್ನಾನಮಾಚರೇತ್ ।
ಪಿತೃತರ್ಪಣಸಂಯುಕ್ತಂ ನ ದೃಷ್ಟ್ವಾ ದ್ವಾದಶೀದಿನಂ ॥ ೨೩ ॥

ಮಹಾಹಾನಿಕರಾ ಹ್ಯೇಷಾ ದ್ವಾದಶೀ ಲಂಘಿತಾ ನೃಭಿಃ ।
ಕರೋತಿ ಧರ್ಮಹರಣಮಸ್ನಾತೇವ ಸರಸ್ವತೀ ॥ ೨೪ ॥

---

೨೧. ಬ್ರಾಹ್ಮಣವರ್ಯರೇ! ದ್ವಾದಶೀತಿಥಿಯು ಸ್ವಲ್ಪವಾಗಿದ್ದಾಗ ಅರುಣೋದಯಕಾಲದಲ್ಲಿಯೇ ಸ್ನಾನ, ಪೂಜೆ, ದಾನ, ಹೋಮ ಮುಂತಾದುವುಗಳನ್ನೆಲ್ಲಾ ಮಾಡಬೇಕು.

೨೨. ಶುದ್ಧ ತ್ರಯೋದಶಿಯ ದಿನದಲ್ಲಿ ಪಾರಣೆ ಮಾಡಿದರೆ ಮನುಷ್ಯನು ನೂರಾರು ಯಜ್ಞಗಳಿಗಿಂತಲೂ ಹೆಚ್ಚಾದ ಬಹುಫಲವನ್ನು ಹೊಂದುವನು ; ಸಂದೇಹವಿಲ್ಲ.

೨೩. ಈ ಕಾರಣದಿಂದ ದ್ವಾದಶಿಯ ದಿನ ಸೂರ್ಯೋದಯವನ್ನು ನಿರೀಕ್ಷಿಸದೆ ಬೆಳಗಿನಜಾವದಲ್ಲಿಯೇ ಪಿತೃತರ್ಪಣ ಸಹಿತವಾಗಿ ಸ್ನಾನ ಮಾಡಬೇಕು.

೨೪. ಇಂತಹ ದ್ವಾದಶಿಯನ್ನು ಉಲ್ಲಂಘಿಸುವುದು ಮನುಷ್ಯರಿಗೆ ಮಹಾ ಹಾನಿಕರವು. ದ್ವಾದಶ್ಯುಲ್ಲಂಘನೆಯು ಸ್ನಾನ ಮಾಡದೇ ಅತಿಕ್ರಮಿಸಿದ ಸರಸ್ವತೀ ನದಿಯಂತೆ ಧರ್ಮವನ್ನಪಹರಿಸುವುದು.

ಕ್ಷಯೇ ವಾಽಪ್ಯಥವಾ ವೃದ್ಧೌ ಸಂಪ್ರಾಪ್ತೇ ವಾ ದಿನೋದಯೇ ।
ಉಪೋಷ್ಯಾ ದ್ವಾದಶೀ ಪುಣ್ಯಾ ಪೂರ್ವವಿದ್ಧಾಂ ವಿವರ್ಜಯೇತ್ ॥ ೨೫ ॥

ಬ್ರಾಹ್ಮಣ ಉವಾಚ

ಯದಾ ಚ ಪ್ರಾಪ್ಯತೇ ಸೂತ ದ್ವಾದಶ್ಯಾಂ ಪೂರ್ವಸಂಭವಾ ।
ತದೋಪವಾಸೋ ಹಿ ಕಥಂ ಕರ್ತವ್ಯೋ ಮಾನವೈರ್ವದ ॥ ೨೬

ಉಪವಾಸದಿನಂ ವಿದ್ಧಂ ಯದಾ ಭವತಿ ಪೂರ್ವಯಾ ।
ದ್ವಿತೀಯೇಽಹ್ನಿ ಯದಾ ನ ಸ್ಯಾತ್ಸ್ವಲ್ಪಾಪ್ಯೇಕಾದಶೀತಿಥಿಃ ॥ ೨೭ ॥

ತತ್ರೋಪವಾಸೋ ವಿಹಿತಃ ಕಥಂ ತದ್ವದ ಸೂತಜ ।

ಸೌತಿರುವಾಚ

ಯದಾ ನ ಪ್ರಾಪ್ಯತೇ ವಿಪ್ರ ದ್ವಾದಶ್ಯಾಂ ಪೂರ್ವಸಂಭವಂ ॥ ೨೮ ॥

---

೨೫. ತಿಥಿಕ್ಷಯ ಅಥವಾ ವೃದ್ಧಿಯು ಬಂದಾಗ ದ್ವಾದಶಿಯ ದಿನ ಉಪವಾಸ ಮಾಡುವುದು ಪುಣ್ಯಕರವು. ದಶಮೀ ವಿದ್ಧವಾದ ಏಕಾದಶಿಯ ದಿನದಲ್ಲಿ ಉಪವಾಸಮಾಡಬಾರದು.

೨೬-೩೧. ಬ್ರಾಹ್ಮಣನು ಹೇಳಿದನು—ಸೂತನೇ! ದ್ವಾದಶಿಯ ದಿನ ದಲ್ಲಿಯೂ ಏಕಾದಶೀ ತಿಥಿಯು ಅನುವರ್ತಿಸಿದ್ದಾಗ ಮನುಷ್ಯರು ಉಪವಾಸ ವನ್ನು ಹೇಗೆ ಮಾಡಬೇಕು?

ಉಪವಾಸದಿನವು ದಶಮೀ ವಿದ್ಧವಾಗಿದ್ದು ಮಾರನೆಯ ದಿನದಲ್ಲಿ ಸ್ವಲ್ಪವೂ ಏಕಾದಶೀ ತಿಥಿಯು ಇಲ್ಲದಿದ್ದರೆ ಆಗ ಹೇಗೆ ಉಪವಾಸ ಮಾಡ ಬೇಕು? ಇವನ್ನು ಹೇಳು.

ಸೌತಿಯು ಹೇಳಿದನು—ದ್ವಾದಶೀ ಪ್ರವಿಷ್ಟವಾದ ಏಕಾದಶಿಯ ಘಳಿಗೆಯು ಕಳೆಯುವವರೆಗೂ ಪರದಿನದಲ್ಲಿ ಉಪವಾಸ ಮಾಡಬೇಕು. ಅನೇಕ ವಾದ ಆಗಮಗಳು (ಪಂಚಾಂಗ) ಪರಸ್ಪರವಾಗಿ ವಿರುದ್ಧವಾಗಿ ಕಂಡುಬಂದು

ರವಿಚಂದ್ರಾರ್ಕಜಾಹಂ ತು ತದೋಽಪೋಷ್ಯಂ ಪರಂ ದಿನಂ ।
ಬಹ್ವಾಗಮವಿರೋಧೇಷು ಬ್ರಾಹ್ಮಣೇಷು ವಿವಾದಿಷು ॥ ೨೯ ॥

ಉಪೋಷ್ಯಾ ದ್ವಾದಶೀ ಪುಣ್ಯಾ ತ್ರಯೋದಶ್ಯಾಂ ತು ಪಾರಣಂ ।
ಏಕಾದಶ್ಯಾಂ ತು ವಿದ್ಧಾಯಾಂ ಸಂಪ್ರಾಪ್ತೇ ಶ್ರವಣೇ ತಥಾ ॥ ೩೦ ॥

ಉಪೋಷ್ಯಾ ದ್ವಾದಶೀ ಪುಣ್ಯಾ ಪಕ್ಷಯೋರುಭಯೋರಪಿ ।
ಏಷ ವೋ ನಿರ್ಣಯಃ ಪ್ರೋಕ್ತೋ ಮಯಾ ಶಾಸ್ತ್ರವಿನಿರ್ಣಯಾತ್ ॥೩೧॥

ಕಿಮನ್ಯಚ್ಛ್ರೋತುಕಾಮಾ ಹಿ ತದ್ಭವಂತೋ ಬ್ರುವಂತು ಮೇ ।
ಋಷಯ ಊಚುಃ
ಯುಗಾದೀನಾಂ ವದ ವಿಧಿಂ ಸೌತೇ ಸಮ್ಯಗ್ಯಥಾತಥಂ ॥ ೩೨ ॥

---

ಬ್ರಾಹ್ಮಣರಲ್ಲಿ ವಿವಾದವುಂಟಾದಾಗ ಶುದ್ಧ ದ್ವಾದಶಿಯ ದಿನ ಉಪವಾಸ ಮಾಡಿ ತ್ರಯೋದಶಿಯ ದಿನದಲ್ಲಿ ಪಾರಣೆ ಮಾಡಬೇಕು.

ಏಕಾದಶಿಯು ದಶಮಿಯ ಸಂಪರ್ಕದಿಂದ ವಿದ್ಧವೆನಿಸಿದಾಗ ಮತ್ತು ದ್ವಾದಶಿಯ ದಿನದಲ್ಲಿ ಶ್ರವಣನಕ್ಷತ್ರವು ಬಂದಾಗ ಶುಕ್ಲ ಕೃಷ್ಣಪಕ್ಷಗಳೆರಡರಲ್ಲಿಯೂ ಶುದ್ಧ ದ್ವಾದಶಿಯ ದಿನವೇ ಉಪವಾಸ ಮಾಡಿ ತ್ರಯೋದಶಿಯಲ್ಲಿ ಪಾರಣೆ ಮಾಡಬೇಕು. ಶಾಸ್ತ್ರದಲ್ಲಿ ನಿರ್ಣಯಿಸಿರುವ ಪ್ರಕಾರ ಈ ನಿರ್ಣಯವು ನಿಮಗೆ ಉಕ್ತವಾಗಿದೆ.

೩೨-೩೩. ಬೇರೆ ಇನ್ನಾವುದನ್ನು ತಿಳಿಯಬೇಕೆಂದು ನೀವು ಬಯಸುವಿರಿ? ಅದನ್ನು ನನಗೆ ಹೇಳಿ.

ಋಷಿಗಳು ಹೇಳಿದರು :—ಸೌತಿಯೇ! ನಿನಗೆ ತಿಳಿಯದುದಿಲ್ಲ. ಆದುದರಿಂದ ಯುಗಾದಿ ಮತ್ತು ಸಂಕ್ರಮಣಗಳ ವಿಧಾನವನ್ನು ಯಥಾವತ್ತಾಗಿ ಹೇಳು.

ರವಿಸಂಕ್ರಾತಿಕಾದೀನಾಂ ನಾವೇದ್ಯಂ ವಿದ್ಯತೇ ತವ ।

ಸೌತಿರುವಾಚ

ದ್ವೇ ಶುಕ್ಲೇ ದ್ವೇ ತಥಾ ಕೃಷ್ಣೇ ಯುಗಾದ್ಯಾಃ ಕವಯೋ ವಿದುಃ ॥೩೩॥

ಶುಕ್ಲೇ ಪೂರ್ವಾಣ್ಹಿಕೇ ಗ್ರಾಹ್ಯೇ ಕೃಷ್ಣೇ ಗ್ರಾಹ್ಯೇ ಪರಾಣ್ಹಿಕೇ ।
ಅಯನಂ ದಿನಭಾಗಾಢ್ಯಂ ಸಂಕ್ರಮಃ ಷೋಡಶಃ ಪಲಃ ॥ ೩೪ ॥

ಪೂರ್ವೇ ತು ದಕ್ಷಿಣೇ ಭಾಗೇ ವ್ಯತೀತೇ ಚೋತ್ತರೋ ಮತಃ ।
ಮಧ್ಯಕಾಲೇ ತು ವಿಷುವೇ ತ್ವಕ್ಷಯಾ ಪರಿಕೀರ್ತಿತಾ ॥ ೩೫ ॥

ಜ್ಞಾತ್ವಾ ವಿಪ್ರಾಸ್ತಿಥಿಂ ಸಮ್ಯಕ್ಸಾಂವತ್ಸರಸಮೀರಿತಾಂ ।
ಕರ್ತವ್ಯೋ ಹ್ಯುಪವಾಸಸ್ತು ಅನ್ಯಥಾ ನರಕಂ ವ್ರಜೇತ್ ॥ ೩೬ ॥

---

ಸೌತಿಯು ಹೇಳಿದನು—ಶುಕ್ಲಯುಗಾದಿಗಳು ಎರಡು ಮತ್ತು ಕೃಷ್ಣ ಯುಗಾದಿಗಳೆರಡು ಎಂಬುದಾಗಿ ಜ್ಞಾನಿಗಳು ತಿಳಿದಿರುವರು.

೩೪. ಶುಕ್ಲ ಯುಗಾದಿಗಳಲ್ಲಿ ಪೂರ್ವಾಹ್ಣವೂ, ಕೃಷ್ಣ ಯುಗಾದಿಗಳಲ್ಲಿ ಅಪರಾಹ್ಣವೂ ಗ್ರಾಹ್ಯವೆಂದು ತಿಳಿಯಬೇಕು. ದಿನಭಾಗಯುಕ್ತವಾದುದು ಅಯನವು. ಹದಿನಾರು ಪಲವು ಸಂಕ್ರಮಣವು.

೩೫. ದಕ್ಷಿಣಾಯನಗಳಲ್ಲಿ ಪೂರ್ವಘಳಿಗೆಗಳೂ, ಉತ್ತರಾಯಣಗಳಲ್ಲಿ ಪರಘಳಿಗೆಗಳೂ, ವಿಷುವ ಸಂಕ್ರಮಣದಲ್ಲಿ ಪೂರ್ವೋತ್ತರ ಕಾಲಗಳೂ ಅಕ್ಷಯವೆಂದು ಉಕ್ತವಾಗಿದೆ.

೩೬. ಬ್ರಾಹ್ಮಣರು ಸಂವತ್ಸರದಲ್ಲಿ ವಿಹಿತವಾದ ತಿಥಿಯನ್ನು ಚೆನ್ನಾಗಿ ತಿಳಿದು ಉಪವಾಸ ಮಾಡಬೇಕು. ವಿಮರ್ಶಿಸಿ ಮಾಡದಿದ್ದರೆ ನರಕ ಪ್ರಾಪ್ತಿಯಾಗುವುದು.

ಪೂರ್ವವಿದ್ಧಾಂ ಪ್ರಕುರ್ವಾಣೋ ನರೋ ಧರ್ಮಂ ನಿಕೃಂತತಿ ।
ಸಂತತೇಸ್ತು ವಿನಾಶಾಯ ಸಂಪದಾಂ ಹರಣಾಯ ಚ ॥ ೩೭ ॥

ಫಲವೇಧೇಽಪಿ ವಿಪ್ರೇಂದ್ರ ದಶಮ್ಯಾ ವರ್ಜಯೇಚ್ಛಿವಾಂ ।
ಸುರಾಯಾ ಬಿಂದುನಾ ಸ್ಪೃಷ್ಟಂ ಯಥಾ ಗಂಗಾಜಲಂ ತ್ಯಜೇತ್ ॥ ೩೮ ॥

ಶ್ವಹತಂ ಪಂಚಗವ್ಯಂ ಚ ದಶಮ್ಯಾ ದೂಷಿತಾಂ ತ್ಯಜೇತ್ ।
ಏಕಾದಶೀಂ ದ್ವಿಜಶ್ರೇಷ್ಠಾಃ ಪಕ್ಷಯೋರುಭಯೋರಪಿ ॥ ೩೯ ॥

ಪೂರ್ವವಿದ್ಧಾ ಪುರಾ ದತ್ತಾ ಸಾ ತಿಥಿರ್ಯದುಮೌಲಿನಾ ।
ದಾನವೇಭ್ಯೋ ದ್ವಿಜಶ್ರೇಷ್ಠಾಃ ಪ್ರೀಣನಾರ್ಥಂ ಮಹಾತ್ಮನಾಂ ॥ ೪೦ ॥

---

೩೭. ದಶಮೀ ವಿದ್ಧವಾದ ಏಕಾದಶಿಯನ್ನು ಅನುಷ್ಠಾನಮಾಡುವ ಮನುಷ್ಯನು ಧರ್ಮ, ಸಂಪತ್ತು ಮತ್ತು ಸಂತತಿಗಳನ್ನು ನಾಶಪಡಿಸಿ ಕೊಳ್ಳುವನು.

೩೮. ಬ್ರಾಹ್ಮಣೋತ್ತಮನೇ! ಗಂಗೋದಕವು ಸ್ವತಃ ಶುದ್ಧವಾಗಿದ್ದರೂ ಅದು ಮದ್ಯಬಿಂದು ಸಹಿತವಾದರೆ ತ್ಯಾಜ್ಯವಾಗುವಂತೆ ದಶಮಿಯ ಫಲವೇಧಬಂದರೂ ಏಕಾದಶಿಯು ಗ್ರಾಹ್ಯವಾಗುವುದಿಲ್ಲ. ಆ ದಿವಸ ಉಪವಾಸ ಮಾಡಬಾರದು.

೩೯. ದ್ವಿಜವರ್ಯರೇ! ನಾಯಿಯು ಮುಟ್ಟಿದ ಪಂಚಗವ್ಯದಂತೆ ಎರಡು ಪಕ್ಷಗಳಲ್ಲಿಯೂ ದಶಮಿಯ ಸಂಪರ್ಕದಿಂದ ದೂಷಿತವಾದ ಏಕಾದಶಿಯನ್ನು ತ್ಯಜಿಸಬೇಕು.

೪೦. ಕೃಷ್ಣನು ಮಹಾತ್ಮರ ತೃಪ್ತ್ಯರ್ಥವಾಗಿ ದಶಮೀ ವಿದ್ಧವಾದ ಏಕಾದಶಿಯನ್ನು ದಾನವರಿಗಾಗಿ ಕೊಟ್ಟಿರುವನು. ಅದನ್ನು ಆಚರಿಸುವುದರಿಂದ ಅವರಿಗೆ ಯೋಗ್ಯವಾದ ತಮಸ್ಸು ದೊರೆಯಲೆಂದು ತಾತ್ಪರ್ಯ.

ಅಕಾಲೇ ಯದ್ಧನಂ ದತ್ತಮಪಾತ್ರೇಭ್ಯೋ ದ್ವಿಜೋತ್ತಮಾಃ |
ಸಂಕ್ರುದ್ಧೈರಪಿ ಯದ್ದತ್ತಂ ಯದ್ದತ್ತಂ ಚಾಪ್ಯಸತ್ಕೃತಂ || ೪೧ ||

ಪೂರ್ವವಿದ್ಧತಿಥೌ ದತ್ತಂ ತದ್ದತ್ತಮಸುರೇಷ್ವಥ |
ಯದುಚ್ಛಿಷ್ಟೇನ ದತ್ತಂ ತು ಯದ್ದತ್ತಂ ಪತಿತೇಷ್ವಪಿ || ೪೨ ||

ಸ್ತ್ರೀಜಿತೇಷು ಚ ಯದ್ದತ್ತಂ ಯದ್ದತ್ತಂ ಜಲವರ್ಜಿತಂ |
ಪುನಃ ಕೀರ್ತನಸಂಯುಕ್ತಂ ತದ್ದತ್ತಮಸುರೇಷು ವೈ || ೪೩ ||

ತಸ್ಮಾದ್ವಿಪ್ರಾ ನ ಕರ್ತವ್ಯಾ ವಿದ್ಧಾಽಪ್ಯೇಕಾದಶೀತಿಥಿಃ |
ಯಥಾ ಹಂತಿ ಪುರಾ ಪುಣ್ಯಂ ಶ್ರಾದ್ಧಂ ಚ ವೃಷಲೀಪತಿಃ || ೪೪ ||

ದತ್ತಂ ಜಪ್ತಂ ಹುತಂ ಸ್ನಾತಂ ತಥಾ ಪೂಜಾ ಕೃತಾ ಹರೇಃ |
ತಿಥೌ ವಿದ್ಧೇ ಕ್ಷಯಂ ಯಾತಿ ತಮಃ ಸೂರ್ಯೋದಯೇ ಯಥಾ || ೪೫ ||

---

೪೧-೪೩. ದ್ವಿಜೋತ್ತಮರೇ! ಅಕಾಲದಲ್ಲಿ ದ್ರವ್ಯದಾನಮಾಡುವುದು, ಅಪಾತ್ರರಿಗೆ ಕೊಡುವುದು, ಕೋಪಗೊಂಡು ದಾನಮಾಡುವುದು, ಸತ್ಕಾರವಿಲ್ಲದೇ ದಾನಮಾಡುವುದು ಮತ್ತು ಪೂರ್ವತಿಥಿವಿದ್ಧತಿಥಿಯಲ್ಲಿ ದಾನಮಾಡುವುದೂ ಸಹ ಅಸುರರಿಗೆ ದಾನಮಾಡಿದಂತಾಗುವುದು.

ಎಂಜಲನ್ನು ದಾನಮಾಡುವುದು, ಪತಿತರಿಗೆ ಕೊಡುವುದು, ಸ್ತ್ರೀಜಿತರಿಗೆ ಕೊಡುವುದು, ನೀರಿನಿಂದ ಧಾರೆಯೆರೆಯದೆ ದಾನಮಾಡುವುದು ಮತ್ತು ದಾನ ಮಾಡಿದುದನ್ನು ಪುನಃ ಪುನಃ ಹೇಳಿಕೊಳ್ಳುತ್ತಿರುವುದೂ ಸಹ ಅಸುರರಿಗೆ ದಾನಮಾಡಿದಂತೆ ವ್ಯರ್ಥವೇ ಸರಿ.

೪೪-೪೫. ಆದಕಾರಣ ವಿದ್ಧವಾದ ಏಕಾದಶೀತಿಥಿಯಲ್ಲಿ ಉಪವಾಸ ವ್ರತವನ್ನಾಚರಿಸಬಾರದು. ವೃಷಲೀಪತಿಯು ಪೂರ್ವ ಪುಣ್ಯ ಮತ್ತು ಶ್ರಾದ್ಧ ಗಳನ್ನು ನಾಶಪಡಿಸುವಂತೆಯೂ, ಸೂರ್ಯೋದಯವು ಕತ್ತಲೆಯನ್ನು ನಾಶ ಪಡಿಸುವಂತೆಯೂ, ಆಚರಿಸಿದ ದಾನ, ಜಪ, ಹೋಮ, ಸ್ನಾನ, ಹರಿಪೂಜೆ, ಇವುಗಳನ್ನೆಲ್ಲಾ ವಿದ್ಧತಿಥಿಯು ನಾಶಪಡಿಸುವುದು.

**ಜೀರ್ಣಂ ಪತಿಂ ಯೌವ್ವನಗರ್ವಿತಾ ಯಥಾ**
**ತ್ಯಜಂತಿ ನಾರ್ಯೋ ಝುಷಕೇತುನಾರ್ದಿತಾಃ ।**
**ತಥಾಹಿ ವೇಧಂ ವಿಬುಧಾಸ್ತ್ಯಜಂತಿ**
**ತಿಥ್ಯಂತರಂ ಧರ್ಮವಿವೃದ್ಧಯೇ ಸದಾ || ೪೬ ||**

**ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ತಿಥಿ**
**ವಿಚಾರೋ ನಾಮ ದ್ವಿತೀಯೋಽಧ್ಯಾಯಃ**

---

೪೬. ಕಾಮಪೀಡಿತರಾದ ಯೌವನಗರ್ವಿತಸ್ತ್ರೀಯರು ಮುದಿಗಂಡನನ್ನು ಬಿಡುವಂತೆ ಜ್ಞಾನಿಗಳು ವಿದ್ಧತಿಥಿಯನ್ನು ಬಿಡುವರು. ಯಾವಾಗಲೂ ಧರ್ಮವೃದ್ಧಿಗಾಗಿ ಬೇರೇ ತಿಥಿಯನ್ನೇ ಆಚರಿಸುವರು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ತಿಥಿವಿಚಾರಕಥನ
ವೆಂಬ ಎರಡನೆಯ ಅಧ್ಯಾಯವು ಮುಗಿದುದು.

---

## ವಿಷಯಸಂಗ್ರಹ

ನೈಮಿಷಾರಣ್ಯವಾಸಿಗಳಾದ ಬ್ರಾಹ್ಮಣರು ಏಕಾದಶೀ ಆಚರಣೆಯ ವಿಷಯದಲ್ಲಿ ಮಾಡಿದ ಪ್ರಶ್ನೆಗಳಿಗೆ ಸೂತರು ದಶಮಿಯ ವೇಧೆ, ಹರಿವಾಸರ, ಶ್ರವಣದ್ವಾದಶಿ, ಯುಗಾದಿ, ಸಂಕ್ರಮಣ ಇವುಗಳ ವಿಷಯವನ್ನೆಲ್ಲಾ ಸಪರಿಕರವಾಗಿ ವಿವರಿಸಿ ಉತ್ತರಹೇಳಿಯುವರು.

---

# ತೃತೀಯೋಽಧ್ಯಾಯಃ

ಋಷಯ ಊಚುಃ

ವಿಸ್ತರೇಣ ಸಮಾಖ್ಯಾಹಿ ವಿಷ್ಣೋರಾರಾಧನಕ್ರಿಯಾಂ ।
ಯಯಾ ತೋಷಂ ಸಮಾಯಾತಿ ಪ್ರದದಾತಿ ಸಮೀಹಿತಂ ॥ ೧ ॥

ಲಕ್ಷ್ಮೀಭರ್ತಾ ಜಗನ್ನಾಥೋ ಹ್ಯಶೇಷಾಘೌಘನಾಶನಃ ।
ಕರ್ಮಣಾ ಕೇನ ಸ ಪ್ರೀತೋ ಭವೇದ್ವ್ಯಃ ಸ ಚರಾಚರಃ ॥ ೨ ॥

ಸೌತಿರುವಾಚ

ಭಕ್ತಿಗ್ರಾಹ್ಯೋ ಹೃಷೀಕೇಶೋ ನ ಧನೈರ್ಧರಣೀಧರಃ ।
ಭಕ್ತ್ಯಾ ಸಂಪೂಜಿತೋ ವಿಷ್ಣುಃ ಪ್ರದದಾತಿ ಮನೋರಥಂ ॥ ೩ ॥

---

## ಮೂರನೆಯ ಅಧ್ಯಾಯವು

೧. ಋಷಿಗಳು ಹೇಳಿದರು :—ಯಾವ ಆರಾಧನೆಯಿಂದ ವಿಷ್ಣುವು ಸಂತೋಷಪಟ್ಟು ಇಷ್ಟಾರ್ಥವನ್ನು ಕೊಡುವನೋ ಅಂತಹ ವಿಷ್ಣುವಿನ ಆರಾಧನೆಯ ವಿಧಾನವನ್ನು ವಿಸ್ತಾರವಾಗಿ ಹೇಳು.

೨. ಲಕ್ಷ್ಮೀಪತಿಯೂ, ಜಗದೊಡೆಯನು, ಸಮಸ್ತಪಾಪಗಳ ಸಮೂಹವನ್ನು ನಾಶಪಡಿಸುವವನು, ಚರಾಚರವ್ಯಾಪಿಯೂ ಆದ ನಾರಾಯಣನು ಯಾವ ಕಾರ್ಯದಿಂದ ಸಂತುಷ್ಟನಾಗುವನು ?

೩. ಭಕ್ತಿವಶ್ಯನು, ಇಂದ್ರಿಯನಿಯಾಮಕನು, ಧರಣೀಧಾರಕನೂ ಆಗಿರುವ ವಿಷ್ಣುವು ಧನಗಳಿಂದ ಸಂತುಷ್ಟನಾಗುವುದಿಲ್ಲ. ಭಕ್ತಿಯಿಂದ ಅವನನ್ನು ಆರಾಧಿಸಿದರೆ ಪ್ರಸನ್ನನಾಗಿ ಇಷ್ಟಾರ್ಥವನ್ನು ಕೊಡುವನು. ಭಕ್ತಿಯಿಲ್ಲದೇ ಮಾಡುವ ಆರಾಧನೆ, ದಾನ ಮುಂತಾದುವುಗಳೆಲ್ಲವೂ ವ್ಯರ್ಥ. ಭಕ್ತಿಯೇ ಪ್ರಧಾನಸಾಧನವೆಂದು ತಾತ್ಪರ್ಯ.

ತಸ್ಮಾದ್ವಿಪ್ರಾಃ ಸದಾ ಭಕ್ತಿಃ ಕರ್ತವ್ಯಾ ಚಕ್ರಪಾಣಿನಃ ।
ಜಲೇನಾಪಿ ಜಗನ್ನಾಥಃ ಪೂಜಿತಃ ಕ್ಲೇಶಹಾ ಭವೇತ್ ॥ ೪ ॥

ಪರಿತೋಷಂ ವ್ರಜತ್ಯಾಶು ತೃಷಿತಸ್ತು ಜಲೈರ್ಯಥಾ ।
ಅತ್ರಾಪಿ ಶ್ರೂಯತೇ ವಿಪ್ರಾ ಆಖ್ಯಾನಂ ಪಾಪನಾಶನಂ ॥ ೫ ॥

ರುಕ್ಮಾಂಗದಸ್ಯ ಸಂವಾದಮೃಷಿಣಾ ಗೌತಮೇನ ಹಿ ।
ಆಸೀದ್ರುಕ್ಮಾಂಗದೋ ರಾಜಾ ಸಾರ್ವಭೌಮಃ ಕ್ಷಮಾನ್ವಿತಃ ॥ ೬ ॥

ಕ್ಷೀರಶಾಯಿಪ್ರಿಯೋ ಭಕ್ತೋ ಹರಿವಾಸರತತ್ಪರಃ ।
ನಾನ್ಯಂ ಪಶ್ಯತಿ ದೇವೇಶಾತ್ಪದ್ಮನಾಭಾನ್ಮಹೀಪತಿಃ ॥ ೭ ॥

---

೪. ಆದಕಾರಣ ಬ್ರಾಹ್ಮಣರೇ! ಯಾವಾಗಲೂ ಚಕ್ರಪಾಣಿಯಲ್ಲಿ ಭಕ್ತಿಮಾಡಬೇಕು. ಭಕ್ತಿಪೂರ್ವಕವಾಗಿ ಕೇವಲ ನೀರಿನಿಂದ ಪೂಜಿಸಿದರೂ ಜಗನ್ನಾಥನು ಕಷ್ಟಗಳನ್ನು ಪರಿಹರಿಸುವನು.

೫-೭. ಬಾಯಾರಿಕೆಯಿಂದ ಬಳಲಿದವನು ನೀರಿನಿಂದ ತೃಪ್ತನಾಗುವಂತೆ ಭಕ್ತಿಯಿಂದ ಪೂಜಿತನಾದ ಜಗನ್ನಾಥನು ತಕ್ಷಣದಲ್ಲಿಯೇ ಸಂತುಷ್ಟನಾಗುವನು.

ಈ ವಿಷಯದಲ್ಲಿಯೇ ರುಕ್ಮಾಂಗದ ಗೌತಮಋಷಿಗಳ ಸಂಭಾಷಣೆಯ ರೂಪವಾದ, ಪಾಪವನ್ನು ಪರಿಹರಿಸುವಂತಹ ಉಪಾಖ್ಯಾನವಿದೆ. ಬ್ರಾಹ್ಮಣರೇ! ಅದನ್ನು ಹೇಳುವೆನು ಕೇಳಿರಿ.

ಸಹನಶೀಲನು, ವಿಷ್ಣುವಿನ ಪ್ರಿಯಭಕ್ತನು, ಏಕಾದಶೀವ್ರತನಿಷ್ಠನೂ ಆದ ರುಕ್ಮಾಂಗದರಾಜನೆಂಬ ಸಾರ್ವಭೌಮನಿದ್ದನು. ಆ ದೊರೆಯು ದೇವೇಶನಾದ ಪದ್ಮನಾಭನನ್ನು ಹೊರತು ಅನ್ಯದೇವತೆಯನ್ನು ಪ್ರಧಾನವಾಗಿ ನೋಡುತ್ತಿರಲಿಲ್ಲ.

ಪಟಹಂ ವಾರಣೇ ಧೃತ್ವಾ ವಾದಯೇದ್ಧರಿವಾಸರೇ ।
ಅಷ್ಟವರ್ಷಾಧಿಕೋ ಯಸ್ತು ಪಂಚಾಶೀತ್ಯೂನವರ್ಷಕಃ ॥ ೮ ॥

ಭುನಕ್ತಿ ಮಾನವೋ ಹ್ಯದ್ಯ ವಿಷ್ಣೋರಹನಿ ಮಂದಧೀಃ ।
ಸನೋ ದಂಡ್ಯಶ್ಚ ವಧ್ಯಶ್ಚ ನಿರ್ವಾಸ್ಯೋ ನಗರಾದ್ಬಹಿಃ ॥ ೯ ॥

ಪಿತಾ ಚ ಯದಿ ವಾ ಭ್ರಾತಾ ಪುತ್ರೋ ಭಾರ್ಯಾ ಸುಹೃನ್ಮಮ ।
ಪದ್ಮನಾಭದಿನೇ ಭೋಕ್ತಾ ನಿಗ್ರಾಹ್ಯೋ ದಸ್ಯುವದ್ಭವೇತ್ ॥ ೧೦ ॥

ದದಧ್ವಂ ವಿಪ್ರಮುಖ್ಯೇಭ್ಯೋ ಮಜ್ಜಧ್ವಂ ಜಾಹ್ನವೀಜಲೇ ।
ಮಮೇದಂ ವಚನಂ ಶ್ರುತ್ವಾ ರಾಜ್ಯಂ ಭುಂಜೀತ ಮಾಮಕಂ ॥ ೧೧ ॥

ವಾಸರೇವಾಸರೇ ವಿಷ್ಣೋಃ ಶುಕ್ಲಪಕ್ಷೇ ಮಹೀಪತಿಃ ।
ಅಶುಕ್ಲೇ ತು ವಿಶೇಷೇಣ ಪಟಹೇ ಹೇಮಸಂಪುಟೇ ॥ ೧೨ ॥

---

೮-೧೨. ಆ ರಾಜನು ಹರಿವಾಸರದಲ್ಲಿ ಆನೆಯಮೇಲೆ ನಗಾರಿಯನ್ನಿಡಿಸಿ ಶಬ್ದಮಾಡಿಸುತ್ತಾ "ಎಂಟುವರ್ಷಗಳಮೇಲೆ ಎಂಬತ್ತು ವರ್ಷಯಸ್ಸಿನೊಳಗಿರುವ ಯಾವಮನುಷ್ಯನೇ ಆಗಲಿ ವಿಷ್ಣುವಿನದಿನ ಅಂದರೆ ಏಕಾದಶಿಯ ದಿನದಲ್ಲಿ ಮೂಢಬುದ್ಧಿಯಿಂದ ಊಟಮಾಡಿದ್ದೇ ಆದರೆ ಆಂತಹವನು ಶಿಕ್ಷೆಗೆ ಗುರಿಯಾಗುವನು. ಅಷ್ಟೇ ಅಲ್ಲದೆ ಅವನನ್ನು ದೇಶದಿಂದ ಹೊರಕ್ಕೆ ಅಟ್ಟುವೆನು. ಒಂದು ವೇಳೆ ನನ್ನ ತಂದೆ, ಸಹೋದರ, ಪುತ್ರ, ಪತ್ನೀ ಅಥವಾ ಸ್ನೇಹಿತನಾದರೂ ಹರಿದಿನದಲ್ಲಿ ಊಟಮಾಡಿದರೆ ಅವನನ್ನೂ ಸಹ ಚೋರನಂತೆ ನಿಗ್ರಹಿಸುವೆನು. ಆ ದಿನದಲ್ಲಿ ಬ್ರಾಹ್ಮಣ ಪ್ರಮುಖರಿಗೆ ದಾನಮಾಡಿ, ಗಂಗೆಯಜಲದಲ್ಲಿ ಸ್ನಾನಮಾಡಿರಿ ! ಈ ವಚನವನ್ನು ಪಾಲಿಸಿ ನನ್ನ ರಾಜ್ಯದಲ್ಲಿ ಸುಖವಾಗಿರಿ" ಎಂಬದಾಗಿ ಪ್ರತಿಯೊಂದು ಶುಕ್ಲಪಕ್ಷದ ಏಕಾದಶೀ ಮತ್ತು ವಿಶೇಷವಾಗಿ ಕೃಷ್ಣಪಕ್ಷದ, ಏಕಾದಶಿಯಲ್ಲೂ ಸಹ ಸುವರ್ಣಸಂಪುಟಿತವಾದ ಢಣೆಯನ್ನು ಬಾರಿಸುತ್ತಾ ಸಾರಿಸುತ್ತಿದ್ದನು.

**ಏವಂ ಪ್ರಧೃಷ್ಟೇ ಭೂಪೇನ ಸರ್ವಭೂಮೌ ದ್ವಿಜೋತ್ತಮಾಃ |**
**ಗಚ್ಛದ್ಭಿಃ ಸಂಕುಲೋ ಮಾರ್ಗಃ ಕೃತೋ ಲೋಕೈರ್ಹರೇರ್ದ್ವಿಜಾಃ ||೧೩||**

**ಯೇ ಕೇಚಿನ್ನಿಧನಂ ಯಾಂತಿ ಭೂಪಾಲವಿಷಯೇ ನರಾಃ |**
**ಜ್ಞಾನಾತ್ಪ್ರಮಾದತೋ ವಾಽಪಿ ತೇ ಯಾಂತಿ ಹರಿಮಂದಿರಂ || ೧೪ ||**

**ಅವಶ್ಯಂ ವೈಷ್ಣವೋ ಲೋಕಃ ಪ್ರಾಪ್ಯತೇ ಮಾನವೈರ್ದ್ವಿಜಾಃ |**
**ವ್ಯಾಜೇನಾಪಿ ಪ್ರಕುರ್ವಾಣೈರ್ದ್ವಾದಶೀಂ ಪಾಪನಾಶಿನೀಂ || ೧೫ ||**

**ಸೋಽಶ್ನಾತಿ ಪಾರ್ಥಿವಂ ಪಾಪಂ ಯೋಽಶ್ನಾತಿ ಹರಿವಾಸರೇ |**
**ಸ ಪ್ರಾಪ್ನೋತಿ ಧರಾಧರ್ಮಂ ಯೋ ನಾಶ್ನಾತಿ ಹರೇರ್ದಿನೇ || ೧೬ ||**

---

ಅದರಂತೆ ಪ್ರಜೆಗಳೆಲ್ಲರೂ ಅನುಸರಿಸಿ ಮಹಾಪುಣ್ಯವನ್ನು ಗಳಿಸಿ ಎಲ್ಲರೂ ಹರಿಲೋಕಕ್ಕೆ ಹೋಗಲು ಸನ್ನದ್ಧರಾದರು. ಅಂತಹವರಿಂದ ಹರಿಲೋಕದ ಮಾರ್ಗವು ವ್ಯಾಪ್ತವಾಯಿತು.

೧೪-೧೫. ಆ ದೊರೆಯ ದೇಶದಲ್ಲಿ ಜ್ಞಾನಪೂರ್ವಕವಾಗಿ ಅಥವಾ ಪ್ರಮಾದದಿಂದಲಾದರೂ ಮೃತಿಯನ್ನು ಹೊಂದುವ ಮನುಷ್ಯರೆಲ್ಲರೂ ಹರಿಯ ಮಂದಿರವನ್ನು ಕುರಿತು ಪ್ರಯಾಣಮಾಡುತ್ತಿದ್ದರು.

ದ್ವಿಜರೇ ! ಪಾಪನಾಶಕವಾದ ದ್ವಾದಶೀವ್ರತವನ್ನು ಆವುದಾದರೊಂದು ನೆಪದಿಂದಲಾದರೂ ಆಚರಿಸಿದ ಮನುಜನು ಖಂಡಿತವಾಗಿಯೂ ವಿಷ್ಣುಲೋಕ ವನ್ನೇ ಹೊಂದುವನು.

೧೬. ಹರಿದಿನದಲ್ಲಿ ಭೋಜನಮಾಡುವವನು ಪಾರ್ಥಿವಪಾಪಗಳಿಗೆಲ್ಲಾ ಭಾಗಿಯಾಗುವನು. ಹರಿದಿನದಲ್ಲಿ ಭೋಜನಮಾಡದಿರುವವನು ಭೂಲೋಕದಲ್ಲಿ ಗಳಿಸಬಹುದಾದ ಸಕಲಪುಣ್ಯಗಳಿಗೂ ಭಾಗಿಯಾಗುವನು.

ಬ್ರಾಹ್ಮಣೋ ನೈವ ಹಂತವ್ಯ ಇತ್ಯೇಷಾ ವೈದಿಕೀ ಸ್ಮೃತಿಃ |
ಏಕಾದಶ್ಯಾಂ ನ ಭೋಕ್ತವ್ಯಂ ಪಕ್ಷಯೋರುಭಯೋರಪಿ || ೧೭ ||

ವೈಲಕ್ಷ್ಯಮಗಮದ್ರಾಜಾ ರವಿಸೂನುರ್ದ್ವಿಜೋತ್ತಮಾಃ |
ಲೇಖ್ಯಕರ್ಮಣಿ ವಿಶ್ರಾಂತಶ್ಚಿತ್ರಗುಪ್ತೋಽಭವತ್ತದಾ || ೧೮ ||

ಸಮಾರ್ಜಿತಾನಿ ಲೇಖ್ಯಾನಿ ಪೂರ್ವಕರ್ಮೋದ್ಭವಾನಿ ಚ |
ಗಚ್ಛಂತಿ ವೈಷ್ಣವಂ ಲೋಕಂ ಸ್ವಧರ್ಮೈರ್ಮಾನವಾಃ ಕ್ಷಣಾತ್ || ೧೯ ||

ಶೂನ್ಯಾಸ್ತು ನಿರಯಾಃ ಸರ್ವೇ ಪಾಪಪ್ರಾಣಿವಿವರ್ಜಿತಾಃ |
ಭಗ್ನೋ ಯಾಮ್ಯೋಽಭವನ್ಮಾರ್ಗೋ ದ್ವಾದಶಾದಿತ್ಯತಾಪಿತಃ || ೨೦ ||

---

೧೭. "ಬ್ರಾಹ್ಮಣೋ ನ ಹಂತವ್ಯಃ" ಬ್ರಾಹ್ಮಣನು ಕೊಲ್ಲಲ್ಪಡಬಾರದು, "ಏಕಾದಶ್ಯಾಂ ನ ಭೋಕ್ತವ್ಯಂ ಪಕ್ಷಯೋರುಭಯೋರಪಿ" ಶುಕ್ಲ ಕೃಷ್ಣ ಪಕ್ಷಗಳೆರಡರ ಏಕಾದಶಿಗಳಲ್ಲಿಯೂ ಊಟಮಾಡಬಾರದು ಎಂಬುದು ವೇದೋಕ್ತ ಸ್ಮೃತಿಯು.

೧೮-೧೯. ದ್ವಿಜೋತ್ತಮರೇ! ಹೀಗೆ ರುಕ್ಮಾಂದರಾಜನ ಆಡಳಿತದಲ್ಲಿ ಅವನ ರಾಜ್ಯದಲ್ಲಿನ ಪ್ರಜೆಗಳೆಲ್ಲರೂ ಹರಿದಿನವ್ರತವನ್ನಾಚರಿಸಿ ವಿಷ್ಣುಲೋಕಕ್ಕೆ ಹೊಗುತ್ತಿರಲು ಇತ್ತಲಾಗಿ ಸೂರ್ಯಪುತ್ರನಾದ ಯಮರಾಜನು ತನ್ನಲೋಕಕ್ಕೆ ಯಾರೂ ಬರದಿದ್ದುದರಿಂದ ಕೆಲಸವಿಲ್ಲದಂತಾದನು? ಆಗ ಚಿತ್ರಗುಪ್ತನೂ ಸಹ ಬರೆಯುವ ಕೆಲಸದಿಂದ ವಿಶ್ರಾಂತನಾದನು. ಹಿಂದಿನ ಕರ್ಮದಿಂದ ಉದ್ಭವಿಸಿದ್ದ ಲೇಖಗಳು ಅಳಿಸಲ್ಪಟ್ಟವು. ಮನುಷ್ಯರು ತಮ್ಮ ತಮ್ಮ ಧರ್ಮಗಳನ್ನಾಚರಿಸುತ್ತಿದ್ದುದರಿಂದ ಕ್ಷಣಮಾತ್ರದಲ್ಲಿ ವೈಷ್ಣವಲೋಕಕ್ಕೇ ತೆರಳುವವರಾದರು.

೨೦. ಪಾಪಮಾಡಿದ ಪ್ರಾಣಿಗಳೇ ಇಲ್ಲದಂತಾಗಿ ನರಕಗಳೆಲ್ಲವೂ ಶೂನ್ಯವಾದುವು. ಯಮಮಾರ್ಗವಾದರೋ ದ್ವಾದಶಾದಿತ್ಯರಿಂದ ತಪಿಸಲ್ಪಟ್ಟು ನಾಶಪಡಿಸಲ್ಪಟ್ಟಿತು.

ಸರ್ವೇ ಹಿ ಗರುಡಾರೂಢಾ ಜನಾ ಯಾಂತಿ ಹರೇಃ ಪದಂ ।
ದೇವಾನಾಮಪಿ ಯೇ ಲೋಕಾಸ್ತೇ ಶೂನ್ಯಾ ಹ್ಯಭವಂಸ್ತಥಾ ॥ ೨೧ ॥

ಉತ್ಸನ್ನಾಃ ಪಿತೃದೇವೇಜ್ಯಾಸ್ತೀರ್ಥದಾನಾದಿಸತ್ಕ್ರಿಯಾಃ ।
ಮುಕ್ತ್ವೈಕಾಂ ದ್ವಾದಶೀಂ ಮರ್ತ್ಯಾ ನಾನ್ಯಂ ಜಾನಂತಿ ತೇ ವ್ರತಂ ॥

ಶೂನ್ಯೇ ತ್ರಿವಿಷ್ಟಪೇ ಜಾತೇ ಶೂನ್ಯೇ ಚ ನರಕೇ ತಥಾ ।
ನಾರದೋ ಧರ್ಮರಾಜಾನಂ ಗತ್ವಾ ಚೇದಮುವಾಚ ಹ ॥ ೨೩ ॥

ನಾರದ ಉವಾಚ

ನಾಕ್ರಂದಃ ಶ್ರೂಯತೇ ರಾಜನ್ ಪ್ರಾಂಗಣೇ ನರಕೇ ತವ ।
ನ ಚಾಪಿ ಕ್ರಿಯತೇ ಲೇಖ್ಯಂ ಕಿಂಚಿದ್ದುಷ್ಕೃತಕರ್ಮಣಾಂ ॥ ೨೪ ॥

ಚಿತ್ರಗುಪ್ತೋ ಮುನಿರಿವ ಸ್ಥಿತೋಽಯಂ ಮೌನಸಂಯುತಃ ।
ಕಾರಣಂ ಕಿಂ ನ ಚಾಯಾಂತಿ ಪಾಪಿನೋ ಯೇನ ತೇ ಗೃಹಂ ॥ ೨೫ ॥

---

೨೧. ಸಮಸ್ತಜನರೂ ಗರುಡನ ಮೇಲೆ ಕುಳಿತು ಹರಿಪದಕ್ಕೇ ಹೋಗುವವರಾದರು. ದೇವಲೋಕಗಳೂ ಸಹ ಬರಿದಾದುವು.

೨೨. ಪಿತೃದೇವಪೂಜೆ, ತೀರ್ಥಸ್ನಾನ, ದಾನಮುಂತಾದ ಸತ್ಕರ್ಮಗಳೆಲ್ಲವೂ ನಾಶವಾದುವು. ಮನುಷ್ಯರು ದ್ವಾದಶೀವ್ರತವೊಂದು ಹೊರತು ಇನ್ನಾವ ವ್ರತವನ್ನೂ ಅರಿಯದವರಾದರು.

೨೩. ದೇವಲೋಕವು ಮತ್ತು ನರಕಗಳು ಬರಿದಾಗಲು ನಾರದನು ಧರ್ಮರಾಜನ ಬಳಿಗೆ ಹೋಗಿ ಮುಂದೆ ಹೇಳುವ ಮಾತನ್ನು ನುಡಿದನು.

೨೪-೩೧. ನಾರದನು ಹೇಳಿದನು :—ಯಮಧರ್ಮರಾಜನೇ ! ನಿನ್ನ ನರಕಾಂಗಣದಲ್ಲಿ ರೋದನಾದಿ ಶಬ್ದವೇ ಕೇಳುವುದಿಲ್ಲ. ಪಾಪಕರ್ಮಗಳು ಸ್ವಲ್ಪವೂ ಸಹ ಚಿತ್ರಗುಪ್ತರಿಂದ ಬರೆಯಲ್ಪಡುತ್ತಿಲ್ಲ. ಈ ಚಿತ್ರಗುಪ್ತನು ಮುನಿಯಂತೆ ಮೌನವ್ರತವನ್ನು ಧರಿಸಿರುವನು. ನಿನ್ನ ಲೋಕಕ್ಕೆ ಪಾಪಿಗಳು, ಮೋಸಗಾರರು, ಡಾಂಭಿಕರು ಮತ್ತು ನಿಷಿದ್ಧಕರ್ಮಾಚರಣೆಯಲ್ಲಾಸಕ್ತರು ಇವ

ಮಾಯಾದಂಭಸಮಾಕ್ರಾಂತಾ ದುಷ್ಟಕರ್ಮರತಾಸ್ತಥಾ ।
ಏವಮುಕ್ತೇ ತು ವಚನೇ ನಾರದೇನ ಮಹಾತ್ಮನಾ ॥ ೨೬ ॥

ಪ್ರಾಹ ವೈವಸ್ವತೋ ರಾಜಾ ಕಿಂಚಿದ್ದೈನ್ಯಸಮನ್ವಿತಃ ।

ಯಮ ಉವಾಚ

ಯೋಽಯಂ ನಾರದ ಭೂಪಾಲಃ ಪೃಥಿವ್ಯಾಂ ಸಾಂಪ್ರತಂ ಸ್ಥಿತಃ ॥ ೨೭ ॥

ಸ ಹಿ ಭಕ್ತೋ ಹೃಷೀಕೇಶೇ ಪುರಾಣಪುರುಷೋತ್ತಮೇ ।
ಪ್ರಬೋಧಯತಿ ರಾಜೇಂದ್ರಃ ಸ ಜನಂ ಪಟಹೇನ ಹಿ ॥ ೨೮ ॥

ನ ಭೋಕ್ತವ್ಯಂ ನ ಭೋಕ್ತವ್ಯಂ ಸಂಪ್ರಾಪ್ತೇ ಹರಿವಾಸರೇ ।
ಯೇ ಕೇಚಿದ್ಭುಂಜತೇ ಮರ್ತ್ಯಾಸ್ತೇ ಮೇ ದಂಡೇಷು ಯಾಂತಿ ಹಿ ॥

ತದ್ಭಯಾದ್ಧಿ ಜನಾಸ್ಸರ್ವೇ ದ್ವಾದಶೀಂ ಸಮುಪಾಸತೇ ।
ವ್ಯಾಜೇನಾಪಿ ಮುನಿಶ್ರೇಷ್ಠ ದ್ವಾದಶ್ಯಾಂ ಸಮುಪೋಷಿತಾಃ ॥ ೩೦ ॥

---

ರಾರೂ ಬರುತ್ತಿಲ್ಲ. ಇದಕ್ಕೇನು ಕಾರಣ? ಎಂಬುದಾಗಿ ಮಹಾತ್ಮನಾದ ನಾರದನು ಹೇಳಿದುದನ್ನು ಕೇಳಿ ಯಮರಾಜನು ಸ್ವಲ್ಪ ದೈನ್ಯಯುಕ್ತನಾಗಿ ಮಾತನಾಡಿದನು.

ಯಮನು ಹೇಳಿದನು:—ನಾರದನೇ? ಭೂಲೋಕದಲ್ಲಿ ಈಗಿರುವ ರಾಜನು ಪುರಾಣಪುರುಷೋತ್ತಮನಾದ ಹೃಷೀಕೇಶನ ಭಕ್ತನು. ಆ ರಾಜೇಂದ್ರನು ಢವಣೆಯ ಧ್ವನಿಸಹಿತವಾಗಿ "ಹರಿವಾಸರದಲ್ಲಿ ಯಾರೂ ಭೋಜನಮಾಡಕೂಡದು. ಆ ದಿನ ಯಾರಾದರೂ ಭೋಜನ ಮಾಡಿದರೆ ಅಂತಹ ಮನುಷ್ಯರು ನನ್ನ ಶಿಕ್ಷೆಗೆ ಗುರಿಯಾಗುವರು" ಎಂಬುದಾಗಿ ಕಟ್ಟಾಜ್ಞೆಯನ್ನು ಹೊರಡಿಸಿರುವನು. ಎಲ್ಲಾ ಜನರೂ ಅದರ ಭಯದಿಂದ ದ್ವಾದಶೀವ್ರತವನ್ನಾಚರಿಸುತ್ತಿರುವರು.

ಮುನಿಶ್ರೇಷ್ಠನೇ! ಆವುದಾದರೊಂದು ನೆಪದಿಂದಲಾದರೂ ಉಪವಾಸವನ್ನು ಮಾಡಿ ದ್ವಾದಶೀವ್ರತವನ್ನಾಚರಿಸಿದವರೂ ಸಹ ದಾಹಪ್ರಳಯರಹಿತ

ಪ್ರಯಾಂತಿ ವೈಷ್ಣವಂ ಲೋಕಂ ದಾಹಪ್ರಲಯವರ್ಜಿತಂ ।
ದ್ವಾದಶೀಸೇವನಾಲ್ಲೋಕಾಃ ಪ್ರಯಾಂತಿ ಹರಿಮಂದಿರಂ ॥ ೩೧ ॥

ತೇನ ರಾಜ್ಞಾ ದ್ವಿಜಶ್ರೇಷ್ಠ ಮಾರ್ಗಾ ಲುಪ್ತಾ ಮಮಾಧುನಾ ।
ಕೃತಾ ಹಿ ನರಕಾಃ ಶೂನ್ಯಾಃ ಲೋಕಾಶ್ಚಾಪಿ ದಿವೌಕಸಾಂ ॥ ೩೨ ॥

ವಿಶ್ರಾಂತಂ ಲೇಖಕೈರ್ಲೇಖ್ಯಂ ಲಿಖಿತಂ ಮಾರ್ಜಿತಂ ಜನೈಃ ।
ಏಕಾದಶ್ಯುಪವಾಸಸ್ಯ ಮಾಹಾತ್ಮ್ಯೇನ ದ್ವಿಜೋತ್ತಮ ॥ ೩೩ ॥

ಬ್ರಹ್ಮಹತ್ಯಾದಿಪಾಪಾನಿ ಅಭುಕ್ತ್ವೈವ ಜನಾ ದ್ವಿಜ ।
ಸಮುಪೋಷ್ಯ ದಿನಂ ವಿಷ್ಣೋಃ ಪ್ರಯಾಂತಿ ಹರಿಮಂದಿರಂ ॥ ೩೪ ॥

ಸೋಽಹಂ ಕಾಷ್ಠಮೃಗೇಣೈವ ತುಲ್ಯೋ ಜಾತೋ ಮಹಾಮುನೇ ।
ನೇತ್ರಹೀನಃ ಕರ್ಣಹೀನಃ ಸಂಧ್ಯಾಹೀನೋ ದ್ವಿಜೋ ಯಥಾ ॥ ೩೫ ॥

---

ವಾದ ವಿಷ್ಣುಲೋಕವನ್ನು ಪಡೆಯುವರು. ದ್ವಾದಶೀವ್ರತವನ್ನು ಎಲ್ಲರೂ ಸೇವಿಸುತ್ತಿರುವುದರಿಂದ ಎಲ್ಲರೂ ಸಹ ಅದರ ಪ್ರಭಾವದಿಂದ ಹರಿಮಂದಿರಕ್ಕೇ ಹೋಗುತ್ತಿರುವರು.

೩೨-೩೩. ದ್ವಿಜಶ್ರೇಷ್ಠನೇ! ಹೀಗಾಗಿರುವುದರಿಂದ ನನ್ನ ಲೋಕದ ಮಾರ್ಗಗಳೆಲ್ಲವೂ ಈಗ ಲುಪ್ತವಾಗಿವೆ. ಮತ್ತು ನರಕ, ದೇವಲೋಕಗಳೆಲ್ಲವೂ ಬರಿದಾಗಿವೆ. ದ್ವಿಜೋತ್ತಮನೇ! ಏಕಾದಶೀ ಉಪವಾಸದ ಮಾಹಾತ್ಮ್ಯ ಯಿಂದಲೇ ಚಿತ್ರಗುಪ್ತರ ಲೇಖಣಿಯು ವಿಶ್ರಾಂತಿಯನ್ನು ಪೊಂದಿತು. ಹಿಂದೆ ಬರೆದುದೂ ಸಹ ಅಳಿಸಲ್ಪಟ್ಟಿತು.

೩೪. ದ್ವಿಜನೇ! ಜನಗಳು ಏಕಾದಶಿಯ ಉಪವಾಸದಿಂದಲೇ ಬ್ರಹ್ಮಹತ್ಯೆ ಮುಂತಾದ ಮಹಾಪಾಪಗಳ ಫಲವನ್ನೂ ಸಹ ಅನುಭವಿಸದೆಯೇ ಹರಿಮಂದಿರಕ್ಕೆ ಹೋಗುತ್ತಿರುವರು.

೩೫-೪೧. ಮಹಾಮುನಿಯೇ! ಈ ಅವಸ್ಥೆಯನ್ನು ಹೊಂದಿರುವ ನಾನು ಕಣ್ಣು ಕಿವಿಗಳ ವ್ಯಾಪಾರವಿಲ್ಲದ, ಕಟ್ಟಿಗೆಯಿಂದ ರಚಿಸಿದ ಮೃಗಕ್ಕೆ

ಸ್ತ್ರೀಜಿತೋ ವಾ ಪುಮಾನ್ಯದ್ವತ್ ಷಂಢೋ ವಾ ಪ್ರಮದಾಪತಿಃ ।
ತ್ಯಕ್ತಕಾಮಸ್ತ್ವಹಂ ಬ್ರಹ್ಮನ್ ಲೋಕಪಾಲತ್ವಮೀದೃಶಂ ॥ ೩೬ ॥

ಯಾಸ್ಯಾಮಿ ಬ್ರಹ್ಮಲೋಕೇ ವೈ ದುಃಖಂ ಜ್ಞಾಪಯಿತುಂ ಸ್ವಕಂ ।
ನಿರ್ವ್ಯಾಪಾರೋ ನಿಯೋಗೀ ತು ನಿಯೋಗೇ ಯಸ್ತು ತಿಷ್ಠತಿ ॥ ೩೭ ॥

ಸ್ವಾಮಿವಿತ್ತಂ ಸಮಶ್ನಾತಿ ಸ ಯಾತಿ ನರಕಂ ಧ್ರುವಂ ।

ಸೌತಿರುವಾಚ

ಏವಮುಕ್ತ್ವಾ ಯಮೋ ವಿಪ್ರಾ ನಾರದೇನ ಸಮನ್ವಿತಃ ॥ ೩೮ ॥

ಯಯೌ ವಿರಂಚಿಸದನಂ ಚಿತ್ರಗುಪ್ತೇನ ಚಾನ್ವಿತಃ ।
ಸ ದದರ್ಶ ಸಮಾಸೀನಂ ಮೂರ್ತಾಮೂರ್ತಜನಾವೃತಂ ॥ ೩೯ ॥

ವೇದಾಶ್ರಯಂ ಜಗದ್ಬೀಜಂ ಸರ್ವೇಷಾಂ ಪ್ರಪಿತಾಮಹಂ ।
ಸ್ವಭವಂ ಭೂತನಿಲಯಮೋಂಕಾರಾಖ್ಯಮಕಲ್ಮಷಂ ॥ ೪೦ ॥

---

ಸಮಾನನಾಗಿಯೂ, ಸಂಧ್ಯಾವಂದನೆಯನ್ನು ಮಾಡದಿರುವ ದ್ವಿಜನಂತೆಯೂ ನಿರ್ವೀರ್ಯನಾಗಿರುವೆನು.

ಬ್ರಹ್ಮಜ್ಞಾನಿಯೇ! ನಾನು ಸ್ತ್ರೀಜಿತನಾದ ಪುರುಷನಂತೆಯೂ, ಯುವತೀ ಪತಿಯಾದ ಷಂಡನಂತೆಯೂ ಕಾಮಗಳೆಲ್ಲವನ್ನೂ ತ್ಯಜಿಸಿದವನಾಗಿ ಇಂತಹ ನಿರುದ್ಯೋಗದ ಲೋಕಪಾಲಕತ್ವವನ್ನು ಹೊಂದಿರುವೆನು. ಆದಕಾರಣ ನನ್ನ ಈ ದುಃಖವನ್ನು ಹೇಳಿಕೊಳ್ಳಲು ಬ್ರಹ್ಮಲೋಕಕ್ಕೆ ಹೋಗುವೆನು.

ಅಧಿಕಾರಿಯು ತಕ್ಕ ಕೆಲಸವನ್ನು ಮಾಡದೆ ಸುಮ್ಮನೆಕುಳಿತು ಸ್ವಾಮಿಯ ವಿತ್ತವನ್ನು (ಸಂಬಳ) ತೆಗೆದುಕೊಂಡರೆ ಅಂತಹವನು ಖಂಡಿತವಾಗಿಯೂ ನರಕಕ್ಕೆ ಹೋಗುನು.

ಸೌತಿಯು ಹೇಳಿದನು :—ಬ್ರಾಹ್ಮಣರೇ! ಈ ರೀತಿಯಾಗಿ ಹೇಳಿ ಯಮನು ನಾರದ ಮತ್ತು ಚಿತ್ರಗುಪ್ತರಿಂದ ಸಹಿತನಾಗಿ ಬ್ರಹ್ಮಲೋಕಕ್ಕೆ ಹೋದನು, ಅಲ್ಲಿ ಕುಳಿತಿದ್ದ ಮೂರ್ತಾಮೂರ್ತಜನರಿಂದ ಪರಿವೃತನು,

ಶುಚಿಂ ಶುಚಿಷದಂ ಹಂಸಂ ಬ್ರಹ್ಮಾಣಂ ದರ್ಭಲಾಂಛನಂ ।
ಉಪಾಸ್ಯಮಾನಂ ವಿವಿಧೈರ್ಲೋಕಪಾಲೈರ್ದಿಗೀಶ್ವರೈಃ ॥ ೪೧ ॥

ಇತಿಹಾಸಪುರಾಣೈಶ್ಚ ವೇದೈರ್ವಿಗ್ರಹಸಂಸ್ಥಿತೈಃ ।
ಮೂರ್ತಿಮದ್ಭಿಃ ಸಮುದ್ರೈಶ್ಚ ನದೀಭಿಶ್ಚ ಸರೋವರೈಃ ॥ ೪೨ ॥

ದೇಹಧೃಗ್ಭಿಸ್ತಥಾ ವೃಕ್ಷೈರಶ್ವತ್ಥಾದ್ಯೈರ್ವಿಶೇಷತಃ ।
ವಾಪೀಕೂಪತಡಾಗಾದ್ಯೈರ್ಮೂರ್ತಿಮದ್ಭಿಶ್ಚ ಪರ್ವತೈಃ ॥ ೪೩ ॥

ಅಹೋರಾತ್ರೈಸ್ತಥಾ ಪಕ್ಷೈರ್ಮಾಸೈಃ ಸಂವತ್ಸರೈರ್ದ್ವಿಜಾಃ ।
ಕಲಾಕಾಷ್ಠಾನಿಮೇಷೈಶ್ಚ ಋತುಭಿಶ್ಚಾಯನೈರ್ಯುಗೈಃ ॥ ೪೪ ॥

ಮನ್ವಂತರೈಸ್ತಥಾ ಕಲ್ಪೈರ್ನಿಮೇಷೈರುನ್ಮಿಷೈರಪಿ ।
ಋಕ್ಷೈರ್ಯೋಗೈಶ್ಚ ಕರಣೈಃ ಪೌರ್ಣಮಾಸೇಂದುಸಂಕ್ಷಯೈಃ ॥ ೪೫ ॥

---

ವೇದಕ್ಕಾಶ್ರಯನು, ಜಗತ್ತನ್ನು ಸೃಷ್ಟಿಸಿದವನು, ಎಲ್ಲರಿಗೂ ಪ್ರಪಿತಾಮಹನು, ಸ್ವಯಂಭುವು, ಪ್ರಾಣಿಗಳಿಗಾಶ್ರಯನು, ಓಂಕಾರಾಖ್ಯನು, ಕಾಲುಷ್ಯವಿಲ್ಲದವನು, ಪರಿಶುದ್ಧನು, ಪರಿಶುದ್ಧಿಯನ್ನು ಹೊಂದಿಸತಕ್ಕವನು, ಹಂಸ ನಾಮಕನು, ದರ್ಭೆಯೇ ಚಿಹ್ನೆಯಾಗಿ ಉಳ್ಳವನು, ಲೋಕಪಾಲಕರಾದ ನಾನಾವಿಧ ದಿಕ್ಪಾಲಕರಿಂದ ಉಪಾಸನೆಮಾಡಿಸಿಕೊಳ್ಳಲ್ಪಡುತ್ತಿರುವವನೂ ಆಗಿರುವ ಬ್ರಹ್ಮನನ್ನು ನೋಡಿದನು.

೪೨-೫೪. ಇತಿಹಾಸ ಪುರಾಣ ವೇದ ಸಮುದ್ರ ನದೀ ಸರೋವರ ಅಶ್ವತ್ಥಾದಿ ವೃಕ್ಷಗಳು ವಾಪೀ ಬಾವಿ ಕೆರೆ ಮುಂತಾದುವು, ಪರ್ವತಗಳು, ಹಗಲು ರಾತ್ರಿ ಪಕ್ಷ ಮಾಸ ವರ್ಷ ಕಲಾ ಕಾಷ್ಠ ನಿಮಿಷ ಋತು ಅಯನ ಯುಗ ಮನ್ವಂತರ ಕಲ್ಪ ನಿಮೇಷ ಉನ್ಮಿಷ ಎಂಬ ಕಾಲವಿಶೇಷಗಳು, ನಕ್ಷತ್ರ, ಯೋಗ, ಕರಣ, ಪೂರ್ಣಿಮಾ, ಅಮಾವಾಸ್ಯೆ, ಸುಖ ದುಃಖ–ಲಾಭ ಅಲಾಭ–ಜಯ ಅಪಜಯ–ಸತ್ಯ ಅನೃತಗಳೆಂಬ ದ್ವಂದ್ವಗಳು ಇವುಗಳ ಅಭಿಮಾನಿ ದೇವತೆಗಳು ಮೂರ್ತಿಮತ್ತಾದ ಶರೀರದಿಂದ ಬ್ರಹ್ಮದೇವನನ್ನು ಓಲೈಸುತ್ತಿದ್ದರು.

ಸುಖೈರ್ದುಃಖೈಸ್ತಥಾ ದ್ವಂದ್ವೈರ್ಲಾಭಾಲಾಭೈರ್ಜಯಾಜಯೈಃ ।
ಸತ್ಯಾನೃತೈಶ್ಚ ದೇವೇಶೋ ವೇಷ್ಟಿತೋ ಧರ್ಮಪಾಲಕಃ ॥ ೪೬ ॥

ಕರ್ಮವಿದ್ಭಿಶ್ಚ ಪುರುಷೈರನುರೂಪೈರುಪಾಸ್ಯತೇ ।
ಸತ್ವೇನ ರಜಸಾ ಚೈವ ತಮಸಾ ಚ ಪಿತಾಮಹಃ ॥ ೪೭ ॥

ಶಾಂತಿಮೂಢಾತಿಘೋರೈಶ್ಚ ವಿಕಾರೈಃ ಪ್ರಾಕೃತೈರ್ವಿಭುಃ ।
ವಾಯುನಾ ಶ್ಲೇಷ್ಮಪಿತ್ತಾಭ್ಯಾಂ ಮೂರ್ತೈರಾಕೃತಿನಾಮಭಿಃ ॥ ೪೮ ॥

ಆನಂದೇನ ಚ ವಿಶ್ವಾತ್ಮಾ ಪರಧರ್ಮಂ ಸಮಾಶ್ರಿತಃ ।
ಅನುಕ್ತೈರಪಿ ಭೂತೈಶ್ಚ ಸಂವೃತೋ ಲೋಕಕೃತ್ಸ್ವಯಂ ॥ ೪೯ ॥

ದುರುಕ್ತೈರಪಿ ಕಟುವಾಕ್ಯಾದ್ಯೈರ್ಮೂರ್ತಿಮದ್ಭಿರುಪಾಸ್ಯತೇ ।
ತೇಷಾಂ ಮಧ್ಯೇವಿಶತ್ಸೌರಿಃ ಸವ್ರೀಡೇವ ವಧೂರ್ಯಥಾ ॥ ೫೦ ॥

---

ಆಗ ದೇವೇಶನೂ, ಧರ್ಮಪಾಲಕನೂ ಆದ ಬ್ರಹ್ಮನನ್ನು ಯೋಗ್ಯರಾದ ಕರ್ಮವೇತ್ತೃಪುರುಷರೂ ಉಪಾಸನೆ ಮಾಡುತ್ತಿದ್ದರು.

ಸತ್ವ ರಜಸ್ತಮೋಗುಣಗಳು, ಶಾಂತ ಮೂಢ ಅತಿಘೋರ ಎಂಬ ಅದರ ವಿಕಾರಗಳು, ವಾಯು ಶ್ಲೇಷ್ಮ ಪಿತ್ತಗಳು, ಆನಂದ, ಭೂತಗಳು ಮತ್ತು ಕಟುವಾಕ್ಯಾಧಿದುರುಕ್ತಗಳು ಮುಂತಾದುವು ಎಂದರೆ ಅದರದರ ಅಭಿಮಾನಿಗಳು ಆಯಾಯಾ ನಾಮಧೇಯಗಳಿಂದ ಮೂರ್ತಿಮತ್ತಾಗಿ ಅಲ್ಲಿ ಸನ್ನಿಹಿತರಾಗಿ ಲೋಕಕರ್ತನು, ನಿಯಾಮಕನೂ ಆದ ಸ್ವಯಂಭು ಪ್ರಭುವನ್ನು ಓಲೈಸುತ್ತಿದ್ದರು. ಹೀಗೆ ಪಿತಾಮಹನು ತನ್ನ ಅಧಿಕಾರ ಧರ್ಮವನ್ನವಲಂಬಿಸಿ ವಿರಾಜಿಸುತ್ತಿದ್ದನು. ಆಗ ನಾಚಿಕೆಯಿಂದ ಕೂಡಿದ ಯಮನು ನೂತನವಧುವಿನಂತೆ ತಲೆಯನ್ನು ಬಗ್ಗಿಸಿಕೊಂಡು ನೆಲವನ್ನೇ ನೋಡುತ್ತಾ ಪರಿವಾರಸಹಿತನಾಗಿ ಆ ಸಭೆಗೆ ಪ್ರವೇಶಿಸಿದನು.

ವಿಲೋಕಯನ್ನಧೋಭಾಗಂ ನಮ್ರವಕ್ತ್ರೋ ವ್ಯದರ್ಶಯತ್ ।
ತೇ ಪ್ರವಿಷ್ಟಂ ಯಮಂ ದೃಷ್ಟ್ವಾ ಸಕಾಯಸ್ಥಂ ಸನಾರದಂ ॥ ೫೧ ॥

ವಿಸ್ಮಿತಾಕ್ಷಾ ಮಿಥಃ ಪ್ರೋಚುಃ ಕಿಮಯಂ ಭಾಸ್ಕರಿಸ್ತ್ವಿಹ ।
ಸಂಪ್ರಾಪ್ತೋ ಹಿ ಲೋಕಕರಂ ದ್ರಷ್ಟುಂ ದೇವಂ ಪಿತಾಮಹಂ ॥ ೫೨ ॥

ನಿರ್ವ್ಯಾಪಾರಃ ಕ್ಷಣಂ ನಾಸ್ತಿ ಯೋಽಯಂ ವ್ಯಗ್ರೋ ರವೇಃ ಸುತಃ ।
ಸೋಽಯಮಭ್ಯಾಗತಃ ಕಸ್ಮಾತ್ಕಚ್ಚಿತ್ ಕ್ಷೇಮಂ ದಿವೌಕಸಾಂ ॥ ೫೩ ॥

ಆಶ್ಚರ್ಯಾತಿಶಯಂ ಮನ್ಯೇ ಯನ್ಮಾರ್ಜಿತಪಟಸ್ತ್ವಯಂ ।
ಲೇಖಕಃ ಸಮನುಪ್ರಾಪ್ತೋ ದೈನ್ಯೇನ ಮಹತಾಽನ್ವಿತಃ ॥ ೫೪ ॥

ನ ಕೇನಚಿತ್ಪಟೋಽಹ್ಯಸ್ಯ ಮಾರ್ಜಿತೋಽಭೂಚ್ಚ ಧರ್ಮಿಣಾ ।
ಯನ್ನ ದೃಷ್ಟಂ ಶ್ರುತಂ ವಾಽಪಿ ತದಿಹೈವ ಪ್ರದೃಶ್ಯತೇ ॥ ೫೫ ॥

---

ಹಾಗೆ ಬಂದ, ಚಿತ್ರಗುಪ್ತನಾರದರಿಂದ ಸಹಿತನಾದ, ಯಮನನ್ನು ನೋಡಿ ಅಲ್ಲಿ ನೆರೆದಿದ್ದವರೆಲ್ಲರೂ ವಿಸ್ಮಿತನಯನರಾಗಿ ಪರಸ್ಪರ ಈ ರೀತಿಯಾಗಿ ಮಾತನಾಡಿಕೊಂಡರು.

" ಇದೇನು ಆಶ್ಚರ್ಯ ! ಯಮನು ಲೋಕಕರ್ತೃವಾದ ಪಿತಾಮಹದೇವನನ್ನು ನೋಡಲು ಬಂದಿರುವನು. ಅವನು ಒಂದು ಕ್ಷಣವೂ ಸಹ ಕೆಲಸವಿಲ್ಲದೇ ಇರುವವನಲ್ಲ. ಅಂತಹ ಕಾರ್ಯವ್ಯಗ್ರನಾದ ಸೂರ್ಯಪುತ್ರನು ಬಿಡುವಾಗಿ ಇಲ್ಲಿಗೆ ಬರಲು ಕಾರಣವೇನಿರಬಹುದು ? ದೇವತೆಗಳು ಕ್ಷೇಮದಿಂದ್ದಾರೆಯೇ ? ಅಷ್ಟೇ ಅಲ್ಲ; ಲೇಖಕನಾದ ಚಿತ್ರಗುಪ್ತನೂ ಸಹ ತನ್ನ ಪಟವನ್ನು ಅಳಿಸಿಕೊಂಡವನಾಗಿ ಮಹಾದೈನ್ಯದಿಂದ ಇಲ್ಲಿಗೆ ಬಂದಿರುವನು ಇದೆಲ್ಲವೂ ಅತ್ಯಂತ ಆಶ್ಚರ್ಯಕರವಾದುದು. ಇದುವರೆಗೂ ಯಾವ ಧರ್ಮಿಷ್ಠನೂ ಇವನ ಪಟವನ್ನು ಅಳಿಸಿರಲಿಲ್ಲ. ಹಿಂದೆ ಯಾವಾಗಲೂ ಕಂಡುಕೇಳದಿರುವುದು ಈಗ ಇಲ್ಲಿಯೇ ಕಂಡುಬರುತ್ತಿದೆ.''

೫೫-೫೮. ಪರಿವಾರಜನರು ಈ ರೀತಿಯಾಗಿ ಮಾತನಾಡಿಕೊಳ್ಳುತ್ತಿರುವಾಗಲೇ ಪ್ರಾಣಿಶಾಸಕನಾದ ಸೂರ್ಯಪುತ್ರನು ದೇವೇಶನೇ! ಕಾಪಾಡು ಕಾಪಾಡು!

ಏವಮುಚ್ಚೈರತಾಂ ತೇಷಾಂ ಭೂತಾನಾಂ ಕೃತಶಾಸನಃ ।
ನಿಪಪಾತಾಗ್ರತೋ ವಿಪ್ರಾ ಬ್ರಹ್ಮಣೋ ರವಿನಂದನಃ ॥ ೫೬ ॥

ಮೂಲಚ್ಛಿನ್ನೋ ಯಥಾ ಶಾಖೀ ತ್ರಾಹಿತ್ರಾಹೀತಿ ಸಂರುದನ್ ।
ಪರಿಭೂತೋಽಸ್ಮಿ ದೇವೇಶ ಯನ್ಮಾರ್ಜಿತಪಟಃ ಕೃತಃ ॥ ೫೭ ॥

ತ್ವಯಾನಾಥೇನ ವಿಧುರಂ ಪಶ್ಯಾಮಿ ಕಮಲಾಸನ ।
ಏವಂ ಬ್ರುವನ್ ಸ ನಿಶ್ಚೇಷ್ಟೋ ಬಭೂವ ದ್ವಿಜಸತ್ತಮಾಃ ॥ ೫೮ ॥

ತತೋ ಹಲಹಲಾಶಬ್ದಃ ಸಭಾಯಾಂ ಸಮವರ್ತತ ।
ಯೋಽಯಂ ರೋದಯತೇ ಲೋಕಾನ್ ಸರ್ವಾನ್ ಸ್ಥಾವರಜಂಗಮಾನ್ ॥

ಸೋಽಯಂ ರೋದತಿ ದುಃಖಾರ್ತಃ ಕಸ್ಮಾದ್ವೈವಸ್ವತೋ ಯಮಃ ।
ಅಥವಾ ಸತ್ಯಗಾಥೇಯಂ ಲೌಕಿಕೀ ಪ್ರತಿಭಾತಿ ನಃ ॥ ೬೦ ॥

ಜನಸಂತಾಪಕರ್ತಾ ಯಃ ಸೋಽಚಿರೇಣೋಪತಪ್ಯತೇ ।
ನ ಹಿ ದುಷ್ಕೃತಕರ್ಮಾ ಹಿ ನರಃ ಪ್ರಾಪ್ನೋತಿ ಶೋಭನಂ ॥ ೬೧ ॥

---

ಎಂಬುದಾಗಿ ಅಳುತ್ತಾ, ಬ್ರಹ್ಮನೆದುರಿಗೆ ಬುಡವನ್ನು ಕತ್ತರಿಸಿದ ಮಹಾವೃಕ್ಷದಂತೆ ಬಿದ್ದನು. ಚಿತ್ರಗುಪ್ತನೂ ಸಹ ನನ್ನ ಪಟವು ಅಳಿಸಲ್ಪಟ್ಟು, ಪರಾಭವವನ್ನು ಹೊಂದಿರುವೆನು. ಕಮಲಾಸನನೇ ! ನಿನ್ನ ಹೊರತು ನಾಥರಿಲ್ಲ, ರಕ್ಷಿಸು! ಎಂದು ಹೇಳುತ್ತಾ ನಿಶ್ಚೇಷ್ಟನಾದನು.

೫೯-೬೧. ಅನಂತರ ಸಭೆಯಲ್ಲಿ ಹಲಹಲ ಎಂಬ ಶಬ್ದವುಂಟಾಯಿತು. "ಚರಾಚರಾತ್ಮಕಲೋಕಗಳೆಲ್ಲವನ್ನೂ ಗೋಳಿಡಿಸುವ ಸೂರ್ಯಪುತ್ರನಾದ ಈ ಯಮನೂ ಸಹ ದುಃಖಪೀಡಿತನಾಗಿ ಅಳುತ್ತಿರುವನಲ್ಲಾ! ಕಾರಣವೇನು ? ಓಹೋ ! ಜನಗಳನ್ನು ದುಃಖಪಡಿಸುವವನು ಶೀಘ್ರವಾಗಿಯೇ ದುಃಖಕ್ಕೀಡಾಗುವನು. ಪಾಪಮಾಡಿದ ಮನುಷ್ಯನು ಶ್ರೇಯಸ್ಸನ್ನು ಹೊಂದಲಾರನು" ಎಂಬ ಲೋಕಪ್ರಸಿದ್ಧವಾದ ಗಾದೆಯು ಸತ್ಯವೆಂದು ನಮಗೆ ತೋರುತ್ತದೆ ಮುಂತಾಗಿ ಮಾತನಾಡಲಾರಂಭಿಸಿದರು.

ತತೋ ನಿವಾರಯಾಮಾಸ ವಾಯುಸ್ತೇಷಾಂ ವಚಸ್ತದಾ ।
ಲೋಕಾನಾಂ ಸಮುಚಿತ್ತಾನಾಂ ಮತಂ ಜ್ಞಾತ್ವಾ ಹಿ ವೇಧಸಃ ॥ ೬೨ ॥

ನಿವಾರ್ಯ ಶಂಕಾಂ ಮಾರ್ತಂಡಿಂ ಶನೈರುತ್ಥಾಪಯ್ಯ ವಿಭುಃ ।
ಭುಜಾಭ್ಯಾಂ ಸಾಧುಪೀನಾಭ್ಯಾಂ ಲೋಕಮೂರ್ತಿರುದಾರಧೀಃ ॥ ೬೩ ॥

ವಿಹ್ವಲಂ ತಂ ಪಲಾಯಂತಮಾಸನೇ ಸಂನ್ಯವೇಶಯತ್ ।
ಸ ಕಾಯಸ್ಥಮುವಾಚೇದಂ ವ್ಯೋಮಮೂರ್ತಿಂ ರವೇಃ ಸುತಂ ॥ ೬೪ ॥

ಕೇನ ತ್ವಮಭಿಭೂತೋಽಸಿ ಕೇನ ಸ್ಥಾನಾದ್ವಿವಾಸಿತಃ ।
ಕೇನಾಪಮಾರ್ಜಿತೋ ದೇವಪಟೋ ಲೋಕಪಟಸ್ತವ ॥ ೬೫ ॥

ಬ್ರೂಹಿ ಸರ್ವಮಶೇಷೇಣ ಕುಶಕೇತುರ್ವದತ್ವಯಂ ।
ಯಃ ಪ್ರಭುಸ್ತಾತ ಸರ್ವೇಷಾಂ ಸ ತೇ ಕರ್ತಾ ಸಮುನ್ನತಿಂ ।
ಅಪನೇಷ್ಯತಿ ಮಾರ್ತಂಡೇ ದುಃಖಂ ಹೃದಯಸಂಸ್ಥಿತಂ ॥ ೬೬ ॥

---

೬೨. ತರುವಾಯ ವಾಯುದೇವನು ಬ್ರಹ್ಮನ ಅಭಿಪ್ರಾಯವನ್ನು ತಿಳಿದು ಸಮಚಿತ್ತರಾದ ಆ ಜನರ ಮಾತನ್ನು ತಡೆದನು.

೬೩-೬೪. ಅನಂತರ ಉದಾರಚಿತ್ತನು, ಲೋಕಮೂರ್ತಿಯೂ ಆದ ಸ್ವಾಮಿಯು ಪುಷ್ಟವಾದ ತನ್ನ ಭುಜಗಳಿಂದ ಮೆಲ್ಲಗೆ ಯಮನನ್ನೆಬ್ಬಿಸಿ ಅವನ ಶಂಕೆಯನ್ನು ಪರಿಹರಿಸಿ ಭೀತನಾಗಿ ಓಡುತ್ತಿದ್ದ ಆ ಯಮನನ್ನು ಆಸನದಲ್ಲಿ ಕೂಡಿಸಿ, ಆ ವಾಯುದೇವನು ಸೂರ್ಯಪುತ್ರನಾದ ಯಮ ಮತ್ತು ಚಿತ್ರಗುಪ್ತರನ್ನು ಕುರಿತು ಈ ರೀತಿ ಹೇಳಿದನು.

೬೫-೬೬. ಯಮನೇ! ನೀನು ಯಾರಿಂದ ಪರಾಭವವನ್ನು ಹೊಂದಿರುವೆ? ನಿನ್ನನ್ನು ಸ್ಥಾನದಿಂದ ಓಡಿಸಿದವನಾರು? ಲೋಕಚಿತ್ರಪಟವಾದ ನಿನ್ನ ದೇವಪಟವು ಯಾರಿಂದ ಅಳಿಸಲ್ಪಟ್ಟಿತು? ಅವೆಲ್ಲವನ್ನೂ ಈ ಬ್ರಹ್ಮನ ಸನ್ನಿಧಿಯಲ್ಲಿ ಅರಿಕೆಮಾಡು. ವತ್ಸ! ಸರ್ವಸ್ವಾಮಿಯಾದ ಈ ಬ್ರಹ್ಮನು ನಿನಗೆ ಅಭಿವೃದ್ಧಿಯನ್ನುಂಟುಮಾಡುವನು. ನಿನ್ನ ಮನಸ್ಸಿನಲ್ಲಿ ಮೂಡಿರುವ ದುಃಖವನ್ನು ಹೋಗಲಾಡಿಸುವನು.

ಸ ಏವಮುಕ್ತಸ್ತು ಪ್ರಭಂಜನೇನ
ದಿನೇಶಸೂನುಸ್ತ್ವಮುಖೋ ಬಭಾಷೇ ।
ವಿಲೋಕ್ಯ ವಕ್ತ್ರಂ ಕುಶಕೇತುಸೂನೋಃ
ಸಗದ್ಗದಂ ಮಂದಮುದೀರಯದ್ವಚಃ     ॥ ೬೭ ॥

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಯಮಸ್ಯ ಬ್ರಹ್ಮಲೋಕಗಮನಂ ನಾಮ
ತೃತೀಯೋಽಧ್ಯಾಯಃ

---

೬೭. ಹೀಗೆ ಹೇಳಿದ ವಾಯುದೇವನ ಮಾತನ್ನು ಕೇಳಿ ಸೂರ್ಯ ಪುತ್ರನು ಬ್ರಹ್ಮದೇವನ ಮುಖವನ್ನು ನೋಡಿ ಗದ್ಗದಸ್ವರದಿಂದ ಮೆಲ್ಲಗೆ ಮಾತನಾಡಿದನು.

ಇಂತು ಶ್ರೀ ನಾರದೀಯಪುರಾಣದ ಉತ್ತರಭಾಗದಲ್ಲಿ ಯಮನು ಬ್ರಹ್ಮಲೋಕಕ್ಕೆ ಹೋದ ವೃತ್ತಾಂತವರ್ಣನೆ ಎಂಬ ಮೂರನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಭಗವಂತನ ಅನುಗ್ರಹಕ್ಕೆ ಭಕ್ತಿಯು ಮುಖ್ಯಸಾಧನವೆಂದು ಹೇಳಿ ಅದಕ್ಕೆ ಉದಾಹರಣೆಯಾಗಿ ರುಕ್ಮಾಂಗದಮಹಾರಾಜನ ಚರಿತ್ರೆಯನ್ನು ಹೇಳಲಾರಂಭಿಸಿದೆ. ರುಕ್ಮಾಂಗದಮಹಾರಾಜನು ಸರ್ವರೂ ಏಕಾದಶೀ ವ್ರತವನ್ನಾಚರಿಸಬೇಕೆಂದು ಕಟ್ಟಾಜ್ಞೆ ಮಾಡಿ ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿರಲು ಎಲ್ಲರೂ ಧರ್ಮಿಷ್ಠರಾಗಿ ನರಕಾದಿ ಪಾಪಲೋಕಗಳಿಗೆ ಹೋಗುವಂತಹವರೇ ಇಲ್ಲದಂತಾಗಿ, ಯಮರಾಜನಿಗೆ ಕೆಲಸವೇ ಇಲ್ಲದಂತಾಯಿತು. ಆಗ ಯಮನು ತನಗೆ ಬಂದ ದುಃಖವನ್ನು ಚತುರ್ಮುಖನಲ್ಲಿ ಹೇಳಿಕೊಂಡು ಪರಿಹರಿಸಿಕೊಳ್ಳಬೇಕೆಂದು ಅವನ ಬಳಿಗೆ ಹೋದನು.

---

# ಚತುರ್ಥೋಽಧ್ಯಾಯಃ

## ಯಮ ಉವಾಚ

ಶೃಣು ಮೇ ವಚನಂ ನಾಥ ಪಿತಾಮಹ ಪಿತಾಮಹ ।
ಮರಣಾದಧಿಕಂ ದೇವ ಯತ್ಪ್ರತಾಪಸ್ಯ ಖಂಡನಂ ॥ ೧ ॥

ನಿಸ್ಪೃಹೋ ನಾಚರೇದ್ಯಸ್ತು ನಿಯೋಗಂ ಪದ್ಮಸಂಭವ !
ಅಂಧಕೂಪೇ ನಿಪತತಿ ಸ ಚಾಶು ನರಕೇ ಧ್ರುವಂ ॥ ೨ ॥

ನಿಯೋಗೀ ನ ನಿಯೋಗಂ ಯಃ ಕರೋತಿ ಕಮಲಾಸನ ।
ಪ್ರಭೋರ್ವಿತ್ತಂ ಸಮಶ್ನಾತಿ ಸ ಭವೇತ್ಕಾಷ್ಠಕೀಟಕಃ ॥ ೩ ॥

ಯೋಽಶ್ನಾತಿ ಲೋಭಾದ್ವಿತ್ತಾನಿ ಪ್ರಜಾಭ್ಯೋ ವಾ ಮಹೀಪತೇಃ ।
ನಿಯೋಗೀ ನರಕಂ ಯಾತಿ ಯಾವತ್ಕಲ್ಪಶತತ್ರಯಂ ॥ ೪ ॥

---

## ನಾಲ್ಕನೆಯ ಅಧ್ಯಾಯವು

೧. ಯಮನು ಹೇಳಿದನು :—ಸ್ವಾಮೀ ! ಪಿತಾಮಹದೇವನೇ ! ನನ್ನ ಮಾತನ್ನು ಲಾಲಿಸು. ಆಜ್ಞಾಭಂಗವು ಮರಣಕ್ಕಿಂತಲೂ ಹೆಚ್ಚಾದುದು.

೨. ನಿಸ್ಪೃಹನಾಗಿ ಸ್ವಾಮಿಯ ಅಪ್ಪಣೆಯನ್ನು ನಡೆಯಿಸದಿರುವವನು ಕತ್ತಲಿನ ಬಾವಿಯಲ್ಲಿ ಬೀಳುವನು. ಅಂತಹವನು ಕೂಡಲೇ ನರಕಕ್ಕೆ ಹೋಗುವನು.

೩. ಕಮಲಾಸನನೇ ! ಅಧಿಕಾರದಲ್ಲಿ ನಿಯಮಿತನಾದವನು ಪ್ರಭುವಿನ ಅಪ್ಪಣೆಯನ್ನು ನಡೆಯಿಸದೆ ಸ್ವಾಮಿದ್ರವ್ಯವನ್ನು ಮಾತ್ರ ತೆಗೆದುಕೊಂಡು ಉಪಭೋಗಿಸಿದರೆ ಅವನು ಕಟ್ಟಿಗೆಯಲ್ಲಿನ ಹುಳುವಾಗಿ ಹುಟ್ಟುವನು.

೪. ಆಸೆಯಿಂದ ಪ್ರಜೆಗಳ ಅಥವಾ ದೊರೆಯ ಹಣವನ್ನು ತೆಗೆದುಕೊಳ್ಳುವ ಅಧಿಕಾರಿಯು ಮುನ್ನೂರು ಕಲ್ಪಗಳಕಾಲ ನರಕಭಾಗಿಯಾಗುವನು.

ಆತ್ಮಕಾರ್ಯಪರೋ ಯಸ್ತು ಸ್ವಾಮಿನಂ ಚ ವಿಲುಂಪತಿ ।
ಭವೇದ್ವೇಶ್ಮನಿ ಮಂದಾತ್ಮಾ ಆಖುಃ ಕಲ್ಪಶತತ್ರಯಂ ॥ ೫ ॥

ನಿಯೋಗೀ ಯಸ್ತು ವೈ ಭೂತ್ವಾ ಆತ್ಮವೇಶ್ಮನಿ ಭೋಕ್ಷ್ಯತಿ ।
ಭೃತ್ಯಾನ್ಸ್ವೈ ಕರ್ಮಕರಣೇ ರಾಜ್ಞೋ ಮಾರ್ಜಾರತಾಂ ವ್ರಜೇತ್ ॥ ೬ ॥

ಸೋಽಹಂ ದೇವ ತದಾದೇಶಾತ್ ಪ್ರಜಾ ಧರ್ಮೇಣ ಶಾಸಯನ್ ।
ಪುಣ್ಯೇನ ಪುಣ್ಯಕರ್ತಾರಂ ಪಾಪಂ ಪಾಪೇನ ಕರ್ಮಣಾ ॥ ೭ ॥

ಸಮ್ಯಗ್ವಿಚಾರ್ಯ ಮುನಿಭಿರ್ಧರ್ಮಶಾಸ್ತ್ರಾದಿಭಿರ್ವಿಭೋ ।
ಕಲ್ಪಾದೌ ವರ್ತಮಾನಸ್ಯ ಯಾವದ್ಯಾವದ್ದಿನಂ ತವ ॥ ೮ ॥

ಸೋಽಹಂ ತ್ವದೀಯೇನ ವಿಭೋ ನಿಯೋಗೇ ನೈವ ಶಕ್ನುಯಾಂ ।
ಕರ್ತುಂ ರುಕ್ಮಾಂಗದೇನಾದ್ಯ ಪರಾಭೂತೋ ಹಿ ಭೂಭುಜಾ ॥ ೯ ॥

---

೫. ಸ್ವಕಾರ್ಯಧುರಂಧರನಾಗಿ ಸ್ವಾಮಿಗೆ ವಂಚನೆಮಾಡುವ, ಮೂಢ ಬುದ್ಧಿಯುಳ್ಳ ಮನುಷ್ಯನು ಮುನ್ನೂರು ಕಲ್ಪಗಳವರೆಗೆ ಇಲಿಯಾಗಿ ಹುಟ್ಟಿ ಮನೆಯಲ್ಲಿರುವನು.

೬. ಅಧಿಕಾರಿಯು ರಾಜಭೃತ್ಯನನ್ನು ತನ್ನ ಮನೆಯಲ್ಲಿ ಸ್ವಂತಕೆಲಸಗಳಿಗೆ ನಿಯಮಿಸಿ ಅದರಿಂದ ಸ್ವಾರ್ಥಸಾಧನೆ ಮಾಡಿಕೊಂಡರೆ ಅವನಿಗೆ ಬೆಕ್ಕಿನ ಜನ್ಮವು ಬರುವುದು.

೭-೯. ದೇವ! ನಿನ್ನಿಂದ ನಿಯುಕ್ತನಾದ ನಾನು ನಿನ್ನ ಅಪ್ಪಣೆಯ ಮೇರೆಗೆ ಮುನಿಗಳು ಮತ್ತು ಧರ್ಮಶಾಸ್ತ್ರಾದಿಗಳ ಸಹಾಯದಿಂದ ಚೆನ್ನಾಗಿ ವಿಚಾರಮಾಡಿ ಪುಣ್ಯಮಾಡಿದವರಿಗೆ ಪುಣ್ಯಲೋಕವನ್ನೂ, ಪಾಪಮಾಡಿದವರಿಗೆ ಪಾಪಲೋಕವನ್ನೂ ಕೊಟ್ಟು ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಾ ಕಲ್ಪಾದಿಯಿಂದ ಈ ದಿನದವರೆಗೂ ಸ್ವಾಮಿಯಾದ ನಿನ್ನ ಅಪ್ಪಣೆಯಿಂದಲೇ ಕರ್ತವ್ಯವನ್ನು ನಿರ್ವಹಿಸಲು ಶಕ್ತನಾದೆನು. ಅಂತಹ ನಾನು ಈಗ ರುಕ್ಮಾಂಗದಮಹಾರಾಜನಿಂದ ಪರಾಭವವನ್ನು ಹೊಂದಿರುವೆನು.

ಭಯಾದ್ಯಸ್ಯ ಜಗನ್ನಾಥ ಪೃಥಿವೀ ಸಾಗರಾಂಬರಾ |
ನ ಭುಂಕ್ತೇ ವಾಸರೇ ವಿಷ್ಣೋಃ ಸರ್ವಪಾಪಪ್ರಣಾಶನೇ || ೧೦ ||

ವಿಹಾಯ ಸರ್ವಧರ್ಮಾಂಸ್ತು ವಿಹಾಯ ಪಿತೃಪೂಜನಂ |
ವಿಹಾಯ ದೇವಪೂಜಾಂ ಚ ತೀರ್ಥಸ್ನಾನಾದಿಸತ್ಕ್ರಿಯಾಂ || ೧೧ ||

ಯೋಗಸಾಂಖ್ಯಾವುಭೌ ತ್ಯಕ್ತ್ವಾ ಜ್ಞಾನಂ ಜ್ಞೇಯಂ ಚ ಮಾನದ |
ತ್ಯಕ್ತ್ವಾ ಸ್ವಾಧ್ಯಾಯಹೋಮಾಂಶ್ಚ ಕೃತ್ವಾ ಪಾಪಾನಿ ಭೂರಿಶಃ || ೧೨ ||

ಪ್ರಯಾಂತಿ ವೈಷ್ಣವಂ ಲೋಕಮುಪೋಷ್ಯ ಹರಿವಾಸರಂ |
ಮನುಜಾಃ ಪಿತೃಭಿಃ ಸಾರ್ಧಂ ತಥೈವ ಚ ಪಿತಾಮಹೈಃ || ೧೩ ||

ತೇಷಾಮಪೀಹ ಪಿತರಃ ಪಿತೄಣಾಂ ಪಿತರಸ್ತಥಾ |
ತಥಾ ಮಾತಾಮಹಾ ಯಾಂತಿ ಮಾತುರ್ಯೇ ಜನಕಾದಯಃ || ೧೪ ||

---

೧೦-೧೨. ಜಗನ್ನಾಥನೇ! ಆ ರುಕ್ಮಾಂಗದಮಹಾರಾಜನ ಭಯದಿಂದ ಸಮುದ್ರಪರ್ಯಂತವಾದ ಪೃಥವಿಯಲ್ಲಿರುವ ಜನರೆಲ್ಲರೂ ಸಕಲಧರ್ಮಗಳನ್ನೂ ಬಿಟ್ಟು ಪಿತೃಪೂಜೆ, ದೇವಪೂಜೆ, ತೀರ್ಥಸ್ನಾನಾದಿ ಸತ್ಕರ್ಮ, ಕರ್ಮಯೋಗ, ಜ್ಞಾನಯೋಗ, ಜ್ಞಾನ, ಜ್ಞೇಯ ವೇದಾಧ್ಯಯನ ಮತ್ತು ಹೋಮ ಇವುಗಳನ್ನೆಲ್ಲಾ ಬಿಟ್ಟು ಬಹು ಪಾಪಗಳನ್ನು ಮಾಡುತ್ತಿದ್ದರೂ ಸಕಲಪಾಪಗಳನ್ನೂ ನಾಶಪಡಿಸುವಂತಹ ಹರಿದಿನದಲ್ಲಿ ಭೋಜನಮಾಡದೆ ಉಪವಾಸಮಾಡುತ್ತಿದ್ದಾರೆ.

೧೩. ಹೀಗೆ ಏಕಾದಶೀ ಉಪವಾಸವನ್ನು ಮಾಡಿ ಮನುಷ್ಯರು ಪಿತೃಪಿತಾಮಹರೊಡನೆ ವಿಷ್ಣುಲೋಕಕ್ಕೆ ಹೋಗುತ್ತಿರುವರು.

೧೪-೧೫. ಅಷ್ಟೇ ಅಲ್ಲ, ಆ ಪಿತಾಮಹರ ಪಿತೃಗಳು, ಅವರ ಪಿತೃಗಳು, ಹೀಗೆ ಪಿತೃಪರಂಪರೆಯೂ ಮತ್ತು ಮಾತಾಮಹ ಎಂದರೆ ತಾಯಿಯ

ತೇಷಾಮಪಿ ಜನಿತಾರೋ ಜನಿತ್ರೀಣಾಂ ಹಿ ಪೂರ್ವಜಾಃ ।
ಏತದ್ದುಃಖಂ ಪುನರ್ದೇವ ಮಮ ಮರ್ಮವಿಭೇದನಂ ॥ ೧೫ ॥

ಪ್ರಿಯಾಯಾಃ ಪಿತರೋ ಯಾಂತಿ ಮಾರ್ಜಯಿತ್ವಾ ಲಿಪಿಂ ಮಮ ।
ಪಿತ್ರೀಣಾಂ ಬೀಜತೋ ಯಸ್ಮಾದ್ಧಾತ್ರ್ಯಾ ಕುಕ್ಷೌ ಧೃತೋ ಯತಃ ॥೧೬॥

ಯದೇಕಃ ಕುರುತೇ ಕರ್ಮ ತದೇಕೇನೈವ ಭುಜ್ಯತೇ ।
ತತೋಽನ್ಯಸ್ಯ ಕೃತಂ ಬ್ರಹನ್ಬೀಜಂ ಧಾತ್ರೀಸಮುದ್ಭವಂ ॥ ೧೭ ॥

ತಾರಯೇತ್ಸ ಉಭೌ ಪಕ್ಷೌ ಯತ್ಪಿಂಡೋ ಯಸ್ಯ ವಿಗ್ರಹಃ ।
ನ ಭಾರ್ಯಾಯಾ ಭವೇದ್ಬೀಜಂ ನ ಭಾರ್ಯಾ ಕುಕ್ಷಿಧಾರಿಣೀ ॥ ೧೮ ॥

ಕಥಂ ತಸ್ಯಾ ಜಗನ್ನಾಥ ಪಕ್ಷೋ ಯಾತಿ ಪರಂ ಪದಂ ।
ಜಾಮಾತುಃ ಪುಣ್ಯಮಾಹಾತ್ಮ್ಯತ್ತ್ವೇನ ಮೇ ಶಿರಸೋ ರುಜಾ ॥ ೧೯ ॥

---

ತಂದೆ, ಅವರ ಜನಕ, ಅವರ ಹಿಂದಿನವರೂ ಸಹ ವಿಷ್ಣುಲೋಕಕ್ಕೆ ಹೋಗುತ್ತಿರುವರು. ಇದರಿಂದ ನನ್ನ ಲೋಕವೆಲ್ಲವೂ ಬರಿದಾಗಿರುವುದು. ನನಗೆ ಮರ್ಮಭೇದಕವಾದ ದುಃಖಕ್ಕೆ ಇದೇ ಕಾರಣವು.

೧೬-೧೯. ಅಷ್ಟುಮಾತ್ರವೇ ಅಲ್ಲ ; ಹರಿದಿನೋಪವಾಸ ಮಾಡುವವನ ಪತ್ನಿಯ ಮಾತಾಪಿತೃಪರಂಪರೆಯೂ ಸಹ ಅಳಿಯನ ಆ ವ್ರತಪುಣ್ಯದಿಂದ ನನ್ನನ್ನು ಲೆಕ್ಕಿಸದೆ ಹರಿಮಂದಿರಕ್ಕೇ ಸಾಕ್ಷಾತ್ತಾಗಿ ಹೋಗುತ್ತಿರುವರು. ಇದು ಯಾವ ನ್ಯಾಯ ? ಕರ್ಮಮಾಡಿದವನು ಮತ್ತು ಅವನ ಪಿತೃವರ್ಗವು ಅದರ ಫಲವನ್ನು ಅನುಭವಿಸುವುದು ನ್ಯಾಯವು. ಪ್ರಕೃತ ಕರ್ತೃವಿನ ಭಾರ್ಯೆಯು ಆಕೆಯ ಪಿತೃಸಂತಾನಕ್ಕೆ ಬೀಜವೂ ಅಲ್ಲ; ಕ್ಷೇತ್ರವೂ ಅಲ್ಲ. ಹಾಗಿದ್ದರೂ ಅಳಿಯನ ವ್ರತಪುಣ್ಯದಿಂದ ಅತ್ತೆಮಾವಂದಿರ ಕುಲವೂ ಸಹ ನನ್ನ ಲಿಪಿಯನ್ನಳಿಸಿ ಹರಿಮಂದಿರಕ್ಕೆ ತೆರಳುತ್ತಿರುವುದು ನನಗೆ ತಲೆನೋವಾಗಿದೆ.

ನ ಮೇ ಪ್ರಯೋಜನಂ ದೇವ ನಿಯೋಗೇನೇದೃಶೇನ ವೈ ।
ಏಕಾದಶ್ಯುಪವಾಸೀ ಯಃ ಸ ಮಾಂ ತ್ಯಕ್ತ್ವಾ ವ್ರಜೇದ್ಧರಿಂ ॥ ೨೦ ॥

ಕುಲತ್ರಯಂ ಸಮುದ್ಧೃತ್ಯ ಆತ್ಮನಾ ಸಹ ಪದ್ಮಜ ।
ತ್ಯಕ್ತ್ವಾ ತು ಮಾಮಕಂ ಮಾರ್ಗಂ ಪ್ರಯಾತಿ ಹರಿಮಂದಿರಂ ॥ ೨೧ ॥

ನ ಯಜ್ಞೈಸ್ತಾದೃಶೈರ್ದೇವ ಗತಿಂ ಪ್ರಾಪ್ನೋತಿ ಮಾನವಃ ।
ನ ತೀರ್ಥೈರ್ನಾಪಿ ದಾನೈರ್ವಾ ನ ವ್ರತೈರ್ವಿಷ್ಣುವರ್ಜಿತೈಃ ॥ ೨೨ ॥

ನ ಜಲೇ ಪಾವಕೇ ವಾಽಪಿ ಮೃತಃ ಪ್ರಾಪ್ನೋತಿ ತಾಂ ಗತಿಂ ।
ಯೋಗೇನ ಸಂಪ್ರಣಷ್ಟೋ ವಾ ಭೃಗುಪಾತೇನ ವಾ ವಿಧೇ ॥ ೨೩ ॥

ತಾದೃಶೀಂ ನ ಗತಿಂ ಯಾತಿ ಯಾದೃಶೀಂ ವೈಷ್ಣವವ್ರತೀ ।
ಗತಿಂ ಮತಿಮತಾಂ ಶ್ರೇಷ್ಠಃ ಸತ್ಯಮೇತದುದೀರಿತಂ ॥ ೨೪ ॥

---

೨೦. ಸ್ವಾಮಿಯೇ! ಇಂತಹ ಅಧಿಕಾರದಿಂದ ನನಗೇನೂ ಪ್ರಯೋಜನವಿಲ್ಲ. ಏಕಾದಶೀದಿನದಲ್ಲಿ ಉಪವಾಸ ಮಾಡಿದವನು ನನ್ನನ್ನು ಲಕ್ಷೀಕರಿಸದೇ ಹರಿಲೋಕಕ್ಕೇ ಹೋಗುವನು.

೨೧. ಬ್ರಹ್ಮನೇ! ಅವನು ಮೂರು ಕುಲಗಳನ್ನೂ ಉದ್ಧರಿಸಿ ನನ್ನ ಲೋಕದ ಮಾರ್ಗವನ್ನೇ ತ್ಯಜಿಸಿ ಹರಿಮಂದಿರಕ್ಕೆ ಪ್ರಯಾಣಮಾಡುವನು.

೨೨. ಬ್ರಹ್ಮದೇವನೇ! ಮನುಷ್ಯನು ಯಜ್ಞ, ತೀರ್ಥಸ್ನಾನ, ದಾನ, ವಿಷ್ಣುರಹಿತವ್ರತ ಇವುಗಳಿಂದ ಸಹ ಏಕಾದಶಿಯ ಉಪವಾಸದಿಂದಾಗುವ ಸದ್ಗತಿಯನ್ನು ಹೊಂದುವುದಿಲ್ಲ.

೨೩-೨೪. ಆಪತ್ಕಾಲದಲ್ಲಿ ವಿಧ್ಯುಕ್ತರೀತಿಯಿಂದ ಜಲ ಅಥವಾ ಅಗ್ನಿಯಲ್ಲಿ ಮೃತನಾದವನೂ ಸಹ ಅಂತಹ ಸದ್ಗತಿಯನ್ನು ಪಡೆಯುವುದಿಲ್ಲ.

ಬ್ರಹ್ಮನೇ! ಹಾಗೆಯೇ ಯೋಗದಿಂದ ಅಥವಾ ಬೆಟ್ಟದ ಜರಿಯಿಂದ ಬಿದ್ದು ಸತ್ತ ಮನುಷ್ಯನೂ ಸಹ ಏಕಾದಶೀವ್ರತಕರ್ತನು ಹೊಂದುವ ಸದ್ಗತಿಯನ್ನು ಹೊಂದುವುದಿಲ್ಲ. ಇದು ಸತ್ಯವು. ಜ್ಞಾನಿಶ್ರೇಷ್ಠನೂ ಸಹ ಅಂತಹ ಗತಿಯನ್ನು ಹೊಂದುಲಾರನು.

ಹರೇರ್ದಿನೇ ಧಾತ್ರೈಫಲಾಂಗಲಿಪ್ತೋ
ವಿಮುಕ್ತನಾಂಭಾರಸಭೋಜನೋ ನರಃ ।
ಪ್ರಯಾತಿ ಲೋಕೇ ಧರಣೀಧರಸ್ಯ
ವಿದುಷ್ಕಕರ್ಮಾಪಿ ಮನುಷ್ಯಜನ್ಮಾ ॥ ೨೫ ॥

ಸೋಽಹಂ ನಿರಾಶೋ ಭುವಿ ಹೀನಕರ್ಮಾ
ತವಾಗತಃ ಪಾದಸರೋಜಯುಗ್ಮಂ ।
ವಿಜ್ಞಪ್ತಿಮಾತ್ರಾಭಯದಾಪ್ತಿಕಾಲಂ
ಕುರುಷ್ವ ಸರ್ಗಸ್ಥಿತಿನಾಶಹೇತೋಃ ॥ ೨೬ ॥

ಮಾಸ್ಯುಸ್ತದಾ ಪಾಪಕೃತೋ ವಿಹೀನಾ
ಯಸ್ಮಾಮುಕ್ತೈರ್ಭೂತಗಣೈರ್ಮನುಷ್ಯಾಃ ।
ನಿಯಂತ್ರಿತಾಃ ಶೃಂಖಲರಜ್ಜುಬಂಧನೈಃ
ಸಮೀಪಗಾ ಮೇ ವಶಗಾ ಭವೇಯುಃ ॥ ೨೭ ॥

---

೨೫. ಹರಿದಿನದಲ್ಲಿ ನೆಲ್ಲೀಕಾಯಿಯನ್ನು ಮೈಗೆ ಲೇಪನಮಾಡಿಕೊಂಡು ಸ್ನಾನಮಾಡಿ, ರಸಭೋಜನದ ಆಶೆಯನ್ನು ಬಿಟ್ಟಿರುವ ಮನುಷ್ಯನು ದುಷ್ಕರ್ಮಗಳನ್ನು ಮಾಡಿದವನಾದರೂ ಧರಣೀಧರನಾದ ವಿಷ್ಣುವಿನ ಲೋಕಕ್ಕೆ ಹೋಗಿ ಸುಖಪಡುವನು.

೨೬. ಇಂತಹ ದುರ್ದೆಶೆಯನ್ನು ಹೊಂದಿದ ನಾನು ಭೂಲೋಕದಲ್ಲಿ ಕರ್ತವ್ಯವಿಲ್ಲದೇ ನಿರಾಶನಾಗಿ ನಿನ್ನ ಚರಣಸರೋಜದ್ವಂದ್ವಕ್ಕೆರಗಿ ಶರಣಾಗತನಾಗಿರುವೆನು. ಸೃಷ್ಟಿಸ್ಥಿತಿಸಂಹಾರಕಾರಣನು, ವಿಜ್ಞಾಪನೆಮಾತ್ರದಿಂದ ಅಭಯಪ್ರದನೂ ಆದ ನೀನು ಈಗ ಬಂದಿರುವ ವಿಪತ್ತನ್ನು ಪರಿಹರಿಸಬೇಕು.

೨೭. ನನಗೊದಗಿರುವ ಈ ವಿಪತ್ತು ಪರಿಹಾರವಾದರೆ ಪಾಪಮಾಡಿದ ಮನುಷ್ಯರು ನನ್ನ ಭೂತಗಣಗಳಿಂದ ಬಿಡುಗಡೆಯನ್ನು ಹೊಂದಲಾರರು. ಬೇಡಿ ಮತ್ತು ಪಾಶಬಂಧನೆಗಳಿಂದ ಬಂಧಿತರಾಗಿ ನನ್ನ ಲೋಕಕ್ಕೇ ಬಂದು ಅಧೀನರಾಗಿ ಬಿದ್ದಿರುವರು.

ಭಗ್ನಸ್ತು ಮಾರ್ಗೋ ರವಿತಾಪಯುಕ್ತೋ
ಯದ್ವಿಷ್ಣುಸಂಘೈರತಿತೀವ್ರಹಸ್ತೈಃ ।
ವಿಮುಚ್ಯ ಕುಂಭಾನ್ ಸಕಲೋ ಜನೌಘಃ
ಪ್ರಯಾತಿ ತದ್ಧಾಮ ಪರಾತ್ಪರಸ್ಯ ॥ ೨೮ ॥

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಯಮವಾಕ್ಯಂ ನಾಮ ಚತುರ್ಥೋಽಧ್ಯಾಯಃ

---

೨೮. ವಿಷ್ಣುಭಕ್ತರು ಅತ್ಯಂತ ಭಯಂಕರ ಹಸ್ತಗಳಿಂದ ಸೂರ್ಯತಾಪ ಯುಕ್ತವಾದ ನನ್ನ ಮಾರ್ಗವನ್ನು ನಾಶಪಡಿಸಿರುವುದರಿಂದ ಸಕಲ ಜನ ಸಂಘವೂ ಪಾಪರಾಶಿಗಳನ್ನು ಬಿಡಿಸಿಕೊಂಡು ಪರಾತ್ಪರನಾದ ಭಗವಂತನ ಸ್ಥಾನಕ್ಕೇ ಹೋಗುತ್ತಿರುವರು.

ಇಂತು ಶ್ರೀನಾರದೀಯಪುರಾಣದ ಉತ್ತರಭಾಗದಲ್ಲಿ ಯಮವಾಕ್ಯವೆಂಬ
ನಾಲ್ಕನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಬ್ರಹ್ಮಲೋಕಕ್ಕೆ ಹೋದ ಯಮನು ಬ್ರಹ್ಮನ ಸನ್ನಿಧಿಯಲ್ಲಿ ತನಗೆ ಸಂಭವಿಸಿರುವ ದುರವಸ್ಥೆಯನ್ನು ವಿಸ್ತಾರವಾಗಿ ವಿಜ್ಞಾಪಿಸಿರುವನು.

---

*

*

# ಪಂಚಮೋಽಧ್ಯಾಯಃ

---

## ಯಮ ಉವಾಚ

ಘುಷ್ಯತಾಂ ಸಮನುಪ್ರಾಪ್ತಃ ಪಂಥಾ ದೇವಸ್ಯ ಚಕ್ರಿಣಃ ।
ಅಚ್ಛಿದ್ರೈರ್ಗಮ್ಯಮಾನೈಶ್ಚ ನರೈಸ್ತ್ರಿಭುವನಾರ್ಚಿತ ॥ ೧ ॥

ಅಪ್ರಮಾಣಮಹಂ ಮನ್ಯೇ ಲೋಕಂ ವಿಷ್ಣೋರ್ಜಗತ್ಪತೇ ।
ಯೋ ನ ಪೂರ್ಯತಿ ಲೋಕೌಘೈಃ ಸರ್ವಸತ್ವಸರೋರುಹೈಃ ॥ ೨ ॥

ಮಾಧವಾವಸಥೇನೈವ ಸಮಸ್ತೇನ ಪಿತಾಮಹ ।
ಸ್ವಕರ್ಮಸ್ಥಾ ವಿಕರ್ಮಸ್ಥಾಃ ಶುಚಯೋಽಶುಚಯೋಽಪಿ ವಾ ॥ ೩ ॥

ಉಪೋಷ್ಯ ವಾಸರಂ ವಿಷ್ಣೋರ್ಲೋಕಂ ಯಾಂತಿ ನೃಪಾಜ್ಞಯಾ ।
ಸೋಽಸ್ಮಾಕಂ ಹಿ ಮಹಾನ್ ಶತ್ರುರ್ಭವತಾಂ ಚ ವಿಶೇಷತಃ ॥ ೪ ॥

---

## ಐದನೆಯ ಅಧ್ಯಾಯವು

೧. ಯಮನು ಹೇಳಿದನು :—ಮೂರುಲೋಕಗಳಲ್ಲಿಯೂ ಪೂಜಿಸಲ್ಪಡುತ್ತಲಿರುವ ಸ್ವಾಮಿಯೇ! ಚಕ್ರಪಾಣಿಯಾದ ವಿಷ್ಣುದೇವನ ವೈಕುಂಠಮಾರ್ಗವು ಎಡಬಿಡದೇ ಹೋಗುತ್ತಲಿರುವ ಮನುಷ್ಯರಿಂದ ನಿಬಿಡವಾಗಿ ಆವರಿಸಲ್ಪಟ್ಟಿದೆ.

೨. ಜಗದೊಡೆಯನೇ! ಲೋಕಗಳ ಸಮೂಹ ಮತ್ತು ಪ್ರಾಣಿಗಳೆಲ್ಲವೂ ಬಂದು ನೆಲಸಿದರೂ ಸಹ ತುಂಬದಿರುವ ವಿಷ್ಣುಲೋಕವನ್ನು ನಾನು ಅಳತೆಗೆ ನಿಲುಕಲಾರದ ಸ್ಥಾನವೆಂದರಿತಿದ್ದೇನೆ.

೩-೪. ಪಿತಾಮಹನೇ! ಮಾಧವಮಂದಿರದಲ್ಲಿ ಎಲ್ಲಾ ಲೋಕಗಳೂ ಒಟ್ಟಿಗೆ ಸೇರಿದರೂ ಅದು ಸಮಗ್ರವಾಗಿ ತುಂಬುವುದೇ ಇಲ್ಲ. ಸ್ವಧರ್ಮನಿರತರು, ಪರಧರ್ಮಪರರು, ಶುದ್ಧರು, ಅಶುದ್ಧರು ಮುಂತಾದವರೆಲ್ಲರೂ ದೊರೆಯ ಅಪ್ಪಣೆಯಿಂದ ಹರಿದಿನೋಪವಾಸವ್ರತವನ್ನಾಚರಿಸಿ ವಿಷ್ಣುಲೋಕಕ್ಕೆ ಹೋಗು

ನಿಗ್ರಾಹ್ಯೋ ಜಗತಾಂ ನಾಥ ಭವೇನ್ನಾಸ್ತ್ಯತ್ರ ಸಂಶಯಃ |
ತೇನ ವರ್ಷಸಹಸ್ರೇಣ ಶಾಸಿತಂ ಕ್ಷಿತಿಮಂಡಲಂ || ೫ ||

ಅಪ್ರಮೇಯೋ ಜನೋ ನೀತೋ ವೈಷ್ಣವಂ ಹರಿವಲ್ಲಭಂ |
ಆರೋಪಯಿತ್ವಾ ಗರುಡೇ ಕೃತ್ವಾ ರೂಪಂ ಚತುರ್ಭುಜಂ || ೬ ||

ಪೀತವಸ್ತ್ರಸುಸಂವೀತಂ ಸ್ರಗ್ವಿಣಂ ಚಾರುಲೇಪನಂ |
ಯದಿ ಸ್ಥಾಸ್ಯತಿ ದೇವೇಶ ಮಾಧವ್ಯಾಂ ಮಾಧವಪ್ರಿಯಃ || ೭ ||

ಸಮಸ್ತಂ ನೇಷ್ಯತೇ ಲೋಕಂ ವಿಷ್ಣೋಃ ಪದಮನಾಮಯಂ |
ಏಷ ದಂಡಃ ಪಟೋ ಹ್ಯೇಷ ತವ ಪದ್ಭ್ಯಾಂ ವಿಸರ್ಜಿತಃ || ೮ ||

---

ತ್ತಿರುವರು. ಆ ರುಕ್ಮಾಂಗದ ರಾಜನೇ ನಮಗೆ ದೊಡ್ಡ ಶತ್ರುವು. ವಿಶೇಷ ವಾಗಿ ನಿಮಗೆ ವೈರಿಯಾಗಿರುವನು.

೫. ಜಗನ್ನಾಥನೇ! ಆ ಶತ್ರುವನ್ನು ನೀನು ನಿಗ್ರಹಿಸಬೇಕು. ಈ ವಿಷಯದಲ್ಲಿ ನೀನು ಸಂಶಯಪಡಬಾರದು. ಅವನು ಒಂದು ಸಾವಿರವರ್ಷ ದಿಂದ ಭೂಮಂಡಲವನ್ನು ಆಳುತ್ತಿರುವನು.

೬-೮. ಜನರು ಪೀತಾಂಬರ ಮಾಲಿಕೆಗಳನ್ನು ಧರಿಸಿದ, ದಿವ್ಯಗಂಧ ವನ್ನು ಹಚ್ಚಿಕೊಂಡಿರುವ, ನಾಲ್ಕು ಭುಜಗಳುಳ್ಳ ಹರಿಸಾರೂಪ್ಯವನ್ನು ಹೊಂದು ವಂತೆ ಮಾಡಿ ಅಂತಹ ಅಪರಿಮಿತ ಜನರನ್ನು ಗರುಡನ ಮೇಲೆ ಕೂಡಿಸಿ ಹರಿ ಪ್ರಿಯವಾದ ವಿಷ್ಣುಲೋಕಕ್ಕೆ ಕಳುಹಿಸುತ್ತಿರುವನು.. ದೇವೇಶನೇ! ಮಾಧವ ಭಕ್ತನಾದ ಈ ರುಕ್ಮಾಂಗದರಾಜನು ಭೂಲೋಕದಲ್ಲಿ ದೊರೆಯಾಗಿಯೇ ಇರುವು ದಾದರೆ ಉಪದ್ರವರಹಿತವಾದ ವಿಷ್ಣುಲೋಕ ಹೊರತು ಏನನ್ನೂ ಯಾರೂ ಅಪೇ ಕ್ಷಿಸುವುದಿಲ್ಲ. ನನಗೆ ನೀನು ಕೊಟ್ಟಿರುವ ಈ ದಂಡ, ಲಿಖಿತಪಟಗಳನ್ನು ನಿನ್ನ ಪಾದಗಳಿಗೇ ಒಪ್ಪಿಸಿರುವೆನು.

ಲೋಕಪಾಲತ್ವಮತುಲಂ ಮಾರ್ಜಿತಂ ತೇನ ಭೂಭುಜಾ ।
ರುಕ್ಮಾಂಗದೇನ ದೇವೇಶ ಧನ್ಯಾ ಸಾ ಸ ಧೃತೋ ಯಥಾ ॥ ೯ ॥

ಸರ್ವದುಃಖವಿನಾಶಾಯ ಮಾತೃಜಾತೋ ಗುಣಾಧಿಕಃ ।
ಕಿಮಪತ್ಯೇನ ಜಾತೇನ ಮಾತುಃ ಕ್ಲೇಶಕರೇಣ ಹಿ ॥ ೧೦ ॥

ಯೋ ನ ತಾಪಯತೇ ಶತ್ರೂನ್ ಜ್ಯೇಷ್ಠೇ ಮಾಸಿ ಯಥಾ ರವಿಃ ।
ತಥಾ ಶೂಲಾದ್ಧಿ ಜನನೀ ಜಾತಾ ದೇವ ಕುಪುತ್ರಿಣೀ ॥ ೧೧ ॥

ಯಸ್ಯ ನ ಸ್ಫುರತೇ ಕೀರ್ತಿರ್ಘನಸ್ಥೇವ ಶತಹ್ರದಾ ।
ತತ್ಪಿತುರ್ನೋದ್ಧರೇತ್ಪಕ್ಷಂ ವಿದ್ಯಯಾ ವಾ ಬಲೇನ ವಾ ॥ ೧೨ ॥

ಮಾತುರ್ಜಠರಜೋ ರೋಗಃ ಸ ಪ್ರಸೂತೋ ಧರಾತಲೇ ।
ಧರ್ಮೋ ಚಾರ್ಥೋ ಚ ಕಾಮೋ ಚ ಪ್ರತೀಪೋ ಯೋ ಭವೇತ್ಸುತಃ ॥೧೩॥

---

೯. ದೇವೇಶನೇ ! ಅದ್ವಿತೀಯವಾದ ದೇವತೆಗಳ ಲೋಕಪಾಲಕತ್ವವೂ ಸಹ ಆ ರುಕ್ಮಾಂಗದ ರಾಜನಿಂದ ಆಳಿಸಲ್ಪಟ್ಟಿತು. ಅವನನ್ನು ಹಡೆದ ತಾಯಿಯು ಧನ್ಯಳು !

೧೦. ತನ್ನ ಪುತ್ರನು ಅಧಿಕ ಗುಣವಂತನಾದರೆ ತಾಯಿಗೆ ಸಕಲ ದುಃಖಗಳೂ ನಾಶವಾಗುವುವು. ತಾಯಿಗೆ ದುಃಖವನ್ನುಂಟುಮಾಡುವ ಮಗನು ಹುಟ್ಟಿದುದರಿಂದೇನು ಫಲ ?

೧೧. ಸೂರ್ಯದೇವನು ಜೇಷ್ಠಮಾಸದಲ್ಲಿ ಜನರಿಗೆ ತಾಪವನ್ನುಂಟುಮಾಡುವಂತೆ ಯಾವನು ಶತ್ರುಗಳಿಗೆ ಶೂಲದಿಂದ ತಾಪವನ್ನುಂಟುಮಾಡುವುದಿಲ್ಲವೋ ಅಂತಹ ಪುತ್ರನನ್ನು ಪಡೆದ ತಾಯಿಯು ಕುಪುತ್ರಿಣಿಯೆನಿಸುವಳು.

೧೨. ಯಾವನ ಕೀರ್ತಿಯು ಮೋಡದೊಳಗಡಗಿರುವ ಮಿಂಚಿನಂತೆ ಸ್ಫುರಿಸುವುದಿಲ್ಲವೋ ಅಂತಹ ಪುತ್ರನು ವಿದ್ಯೆ ಅಥವಾ ಬಲದಿಂದ ಪಿತೃಗಣವನ್ನುದ್ಧರಿಸಲಾರನು.

೧೩-೧೬. ಅಂತಹವನು ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ರೋಗದಂತೆ ಭೂಮಿಯಲ್ಲಿ ತಾಯಿಗೆ ದುಃಖಕರನಾಗಿ ಹುಟ್ಟಿರುವನು.

ಮಾತೃಹಾ ಪ್ರೋಚ್ಯತೇ ಸದ್ಭಿಃ ವೃಥಾ ತಸ್ಯೈವ ಜೀವಿತಂ |
ಏಕಾ ಹಿ ವೀರಸೂರೇವ ವಿರಂಚೇ ನಾತ್ರ ಸಂಶಯಃ || ೧೪ ||

ಯಥಾ ರುಕ್ಮಾಂಗದೋ ಜಾತೋ ಮಲ್ಲಿಪೇರ್ಮಾರ್ಜನಾಯ ವೈ |
ನೇದಂ ವ್ಯವಸ್ಥಿತಂ ದೇವ ಕ್ಷಿತೌ ಕೇನಾಪಿ ಭೂಭುಜಾ || ೧೫ ||

ಪುರಾಣೇಪಿ ಜಗನ್ನಾಥ ನ ಶ್ರುತಂ ಪಟಮಾರ್ಜನಂ |
ಸೋऽಹಂ ನ ಜೀವಾಮಿ ಕದಾಚಿದೀಶ
ದೃಷ್ಟ್ವಾ ಕ್ಷಿತೀಶಂ ಹರಿಸೇವನೇ ಸ್ಥಿತಂ |
ಪ್ರವಾದಮಾನಂ ಪಟಹಂ ಸುಘೋರಂ
ಪ್ರಲೋಪಮಾನಂ ಮಮ ವೇಶ್ಮ ಮಾರ್ಗಂ || ೧೬ ||

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಯಮವಿಲಾಪನಂ ನಾಮ ಪಂಚಮೋऽಧ್ಯಾಯಃ

---

ಧರ್ಮ, ಅರ್ಥ, ಕಾಮಗಳಲ್ಲಿ ವಿರೋಧಿಯಾಗುವ ಮಗನು ಮಾತೃಹತ್ಯೆ ಮಾಡಿದವನೆಂದು ಸಜ್ಜನರಿಂದ ನಿಂದಿತನಾಗಿರುವನು. ಅವನ ಬದುಕು ವ್ಯರ್ಥವು.

ನನ್ನ ಲಿಪಿಯನ್ನು ಅಳಿಸಲು ಸಮರ್ಥನೆಂದರೆ ರುಕ್ಮಾಂಗದನೊಬ್ಬನೇ ಸರಿ ; ಬೇರೊಬ್ಬನಿಲ್ಲ. ಆದುದರಿಂದ ಬ್ರಹ್ಮನೇ ! ಅಂತಹ ವೀರಪುತ್ರನನ್ನು ಪಡೆದಿರುವವಳು ಆತನ ತಾಯಿಯೊಬ್ಬಳೇ. ಈ ವಿಷಯದಲ್ಲಿ ಸಂದೇಹವಿಲ್ಲ.

ದೇವಾ ! ಭೂಮಿಯಲ್ಲಿ ಯಾವರಾಜನೂ ಇಂತಹ ವ್ಯವಸಾಯವನ್ನು ಮಾಡಲಿಲ್ಲ.

ಜಗನ್ನಾಥಾ ! ಪುರಾಣದಲ್ಲಿಯೂ ಸಹ ನನ್ನ ಪಟಮಾರ್ಜನೆಯು ಶ್ರುತವಲ್ಲ. ಆದಕಾರಣ ಅಂತಹ ದುಸ್ಥಿತಿಗೀಡಾದ ನಾನು ಹರಿಸೇವೆಯಲ್ಲಿ ನಿರತನಾದ, ಅತ್ಯಂತ ಘೋರಪಟಹಶಬ್ದದೊಂದಿಗೆ ಸಾರಿಸುತ್ತಿರುವ, ನನ್ನ ಲೋಕದ ದಾರಿಯನ್ನೇ ಹಾಳುಮಾಡಿರುವ ರುಕ್ಮಾಂಗದ ದೊರೆಯನ್ನು ನೋಡಿ ಸ್ವಲ್ಪ ಹೊತ್ತೂ ಬದುಕಲಾರೆನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಯಮನ ವಿಲಾಪನೆಯೆಂಬ ಐದನೆಯ ಅಧ್ಯಾಯವು ಮುಗಿದುದು.

## ಷಷ್ಠೋಽಧ್ಯಾಯಃ

### ಬ್ರಹ್ಮೋವಾಚ

ಕಿಮಾಶ್ಚರ್ಯಂ ತ್ವಯಾ ದೃಷ್ಟಂ ಕಥಂ ವಾ ಖಿದ್ಯತೇ ಭವಾನ್ ।
ಸದ್ಗುಣೇಷು ಚ ಸಂತಾಪಃ ಸ ತಾಪೋ ಮರಣಾಂತಿಕಃ ॥ ೧ ॥

ಯಸ್ಯೋಚ್ಚಾರಣಮಾತ್ರೇಣ ಪ್ರಾಪ್ಯತೇ ಪರಮಂ ಪದಂ ।
ತಮುಪೋಷ್ಯ ಕಥಂ ಸೌರೇ ನ ಗಚ್ಛತಿ ನರಸ್ತ್ವಿತಿ ॥ ೨ ॥

ಏಕೋ ಹಿ ಕೃಷ್ಣಸ್ಯ ಕೃತಃ ಪ್ರಣಾಮೋ
ದಶಾಶ್ವಮೇಧಾವಭೃಥೇನ ತುಲ್ಯಃ ।
ದಶಾಶ್ವಮೇಧೀ ಪುನರೇತಿ ಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ ॥ ೩ ॥

---

### ಆರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಯಮುನೇ! ನೀನು ನೋಡಿದುದು ಆಶ್ಚರ್ಯವೇನು? ಏಕೆ ದುಃಖಿಸುವೆ? ಸದ್ಗುಣಗಳನ್ನು ನೋಡಿ ಸಂತಾಪ ಪಡುವುದು ಸರಿಯಲ್ಲ. ಅಂತಹ ಸಂತಾಪವು ಸಾವಿನಿಂದಲೇ ಕೊನೆಗಾಣುವುದು. ಎಂದರೆ ಅಂತಹವನು ಹಾಗೆಯೇ ಕೊರಗಿ ಸಾಯುವನು.

೨. ಯಮುನೇ! 'ಏಕಾದಶೀ' ಎಂದು ಬಾಯಿಂದ ಹೇಳುವ ಮಾತ್ರದಿಂದ ಉತ್ತಮ ಪದವಿಯು ಎಂದರೆ ಮುಕ್ತಿಯು ಲಭಿಸುವುದು. ಅಂತಹ ಏಕಾದಶೀ ದಿನದಲ್ಲಿ ಉಪವಾಸ ಮಾಡಿ ವ್ರತಾಚರಣೆಯನ್ನು ಮಾಡಿದ ಮನುಷ್ಯನು ಮುಕ್ತಿಸ್ಥಾನವನ್ನು ಹೊಂದದಿರುವುದು ಹೇಗೆ? ಮುಕ್ತಿಯನ್ನು ಹೊಂದಲೇ ಹೊಂದುವನೆಂದು ಭಾವ.

೩. ಕೃಷ್ಣನಿಗೆ ಮಾಡಿದ ಒಂದು ನಮಸ್ಕಾರವು ಹತ್ತು ಅಶ್ವಮೇಧಗಳಿಗೆ ಸಮಾನವು. ಹತ್ತು ಅಶ್ವಮೇಧಯಜ್ಞಗಳನ್ನಾಚರಿಸಿದವನು ಪುನಃ ಜನ್ಮ

ಕುರುಕ್ಷೇತ್ರೇಣ ಕಿಂ ತಸ್ಯ ಕಿಂ ಕಾಶ್ಯಾ ವಿರಜೇನ ವಾ ।
ಜಿಹ್ವಾಗ್ರೇ ವರ್ತತೇ ಯಸ್ಯ ಹರಿರಿತ್ಯಕ್ಷರದ್ವಯಂ ॥ ೪ ॥

ಬ್ರಾಹ್ಮಣಃ ಶ್ವಪಚೀಂ ಗಚ್ಛನ್ ವಿಶೇಷೇಣ ರಜಸ್ವಲಾಂ ।
ಅನ್ನಮಶ್ನನ್ ಸುರಾಪಕ್ವಂ ಮರಣೇ ಯೋ ಹರಿಂ ಸ್ಮರೇತ್ ॥ ೫ ॥

ಅಭಕ್ಷ್ಯಾಗಮ್ಯಯೋರ್ಜಾತಂ ವಿಹಾಯ ಪಾಪಸಂಚಯಂ ।
ಸ ಯಾತಿ ವಿಷ್ಣುಸಾಯುಜ್ಯಂ ವಿಮುಕ್ತೋ ಭವಬಂಧನೈಃ ॥ ೬ ॥

ಯನ್ನಾಮೋಚ್ಚಾರಣಾನ್ಮೋಕ್ಷಃ ಕಥಂ ನ ತದುಪೋಷಣೇ ।
ಯಸ್ಮಿನ್ ಸಂಗೀಯತೇ ಸೋಽಪಿ ಚಿಂತ್ಯತೇ ಪುರುಷೋತ್ತಮಃ ॥ ೭ ॥

---

ಪಡೆಯುವನು. ಕೃಷ್ಣನಿಗೆ ನಮಸ್ಕರಿಸಿದವನಾದರೋ ಪುನರ್ಜನ್ಮವನ್ನೇ ಹೊಂದುವುದಿಲ್ಲ.

೪. ಯಾವನ ನಾಲಿಗೆಯ ಕೊನೆಯಲ್ಲಿ ' ಹರಿ ' ಎಂಬೆರಡಕ್ಷರಗಳಿರುತ್ತವೆಯೋ ಎಂದರೆ ಹರಿ ಎಂಬ ನಾಮವನ್ನು ಕೊನೆಯ ನಾಲಿಗೆಯಿಂದಲಾದರೂ ಹೇಳುತ್ತಿರುವನೋ ಅಂತಹವನಿಗೆ ಕುರುಕ್ಷೇತ್ರ, ಕಾಶೀ, ವಿರಜಗಳೆಂಬ ಕ್ಷೇತ್ರಗಳಿಂದೇನುಫಲ ? ಎಂದರೆ ಇಂತಹ ಕ್ಷೇತ್ರಯಾತ್ರೆಗಿಂತಲೂ ಹರಿನಾಮಸ್ಮರಣೆಯು ಉತ್ತಮಫಲದಾಯಕವೆಂದು ತಾತ್ಪರ್ಯ.

೫-೬. ಶ್ವಪಚಸ್ತ್ರೀ ಆದರಲ್ಲಿಯೂ ರಜಸ್ವಲೆಯಾಗಿರುವವಳನ್ನು ಭೋಗಿಸುವವನು ಅಥವಾ ಮದ್ಯದಲ್ಲಿ ಬೇಯಿಸಿದ ಅನ್ನವನ್ನು ತಿನ್ನುವವನಾದರೂ ಸರಿ ಬ್ರಾಹ್ಮಣನು ಮರಣಕಾಲದಲ್ಲಿ ಹರಿಸ್ಮರಣೆ ಮಾಡಿದರೆ ಅವನು ಅಭಕ್ಷ್ಯಭಕ್ಷಣ ಅಗಮ್ಯಾಗಮನಗಳಿಂದುಂಟಾದ ಪಾಪರಾಶಿಯನ್ನು ಕಳೆದುಕೊಂಡು ಸಂಸಾರ ಬಂಧನದಿಂದ ಬಿಡುಗಡೆಯಾಗಿ ವಿಷ್ಣುಸಾಯುಜ್ಯವನ್ನು ಹೊಂದುವನು.

೭. ಹರಿನಾಮವನ್ನುಚ್ಚರಿಸುವ ಮಾತ್ರದಿಂದ ಮೋಕ್ಷವು ಲಭಿಸುವುದು. ಹೀಗಿರುವಾಗ ಪುರುಷೋತ್ತಮ ಕೀರ್ತನೆ, ಧ್ಯಾನಗಳನ್ನು ಮಾಡುತ್ತಾ ಹರಿದಿನದಲ್ಲಿ ಉಪವಾಸಮಾಡುವವನಿಗೆ ಮೋಕ್ಷವು ಹೇಗೆ ಲಭಿಸದೇ ಹೋದೀತು ?

**ಲೀಲಯಾ ಚೋಚ್ಚರೇದ್ದೇವಂ ಶೃಣುಯಾಚ್ಚ ಜನಾರ್ದನಂ |**
**ಗಂಗಾಂಭಃ ಪೂತಪುಣ್ಯತ್ವೇ ಸ ನರಃ ಸಮತಾಂ ವ್ರಜೇತ್ ॥ ೮ ॥**

**ಅಸ್ಮಾಕಂ ಜಗತಾಂ ನಾಥೋ ಜನ್ಮದಃ ಪುರುಷೋತ್ತಮಃ |**
**ಕಥಂ ಶಾಸತಿ ದುರ್ಮೇಧಾಸ್ತಸ್ಯ ವಾಸರಸೇವಿನಂ ॥ ೯ ॥**

**ಯಸ್ತ್ವಂ ನ ಚೂರ್ಣಿತಸ್ತೈಸ್ತು ಯಸ್ತ್ವಂ ಬದ್ಧೋ ನ ತೈರ್ವೃಥಂ |**
**ತದಸ್ಮಾಕಂ ಕೃತಂ ಮಾನಂ ಮೇ ತತ್ವಂ ನಾವಬುಧ್ಯಸೇ ॥ ೧೦ ॥**

**ಯೋ ನಿಯೋಗೀ ನ ಜಾನಾತಿ ನೃಪಭಕ್ತಾನ್ನರಾನ್ ಕ್ಷಿತೌ |**
**ಕೃತ್ಸ್ನಾಯಾಸೇನ ಸಂಯುಕ್ತಃ ಸ ತೈರ್ನಿಗ್ರಾಹ್ಯತೇ ಪುನಃ ॥ ೧೧ ॥**

---

೮. ವಿಹಾರನೆಪದಿಂದಲಾದರೂ ಜನಾರ್ದನದೇವನ ಕೀರ್ತನೆ ಶ್ರವಣಗಳನ್ನು ಮಾಡುವವನು ಗಂಗೆಯ ಜಲದಲ್ಲಿ ಸ್ನಾನಾದಿಗಳನ್ನು ಮಾಡಿ ಪವಿತ್ರನಾದ ಪುಣ್ಯವಂತನಿಗೆ ಸಮಾನನಾಗುವನು.

೯. ಲೋಕನಾಥನಾದ ಪುರುಷೋತ್ತಮನು ನಮಗೆ ಜನ್ಮದಾತನು. ಅವನಿಗೆ ಅತ್ಯಂತಪ್ರಿಯವಾದ ಏಕಾದಶೀವ್ರತವನ್ನಾಚರಿಸುವವನ ವಿಷಯದಲ್ಲಿಯೇ ದೋಷಬುದ್ಧಿಯು ಹೇಗೆ ಬಂದೀತು ! ಅಂತಹವನನ್ನು ಅವನು ಶಿಕ್ಷಿಸುವುದಾದರೂ ಹೇಗೆ ?

೧೦. ನೀನು ಅಂತಹವರಿಂದ ಚೂರ್ಣಿತನಾಗದಿರುವುದು ಮತ್ತು ವೃಥವಾಗಿ ಬಂಧಿಸಲ್ಪಡದೇ ಇರುವುದೂ ಸಹ ಅವರು ನಮ್ಮಲ್ಲಿಟ್ಟಿರುವ ಗೌರವದ ಕಾರ್ಯವು. ನನ್ನ ತತ್ವವನ್ನು ನೀನು ತಿಳಿಯಲಿಲ್ಲ.

೧೧. ಯಾವ ಅಧಿಕಾರಿಯು ದೇಶದಲ್ಲಿರುವ ಉತ್ತಮ ರಾಜಭಕ್ತರನ್ನು ತಿಳಿಯುವುದಿಲ್ಲವೋ ಅಂತಹವನು ಬಹು ಕಷ್ಟಕ್ಕೆ ಗುರಿಯಾಗುವನು. ಮತ್ತು ಅವರಿಂದ ನಿಗ್ರಹಿಸಲ್ಪಡುವನು.

ರಾಜೇಷ್ಟಾ ನ ನಿಯೋಕ್ತವ್ಯಾಃ ಸಾಪರಾಧಾ ನಿಯೋಗಿನಾ ।
ಸ್ವಾಮಿಪ್ರಸಾದಾತ್ ಸಿದ್ಧಾಸ್ತೇ ವಿನಿಸ್ಯುರ್ವೈ ನಿಯೋಗಿನಂ ॥ ೧೨ ॥

ಏವಂ ಹಿ ಪಾಪಕರ್ತಾರಃ ಪ್ರಣತಾ ಯೇ ಜನಾರ್ದನೇ ।
ಕಥಂ ಸಂಯಮಿತಾ ತೇಷಾಂ ಬಾಲ್ಯಾದ್ಭಾಸ್ಕರನಂದನ ॥ ೧೩ ॥

ಶೈವೈರ್ಭಾಸ್ಕರಭಕ್ತೈರ್ವಾ ಮದ್ಭಕ್ತೈರ್ವಾ ದಿವಾಕರೇ ।
ಕರೋಮಿ ತವ ಸಾಹಾಯ್ಯಂ ಹರಿಭಕ್ತೈರ್ನ ಭಾಸ್ಕರೇ ॥ ೧೪ ॥

ಸರ್ವೇಷಾಮೇವ ದೇವಾನಾಮಾದಿಸ್ತು ಪುರುಷೋತ್ತಮಃ ॥ ೧೫ ॥

ಮಧುಸೂದನಭಕ್ತಾನಾಂ ನಿಗ್ರಹೋ ನೋಪಪದ್ಯತೇ ।
ವ್ಯಾಜೇನಾಪಿ ಕೃತಾ ಯೈಸ್ತು ದ್ವಾದಶೀ ಪಕ್ಷಯೋರ್ದ್ವಯೋಃ ॥ ೧೬ ॥

---

೧೨. ರಾಜನ ಪ್ರೀತಿಪಾತ್ರರಾದವರು ತಪ್ಪುಮಾಡಿದರೂ ಅವರನ್ನು ಅಧಿಕಾರಿಯು ಶಿಕ್ಷೆಗೆ ಗುರಿಮಾಡಬಾರದು. ಅವರು ಸ್ವಾಮಿಯ ಅನುಗ್ರಹ ದಿಂದ ಸಿದ್ಧರಾಗಿರುವರು. ಅಧಿಕಾರಿಯನ್ನೇ ತಲೆಕೆಳಗೆ ಮಾಡುವರು.

೧೩. ಸೂರ್ಯಪುತ್ರನೇ ! ಈ ರೀತಿ ಬಾಲ್ಯದಿಂದಲೂ ಪಾಪಕರ್ತೃಗ ಳಾಗಿದ್ದರೂ ಜನಾರ್ದನನಲ್ಲಿ ಶರಣಾಗತರಾಗಿರುವುದರಿಂದ ಭಕ್ತರೆನಿಸಿದ ಅಂತಹ ವರ ಮೇಲೆ ಹೇಗೆ ಅಧಿಕಾರ ಮಾಡುವುದು ?

೧೪. ಸೂರ್ಯಕುಮಾರನೇ ! ಶಿವಭಕ್ತರು, ಸೂರ್ಯಭಕ್ತರು, ಅಥವಾ ನನ್ನ ಭಕ್ತರುಗಳಿಂದ ನಿನಗೇನಾದರೂ ಅಪಾಯವಾದರೆ ಅವರನ್ನು ಶಿಕ್ಷಿಸಿ ನಿನ್ನ ನ್ನುಳಿಸಬಹುದು. ಹರಿಭಕ್ತರನ್ನಡಗಿಸಿ ನಿನಗೆ ಸಹಾಯ ಮಾಡಿಸಲು ನನಗೆ ಸಾಧ್ಯವಿಲ್ಲ.

೧೫. ಸಕಲದೇವತೆಗಳಿಗೂ ಪುರುಷೋತ್ತಮನಾದ ಹರಿಯೇ ಆದಿ ಭೂತನು.

೧೬. ಆವುದಾದರೊಂದು ನೆಪದಿಂದಲಾದರೂ ಎರಡುಪಕ್ಷಗಳ ದ್ವಾದಶೀ ವ್ರತವನ್ನಾಚರಿಸಿದ ಹರಿಭಕ್ತರನ್ನು ನಿಗ್ರಹಿಸಲಾಗುವುದಿಲ್ಲ.

ತ್ಯೈಃ ಕೃತೇ ಅವಮಾನೇ ತು ತವ ನಾಹಂ ಸಹಾಯವಾನ್ ॥ ೧೭ ॥

ಕೃತೇ ಸಹಾಯೇ ತವ ಸೂರ್ಯಸೂನೋ
ಭವೇದನೀತಿರ್ಮಮ ದೇಹಘಾತಿನೀ ।
ವಿಪರ್ಯಯೋ ಬ್ರಹ್ಮಪದಾತ್ಸುಪುಣ್ಯಾತ್
ಕೃತೇವಮಾನೇ ಸಹ ವಿಷ್ಣುಭಕ್ತ್ಯೈಃ ॥ ೧೮ ॥

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಬ್ರಹ್ಮವಾಕ್ಯಂ ನಾಮ ಷಷ್ಠೋऽಧ್ಯಾಯಃ

---

೧೭. ಅಂತಹ ಹರಿಭಕ್ತರಿಂದ ನಿನಗೆ ಅಪಮಾನವುಂಟಾಗಿರುವ ಈ ಸಂದರ್ಭದಲ್ಲಿ ನಾನು ನಿನಗೆ ಸಹಾಯಕನಾಗಲಾರೆನು.

೧೮. ಸೂರ್ಯಪುತ್ರನೇ! ವಿಷ್ಣುಭಕ್ತರಿಂದ ಸಂಭವಿಸಿರುವ ಈ ಅವಮಾನ ಪ್ರಸಂಗಗಳಲ್ಲಿ ನಿನಗೆ ಸಹಾಯ ಮಾಡಿದರೆ ನನಗೆ ದೇಹನಾಶಕವಾದ ಆಪತ್ತುಂಟಾಗುವುದು. ಅಷ್ಟೇ ಅಲ್ಲ. ಬಹು ಪುಣ್ಯಲಬ್ಧವಾದ ಬ್ರಹ್ಮಪದವೂ ಹೋಗುವ ಪ್ರಸಂಗವೊದಗಬಹುದು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಬ್ರಹ್ಮನು ಯಮನಿಗೆ
ಹೇಳಿದ ಉತ್ತರವೆಂಬ ಆರನೆಯ ಅಧ್ಯಾಯವು ಮುಗಿದುದು.

## ಸಪ್ತಮೋಽಧ್ಯಾಯಃ

ಯಮ ಉವಾಚ

ಪ್ರಾಪ್ತಂ ತಾತ ಮಯಾ ಸಾರ್ಧಂ ವೇದಾಂಘ್ರಿನಮನೇ ಹಿತಂ ।
ನಾಹಂ ಗಚ್ಛಾಮಿ ಯೋಗಾಂತಂ ಪುನರೇವ ಜಗತ್ಪತೇ ॥ ೧ ॥

ಪ್ರಶಾಸತಿ ಮಹೀಂ ಭೂಪೇ ಹಾಟಕಾಂಗದಸಂಜ್ಞಕೇ ।
ತಮೇಕಂ ದೇವತಾಶ್ರೇಷ್ಠಂ ಸಂಪ್ರಾಪ್ತೇ ಹರಿವಾಸರೇ ॥ ೨ ॥

ಯದಿ ಚಾಲಯಸೇ ಧೈರ್ಯಾತ್ತತೋಽಹಂ ತವ ಕಿಂಕರಃ ।
ಸ ಮೇ ಶತ್ರುರ್ಮಹಾನ್ ದೇವ ತೇನ ಲುಪ್ತಃ ಪಟೋ ಮಮ ॥ ೩ ॥

ತಮೇಕಂ ಭೋಜಯಿತ್ವಾ ತು ಕಾರ್ಷ್ಣೇಽಹನಿ ಮಹೀಪತಿಂ ।
ಕೃತಕೃತ್ಯೋ ಭವಿಷ್ಯಾಮಿ ಗಯಾಪಿಂಡಪ್ರದೋ ಯಥಾ ॥ ೪ ॥

---

### ಏಳನೆಯ ಅಧ್ಯಾಯವು

೧–೩. ಯಮನು ಹೇಳಿದನು:—ತಂದೆಯೇ! ನಿನ್ನ ಚರಣಾರವಿಂದ ಕ್ಕೆರಗಿದುದರಿಂದ ನನಗೆ ಹಿತವು ಲಭಿಸಿತು. ಲೋಕನಾಥನೇ! ರುಕ್ಮಾಂಗದ ರಾಜನು ರಾಜ್ಯವಾಳುತ್ತಿರುವಾಗ ನಾನು ಪುನಃ ನನ್ನ ಲೋಕಕ್ಕೆ ಹೋಗಿ ಅಧಿಕಾರವನ್ನು ವಹಿಸಲಾರೆನು. ನೀನು ದೇವತಾಶ್ರೇಷ್ಠನಾದ ಆ ರಾಜ ನೊಬ್ಬನನ್ನು ಏಕಾದಶೀ ದಿನದಲ್ಲಿ ವ್ರತದಿಂದ ಚಲಿಸುವಂತೆ ಎಂದರೆ ಉಪವಾಸ ಮಾಡದಂತೆ ಮಾಡಿದರೆ ಆಮೇಲೆ ನಾನು ನಿನಗೆ ಕಿಂಕರನಾಗಿ ಅಧಿಕಾರ ವಹಿಸುವೆನು. ದೇವಾ! ಅವನು ನನಗೆ ಮಹಾಶತ್ರುವು. ಅವನು ನನ್ನ ಲಿಖಿತಪಟವನ್ನು ಹಾಳುಮಾಡಿರುವನು.

೪. ಗಯೆಯಲ್ಲಿ ಪಿಂಡಪ್ರದಾನ ಮಾಡಿ ಪುತ್ರನು ಕೃತಕೃತ್ಯನಾಗು ವಂತೆ ಹರಿದಿನದಲ್ಲಿ ಆ ದೊರೆಯೊಬ್ಬನಿಗೆ ಊಟಮಾಡಿಸಿದರೆ ನಾನು ಕೃತ ಕೃತ್ಯನಾಗುವೆನು.

ಅದ್ಯಪ್ರಭೃತಿ ದೇವೇಶೋ ಯೈರ್ನರೈಃ ಸಂಸ್ಮೃತೋ ಹರಿಃ |
ಉಪೋಷಿತಃ ಸ್ತುತೋ ವಾಽಪಿ ನ ನಿಯಮ್ಯಾ ಮಯಾ ಹಿ ತೇ || ೫ ||

ಹರಿರಿತಿಸಹಸಾ ಯೇ ಸಂಗೃಣಂತಿ ಛಲೇನ
ಜನನಿಜಠರಮಾರ್ಗಾತ್ತೇ ವಿಮುಕ್ತಾ ಹಿ ಮರ್ತ್ಯಾಃ |
ಮಮ ಪಟವಿಲಿಪಿಂ ತೇ ನೋ ವಿಶಂತಿ ಪ್ರವೀಣಾ
ದಿವಿಜರವರಸಂಘೈಸ್ತೇ ನಮಸ್ಯಾ ಭವಂತಿ || ೬ ||

ಹರಿರಿತಿಹರೀತ್ಯಸಕೃದುಚ್ಚರಿತ-
ಮಿತಿದಸ್ಯುಚ್ಛಲೇನ ಯೈರ್ಮನುಷ್ಯೈಃ |
ಜನನಿಜಠರಮಾರ್ಗಲುಪ್ತಾ ಮಮ ಪಟ-
ಲಿಪಿಂ ನೋ ವಿಶಂತಿ ಮರ್ತ್ಯಾಃ || ೭ ||

---

೫. ಇನ್ನು ಮೇಲೆ ಹರಿದಿನದಲ್ಲಿ ಉಪವಾಸ ಮಾಡಿ ದೇವೇಶನಾದ ಹರಿಯ ಸ್ಮರಣೆ, ಸ್ತೋತ್ರಗಳನ್ನು ಮಾಡುವವರು ನನಗೆ ನಿಯಮ್ಯರಲ್ಲ ವೆಂದು ತಿಳಿದೆನು.

೬. ಆವುದಾದರೊಂದು ನೆಪದಿಂದ ಆಕಸ್ಮಿಕವಾಗಿ ಹರಿಕೀರ್ತನೆ ಮಾಡುವ ಮನುಷ್ಯರು ಪುನಃ ಮಾತೃಗರ್ಭವನ್ನು ಪ್ರವೇಶಿಸುವುದಿಲ್ಲ. ಅವರು ನನ್ನ ಪಟದಲ್ಲಿ ದಾಖಲಾಗುವುದಿಲ್ಲ. ಎಂದರೆ ನನಗೆ ನಿಯಮ್ಯರಾಗುವು ದಿಲ್ಲ. ಅಂತಹ ಜ್ಞಾನಿಗಳು ದೇವಸಂಘದಿಂದ ವಂದಿಸಲರ್ಹರಾಗುವರು.

೭. ಹರಿ ಎಂದರೆ ಅಪಹರಿಸುವವನು ಎಂದರ್ಥ. ಕಳ್ಳನು ಮನೆಗೆ ನುಗ್ಗಿ ಪದಾರ್ಥಗಳನ್ನಪಹರಿಸುತ್ತಿರುವಾಗ ಕೂಗಿಕೊಳ್ಳುವ ನೆಪದಿಂದ ಲಾದರೂ 'ಕಳ್ಳ' ಎಂಬುದಕ್ಕೆ ಬದಲಾಗಿ 'ಹರಿ ಹರಿ' ಎಂಬುದಾಗಿ ಅನೇಕಾವರ್ತಿ ಹೇಳುವ ಮನುಷ್ಯರೂ ಸಹ ಪುನಃ ಮಾತೃಗರ್ಭವನ್ನು ಪ್ರವೇಶಿಸದೆ ನನ್ನ ಲೆಖ್ಖಕ್ಕೂ ದಾಖಲಾಗದೆ ವಿಷ್ಣುಲೋಕಕ್ಕೇ ಹೋಗುವರು.

ಸೌತಿರುವಾಚ

ಚಿಂತಯಾಮಾಸ ದೇವೇಶೋ ವಿರಿಂಚಿಃ ಕುಶಲಾಂಛನಃ ॥ ೮ ॥

ಚಿಂತಯಿತ್ವಾ ಕ್ಷಣಂ ದೇವಃ ಸರ್ವಭೂತೈಶ್ಚ ಭೂಷಿತಃ ।
ಭೂತತ್ರಾಸನಮಾತ್ರಂ ತು ರೂಪಂ ಸ ಜಗೃಹೇ ವಿಭುಃ ॥ ೯ ॥

ತಸ್ಮಿನ್ನುತ್ಪಾದಯಾಮಾಸ ಪ್ರಮದಾಂ ಲೋಕಮೋಹಿನೀಂ ।
ಸರ್ವಯೋಷಿದ್ವರಾಂ ದೇವೀಂ ಮನಸಾ ನಿರ್ಮಿತಾ ಬಭೌ ॥ ೧೦ ॥

ಸಾ ಬಭೂವಾಗ್ರತಸ್ತಸ್ಯ ಸರ್ವಾಲಂಕಾರಭೂಷಿತಾ ।
ದೃಷ್ಟ್ವಾ ಪಿತಾಮಹಸ್ತಾಂ ತು ರೂಪದ್ರವಿಣಸಂಯುತಾಂ ॥ ೧೧ ॥

ಪ್ರಾಹೇಮಾನ್ ಪಶ್ಯತೋ ಹ್ಯೇತಾಂ ಸ್ವಕಾನ್ಸೈ ಕಾಮಮೋಹಿತಾನ್ ।
ಪ್ರತ್ಯವಾಯಭಯಾದ್ಬ್ರಹ್ಮಾ ಚಕ್ಷುಷೀ ಸಂನ್ಯಮೀಲಯತ್ ॥ ೧೨ ॥

---

೮. ಸೌತಿಯು ಹೇಳಿದನು:—ಕುಶಚಿಹ್ನೆಯುಳ್ಳ, ದೇವೇಶನಾದ ಬ್ರಹ್ಮನು ಯಮನು ಹೇಳಿದುದನ್ನು ಚಿತ್ತಕ್ಕೆ ತಂದು ಆಲೋಚಿಸಿದನು.

೯. ಬ್ರಹ್ಮದೇವನು ಕ್ಷಣಕಾಲ ಯೋಚಿಸಿ ಸಕಲಭೂತಗಳಿಂದ ಸಹಿತನಾಗಿ ಮಹತ್ತರವಾದ ರೂಪವನ್ನು ಸ್ವೀಕರಿಸಿದನು.

೧೦. ಅದರಲ್ಲಿ ಲೋಕವನ್ನೇ ಮೋಹಪಡಿಸುವಂತಹ ಸಕಲ ಸ್ತ್ರೀಯರಿಗಿಂತಲೂ ಉತ್ತಮಳಾದ ದಿವ್ಯಸ್ತ್ರೀಯನ್ನು ಸೃಷ್ಟಿಸಿದನು. ಬ್ರಹ್ಮನ ಮನಸ್ಸಿನಿಂದ ನಿರ್ಮಿತಳಾದ ಆಕೆಯು ವಿರಾಜಿಸುತ್ತಿದ್ದಳು.

೧೧-೧೨. ಬಳಿಕ ಆ ಮೋಹಿನಿಯು ಸಕಲಾಭರಣಗಳನ್ನೂ ತೊಟ್ಟು ಬ್ರಹ್ಮನ ಇದಿರಿನಲ್ಲಿ ನಿಂತಳು. ಪಿತಾಮಹನು ಮನಸ್ಸನ್ನು ಕರಗಿಸುವಂತಹ ಸೌಂದರ್ಯಯುಕ್ತಳಾದ ಆ ಮೋಹಿನಿಯನ್ನು ಮತ್ತು ಇವಳನ್ನು ನೋಡುತ್ತಿರುವ, ಕಾಮಮೋಹಿತರಾದ ಅಲ್ಲಿ ನೆರೆದಿರುವ ಸ್ವಕೀಯರನ್ನೂ ಸಹ ನೋಡಿ ಮಾತನಾಡಿದನು. ಆಗ ಬ್ರಹ್ಮನು ಪಾಪಭಯದಿಂದ ಕಣ್ಣುಗಳನ್ನು ಮುಚ್ಚಿಕೊಂಡಿದ್ದನು.

ಸರಾಗೇಣೇಹ ಮನಸಾ ಸರಾಗೇಣೇಹ ಚಕ್ಷುಷಾ ।
ಚಿಂತಯೇದ್ವೀಕ್ಷಯೇದ್ವಾಪಿ ಜನನೀಂ ವಾ ಸುತಾಂ ಸತೀಂ ॥ ೧೩ ॥

ವಧೂಂ ವಾ ಭ್ರಾತೃಜಾಯಾಂ ವಾ ಗುರೋರ್ಭಾರ್ಯಾಂ ನೃಪಸ್ತ್ರಿಯಂ ।
ಸ ಯಾತಿ ನರಕಂ ಘೋರಂ ಸಂಚಿಂತ್ಯ ಶ್ವಪಚೀಮಪಿ ॥ ೧೪ ॥

ದೃಷ್ಟ್ವಾ ಹಿ ಪ್ರಮದಾ ಹ್ಯೇತಾ ಯಃ ಕ್ಷೋಭಂ ವ್ರಜತೇ ನರಃ ।
ತಸ್ಯ ಜನ್ಮಕೃತಂ ಪುಣ್ಯಂ ವೃಥಾ ಭವತಿ ನಾನ್ಯಥಾ ॥ ೧೫ ॥

ಪ್ರಸಂಗೇ ದಶಸಹಸ್ರಂ ಪುಣ್ಯಮಾಯಾತಿ ಸಂಕ್ಷಯಂ ।
ಪುಣ್ಯಸ್ಯ ಸಂಕ್ಷಯಾತ್ಪಾಪೀ ಪಾಷಾಣಾಖುರ್ಭವೇದ್ಧ್ರುವಂ ॥ ೧೬ ॥

ತಸ್ಮಾನ್ನ ಚಿಂತಯೇತ್ಪ್ರಾಜ್ಞೋ ಹ್ಯೇತಾ ರಾಗೇಣ ಚಕ್ಷುಷಾ ।
ಜನನ್ಯಾ ಅಪಿ ಪಾದೌ ತು ನಾದೇಯೌ ದ್ವಾದಶಾಬ್ದಿಕೈಃ ॥ ೧೭ ॥

---

೧೩-೧೪. ತಾಯಿ ಅಥವಾ ಮಗಳು, ಸಾಧ್ವಿಯು, ಭ್ರಾತೃಪತ್ನೀ ಗುರುಪತ್ನೀ ಅಥವಾ ದೊರೆಯಪತ್ನೀ ಇವರನ್ನು ಅನುರಾಗ ಸಹಿತ ಮನಸ್ಸಿನಿಂದ ಚಿಂತಿಸಿದರೆ ಅಥವಾ ಅನುರಾಗ ಸಹಿತ ದೃಷ್ಟಿಯಿಂದ ನೋಡಿದರೂ ಸಹ ಅಂತಹವನು ಘೋರ ನರಕಕ್ಕೆ ಗುರಿಯಾಗುವನು.

೧೫-೧೬. ಮೇಲೆ ಹೇಳಿದ ಈ ಸ್ತ್ರೀಯರನ್ನು ನೋಡಿ ಮನೋವಿಕಾರವನ್ನು ಹೊಂದುವ ಮನುಷ್ಯನು ತಾನು ಹುಟ್ಟಿದಾಗಿನಿಂದ ಮಾಡಿದ ಪುಣ್ಯವನ್ನೆಲ್ಲಾ ವ್ಯರ್ಥಮಾಡಿಕೊಳ್ಳುವನು. ಇದಕ್ಕೆ ಅನ್ಯಥಾ ಇಲ್ಲ. ಸಂಗ ಮಾಡಿದರೆ ಹತ್ತು ಸಾವಿರಜನ್ಮಗಳ ಪುಣ್ಯವು ನಾಶವಾಗುವುದು. ಪುಣ್ಯನಾಶದಿಂದ ಅಂತಹ ಪಾಪಿಯು ಖಂಡಿತವಾಗಿಯೂ ಕಲ್ಲೊಳಗಿನ ಇಲಿಯಾಗಿ ಹುಟ್ಟುವನು.

೧೭. ಆದಕಾರಣ ಇವರನ್ನು ಪ್ರಾಜ್ಞನಾದವನು ಅನುರಾಗದೃಷ್ಟಿಯಿಂದ ಚಿಂತಿಸಬಾರದು. ಹನ್ನೆರಡು ವರ್ಷ ವಯಸ್ಸಾದಮೇಲೆ ಮಕ್ಕಳು ತಾಯಿಯ ಕಾಲುಗಳನ್ನೂ ಸಹ ಮುಟ್ಟಬಾರದು.

ಸುತೈಸ್ತ್ವಭ್ಯಂಗಕರಣೇ ಪುನರ್ಯೌವನಸಂಸ್ಥಿತೈಃ ।
ಷಷ್ಟ್ಯತೀತಾಂ ಸುತೋಽಭ್ಯಂಗೇ ನಿಯುಂಜೀತ ವಿಚಕ್ಷಣಃ ॥ ೧೮ ॥

ವೃದ್ಧೋ ವಾಪಿ ಯುವಾ ವಾಪಿ ನ ಪಾದೌ ಧಾವಯೇದ್ವಧೂಂ ।
ಉಭಯೋಃ ಪತನಂ ಪ್ರೋಕ್ತಂ ರೌರವೇಂಗಾರಸಂಚಯೇ ॥ ೧೯ ॥

ಯಾವಚ್ಚ ದರ್ಶಯೇದಂಗಂ ನಿವೃತ್ತಶ್ವಶುರಸ್ಯ ಹಿ ।
ಪಾಣಿಪಾದಹತಾ ರಾಜನ್ ಕ್ರಿಮಿಭಕ್ಷ್ಯಾ ಭವೇತ್ತು ಸಾ ।
ವಧೂಹಸ್ತೇನ ಯಃ ಪಾಪಃ ಪಾದಶೌಚಂ ಕರೋತಿ ಹಿ ॥ ೨೦ ॥

ಸ್ನಾನಂ ವಾಽಪ್ಯಥವಾಭ್ಯಂಗಂ ತಸ್ಯಾಪ್ಯೇವಂವಿಧಾ ಗತಿಃ ।
ಸೂಚೀಮುಖೈಃ ಕೃಷ್ಣವಕ್ತ್ರೈಃ ಭುಜ್ಯತೇ ಕಲ್ಪಸಂಸ್ಥಿತಂ ॥ ೨೧ ॥

---

೧೮. ಯುವಕರಾದ ಗಂಡುಮಕ್ಕಳು ಅಭ್ಯಂಗವನ್ನು ಮೇಲೆ ಹೇಳಿದ ಸ್ತ್ರೀಯರಿಂದ ಮಾಡಿಸಿಕೊಳ್ಳಬಾರದು. ವಿವೇಕಿಯಾದ ಮಗನು ಅರವತ್ತು ವರ್ಷವಾಗಿರುವ ಜನನ್ಯಾದಿಗಳಿಂದ ಅಭ್ಯಂಜನ ಮಾಡಿಸಿಕೊಳ್ಳಬಹುದು.

೧೯. ವೃದ್ಧನಾಗಲಿ, ಯುವಕನಾಗಲಿ ಸ್ತ್ರೀಯನ್ನು ಕಾಲಿನಿಂದ ಒದೆಯಬಾರದು. ಹಾಗೆ ಮಾಡಿದವರಿಗೆ ಅಗ್ನಿಪೂರಿತವಾದ ರೌರವ ನರಕದಲ್ಲಿ ಪತನವಾಗುವುದು.

೨೦. ಮಾವನಿಗೆ ಸರ್ವಾಂಗವನ್ನೂ ತೋರಿಸುವ ಸ್ತ್ರೀಯು ಪಾಣಿಪಾದಾಹತಳಾಗಿ ಕ್ರಿಮಿಗಳಿಗೆ ಭಕ್ಷ್ಯಳಾಗುವಳು.

೨೧. ಯಾವ ಪಾಪಿಷ್ಠನು ಹೆಂಗಸಿನ ಕೈಯಿಂದ ಪಾದಶೌಚ, ಸ್ನಾನ, ಅಭ್ಯಂಗಗಳನ್ನು ಮಾಡಿಸಿಕೊಳ್ಳುವನೋ ಅವನಿಗೂ ಇದೇ ಗತಿಯು. ಅಂತಹವರು ಸೂಜಿಯಂತೆ ಬಾಯುಳ್ಳ, ಕರಿಯಮುಖದ, ಕ್ರಿಮಿಗಳಿಂದ ಕಲ್ಪಪರ್ಯಂತವಾಗಿ ಭಕ್ಷಿಸಲ್ಪಡುತ್ತಿರುವರು.

ತಸ್ಮಾನ್ನ ವೀಕ್ಷಯೇನ್ನಾರೀಂ ಸುತಾಂ ವಾಪಿ ವಧೂಂ ನರಃ ।
ಸಾಭಿಲಾಷೇಣ ಮನಸಾ ತತ್ಕ್ಷಣಾತ್ಪತತೇ ನರಃ　　॥ ೨೨ ॥

ಏವಂ ಸಂಚಿಂತಯಿತ್ವಾ ಚ ಸೂಕ್ಷ್ಮದೃಷ್ಟಿಂ ಚಕಾರ ಹ ।
ಯದಿದಂ ವರ್ತುಲಂ ವಕ್ತ್ರಂ ಸೋನ್ನತಂ ದೃಶ್ಯತೇ ಶುಭಂ　　॥ ೨೩ ॥

ಅಸ್ಥಿಪಂಜರಮೇತದ್ಧಿ ಚರ್ಮಮಾಂಸಾವೃತಂ ತ್ವಿತಿ ।
ವಸಾಹತೇsಥ ನಯನೇ ಸೋಜ್ಜ್ವಲೇ ಸ್ತ್ರೀಷು ಸಂಸ್ಥಿತೇ　　॥ ೨೪ ॥

ಅತ್ಯುಚ್ಛ್ರಿತಮಿದಂ ಮಾಂಸಂ ಸ್ತನಯೋಃ ಸಮವಸ್ಥಿತಂ ।
ನಿರ್ಮಾಂಸತಾಂ ದರ್ಶಯತಿ ತ್ರಿವಲೀ ಜಠರಸ್ಥಿತಾ　　॥ ೨೫ ॥

ಪುನರೇವಾಧಿಕಂ ಕ್ಷಿಪ್ತಂ ಮಾಂಸಂ ಜಘನವರ್ತ್ಮನಿ ।
ಮೂತ್ರದ್ವಾರಮಿದಂ ಗುಹ್ಯಂ ಯತ್ರ ಮುಗ್ಧಂ ಜಗತ್ರಯಂ　　॥ ೨೬ ॥

---

೨೨. ಆದಕಾರಣ ಮನುಷ್ಯನು ಕಾಮಯುಕ್ತ ಮನಸ್ಸಿನಿಂದ ಪರರ ಹೆಂಗಸನ್ನು ಮಗಳನ್ನೂ ಸಹ ನೋಡಬಾರದು. ಹಾಗೆ ನೋಡಿದರೆ ಮನುಷ್ಯನು ಕೂಡಲೇ ಪತಿತನಾಗುವನು.

೨೩-೨೪. ಹೀಗೆ ಯೋಚಿಸಿ ಸೂಕ್ಷ್ಮದೃಷ್ಟಿಯಿಂದ ಈ ರೀತಿಯಾಗಿ ವಿಚಾರಮಾಡಿದನು.

ಉನ್ನತವಾಗಿ ಗುಂಡಗಿರುವ ಯಾವ ಮುಖವು ಶುಭವಾಗಿ ಕಾಣುತ್ತದೆಯೋ ಅದು ಚರ್ಮ ಮಾಂಸಗಳಿಂದ ಮುಚ್ಚಲ್ಪಟ್ಟ ಅಸ್ಥಿಪಂಜರವೇ ಸರಿ. ಸ್ತ್ರೀಯರಲ್ಲಿರುವ ಪ್ರಕಾಶಮಾನವಾದ ನಯನಗಳು ಮೇದಸ್ಸಿನಿಂದ ತುಂಬಿದವುಗಳಾಗಿವೆ.

೨೫. ಸ್ತನಗಳಲ್ಲಿರುವುದು ಮಾಂಸದ ಮುದ್ದೆಯು. ಉದರದಲ್ಲಿರುವ ತ್ರಿವಲಿಯು ಭುಜವು ಬಾಗಿರುವುದನ್ನು ತೋರಿಸುತ್ತದೆ.

೨೬. ಗುಹ್ಯದ ಮೇಲ್ಭಾಗವಾದರೋ ಬಹುಮಾಂಸದಿಂದ ಯುಕ್ತವಾದುದು. ಮೂರು ಲೋಕವೂ ಮೋಹಿಸುವ ಈ ಗುಹ್ಯವು ಮೂತ್ರದ್ವಾರವು.

ಅಪಾನವಾಯುನಾ ಜುಷ್ಟಂ ಸದೈವ ಪ್ರತಿಕುತ್ಸಿತಂ ।
ಭೆಸ್ತ್ರಾವಗರ್ಾಧಿಕಂ ಕ್ಷಿಪ್ತಂ ಮಾಂಸಂ ಜಘನವರ್ತ್ಮನಿ ॥ ೨೭ ॥

ಕೃತಂ ಯದ್ವದ್ವಿಧಾ ಕಾಷ್ಠಂ ತದ್ವಜ್ಜಂಘಾ ದ್ವಿಧಾ ಧ್ರುವಂ ।
ಶುಕ್ರಾಸ್ಥಿಪೂರಿತಂ ಮಾಂಸೈಃ ಕಥಂ ಸೌಂದರ್ಯತಾಂ ವ್ರಜೇತ್ ॥ ೨೮ ॥

ಮಾಂಸಮೇದೋವಸಾಸಾರೇ ಕಿಂ ಸಾರಂ ದೇಹಿನಾಂ ವದ ।
ವಿಷ್ಠಾಮೂತ್ರಮಲೈಃ ಪುಷ್ಟೇ ಕೋ ದೇಹೇ ರಜ್ಯತೇ ನರಃ ॥ ೨೯ ॥

ಏವಂ ವಿಚಾರ್ಯ ಬಹುಧಾ ವಿರಂಚಿರ್ಜ್ಞಾನಚಕ್ಷುಷಾ ।
ಧೈರ್ಯಂ ಕೃತ್ವಾ ಚ ನಾರೀಂ ತಾಮುವಾಚ ಗಜಗಾಮಿನೀಂ ॥ ೩೦ ॥

---

೨೭. ಗುದವು ಯಾವಾಗಲೂ ಅಪಾನವಾಯುವಿನಿಂದ ಸೇವಿತವಾಗಿ ಕಲುಷಿತವಾಗಿರುತ್ತದೆ. ಕಟಿಪಶ್ಚಾದ್ಭಾಗವು ಗಾಳಿತುಂಬಿದ ತಿದಿಯಂತೆ ಅದಕ್ಕಿಂತಲೂ ಅಧಿಕವಾದ ಮಾಂಸದಿಂದ ತುಂಬಿದೆ.

೨೮. ಕಟ್ಟಿಗೆಯನ್ನು ಸೀಳಿ ಮಾಡಿದ ಎರಡು ಭಾಗಗಳಂತೆ ಕಣ ಕಾಲುಗಳು ಎರಡು ವಿಧವಾಗಿವೆ. ಹೀಗೆ ಶುಕ್ರ, ಮೂಳೆ, ಮಾಂಸಗಳಿಂದ ತುಂಬಿದ ಸ್ತ್ರೀದೇಹವು ಹೇಗೆ ಸೌಂದರ್ಯವನ್ನು ಹೊಂದೀತು?

೨೯. ಮಾಂಸ, ಮೇದಸ್ಸು, ವಪೆಗಳಿಂದ ಕೂಡಿದ ಪ್ರಾಣಿಗಳ ದೇಹದಲ್ಲಿ ಸಾರವಾದುದಾವುದು? ಯಾವ ಮನುಷ್ಯನು ಮಲಮೂತ್ರದಿಂದ ಪುಷ್ಟವಾಗಿರುವ ದೇಹದಲ್ಲಿ ಅನುರಕ್ತನಾದಾನು?

೩೦. ಈ ರೀತಿಯಾಗಿ ಬ್ರಹ್ಮನು ಜ್ಞಾನದೃಷ್ಟಿಯಿಂದ ಬಹುವಿಧ ವಾಗಿ ವಿಚಾರಮಾಡಿ ಧೈರ್ಯತಂದುಕೊಂಡು ಆನೆಯಂತೆ ಮಂದಗಮನೆ ಯಾದ ಆ ನಾರಿಯನ್ನು ಕುರಿತು ಮಾತನಾಡಿದನು.

ಯಥಾ ಹಿ ಮನಸಾ ಸೃಷ್ಟಾ ಮಯಾ ತ್ವಂ ವರವರ್ಣಿನೀ |
ತಥಾಭೂತಾಸಿ ಚಾರ್ವಂಗಿ ಮಾನಸೋನ್ಮಾದಕಾರಿಣೀ || ೩೧ ||

ತಮುವಾಚ ತದಾ ಸಾ ತು ಪ್ರಣಮ್ಯ ಚತುರಾನನಂ |
ಪಶ್ಯ ಮೂರ್ಛಾನ್ವಿತಂ ನಾಥ ಜಗತ್ಸ್ಥಾವರಜಂಗಮಂ || ೩೨ ||

ಮೋಹಿತಂ ಮಮ ರೂಪೇಣ ಸಯೋಗಿಪದಕಲ್ಮಷಂ |
ಸ ನಾಸ್ತಿ ತ್ರಿಷು ಲೋಕೇಷು ಯಃ ಪುಮಾನ್ಮಮ ದರ್ಶನಾತ್ || ೩೩ ||

ಭವಂತಮಾದಿತಃ ಕೃತ್ವಾ ನ ಕ್ಷೋಭಂ ಯಾತಿ ಪದ್ಮಜ |
ಆತ್ಮಸ್ತುತಿರ್ನ ಕರ್ತವ್ಯಾ ಕೇನಚಿಚ್ಛುಭಮಿಚ್ಛತಾ || ೩೪ ||

ಸ್ತವನಾನ್ನರಕಂ ಯಾತಿ ವಿಶುದ್ಧೋಪಿ ಚ ಮಾನವಃ |
ತಥಾಪಿ ಸ್ತವನಂ ಬ್ರಹ್ಮನ್ ಕರ್ತವ್ಯಂ ಕಾರ್ಯಹೇತುನಾ || ೩೫ ||

---

೩೧. ಮನೋಹರವಾದ ಅಂಗಗಳುಳ್ಳ ವರವರ್ಣಿನಿಯೇ! ನಾನು ಮನಸ್ಸಿನಿಂದ ಹೇಗೆ ನಿನ್ನನ್ನು ಸೃಷ್ಟಿಸಿದೆನೋ ಹಾಗೆಯೇ ನೀನೂ ಮನಸ್ಸಿಗೆ ಉನ್ಮಾದವನ್ನುಂಟುಮಾಡುವವಳಾಗಿರುವೆ ಎಂದು ಹೇಳಿದನು.

೩೨-೩೫. ಆಗ ಆ ಮೋಹಿನಿಯು ಚತುರ್ಮುಖನಿಗೆ ನಮಸ್ಕಾರ ಮಾಡಿ ಹೇಳಿದಳು:—

ನಾಥ! ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ನನ್ನ ಸೌಂದರ್ಯವನ್ನು ನೋಡಿ ಮೋಹಗೊಂಡಿದೆ. ನನ್ನ ರೂಪದಿಂದ ಯೋಗಿವೃಂದವೂ ಸಹ ಕಲುಷಿತವಾಗಿ ಮೋಹವನ್ನು ಹೊಂದಿದೆ ನೋಡು. ಪದ್ಮಜನೇ! ನೀನು ಮೊದಲು ಮಾಡಿ ಮೂರು ಲೋಕಗಳಲ್ಲಿ ಎಲ್ಲರೂ ನನ್ನನ್ನು ನೋಡಿ ಮನೋವಿಕಾರವನ್ನು ಹೊಂದಿರುವರು. ನನ್ನನ್ನು ನೋಡಿದ ಮೇಲೆ ಮನೋವಿಕಾರವನ್ನು ಹೊಂದದ ಮನುಷ್ಯನೇ ಇಲ್ಲ. ಶ್ರೇಯಸ್ಸನ್ನು ಬಯಸುವವನು ಆತ್ಮಸ್ತುತಿಯನ್ನು ಮಾಡಿಕೊಳ್ಳಬಾರದು. ಮನುಷ್ಯನು ಪರಿಶುದ್ಧನಾದರೂ ಆತ್ಮಸ್ತೋತ್ರಮಾಡಿಕೊಳ್ಳುವುದರಿಂದ ನರಕಕ್ಕೆ ಹೋಗುವನು. ಆದರೂ ಬ್ರಹ್ಮನೇ! ಪ್ರಕೃತ ಕಾರ್ಯಕ್ಕಾಗಿ ಸ್ತೋತ್ರ ಮಾಡಿಕೊಂಡಿರುವೆನು.

ಸಾಹಂ ಸೃಷ್ಟಾ ತ್ವಯಾ ಬ್ರಹ್ಮನ್ ಕಸ್ಯಚಿತ್ ಕ್ಷೋಭಣಾಯ ವೈ ।
ತಮಾದಿಶ ಜಗನ್ನಾಥ ಕ್ಷೋಭಯಿಷ್ಯೇ ನ ಸಂಶಯಃ ॥ ೩೬ ॥

ಮಾಂ ದೃಷ್ಟ್ವಾಽಪಿ ಕ್ಷಿತೌ ದೇವ ಭೂಧರಶ್ಚಾಪಿ ಮುಹ್ಯತಿ ।
ಕಿಂ ಪುನಶ್ಚೇತನೋಪೇತಃ ಶ್ವಾಸೋಚ್ಛ್ವಾಸೀ ನರಸ್ತ್ವಿತಿ ॥ ೩೭ ॥

ತಥಾ ಚೋಕ್ತಂ ಪುರಾಣೇಷು ನಾರೀವೀಕ್ಷಣವರ್ಣನಂ ।
ಉನ್ಮಾದಕರಣಂ ನೄಣಾಂ ದುಶ್ಚರವ್ರತನಾಶನಂ ॥ ೩೮ ॥

ಸನ್ಮಾರ್ಗೇ ತಾವದಾಸ್ತೇ ಪ್ರಭವತಿ ಪುರುಷಸ್ತಾವದೇವೇಂದ್ರಿಯಾಣಾಂ
ಲಜ್ಜಾಂ ತಾವದ್ವಿಧತ್ತೇ ವಿನಯಮಪಿ ಸಮಾಲಂಬತೇ ತಾವದೇವ ।
ಭ್ರೂಚಾಪಾಕ್ಷೇಪಮುಕ್ತಾಃ ಶ್ರವಣಪಥಗತಾ ನೀಲಪಕ್ಷ್ಮಾಣ ಏತೇ
ಯಾವಲ್ಲೀಲಾವತೀನಾಂ ನ ಹೃದಿ ಧೃತಿಮುಷೋ ದೃಷ್ಟಿಬಾಣಾಃ ಪತಂತಿ ॥

---

೩೬. ಜಗದೊಡೆಯನಾದ ಬ್ರಹ್ಮನೇ! ಅಂತಹ ಸುಂದರಿಯಾದ ನಾನು ಯಾವನೋ ಒಬ್ಬನಿಗೆ ಮನೋವಿಕಾರವನ್ನುಂಟುಮಾಡಲು ನಿನ್ನಿಂದ ಸೃಷ್ಟಿಸಲ್ಪಟ್ಟಿರುವೆನು. ಅದನ್ನು ನನಗೆ ಆಜ್ಞಾಪಿಸು. ಅವನಿಗೆ ವಿಕಾರವನ್ನುಂಟುಮಾಡುವೆನು; ಇದರಲ್ಲಿ ಸಂಶಯವಿಲ್ಲ.

೩೭. ಭೂಲೋಕದಲ್ಲಿ ನನ್ನನ್ನು ನೋಡಿ ಬೆಟ್ಟ ಮುಂತಾದ ಜಡ ವಸ್ತುವೂ ಸಹ ಮೋಹಗೊಳ್ಳುತ್ತದೆ. ಹೀಗಿರುವಾಗ ಶ್ವಾಸೋಚ್ಛ್ವಾಸಶೀಲನಾದ, ಚೈತನ್ಯವುಳ್ಳ, ನರನು ಮೋಹಗೊಳ್ಳುವನೆಂದು ಹೇಳಬೇಕಾದುದೇನು?

೩೮. ಮನುಷ್ಯರಿಗೆ ಎಚ್ಚರಿಕೆಯನ್ನು ತಪ್ಪಿಸುವಂತಹ, ಬಹುಪ್ರಯಾಸ ಸಾಧ್ಯವ್ರತಗಳನ್ನೂ ಸಹ ನಾಶಪಡಿಸುವಂತಹ ನಾರೀಕಟಾಕ್ಷ ವರ್ಣನೆಯು ಪುರಾಣಗಳಲ್ಲಿ ಹೀಗೆಯೇ ಉಕ್ತವಾಗಿದೆ.

೩೯. ಲೀಲಾವತಿಯರಾದ ಯುವತಿಯರ ಹುಬ್ಬೆಂಬ ಧನುಸ್ಸಿನಲ್ಲಿ ಸಂಧಾನಮಾಡಿದ, ಶ್ರೋತ್ರಮಾರ್ಗಗತವಾದ, ನೀಲಪಕ್ಷ್ಮಗಳುಳ್ಳ ಕಟಾಕ್ಷ ವೀಕ್ಷಣವೆಂಬ ಬಾಣಗಳು ಹೃದಯದಲ್ಲಿ ನಾಟುವವರೆಗೇ ಪುರುಷನು ಸನ್ಮಾರ್ಗದಲ್ಲಿರುವನು. ಅದುವರೆಗೇ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವನು. ಲಜ್ಜೆಯನ್ನೂ ಧರಿಸುವನು. ಅದುವರೆಗೇ ವಿನಯವನ್ನೂ ಅವಲಂಬಿಸಿರುವನು.

ಧಿಕ್ತಸ್ಯ ಮೂಢಮನಸಃ ಕುಕವೇಃ ಕವಿತ್ವಂ
ಯಃ ಸ್ತ್ರೀಮುಖಂ ಚ ಶಶಿಸಂ ಚ ಸಮೀಕರೋತಿ ।
ಭ್ರೂಕ್ಷೇಪವಿಸ್ಮಿತಕಟಾಕ್ಷನಿರೀಕ್ಷಿತಾನಿ
ಕೋಪಪ್ರಸಾದಹಸಿತಾನಿ ಕುತಃ ಶಶಾಂಕೇ ॥ ೪೦ ॥

ಪೀತಂ ಹಿ ಮದ್ಯಂ ಮನುಜೇನ ನಾಥ
ಕರೋತಿ ಮೋಹಂ ಸುವಿಚಕ್ಷಣಸ್ಯ ।
ಸ್ಮೃತಾ ಚ ದೃಷ್ಟ್ವಾ ಯುವತೀ ನರೇಣ
ವಿಮೋಹಯೇದೇವ ಸುರಾಧಿಕಾ ಹಿ ॥ ೪೧ ॥

ಮೋಹನಾರ್ಥಂ ತ್ವಯಾ ಸೃಷ್ಟಾ ನರಾಣಾಂ ಪ್ರಪಿತಾಮಹ ।
ತಮಾದಿಶ ಜಗನ್ನಾಥ ತ್ರೈಲೋಕ್ಯಂ ಮೋಹಯಾಮ್ಯಹಂ ॥ ೪೨ ॥

---

೪೦. ಸ್ತ್ರೀಯರ ಮುಖವನ್ನು ಚಂದ್ರನಿಗೆ ಹೋಲಿಸಿ ವರ್ಣಿಸುವ ಮಂದಮತಿಯಾದ ಕುಕವಿಯ ಕವಿತ್ವಕ್ಕೆ ಧಿಕ್ಕಾರ! ಹುಬ್ಬನ್ನು ಕುಣಿಸುವುದರಿಂದ ವಿಸ್ಮಿತಗಳಾದ ಕಟಾಕ್ಷ ನಿರೀಕ್ಷಣೆಗಳು ಮತ್ತು ಕೋಪ, ಪ್ರಸಾದ, ನಗು ಇವುಗಳು ಚಂದ್ರನಲ್ಲಿ ಎಲ್ಲಿವೆ?

೪೧. ಮನುಷ್ಯನು ಮದ್ಯವನ್ನು ಪಾನಮಾಡಿದರೆ ವಿಚಕ್ಷಣನಾದರೂ ಅವನಿಗೆ ಅದು ಮೋಹವನ್ನುಂಟುಮಾಡುತ್ತದೆ. ಯುವತಿಯಾದರೋ ಸ್ಮರಣೆ ದರ್ಶನಮಾತ್ರದಿಂದಲೇ ಮನುಷ್ಯನಿಗೆ ಮೋಹವನ್ನುಂಟುಮಾಡುತ್ತಾಳೆ. ಆದ ಕಾರಣ ಮದ್ಯಕ್ಕಿಂತಲೂ ಯುವತಿಯೇ ಹೆಚ್ಚು ಮೋಹಕರಳು.

೪೨. ಪಿತಾಮಹನೇ! ಮನುಷ್ಯರಿಗೆ ಮೋಹವನ್ನುಂಟುಮಾಡಲು ನಿನ್ನಿಂದ ನಾನು ಸೃಷ್ಟಳಾಗಿರುವೆನು. ಜಗನ್ನಾಥನೇ! ನನ್ನ ಕರ್ತವ್ಯವನ್ನಾಜ್ಞಾಪಿಸು. ನಾನು ಮೂರು ಲೋಕಗಳನ್ನೂ ಸಹ ಮೋಹಗೊಳಿಸುವೆನು.

## ಬ್ರಹ್ಮೋವಾಚ

ಸತ್ಯಮುಕ್ತಂ ತ್ವಯಾ ದೇವಿ ನಾಸಾಧ್ಯಂ ಭುವನತ್ರಯೇ ।
ನಾಗನಾಸೋರುಸುಭಗೇ ಮತ್ತಮಾತಂಗಗಾಮಿನಿ ॥ ೪೩ ॥

ಯಾ ತ್ವಂ ದೂಷಯಸೇ ಚೇತೋ ಮಮಾಪಿ ವರವರ್ಣಿನಿ ।
ತನ್ಮಯಾ ಸುಗೃಹೀತಂ ತು ಕೃತಂ ಜ್ಞಾನಾಂಕುಶೇನ ಹಿ ॥ ೪೪ ॥

ಸಾ ತ್ವಂ ಕಥಂ ನ ಲೋಕಾನಾಂ ಚೇತಾಂಸ್ಯಪಹರಿಷ್ಯಸಿ ।
ಸತ್ಯಮೇತದ್ವಿಶಾಲಾಕ್ಷಿ ತವ ರೂಪಂ ವಿಮೋಹನಂ ॥ ೪೫ ॥

ಸಾಮರಂ ಹಿ ಜಗತ್ಸರ್ವಂ ನಿಶ್ಚೇಷ್ಟಮಪಿ ಲಕ್ಷ್ಯತೇ ।
ಯನ್ನಿಮಿತ್ತಂ ಮಯಾ ಸೃಷ್ಟಾ ತತ್ಸಾಧಯ ವರಾನನೇ ॥ ೪೬ ॥

---

೪೩. ಬ್ರಹ್ಮನು ಹೇಳಿದನು—ಮದಿಸಿದ ಆನೆಯಂತೆ ಸಂಚರಿಸುವವಳು, ಆನೆಯ ಸೊಂಡಿಲಿನಂತೆ ಮನೋಹರವಾದ ತೊಡೆಗಳುಳ್ಳವಳೂ ಆದ ದೇವಿಯೇ! ನೀನು ಹೇಳಿದುದು ನಿಜ. ಮೂರು ಲೋಕಗಳಲ್ಲಿಯೂ ನಿನಗೆ ಅಸಾಧ್ಯವಾದುದಾವುದೂ ಇಲ್ಲ.

೪೪. ವರವರ್ಣಿನೀ! ನನ್ನ ಮನಸ್ಸನ್ನೂ ಸಹ ಕಲುಷಿತವಾಗಿ ಮಾಡಿದಿಯಷ್ಟೆ, ಆದರೆ ಅದನ್ನು ನಾನು ಜ್ಞಾನವೆಂಬ ಅಂಕುಶದಿಂದ ಗಟ್ಟಿಯಾಗಿ ಹಿಡಿದು ನಿಗ್ರಹಿಸಿ ಸ್ವಾಧೀನದಲ್ಲಿಟ್ಟುಕೊಂಡಿರುವೆನು.

೪೫. ಅಂತಹ ನೀನು ಜನರ ಮನಸ್ಸನ್ನಪಹರಿಸದೇ ಹೇಗೆ ಬಿಡುವೆ? ವಿಶಾಲನೇತ್ರಳೇ! ನಿಜವಾಗಿಯೂ ನಿನ್ನ ಈ ರೂಪವುಜಗನ್ಮೋಹಕವು.

೪೬. ದೇವತೆಗಳಿಂದ ಸಹಿತವಾದ ಜಗತ್ತೆಲ್ಲವೂ ನಿಶ್ಚೇಷ್ಟವಾಗಿ ಕಾಣುತ್ತಿದೆ. ವರಾನನೇ! ನಿನ್ನನ್ನು ನಾನು ಏತಕ್ಕೋಸ್ಕರ ಸೃಷ್ಟಿಸಿರುವೆನೋ ಅದನ್ನು ಸಾಧಿಸು.

ವೈದಿಶೇ ನಗರೇ ರಾಜಾ ನಾಮ್ನಾ ರುಕ್ಮಾಂಗದಃ ಕ್ಷಿತೌ ।
ಯಸ್ಯ ಸಂಧ್ಯಾವಲೀ ಭಾರ್ಯಾ ತವ ರೂಪೋಪಮಾ ಶುಭೇ ॥ ೪೭ ॥

ಯಸ್ಯಾಂ ಧರ್ಮಾಂಗದೋ ಜಾತೋ ಪಿತುರತ್ಯಧಿಕಃ ಸುತಃ ।
ದಶನಾಗಾಯುತಬಲಃ ಪ್ರತಾಪೇನ ರವಿರ್ಯಥಾ ॥ ೪೮ ॥

ಯಃ ಕ್ಷಾಂತ್ಯಾ ಧರಯಾ ತುಲ್ಯೋ ಗಾಂಭೀರ್ಯೇ ಸಾಗರೋಪಮಃ ।
ತೇಜಸಾ ವಹ್ನಿವದ್ದೀಪ್ತಃ ಕ್ರೋಧೇ ವೈವಸ್ವತೋ ಯಮಃ ॥ ೪೯ ॥

ತ್ಯಾಗೇ ವೈರೋಚನಿರ್ಯದ್ವದ್ಗತೌ ಹಿ ಪವನೋಪಮಃ ।
ಸೌಮ್ಯತ್ವೇ ಶಶಿತುಲ್ಯಸ್ತು ರೂಪವಾನ್ಮನ್ಮಥೋ ಯಥಾ ॥ ೫೦ ॥

ಜೀವಭಾರ್ಗವಯೋಸ್ತುಲ್ಯೋ ಯೋ ನೀತೌ ರಾಜನಂದನಃ ।
ಪಿತ್ರಾ ಭುಕ್ತಂ ಸಮಸ್ತೈಕಂ ಜಂಬೂದ್ವೀಪಂ ವರಾನನೇ ॥ ೫೧ ॥

---

೪೭. ಭೂಲೋಕದಲ್ಲಿ ವಿದಿಶಪಟ್ಟಣದಲ್ಲಿ ರುಕ್ಮಾಂಗದನೆಂಬ ರಾಜನಿರುವನು. ಅವನಿಗೆ ನಿನ್ನ ರೂಪಕ್ಕೆ ಸಮಾನವಾದ ಸೌಂದರ್ಯವುಳ್ಳ ಸಂಧ್ಯಾವಳೀ ಎಂಬ ಶುಭಪತ್ನಿಯಿರುವಳು.

೪೮-೪೯. ಆಕೆಯಲ್ಲಿ ತಂದೆಗಿಂತಲೂ ಅಧಿಕ ಗುಣಶಾಲಿಯಾದ ಧರ್ಮಾಂಗದನೆಂಬ ಮಗನು ಹುಟ್ಟಿರುವನು. ಅವನು ಹತ್ತು ಆನೆಗಳ ಬಲವುಳ್ಳವನು! ಸೂರ್ಯನಂತೆ ಪ್ರತಾಪಶಾಲಿಯು! ಸಹನೆಯಲ್ಲಿ ಭೂಮಿಗೆ ಸಮಾನನು! ಗಾಂಭೀರ್ಯದಲ್ಲಿ ಸಮುದ್ರಸದೃಶನು! ಅಗ್ನಿಯಂತೆ ಪ್ರಕಾಶಿಸುತ್ತಿರುವನು! ಕ್ರೋಧದಲ್ಲಿ ಸೂರ್ಯಪುತ್ರನಾದ ಯಮನಂತಿರುವನು!

೫೦. ತ್ಯಾಗಮಾಡುವ ವಿಷಯದಲ್ಲಿ ವಿಲೋಚನಪುತ್ರನಂತಿರುವನು! ವಾಯುವಿಗೆ ಸಮಾನವಾದ ಗತಿಯುಳ್ಳವನು! ಚಂದ್ರನಂತೆ ಸೌಮ್ಯನು! ಮನ್ಮಥನಂತೆ ರೂಪವಂತನು!

೫೧-೫೨. ಆ ರಾಜಕುಮಾರನು ನೀತಿಯಲ್ಲಿ ಶುಕ್ರ ಬೃಹಸ್ಪತಿಗಳಿಗೆ ಸಮಾನನು. ವರಾನನೇ! ತಂದೆಯಾದ ರುಕ್ಮಾಂಗದನು ಒಂದು ಜಂಬೂ

ಧರ್ಮಾಂಗದೇನ ದ್ವೀಪಾನಿ ಸಂಜಿತಾನ್ಯಪರಾಣ್ಯಪಿ ।
ಪಿತ್ರೋಸ್ತು ವ್ರೀಡಯಾ ಯೇನ ನ ಜ್ಞಾತಂ ಪ್ರಮದಾಸುಖಂ ॥ ೫೨ ॥

ಸ್ವಯಂ ಪ್ರಾಪ್ತಾಃ ಪರಿತ್ಯಕ್ತಾ ಯೇನ ಭಾರ್ಯಾಃ ಸಹಸ್ರಶಃ ।
ಯೋ ನ ವಾಕ್ಯಾದ್ವಿಚಲತೇ ಸಹೈವ ಹಿ ಪಿತುರ್ಗೃಹೇ ॥ ೫೩ ॥

ಯಸ್ಯ ವೈ ತ್ರೀಣಿ ಸುಭಗೇ ಮಾತೄಣಾಂ ಚಾರುಹಾಸಿನಿ ।
ಶತಾನಿ ಕನಕಾಭಾಸೇ ತ್ವವಿಶೇಷೇಣ ಪಶ್ಯತಿ ॥ ೫೪ ॥

ತಸ್ಯ ಧರ್ಮಪ್ರಧಾನಸ್ಯ ಪುತ್ರರತ್ನಾಂಚಿತಸ್ಯ ಚ ।
ಸಮೀಪಂ ಗಚ್ಛ ಚಾರ್ವಂಗಿ ಮಂದರೇ ಪರ್ವತೋತ್ತಮೇ ॥ ೫೫ ॥

ತತ್ರ ವತ್ಸ್ಯತಿ ರಾಜಾ ವೈ ತುರಗೇಣಾಪಿ ವಾಹಿತಃ ।
ತವ ಗೀತೇನ ಚಾರ್ವಂಗಿ ಮೋಹಿತೋऽಶ್ವಂ ವಿಹಾಯ ಚ ॥ ೫೬ ॥

---

ದ್ವೀಪವನ್ನು ಮಾತ್ರ ಅಖಂಡವಾಗಿ ಅನುಭವಿಸುತ್ತಿರುವನು. ಧರ್ಮಾಂಗದ ನಾದರೋ ಇತರ ದ್ವೀಪಗಳನ್ನೂ ಸಹ ಜಯಿಸಿರುವನು. ಅವನು ಲಜ್ಜೆಯಿಂದ ಸ್ತ್ರೀಸುಖವನ್ನೇ ಅರಿತಿಲ್ಲ.

೫೩. ಅವನು ತಾವಾಗಿ ಬಂದ ಸಾವಿರಾರು ಪತ್ನಿಯರನ್ನು ಬಿಟ್ಟಿರುವನು. ಮತ್ತು ಪಿತೃಗೃಹದಲ್ಲಿ ಅವರ ವಾಕ್ಯವನ್ನು ಎಳ್ಳಷ್ಟೂ ಮೀರದೆ ಅವರ ಜೊತೆಯಲ್ಲಿಯೇ ಇರುವನು.

೫೪. ದಿವ್ಯಹಾಸಯುಕ್ತಳು, ಸುವರ್ಣದಂತೆ ಹೊಳೆಯುತ್ತಿರುವವಳೂ ಆಗಿರುವ ಸುಭಗೆಯೇ! ಆ ಧರ್ಮಾಂಗದನು ಮುನ್ನೂರು ತಾಯಿಯರನ್ನು ಒಂದೇ ವಿಧವಾಗಿ ನೋಡುತ್ತಿರುವನು.

೫೫. ಚಾರ್ವಂಗಿಯೇ! ನೀನು ಧರ್ಮಪ್ರಧಾನನು, ಪುತ್ರರತ್ನ ಸಹಿತನೂ ಆಗಿರುವ ಆ ರುಕ್ಮಾಂಗದ ರಾಜನನ್ನು ಉತ್ತಮ ಮಂದರ ಪರ್ವತದಲ್ಲಿ ಸಂಧಿಸು.

೫೬-೫೮. ರಾಜನು ಅಲ್ಲಿಗೆ ಕುದುರೆಯಮೇಲೆ ಕುಳಿತುಕೊಂಡು ಬರುವನು. ಚಾರ್ವಂಗಿಯೇ! ನಿನ್ನ ಗಾನದಿಂದ ಮೋಹಿತನಾದ ಅವನು

ಅಧಿರುಹ್ಯ ಗಿರೇಃ ಪೃಷ್ಠಂ ಸ ಸಂಗಂ ಯಾಸ್ಯತಿ ತ್ವಯಾ ।
ತತ್ರ ದೇವಿ ತ್ವಯಾ ವಾಚ್ಯಂ ಮಿಲಿತ್ವಾ ಭೃಗು ಜಾತು ಹಿ ॥ ೫೭ ॥

ಅಹಂ ಭಾರ್ಯಾ ಭವಿಷ್ಯಾಮಿ ತವ ರಾಜನ್ನ ಸಂಶಯಃ ।
ಯದ್ಬ್ರವೀಮಿ ಹ್ಯಹಂ ನಾಥ ತತ್ಕಾರ್ಯಂ ಹಿ ತ್ವಯಾ ಧ್ರುವಂ ॥ ೫೮ ॥

ಮೋಹಿತಸ್ತವ ರೂಪೇಣ ತಥೈವ ಪ್ರತಿಪದ್ಯತೇ ।
ಯತಸ್ತಂ ಶಪಥೈರ್ಧೃತ್ವಾ ದಕ್ಷಿಣೇನ ಕರೇಣ ವೈ ॥ ೫೯ ॥

ವಾಚ್ಯಃ ಕತಿಪಯೈಃ ಸುಭ್ರು ದಿನೈರಪಗತೈಸ್ತ್ವಿತಿ ।
ಸುರತೇ ತವ ಚಾರ್ವಂಗಿ ಯದಾ ಮುಗ್ಧೋ ಹಿ ಲಕ್ಷ್ಯತೇ ॥ ೬೦ ॥

ತದಾ ಪ್ರಹಸ್ಯ ರಾಜ್ಞೋ ವೈ ಸ್ಮಾರಣೀಯಂ ಪುರಾವಚಃ ।
ಯಸ್ತ್ವಯಾ ಶಪಥೋ ರಾಜನ್ ಕೃತೋ ಮದ್ವಾಕ್ಯಪಾಲನೇ ॥ ೬೧ ॥

---

ಕುದುರೆಯನ್ನು ಬಿಟ್ಟು ಪರ್ವತದ ಪೃಷ್ಠಭಾಗಕ್ಕೆ ಬಂದು ನಿನ್ನ ಸಂಗವನ್ನು ಹೊಂದಲಿಚ್ಛಿಸುವನು. ದೇವಿಯೇ! ಆಗ ನೀನು ಅವನೊಡನೆ ಬೆರತು ‘ರಾಜನೇ! ನಾನು ನಿನಗೆ ಪತ್ನಿಯಾಗುವೆನು, ಸಂಶಯಪಡಬೇಡ ಆದರೆ ನಾಥಾ! ನಾನು ಹೇಳುವುದನ್ನು ನೀನು ಖಂಡಿತವಾಗಿಯೂ ನಡೆಸಬೇಕು’ ಎಂದು ಹೇಳಬೇಕು.

೫೯. ಅವನು ನಿನ್ನ ರೂಪಕ್ಕೆ ಮೋಹಪಟ್ಟು ಹಾಗೆಯೇ ಆಗಲೆಂದು ಹೇಳುವನು. ಕೂಡಲೇ ಬಲಗೈಯನ್ನು ಹಿಡಿದು ಅವನಿಂದ ಶಪಥ ಮಾಡಿಸಬೇಕು.

೬೦-೬೩. ಮನೋಹರಾಂಗಿಯೇ! ಕೆಲವು ದಿನಗಳು ಅವನ ಸಹವಾಸದಲ್ಲಿ ಕಳೆದ ಮೇಲೆ ನಿನ್ನ ಸಂಭೋಗಕ್ಕೆ ಅವನು ಮೋಹಪಟ್ಟಿರುವನೆಂದು ತಿಳಿದುಬಂದಾಗ ಹಾಸಪೂರ್ವಕವಾಗಿ ಹಿಂದಿನ ಮಾತನ್ನು ಜ್ಞಾಪಕ ತಂದುಕೊಡಬೇಕು.

ತತ್ಪಾಲಯ ಮಹೀಪಾಲ ಮನ್ಯೇಹಂ ಸಮಯಸ್ತ್ವಿತಿ ।
ಏವಮುಕ್ತೋ ತ್ವಯಾ ಮುಗ್ಧೋ ರಾಜಾ ವೈ ಸತ್ಯಗೌರವಾತ್ ॥ ೬೨ ॥

ಪಾಲಯಾಮಿ ನ ಸಂದೇಹೋ ಬ್ರೂಹಿ ಕಿಂ ತೇ ದದಾಮ್ಯಹಂ ।
ಏವಮುಕ್ತೇ ತು ವಚನೇ ತ್ವಯಾ ವಾಚ್ಯೋ ವರಾನನೇ ॥ ೬೩ ॥

ರುಕ್ಮಾಂಗದಮಹೀಪಾಲೋ ಧರ್ಮಾಂಗದಪಿತಾ ಶುಭಃ ।
ನೋಪವಾಸಸ್ತ್ವಯಾ ಕಾರ್ಯೋ ಜಾತು ವೈ ಹರಿವಾಸರೇ ॥ ೬೪ ॥

ಸುರತಸ್ರಂಸಕಾರೀ ಮೇ ಹ್ಯುಪವಾಸೋ ಭವೇತ್ಪ್ರಿಯ ।
ಸ್ವಮುಗ್ಧಾಂ ಯೌವ್ವನೋಪೇತಾಂ ಸ್ವಭಾರ್ಯಾಂ ಯೋ ನ ಸೇವತೇ ॥೬೫॥

---

' ರಾಜನೇ ! ನನ್ನ ಮಾತನ್ನು ನಡೆಸಿಕೊಡುತ್ತೇನೆಂದು ನೀನು ಹಿಂದೆ ಮಾಡಿರುವ ಶಪಥವನ್ನು ಈಗ ನಡೆಸಿಕೊಡು. ಅದಕ್ಕೆ ಇದೇ ಸುಸಮಯ ವೆಂದು ನಾನು ತಿಳಿದಿರುವೆನು ' ಎಂದು ಹೇಳು.

ನಿನ್ನ ಈ ಮಾತನ್ನು ಕೇಳಿ ಮುಗ್ಧನಾದ ರಾಜನು ಸತ್ಯವಚನದಲ್ಲಿ ಗೌರವದಿಂದ ' ನಿನ್ನ ಮಾತನ್ನು ಪಾಲಿಸುವೆನು ಸಂಶಯಪಡಬೇಡ, ನಿನಗೆ ಏನು ಕೊಡಲಿ ಹೇಳು ' ಎಂದು ಕೇಳುವನು. ವರಾನನೆಯೇ ! ನೀನು ಆ ಮಾತನ್ನು ಕೇಳಿ ಈ ರೀತಿಯಾಗಿ ಹೇಳಬೇಕು.

೬೪. ಧರ್ಮಾಂಗದಪಿತನು, ಶುಭಕರನೂ ಆದ ರುಕ್ಮಾಂಗದ ಭೂಪಾಲ ನಾದ ನೀನು ಹರಿದಿನದಲ್ಲಿ ಯಾವಾಗಲೂ ಉಪವಾಸಮಾಡಕೂಡದು.

೬೫-೬೬. ಪ್ರಿಯನೇ ! ಉಪವಾಸವು ಸಂಭೋಗಸುಖವನ್ನು ಹಾಳು ಮಾಡುವುದು.

ತನ್ನನ್ನೇ ಮೋಹಿಸಿ ನಂಬಿಕೊಂಡಿರುವ ಯುವತಿಯಾದ ತನ್ನ ಭಾರ್ಯೆ ಯನ್ನು ಯಾವನು ಸಂಭೋಗಾದಿಗಳಿಂದ ಸುಖಪಡಿಸುವುದಿಲ್ಲವೋ ಮತ್ತು ಇತರರನ್ನು ಕಾಮಿಸುತ್ತಾ ದುರಾಚಾರಿಯಾಗುವನೋ ಅಂತಹವನು ನಿಜ ವಾಗಿಯೂ ನರಕಕ್ಕೆ ಹೋಗುವನು.

ಪರಾಪೇಕ್ಷೀ ದುರಾಚಾರಃ ಸ ಯಾತಿ ನರಕಂ ಧ್ರುವಂ ।
ತ್ರಿರಾತ್ರಮಪರಾದ್ಧಾಹಂ ತ್ವಯಾ ಭೂಪ ಉಪೋಷಣಾತ್ ॥ ೬೬ ॥

ನಾಹಂ ನಿಮೇಷಮಪ್ಯೇಕಂ ಸ್ಥಾತುಂ ಶಕ್ತಾ ತ್ವಯಾ ವಿನಾ ।
ಶ್ರಾದ್ಧಕಾಲೇ ತು ಸಂಪ್ರಾಪ್ತೇ ಉಪಾವಿಷ್ಟೈರ್ದ್ವಿಜೈಃ ಕಿಲ ॥ ೬೭ ॥

ಯಾಚತೇ ಸಂಗಮಂ ಭಾರ್ಯಾ ಯದಿ ಭೋಗ್ಯಾ ತದೈವ ಸಾ ।
ಏವಂ ಸಂಬೋಧ್ಯಮಾನೋಽಪಿ ಯದಾ ರಾಜಾ ವಚಸ್ತವ ॥ ೬೮ ॥

ನ ಕರಿಷ್ಯತಿ ಚಾರ್ವಂಗಿ ತದಾ ವಾಚ್ಯಂ ಪರಂ ವಚಃ ।
ಯದಿ ನ ತ್ಯಜಸೇ ರಾಜನ್ನುಪವಾಸಂ ಹರೇರ್ದಿನೇ ॥ ೬೯ ॥

---

ದೊರೆಯೇ! ನೀನು ಉಪವಾಸಮಾಡುವುದರಿಂದ ಮೂರು ರಾತ್ರಿಗಳು ನಿನ್ನ ಸಂಭೋಗವಿಲ್ಲದಂತಾಗುವುದು.

೬೭-೭೦. ನಾನು ಒಂದು ನಿಮಿಷವಾದರೂ ನಿನ್ನನ್ನು ಬಿಟ್ಟಿರಲಾರೆನು. ಶ್ರಾದ್ಧಕಾಲವು ಬಂದಾಗ ಅಲ್ಲಿ ನಿಮಂತ್ರಿತರಾಗಿ ಕುಳಿತಿದ್ದರೂ ತಮ್ಮ ಪತ್ನಿಯು ಸಂಭೋಗವನ್ನು ಬೇಡಿದರೆ ಆಗಲೇ ಆ ದ್ವಿಜರು, ಅವರ ಇಷ್ಟವನ್ನು ನೆರವೇರಿಸುವುದು ಧರ್ಮವು ' ಇತ್ಯಾದಿಯಾಗಿ ರಾಜನಿಗೆ ಹೇಳಬೇಕು.

ಈ ರೀತಿಯಾಗಿ ನೀನು ಹೇಳಿದುದನ್ನು ಕೇಳಿಯೂ ಸಹ ರಾಜನು ನಿನ್ನ ಮಾತನ್ನು ನಡೆಯಿಸದಿದ್ದರೆ ಆಗ ನೀನು ಇನ್ನೊಂದು ಮಾತನ್ನು ಹೇಳಬೇಕು.

' ರಾಜನೇ! ಹರಿದಿನದಲ್ಲಿ ನೀನು ಉಪವಾಸವನ್ನು ಬಿಡದಿದ್ದರೆ ರಾಜೇಂದ್ರನಾದ ನಿನ್ನ ಹಸ್ತದಿಂದಲೇ ನಿನ್ನ ಮಗನಾದ ಧರ್ಮಾಂಗದನ

ಸ್ವಹಸ್ತೇನ ಶಿರಶ್ಛಿತ್ವಾ ಸ್ವಪುತ್ರಸ್ಯ ವರಾಸಿನಾ ।
ಧರ್ಮಾಂಗದಸ್ಯ ರಾಜೇಂದ್ರ ಮಮೋತ್ಸಂಗೇ ಕ್ಷಿಪ ಸ್ವಯಂ ॥ ೭೦ ॥

ಯದ್ಯೇತನ್ಮತ್ಪ್ರಿಯಂ ತ್ವಂ ಹಿ ನ ಕರೋಷಿ ಮಹೀಪತೇ ।
ಧರ್ಮಕ್ಷೀಣೋ ಭವಾನ್ ಗಂತಾ ನರಕೇ ನಾತ್ರ ಸಂಶಯಃ ॥ ೭೧ ॥

ಶ್ರುತ್ವಾ ತ್ವದೀಯಂ ವಚನಂ ವರಾಂಗನೇ
ನ ಹಿಂಸ್ಯತೇ ಪ್ರಾಣಸಮಂ ಚ ಪುತ್ರಂ ।
ಸಂಗೃಹ್ಯ ವಾಕ್ಯಂ ವಸುಧಾಮರಾಣಾಂ
ಸಂಭೋಕ್ಷ್ಯತೇ ಮಾಧವವಾಸರೇಽಸೌ ॥ ೭೨ ॥

ತತೋ ಜನೋ ಯಾಸ್ಯತಿ ಪೂರ್ವವಚ್ಚ
ಯಮಾಂತಿಕಂ ಕಿಂಕರಪಾಶಬದ್ಧಃ ।
ಲಿಪಿಪ್ರಮಾಣಂ ನರಕಾಧಿವಾಸೀ
ಭವಿಷ್ಯತೇ ಸಾಧುಕೃತಂ ತ್ವಯಾ ಹಿ ॥ ೭೩ ॥

---

ಶಿರಸ್ಸನ್ನು ಉತ್ತಮಖಡ್ಗದಿಂದ ಕತ್ತರಿಸಿ ತಂದು ನೀನೇ ನನ್ನ ತೊಡೆಯ ಮೇಲಿಡಬೇಕು.

೭೧. ಭೂಪತಿಯೇ! ನನಗೆ ಪ್ರಿಯವಾದ ಈ ಕಾರ್ಯವನ್ನು ನೀನು ಮಾಡದಿದ್ದರೆ ಧರ್ಮಚ್ಯುತನಾಗಿ ನರಕಕ್ಕೆ ಹೋಗುವೆ ಸಂದೇಹವಿಲ್ಲ.'

೭೨. ವರಾಂಗನೆಯೇ! ನಿನ್ನ ಈ ಮಾತನ್ನು ಕೇಳಿ ರಾಜನು 'ಪುತ್ರನು ತನ್ನ ಪ್ರಾಣಕ್ಕೆ ಸಮನು. ಅವನನ್ನು ಹಿಂಸಿಸಬಾರದು' ಎಂಬ ಭೂದೇವತೆಗಳ ವಾಕ್ಯವನ್ನು ಗ್ರಹಿಸಿ ಹರಿದಿನದಲ್ಲಿ ಭೋಜನಮಾಡುವನು.

೭೩. ಅನಂತರ ಪ್ರಜೆಗಳೂ ಏಕಾದಶೀವ್ರತವನ್ನು ಬಿಡುವರು. ಎಂದಿನಂತೆ ಯಮದೂತರ ಪಾಶದಿಂದ ಕಟ್ಟಲ್ಪಟ್ಟವರಾಗಿ ಯಮನ ಬಳಿಗೆ ಹೋಗುವರು. ಬಳಿಕ ಅವನ ಲಿಪಿಯ ಪ್ರಮಾಣಾನುಸಾರವಾಗಿ ನರಕವಾಸಿಗಳಾಗುವರು. ಆಗ ನೀನು ಕೃತಕೃತ್ಯಳಾಗುವೆ.

**ಅಥ ಯದಿ ನಿಹಂತಿ ತನಯಂ ರಾಜಾ ಸತ್ಯೇನ ಸಂಯುತಃ ಶ್ರೀಮಾ೯ ।**
**ನಿಶ್ಶೇಷಾಮರಪೂಜ್ಯಂ ವ್ರಜತಿ ಪದಂ ಪದ್ಮನಾಭಸ್ಯ ॥ ೭೪ ॥**

**ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ**
**ಮೋಹಿನೀಂ ಪ್ರತಿ ಬ್ರಹ್ಮವಾಕ್ಯಂ ನಾಮ**
**ಸಪ್ತಮೋಽಧ್ಯಾಯಃ**

---

೭೪. ಒಂದು ವೇಳೆ ರಾಜನು ಮಗನನ್ನೇ ಸಂಹರಿಸಿದರೆ ಸತ್ಯದಿಂದ ಯುಕ್ತನಾದ ಆ ಶ್ರೀಮಂತನು ಸಮಸ್ತ ದೇವತೆಗಳಿಗೂ ಪೂಜ್ಯನಾಗಿ ಪದ್ಮನಾಭನ ಸ್ಥಾನವನ್ನು ಪಡೆಯುವನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನಿಯನ್ನು ಕುರಿತು
ಬ್ರಹ್ಮನು ಹೇಳಿದ ಮಾತುಗಳನ್ನು ವರ್ಣಿಸುವ
ಏಳನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಯಮನ ವಿಲಾಪನೆಯನ್ನು ಕೇಳಿ ಬ್ರಹ್ಮನು, ಹರಿಯು ನನಗೂ ಸಹ ಮೇಲ್ಪಟ್ಟವನಾದುದರಿಂದ ಅವನ ಭಕ್ತರಿಗೆ ಪ್ರತೀಕಾರ ಮಾಡಿ ನಿನಗೊದಗಿರುವ ವಿಪತ್ತನ್ನು ಪರಿಹರಿಸಲಾಗುವುದಿಲ್ಲವೆಂಬು ಹಿಂದಿನ ಅಧ್ಯಾಯದಲ್ಲಿ ಹೇಳಿದ ಬ್ರಹ್ಮನ ಮಾತನ್ನು ಕೇಳಿ ಯಮನು ಪುನಃ ಪ್ರಾರ್ಥಿಸಲು ಆಗ ಬ್ರಹ್ಮನು ಲೋಕೋತ್ತರಸುಂದರಿಯಾದ ಮೋಹಿನಿಯನ್ನು ಸೃಷ್ಟಿಸಿ ಅವಳಿಗೆ ಮುಂದೆ ಮಾಡಬೇಕಾದ ಕರ್ತವ್ಯವನ್ನು ಈ ಅಧ್ಯಾಯದಲ್ಲಿ ಉಪದೇಶಿಸಿರುವನು.

## ಅಷ್ಟಮೋಽಧ್ಯಾಯಃ

ಸೌತಿರುವಾಚ

ಸಾ ಶ್ರುತ್ವಾ ಬ್ರಹ್ಮಣೋ ವಾಕ್ಯಂ ನಾರೀ ಕಮಲಲೋಚನಾ ।
ಉವಾಚ ನಾಮ ಮೇ ದೇಹಿ ಯೇನ ಗಚ್ಛಾಮಿ ಮಂದರಂ ॥ ೧ ॥

ಪಿತ್ರಾ ನಾಮ ಪ್ರಕರ್ತವ್ಯಮಪತ್ಯಾನಾಂ ಜಗತ್ಪತೇ ।
ನಾಮ ಪಾಪಹರಂ ಪ್ರೋಕ್ತಂ ತತ್ಕುರುಷ್ವ ಕುಶಧ್ವಜ ॥ ೨ ॥

ಬ್ರಹ್ಮೋವಾಚ

ಯಸ್ಮಾದಿದಂ ಜಗತ್ಸರ್ವಂ ತ್ವಯಾ ಸುಂದರಿ ಮೋಹಿತಂ ।
ಮೋಹಿನೀ ನಾಮ ತೇ ದೇವಿ ಸಗುಣಂ ಹಿ ಭವಿಷ್ಯತಿ ॥ ೩ ॥

---

### ಎಂಟನೆಯ ಅಧ್ಯಾಯ

ಸೌತಿಯು ಹೇಳಿದನು—ಪದ್ಮನಯನಳಾದ ಆ ನಾರಿಯು ಬ್ರಹ್ಮನ ಮಾತನ್ನು ಕೇಳಿ ' ನನಗೆ ನಾಮಕರಣಮಾಡು. ಆ ಹೆಸರನ್ನಿಟ್ಟುಕೊಂಡು ಮಂದರಪರ್ವತಕ್ಕೆ ಹೋಗುವೆನು ' ಎಂದು ಬ್ರಹ್ಮನಿಗೆ ಹೇಳಿದಳು.

೨. ಜಗನ್ನಾಥನೇ! ಮಕ್ಕಳಿಗೆ ತಂದೆಯೇ ನಾಮಕರಣ ಮಾಡ ಬೇಕು. ಕುಶಧ್ವಜನೇ! ನಾಮಧೇಯವು ಪಾಪನಾಶಕವೆಂದು ವಿಹಿತವಾಗಿದೆ. ಅಂತಹ ನಾಮವನ್ನು ತಂದೆಯಾದ ನೀನು ನನಗೆ ದಯೆಪಾಲಿಸು.

೩. ಬ್ರಹ್ಮನು ಹೇಳಿದನು—ಸುಂದರೀಮಣಿಯೇ! ನಿನ್ನಿಂದ ಸಕಲ ಜಗತ್ತೂ ಮೋಹಗೊಂಡಿದೆಯಾದಕಾರಣ ' ಮೋಹಿನೀ ' ಎಂಬ ಹೆಸರು ನಿನಗೆ ಅನ್ವರ್ಥವಾಗುವುದು.

ದಶಾವಸ್ಥಾಗತಃ ಸಮ್ಯಕ್ ದರ್ಶನಾತ್ತೇ ಭವಿಷ್ಯತಿ ।
ಯದಿ ಪ್ರಾಪ್ನೋತಿ ವೈ ಸುಭ್ರು ತ್ವತ್ಸಂಪರ್ಕಂ ಸುಖಾವಹಂ ॥ ೪ ॥

ಏವಮುಕ್ತಾ ವರಾರೋಹಾ ಪ್ರಣಮ್ಯ ಕಮಲಾಸನಂ ।
ವೀಕ್ಷಮಾಣಾಮರೈರ್ಮಾರ್ಗೇ ಪ್ರತಸ್ಥೇ ಮಂದರಾಚಲೇ ॥ ೫ ॥

ತೃತೀಯೇನ ಮುಹೂರ್ತೇನ ಸಂಪ್ರಾಪ್ತಾ ಗಿರಿಮಸ್ತಕಂ ।
ಯಸ್ಯ ಸಂವೇಷ್ಟನೇ ನಾಗೋ ವಾಸುಕಿರ್ನ ಹಿ ಪೂರ್ಯತೇ ॥ ೬ ॥

ಯೋ ಧೃತೋ ಹರಿಣಾ ಪೂರ್ವಂ ಮಥಿತೋ ದೇವದಾನವೈಃ ।
ಷಲ್ಲಕ್ಷಯೋಜನಃ ಸಿಂಧುರ್ಯಸ್ಯಾಸೌ ಗಹ್ವರೋ ಭವೇತ್ ॥ ೭ ॥

ಕೂರ್ಮದೇಹೇನ ಸಂಸ್ಪೃಕ್ತೋ ಯೋ ನ ಭಿನ್ನೋ ಗಿರಿರ್ಮಹಾನ್ ।
ಪತತಾ ಯೇನ ರಾಜೇಂದ್ರ ಸಿಂಧೋರ್ಗುಹ್ಯಂ ಪ್ರದರ್ಶಿತಂ ॥ ೮ ॥

---

೪. ಸುಭ್ರೂ! ಸಾಯುವ ಸ್ಥಿತಿಯಲ್ಲಿರುವವನೂ ಸಹ ನಿನ್ನನ್ನು ನೋಡಿದರೆ ಬದುಕುವನು. ನಿನ್ನ ಸಂಪರ್ಕವನ್ನು ಹೊಂದಿದವನು ಸುಖಭಾಗಿಯಾಗುವನು.

೫. ಈ ರೀತಿ ಬ್ರಹ್ಮನು ಹೇಳಿದುದನ್ನು ಕೇಳಿ ಮೋಹಿನಿಯು ಬ್ರಹ್ಮನಿಗೆ ನಮಸ್ಕಾರ ಮಾಡಿ ದೇವತೆಗಳು ನೋಡುತ್ತಿರುವಾಗಲೇ ಮಂದರ ಪರ್ವತದ ಮಾರ್ಗದಲ್ಲಿ ಹೊರಟಳು.

೬. ಮೂರು ಮುಹೂರ್ತದೊಳಗೆ ಮಂದರಪರ್ವತದ ಶಿಖರವನ್ನು ಸೇರಿದಳು. ವಾಸುಕಿ ಎಂಬ ಮಹಾಸರ್ಪವೂ ಸಹ ಆ ಪರ್ವತವನ್ನು ಸುತ್ತಲು ಸಾಕಾಗುವುದಿಲ್ಲ ಎಂದರೆ ಆ ಪರ್ವತದ ಸುತ್ತಳತೆಯು ದೊಡ್ಡದೆಂದು ಭಾವ.

೭. ಆ ಪರ್ವತವನ್ನು ಪೂರ್ವದಲ್ಲಿ ಹರಿಯು ಧರಿಸಿದನು. ದೇವ ದಾನವರು ಸಮುದ್ರವನ್ನು ಮಥನಮಾಡಲು ಅದನ್ನು ಕಡಗೋಲಾಗಿ ಉಪಯೋಗಿಸಿದರು. ಆರು ಲಕ್ಷಯೋಜನ ವಿಸ್ತೀರ್ಣವುಳ್ಳ ಸಮುದ್ರವು ಆ ಪರ್ವತದ ಗುಹೆಯಾಗಿದೆ.

೮. ರಾಜೇಂದ್ರನೇ! ಕೂರ್ಮನ ಬೆನ್ನಿನಮೇಲಿಟ್ಟು ಘರ್ಷಿಸಲ್ಪಟ್ಟರೂ ಆ ಮಹಾಪರ್ವತವು ಭೇದಿಸಲ್ಪಡಲಿಲ್ಲ. ಅದರ ಪತನದಿಂದ ಸಮುದ್ರದ ರಹಸ್ಯವು ಬಯಲಾಯಿತು.

ಗತಂ ಬ್ರಹ್ಮಾಂಡಮಾರ್ಗೇಣ ಪಯೋ ಯಸ್ಮಾದ್ಗಿರೇರ್ದ್ವಿಜಾಃ ।
ಕೂರ್ಮಾಸ್ಥಿಘರ್ಷತಾ ಯೇನ ಪಾವಕೋ ಜನಿತೋ ಮಹಾನ್ ॥ ೯ ॥

ಯಸ್ಮಿನ್ ಸಂವಸತೇ ದೇವಃ ಸಹ ಭೂತೈರ್ದಿಗಂಬರಃ ।
ನ ದೇವೈರ್ದಾನವೈರ್ವಾಪಿ ಧೃಷ್ಯೋ ಯೋ ಹಿ ದ್ವಿಜೋತ್ತಮಾಃ ॥ ೧೦ ॥

ದಶವರ್ಷಸಹಸ್ರಾಖ್ಯೇ ಕಾಲೇ ಮಹತಿ ಗಚ್ಛತಿ ।
ಕೇಯೂರಘರ್ಷಣಂ ಯೇನ ಕೃತಂ ದೇವಸ್ಯ ಚಕ್ರಿಣಃ ॥ ೧೧ ॥

ರತ್ನಾನಾಂ ಮಂದಿರಂ ಹ್ಯೇಷ ಬಹುಧಾತುಸಮನ್ವಿತಃ ॥ ೧೨ ॥

ಕ್ರೀಡಾವಿಹಾರೋಽಪಿ ದಿವೌಕಸಾಂ ಯ-
ಸ್ತಪಸ್ವಿನಾಂ ಯಸ್ತಪಸೋಽಪಿ ಹೇತುಃ ।
ಸುರಾಂಗನಾನಾಂ ರತಿವರ್ಧನೋ ಯೋ
ರತ್ನೌಷಧೀನಾಂ ಪ್ರಭವೋ ಗಿರಿರ್ಮಹಾನ್ ॥ ೧೩ ॥

---

೯. ಆ ಗಿರಿಯಿಂದ ಬ್ರಹ್ಮಾಂಡ ಮಾರ್ಗವಾಗಿ ನೀರು ಹೊರಡಿಸಲ್ಪಟ್ಟಿತು. ಆ ಪರ್ವತಕ್ಕೆ ಕೂರ್ಮನ ಬೆನ್ನುಚಿಪ್ಪಿನ ಘರ್ಷಣೆಯಾಗಿ ಮಹತ್ತಾದ ಅಗ್ನಿಯು ಹುಟ್ಟಿತು.

೧೦-೧೧. ದಿಗಂಬರನಾದ ಶಿವನು ಭೂತಗಳೊಡನೆ ಆ ಪರ್ವತದಲ್ಲಿ ವಾಸವಾಗಿರುವನು. ಅದನ್ನು ಅಲುಗಾಡಿಸಲು ದೇವದಾನವರು ಹತ್ತುಸಾವಿರ ವರ್ಷಗಳು ಯತ್ನಮಾಡಿದರೂ ಸಾಧ್ಯವಾಗಲಿಲ್ಲ. ಆ ಪರ್ವತದಿಂದ ಚಕ್ರಧಾರಿಯಾದ ದೇವನ ಬಾಹ್ವಾಭರಣಗಳು ಘರ್ಷಿಸಲ್ಪಟ್ಟವು.

೧೨. ಅದು ರತ್ನಗಳ ಆವಾಸಸ್ಥಾನವು ಮತ್ತು ಬಹುಧಾತುಗಳುಳ್ಳುದೂ ಆಗಿದೆ.

೧೩. ಆ ಮಹಾಪರ್ವತವು ದೇವತೆಗಳಿಗೆ ಕ್ರೀಡಾವಿಹಾರಸ್ಥಾನವಾದರೂ ಋಷಿಗಳ ತಪಸ್ಸಿಗೂ ಆಶ್ರಯವಾಗಿದೆ. ಮತ್ತು ದೇವಸ್ತ್ರೀಯರಿಗೆ ರತಿವರ್ಧಕವೂ, ರತ್ನ ಮತ್ತು ಔಷಧಿಗಳಿಗೆ ಉತ್ಪತ್ತಿಸ್ಥಾನವೂ ಆಗಿದೆ.

ಸಹಸ್ರಮೇಕಂ ತ್ವಯುತಂ ಚ ಮೂಲೇ
ತತ್ಸಂಖ್ಯಯಾ ವಿಸ್ತರತಾಂ ಗತೋಽಸೌ ।
ದೈರ್ಘ್ಯೇಣ ತಾವಂತಿ ಹಿ ಯೋಜನಾನಿ
ತ್ರೈಲೋಕ್ಯಪಟ್ಟೇವ ಸಮುಚ್ಛ್ರಿತೋಽಸೌ ॥ ೧೪ ॥

ಸಕಾಂಚನೈಃ ರತ್ನಮಯೈಶ್ಚ ಶೃಂಗೈಃ
ಪ್ರಕಾಶಯನ್ ಭೂಮಿತಲಂ ವಿಯಚ್ಚ ।
ಯಸ್ಮಿನ್ ಗತಃ ಕಶ್ಯಪನಂದನೋ ವೈ
ವಿಪಶ್ಮಿತಾಮೇತಿ ವಿನಷ್ಟತೇಜಾಃ ॥ ೧೫ ॥

ಕಾಂಚನಾಕಾರಭೂತಾಂಗಂ ಸಂಪ್ರಾಪ್ತಾ ಕಾಂಚನಪ್ರಭಾ ।
ಸೂರ್ಯತೇಜೋನಿದಂತಾರಂ ಮಂದರಂ ತೇಜಸಾ ಸ್ವಯಂ ॥ ೧೬ ॥

ಕುರ್ವಂತೀ ನೃಪಕಾಮಾರ್ಥಮುಪವಿಷ್ಟಾ ಶಿಲಾತಲೇ ।
ನೀಲಕಾಂತಿಮಯೇ ದಿವ್ಯೇ ಸಪ್ತಯೋಜನವಿಸ್ತೃತೇ ॥ ೧೭ ॥

---

೧೪-೧೫. ಅದರ ಬುಡವು ಹನ್ನೊಂದುಸಾವಿರಯೋಜನ ವಿಸ್ತಾರವುಳ್ಳದು. ಅಷ್ಟೇ ಯೋಜನಗಳ ಉದ್ದವಾಗಿರುವುದು. ಉನ್ನತವಾದ, ಸುವರ್ಣ ಮತ್ತು ರತ್ನಮಯಶಿಖರಗಳಿಂದ, ಭೂಮಿ ಅಂತರಿಕ್ಷಗಳನ್ನು ಪ್ರಕಾಶಗೊಳಿಸುತ್ತಿರುವ ಈ ಮಂದರಪರ್ವತವು ತ್ರೈಲೋಕ್ಯದ ನಡುಕಟ್ಟಿನಂತಿದೆ. ಸೂರ್ಯನೂ ಸಹ ಆ ಪರ್ವತದ ಅನೇಕಭಾಗಗಳಲ್ಲಿ ನಷ್ಟತೇಜಸ್ಕನಾಗಿ ಪ್ರವೇಶಿಸಿ ಕಿರಣಪ್ರಸಾರಮಾಡದಂತಿರುವನು.

೧೬. ಸುವರ್ಣಾಕಾರವಾದ ಅವಯವಗಳುಳ್ಳ, ತನ್ನ ತೇಜಸ್ಸಿನಿಂದ ಸೂರ್ಯತೇಜಸ್ಸನ್ನೇ ನಾಶಪಡಿಸುತ್ತಿರುವ ಅಂತಹ ಮಂದರಪರ್ವತಕ್ಕೆ ಬಂಗಾರದಂತೆ ಹೊಳೆಯುತ್ತಿರುವ ಮೋಹಿನಿಯು ಬಂದಳು.

೧೭. ಅಲ್ಲಿ ನೀಲಮಣಿಯಂತೆ ಕಾಂತಿಮಯವೂ, ಮನೋಹರವು, ಏಳುಯೋಜನ ವಿಸ್ತಾರವುಳ್ಳದೂ ಆಗಿರುವ ಬಂಡೆಯ ಮೇಲೆ ದೊರೆಯು ಕಾಮಿಸುವುದಕ್ಕನುಕೂಲವಾದ ಕಾರ್ಯವನ್ನು ಮಾಡುತ್ತಾ ಕುಳಿತಳು.

ತಸ್ಯಾಂ ಶಿಲಾಯಾಂ ರಾಜೇಂದ್ರ ಲಿಂಗಂ ತಿಷ್ಠತಿ ಕೌಲಿಶಂ |
ದಶಹಸ್ತಪ್ರಮಾಣಂ ಹಿ ವಿಸ್ತರಾದೂರ್ಧ್ವಸಂಖ್ಯಯಾ ॥ ೧೮ ॥

ವೃಷಲಿಂಗೇತಿ ವಿಖ್ಯಾತಂ ಪ್ರಾಸಾದಾಭ್ರಸಮಂ ಪರಂ |
ತಸ್ಮಿನ್ ಬಾಲಾ ದ್ವಿಜಶ್ರೇಷ್ಠಾ ಶ್ಚಕ್ರೇ ಸಂಗೀತಮುತ್ತಮಂ ॥ ೧೯ ॥

ತಂತ್ರೀತಾಲಸಮಾಯುಕ್ತಂ ಕ್ಲಮಹಾನಿಕರಂ ಪರಂ |
ಸಮೀಪವರ್ತಿನೀ ತಸ್ಯ ಭೂತ್ವಾ ಲಿಂಗಸ್ಯ ಭಾಮಿನೀ ॥ ೨೦ ॥

ಮೂರ್ಛನಾತಾಲಸಹಿತಂ ಗಾಂಧಾರಧ್ವನಿಸಂಯುತಂ |
ತಸ್ಮಿನ್ ಪ್ರವೃತ್ತೇ ರಾಜೇಂದ್ರ ಗೀತೇ ಮನ್ಮಥವರ್ಧನೇ ॥ ೨೧ ॥

ಬಭೂವ ಸ್ಥಾವರಾಣಾಂ ಹಿ ಸ್ಪೃಹಾ ತಸ್ಮಿನ್ ಮುನೀಶ್ವರಾಃ |
ನ ಚ ದೈವಂ ನ ಚಾದೈವಂ ಗೀತಂ ತಾದೃಗ್ಬಭೂವ ಹ ॥ ೨೨ ॥
ಮೋಹಿನೀ ಮುಖನಿರ್ಗೀತಂ ಗೀತಂ ಸತ್ವವಿಮೋಹನಂ ॥ ೨೩ ॥

---

೧೮-೨೨. ಆ ಶಿಲೆಯಲ್ಲಿ ಹತ್ತು ಗೇಣು ಎತ್ತರವಾದ, ಪ್ರಾಸಾದಾಭ್ರ ಸಮಾನವಾದ, ವೃಷಲಿಂಗವೆಂದು ಪ್ರಸಿದ್ಧವಾದ, ಉತ್ತಮ ವಜ್ರಮಯವಾದ ರಾಜೇಂದ್ರಲಿಂಗವಿದೆ. ಅದರ ಸನ್ನಿಧಾನದಲ್ಲಿ ಆ ಮೋಹಿನಿಯು ನಿಂತು ಶ್ರಮ ಪರಿಹಾರಕವಾದ, ತಂತ್ರೀತಾಳಗಳಿಂದ ಕೂಡಿದ, ಮೂರ್ಛನೆ ತಾಳಗಳಿಗನು ಸಾರವಾಗಿ, ಗಾಂಧಾರಧ್ವನಿಯಿಂದ ಉತ್ತಮಸಂಗೀತವನ್ನು ಹಾಡಿದಳು. ಕಾಮವರ್ಧಕವಾದ, ಆ ರಾಜೇಂದ್ರಗೀತೆಯನ್ನು ಹಾಡುತ್ತಿರಲು ಅದರಲ್ಲಿ ಸ್ಥಾವರವಸ್ತುಗಳಿಗೂ ಸಹ ಆಶೆಯುಂಟಾಯಿತು. ಆ ಗೀತೆಯು ದೈವ ಅದೈವ ವಿಲಕ್ಷಣವಾಗಿದ್ದಿತು. ಮೋಹಿನಿಯು ಹಾಡಿದ ಆ ಗೀತೆಯು ಪ್ರಾಣಿಸಾಮಾನ್ಯ ವನ್ನೂ ಮೋಹಪಡಿಸುತ್ತಿತ್ತು.

ಶ್ರುತ್ವೈವ ಗೀತಂ ಹಿ ದಿಗಂಬರಸ್ತು
ತೇನೈವ ರೂಪೇಣ ವರಾಂಗನಾಯಾಃ ।
ಕಾಮಾತುರೋ ಭೋಕ್ತುಮನಾಶ್ಚ ಚಾಲ
ತಾಂ ಮೋಹಿನೀಂ ಪಾರ್ವತಿದೃಷ್ಟಿಲಜ್ಜಃ ॥ ೨೯ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮಂದರ-
ವರ್ಣನಂ ನಾಮಾಷ್ಟಮೋಽಧ್ಯಾಯಃ

---

೨೯. ಹೆಚ್ಚೇನು! ದಿಗಂಬರನಾದ ಈಶ್ವರನು ವರಾಂಗನೆಯಾದ ಮೋಹಿನಿಯ ಗಾನವನ್ನು ಅದೇ ರೂಪದಿಂದ ಕೇಳಿ ಕಾಮಾತುರನಾಗಿ, ಪಾರ್ವತೀದೇವಿಯು ನೋಡಿಯಾಳು ಎಂದು ಲಜ್ಜೆಗೊಂಡು, ಆ ಮೋಹಿನಿಯನ್ನು ಭೋಗಿಸಬೇಕೆಂಬ ಅಭಿಲಾಷೆಯಿಂದ ಚಲಿಸಿದನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮಂದರಪರ್ವತವರ್ಣನೆ
ಯೆಂಬ ಎಂಟನೆಯ ಅಧ್ಯಾಯವು ಮುಗಿದುದು.

# ನವಮೋಽಧ್ಯಾಯಃ

---

**ಸೌತಿರುವಾಚ**

ರುಕ್ಮಾಂಗದಸ್ತು ರಾಜೇಂದ್ರೋ ಭುಕ್ತ್ವಾ ಭೋಗಾಂಸ್ತು ಮಾನುಷಾನ್ ।
ಸಂಪೂಜ್ಯ ಬಹುಶೋ ದೇವಂ ಪೀತಾಂಬರಧರಂ ಹರಿಂ ॥ ೧ ॥

ದತ್ವಾ ಮೂರ್ಧ್ನಿ ಪದಂ ವಿಪ್ರಾಃ ಶತ್ರೂಣಾಂ ರಣಶಾಲಿನಾಂ ।
ಕೃತ್ವಾ ಶೂನ್ಯಂ ಯಮಪಥಂ ಜಿತ್ವಾ ವೈವಸ್ವತಂ ಯಮಂ ॥ ೨ ॥

ವೈಕುಂಠಸ್ಯ ತು ಪಂಥಾನಂ ಸಂಪೂರ್ಣಂ ಮಾನವೈಃ ಕೃತಂ ।
ಆಹೂಯ ತನಯಂ ಕಾಲೇ ಧರ್ಮಾಂಗದಮಭಾಷತ ॥ ೩ ॥

ಏತಾಂ ವಸುಮತೀಂ ಪುತ್ರ ವಸುಪೂರ್ಣಾಂ ಸಮಂತತಃ ।
ಪರಿಪಾಲಯ ವೀರ್ಯೇಣ ಸ್ವಧರ್ಮೇ ಕೃತನಿಶ್ಚಯಃ ॥ ೪ ॥

---

## ಒಂಭತ್ತನೆಯ ಅಧ್ಯಾಯ

೧-೩. ಸೌತಿಯು ಹೇಳಿದನು :—ಶೌನಕಾದಿ ಬ್ರಾಹ್ಮಣರೇ ! ರುಕ್ಮಾಂಗದ ರಾಜೇಂದ್ರನು ಮಾನುಷಭೋಗಗಳನ್ನನುಭವಿಸಿ ಪೀತಾಂಬರಧಾರಿಯಾದ ಹರಿದೇವನನ್ನು ಬಹುವಿಧವಾಗಿ ಪೂಜಿಸಿ, ಯುದ್ಧಪರರಾದ ಶತ್ರುಗಳ ಶಿರಸ್ಸಿನ ಮೇಲೆ ಕಾಲನ್ನಿಟ್ಟು, ಯಮಮಾರ್ಗವನ್ನು ಬರಿದನ್ನಾಗಿ ಮಾಡಿ, ಸೂರ್ಯಪುತ್ರನಾದ ಯಮನನ್ನು ಜಯಿಸಿ ವೈಕುಂಠಮಾರ್ಗವನ್ನು ಮನುಷ್ಯರಿಂದ ತುಂಬಿದನು. ಹೀಗೆ ತನಗೆ ವಯಸ್ಸಾದ ಮೇಲೆ ಯುಕ್ತಕಾಲದಲ್ಲಿ ಮಗನಾದ ಧರ್ಮಾಂಗದನನ್ನು ಕರೆದು ಅವನಿಗೆ ಹೀಗೆ ಹೇಳಿದನು.

೪. ವತ್ಸ ! ಎಲ್ಲಾ ಕಡೆಯಲ್ಲಿಯೂ ದ್ರವ್ಯದಿಂದ ಪರಿಪೂರ್ಣವಾದ ಈ ಭೂಮಿಯನ್ನು ಸ್ವಧರ್ಮವನ್ನೇ ಆಚರಿಸುವೆನೆಂಬ ನಿರ್ಣಯವನ್ನು ಮಾಡಿಕೊಂಡವನಾಗಿ ಪರಾಕ್ರಮದಿಂದ ಪಾಲಿಸು,

ಪುತ್ರೇ ಸಮರ್ಥೇ ಜಾತೇ ತು ರಾಜ್ಯಂ ನ ಪ್ರತಿಪಾದಯೇತ್ ।
ತಸ್ಯ ಧರ್ಮಸ್ತಥಾ ಕೀರ್ತಿರ್ವಿನಶ್ಯತಿ ನ ಸಂಶಯಃ ॥ ೫ ॥

ಸಮರ್ಥೇನ ಚ ಪುತ್ರೇಣ ಯೋ ನ ಯಾತಿ ಪಿತಾ ಸುಖಂ ।
ಅವಶ್ಯಂ ಪಾತಕೀ ಸೋಽಪಿ ವಿಜ್ಞೇಯೋ ಭುವನತ್ರಯೇ ॥ ೬ ॥

ಪಿತುರ್ಭಾರಕ್ಷಮಃ ಪುತ್ರೋ ಭಾರಂ ನೋದ್ವಹತೇ ತು ಯಃ ।
ಮಾತುರುಚ್ಚಾರವಜ್ಜಾತೋ ದ್ವಿಜಿಹ್ವೋ ವಿಷವರ್ಜಿತಃ ॥ ೭ ॥

ಸ ಪುತ್ರೋ ಯೋಽಧಿಕಖ್ಯಾತಃ ಪಿತುರ್ಭವತಿ ಭೂತಲೇ ।
ಪ್ರಕಾಶಯತಿ ಸರ್ವತ್ರ ಸ್ವಕರೈರಿವ ಭಾಸ್ಕರಃ ॥ ೮ ॥

ಪುತ್ರಾಪನಯಜೈರ್ದುಃಖೈ ರಾತ್ರೌ ಜಾಗರ್ತಿ ಯತ್ಪಿತಾ ।
ಸ ಪುತ್ರೋ ನರಕಂ ಯಾತಿ ಯಾವದಾಭೂತಸಂಪ್ಲವಂ ॥ ೯ ॥

---

೫. ಸಮರ್ಥನಾದ ಪುತ್ರನು ಹುಟ್ಟಿದ ಮೇಲೆ ರಾಜನು ತನ್ನ ರಾಜ್ಯವನ್ನು ಅವನಿಗೆ ಕೊಡದಿದ್ದರೆ ಅವನ ಧರ್ಮ ಮತ್ತು ಕೀರ್ತಿಗಳು ನಾಶವಾಗುತ್ತವೆ. ಸಂದೇಹವಿಲ್ಲ.

೬. ಸಮರ್ಥನಾದ ಮಗನಿಂದ ಸುಖವನ್ನು ಪಡೆಯದಿರುವ ತಂದೆಯು ಅವಶ್ಯವಾಗಿ ಮೂರು ಲೋಕಗಳಲ್ಲಿಯೂ ಪಾತಕಿಯಾಗುವನೆಂದು ತಿಳಿಯಬೇಕು.

೭. ತಂದೆಯ ಭಾರವನ್ನು ವಹಿಸಲು ಸಮರ್ಥನಾಗಿದ್ದರೂ ಮಗನು ಅದನ್ನು ವಹಿಸದಿದ್ದರೆ ಅಂತಹವನು ಮಲದಂತೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ವಿಷವಿಲ್ಲದ ಸರ್ಪವೇ ಸರಿ.

೮. ಯಾವನು ಭೂಮಿಲ್ಲಿ ಹೆಚ್ಚು ಪ್ರಸಿದ್ಧನಾಗುವನೋ ಅವನು ತಂದೆಗೆ ಮಗನಾಗುವನು. ಸೂರ್ಯನು ತನ್ನ ಕಿರಣಗಳಿಂದ ಎಲ್ಲಾ ಕಡೆಯಲ್ಲಿಯೂ ಪ್ರಕಾಶಿಸುವಂತೆ ಅಂತಹವನು ಸರ್ವತ್ರ ಪ್ರಕಾಶಿಸುವನು.

೯. ಯಾವ ಮಗನ ಅವಿಧೇಯತೆಯಿಂದ ದುಃಖಿಸುತ್ತಾ ತಂದೆಯು ರಾತ್ರಿಯಲ್ಲಿ ಜಾಗರಣೆ ಮಾಡುವನೋ ಅಂತಹ ಪುತ್ರನು ಪ್ರಳಯ ಪರ್ಯಂತವಾಗಿ ನರಕವಾಸಕ್ಕೆ ಗುರಿಯಾಗುವನು.

ಪಿತುರ್ವಚನಮಾದೃತ್ಯ ಸರ್ವಂ ಯಃ ಕುರುತೇ ಗೃಹೇ ।
ಸ ಯಾತಿ ದೇವಸಾಯುಜ್ಯಂ ಸ್ತೂಯಮಾನೋ ದಿವಿ ಸ್ಥಿತೈಃ ॥ ೧೦ ॥

ಸೋಹಂ ಪ್ರಜಾಕೃತೇ ಪುತ್ರ ಅಸಕ್ತಃ ಕರ್ಮಭಿಃ ಕ್ಷಿತೌ ।
ನ ಭುಕ್ತಂ ನೈವ ಸುಪ್ತಂ ತು ಸ್ವೇಚ್ಛಯಾ ಪಾಲನೇ ಸ್ಥಿತಃ ॥ ೧೧ ॥

ಅಸಮರ್ಥೇ ತ್ವಯಿ ಸುತ ನ ಪ್ರಾಪ್ತಂ ಹಿ ಮಯಾ ಸುಖಂ ।
ವಿಷ್ಣುವಾಸರಭೋಕ್ತ್ರೂಣಾಂ ನಿಗ್ರಹೇ ಕೃತಬುದ್ಧಿನಾ ॥ ೧೨ ॥

ಕೇಚಿಚ್ಛೈವೇ ಸ್ಥಿತಾ ಮಾರ್ಗೇ ಸೌರೇ ಕೇಚಿದ್ವ್ಯವಸ್ಥಿತಾಃ ।
ವಿರಂಚಿಮಾರ್ಗಗಾಶ್ಚಾನ್ಯೇ ಪಾರ್ವತ್ಯಾಶ್ಚ ಸ್ಥಿತಾಃ ಪರೇ ॥ ೧೩ ॥

ಸಾಯಂ ಚ ಪ್ರಾತರಾಸೀನಾ ಅಗ್ನಿಹೋತ್ರೇ ವ್ಯವಸ್ಥಿತಾಃ ।
ಬಾಲೋ ಯುವಾ ವಾ ವೃದ್ಧೋ ವಾ ಗುರ್ವಿಣೀ ವಾ ಕುಮಾರಿಕಾ ॥೧೪॥

---

೧೦. ತಂದೆಯ ಮಾತನ್ನಾದರಿಸಿ ಅದರಂತೆ ಮನೆಯಲ್ಲಿ ಎಲ್ಲವನ್ನೂ ಮಾಡುವ ಮಗನು ದೇವಲೋಕದಲ್ಲಿರುವವರಿಂದ ಸ್ತುತಿಸಲ್ಪಟ್ಟವನಾಗಿ ದೇವ ಸಾಯುಜ್ಯವನ್ನು ಹೊಂದುವನು.

೧೧. ಮಗನೇ! ನಾನು ಭೂಮಿಯಲ್ಲಿ ಕರ್ಮಸಂಗರಹಿತನಾಗಿ ಪ್ರಜೆಗಳಿಗೋಸ್ಕರ ಭೋಗನಿದ್ರೆಗಳನ್ನೂ ಬಿಟ್ಟು ಸ್ವೇಚ್ಛೆಯಿಂದ ಅವರ ರಕ್ಷಣಕಾರ್ಯದಲ್ಲಿ ತೊಡಗಿರುವೆನು.

೧೨. ವತ್ಸ! ನೀನು ಅಶಕ್ತನಾದರೆ ಹರಿದಿನದಲ್ಲಿ ಭೋಜನಮಾಡುವವರನ್ನು ನಿಗ್ರಹಿಸಬೇಕೆಂದು ನಿರ್ಣಯಿಸಿಕೊಂಡಿರುವ ನನಗೆ ಸುಖವಾಗುವುದಿಲ್ಲ.

೧೩. ಹಲವರು ಶೈವಮಾರ್ಗವನ್ನವಲಂಬಿಸಿರುವರು. ಇನ್ನು ಕೆಲವರು ಸೌರಸಿದ್ಧಾಂತ ನಿಷ್ಠರು. ಇತರರು ಬ್ರಾಹ್ಮಸಿದ್ಧಾಂತವನ್ನನುಸರಿಸುವವರು. ಕೆಲವರು ಪಾರ್ವತೀದೇವಿಯ ಉಪಾಸಕರು.

೧೪-೧೭. ಇನ್ನು ಕೆಲವರು ಸಾಯಂಪ್ರಾತಃಕಾಲಗಳಲ್ಲಿ ಅಗ್ನಿಹೋತ್ರವನ್ನಾಚರಿಸುತ್ತಿರುವರು. ಬಾಲಕ, ಯುವಕ, ಗರ್ಭಿಣೀ, ಕುಮಾರೀ, ರೋಗಿ, ಅಂಗ

ಸರೋಗೋ ವಿಕಲೋ ವಾಪಿ ನ ಶಕ್ನೋತಿ ಹ್ಯುಪೋಷಿತುಂ ।
ಇತ್ಯೇವಂ ಜಲ್ಪಿತಂ ಯೈಸ್ತು ತಾನ್ನಿರಸ್ಯ ಸಮಂತತಃ ॥ ೧೫ ॥

ವಚೋಭಿಸ್ತು ಪುರಾಣೋಕ್ತೈರ್ವಾಸರೈರ್ಬಹುಭಿಸ್ತ್ವಹಂ ।
ಸಂಬೋಧಯಿತ್ವಾ ಬಹುಶಃ ಪ್ರಜಾನಾಂ ಸುಖಹೇತವೇ ॥ ೧೬ ॥

ನಿಗೃಹ್ಯ ತಾನ್ ಹರಿದಿನೇ ನಿರಾಹಾರಾನ್ ಕರೋಮಿ ಚ ।
ಶಾಸ್ತ್ರದೃಷ್ಟ್ಯಾ ತು ವಿದುಷೋ ಮೂರ್ಖಾನ್ ದಂಡನಪೂರ್ವಕಂ ॥ ೧೭ ॥

ಶಾಸಯಿತ್ವಾ ಕೃತಾಃ ಸರ್ವೇ ನಿರಾಹಾರಾ ಹರೇರ್ದಿನೇ ।
ತೇನ ಮೇ ನ ಸುಖಂ ಕಿಂಚಿದವಶಿಷ್ಟಂ ಧರಾತಲೇ ॥ ೧೮ ॥

ಕಚ್ಚಿನ್ನ ದುಃಖೇನ ಜನಾನ್ಯೋಜಯೇತ್ಕಿಲ ಪುತ್ರಕ ।
ಸ್ವೇಭ್ಯೋ ವಾಪಿ ಪರೇಭ್ಯೋ ವಾ ಯೋ ರಕ್ಷೇಚ್ಚ ಪ್ರಜಾ ನೃಪಃ ॥ ೧೯ ॥

---

ಹೀನ ಇವರು ಉಪವಾಸ ಮಾಡಲು ಸಮರ್ಥರಲ್ಲವೆಂಬುದಾಗಿ ಹರಟುವವರನ್ನು ಎಲ್ಲಾ ಕಡೆಯಲ್ಲಿಯೂ ನಿರಾಕರಣೆ ಮಾಡಿ ನಾನು ಬಹುದಿನಗಳಿಂದಲೂ ಪುರಾಣೋಕ್ತವಚನಗಳಿಂದ ಪ್ರಾಯಶಃ ಪ್ರಜೆಗಳಿಗೆ ಸುಖವಾಗುವುದಕ್ಕಾಗಿ ಚೆನ್ನಾಗಿ ಬೋಧಿಸಿ, ಜ್ಞಾನಿಗಳಾದವರನ್ನು ಶಾಸ್ತ್ರದೃಷ್ಟಿಯಿಂದಲೂ, ಮೂರ್ಖರನ್ನು ಶಿಕ್ಷಿಸಿಯೂ ಅಂತಹವರನ್ನು ಹರಿದಿನದಲ್ಲಿ ಉಪವಾಸಮಾಡುವಂತೆ ಮಾಡುತ್ತಿರುವೆನು-

೧೮. ಎಲ್ಲಾ ಪ್ರಜೆಗಳನ್ನೂ ಶಾಸನಮಾಡಿ ಹರಿದಿನದಲ್ಲಿ ಉಪವಾಸ ಮಾಡಿಸುತ್ತಿರುವೆನು. ಆದರಿಂದ ನನಗೆ ಈ ಭೂಮಿಯಲ್ಲಿ ಅನುಭವಿಸಬೇಕಾದ ಸುಖವೆಲ್ಲವೂ ಲಭಿಸಿದೆ. ಸ್ವಲ್ಪವೂ ಉಳಿದಿಲ್ಲ.

೧೯. ಪುತ್ರನೇ! ರಾಜನು ಪ್ರಜೆಗಳಿಗೆ ತನ್ನಿಂದ ಅಥವಾ ಇತರರಿಂದಾಗಲೀ ಎಂತಹ ಸಂದರ್ಭದಲ್ಲಿಯೂ ದುಃಖವಾಗುವ ಯೋಜನೆಯನ್ನು ಮಾಡದೇ ಅವರನ್ನು ಕಾಪಾಡಬೇಕು.

ತಸ್ಯಾಮೀ ಹ್ಯಕ್ಷಯಾ ಲೋಕಾಃ ಪುರಾಣೇಷು ಪ್ರಕೀರ್ತಿತಾಃ ।
ಸೋಽಹಂ ಪ್ರಜಾಕೃತೇ ಸೌಮ್ಯ ಸಂಸ್ಥಿತೋ ನಾತ್ಮನಃ ಕ್ವಚಿತ್ ॥ ೨೦ ॥

ಸೌಖ್ಯಮಿಚ್ಛಾಮ್ಯಹಂ ಭೋಕ್ತುಂ ಮೃಗಯಾದಿಸಮುದ್ಭವಂ ।
ನ ಪಾನದ್ಯೂತಜಂ ಪುತ್ರ ಕಾಮಯೇ ಹಂ ಕದಾಚನ ॥ ೨೧ ॥

ಏಷು ಸಕ್ತೋಽಚಿರಾತ್ಪುತ್ರ ವಿನಾಶಂ ಯಾತಿ ಪಾರ್ಥಿವಃ ।
ತ್ವತ್ಪ್ರಸಾದಾದಹಂ ಪುತ್ರ ಮೃಗಯಾವ್ಯಾಜತೋಽಧುನಾ ॥ ೨೨ ॥

ಗಿರೀನ್ವನಾನಿ ಸರಿತಃ ಸರಾಂಸಿ ವಿವಿಧಾನಿ ಚ ।
ಭೋಕ್ತುಕಾಮಃ ಪ್ರಿಯಾನ್ ಕಾಮಾಂಸ್ತ್ವಯಿ ಭಾರಂ ನಿವೇಶ್ಯ ಚ ॥

ಏತತ್ಸರ್ವಂ ಸಮಾಖ್ಯಾತಂ ಯತ್ ಸ್ಥಿತಂ ಹೃದಯೇ ಮಮ ।
ಕೃತೇ ತವ ಮಹಾಕೀರ್ತಿರಕೃತೇ ನರಕಸ್ಥಿತಿಃ ॥ ೨೪ ॥

---

೨೦. ಅಂತಹ ರಾಜನಿಗೆ ನಶಿಸದ ಶಾಶ್ವತಲೋಕಗಳುಂಟಾಗುವುವೆಂದು ಪುರಾಣಗಳಲ್ಲಿ ಉಕ್ತವಾಗಿದೆ. ಸೌಮ್ಯನೇ! ಅಂತಹ ನಾನು ಪ್ರಜೆಗಳಿಗೆ ಹಿತವನ್ನುಂಟುಮಾಡುವುಗಿಕ್ಕಾಗಿಯೇ ಇರುವೆನು ; ನನಗಾಗಿ ಇಲ್ಲ.

೨೧. ಪುತ್ರನೇ! ಈಗ ನಾನು ರಾಜನಿಗೆ ವಿಹಿತವಾದ ಬೇಟೆ ಮುಂತಾದುವುಗಳಿಂದ ಸುಖಪಡಲಿಚ್ಛಿಸುವೆನು. ಯಾವಾಗಲೂ ಪಾನ, ಜೂಜು ಮುಂತಾದುವುಗಳಿಂದ ಸುಖಪಡಲು ನಾನು ಬಯಸುವುದಿಲ್ಲ.

೨೨-೨೩. ಪುತ್ರನೇ! ಪಾನದ್ಯೂತಾದಿಗಳಲ್ಲಿ ಆಸಕ್ತನಾದ ರಾಜನು ನಾಶವಾಗುವನು. ವತ್ಸ! ನೀನು ಇಷ್ಟಪಟ್ಟರೆ ಈಗ ರಾಜ್ಯಭಾರವನ್ನು ನಿನಗೆ ವಹಿಸಿ ಇಷ್ಟಕಾಮಗಳನ್ನು ಭೋಗಿಸಬೇಕೆಂಬ ಅಪೇಕ್ಷೆಯುಳ್ಳವನಾಗಿ ಬೇಟೆಯ ನೆಪದಿಂದ ಪರ್ವತ, ವನ, ನದೀ, ನಾನಾವಿಧ ಸರೋವರಗಳು ಇವುಗಳನ್ನು ಕುರಿತು ಹೋಗಬೇಕೆಂದಿರುವೆನು.

೨೪. ವತ್ಸ! ನನ್ನ ಮನಸ್ಸಿನಲ್ಲಿದ್ದುದನ್ನೆಲ್ಲಾ ಹೇಳಿರುವೆನು. ಇದರಂತೆ ಮಾಡಿದರೆ ನಿನಗೆ ಮಹಾಕೀರ್ತಿಯು ಬರುತ್ತದೆ. ಇಲ್ಲವಾದರೆ ನರಕವಾಸಕ್ಕೆ ಗುರಿಯಾಗಬೇಕಾಗುತ್ತದೆ.

## ಧರ್ಮಾಂಗದ ಉವಾಚ

**ಸರ್ವಮೇತತ್ಕರಿಷ್ಯಾಮಿ ಭುಂಕ್ಷ್ವ ಭೋಗಾನ್ ಮನೋಽನುಗಾನ್ ।**
**ಗುರ್ವೀಂ ರಾಜ್ಯಧುರಂ ತಾತ ತ್ವದೀಯಾ ಮುದ್ಧರಾಮ್ಯಹಂ ॥ ೨೫ ॥**

**ನ ಹಿ ಮೇಽನ್ಯಃ ಸ್ಮೃತೋ ಧರ್ಮಸ್ತ್ವದ್ವಾಕ್ಯಕರಣಂ ವಿನಾ ।**
**ಪಿತುರ್ವಾಕ್ಯಮಕುರ್ವಾಣಃ ಕುರ್ವನ್ ಧರ್ಮಾನಧೋ ವ್ರಜೇತ್ ॥ ೨೬ ॥**

**ತಸ್ಮಾತ್ಕರಿಷ್ಯೇ ವಚನಂ ತ್ವದೀಯಂ ಪ್ರಾಂಜಲಿಃ ಸ್ಥಿತಃ ।**
**ಏವಮುಕ್ತೇ ತು ವಚನೇ ರಾಜಾ ಹೃಷ್ಟೋ ಬಭೂವ ಹ ॥ ೨೭ ॥**

**ಗಂತುಕಾಮೋ ಮೃಗಾನ್ಪ್ರಾಯೋ ಲಬ್ಧ್ವಾ ಜ್ಞಾತ್ವಾ ವನಂ ತತಃ ।**
**ಧರ್ಮಾಂಗದೋಽಪಿ ಹೃಷ್ಟಾತ್ಮಾ ಪ್ರಜಾ ಆಹೂಯ ಚಾಬ್ರವೀತ್ ॥ ೨೮ ॥**

**ಪಿತ್ರಾ ನಿಯುಕ್ತೋ ಭವತಾಂ ಪಾಲನಾಯ ಹಿತಾಯ ಚ ।**
**ಪಿತುರ್ವಾಕ್ಯಂ ಮಯಾ ಕಾರ್ಯಂ ಸರ್ವಥಾ ಧರ್ಮಮಿಚ್ಛತಾ ॥ ೨೯ ॥**

---

೨೫. ಧರ್ಮಾಂಗದನು ಹೇಳಿದನು :—ತಾತ! ನೀನು ಹೇಳಿದುದೆಲ್ಲವನ್ನೂ ಮಾಡುವೆನು. ನಿನ್ನ ಇಷ್ಟಾನುಸಾರವಾಗಿ ಭೋಗಗಳನ್ನನುಭವಿಸು. ನಿನ್ನ ಗುರುತರವಾದ ರಾಜ್ಯಭಾರವನ್ನು ನಾನು ವಹಿಸಿಕೊಳ್ಳುವೆನು.

೨೬. ನಿನ್ನ ವಾಕ್ಯವನ್ನು ಪಾಲಿಸುವುದು ಹೊರತು ನನಗೆ ಬೇರೆ ಧರ್ಮವು ವಿಹಿತವಲ್ಲ. ಪಿತೃವಾಕ್ಯಪರಿಪಾಲನೆಮಾಡದೇ ಧರ್ಮಗಳನ್ನಾಚರಿಸುವವನು ಅಧೋಗತಿಯನ್ನು ಹೊಂದುವನು.

೨೭-೨೮. ಆದಕಾರಣ ನಿನ್ನ ಮಾತನ್ನು ನಡೆಯಿಸುವೆನು.

ಎಂಬುದಾಗಿ ಧರ್ಮಾಂಗದನು ಕೈಮುಗಿದುಕೊಂಡು ಹೇಳಲು ಅದನ್ನು ಕೇಳಿ ರಾಜನು ವನಕ್ಕೆ ಹೋಗಬೇಕೆಂದು ಬಯಸಿದವನಾಗಿ ಅಲ್ಲಿ ಬಹು ಮೃಗಗಳನ್ನು ಹೊಂದಿ ಸಂತುಷ್ಟನಾದನು. ಅವನು ವನಕ್ಕೆ ತೆರಳಿದುದನ್ನು ತಿಳಿದ ಬಳಿಕ ಸಂತುಷ್ಟಚಿತ್ತನಾದ ಧರ್ಮಾಂಗದನೂ ಸಹ ಪ್ರಜೆಗಳನ್ನು ಕರೆದು ಮಾತನಾಡಿದನು.

೨೯. ಪ್ರಜೆಗಳಿರಾ! ನಾನು ನಿಮ್ಮನ್ನು ರಕ್ಷಿಸಲು ಮತ್ತು ನಿಮಗೆ ಅನುಕೂಲಮಾಡಲು ತಂದೆಯಿಂದ ಆಜ್ಞಾಪಿಸಲ್ಪಟ್ಟಿರುವೆನು. ಧರ್ಮದಿಂದ

ನಾನ್ಯೋ ಹಿ ಧರ್ಮಃ ಪುತ್ರಸ್ಯ ಪಿತುರ್ವಾಕ್ಯಂ ವಿನಾ ಪ್ರಜಾಃ |
ಮಯಿ ದಂಡಧರೇ ಶಾಸ್ತ್ರಾ ನ ಯಮೋ ಭವತಿ ಕ್ವಚಿತ್ || ೩೦ ||

ಏವಂ ಜ್ಞಾತ್ವಾ ತು ಯುಷ್ಮಾಭಿಃ ಸ್ಮರ್ತವ್ಯೋ ಗರುಡಧ್ವಜಃ |
ಬ್ರಹ್ಮಾರ್ಪಣಪ್ರಯೋಗೇಣ ಯಜನೀಯೋ ಜನಾರ್ದನಃ || ೩೧ ||

ಮಮತ್ವಂ ಹಿ ಪರಿತ್ಯಜ್ಯ ಸ್ವಜಾತಿವಿಹಿತೇನ ಚ |
ಯೇನ ವೋ ಅಕ್ಷಯಾ ಲೋಕಾ ಭವೇಯುರ್ನಾತ್ರ ಸಂಶಯಃ || ೩೨ ||

ಪಿತೃಮಾರ್ಗಾಧಿಕೋ ಹ್ಯೇಷ ಭವತಾಂ ದರ್ಶಿತಃ ಪ್ರಜಾಃ |
ಬ್ರಹ್ಮಾರ್ಪಣಕ್ರಿಯಾಯುಕ್ತಾ ಭವಂತು ಜ್ಞಾನಕೋವಿದಾಃ || ೩೩ ||

---

ವರ್ತಿಸಬೇಕೆಂದು ಬಯಸುತ್ತಿರುವ ನಾನು ಸರ್ವವಿಧದಿಂದಲೂ ಪಿತೃವಾಕ್ಯವನ್ನು ಪರಿಪಾಲಿಸಬೇಕು.

೩೦. ಪ್ರಜೆಗಳಿರಾ! ಮಗನಿಗೆ ತಂದೆಯ ವಾಕ್ಯಪರಿಪಾಲನೆಗಿಂತ ಬೇರೆ ಧರ್ಮವಿಲ್ಲ. ನಾನು ದಂಡಧಾರಿಯಾಗಿ ಶಾಸನಮಾಡುತ್ತಿರುವಾಗ ಯಮನು ಎಲ್ಲಿಯೂ ಶಾಸನಮಾಡಲಾರನು.

೩೧-೩೨. ಈ ರೀತಿಯಾಗಿ ತಿಳಿದು ನೀವು ಗರುಡಧ್ವಜನನ್ನು ಧ್ಯಾನಿಸಬೇಕು. ಮತ್ತು ಜನಾರ್ದನನನ್ನು ಬ್ರಹ್ಮಾರ್ಪಣಬುದ್ಧಿಯಿಂದ ನಿಷ್ಕಾಮವಾಗಿ, ಮಮತೆಯನ್ನು ತ್ಯಜಿಸಿ ತನ್ನ ಜಾತಿಗೆ ವಿಹಿತರೀತಿಯಿಂದ ಪೂಜಿಸಬೇಕು. ಹಾಗೆ ಪೂಜಿಸುವುದರಿಂದ ನಿಮಗೆ ಅಕ್ಷಯಲೋಕಗಳು ಲಭಿಸುವುವು, ಸಂದೇಹವಿಲ್ಲ.

೩೩. ಪ್ರಜೆಗಳಿರಾ! ನನ್ನ ತಂದೆಯ ಕಾಲದಲ್ಲಿ ವಿಧಿಸಲ್ಪಟ್ಟ ಮಾರ್ಗಕ್ಕಿಂತಲೂ ಅಧಿಕವಾದ ಈ ಸಾಧನವನ್ನು ನಿಮಗೆ ತೋರಿಸಿರುವೆನು. ನೀವು ಜ್ಞಾನಕುಶಲರಾಗಿ ಬ್ರಹ್ಮಾರ್ಪಣಕ್ರಿಯಾನಿಷ್ಠರಾಗಿರಿ.

ನ ಭೋಕ್ತವ್ಯಂ ಹರಿದಿನೇ ಪೈತ್ರೋ ಮಾರ್ಗಸ್ತು ಶಾಶ್ವತಃ ।
ವಿಶೇಷೋ ಹಿ ಮಯಾ ಖ್ಯಾತೋ ಭವತಾಂ ಬ್ರಹ್ಮಸಂಸ್ಥಿತಿಃ ॥ ೩೪ ॥

ಪ್ರಯೋಕ್ತವ್ಯಾ ಚ ತತ್ವಜ್ಞೈಃ ಪುನರಾವೃತ್ತಿದುರ್ಲಭಾ ।
ಯದುಪೋಷ್ಯಂ ಹರಿದಿನಂ ತದವಶ್ಯಮಿತಿ ಸ್ಥಿತಿಃ ॥ ೩೫ ॥

ಅನುನೀಯ ಪ್ರಜಾಃ ಸರ್ವಾಃ ಸಮಾಶ್ವಾಸ್ಯ ಪುನಃಪುನಃ ।
ನ ದಿವಾ ನ ಚ ಶರ್ವರ್ಯಾಂ ಶೇತೇ ಧರ್ಮಾಂಗದಃ ಸದಾ ॥ ೩೬ ॥

ಸರ್ವತ್ರ ಭ್ರಮತೇ ಶೌರ್ಯಾತ್ಕುರ್ವನ್ನಿಷ್ಕಂಟಕಾಂ ಕ್ಷಿತಿಂ ।
ಪಟಹೋ ರಟನೇ ನಿತ್ಯಂ ಮೃಗಾರಿರಿಪುಮಸ್ತಕೇ ॥ ೩೭ ॥

---

೩೪. ಹರಿದಿನದಲ್ಲಿ ಭೋಜನ ಮಾಡಬಾರದೆಂಬ ನಮ್ಮ ತಂದೆಯಿಂದುಪದಿಷ್ಟವಾದ ಮಾರ್ಗವನ್ನು ಶಾಶ್ವತವಾಗಿ ಆಚರಿಸಿರಿ. ನಾನು ನಿಮಗೆ ಹಿಂದೆ ವಿವರಿಸಿರುವ ಬ್ರಹ್ಮಸಂಸ್ಥಿತಿಯನ್ನು ವಿಶೇಷವಾಗಿ ಹೇಳಿರುವೆನು.

೩೫. ತತ್ವಜ್ಞಾನಿಗಳು ಪುನರಾವೃತ್ತಿಯಿಲ್ಲದಂತೆ ಮಾಡುವ ಬ್ರಹ್ಮಾರ್ಪಣಬುದ್ಧಿಪೂರ್ವಕವಾದ ನಿಷ್ಕಾಮಕರ್ಮವನ್ನು ಆಚರಿಸಬೇಕು. ಹರಿದಿನದಲ್ಲಿ ಉಪವಾಸಮಾಡುವುದು ಆವಶ್ಯಕವೆಂಬುದೇ ತತ್ವವೆಂಬುದಾಗಿ ಪ್ರಜೆಗಳಿಗೆ ತಿಳಿಸಿದನು.

೩೬. ಧರ್ಮಾಂಗದನು ಸಕಲಪ್ರಜೆಗಳನ್ನೂ ಅನುನಯದಿಂದ ಪುನಃ ಪುನಃ ಸಮಾಧಾನಪಡಿಸುತ್ತಿದ್ದನು. ಹಗಲು ರಾತ್ರಿಗಳಲ್ಲಿ ಯಾವಾಗಲೂ ಮಲಗದೆ ಹೀಗೆ ಕರ್ತವ್ಯಪರನಾಗಿದ್ದನು.

೩೭. ಅವನು ಶೌರ್ಯದಿಂದ ರಾಜ್ಯವನ್ನು ನಿಷ್ಕಂಟಕವನ್ನಾಗಿ ಮಾಡಿ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಿದ್ದನು. ನಿತ್ಯವೂ ಆನೆಯ ಮೇಲೆ ಪಟಹವಾದ್ಯವನ್ನು ಬಾರಿಸುತ್ತಾ ಈ ರೀತಿಯಾಗಿ ಸಾರಿಸುತ್ತಿದ್ದನು.

ಅಭುಕ್ತ್ವಾ ದ್ವಾದಶೀಂ ಲೋಕಾ ಮಮತ್ವೇನ ವಿವರ್ಜಿತಾಃ |
ತ್ರಿವಿಧೇಷು ಚ ಕಾರ್ಯೇಷು ದೇವೇಶಶ್ಚಿಂತ್ಯತಾಂ ಹರಿಃ || ೩೮ ||

ಹವ್ಯಕವ್ಯವಹೋ ದೇವಃ ಸ ಏವ ಪುರುಷೋತ್ತಮಃ |
ಸೂರ್ಯೇ ಯೋ ಹಿ ಕೃಶಾಕಾಶೇ ವಿಸರ್ಗೇ ಜಗತಾಂ ಪತಿಃ || ೩೯ ||

ಸ್ಮರ್ತವ್ಯೋ ಮನುಜೈಃ ಸರ್ವೈರ್ಧರ್ಮಕಾಮಾರ್ಥಕಾಮುಕೈಃ |
ಸ್ವಜಾತಿವಿಹಿತೋಪ್ಯೇವಂ ಸನ್ಮಾರ್ಗೇ ಚೈವ ಮಾಧವಃ || ೪೦ ||

ಸ ಏವ ಭೋಕ್ತಾ ಭೋಕ್ತವ್ಯಃ ಸ ಏವ ಪುರುಷೋತ್ತಮಃ |
ವಿನಿಯೋಗಸ್ತು ತಸ್ಯೈವ ಸರ್ವಕರ್ಮಸು ಯುಜ್ಯತೇ || ೪೧ ||

ಏವಂ ರಟತಿ ವಿಪ್ರೇಂದ್ರಾಃ ಪಟಹೇ ಮೇಘನಿಃಸ್ವನೇ |
ಏವಂ ಧರ್ಮಮಪಾಪ್ಯಾಥ ಪಿತಾ ಧರ್ಮಾಂಗದಸ್ಯ ಹಿ || ೪೨ ||

---

೩೮. ಪ್ರಜೆಗಳು ಮಮತೆಯನ್ನು ಬಿಟ್ಟು ದ್ವಾದಶಿಯ (ಏಕಾದಶಿಯ) ದಿನದಲ್ಲಿ ಊಟಮಾಡದೆ ತ್ರಿವಿಧಕಾರ್ಯಗಳಲ್ಲಿಯೂ ದೇವೇಶ್ವರನಾದ ಹರಿಯನ್ನು ಧ್ಯಾನಿಸಬೇಕು

೩೯-೪೦. ಆ ಪುರುಷೋತ್ತಮದೇವನೇ ಹವ್ಯ ಕವ್ಯ ನಿಯಾಮಕನು. ಧರ್ಮ, ಕಾಮ, ಅರ್ಥಗಳೆಂಬ ತ್ರಿವರ್ಗವನ್ನು ಬಯಸುವ ಮನುಜರೆಲ್ಲರೂ ಸೂರ್ಯೋದಯಾಸ್ತಮಯ ಕಾಲಗಳಲ್ಲಿ ತನ್ನ ವರ್ಣಾಶ್ರಮೋಚಿತ ಧರ್ಮಗಳನ್ನನುಷ್ಠಾನಮಾಡುವಾಗ ಜಗದೊಡೆಯನಾದ ಮಾಧವನನ್ನು ಧ್ಯಾನಿಸಬೇಕು.

೪೧. ಆ ಪುರುಷೋತ್ತಮನೇ ಭೋಕ್ತೃವೂ, ಭೋಕ್ತವ್ಯನೂ ಆಗಿರುವುದರಿಂದ ಸಕಲಕರ್ಮಗಳಲ್ಲಿಯೂ ಅವನನ್ನು ಸ್ಮರಿಸಬೇಕೆಂಬುದು ಯುಕ್ತವು.

೪೨-೪೩. ಬ್ರಾಹ್ಮಣವರ್ಯರೇ! ಮೇಘನಾದದಂತಿರುವ ಪಟಹಧ್ವನಿಯು ಈ ರೀತಿಯಾಗಿ ಸಾರುತ್ತಿರಲು ತಂದೆಯಾದ ರುಕ್ಮಾಂಗದರಾಜನು, ಧರ್ಮಾಂಗದನು ಹೀಗೆ ಧರ್ಮಮಾಡುತ್ತಿರುವುದನ್ನು ನೋಡಿ ಮಗನು ತನಗಿಂತಲೂ ಹೆಚ್ಚಾಗಿ ಧರ್ಮಪ್ರಚಾರಮಾಡುತ್ತಿರುವನೆಂದು ತಿಳಿದು ಸಂತುಷ್ಟನಾಗಿ ಅಪರಲಕ್ಷ್ಮಿಯಂತಿರುವ ತನ್ನ ಪತ್ನಿಯೊಡನೆ ಮಾತನಾಡಿದನು.

ಜ್ಞಾತ್ವಾ ಪುತ್ರಂ ಕ್ರಿಯೋಪೇತಮಾತ್ಮನೋ ಪ್ಯಧಿಕಂ ದ್ವಿಜಾಃ |
ಉವಾಚ ಭಾರ್ಯಾಂ ಸಂಹೃಷ್ಟಃ ಸ್ಥಿತಾಂ ಲಕ್ಷ್ಮೀಮಿವಾಪರಾಂ || ೪೩ ||
ಸಂಧ್ಯಾವಲಿ ಹ್ಯಹಂ ಧನ್ಯಸ್ತ್ವಂ ಚಾಪಿ ವರವರ್ಣಿನೀ |
ಉಭಯೋರ್ಜನಿತಃ ಪುತ್ರಃ ಶಶಾಂಕಧವಲಃ ಕ್ಷಿತೌ || ೪೪ ||
ಕರ್ಣಾಭ್ಯಾಂ ಶ್ರೂಯತೇ ಮೋಕ್ಷೋ ನ ದೃಷ್ಟಃ ಕೇನಚಿತ್ಕ್ವಚಿತ್ |
ಸೋಽಸ್ಮಾಭಿರಧಿಕಂ ಪ್ರಾಪ್ತೋ ಮೋಕ್ಷಃ ಸತ್ಪುತ್ರಸಂಭವಃ || ೪೫ ||
ಪುತ್ರೇ ವಿನಯಸಂಪನ್ನೇ ವೃತ್ತಿಶೌರ್ಯಸಮನ್ವಿತೇ |
ಪ್ರತಾಪಿನಿ ವರಾರೋಹೇ ಪಿತುರ್ಮೋಕ್ಷೋ ಗೃಹೇ ಧ್ರುವಂ || ೪೬ ||
ಆನಂದಂ ಬ್ರಹ್ಮಣೋ ರೂಪಂ ಶತಾನಂದಃ ಸುತೇನ ಯಃ |
ಪಿತಾ ಭವತಿ ಚಾರ್ವಂಗಿ ಸತ್ಕರ್ಮಕರಣೈಃ ಶುಭೈಃ || ೪೭ ||
ನೈತತ್ಸಾಮ್ಯಂ ಭವೇದ್ದೇವಿ ಲೋಕೇ ಸ್ಥಾವರಜಂಗಮೇ |
ಸತ್ಪುತ್ರಃ ಪಿತುರಾದಾಯ ಭಾರಮುದ್ವಹತೇ ತು ಯಃ || ೪೮ ||

---

೪೪. ವರವರ್ಣಿನಿಯಾದ ಸಂಧ್ಯಾವಳಿಯೇ! ನಾನೂ ನೀನೂ ಸಹ ಧನ್ಯರು. ನಮಗೆ ಹುಟ್ಟಿದ ಮಗನು ಭೂಮಿಯಲ್ಲಿ ಚಂದ್ರನಂತೆ ಬೆಳಗುತ್ತಿರುವನು.

೪೫. ಮೋಕ್ಷವುಂಟೆದು ಕೇಳಿರುವೆವು. ಆದರೆ ಅವನ್ನು ಎಲ್ಲಿಯೂ ಯಾರೂ ನೋಡಿದವರಿಲ್ಲ. ಅಂತಹ ಮೋಕ್ಷವು ಸುಪುತ್ರನು ಹುಟ್ಟಿದುದರಿಂದ ನಮಗೆ ಅಧಿಕವಾಗಿ ಲಬ್ಧವಾಗಿದೆ.

೪೬. ವರಾರೋಹೆ! ವಿನಯ, ಸದ್ವೃತ್ತಿ, ಶೌರ್ಯ ಮತ್ತು ಪ್ರತಾಪಗಳುಳ್ಳ ಮಗನಿದ್ದರೆ ತಂದೆಗೆ ಮನೆಯಲ್ಲಿಯೇ ಮೋಕ್ಷವು ಲಭಿಸುವುದು. ಖಂಡಿತ.

೪೭. ಶತಾನಂದನು ಬ್ರಹ್ಮರೂಪವಾದ ಆನಂದವನ್ನು ಹೊಂದುವಂತೆ ತಂದೆಯು ಮಗನ ಶುಭವಾದ ಸತ್ಕರ್ಮಾಚರಣೆಗಳಿಂದ ಪೂರ್ಣಾನಂದವನ್ನು ಹೊಂದುವನು.

೪೮. ದೇವಿಯೇ! ಚರಾಚರಾತ್ಮಕಪ್ರಪಂಚದಲ್ಲಿ ಸತ್ಪುತ್ರನು ತಂದೆಯ ಭಾರವನ್ನು ವಹಿಸುವುದಕ್ಕೆ ಯಾವುದೂ ಈಡಾಗಲಾರದು

ಸೋಽಹಂ ಗಮಿಷ್ಯಾಮಿ ವನಾಯ ಹೃಷ್ಟೋ
ವಿಹಾರಶೀಲೋ ಮೃಗಹಿಂಸನಾಯ ।
ಸ್ವೇಚ್ಛಾಚರಶ್ಚಾಥ ವಿಶಾಲನೇತ್ರೇ ।
ವಿಮುಕ್ತಪಾಪೋ ಜನರಕ್ಷಣಾಯ ॥ ೪೯ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ರುಕ್ಮಾಂಗದ ಧರ್ಮಾಂಗದಸಂವಾದೋ ನಾಮ ನವಮೋಽಧ್ಯಾಯಃ

---

೪೯. ವಿಶಾಲನೇತ್ರಗಳುಳ್ಳ ಸಂಧ್ಯಾವಳಿಯೇ! ಸಂತುಷ್ಟನು, ವಿಹಾರಶೀಲನು, ನಿರಾತಂಕವಾಗಿ ಸಂಚರಿಸುತ್ತಿರುವನು, ಪಾಪಗಳನ್ನು ಪರಿಹರಿಸಿಕೊಂಡಿರುವವನೂ ಆಗಿರುವ ನಾನು ಮೃಗಗಳನ್ನು ಸಂಹರಿಸಿ ಜನರನ್ನು ರಕ್ಷಿಸುವುದಕ್ಕಾಗಿ ಅರಣ್ಯಕ್ಕೆ ಹೋಗುವೆನು.

ಇಂತು ಶ್ರೀ ನಾರದೀಯಪುರಾಣೋತ್ತರಭಾಗದಲ್ಲಿ ರುಕ್ಮಾಂಗದ ಧರ್ಮಾಂಗದ ಸಂವಾದವೆಂಬ ಒಂಬತ್ತನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ರುಕ್ಮಾಂಗದನು ಉಚಿತ ಸಮಯದಲ್ಲಿ ಧರ್ಮಾಂಗದ ಕುಮಾರನಿಗೆ ಪುತ್ರಧರ್ಮವನ್ನುಪದೇಶಿಸಿ ರಾಜ್ಯಾದಿಗಳೆಲ್ಲವನ್ನೂ ಒಪ್ಪಿಸಿದನು. ಕುಮಾರನು ತಂದೆಗಿಂತಲೂ ಹೆಚ್ಚಾಗಿ ಹರಿದಿನ ಮತ್ತು ಬ್ರಹ್ಮಸಂಸ್ಥಿತಿಗಳನ್ನು ಆಚರಿಸುವಂತೆ ಪ್ರಜೆಗಳಿಗೆ ಶಾಸನಮಾಡಿ ಧರ್ಮದಿಂದ ರಾಜ್ಯಭಾರಮಾಡುತ್ತಿದ್ದುದನ್ನು ನೋಡಿ ಸಂತೋಷಪಟ್ಟು ತಾನು ಬೇಟೆಯಾಡಿ ಪ್ರಜಾರಕ್ಷಣೆ ಮಾಡುವುದಕ್ಕಾಗಿ ಅರಣ್ಯಕ್ಕೆ ಹೊರಡುವೆನೆಂದು ತನ್ನ ಪತ್ನಿಗೆ ಹೇಳಿದನು.

# ದಶಮೋऽಧ್ಯಾಯಃ

## ವಸಿಷ್ಠ ಉವಾಚ

ತತಃ ಪ್ರಾಹ ವಿಶಾಲಾಕ್ಷೀ ಭರ್ತುರ್ವಾಕ್ಯಂ ನಿಶಮ್ಯ ಸಾ ।
ಸತ್ಯಮುಕ್ತಂ ತ್ವಯಾ ರಾಜನ್ ಪುತ್ರಸೌಖ್ಯಾತ್ಪರಂ ಸುಖಂ ॥ ೧ ॥

ನ ಭವೇದಿಹ ರಾಜೇಂದ್ರ ಮುನೀನಾಂ ಭಾಷಿತಂ ಯಥಾ ।
ತುಲ್ಯಂ ಭವತಿ ಲೋಕೇऽಸ್ಮಿನ್ ವಿಷ್ಣ್ವಾಖ್ಯಸ್ಯ ಪರಸ್ಯ ಹಿ ॥ ೨ ॥

ಪುತ್ರೇ ಭಾರಸ್ತ್ವಯಾ ನ್ಯಸ್ತಃ ಸಪ್ತದ್ವೀಪಸಮುದ್ಭವಃ ।
ಮಾರ್ಗೀಂ ಹಿಂಸಾಂ ಪರಿತ್ಯಜ್ಯ ಯಜ್ಞೈರಿಷ್ಟ್ವಾ ಜನಾರ್ದನಂ ॥ ೩ ॥

ಭೋಗಸ್ಪೃಹಾಂ ಪರಿತ್ಯಜ್ಯ ಸೇವಸ್ವ ಸುರನಿಮ್ನಗಾಂ ।
ಏತನ್ನ್ಯಾಯ್ಯಂ ಭವತಿ ಭೋ ನ ನ್ಯಾಯ್ಯೋ ಮೃಗನಿಗ್ರಹಃ ॥ ೪ ॥

---

## ಹತ್ತನೆಯ ಅಧ್ಯಾಯ

೧-೨. ವಸಿಷ್ಠನು ಹೇಳಿದನು :—ವಿಶಾಲನಯನಗಳಾದ ಆ ಸಂಧ್ಯಾವಳಿಯು ಪತಿಯ ಮಾತನ್ನು ಕೇಳಿ, ರಾಜನೇ ! ವಿಷ್ಣುದೇವನಿಗೆ ಸಮನಾದ ಪರದೇವತೆಯಿಲ್ಲವೆಂಬ ಮುನಿವಚನದಂತೆ ಪುತ್ರಸೌಖ್ಯಕ್ಕಿಂತಲೂ ಉತ್ತಮ ಸುಖವು ಈ ಲೋಕದಲ್ಲಿಲ್ಲವೆಂಬುದಾಗಿ ನೀನು ಹೇಳಿದ ಮಾತು ಸತ್ಯವು

೩-೪. ರಾಜೇಂದ್ರನೇ ! ನೀನು ಸಪ್ತದ್ವೀಪವನ್ನಾಳುವ ಭಾರವನ್ನು ಮಗನಿಗೆ ವಹಿಸಿರುವೆ. ಆದರೆ ಮೃಗನಿಗ್ರಹಮಾಡಲು ಹೊರಟಿರುವೆ. ಇದು ನಿನಗೆ ನ್ಯಾಯವಲ್ಲ. ಆದಕಾರಣ ನೀನು ಮೃಗಹಿಂಸೆಯನ್ನು ಬಿಟ್ಟು ಜನಾರ್ದನನನ್ನು ಪೂಜಿಸು. ಭೋಗಾಭಿಲಾಷೆಯನ್ನು ತೊರೆದು ದೇವಗಂಗೆಯನ್ನು ಸೇವಿಸು. ಇದೇ ನ್ಯಾಯವಾದ ಮಾರ್ಗವು.

ಹೃದಯೇ ನಖಪಾತೋ ಹಿ ವೃದ್ಧಾಯಾ ಭೂಪತೇ ಯಥಾ ।
ತಥಾ ವಿಷಯಸೇವಾ ಹಿ ಪಿತೄಣಾಂ ಪುತ್ರಿಣಾಂ ವಿದುಃ ॥ ೫ ॥

ಗೃಹೇ ವಾಪಿ ಹೃಷೀಕೇಶಂ ಪೂಜಯಸ್ವ ಮಹೀಪತೇ ।
ನಿರ್ದೋಷಮೃಗಯೂಥಾನಾಂ ನ ಯುಕ್ತಂ ಸೂದನಂ ತವ ॥ ೬ ॥

ಅಹಿಂಸಾ ಪರಮೋ ಧರ್ಮಃ ಪುರಾಣೇ ಪರಿಕೀರ್ತಿತಃ ।
ಹಿಂಸಯಾ ವರ್ತಮಾನಸ್ಯ ವ್ಯರ್ಥೋ ಧರ್ಮೋ ಭವೇದಿತಿ ।
ಕುರ್ವನ್ನಪಿ ವೃಥಾ ಧರ್ಮಾನ್ಯೋ ಹಿಂಸಾಮನುವರ್ತತೇ ॥ ೭ ॥

ಪರೈರುಪಹತಾಂ ಭೂಪ ನೋಪಭುಂಜಂತಿಸಾಧವಃ ।
ಷಡ್ವಿಧಂ ನೃಪತೇ ಪ್ರೋಕ್ತಂ ವಿದ್ವದ್ಭಿರ್ಜೀವಘಾತನಂ ॥ ೮ ॥

---

೫. ಭೂಪಾಲನೇ ! ವೃದ್ಧಸ್ತ್ರೀಹೃದಯದಲ್ಲಿ ಕೈಹಾಕಾವುದು ಹೇಗೆ ನಿಷ್ಫಲವೋ ಲದರಂತೆ ಮಕ್ಕಳಿರುವ ಪಿತೃಗಳಿಗೆ ವಿಷಯಸೇವನೆಯೂ ನಿಷ್ಫಲ ವಾದುದರಿಂದ ಆದು ನಿಂದ್ಯವೇ ಸರಿ ಎಂದು ಜ್ಞಾನಿಗಳು ತಿಳಿದಿರುವರು.

೬. ದೊರೆಯೇ ! ಮನೆಯಲ್ಲಿಯೆ ಇದ್ದಾದರೂ ಹೃಷೀಕೇಶನನ್ನು ಪೂಜಿಸು. ನಿರ್ದೋಷಗಳಾದ ವ್ಯಗಸಮೂಹವನ್ನು ಸಂಹರಿಸುವುದು ನಿನಗೆ ಯೋಗ್ಯವಲ್ಲ.

೭. ಅಹಿಂಸೆಯು ಪರಮಧರ್ಮವು, ಹಿಂಸೆಯಲ್ಲಿ ತೊಡಗಿರುವವನು ಮಾಡುವ ಧರ್ಮವು ನಿಷ್ಫಲವು ಎಂಬುದಾಗಿ ಪುರಾಣಗಳಲ್ಲಿ ಹೇಳಿದೆ. ಯಾವನು ಹಿಂಸೆಯನ್ನು ಮಾಡುತ್ತಾವೆಯೋ ಅವನು ಧರ್ಮಗಳನ್ನು ಮಾಡಿದರೂ ಅದು ವ್ಯರ್ಥವಾಗುವುದು.

೮. ಇತತರಿಗೆ ಹಿಂಸೆಕೊಟ್ಟು ಸಂಪಾದಿಸಿದುದನ್ನು ಸಾಧುಗಳು ಭೋಗಿ ಸುವುದಿಲ್ಲ. ರಾಜನೇ! ವಿದ್ವಾಂಸರು ಜೀವಹಿಂಸೆಯು ಆರು ವಿಧವೆಂದು ಹೇಳಿರುವರು.

ಅನುಮೋದಯಿತಾ ಪೂರ್ವಂ ದ್ವಿತೀಯೋ ಘಾತಕಃ ಸ್ಮೃತಃ ।
ವಿಶ್ವಾಸಕಸ್ತೃತೀಯೋಽಪಿ ಚತುರ್ಥೋ ಭಕ್ಷಕಸ್ತಥಾ ।

ಪಂಚಮಃ ಪಾಚಕಃ ಪ್ರೋಕ್ತಃ ಷಷ್ಠೋ ಭೂಪಾತ್ರವಿಗ್ರಹೀ ।
ಹಿಂಸಯಾ ಸಂಯುತಂ ಧರ್ಮಮಧರ್ಮಂ ಚ ವಿದುರ್ಬುಧಾಃ ॥ ೯ ॥

ನ ಪಾಪಂ ಕುರುತೇ ಭೂಪ ಪುತ್ರೇ ಭಾರಂ ನಿವೇಶ್ಯ ವೈ ।
ಧರ್ಮಂ ಸಮಾಶ್ರಯೇನ್ ಸಮ್ಯಕ್ಸಂಜಾತಪಲಿತಃ ಪಿತಾ ॥ ೧೦ ॥

ಪರಿತ್ಯಜ್ಯ ಇಮಂ ಭಾವಂ ಮೃಗಹಿಂಸಾಸಮುದ್ಭವಂ ।
ಮೃಗಶೀಲಾ ಹಿ ರಾಜಾನೋ ವಿನಷ್ಟಾಃ ಶತಶೋ ನೃಪ ॥ ೧೧ ॥

ತಸ್ಮಾದ್ದುಷ್ಟಂ ಹಿ ತನ್ಮನ್ಯೇ ಯದತ್ರ ಮೃಗಪಾತನಂ ।
ದಯಾ ಪರಾ ಮೃಗೇ ರಾಜ್ಞಾಂ ಧರ್ಮಿಣಾಮಪಿ ದೃಶ್ಯತೇ ॥ ೧೨ ॥

---

೯. ಪರರು ಮಾಡುವ ಹಿಂಸೆಯನ್ನನುಮೋದಿಸುವವನು ಮೊದಲನೆಯ ಘಾತಕನು. ಸಂಹಾರವನ್ನು ಮಾಡುವವನು ಎರಡನೆಯವನು. ಅದನ್ನು ಕೊಯ್ಯುವವನು ಮೂರನೆಯವನು. ತಿನ್ನುವವನು ನಾಲ್ಕನೆಯವನು. ಅದನ್ನು ಬೇಯಿಸುವವನು ಐದನೆಯವನು. ವಿಭಾಗಿಸುವವನು ಆರನೆಯವನು. ಹಿಂಸೆಯಿಂದ ಸಹಿತವಾದ ಧರ್ಮವನ್ನು ಅಧರ್ಮವೆಂದು ಜ್ಞಾನಿಗಳು ಹೇಳಿರುವರು.

೧೦. ದೊರೆಯೇ! ಕೂದಲು ನರೆತು ವೃದ್ಧನಾಗಿ ಧರ್ಮಮಾಡುತ್ತಿರುವ ತಂದೆಯು ಪುತ್ರನಿಗೆ ಭಾರವನ್ನು ವಹಿಸಿ ಪಾಪಕೃತ್ಯವನ್ನು ಮಾಡಬಾರದು.

೧೧. ಮೃಗಹಿಂಸೆಯಿಂದಾಗುವ ಈ ಪರಿಣಾಮವನ್ನು ಬಿಟ್ಟು ಎಂದರೆ ಲೆಕ್ಕಿಸದೆ ಬೇಟೆಯಲ್ಲಾಸಕ್ತರಾದ ನೂರಾರು ರಾಜರು ನಾಶವಾಗಿರುವರು.

೧೨. ಆದಕಾರಣ ಈಗ ನೀನು ಮೃಗಹಿಂಸೆಮಾಡುವುದು ದುಷ್ಟವೆಂದು ನಾನು ತಿಳಿದಿರುವೆನು. ಧರ್ಮಿಷ್ಠರಾದ ರಾಜರು ಮೃಗಗಳಲ್ಲಿ ಉತ್ತಮದಯೆಯನ್ನು ತೋರಿಸುವುದು ಕಂಡುಬರುತ್ತಿದೆ.

ನಿವಾರಿತೋ ಮಯಾ ಹಿ ತ್ವಂ ಹಿತಬುದ್ಧ್ಯಾ ಪುನಃಪುನಃ ।
ಏವಂ ಬ್ರುವಾಣಾಂ ತಾಂ ಭಾರ್ಯಾಂ ನೃಪೋ ವಚನಮಬ್ರವೀತ್ ॥ ೧೩ ॥
ನ ಹಿ ಹಿಂಸೇ ಮೃಗಾನ್ ದೇವಿ ಮೃಗವ್ಯಾಜೇನ ಕಾನನೇ ।
ಪರ್ಯಟಿಷ್ಯೇ ಧನುಷ್ಪಾಣಿಃ ಕುರ್ವನ್ ಕಂಟಕಶೋಧನಂ ॥ ೧೪ ॥
ಜನಮಧ್ಯೇ ಮಹಾಭಾಗೇ ಸುಪುತ್ರಿಣಿ ವರಾನನೇ ।
ಶ್ವಾಪದೇಭ್ಯಶ್ಚ ದಸ್ಯುಭ್ಯಃ ಪ್ರಜಾ ರಕ್ಷ್ಯಾ ಮಹೀಭೃತಾ ॥ ೧೫ ॥
ಆತ್ಮನಾ ವಾಽಥ ಪುತ್ರೇಣ ಗೋಪನೀಯಾಃ ಪ್ರಜಾಃ ಶುಭೇ ।
ಪ್ರಜಾ ಅರಕ್ಷನ್ ನೃಪತಿಃ ಸ ಧರ್ಮೋಽಪಿ ವ್ರಜತ್ಯಧಃ ॥ ೧೬ ॥
ಸೋಽಹಂ ರಕ್ಷಣಮುದ್ದಿಶ್ಯ ಗಮಿಷ್ಯಾಮಿ ವನಂ ಪ್ರಿಯೇ ।
ವಿಯುಕ್ತಭಾವೋಽಹಮಿತಿ ಮೇರುಶೃಂಗೇ ರವಿರ್ಯಥಾ ॥ ೧೭ ॥

---

೧೩. ರಾಜನೇ! ನಾನು ಹಿತದೃಷ್ಟಿಯಿಂದ ನಿನ್ನನ್ನು ಪುನಃ ಪುನಃ ತಡೆಯುತ್ತಿರುವೆನು.

ಹೀಗೆ ಹೇಳುತ್ತಿರುವ ಪತ್ನಿಯನ್ನು ಕುರಿತು ರಾಜನು ಮಾತನಾಡಿದನು.

೧೪. ದೇವಿಯೇ! ನಾನು ಮೃಗಗಳನ್ನು ಹಿಂಸಿಸುವುದಿಲ್ಲ. ಮೃಗಗಳ ನೆಪದಿಂದ ಅಡವಿಯಲ್ಲಿ ಧನಸ್ಸನ್ನು ಹಿಡಿದುಕೊಂಡು ಕಂಟಕವನ್ನು ಪರಿಹರಿಸುತ್ತಾ ಸಂಚರಿಸುವನು.

೧೫. ಸುಪುತ್ರನನ್ನು ಪಡೆದಿರುವ, ಧನ್ಯಳಾದ, ಉತ್ಕೃಷ್ಟಮುಖವುಳ್ಳ ದೇವಿಯೇ! ರಾಜನು ಜನಮಧ್ಯದಲ್ಲಿ ಪ್ರಾಣಿಹಿಂಸೆಮಾಡುವ ಕ್ರೂರಮೃಗ ಮತ್ತು ಕಳ್ಳರಿಂದ ಪ್ರಜೆಗಳನ್ನು ರಕ್ಷಿಸಬೇಕು.

೧೬. ಶುಭಾಂಗಿಯೇ! ದೊರೆಯು ತಾನಾಗಲೀ, ತನ್ನ ಮಗನ ಮೂಲಕವಾಗಿಯಾದರೂ ಪ್ರಜೆಗಳನ್ನು ರಕ್ಷಿಸಬೇಕು. ಪ್ರಜೆಗಳನ್ನು ಕಾಪಾಡದಿರುವ ದೊರೆಯು ಧರ್ಮಿಷ್ಠನಾದರೂ ಅಧೋಲೋಕಕ್ಕೆ ಹೋಗುವನು.

೧೭. ಪ್ರಿಯೇ! ಅಂತಹ ನಾನು ಪ್ರಜಾರಕ್ಷಣೆಗಾಗಿ ವನಕ್ಕೆ ಹೋಗುವೆನು. ಮೇರುಶಿಖರದಲ್ಲಿನ ಸೂರ್ಯನಂತೆ ನಾನು ವಿಯುಕ್ತಭಾವವನ್ನು ಹೊಂದಿರುವೆನು.

ಏವಮುದ್ದಿಶ್ಯ ತಾಂ ರಾಜಾ ಆರುರೋಹ ಹಯೋತ್ತಮಂ ।
ದೋಷಾಯತಿಸಮುಪ್ರಖ್ಯಂ ನಿರ್ದೋಷಂ ಕ್ಷಿತಿಭೂಷಣಂ ॥ ೧೮ ॥

ದೇವವಾಹಸಮಂ ರೂಪೇ ಪ್ರಭಂಜನಸಮಂ ಜವೇ ।
ಧರಾಮಾದೃತ್ಯ ಭೂಪಾಲೋ ದತ್ವಾ ತಂ ದಕ್ಷಿಣಂ ಕರಂ ॥ ೧೯ ॥

ಸಹಸ್ರಕೋಟಿದಾತಾರಂ ಕಾಮಿನೀಕುಚಪೀಡನಂ ।
ಅಶೋಕಪಲ್ಲವಾಕಾರಂ ವಜ್ರಾಂಕುಶಪಿರೋಹಣಂ ॥ ೨೦ ॥

ಸಂಪ್ರತಸ್ಥೇ ಮಹೀಪಾಲಶ್ಚಾಲಯಾನೋ ಮಹೀತಲಂ ।
ಸಾಧಯಾನೋ ಯಯೌ ದೇಶಾನ್ ಕಾನನಂ ಸ ನೃಪೋತ್ತಮಃ ॥ ೨೧ ॥

ವಾಜಿವೇಗೇನ ನಿರ್ಧೂತಾ ವಾರಣಾಃ ಸ್ಯಂದನಾ ಹಯಾಃ ।
ಪದಾತಯೋ ನಿಪೇತುಸ್ತೇ ಮೂರ್ಛಿತಾಃ ಕ್ಷಿತಿಮಂಡಲೇ ॥ ೨೨ ॥

---

೧೮-೨೧. ಹೀಗೆ ಆ ರಾಜನು ಸಂಧ್ಯಾವಳೀ ದೇವಿಗೆ ಹೇಳಿ ಚಂದ್ರನಂತೆ ಹೊಳೆಯುತ್ತಿರುವ, ದೋಷವಿಲ್ಲದಿರುವ, ಭೂಮಂಡಲಕ್ಕೆ ಅಲಂಕಾರವಾಗಿರುವ, ರೂಪದಲ್ಲಿ ದೇವತೆಗಳ ವಾಹನಕ್ಕೆ ಸದೃಶವಾದ, ವಾಯುವಿನಂತೆ ವೇಗವುಳ್ಳ, ಉತ್ತಮಕುದುರೆಯನ್ನು ಹತ್ತಿದನು.

ಬಳಿಕ ದೊರೆಯು ಭೂಮಿಯನ್ನು ವಂದಿಸಿ, ಸಾವಿರಕೋಟಿಗಳನ್ನು ದಾನಮಾಡಿದ, ಕಾಮಿನಿಯರಸ್ತನಗಳನ್ನು ಮರ್ದನಮಾಡಿದ, ಅಶೋಕದ ಚಿಗುರಿನಂತೆ ಕೋಮಲಾಕಾರವಾದ, ವಜ್ರಾಂಕುಶವನ್ನು ಎತ್ತಿಹಿಡಿದುಕೊಂಡಿರುವ, ಬಲಗೈಯಿಂದ ಕುದುರೆಯನ್ನು ಚಪ್ಪರಿಸಿ ಹೊರಟನು. ದೊರೆಯು ಕುದುರೆಯ ವೇಗದಿಂದ ಭೂಮಿಯನ್ನೇ ನಡುಗಿಸುವವನಾಗಿ ದೇಶಗಳನ್ನು ದಾಟಿಕೊಂಡು ಅರಣ್ಯವನ್ನು ಸೇರಿದನು.

೨೨. ಕುದುರೆಯ ವೇಗದಿಂದ ಆನೆ, ರಥ, ಕುದುರೆಗಳು ನಡುಗಿದುವು. ಕಾಲಾಳುಗಳು ಮೂರ್ಛೆಯನ್ನು ಹೊಂದಿ ನೆಲದ ಮೇಲೆ ಬಿದ್ದರು.

ಸ ರಾಜಾ ಸಹಸಾ ಪ್ರಾಪ್ತೋ ಮುನೀನಾಮಾಶ್ರಮಂ ಪರಂ ।
ಯೋಜನಾನಾಂ ಸಮುತ್ತೀರ್ಯ ಶತಮಷ್ಟೋತ್ತರಂ ನೃಪಃ ॥ ೨೩ ॥

ಪ್ರವಿವೇಶಾಶ್ರಮಂ ರಮ್ಯಂ ಕದಲೀಖಂಡಮಂಡಿತಂ ।
ಅಶೋಕಬಕುಲೋಪೇತಂ ಪುನ್ನಾಗಸರಲಾವೃತಂ ॥ ೨೪ ॥

ಮಾತುಲಿಂಗೈಃ ಕಪಿತ್ಥೈಶ್ಚ ಖರ್ಜೂರೈಃ ಪನಸಾದಿಭಿಃ ।
ನಾರಿಕೇಲೈಸ್ತಥಾ ತಾಲೈಃ ಕೇತಕೈಃ ಸಿಂಧುವಾರಕೈಃ ॥ ೨೫ ॥

ಚಂದನೈಃ ಸತಮಾಲೈಶ್ಚ ಸಾಲೈಃ ಪಿಪ್ಪಲಚಂಪಕೈಃ ।
ಕ್ರಮುಕೈರ್ದಾಡಿಮೈಶ್ಚೈವ ಧಾತ್ರೀವೃಕ್ಷೈಃ ಸಹಸ್ರಶಃ ॥ ೨೬ ॥

ನಿಂಬವೃಕ್ಷೈಶ್ಚ ಬಹುಶಸ್ತಥಾನ್ಯೈರ್ಲೋಧ್ರಪಾದಪೈಃ ।
ಪರಿಪಕ್ವಫಲೈರ್ನಮ್ರೈಃ ಖಗಾರೂಢೈಃ ಸಮಾವೃತಂ ॥ ೨೭ ॥

ಹೃದ್ಯೇನ ವಾಯುನಾ ಯುಕ್ತಂ ಪುಷ್ಪಗಂಧಾಯುತೇನ ಹಿ ।
ಪಶ್ಯಮಾನೋ ಮುನಿಂ ರಾಜಾ ದದರ್ಶ ಹುತಭುಕ್ಪ್ರಭಂ ॥ ೨೮ ॥

---

೨೩. ಆ ರಾಜನು ನೂರೆಂಟುಗಾವುದಮಾರ್ಗವನ್ನು ದಾಟಿ ಬೇಗ ಉತ್ತಮವಾದ ಮುನಿಗಳ ಆಶ್ರಮವನ್ನು ತಲಪಿದನು.

೨೪-೨೮. ಮನೋಹರವು, ಬಾಳೆಯಗಿಡಗಳಿಂದಲಂಕೃತವು, ಅಶೋಕ ಬಕುಲವೃಕ್ಷಗಳುಳ್ಳದು, ಸುರಹೊನ್ನೆ ಸರಳವೃಕ್ಷಗಳಿಂದಾವರಿಸಲ್ಪಟ್ಟದು, ಮಾದಳ, ಬೇಲ, ಖರ್ಜೂರ, ಹಲಸು, ತೆಂಗು, ತಾಳೆ, ಕೇದಿಗೆ, ಸಿಂದುವಾರ, ಗಂಧ, ಹೊಂಗೆ, ಸಾಲ, ಅಶ್ವತ್ಥ, ಸಂಪಿಗೆ, ಅಡಿಕೆ, ದಾಳಿಂಬರಿ, ನೆಲ್ಲಿ, ಬೇವು, ಮಾವು, ಲೋಧ್ರ ಮುಂತಾದ, ಪಕ್ವವಾದ ಹಣ್ಣು ಮತ್ತು ಪಕ್ಷಿಗಳ ಭಾರದಿಂದ ಬಗ್ಗಿರುವ ಸಾವಿರಾರು ವೃಕ್ಷಗಳಿಂದ ಕೂಡಿರುವುದು, ಮನೋಹರವಾಯು ಮತ್ತು ಪುಷ್ಪಗಳಿಂದ ಯುಕ್ತವೂ ಆಗಿರುವ ಆಶ್ರಮವನ್ನು ರಾಜನು ಪ್ರವೇಶಿಸಿದನು.

ವಾಮುದೇವಂ ದ್ವಿಜವರಂ ಬಹುಶಿಷ್ಯಸಮಾವೃತಂ ।
ಅವರುಹ್ಯ ಹಯೊಾದ್ದೃಷ್ಟ್ವಾ ಪ್ರಣನಾಮ ಚ ಸಾದರಂ ॥ ೨೯ ॥

ತೇನಾಪಿ ಮುನಿನಾ ರಾಜಾ ಹ್ಯರ್ಘಾದ್ಯೈರಭಿಪೂಜಿತಃ ।
ಉಪವಿಶ್ಯಾಸನೇ ಕೌಶೇ ಪ್ರಾಹ ಸಂಹೃಷ್ಟಯಾ ಗಿರಾ ॥ ೩೦ ॥

ಅದ್ಯ ಮೇ ಪಾತಕಂ ಕ್ಷೀಣಂ ಸಂಪ್ರಾಪ್ತಂ ಕರ್ಮಣಃ ಫಲಂ ।
ದೃಷ್ಟ್ವಾ ತವ ಪದಾಂಭೋಜಂ ಸಮ್ಯಗ್ಧ್ಯಾನಪರಸ್ಯ ಚ ॥ ೩೧ ॥

ತಚ್ಛ್ರುತ್ವಾ ವಚನಂ ತಸ್ಯ ರುಕ್ಮಾಂಗದಮಹೀಪತೇಃ ।
ಸಂಪೃಷ್ಟ್ವಾ ಕುಶಲಂ ಪ್ರಾಹ ವಾಮುದೇವೋ ಮುದಾನ್ವಿತಃ ॥ ೩೨ ॥

ರಾಜಂಸ್ತ್ವಯಾತಿಪುಣ್ಯೇನ ವಿಷ್ಣುಭಕ್ತೇನ ವೀಕ್ಷಿತಃ ।
ಮಮಾಶ್ರಮೋ ಮಹಾಭಾಗ ಪುಣ್ಯೋ ಜಾತೋ ಧರಾತಲೇ ॥ ೩೩ ॥

---

ಅಲ್ಲಿ ದೊರೆಯು ಅಗ್ನಿಯಂತೆ ಪ್ರಕಾಶಮಾನನಾದ, ಬಹು ಶಿಷ್ಯರಿಂದ ಕೂಡಿದ, ದ್ವಿಜಶ್ರೇಷ್ಠನಾದ ವಾಮುದೇವಮುನಿಯನ್ನು ನೋಡಿ ಕೂಡಲೇ ಕುದುರೆಯಿಂದಿಳಿದು ಭಕ್ತಿಪೂರ್ವಕವಾಗಿ ಮುನಿಗೆ ನಮಸ್ಕಾರಮಾಡಿದನು.

೩೦-೩೧. ಆ ಋಷಿಯೂ ಸಹ ರಾಜನನ್ನು ದರ್ಭಾಸನದಲ್ಲಿ ಕುಳ್ಳಿರಿಸಿ ಅರ್ಘ್ಯ ಮುಂತಾದುವುಗಳಿಂದ ಸತ್ಕರಿಸಿದನು. ಅನಂತರ ರಾಜನು ಸಂತೋಷಯುಕ್ತವಾದ ಮಾತಿನಿಂದ ಮುನಿಯನ್ನು ಕುರಿತು “ಮುನಿವರ್ಯನೇ! ಸವಿಾಚೀನವಾದ ಧ್ಯಾನದಲ್ಲಾಸಕ್ತನಾದ ನಿನ್ನ ಚರಣಕಮಲವನ್ನು ನೋಡಿ ನನ್ನ ಪಾಪವೆಲ್ಲವೂ ಹೋಯಿತು. ಈಗ ನನ್ನ ಸತ್ಕರ್ಮಗಳಿಗೆ ಫಲವು ಲಭಿಸಿತು.” ಎಂಬುದಾಗಿ ಹೇಳಿದನು.

೩೨. ಆ ರುಕ್ಮಾಂಗದ ಭೂಪಾಲನ ಮಾತನ್ನು ಕೇಳಿ ಸಂತೋಷಪಟ್ಟ ವಾಮುದೇವನು ಕುಶಲಪ್ರಶ್ನೆಮಾಡಿ ಹೀಗೆ ಮಾತನಾಡಿದನು.

೩೩. ಧನ್ಯನಾದ ರಾಜನೇ! ಬಹು ಪುಣ್ಯವಂತನೂ, ವಿಷ್ಣುಭಕ್ತನೂ ಆಗಿರುವ ನಿನ್ನ ಆಗಮನದಿಂದ ನಮ್ಮ ಆಶ್ರಮವು ಭೂತಲದಲ್ಲಿ ಪುಣ್ಯಕರವಾಯಿತು.

ಕಸ್ತ್ವೇನ್ಯಸ್ತುಲ್ಯತಾಮೇತಿ ಪಾರ್ಥಿವೋ ಧರಣೀತಲೇ ।
ಯೇನ ವೈವಸ್ವತಂ ಮಾರ್ಗಂ ಭಕ್ತ್ಯೋ ನಿರ್ಜಿತ್ಯ ಕಲ್ಮಷಂ ॥ ೩೪ ॥

ಪ್ರಾಪಿತಃ ಸಕಲೋ ಲೋಕೋ ವೈಕುಂಠಂ ಪದಮವ್ಯಯಂ ।
ಉಪೋಷಯಿತ್ವಾ ನೃಪತೇ ದ್ವಾದಶೀಂ ಪಾಪನಾಶಿನೀಂ ॥ ೩೫ ॥

ಚತುರ್ಭಿಃ ಶೋಭನೋಪಾಯೈಃ ಪ್ರಜಾ ಸಂಯಮ್ಯ ಭೂತಲೇ ।
ಸ್ವಕರ್ಮಸ್ಥಾ ವಿಕರ್ಮಸ್ಥಾ ನೀತಾ ಮಧುಭಿದಃ ಪದಂ ॥ ೩೬ ॥

ಸೋಽಸ್ಮಾಕಂ ದ್ರಷ್ಟುಕಾಮಾನಾಂ ಸಂಪ್ರಾಪ್ತೋ ದರ್ಶನಂ ನೃಪ ।
ಶ್ವಪಚೋಽಪಿ ಮಹೀಪಾಲ ವಿಷ್ಣುಭಕ್ತೋ ದ್ವಿಜಾಧಿಕಃ ॥ ೩೭ ॥

ವಿಷ್ಣುಭಕ್ತಿವಿಹೀನಸ್ತು ದ್ವಿಜೋಽಪಿ ಶ್ವಪಚಾಧಿಕಃ ।
ದುರ್ಲಭಾ ಭೂಪ ರಾಜಾನೋ ವಿಷ್ಣುಭಕ್ತಾ ಮಹೀತಲೇ ॥ ೩೮ ॥

---

೩೪-೩೭. ದೊರೆಯೇ ಭೂಮಂಡಲದಲ್ಲಿ ಯಾವ ರಾಜನು ನಿನಗೆ ಸಮಾನನಾದಾನು? ಆಹಾ! ನೀನು ಪಾಪವನ್ನು ದೂರೀಕರಿಸಿ ಯಮಮಾರ್ಗವನ್ನು ನಾಶಮಾಡಿರುವೆ! ಪಾಪನಾಶಕವಾದ ಏಕಾದಶಿಯದಿನದಲ್ಲಿ ಉಪವಾಸ ಮಾಡಿಸಿ ಜನಗಳನ್ನೆಲ್ಲಾ ನಾಶರಹಿತವಾದ ವೈಕುಂಠಲೋಕಕ್ಕೆ ಸೇರಿಸಿರುವೆ. ಶ್ರೇಯಸ್ಕರವಾದ ನಾಲ್ಕು ಉಪಾಯುಗಳಿಂದ ಭೂಮಿಯಲ್ಲಿ ಪ್ರಜೆಗಳನ್ನು ಶಾಸನ ಮಾಡಿ ಸ್ವಾಧೀನದಲ್ಲಿಟ್ಟುಕೊಂಡ, ಸ್ವಕರ್ಮ ವಿಕರ್ಮನಿಷ್ಠರಾದ ಜನರೆಲ್ಲರನ್ನೂ ಹರಿಪದಕ್ಕೆ ಹೋಗುವಂತೆ ಮಾಡಿರುವೆ! ಅಂತಹ ನಿನ್ನನ್ನು ನೋಡಬೇಕೆಂದು ಬಯಸುತ್ತಿದ್ದ ನಮಗೆ ದರ್ಶನವನ್ನು ಕೊಟ್ಟಿರುವೆ. ದೊರೆಯೇ! ಶ್ವಪಚನಾದರೂ ಸಹ ಅವನು ವಿಷ್ಣುಭಕ್ತನಾದರೆ ದ್ವಿಜರಿಗಿಂತಲೂ ಉತ್ತಮನೆನಿಸುವನು.

೩೮. ದ್ವಿಜನಾದರೂ ಸಹ ವಿಷ್ಣುಭಕ್ತಿಯಿಲ್ಲದಿದ್ದರೆ ಅವನು ಶ್ವಪಚನಿಗಿಂತಲೂ ಅಧಿಕ ನೀಚನೆನಿಸುವನು. ಭೂಪಾಲನೇ! ಭೂಮಿಯಲ್ಲಿ ವಿಷ್ಣುಭಕ್ತರಾದ ರಾಜರು ದುರ್ಲಭರು.

ನಾವೈಷ್ಣವೋ ಭವೇದ್ರಾಜಾ ಕ್ಷಿತಿಲಕ್ಷ್ಮೀಪ್ರಸಾಧಕಃ ।
ಯೋ ನ ರಾಜಾ ಹರೇರ್ಭಕ್ತೋ ದೇವೇಷ್ವನ್ಯೇಷು ಭಕ್ತಿಮಾನ್ ॥ ೩೯ ॥

ಯಥಾ ಜಾರೇ ಪತಿಂ ತ್ಯಕ್ತ್ವಾ ರತಾ ಸ್ತ್ರೀ ಸ ತಥಾ ನೃಪಃ ।
ಏವಂ ವ್ಯತಿಕ್ರಮಸ್ತಸ್ಯ ನೃಪತೇರ್ಭವತಿ ಧ್ರುವಂ ॥ ೪೦ ॥

ಧರ್ಮಸ್ಯಾರ್ಥಸ್ಯ ಕಾಮಸ್ಯ ಪ್ರಜ್ಞಾಯಾಶ್ಚ ಗತೇರಪಿ ।
ತತ್ತ್ವಯಾ ನ್ಯಾಯವಿಹಿತಂ ಕೃತಂ ವಿಷ್ಣೋಃ ಪ್ರಪೂಜನಂ ॥ ೪೧ ॥

ತೇನ ಧನ್ಯೋಽಸಿ ನೃಪತೇ ವಯಂ ಧನ್ಯಾಸ್ತವೇಕ್ಷಣಾತ್ ।
ಇತ್ಯೇವಂ ಭಾಷಮಾಣಂ ತು ವಾಮದೇವಂ ನೃಪೋತ್ತಮಃ ॥ ೪೨ ॥

ಉವಾಚಾವನತೋ ಭೂತ್ವಾ ಪ್ರಕೃತ್ಯಾ ವಿನಯಾನ್ವಿತಃ ।
ಕ್ಷಾಮಯೇ ತ್ವಾ ದ್ವಿಜಶ್ರೇಷ್ಠ ನಾಹಮೇತಾದೃಶೋ ವಿಭೋ ॥ ೪೩ ॥

---

೩೯-೪೧. ಭೂಲಕ್ಷ್ಮೀಸಾಧಕನಾದ ರಾಜನು ಅವೈಷ್ಣವನಾಗಬಾರದು. ಯಾವ ರಾಜನು ಹರಿಭಕ್ತನಾಗದೆ ಅನ್ಯದೇವತೆಗಳಲ್ಲಿ ಭಕ್ತಿಮಾಡುವನೋ ಆ ದೊರೆಯು ಗಂಡನನ್ನು ಬಿಟ್ಟು ಜಾರಪುರುಷನಲ್ಲಿ ಅನುರಾಗವಮಾಡಿದ ಸ್ತ್ರೀಯಂತೆ ದೋಷಿಯಾಗುವನು. ಅಂತಹ ರಾಜನಿಗೆ ಈ ರೀತಿಯಾಗಿ ಧರ್ಮ, ಅರ್ಥ, ಪ್ರಜ್ಞೆ, ಮತ್ತು ಗತಿಗಳಿಗೆ ವ್ಯತ್ಯಾಸವುಂಟಾಗುವುದು ಖಂಡಿತ. ಆದಕಾರಣ ನ್ಯಾಯವಿಹಿತವಾದ ವಿಷ್ಣುಪೂಜೆಯೇ ನಿನ್ನಿಂದ ಮಾಡಲ್ಪಟ್ಟಿದೆ.

೪೨-೪೩. ಅದರಿಂದ ನೀನು ಧನ್ಯನಾಗಿರುವೆ. ರಾಜನೇ! ನಿನ್ನನ್ನು ನೋಡಿದುದರಿಂದ ನಾವೂ ಧನ್ಯರಾದೆವು.

ಈ ರೀತಿಯಾಗಿ ಹೇಳುತ್ತಿರುವ ವಾಮದೇವನನ್ನು ಕುರಿತು ರಾಜಶ್ರೇಷ್ಠನು ಸ್ವಾಭಾವಿಕವಾದ ವಿನಯದಿಂದ ಕೂಡಿ, ತಲೆಬಾಗಿ ಮಾತನಾಡಿದನು. ಸಮರ್ಥನಾದ ದ್ವಿಜಶ್ರೇಷ್ಠನೇ! ನಾನು ಇಂತಹ ಗುಣವಂತನಲ್ಲ. ನಿನ್ನನ್ನು ಕ್ಷಮಾಪಣೆ ಬೇಡುವೆನು.

ತ್ವತ್ಪಾದಪಾಂಸುನಾ ತುಲ್ಯೋ ನಾಹಂ ವಿಪ್ರ ಭವಾಮಿ ಹಿ ।
ನ ವಿಪ್ರೇಭ್ಯೋಽಧಿಕಾ ದೇವಾ ಭವಂತೀಹ ಕದಾಚನ ॥ ೪೪ ॥

ಪರಿತುಷ್ಟೈರ್ದ್ವಿಜೈರ್ಭಕ್ತಿರ್ಯತೋ ಭವತಿ ಮಾಧವೇ ।
ದ್ವೇಷ್ಯೋ ಭವತಿ ತೈ ರುಷ್ಟೈಃ ಸತ್ಯಮೇತನ್ಮಯೇರಿತಂ ॥ ೪೫ ॥

ತಮಾಹ ವಾಮದೇವಸ್ತು ಬ್ರೂಹಿ ಕಿಂ ತೇ ದದಾಮ್ಯಹಂ ।
ನಾದೇಯಂ ವಿದ್ಯತೇ ರಾಜನ್ ಗೃಹಾಯಾತಸ್ಯ ತೇಽಧುನಾ ॥ ೪೬ ॥

ಅಭೀಷ್ಟಂ ಹಿ ಮಹೀಪಾಲ ಯೋ ದದಾತಿ ಮಹೀತಲೇ ।
ಪಟಹಂ ವಾಸರೇ ವಿಷ್ಣೋಃ ಪ್ರಜಾಭೋಜನವಾರಣಂ ॥ ೪೭ ॥

ತಮಾಹ ನೃಪತಿರ್ವಿಪ್ರಂ ಕೃತಾಂಜಲಿಪುಟಸ್ತದಾ ।
ಪ್ರಾಪ್ತಮೇವ ಮಯಾ ಸರ್ವಂ ತ್ವದಂಘ್ರಿಯುಗಲೇಕ್ಷಣಾತ್ ॥ ೪೮ ॥

---

೪೪. ಬ್ರಾಹ್ಮಣನೇ! ನಾನು ನಿನ್ನ ಪಾದಧೂಳಿಗೂ ಸಮಾನನಾಗಲಾರೆನು. ಇಲ್ಲಿ ದೇವತೆಗಳೂ ಸಹ ಯಾನಾಗಲೂ ಬ್ರಾಹ್ಮಣರಿಗಿಂತಲೂ ಅಧಿಕರಾಗಲಾರರು.

೪೫. ದ್ವಿಜರನ್ನು ಸಂತೋಷಪಡಿಸುವುದರಿಂದ ಮಾಧವನಲ್ಲಿ ಭಕ್ತಿಯುಂಟಾಗುವುದು. ದ್ವಿಜರಿಗೆ ಕೋಪವನ್ನುಂಟುಮಾಡುವವನು ಹರಿದ್ವೇಷಕ್ಕೆ ಭಾಗಿಯಾಗುವನು. ನಾನು ಹೇಳಿದ ಈ ವಿಷಯವು ಸತ್ಯವಾದುದು.

೪೬-೪೭. ವಾಮದೇವನು "ರಾಜನೇ! ಈಗ ಮನೆಯಿಂದ ಬಂದಿರುವ ನಿನಗೆ ಕೊಡಲರ್ಹವಾಗದಿರುವುದಾವುದೂ ಇಲ್ಲ. ನಿನಗೆ ನಾನು ಏನನ್ನು ಕೊಡಲಿ? ಹೇಳು. ಭೂಪಾಲನೇ! ಹರಿದಿನದಲ್ಲಿ ಪ್ರಜೆಗಳನ್ನು ಭೋಜನಮಾಡದಂತೆ ತಡೆದ ಪಟಹವೇ ಈ ಲೋಕದಲ್ಲಿ ಅಭೀಷ್ಟವೆಲ್ಲವನ್ನೂ ಕೊಡುತ್ತದೆ.'' ಎಂದು ರಾಜನಿಗೆ ಹೇಳಿದನು.

೪೮. ಆಗ ದೊರೆಯು ಕೈಮುಗಿದುಕೊಂಡು ಆ ಬ್ರಾಹ್ಮಣನಿಗೆ ಹೇಳಿದನು :—

ದ್ವಿಜವರನೇ! ನಿನ್ನ ಎರಡು ಪಾದಗಳನ್ನು ದರ್ಶನಮಾಡಿದಮಾತ್ರದಿಂದಲೇ ನನಗೆ ಸರ್ವಸ್ವವೂ ಲಭಿಸಿತು.

ಮಮೈಕಃ ಸಂಶಯೋ ಬ್ರಹ್ಮನ್ ವರ್ತತೇ ಬಹುಕಾಲತಃ ।
ತಂ ಪೃಚ್ಛಾಮಿ ದ್ವಿಜಾಗ್ರ್ಯಂ ತ್ವಾಂ ಸರ್ವಸಂದೇಹಭಂಜನಂ ॥ ೪೯ ॥

ತ್ರೈಲೋಕ್ಯಸುಂದರೀ ಭಾರ್ಯಾ ಮಮ ಕೇನ ಸುಕರ್ಮಣಾ ।
ಯಾ ವಿಲೋಕಯತೇ ದೃಷ್ಟ್ಯಾ ಮಾಂ ಸದಾ ಮನ್ಮಥಾಧಿಕಂ ॥ ೫೦ ॥

ಯತ್ರಯತ್ರ ಪದಂ ದೇವೀ ದದಾತಿ ವರವರ್ಣಿನೀ ।
ತತ್ರ ತತ್ರ ನಿಧಾನಾನಿ ಪ್ರಕಾಶಯತಿ ಮೇದಿನೀ ॥ ೫೧ ॥

ಯಸ್ಯಾಶ್ಚಾಂಗಂ ಜರಾಹೀನಂ ವಲೀಪಲಿತವರ್ಜಿತಂ ।
ಸದಾ ಭಾತಿ ಮುನಿಶ್ರೇಷ್ಠ ಶಾರದೇಂದುಪ್ರಭಾ ಯಥಾ ॥ ೫೨ ॥

ವಿನಾಗ್ನಿನಾಪಿ ಸಾ ವಿಪ್ರ ಸಾಧಯತ್ಯೇವ ಷಡ್ರಸಂ ।
ಅನ್ನಂ ಪಚತಿ ಯತ್ಸ್ವಲ್ಪಂ ತಸ್ಮಿನ್ ಭುಂಜತಿ ಕೋಟಯಃ ॥ ೫೩ ॥

---

೪೯. ನನಗೆ ಬಹುಕಾಲದಿಂದಲೂ ಒಂದು ಸಂಶಯವಿದೆ ಅದನ್ನು ಕೇಳುವೆನು. ಸಕಲಸಂದೇಹಗಳನ್ನೂ ಪರಿಹರಿಸುವ ಸಾಮರ್ಥ್ಯವುಳ್ಳ, ದ್ವಿಜ ಶ್ರೇಷ್ಠನಾದ ನೀನು ಅದನ್ನು ಪರಿಹರಿಸು.

೫೦. ನನ್ನನ್ನು ಯಾವಾಗಲೂ ಮನ್ಮಥನಗಿಂತಲೂ ಅಧಿಕವಾಗಿ ದೃಷ್ಟಿಯಿಂದವಲೋಕಿಸುತ್ತಿರುವ, ತ್ರಿಲೋಕಸುಂದರಿಯಾದ ಪತ್ನಿಯು ನನಗೆ ಯಾವ ಸತ್ಕರ್ಮಪರಿಪಾಕದಿಂದ ಲಭಿಸಿರುವಳು ?

೫೧. ಆ ದೇವಿಯು ಎಲ್ಲೆಲ್ಲಿ ಹೆಜ್ಜೆಯನ್ನಿಡುವಳೋ ಅಲ್ಲೆಲ್ಲಾ ಭೂಮಿಯು ನಿಧಿಗಳನ್ನು ಪ್ರಕಾಶಪಡಿಸವುದು.

೫೨. ಆ ದೇವಿಯ ಅವಯವಗಳು ಮುಪ್ಪು ಸುಕ್ಕುಗಳಿಲ್ಲದೆಯೂ, ಕೂದಲು ನರೆಯದೆಯೂ ಯಾವಗಲೂ ಶರತ್ಕಾಲದ ಬೆಳದಿಂಗಳಿನಂತೆ ಪ್ರಕಾಶಿಸುತ್ತಿರುವುವು.

೫೩. ಬ್ರಾಹ್ಮಣನೇ ! ಆಕೆಯು ಬೆಂಕಿಯಿಲ್ಲದೇ ಷಡ್ರಸಯುಕ್ತವಾದ ಅನ್ನವನ್ನು ಪಕ್ವಮಾಡಿ ಸಿದ್ಧಪಡಿಸುವಳು. ಅವಳು ಮಾಡಿದ ಸ್ವಲ್ಪ ಅನ್ನವನ್ನೇ ಕೋಟಿಜನರು ಊಟಮಾಡಿ ತೃಪ್ತಿಪಡುವರು.

ಪತಿವ್ರತಾ ದಾನಶೀಲಾ ಸರ್ವಭೂತಸುಖಾವಹಾ ।
ನಾವಜ್ಞಾ ಕ್ರಿಯತೇ ಬ್ರಹ್ಮನ್ ವಾಕ್ಯೇನಾಪಿ ಪ್ರಸುಪ್ತಯಾ ॥ ೫೪ ॥

ಯಸ್ಯಾಂ ಜಾತಸ್ತು ತನಯೋ ಮಮಾಜ್ಞಾಯಾಂ ಸ್ಥಿತಃ ಸದಾ ।
ಅಹಮೇವ ಧರಾನಷ್ಟೇ ಪುತ್ರೀ ದ್ವಿಜವರೋತ್ತಮ ॥ ೫೫ ॥

ಯಸ್ಯ ಪುತ್ರಃ ಪಿತುರ್ಭಕ್ತೋ ಹ್ಯಧಿಕೋ ಗುಣಸಂಚಯೈಃ ।
ಏಕದ್ವೀಪಪತಿಶ್ಚಾಹಂ ವಿದಿತೋ ಧರಣೀತಲೇ ॥ ೫೬ ॥

ಪುತ್ರೋ ಮಮಾಧಿಕೋ ಜಾತಃ ಸಪ್ತದ್ವೀಪಪ್ರಪಾಲಕಃ ।
ಮದರ್ಥೇ ಯೇನ ವಿಪ್ರೇಂದ್ರ ಸಮಾನೀತಾ ನೃಪಾತ್ಮಜಾ ॥ ೫೭ ॥

ವಿದ್ಯುಲ್ಲೇಖೇತಿ ವಿಖ್ಯಾತಾ ರಣೇ ಜಿತ್ವಾ ಮಹೀಭುಜಃ ।
ಅಥ ತೇನಾಧಿಪತ್ಯೇನ ರೂಪದ್ರವಿಣಶಾಲಿನಾ ॥ ೫೮ ॥

---

೫೪. ಅವಳು ಪತಿವ್ರತೆಯು, ದಾನಶೀಲಳು, ಸಕಲಪ್ರಾಣಿಗಳಿಗೂ ಸುಖದಾಯಕಳು, ನಿದ್ರೆಯಲ್ಲಾಗಲೀ ಅಥವಾ ಮಾತಿನಿಂದಲಾಗಲೀ ಅವಳು ಯಾರನ್ನೂ ತಿರಸ್ಕಾರಮಾಡುವುದಿಲ್ಲ.

೫೫-೫೬. ಅವಳಲ್ಲಿ ಹುಟ್ಟಿದ ಮಗನು ಯಾವಾಗಲೂ ನನ್ನ ಆಪ್ಪಣೆ ಯಂತೆ ನಡೆಯುತ್ತಿರುವನು. ನನ್ನ ಮಗನು ಪಿತೃಭಕ್ತನು. ನನಗಿಂತಲೂ ಹೆಚ್ಚು ಗುಣಗಳುಳ್ಳವನು. ನಾನು ಭೂಮಿಯಲ್ಲಿ ಏಕದ್ವೀಪಪತಿಯೆಂದು ಪ್ರಖ್ಯಾತನಾಗಿರುವೆನು.

೫೭-೬೦. ಮಗನಾದರೋ ನನಗಿಂತಲೂ ಹೆಚ್ಚಾಗಿ ಸಪ್ತದ್ವೀಪಪಾಲಕ ನೆಂದು ಪ್ರಸಿದ್ಧನಾಗಿರುವನು. ಅವನು ಯುದ್ಧದಲ್ಲಿ ರಾಜರನ್ನು ಜಯಿಸಿ ವಿದ್ಯುಲ್ಲೇಖೆ ಎಂದು ಪ್ರಖ್ಯಾತಳಾದ ರಾಜಪುತ್ರಿಯನ್ನು ನನಗೋಸ್ಕರ ತಂದು ಕೊಟ್ಟನು. ಆನಂತರ ಸುಂದರನೂ ಮತ್ತು ಧನಿಕನೂ ಆದ ಅವನು ಆರು ತಿಂಗಳು ರಾಜ್ಯಭಾರಮಾಡುವುದರಲ್ಲಿಯೇ ಸರ್ವರನ್ನೂ ಯುದ್ಧದಲ್ಲಿ ಜಯಿಸಿ,

ಷಣ್ಮಾಸೇನ ರಣೇ ಜಿತ್ವಾ ಕೃತ್ವಾ ಸರ್ವಾನ್ನಿರಾಯುಧಾನ್ ।
ಯೋ ಗತ್ವಾ ಪ್ರಮದಾರಾಜ್ಯಂ ಜಿತ್ವಾ ತಾಃ ಪ್ರಮದಾ ರಣೇ ॥ ೫೯ ॥

ಆಜಹಾರ ಶುಭಾಸ್ತಾಸಾಂ ಮಧ್ಯಾದಷ್ಟೌ ವರಾಂಗನಾಃ ।
ಪ್ರದದೌ ಮಯಿ ತಾಃ ಸರ್ವಾಃ ಪ್ರಣಮ್ಯ ಚ ಪುನಃಪುನಃ ॥ ೬೦ ॥

ಯಾನಿ ವಾಸಾಂಸಿ ದಿವ್ಯಾನಿ ಯಾನಿ ರತ್ನಾನಿ ಭೂತಲೇ ।
ತಾನಿ ಮೇ ಪ್ರದದೌ ಪುತ್ರೋ ಜನನ್ಯಾಸ್ತೂಪವರ್ಣಿತಃ ॥ ೬೧ ॥

ಏಕಾಹ್ನಾ ಪೃಥಿವೀಂ ಸರ್ವಾಮತೀತ್ಯ ಬಹುಯೋಜನಾಂ ।
ಪುನರಾಯಾತಿ ಶರ್ವರ್ಯಾಂ ಮತ್ಪಾದಾಭ್ಯಂಗಕಾರಣಾತ್ ॥ ೬೨ ॥

ನಿಶೀಥೇಂಗಾನಿ ಸಂವಾಹ್ಯ ದ್ವಾರಿ ತಿಷ್ಠತಿ ವರ್ಜಿತಃ ।
ಪ್ರಬೋಧಯನ್ಪ್ರೇಷ್ಯಜನಾನ್ನಿದ್ರಯಾ ಸಂಕುಲೇಂದ್ರಿಯಾನ್ ॥ ೬೩ ॥

---

ನಿರಾಯುಧರನ್ನಾಗಿ ಮಾಡಿ, ಸ್ತ್ರೀರಾಜ್ಯಕ್ಕೆ ಹೋಗಿ, ಯುದ್ಧದಲ್ಲಿ ಅವರನ್ನೂ ಜಯಿಸಿ ಅವರ ಸಮೂಹದಲ್ಲಿ ಆರಿಸಿ ಉತ್ತಮರಾದ ಎಂಟು ಸುಂದರಸ್ತ್ರೀಯರನ್ನು ಕರೆತಂದು ನನಗೆ ಒಪ್ಪಿಸಿದನು. ಅವರೆಲ್ಲರೂ ನನಗೆ ಬಾರಿ ಬಾರಿಗೂ ವಂದಿಸಿ ವಿಧೇಯರಾಗಿರುವರು.

೬೧. ಭೂಮಂಡಲದಲ್ಲಿ ಯಾವ ವಸ್ತ್ರ, ರತ್ನ ಮುಂತಾದ ಮನೋಹರ ವಸ್ತುಗಳಿವೆಯೋ ಅವನ್ನೆಲ್ಲಾ ಪುತ್ರನು ನನಗೂ ಅವನ ತಾಯಿಗೂ ತಂದು ಕೊಟ್ಟಿರುವನು.

೬೨. ಅವನು ಒಂದು ಹಗಲಿನಲ್ಲಿಯೇ ಬಹು ಯೋಜನ ವಿಸ್ತೀರ್ಣವುಳ್ಳ ಅಖಂಡಭೂಮಂಡಲವನ್ನು ಸಂಚರಿಸಿ, ರಾತ್ರಿಯ ಹೊತ್ತಿಗೆ ನಮ್ಮ ಪಾದಾಭ್ಯಂಗ ಮಾಡಿಸುವುದಕ್ಕಾಗಿ ಪುನಃ ಹಿಂತಿರುಗಿ ಬರುವನು.

೬೩. ರಾತ್ರಿಯ ಕಾಲದಲ್ಲಿ ನಮ್ಮ ಅಂಗಗಳನ್ನು ಒತ್ತಿ ನಿದ್ರೆಯಿಂದ ಪೀಡಿತರಾಗುತ್ತಿರುವ ಭೃತ್ಯಜನರನ್ನು ಎಚ್ಚರಿಸುತ್ತಾ ಬಾಗಿಲಿನಲ್ಲಿ ನಿಂತಿರುವನು.

ತಥಾಯಂ ಮೇ ಮುನಿಶ್ರೇಷ್ಠ ದೇಹೋ ರೋಗವಿವರ್ಜಿತಃ |
ಅಪ್ರಮೇಯಂ ಮಮ ಸುಖಂ ವಿಷಯಂ ಹಿ ಪ್ರಿಯಾ ಗೃಹೇ || ೬೪ ||

ವಾಜಿನೋ ವಾರಣಾಶ್ಚೈವ ಧನಧಾನ್ಯಮನಂತಕಂ |
ವರ್ತತೇ ಹಿ ಜನಃ ಸರ್ವೋ ಮಮಾಜ್ಞಾಪಾಲಕಃ ಕ್ಷಿತೌ || ೬೫ ||

ಕೇನ ಕರ್ಮಪ್ರಭಾವೇಣ ಮಮೇದಂ ಸಾಂಪ್ರತಂ ಸುಖಂ |
ಇಹ ಜನ್ಮಕೃತಂ ವಾಪಿ ಪರಜನ್ಮಕೃತಂ ತಥಾ || ೬೬ ||

ಮಮ ಪುಣ್ಯಂ ವದ ಬ್ರಹ್ಮನ್ ವಿಚಾರ್ಯ ಸ್ವಮನೀಷಯಾ || ೬೭ ||

ದೇಹೇ ನ ರೋಗೋ ವಶಗಾ ಪ್ರಿಯಾ ಚ
ಗೃಹೇ ವಿಭೂತಿರ್ನೃಹರೌ ಚ ಭಕ್ತಿಃ |

---

೬೪-೬೫. ಮುನಿಶ್ರೇಷ್ಠನೇ! ಈ ನನ್ನ ದೇಹವು ರೋಗವಿವರ್ಜಿತವಾಗಿದೆ. ನನಗೆ ವಿಷಯಸುಖವು ಅಪರಿಮಿತವಾಗಿದೆ. ಮನೆಯಲ್ಲಿ ಪತ್ನಿಯು, ಕುದುರೆಗಳು, ಆನೆಗಳು, ಅನಂತವಾದ ಧನಧಾನ್ಯಸಂಪತ್ತೂ ಸಹ ಇವೆ. ದೇಶದಲ್ಲಿನ ಜನರೆಲ್ಲಾ ನನ್ನ ಅಪ್ಪಣೆಯಂತೆ ನಡೆಯುತ್ತಿರುವರು.

೬೬-೬೭. ಈಗ ನನಗೆ ಲಭಿಸಿರುವ ಈ ಸುಖವು ಯಾವ ಕರ್ಮಪ್ರಭಾವದಿಂದ ಬಂದಿದೆ? ನನ್ನ ಈ ಜನ್ಮದ ಪುಣ್ಯದಿಂದ ಬಂದಿದೆಯೋ! ಅಥವಾ ಜನ್ಮಾಂತರದಲ್ಲಾಚರಿಸಿದ ಪುಣ್ಯಫಲವೇ? ಬ್ರಾಹ್ಮಣನೇ! ಅದನ್ನು ನೀನು ಜ್ಞಾನದೃಷ್ಟಿಯಿಂದ ವಿಚಾರಮಾಡಿ ತಿಳಿಸು.

೬೮. ಶರೀರದಲ್ಲಿ ರೋಗವಿಲ್ಲದಿರುವಿಕೆಯು, ಪತ್ನಿಯು ಸ್ವಾಧೀನವಾಗಿರುವುದು, ಮನೆಯಲ್ಲಿ ಐಶ್ವರ್ಯ, ಶ್ರೀಹರಿಯಲ್ಲಿ ಭಕ್ತಿ, ವಿದ್ವಾಂಸರ ಸತ್ಕಾರ,

ವಿದ್ವತ್ಸುಪೂಜಾ ದ್ವಿಜದಾನಶಕ್ತಿಃ
ಮನ್ಯೇಹಮೇತತ್ಸುಕೃತಪ್ರಸೂತಂ || ೬೮ ||

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ರುಕ್ಮಾಂಗದ ವಾಮದೇವಸಂವಾದೋ ನಾಮ
ದಶಮೋಽಧ್ಯಾಯಃ

---

ದ್ವಿಜರಿಗೆ ದಾನ ಮಾಡುವ ಸಾಮರ್ಥ್ಯ ಇವೆಲ್ಲವೂ ಸುಕೃತದಿಂದುಂಟಾದ ಫಲವೆಂದು ತಿಳಿದಿರುವೆನು.

ಇಂತು ಶ್ರೀನಾರದೀಯ ಪುರಾಣೋತ್ತರಭಾಗದಲ್ಲಿ ರುಕ್ಮಾಂಗದ ವಾಮದೇವ ಸಂವಾದವೆಂಬ ಹತ್ತನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಮಗನಿಗೆ ರಾಜ್ಯಭಾರವನ್ನು ವಹಿಸಿ ಬೇಟೆಗೆ ಹೋಗಬೇಕೆಂದು ಸಂಕಲ್ಪಿಸಿದ ರುಕ್ಮಾಂಗದರಾಜನಿಗೆ ಅವನ ಪತ್ನಿಯು ಈಗಿನ ಸ್ಥಿತಿಯಲ್ಲಿ ಮೃಗಹಿಂಸೆಯು ಕರ್ತವ್ಯವಲ್ಲವೆಂದು ಹೇಳಿದಳು. ಅದನ್ನು ಕೇಳಿ ಅವನು ಕಂಟಕ ಶೋಧನೆಗಾಗಿ ವನಕ್ಕೆ ಹೋಗುವೆನು. ನಾನು ಮೃಗಹಿಂಸೆಯನ್ನು ಮಾಡುವುದಿಲ್ಲ ಮುಂತಾಗಿ ಹೇಳಿ ಕುದುರೆಯಮೇಲೆ ಕುಳಿತು ವಾಮದೇವಮುನಿಗಳ ಆಶ್ರಮಕ್ಕೆ ಹೋಗಿ ಅವರಿಂದ ಸತ್ಕಾರ ಪಡೆದು ನನಗೆ ಪ್ರಾಪ್ತವಾಗಿರುವ ಸಂಪತ್ತೆಲ್ಲವೂ ಪುಣ್ಯಫಲವೆಂದು ಭಾವಿಸಿರುವೆನು, ಅದು ಯಾವ ಸುಕೃತಫಲವೆಂಬುದನ್ನು ಜ್ಞಾನಿಯಾದ ನೀನು ನನಗೆ ತಿಳಿಸಬೇಕೆಂದು ವಾಮದೇವಮುನಿಯನ್ನು ಕೇಳಿದನು.

# ಏಕಾದಶೋಽಧ್ಯಾಯಃ

---

ವಸಿಷ್ಠ ಉವಾಚ

ತಚ್ಛ್ರುತ್ವಾ ನೃಪತೇರ್ವಾಕ್ಯಂ ಮಹಾಜ್ಞಾನೀ ಮುನೀಶ್ವರಃ ।
ಚಿಂತಯಿತ್ವಾ ಕ್ಷಣಂ ಜ್ಞಾತ್ವಾ ಕಾರಣಂ ತಮುವಾಚ ಹ ॥ ೧ ॥

ವಾಮದೇವ ಉವಾಚ

ಪುರಾ ತ್ವಮವನೀಪಾಲ ಶೂದ್ರಜಾತಿಸಮುದ್ಭವಃ ।
ದಾರಿದ್ರ್ಯೇಣ ಪರಾಭೂತೋ ದುಷ್ಟಯಾ ಭಾರ್ಯಯಾ ತಥಾ ॥ ೨ ॥

ಪರಸೇವನಯಾ ಚೈವ ವೇತನೇನ ಭುಜಿಕ್ರಿಯಾ ।
ನಿವಸನ್ ದುಃಖಸಂತಪ್ತೋ ಬಹುವರ್ಷಾಣಿ ಪಾರ್ಥಿವ ॥ ೩ ॥

ಕದಾಚಿದ್ದ್ವಿಜಸಂಸರ್ಗಾತ್ತೀರ್ಥಯಾತ್ರಾಂ ಗತೋ ಭವಾನ್ ।
ತತಃ ಸರ್ವಾಣಿ ತೀರ್ಥಾನಿ ಪರಿಕ್ರಮ್ಯ ಮಹೀಪತೇ ॥ ೪ ॥

---

## ಹನ್ನೊಂದನೆಯ ಅಧ್ಯಾಯವು

ವಸಿಷ್ಠನು ಹೇಳಿದನು:—ಮಹಾಜ್ಞಾನಿಯಾದ ಆ ಮುನೀಶ್ವರನು ದೊರೆಯು ಹೇಳಿದ ಮಾತನ್ನು ಕೇಳಿ ಒಂದು ಕ್ಷಣಕಾಲ ಯೋಚಿಸಿ ಕಾರಣವನ್ನು ತಿಳಿದು ರಾಜನಿಗೆ ಹೇಳತೊಡಗಿದನು.

೨-೩. ವಾಮದೇವನು ಹೇಳಿದನು:—ಭೂಪಾಲನೇ! ನೀನು ಪೂರ್ವದಲ್ಲಿ ಶೂದ್ರಜಾತಿಯಲ್ಲಿ ಹುಟ್ಟಿ, ಬಡತನ ಮತ್ತು ದುಷ್ಟಪತ್ನಿಯ ಸಮಾವೇಶಗಳಿಂದ ಪರಾಭವವನ್ನು ಹೊಂದಿ, ಇತರರ ಸೇವೆಮಾಡಿ ಅದರಿಂದ ಬಂದ ಸಂಬಳದಿಂಡ ಹೊಟ್ಟೆಹೊರೆದುಕೊಂಡು ದುಃಖದಿಂದ ತಪಿಸುತ್ತಾ ಬಹುವರ್ಷಗಳ ಕಾಲ ಕಳೆದಿರುವೆ.

೪-೫. ಆಗ ಒಂದಾನೊಂದು ಕಾಲದಲ್ಲಿ ದ್ವಿಜರ ಸಹವಾಸದಿಂದ ನೀನು ತೀರ್ಥಯಾತ್ರೆಗೆ ಹೊರಟು, ಸಕಲ ತೀರ್ಥಗಳನ್ನೂ ಸಂಚರಿಸಿ ಬಂದಮೇಲೆ

ದ್ವಿಜಸೇವಾಪರೋ ಜಾತೋ ಮಥುರಾಂ ಪುಣ್ಯರೂಪಿಣೀಂ ।
ತತ್ರ ಸ್ನಾನಂ ತ್ವಯಾ ವಿಪ್ರಸಂಗೇನ ಯಮುನಾಜಲೇ ॥ ೫ ॥

ವಿಶ್ರಾಂತಿಸಂಜ್ಞಕೇ ತೀರ್ಥೇ ಸರ್ವತೀರ್ಥೋತ್ತಮೋತ್ತಮೇ ।
ಮಂದಿರೇ ಚ ವರಾಹಸ್ಯ ಕಥ್ಯಮಾನಾಂ ಕಥಾಂ ನೃಪ ॥ ೬ ॥

ಪುರಾಣೋಕ್ತಾಂ ಚ ಶುಶ್ರಾವ ಅಶೂನ್ಯಶಯನವ್ರತಂ ।
ಚತುರ್ಭಿಃ ಪಾರಣೈರ್ಯಸ್ಯ ಮಾಪತಿಸ್ತು ವಿಧೀಯತೇ ॥ ೭ ॥

ಯೇನ ಚೀರ್ಣೇನ ದೇವೇಶೋ ಜೀಮೂತಾಭಃ ಪ್ರಸೀದತಿ ।
ಲಕ್ಷ್ಮೀಭರ್ತಾ ಜಗನ್ನಾಥೋ ನಿಃಶೇಷಾಘೌಘನಾಶನಃ ॥ ೮ ॥

ತತ್ಕೃತಂ ಭವತಾ ರಾಜನ್ ಪುನರಭ್ಯೇತ್ಯ ಮಂದಿರಂ ।
ಅಶೂನ್ಯಶಯನಂ ಪುಣ್ಯಂ ಗೃಹೇ ವೃದ್ಧಿಕರಂ ಪರಂ ॥ ೯ ॥

---

ದ್ವಿಜಸೇವೆಯಲ್ಲಾಸಕ್ತನಾಗಿ ಪುಣ್ಯಕ್ಷೇತ್ರವಾದ ಮಥುರೆಗೆ ಬಂದು ಅಲ್ಲಿ ಬ್ರಾಹ್ಮಣ ಸಹವಾಸದಿಂದ ಯಮುನಾ ನದಿಯಲ್ಲಿ ಸ್ನಾನ ಮಾಡಿದಿ.

೬-೭. ಅನಂತರ ಸಕಲತೀರ್ಥಗಳಲ್ಲಿಯೂ ಉತ್ಕೃಷ್ಟವಾದ ವಿಶ್ರಾಂತಿ ಯೆಂಬ ತೀರ್ಥದ ದಡದಲ್ಲಿದ್ದ ವರಾಹಸ್ವಾಮಿಯ ಆಲಯದಲ್ಲಿ ಹೇಳುತ್ತಿದ್ದ ಪುರಾಣೋಕ್ತ ಕಥೆ ಮತ್ತು ಅಶೂನ್ಯಶಯನವ್ರತಗಳನ್ನು ನೀನು ಕೇಳಿದಿ. ಆ ವ್ರತದಲ್ಲಿ ಆಚರಿಸಬೇಕಾದ ನಾಲ್ಕು ಪಾರಣೆಗಳಲ್ಲಿ ಲಕ್ಷ್ಮೀಪತಿಯು ಸ್ತುತಿಸಲ್ಪಡುವನು.

೮. ಆ ವ್ರತವನ್ನು ಮಾಡುವುದರಿಂದ ಮೇಘದಂತೆ ಕಾಂತಿಯುಳ್ಳ, ಸಮಸ್ತ ಪಾಪಸಮೂಹಗಳನ್ನೂ ನಾಶಪಡಿಸುವಂತಹ, ಲಕ್ಷ್ಮೀಪತಿಯು, ಜಗದೊಡೆಯನೂ ಆದ ದೇವೇಶನು ಪ್ರಸನ್ನನಾಗುವನು.

೯. ರಾಜನೇ ! ಅಂತಹ ಪುಣ್ಯಕರವೂ, ಮನೆಯಲ್ಲಿ ಸಮೃದ್ಧಿಯನ್ನು ಉಂಟುಮಾಡುವುದೂ ಉತ್ತಮವೂ ಆದ ಅಶೂನ್ಯಶಯನವ್ರತವನ್ನು ಮನೆಗೆ ಬಂದಮೇಲೆ ನೀನು ಆಚರಿಸಿದೆ.

ಅಕೃತ್ವೇದಂ ಮಹಾರಾಜ ವ್ರತಂ ಪಾತಕನಾಶನಂ ।
ಗಾರ್ಹಸ್ಥ್ಯಮನುತಿಷ್ಠೇತ ವಂಧ್ಯಾವನ್ನಿಷ್ಫಲೋ ಭವೇತ್ ।
ಸುಖಮೀದೃಗ್ವಿಧಂ ಲೋಕೇ ದುರ್ಲಭಂ ಪ್ರತಿಭಾತಿ ಮೇ ॥ ೧೦ ॥

ಶ್ರಾವಣಸ್ಯ ತು ಮಾಸಸ್ಯ ದ್ವಿತೀಯಾಯಾಂ ಮಹೀಪತೇ ।
ಗ್ರಾಹ್ಯಮೇತದ್ವ್ರತಂ ಪುಣ್ಯಂ ಜನ್ಮಮೃತ್ಯುಜರಾಪಹಂ ॥ ೧೧ ॥
ಲಕ್ಷ್ಮೀಯುಕ್ತೋ ಜಗನ್ನಾಥಃ ಪೂಜನೀಯೋತ್ರ ಪಾರ್ಥಿವ ।
ಫಲೈಃ ಪುಷ್ಪೈಸ್ತಥಾ ಧೂಪೈಶ್ಚಾರುರಕ್ತಾನುಲೇಪನೈಃ ।
ಶಯ್ಯಾದಾನೈರ್ವಸ್ತ್ರದಾನೈಸ್ತಥಾ ಬ್ರಾಹ್ಮಣಭೋಜನೈಃ ॥ ೧೨ ॥

ತತ್ತ್ವಯಾ ಸರ್ವಮೇತದ್ಧಿ ಕೃತಂ ರಾಜನ್ ಸುದುಸ್ತರಂ ।
ತಸ್ಯೈವ ಕರ್ಮಣಃ ಪುಷ್ಟಿರಶೂನ್ಯಸ್ಯ ಮಹೀಪತೇ ।
ಇಮಾನೇವಾಗ್ರತಃ ಪುಣ್ಯಾಂಸ್ತ್ವಯೋಕ್ತಾನ್ವಿಸ್ತರಾಚ್ಛೃಣು ॥ ೧೩ ॥

---

೧೦. ಮಹಾರಾಜನೇ! ಪಾಪನಾಶಕವಾದ ಈ ವ್ರತವನ್ನು ಮಾಡದೇ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರೆ ಗೊಡ್ಡಿಯಂತೆ ನಿಷ್ಫಲವಾಗುವುದು. ಈ ವ್ರತದಿಂದಾಗುವ ಸುಖವು ಬೇರಾವುದರಿಂದಲೂ ಹೊಂದಲಶಕ್ಯವೆಂದು ನನಗೆ ತೋರುತ್ತದೆ.

೧೧. ಮಹಾರಾಜನೇ! ಶ್ರಾವಣಮಾಸದ ಬಿದಿಗೆಯ ದಿನದಲ್ಲಿ ಜನನ ಮರಣ ಮುಪ್ಪುಗಳನ್ನು ನಾಶಗೊಳಿಸುವ, ಪುಣ್ಯಕರವಾದ ಈ ವ್ರತವನ್ನು ಅನುಷ್ಠಾನಮಾಡಬೇಕು.

೧೨. ರಾಜನೇ! ಈ ವ್ರತದಲ್ಲಿ ಲಕ್ಷ್ಮೀಸಹಿತನಾದ ಜಗನ್ನಾಥನನ್ನು ಫಲ, ಪುಷ್ಪ, ಧೂಪ, ರಕ್ತಗಂಧ ಇವುಗಳಿಂದ ಪೂಜಿಸಿ ಶಯ್ಯಾದಾನ, ವಸ್ತ್ರ ದಾನಗಳನ್ನು ಮಾಡಿ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು.

೧೩. ರಾಜನೇ! ಅಂತಹ ಕಷ್ಟಸಾಧ್ಯವಾದ ವ್ರತವನ್ನು ನೀನು ಆಚರಿಸಿದೆ. ನಿನಗೆ ಒದಗಿರುವ ಸಂಪತ್ತೆಲ್ಲವೂ ಅಶೂನ್ಯವೆಂಬ ಆ ವ್ರತದ ಪ್ರಭಾವವು. ನೀನು ಕೇಳಿದ ಈ ಪೂರ್ವಪುಣ್ಯಗಳನ್ನೇ ವಿಶದವಾಗಿ ಹೇಳುವೆನು ಕೇಳು.

ನಾಪ್ರಸನ್ನೇ ಜಗನ್ನಾಥೇ ಭವೇಯುರಿತಿ ನಿಶ್ಚಿತಂ ।
ಪೂರ್ವಜನ್ಮನಿ ದೇವೇಶಸ್ತ್ವಯಾಶೂನ್ಯೇನ ಪೂಜಿತಃ ॥ ೧೪ ॥

ಇಹ ಜನ್ಮನಿ ರಾಜೇಂದ್ರ ದ್ವಾದಶ್ಯಾಮರ್ಚಯಸೇ ಹರಿಂ ।
ಅವಶ್ಯಂ ಪ್ರಾಪ್ಸ್ಯತೇ ರಾಜನ್ ವಿಷ್ಣೋಃ ಸಾಯುಜ್ಯತಾಂ ಧ್ರುವಂ ॥೧೫॥

ಏಷ ಪ್ರಶ್ನೋ ಮಯಾ ರಾಜನ್ ವ್ಯಾಖ್ಯಾತಸ್ತೇ ಸುಮಂಗಲಃ ।
ಸಂಪದಾಂ ಪ್ರಭವೋ ಯೇನ ಜ್ಞಾತೇರುತ್ಕರ್ಷಣಾರ್ಥಕಃ ॥ ೧೬ ॥

ಕಿಮನ್ಯತ್ತೇ ಮಹೀಪಾಲ ದದಾಮೀಹ ಕರೋಮಿ ಚ ।
ಅವಶ್ಯಂ ಸರ್ವಯೋಗ್ಯೋಽಸಿ ಭಕ್ತೋಽಸಿ ತ್ವಂ ಜನಾರ್ದನೇ ॥ ೧೭ ॥

ರಾಜೋವಾಚ

ಉತ್ಸುಕೋಽಹಂ ದ್ವಿಜಶ್ರೇಷ್ಠ ಮಂದರಂ ಪರ್ವತಂ ಪ್ರತಿ ।
ತತ್ರಾಶ್ಚರ್ಯಾಣ್ಯನೇಕಾನಿ ದ್ರಷ್ಟುಕಾಮಸ್ತವಾಜ್ಞಯಾ ॥ ೧೮ ॥

---

೧೪. ಜಗನ್ನಾಥನು ಪ್ರಸನ್ನನಾಗದಿದ್ದಲ್ಲಿ ಈ ವಿಧವಾದ ಐಶ್ವರ್ಯ ಮುಂತಾದುವು ಲಭಿಸಲಾರದೆಂಬುದು ನಿಶ್ಚಿತ ಆದುದರಿಂದ ಹಿಂದಿನಜನ್ಮದಲ್ಲಿ ಅಶೂನ್ಯವ್ರತದಿಂದ ದೇವೇಶನು ನಿನ್ನಿಂದ ಪೂಜಿಸಲ್ಪಟ್ಟಿರುವನು.

೧೫. ರಾಜೇಂದ್ರನೇ! ಈ ಜನ್ಮದಲ್ಲಿಯೂ ಏಕಾದಶಿಯ ದಿನ ಹರಿಯನ್ನು ವಿಧಿವತ್ತಾಗಿ ಪೂಜಿಸುತ್ತಿರುವಿಯಾದಕಾರಣ ನೀನು ಖಂಡಿತವಾಗಿ ವಿಷ್ಣುಸಾಯುಜ್ಯವನ್ನು ಹೊಂದುವೆ.

೧೬. ರಾಜನೇ! ಈ ಸಂಪತ್ತುಗಳುಂಟಾಗಲು ಕಾರಣವು, ಜಾತ್ಯುತ್ಕರ್ಷಾರ್ಥಕವೂ, ಅತ್ಯಂತ ಮಂಗಳಕರವೂ ಆದ ನಿನ್ನ ಈ ಪ್ರಶ್ನೆಗೆ ನಾನು ಉತ್ತರವನ್ನು ಹೇಳಿರುವೆನು.

೧೭. ಭೂಪಾಲನೇ! ನಿನಗೆ ಇನ್ನೇನು ಕೊಡಲಿ ಮತ್ತು ಮಾಡಲಿ? ಅವಶ್ಯವಾಗಿ ನೀನು ಸರ್ವಕ್ಕೂ ಯೋಗ್ಯನು ಮತ್ತು ಜನಾರ್ದನನ ಭಕ್ತನೂ ಆಗಿರುವೆ.

೧೮. ರಾಜನು ಹೇಳಿದನು:-ದ್ವಿಜವರ್ಯನೇ! ಮಂದರಗಿರಿಯಲ್ಲಿರುವ ಅನೇಕವಿಧವಾದ ಆಶ್ಚರ್ಯಗಳನ್ನು ನೋಡಬೇಕೆಂಬ ಆಶೆಯುಳ್ಳ ನಾನು ನಿನ್ನ ಅಪ್ಪಣೆಯಾದರೆ ಆ ಪರ್ವತಕ್ಕೆ ಹೋಗಲು ಉತ್ಸಾಹಶೀಲನಾಗಿರುವೆನು.

ಲಘುರ್ಭೂತ್ವಾ ಗುರುಂ ತ್ಯಕ್ತ್ವಾ ಪುತ್ರೋಪರಿ ದ್ವಿಜೋತ್ತಮ ।
ರಾಜ್ಯಶಾಸನಜಂ ಭಾರಂ ದುರ್ವಹಂ ಯಚ್ಛ ಭೂಮಿಪೈಃ ॥ ೧೯ ॥

ಸೋಽಹಂ ಸ್ವೇಚ್ಛಾಚರೋ ಯಾತೋ ಮತ್ಕೃತ್ಯಂ ತನಯಶ್ಚರೇತ್ ।
ತಚ್ಛ್ರುತ್ವಾ ವಚನಂ ರಾಜ್ಞೋ ವಾಮದೇವೋಽಬ್ರವೀದಿದಂ ॥ ೨೦ ॥

ಏತದ್ಧಿ ಪರಮಂ ಕೃತ್ಯಂ ಪುತ್ರಸ್ಯ ನೃಪಪುಂಗವ ।
ಯತ್ಕ್ಲೇಶಾತ್ಪಿತರಂ ಪ್ರೇಮ್ಣಾ ವಿಮೋಚಯತಿ ಸರ್ವದಾ ॥ ೨೧ ॥

ಪಿತುರ್ವಚನಕಾರೀ ಚ ಮನೋವಾಕ್ಕಾಯಶಕ್ತಿತಃ ।
ತಸ್ಯ ಭಾಗೀರಥೀಸ್ನಾನಮಹನ್ಯಹನಿ ಜಾಯತೇ ॥ ೨೨ ॥

ನಿರಸ್ಯ ಪಿತೃವಾಕ್ಯಂ ತು ವ್ರಜೇತ್ಸ್ನಾತುಂ ಸುರಾಪಗಾಂ ।
ನೋ ಶುದ್ಧಿಸ್ತಸ್ಯ ಪುತ್ರಸ್ಯ ಇಯತೀ ವೈದಿಕೀ ಶ್ರುತಿಃ ॥ ೨೩ ॥

---

೧೯-೨೦. ದ್ವಿಜೋತ್ತಮನೇ! ಭೂಪಾಲರಿಂದ ಹೊರಲಶಕ್ಯವಾದ, ರಾಜ್ಯವನ್ನಾಳುವ ದೊಡ್ಡ ಭಾರವನ್ನು ಮಗನ ಮೇಲೆ ಬಿಟ್ಟು ನಿರಾತಂಕನಾಗಿರುವ ನಾನು ನನ್ನ ಇಷ್ಟಬಂದಂತೆ ಸಂಚರಿಸಲು ಬಂದಿರುವೆನು. ಊರಲ್ಲಿ ನನ್ನ ಕರ್ತವ್ಯವನ್ನು ಮಗನು ನಿರ್ವಹಿಸುತ್ತಿರುವನು—ಎಂಬುದಾಗಿ ರಾಜನು ಹೇಳಿದನು.

ರಾಜನ ಈ ಮಾತನ್ನು ಕೇಳಿ ವಾಮದೇವನು ಹೀಗೆ ಹೇಳಿದನು.

೨೧. ನರಶ್ರೇಷ್ಠನೇ! ತಂದೆಯಲ್ಲಿ ವಿಶ್ವಾಸವಿಟ್ಟು ಅವನನ್ನು ಯಾವಾಗಲೂ ಕಷ್ಟದಿಂದ ಬಿಡಿಸುವುದೇ ಪುತ್ರನಿಗೆ ಪರಮಧರ್ಮ.

೨೨. ಮಾನಸಿಕ, ವಾಚನಿಕ, ಶಾರೀರಕ ಶಕ್ತಿಗಳಿಂದ ಪಿತೃವಾಕ್ಯವನ್ನು ಪರಿಪಾಲಿಸುವವನಿಗೆ ಪ್ರತಿದಿನವೂ ಭಾಗೀರಥಿಯ ಸ್ನಾನಫಲವು ಬರುತ್ತದೆ.

೨೩. ಪಿತೃವಾಕ್ಯವನ್ನು ನಿರಾಕರಿಸಿ ಗಂಗಾನದಿಯಲ್ಲಿ ಸ್ನಾನಮಾಡುತ್ತೇನೆಂದು ಹೋಗುವ ಮಗನಿಗೆ ಶುದ್ಧಿಯಿಲ್ಲ ಎಂಬುದಾಗಿ ವೇದವಚನವಿದೆ.

ಸ ತ್ವಂ ಗಚ್ಛ ಯಥಾಕಾಮಂ ಕೃತಕೃತ್ಯೋಽಸಿ ಭೂಪತೇ ।
ಹರಿಪ್ರಸಾದಾತ್ತೇ ಜಾತೋ ವಂಶೇ ಪುತ್ರಃ ಸ ಪುಣ್ಯಕೃತ್ ॥ ೨೪ ॥

ಏವಮುಕ್ತೇ ತು ಮುನಿನಾ ಸಮಾರುಹ್ಯ ತುರಂಗಮಮ್ ।
ಯಯೌ ಶೀಘ್ರಗತಿಃ ಶ್ರೀಮಾನ್ ಸದಾಗತಿರಿವ ಸ್ವಯಂ ॥ ೨೫ ॥

ವೀಕ್ಷ್ಯಮಾಣೋ ಗಿರೀನ್ ಸರ್ವಾನ್ ವನಾನಿ ಸರಿತಸ್ತಥಾ ।
ಸರ್ವಾಶ್ಚರ್ಯಾಣಿ ರಾಜೇಂದ್ರಃ ಸರಾಂಸ್ಯುಪವನಾನಿ ಚ ॥ ೨೬ ॥

ಸೋಽಚಿರೇಣೈವ ಕಾಲೇನ ಸಂಪ್ರಾಪ್ತೋ ಮಂದರಾಚಲಂ ।
ಭ್ರಾಮಯಿತ್ವಾ ಗಿರಿಂ ಶ್ವೇತಂ ಗಂಧಮಾದನಮೇವ ಚ ॥ ೨೭ ॥

ಅತೀತ್ಯ ಚ ಮಹಾಮೇರುಂ ದೃಷ್ಟ್ವಾ ಚೈವೋತ್ತರಾನ್ ಕುರೂನ್ ।
ಶತಸೂರ್ಯಪ್ರತೀಕಾಶಂ ಸರ್ವತಃ ಕಾಂಚನಾವೃತಂ ॥ ೨೮ ॥

---

೨೪. ಭೂಪತಿಯೇ! ನೀನು ಕೃತಕೃತ್ಯನಾಗಿರುವಿಯಾದಕಾರಣ ಇಚ್ಛಾನುಸಾರವಾಗಿ ಹೋಗು. ಹರಿಯ ಅನುಗ್ರಹದಿಂದ ನಿನ್ನ ವಂಶದಲ್ಲಿ ಅಂತಹ ಪುಣ್ಯವಂತನಾದ ಮಗನು ಹುಟ್ಟಿರುವನು.

೨೫. ವಾಮದೇವನು ಹೀಗೆ ಹೇಳಲಾಗಿ ಶ್ರೀಮಂತನಾದ ರುಕ್ಮಾಂಗದನು ಕುದುರೆಯನ್ನು ಹತ್ತಿ ವಾಯುವಿನಂತೆ ಶೀಘ್ರಗಾಮಿಯಾಗಿ ಹೊರಟನು.

೨೬-೩೩. ರಾಜೇಂದ್ರನು ದಾರಿಯಲ್ಲಿ ಸಕಲಬೆಟ್ಟಗಳು, ವನಗಳು, ನದಿಗಳು, ಸರ್ವರಿಗೂ ಆಶ್ಚರ್ಯಕರಗಳಾದ ಸರೋವರ ಮತ್ತು ಉದ್ಯಾನಗಳನ್ನು ನೋಡುತ್ತಾ ಸ್ವಲ್ಪಕಾಲದಲ್ಲಿಯೇ ಮಂದರಪರ್ವತಕ್ಕೆ ಬಂದನು. ಆಗ ಶ್ವೇತಗಿರಿ ಮತ್ತು ಗಂಧಮಾದನ ಪರ್ವತಗಳನ್ನು ಸುತ್ತಿ, ಮಹಾಮೇರು ಪರ್ವತವನ್ನು ದಾಟಿ ಉತ್ತರ ಕುರುಗಳನ್ನು ನೋಡಿ ಅನಂತರ ನೂರಾರು ಸೂರ್ಯರಂತೆ ಪ್ರಕಾಶಿಸುತ್ತಿರುವ, ಸುತ್ತಲೂ ಬಂಗಾರದಿಂದಾವರಿಸಲ್ಪಟ್ಟಿರುವ, ಹರಿಯ ಬಾಹುಗಳಿಂದ ಘರ್ಷಿಸಲ್ಪಟ್ಟು ಸ್ವರ್ಣರಸವನ್ನು ಸುರಿಸುತ್ತಿರುವ ಆನೆಗಳು ಮತ್ತು ಬಹುಧಾತುಗಳಿಂದ ತುಂಬಿದ ಭೂಭಾಗವುಳ್ಳ,

ಸಂಸ್ಪೃಷ್ಟಂ ಹರಿಬಾಹುಭ್ಯಾಂ ಸ್ರುವಂತಂ ಕಾಂಚನಂ ರಸಂ ।
ತದ್ಭೂಭಾಗಂ ನಗಾಕೀರ್ಣಂ ಬಹುಧಾತುವಿಭೂಷಿತಂ ॥ ೨೯ ॥

ಬಹುನಿರ್ಝರಸಂಯುಕ್ತಂ ಬಹುಕಂದರಭೂಷಿತಂ ।
ನಿಮ್ನಗಾಯುತಸಂಪೂರ್ಣಂ ಧೌತಂ ಗಂಗಾಜಲೈಃ ಶುಭೈಃ ॥ ೩೦ ॥

ವಿಶ್ವಸ್ತೈರ್ಯುವತೀವೃಂದೈಃ ಕಾಂತಾಶವರ್ಣೋಪಸೇವಿಭಿಃ ।
ಘಟಪ್ರಮಾಣೈರ್ನೃಪತೇ ಪರಿಪಕ್ವೈಃ ಸುಗಂಧಿಭಿಃ ॥ ೩೧ ॥

ಕ್ಷೌದ್ರೈರ್ಯುವತಿಸಂಭೂತೈಃ ಕುಚೈರಿವ ವಿಭೂಷಿತಂ ।
ದ್ವಿರೇಫಧ್ವನಿಸಂಯುಕ್ತಂ ಕೋಕಿಲಸ್ವರನಾದಿತಂ ॥ ೩೨ ॥

ಅನೇಕಸತ್ವವಿರುತೈಃ ಸಮಂತಾನ್ಮುದಿತಂ ಗಿರಿಂ ।
ಸಂಪಶ್ಯಮಾನೋ ನೃಪತಿರ್ವಿವೇಶ ಸ ಮಹಾಗಿರಿಂ ॥ ೩೩ ॥

ಆರೋಢುಕಾಮಸ್ತು ಕುತೂಹಲಾತ್ತ
ಮನ್ವೇಷಯನ್ನೇನ ಯಥಾ ಪ್ರರೋಹಂ ।
ಸ ವೀಕ್ಷತೇ ಯಾವದಸೌ ಸಮಂತಾ-
ತ್ತಾವತ್ಸಮಸ್ತಂ ದ್ರುಮಪಕ್ಷಿಸಂಘಂ ॥ ೩೪ ॥

---

ಬಹುಜಲಪ್ರವಾಹ (ಝರಿ) ಗಳಿಂದ ಯುಕ್ತವಾದ, ಬಹು ಗುಹೆಗಳಿಂದ ಶೋಭಿಸುತ್ತಿರುವ, ನದಿಗಳಿಂದ ಪೂರ್ಣವಾಗಿರುವ, ಶುಭಗಂಗೋದಕಗಳಿಂದ ತೊಳೆಯಲ್ಪಟ್ಟ, ಗಡಿಗೆಯಷ್ಟು ದಪ್ಪವಾಗಿರುವ, ಪರಿಪಕ್ವಗಳಾದ, ಸುಗಂಧವುಳ್ಳ, ಯುವತಿಯರಲ್ಲಿ ಉದ್ಭವಿಸಿದ ಮಧುಗಳಿಂದ ಕೂಡಿದ ಸ್ತನಗಳಂತಿರುವ, ಅನುರಾಗಯುಕ್ತರಾದ ಯುವತಿಯರ ಸಂಘ ಮತ್ತು ಕಾಂತಾಸುಖವನ್ನು ಸೇವಿಸುತ್ತಿರುವ ಯುವಕರ ಗುಂಪುಗಳಿಂದಲಂಕೃತವಾದ, ಭ್ರಮರಧ್ವನಿಗಳಿಂದ ಸಹಿತವಾದ, ಗಾನಮಾಡುತ್ತಿರುವ ಕೋಗಿಲೆಗಳಿಂದ ಕೂಡಿದ, ಸುತ್ತಲೂ ಅನೇಕ ಪ್ರಾಣಿಗಳ ಶಬ್ದಗಳಿಂದ ಸಂತೋಷಯುಕ್ತವಾದ, ಪರ್ವತವನ್ನು ನೋಡುವವನಾಗಿ ಆ ದೊರೆಯು ಮಹಾಪರ್ವತವನ್ನು ಪ್ರವೇಶಿಸಿದನು.

೩೪-೩೫. ಆ ಪರ್ವತವನ್ನು ಹತ್ತಬೇಕೆಂದು ಬಯಸಿ ಕುತೂಹಲ

ವಿಸರ್ಪಮಾಣಂ ಧ್ವನಿನಾ ಗೃಹೀತಂ
ವಿಮೋಹಿನೀವಕ್ತ್ರಸಮುದ್ಭವೇನ ।
ಉಪಪ್ಲವಂತಂ ತರಸಾ ಮಹೀಪ
ಸ್ತೇನೈವ ಸಾರ್ಧಂ ಸ ಜಗಾಮ ತೂರ್ಣಂ ॥ ೩೫ ॥

ತಸ್ಯಾಪಿ ಕರ್ಣೇ ಧ್ವನಿರಾವಿವೇಶ
ವಿಮೋಹಿನೀವಕ್ತ್ರಸಮುದ್ಭವೋ ಯಃ ।
ವಿಮೋಹಿತಂ ಯೇನ ವಿಮುಚ್ಯ ವಾಹಂ
ತ್ರಿವಿಕ್ರಮೇಣೈವ ವಿಲಂಘ್ಯಮಾನಂ ॥ ೩೬ ॥

ಮಾರ್ಗಂ ಗಿರೇರ್ಮೋಹಿನಿಗೀತಮುಗ್ಧ
ಕ್ಷಣೇನ ರಾಜಾ ಸಹಸಾ ದದರ್ಶ ।
ಗಿರೌ ಸ್ಥಿತಾಂ ತಪ್ತಸುವರ್ಣಭಾಸಂ
ಕಾಮಸ್ಯ ಪತ್ನೀಮಿವ ನಿರ್ಮಿತಾಂ ಚ ॥ ೩೭ ॥

---

ದಿಂದ ಹೇಗೆ ಯಾವ ಮಾರ್ಗದಿಂದ ಹತ್ತಬೇಕೆಂದು ದಾರಿಯನ್ನು ಹುಡುಕು ವವನಾಗಿ ಸುತ್ತಲೂ ನೋಡುವಷ್ಟರಲ್ಲಿಯೇ ಮೋಹಿನಿಯ ಬಾಯಿಂದ ಹೊರಟ ಧ್ವನಿಯನ್ನು ಗ್ರಹಿಸಿ ಅತ್ತಿತ್ತ ಓಡಾಡುತ್ತಿರುವ, ವೇಗವಾಗಿ ಹಾರುತ್ತಿರುವ, ಸಮಸ್ತವಾದ, ವೃಕ್ಷ ಮತ್ತು ಪಕ್ಷಿಗಳ ಸಂಘವು ಕಂಡುಬಂದಿತು. ಕೂಡಲೇ ದೊರೆಯೂ ಅದರೊಡನೆ ವೇಗವಾಗಿ ಹೊರಟನು.

೩೬-೩೯. ಆ ರಾಜನ ಕಿವಿಗೂ ಸಹ ಮೋಹಿನಿಯ ಮುಖದಿಂದ ಹೊರಟ ಧ್ವನಿಯು ಕೇಳಿಸಿತು. ಆದರಿಂದ ಆವನ ವಾಹನವಾದ ಕುದುರೆಯು ಮೋಹಗೊಂಡಿತು. ಆಗ ರಾಜನು ಆ ವಾಹನವನ್ನು ಬಿಟ್ಟು ಮೋಹಿನಿಯ ಗಾನದಿಂದ ಮೋಹಿತನಾಗಿ ತ್ರಿವಿಕ್ರಮನ ಅನುಗ್ರಹದಿಂದಲೇ ಪರ್ವತದ ದಾರಿ ಯನ್ನು ಕ್ಷಣಮಾತ್ರದಲ್ಲಿ ಸಾಹಸದಿಂದ ಲಂಘಿಸಿ, ಪರ್ವತದ ಮೇಲಿದ್ದ ಕರಗಿಸಿದ್ದ ಬಂಗಾರದಂತೆ ಹೊಳೆಯುತ್ತಿರುವ, ರತಿಯಂತೆ ಸೃಷ್ಟಿಸಲ್ಪಟ್ಟಿರುವ,

ಶಕ್ರಸ್ಯ ಲಿಂಗಂ ಗಗನೇ ಪ್ರಸಕ್ತಂ
ಸಂಪೂಜಯಂತೀಮಿವ ಲೋಕಸೃಷ್ಟ್ಯೈ ।
ಕ್ಷಮಾಸ್ವರೂಪಾಮಿವ ವೈ ರಸಾಮಿವ
ಗಿರೇಃ ಸುತಾಯಾ ಇವ ರೂಪರಾಶಿಂ ॥ ೩೮ ॥

ಸಿಂಧೋಸ್ತು ವೇಲಾಮಿವ ರೂಪಯುಕ್ತಾಂ
ತಸ್ಯಾಸ್ತನುಂ ವೈ ರತಿಮಂದಿರಾಖ್ಯಾಂ ।
ವಿಕರ್ಷಮಾಣಾಂ ಸಹಸಾ ತ್ರಿನೇತ್ರಂ
ಲಿಂಗಾಶ್ರಯಂ ದೇವವಿನೋದನಾರ್ಥಂ ॥ ೩೯ ॥

ತತ್ಪುಣ್ಯಕರ್ತುರ್ಮನಸಾಭಿಲಾಷಾಂ
ವ್ಯವಸ್ಥಿತೋ ಮೋಹಿನಿರೂಪದರ್ಶೀ ।
ವಿಮೋಹಿತೋಽಸೌ ನಿಪಪಾತ ರಾಜಾ
ವಿಮೋಹಿನೀಕಾಮಶರೇಣ ವಿದ್ಧಃ ॥ ೪೦ ॥

---

ಆಕಾಶದಲ್ಲಿ ಪ್ರಸಕ್ತವಾದ ಇಂದ್ರಲಿಂಗವನ್ನು (ಧನುಸ್ಸನ್ನು) ಲೋಕಸೃಷ್ಟಿಗಾಗಿ ಪೂಜಿಸುವಂತಿರುವ, ಭೂಮಿಯಂತೆ ಕ್ಷಮಾಸ್ವರೂಪವಾದ, ಪಾರ್ವತೀ ದೇವಿಯಂತೆ ಸೌಂದರ್ಯಯುಕ್ತವಾದ, ಸಮುದ್ರತೀರದಂತೆ ನಿರ್ಮಲರೂಪವುಳ್ಳ, ರತಿಗಾಶ್ರಯವಾದ, ದೇವತೆಗಳ ವಿನೋದಕ್ಕಾಗಿ ಲಿಂಗದಲ್ಲಿ ಸನ್ನಿಹಿತನಾಗಿರುವ ತ್ರಿನಯನೇಶ್ವರನನ್ನೂ ಸಹ ಥಟ್ಟನೇ ಸೆಳೆಯುವಂತಹ ಆ ಮೋಹಿನಿಯ ಶರೀರವನ್ನು ನೋಡಿದನು.

೪೦. ಕೂಡಲೇ ಆ ಪುಣ್ಯವಂತನ ಮನಸ್ಸಿನಲ್ಲಿ ಅಭಿಲಾಷೆಯೂ, ಮೋಹಿನಿಯ ರೂಪದರ್ಶನದಿಂದ ಆಕೆಯಲ್ಲಿ ಮೋಹವೂ ಉಂಟಾಯಿತು. ಬಳಿಕ ಈ ರಾಜನು ಮೋಹಿನಿಯ ಕಾಮಬಾಣದಿಂದ ಹೊಡೆಯಲ್ಪಟ್ಟವನಾಗಿ ಬಿದ್ದನು.

ಜ್ವರೇಣ ತೀವ್ರೇಣ ಗೃಹೀತದೇಹಃ
ಸಮೀಪಮಸ್ಯಾಃ ಸ ಸಸರ್ಪ ಶೀಘ್ರಂ ।
ವಿಸರ್ಪಿಣಂ ಭೂಮಿಪತಿಂ ಸುನೇತ್ರಾ
ವಿಲೋಕಯಾಮಾಸ ಕಟಾಕ್ಷದೃಷ್ಟ್ಯಾ ॥ ೪೧ ॥

ವಿಮುಚ್ಯ ವೀಣಾಂ ವಿರರಾಮ ಗೀತಾ-
ತ್ಪ್ರಾಪ್ತಂ ಚ ಕಾರ್ಯಂ ಸಹಸೈವ ಮೇನೇ ।
ವಿಧೂನಯಂತೀ ಮೃಗಪಕ್ಷಿಸಂಗಾ-
ನ್ಸ್ವವಾಸಸಾ ಗಂಡಭುಜೌ ನಿವಾರ್ಯ ॥ ೪೨ ॥

ಶಿಲೀಮುಖಾನ್ ಶ್ವಾಸಸುಗಂಧಿಮುಗ್ಧಾನ್
ಜಗಾಮ ದೇವೀ ನೃಪತೇಃ ಸಮೀಪಂ ।
ತ್ಯಕ್ತ್ವಾ ಹರಂ ಪೂಜ್ಯತಮಂ ಸುಲಿಂಗಂ
ಗತ್ವಾ ತು ಪಾರ್ಶ್ವೇ ತಮುದಾರಚೇಷ್ಟಾ ॥ ೪೩ ॥

---

೪೧. ಅವನ ದೇಹದಲ್ಲಿ ಉಗ್ರಜ್ವರವುಂಟಾಯಿತು. ಹಾಗೆಯೇ ಅವನು ಈ ಮೋಹಿನಿಯ ಹತ್ತಿರಕ್ಕೆ ಬೇಗ ಬಂದನು. ಒಳ್ಳೆಯ ಕಣ್ಣುಗಳುಳ್ಳ ವಿಮೋಹಿನಿಯು ತನ್ನ ಹತ್ತಿರಕ್ಕೆ ಬರುತ್ತಿದ್ದ ಭೂಪಾಲನನ್ನು ಕಟಾಕ್ಷದೃಷ್ಟಿ ಯಿಂದ ನೋಡಿದಳು.

೪೨-೪೪. ಕೂಡಲೇ ಮೋಹಿನೀದೇವಿಯು ವೀಣೆಯನ್ನು ಕೆಳಗಿಟ್ಟು ಗಾನವನ್ನು ನಿಲ್ಲಿಸಿ ಬಂದ ಕಾರ್ಯವನ್ನು ನೆನೆದಳು. ಅನಂತರ ಮೃಗಪಕ್ಷಿಗಳ ಸಹವಾಸವನ್ನು ಬಿಡಿಸಿಕೊಂಡು, ಒಳ್ಳೆಯ ಬಟ್ಟೆಗಳಿಂದ ಗಂಡಭುಜಗಳನ್ನು ಮರೆಮಾಡಿ, ತನ್ನ ಶ್ವಾಸಸುಗಂಧದ ಆಶೆಯಿಂದ ಮುತ್ತಿದ್ದ ದುಂಬಿಗಳನ್ನು ಓಡಿಸಿ, ರಾಜನ ಸಮೀಪಕ್ಕೆ ಬಂದಳು.

ನಂತರ ಉದಾರಚೇಷ್ಟೆಯುಳ್ಳವಳೂ, ಕಮಲದಳಾಯತಾಕ್ಷಿಯೂ ಆದ ಮೋಹಿನಿಯು ಪೂಜ್ಯತಮನಾದ ಲಿಂಗರೂಪಿಯಾದ ಹರನನ್ನು ಬಿಟ್ಟು ರಾಜನ

ವಿಮೋಹಿನೀ ನೀರಜಪತ್ರನೇತ್ರಾ
ಉವಾಚ ವಾಕ್ಯಂ ಮಧುರಂ ಮನೋಜ್ಞಂ ।
ರುಕ್ಮಾಂಗದಂ ಕಾಮಶರಾಭಿತಪ್ತ
ಮುತ್ತಿಷ್ಠ ರಾಜನ್ ವಶಿನೀ ತವಾಹಂ ॥ ೪೪ ॥

ಕಿಂ ಮೂರ್ಖಯಾ ದೇಹಮಿಮಂ ಕ್ಷಿಣೋಷಿ
ಯಸ್ತ್ವಂ ಧರಾಭಾರಮಿಮಂ ಮಹಾಂತಂ ।
ತೃಣೀಕೃತಂ ಭೂಪಸಮುದ್ವಹೇಥಾ
ಯಸ್ಮಾಮುಕಂ ರೂಪಮವೇಕ್ಷ್ಯ ಹಾರಿ ॥ ೪೫ ॥

ಕಿಂ ಮುಹ್ಯಸೇ ದುರ್ಬಲಗೌರಿವೇಹ
ಪಂಕೇ ನಿಮಗ್ನಾ ಸುಧೃಢೋ ಭವ ತ್ವಂ ।
ಧೀರೋಽಸಿ ವೀರೋಽಸಿ ವಿಡಂಬಯೇಥಾಃ
ಕಿಮರ್ಥಮಾತ್ಮಾನಮುದಾರಚೇಷ್ಟ ॥ ೪೬ ॥

---

ಪಾರ್ಶ್ವದಲ್ಲಿ ನಿಂತು, ಕಾಮಬಾಣದಿಂದ ತಪಿಸುತ್ತಿರುವ ಆ ರುಕ್ಮಾಂಗದ ರಾಜನನ್ನು ಕುರಿತು, ' ರಾಜನೇ ! ಏಳು ನಾನು ನಿನಗೆ ವಶಳಾಗಿರುವೆನು ' ಎಂಬುದಾಗಿ ಮಧುರ ಮನೋಹರ ನುಡಿಯನ್ನಾಡಿದಳು.

೪೫. ಹಾಗೆಯೇ ಮುಂದುವರೆದು ಮೋಹಿನಿಯು ರಾಜನೇ ! ಮೂರ್ಖನೆಯಿಂದೇನು ? ಈ ದೇಹವನ್ನು ಕ್ಷೀಣವಾಗುವಂತೆ ಮಾಡಿ, ಮಹತ್ತಾದ ಈ ಭೂಭಾರವನ್ನು ತೃಣೀಕರಿಸಿದ ನೀನು ನನ್ನ ಮನೋಹರರೂಪವನ್ನು ನೋಡಿ ಮೋಹಗೊಂಡಿರುವೆ.

೪೬. ಕೆಸರಿನಲ್ಲಿ ಸಿಕ್ಕಿಬಿದ್ದ ದುರ್ಬಲ ಗೋವಿನಂತೆ ಆಶೆಮಾಡುವುದರಿಂದೇನು ಫಲ ? ನೀನು ದೃಢವಾಗಿ ಧೈರ್ಯವನ್ನು ವಹಿಸು. ಉದಾರಚೇಷ್ಟನಾದ ನೀನು ಧೀರನೂ ವೀರನೂ ಆಗಿರುವೆ. ಏತಕ್ಕೋಸ್ಕರ ಆತ್ಮವನ್ನು ವಿಡಂಬಿಸುವೆ ?

ಯದ್ಯಸ್ತಿವಾಂಛಾ ತವ ಭೂಪತೀಶ
ಮಮಾನುಕೂಲೇ ಸುರತೇತಿಹೃದ್ಯೇ ।
ಪ್ರದಾಯ ದಾನಂ ಚ ಸುಧರ್ಮಯುಕ್ತಂ
ಭುಂಕ್ಷ್ವ ಸ್ವದಾಸೀಮಿವ ಮಾಂ ರತಿಜ್ಞಾಂ ॥ ೪೭ ॥

**ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ ದರ್ಶನಂ ನಾಮ ಏಕಾದಶೋಽಧ್ಯಾಯಃ**

---

೪೭. ರಾಜೇಂದ್ರನೇ! ನನಗೆ ಅನುಕೂಲವಾದ, ಅತ್ಯಂತ ಮನೋಹರಸಂಭೋಗದಲ್ಲಿ ನಿನಗೆ ಅಪೇಕ್ಷೆಯಿದ್ದರೆ ಧರ್ಮಯುಕ್ತವಾದ ವಾಗ್ದಾನ ಮಾಡಿ, ರತಿವಿಧಾನವನ್ನು ತಿಳಿದಿರುವ ನನ್ನನ್ನು ನಿನ್ನ ದಾಸಿಯಂತೆ ಭೋಗಿಸು ಎಂಬುದಾಗಿ ಹೇಳಿದಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀದರ್ಶನವೆಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ರುಕ್ಮಾಂಗದನ ಮಾತನ್ನು ಕೇಳಿ ವಾಮದೇವ ಮುನಿಯು ರಾಜನಿಗೆ ಸಂಪತ್ತುಲಭಿಸಲು ಕಾರಣವಾದ ಅವನ ಪೂರ್ವಜನ್ಮವೃತ್ತಾಂತವನ್ನು ವಿಸ್ತಾರವಾಗಿ ಹೇಳಿರುವನು. ಅನಂತರ ರಾಜನು ಮಂದರಪರ್ವತಕ್ಕೆ ಹೋದುದು, ಆ ಪರ್ವತದ ವರ್ಣನೆ, ಅಲ್ಲಿ ಮೋಹಿನಿಯ ದರ್ಶನವಾದುದು ಆಕೆಯು ಇವನ ಸಂಗಡ ಆಡಿದ ಮಾತು ಇವುಗಳು ವಿಸ್ತಾರವಾಗಿ ಹೇಳಲ್ಪಟ್ಟಿವೆ.

# ದ್ವಾದಶೋಽಧ್ಯಾಯಃ

---

## ವಸಿಷ್ಠ ಉವಾಚ

ವ್ಯಾಹೃತೇ ಶೋಭನೇ ವಾಕ್ಯೇ ಮೋಹಿನ್ಯಾ ನೃಪತಿಸ್ತದಾ ।
ಉನ್ಮೀಲ್ಯ ನೇತ್ರೇ ರಾಜೇಂದ್ರ ಶತಪತ್ರನಿಭೇ ತಥಾ ॥ ೧ ॥

ಸಗದ್ಗದಮುವಾಚೇದಂ ಮುಗ್ಧೋ ಮೋಹಿನಿದರ್ಶನಾತ್ ।
ಮಯಾ ಬಾಲೇ ಸುಬಹುಶಃ ಪೂರ್ಣಚಂದ್ರನಿಭಾನನಾಃ ॥ ೨ ॥

ದೃಷ್ಟಾಸ್ತಥಾನುಭೂತಾಶ್ಚ ನೇದೃಗ್ದೃಷ್ಟಂ ವಪುಃ ಕ್ವಚಿತ್ ।
ಯಾದೃಶಂ ತ್ವಂ ಧಾರಯಸೇ ರೂಪಂ ಲೋಕವಿಮೋಹನಂ ॥ ೩ ॥

ಸೋಽಹಂ ದರ್ಶನಮಾತ್ರೇಣ ತ್ವದೀಯೇನ ವರಾನನೇ ।
ಮನೋಭವಶರೈರ್ವಿದ್ಧಃ ಪತಿತಃ ಸಹಸಾ ಕ್ಷಿತೌ ।
ಅಜಲ್ಪಿತವಚೋ ದೇವಿ ಮೋಹಿತಸ್ತವ ತೇಜಸಾ ॥ ೪ ॥

---

## ಹನ್ನೆರಡನೆಯ ಅಧ್ಯಾಯ

೧-೩. ವಸಿಷ್ಠನು ಹೇಳಿದನು—ಮೋಹಿನಿಯು ಈ ರೀತಿಯಾಗಿ ಒಳ್ಳೆಯ ಮಾತುಗಳನ್ನಾಡಲು ಆಗ ದೊರೆಯು ಕಮಲಸದೃಶವಾದ ನೇತ್ರಗಳನ್ನು ತೆರೆದು ಮೋಹಿನಿಯ ದರ್ಶನದಿಂದ ಮೋಹಿತನಾದ ಆ ರಾಜೇಂದ್ರನು ಗದ್ಗದಕಂಠನಾಗಿ ಮುಂದಿನ ಮಾತುಗಳನ್ನಾಡಿದನು.

ಬಾಲೆಯೇ! ಪೂರ್ಣಚಂದ್ರನಂತೆ ಮುಖವುಳ್ಳ ಬಹು ಸ್ತ್ರೀಯರನ್ನು ನಾನು ನೋಡಿರುವೆನು. ಅನುಭವಿಸಿಯೂ ಇರುವೆನು. ಆದರೆ ಲೋಕವಿಮೋಹಕವಾದ ನಿನ್ನ ಸುಂದರ ರೂಪದಂತಹ ರೂಪವುಳ್ಳ ಶರೀರವನ್ನು ನಾನು ಎಲ್ಲಿಯೂ ನೋಡಿಲ್ಲ.

೪. ನಾನು ನಿನ್ನನ್ನು ನೋಡಿದ ಮಾತ್ರದಿಂದ ಕಾಮಬಾಣಗಳಿಂದ ಪೀಡಿತನಾಗಿ ಕೂಡಲೇ ನೆಲದ ಮೇಲೆ ಬಿದ್ದೆನು. ಉತ್ಕೃಷ್ಟಮುಖವುಳ್ಳ ದೇವಿಯೇ! ನಿನ್ನ ತೇಜಸ್ಸಿನಿಂದ ಮೋಹಿತನಾಗಿ ಮಾತನಾಡಲೂ ಸಹ ಸಾಧ್ಯವಿಲ್ಲದವನಾದೆನು.

ಕುರು ಪ್ರಸಾದಂ ಕರಭೋರು ಮಹ್ಯಂ
ದಾಸ್ಯಾಮಿ ಸರ್ವಂ ತವ ಚಿತ್ತಸಂಸ್ಥಂ ।
ನಾದೇಯಮಸ್ತೀಹ ಜಗತ್ತ್ರಯೇಽಪಿ
ತವಾನುರಾಗೇಣ ನಿಬದ್ಧಚೇತಸಃ ॥ ೫ ॥

ಇಮಾಂ ಧರಾಂ ಭೂಧರಭೂಷಿತಾಂಗೀಂ
ಸಮುದ್ರವಸ್ತ್ರಾಂ ಶಶಿಸೂರ್ಯನೇತ್ರಾಂ ।
ಘನಸ್ತನೀಂ ವ್ಯೋಮಸುಬದ್ಧದೇಹಾಂ
ನಿಷ್ಕಾನನಾಂ ಸುಂದರಿ ವಾಸಶೀಲಾಂ ॥ ೬ ॥

ಪಾತಾಲಗುಹ್ಯಾಂ ಬಹುವೃಕ್ಷರೋಮ್ಣೀಂ
ಸಪ್ತಾಧರಾಂ ಸುಭ್ರು ತವಾಸ್ಮಿ ದಾತಾ ।
ಸಕೋಶಬದ್ಧಾಂ ಗಜವಾಜಿಪೂರ್ಣಾಂ
ಸಮಂತ್ರಿಹೃದ್ಯಾಂ ನಗರೈಃ ಸಮೇತಾಂ ॥ ೭ ॥

---

೫. ನನ್ನ ವಿಷಯದಲ್ಲಿ ಪ್ರಸನ್ನಳಾಗು. ನಿನ್ನ ಮನಸ್ಸಿನಲ್ಲಿರುವುದೆಲ್ಲವನ್ನೂ ನಡೆಸಿಕೊಡುವೆನು. ನಿನ್ನ ಅನುರಾಗವು ಮನಸ್ಸಿನಲ್ಲಿ ನಾಟಿದ ಮೇಲೆ ಮೂರು ಲೋಕಗಳಲ್ಲಿ ನಿನಗೆ ಕೊಡಬಾರದ ವಸ್ತುವೇ ಇಲ್ಲ. ಎಂದರೆ ನಿನ್ನಲ್ಲಿನ ಅನುರಾಗವು ಸರ್ವಸ್ವವನ್ನೂ ನಿನಗರ್ಪಿಸುವಂತೆ ಮಾಡುವುದು ಎಂದು ಭಾವ.

೬-೭. ಸುಭ್ರೂ! ಪರ್ವತಗಳಿಂದಲಂಕೃತವಾದ ಅಂಗಗಳುಳ್ಳ, ಸಮುದ್ರವೆಂಬ ವಸ್ತ್ರವನ್ನು ಧರಿಸಿರುವ, ಚಂದ್ರ ಸೂರ್ಯರೆಂಬ ಕಣ್ಣುಗಳುಳ್ಳ ಹಪ್ಪವಾದ ಸ್ತನಗಳುಳ್ಳ, ಆಕಾಶಬದ್ಧದೇಹವಾದ, ಸುವರ್ಣವೆಂಬ ಮುಖವುಳ್ಳ, ಸುಂದರಸ್ತ್ರೀಯರಿಗಾಶ್ರಯವಾದ, ಪಾತಾಳವೆಂಬ ಗುಹ್ಯಾವಯವವುಳ್ಳ, ಬಹುವೃಕ್ಷಗಳೆಂಬ ರೋಮವುಳ್ಳ, ಕೋಶಗಳಿಂದ ಯುಕ್ತವಾದ, ಆನೆ, ಕುದುರೆಗಳಿಂದ ತುಂಬಿದ, ಮಂತ್ರಿಪ್ರಿಯವಾದ, ಪಟ್ಟಣಗಳಿಂದ ಸಹಿತವಾದ, ಈ ಭೂಮಂಡಲವನ್ನೇ ನಿನಗೆ ಕೊಡುವೆನು.

ಆತ್ಮಾನಮಪಿ ದಾಸ್ಯಾಮಿ ತವ ಚಾರ್ವಂಗಿ ಸಂಗಮೇ ।
ಕಿಂಪುನರ್ಧನರತ್ನಾದಿ ಪ್ರಸೀದ ಮಮ ಮೋಹಿನೀ ॥ ೮ ॥

ನೃಪಸ್ಯ ವಚನಂ ಶ್ರುತ್ವಾ ಮೋಹಿನೀ ಮಧುರಾಕ್ಷರಾಂ ।
ಸಮುವಾಚ ಸ್ಮಿತಂ ತೂರ್ಣಮುತ್ಥಾಪ್ಯ ನೃಪತಿಂ ತದಾ ॥ ೯ ॥

ನ ಧರಾಂ ಭೂಧಗೋಪೇತಾಂ ವರಯೇ ವಸುಧಾಧಿಪ ।
ಯದ್ವದಿಷ್ಯಾಮ್ಯಹಂ ಕಾಲೇ ತತ್ಕಾರ್ಯಮವಿಶಂಕಯಾ ॥ ೧೦ ॥

ಭಜಿಷ್ಯಾಮಿ ನ ಸಂದೇಹಃ ಕುರುಷ್ವ ಸಮಯಂ ಮಮ ।

ರಾಜೋವಾಚ

ಯೇನ ಸಂತುಷ್ಯಸೇ ದೇವಿ ಸಮಯಂ ತಂ ಕರೋಮ್ಯಹಂ ॥ ೧೧ ॥

ದಶಾವಸ್ಥಾಂ ಗತೋ ದೇಹೋ ಮಮ ತ್ವತ್ಸಂಗಮಂ ವಿನಾ ॥ ೧೨ ॥

---

೮. ಮನೋಹರಾಂಗಿಯಾದ ಮೋಹಿನಿಯೇ! ನಿನ್ನ ಸಂಗವಾಗುವ ಸಂದರ್ಭದಲ್ಲಿ ನನ್ನನ್ನೇ ನಿನಗೆ ಕೊಡಲು ಸಿದ್ಧನಾಗಿರುವಾಗ ಧನರತ್ನಾದಿಗಳನ್ನು ಕೊಡುತ್ತೇನೆಂದು ಹೇಳುವುದೇನು? ನನಗೆ ಪ್ರಸನ್ನಳಾಗು!

೯. ರಾಜನ ಮಾತನ್ನು ಕೇಳಿ ಅವನನ್ನು ಬೇಗ ಎಬ್ಬಿಸಿ ಮಂದಹಾಸದಿಂದ ಹೀಗೆ ಅಮೃತವಾಣಿಯನ್ನು ನುಡಿದಳು.

೧೦. ಧರಾಧೀಶನೇ! ಪರ್ವತಾದಿಗಳಿಂದ ಸಹಿತವಾದ ಭೂಮಿಯನ್ನು ನಾನು ಕೇಳುವುದಿಲ್ಲ ಸಮಯ ಬಂದಾಗ ನಾನು ಹೇಳುವ ಕಾರ್ಯವನ್ನು ಸಂದೇಹವಿಲ್ಲದೇ ನಡೆಯಿಸಬೇಕು.

೧೧. ನಾನು ನಿನ್ನನ್ನು ಸೇವಿಸುವೆನು. ಸಂದೇಹವಿಲ್ಲ. ನನ್ನ ಅಭಿಮತವನ್ನು ಮಾತ್ರ ನೆರವೇರಿಸು ಎಂಬುದಾಗಿ ಹೇಳಿದಳು.

ರಾಜನು ಹೇಳಿದನು:—ದೇವಿಯೇ! ನೀನು ಸಂತೋಷಪಡುವಂತಹ ಅಭೀಷ್ಟವನ್ನು ನಾನು ನಡೆಯಿಸುವೆನು.

೧೨. ನಿನ್ನ ಸಂಗವಿಲ್ಲದೇ ನನ್ನ ದೇಹವು ಮರಣಾವಸ್ಥೆಯನ್ನು ಹೊಂದಿರುವುದು.

## ಮೋಹಿನ್ಯುವಾಚ

ದೀಯತಾಂ ದಕ್ಷಿಣೋ ಹಸ್ತೋ ಬಹುಧರ್ಮಕರಸ್ತವ ।
ಯೇನ ಮೇ ಪ್ರತ್ಯಯೋ ರಾಜನ್ ವಚನೇ ತಾವಕೇ ಭವೇತ್ ॥ ೧೩ ॥
ರಾಜಾ ತ್ವಂ ಧರ್ಮಶೀಲೋಽಸಿ ಸತ್ಯಕೀರ್ತಿರ್ಜಗತ್ತ್ರಯೇ ।
ನ ವಕ್ತಾ ಹ್ಯನೃತಂ ಕಾಲೇ ಮಾರ್ಗೋಽಯಂ ಲೌಕಿಕಃ ಕೃತಃ ॥ ೧೪ ॥
ಏವಂ ಬ್ರುವಾಣಾಂ ರಾಜೇಂದ್ರೋ ಮೋಹಿನೀಂ ಹೃಚ್ಛಯಾತುರಃ ।
ಅಬ್ರವೀನ್ನೃಪತಿಸ್ತಾಂ ತು ಸುಪ್ರಸನ್ನಮನಾ ನೃಪಃ ॥ ೧೫ ॥
ಜನ್ಮಪ್ರಭೃತಿ ವಾಮೋರು ನಾನೃತಂ ಭಾಷಿತಂ ಮಯಾ ।
ಸ್ವೈರೇಷ್ವಪಿ ವಿಹಾರೇಷು ಕದಾಪಿ ವರವರ್ಣಿನಿ ॥ ೧೬ ॥
ಅಥವಾಪ್ಯಾಹೃತೈರ್ವಾಕ್ಯೈಃ ಕಿಮೇಭಿಃ ಪ್ರತ್ಯಯಾಕ್ಷರೈಃ ।
ದತ್ತೋ ಹ್ಯೇಷ ಮಯಾ ಹಸ್ತೋ ದಕ್ಷಿಣಃ ಪುಣ್ಯಲಾಂಛನಃ ॥ ೧೭ ॥

---

೧೩. ಮೋಹಿನಿಯು ಹೇಳಿದಳು:—ರಾಜನೇ ! ಬಹುಧರ್ಮಗಳನ್ನು ಮಾಡಿರುವ ನಿನ್ನ ಬಲಗಯ್ಯನ್ನು ನನ್ನ ಕೈಮೇಲಿಟ್ಟು ಭಾಷೆಯನ್ನು ಕೊಡು. ಅದರಿಂದ ನನಗೆ ನಿನ್ನ ಮಾತಿನಲ್ಲಿ ನಂಬಿಕೆಯುಂಟಾಗುವುದು.

೧೪. ರಾಜನಾದ ನೀನು ಧರ್ಮಶೀಲನು. ಮೂರು ಲೋಕಗಳಲ್ಲಿಯೂ ಸತ್ಯಸಂಧನೆಂದು ಕೀರ್ತಿಯನ್ನು ಪಡೆದಿರುವೆ. ಸಮಯದಲ್ಲಿ ಸುಳ್ಳುಹೇಳುವವ ನಲ್ಲ. ಆದರೂ ಲೋಕಸಂಪ್ರದಾಯಾನುಸಾರವಾಗಿ ನಾನು ಈ ವಿಧಭಾಷೆಯನ್ನು ಕೇಳಿರುವೆನು.

೧೫. ಈ ರೀತಿಯಾಗಿ ಹೇಳುತ್ತಿರುವ ಮೋಹಿನಿಯನ್ನು ಕುರಿತು ಕಾಮಾತುರನಾದ ರಾಜೇಂದ್ರನು ಸಂತುಷ್ಟಮನಸ್ಕನಾಗಿ ಮಾತನಾಡಿದನು.

೧೬. ವರವರ್ಣಿನೀ ! ಹುಟ್ಟಿದಾಗಿನಿಂದ ಯಾವಾಗಲೂ, ಕೊನೆಗೆ ಸ್ವೇಚ್ಛಾವಿಹಾರಗಳಲ್ಲಿಯೂ ಸಹ ನಾನು ಸುಳ್ಳು ಹೇಳಿದವನಲ್ಲ.

೧೭. ವಿಶ್ವಾಸವನ್ನು ಹುಟ್ಟಿಸುವ ಈ ಬಾಯಿಮಾತುಗಳಿಂದೇನು ? ಪುಣ್ಯಲಾಂಛನವಾದ ಈ ನನ್ನ ಬಲಗೈಯನ್ನು ನಿನ್ನ ಕೈಮೇಲಿಟ್ಟು ಪ್ರಮಾಣ ಮಾಡಿರುವೆನು.

ಯನ್ಮಯಾ ಸುಕೃತಂ ಕಿಂಚಿತ್ಕೃತಮಾಜನ್ಮಸುಂದರಿ ।
ತತ್ಸರ್ವಂ ತವ ವಾಮೋರು ಯದಿ ಕುರ್ಯಾಂ ನ ತೇ ವಚಃ ॥ ೧೮ ॥

ಅಂತರೇ ಹ್ಯೇಷ ದತ್ತೋ ಮೇ ಧರ್ಮೋ ಭಾರ್ಯಾ ಭವಾಂಗನೇ ।
ತವ ರೂಪೇಣ ಮೇ ಕ್ಷೋಭಃ ಸಹಸಾ ಪ್ರತ್ಯುಪಸ್ಥಿತಃ ॥ ೧೯ ॥

ಋತಧ್ವಜಸುತಶ್ಚಾಹಂ ನಾಮ್ನಾ ರುಕ್ಮಾಂಗದೋ ನೃಪಃ ।
ಇಕ್ಷ್ವಾಕುವಂಶಸಂಭೂತಃ ಸುತೋ ಧರ್ಮಾಂಗದೋ ಮಮ ॥ ೨೦ ॥

ಮೃಗವ್ಯಾಜೇನ ಗಹನಂ ಪ್ರವಿಷ್ಟಶ್ಚಾರುಲೋಚನೇ ।
ತತೋ ದೃಷ್ಟೋ ವನೇ ಹೃದ್ಯೋ ವಾಮದೇವಾಶ್ರಮೋ ಮಯಾ ॥೨೧॥

ಮುನಿನಾ ಜಲ್ಪಿತಂ ತತ್ರ ಕಿಂಚಿತ್ತೇನ ವಿಸರ್ಜಿತಃ ।
ಆರುಹ್ಯ ವಾಹನಶ್ರೇಷ್ಠಂ ಮಂದರಂ ದ್ರಷ್ಟುಮಾಗತಃ ॥ ೨೨ ॥

---

೧೮-೨೦. ಸುಂದರಿಯೇ ! ನಿನ್ನ ಮಾತನ್ನು ನಡೆಯಿಸದಿದ್ದರೆ ಹುಟ್ಟಿದಾಗಿನಿಂದ ಸ್ವಲ್ಪವಾಗಿಯಾದರೂ ನಾನು ಮಾಡಿರುವ ಸುಕೃತವೆಲ್ಲವೂ ನಿನಗೇ ಸೇರುತ್ತದೆ. ಇದೋ ನನ್ನ ಧರ್ಮವನ್ನು ನಿನಗೆ ಕೊಟ್ಟಿರುವೆನು. ಅಂಗನೆಯೇ ! ನೀನು ನನಗೆ ಪತ್ನಿಯಾಗು. ನಿನ್ನ ಸೌಂದರ್ಯ ನೋಡಿದ ಕೂಡಲೇ ನನಗೆ ಕ್ಷೋಭೆಯುಂಟಾಗಿದೆ. ನಾನು ಋತಧ್ವಜಪುತ್ರನು. ನನ್ನ ಹೆಸರು ರುಕ್ಮಾಂಗದರಾಜನು, ನಾನು ಇಕ್ಷ್ವಾಕುರಾಜನ ಕುಲದಲ್ಲಿ ಹುಟ್ಟಿರುವೆನು. ನನಗೆ ಧರ್ಮಾಂಗದನೆಂಬ ಮಗನಿರುವನು.

೨೧. ದಿವ್ಯ ನೇತ್ರಗಳುಳ್ಳ ಮೋಹಿನಿಯೇ! ದುಷ್ಟಮೃಗಗಳನ್ನು ನಿಗ್ರಹಿಸುವ ನೆಪದಿಂದ ಅಡವಿಗೆ ಪ್ರವೇಶಿಸಿದೆನು. ತರುವಾಯ ವನದಲ್ಲಿ ಮನೋಹರವಾದ ವಾಮದೇವ ಮುನಿಗಳ ಆಶ್ರಮವನ್ನು ಕಂಡೆನು.

೨೨. ಅಲ್ಲಿ ಆ ಮುನಿಯೊಡನೆ ಸ್ವಲ್ಪ ಮಾತನಾಡಿ, ಅಲ್ಲಿಂದ ಹೊರಟು ಉತ್ತಮವಾದ ಕುದುರೆಯನ್ನು ಹತ್ತಿ ಮಂದರಪರ್ವತವನ್ನು ನೋಡಬೇಕೆಂದು ಇಲ್ಲಿಗೆ ಬಂದೆನು.

ಭ್ರಮಮಾಣೋ ಗಿರಿವರಂ ಕುತೂಹಲಮನಾಸ್ತದಾ ।
ಪ್ರಾಪ್ತಂ ಮಚ್ಛ್ರವಣೇ ಗೀತಂ ತವ ವಕ್ತ್ರವಿನಿರ್ಗತಂ ॥ ೨೩ ॥

ತೇನ ಗೀತೇನ ಚಾಕೃಷ್ಟಸ್ತ್ವತ್ಸಮೀಪಮುಪಾಗತಃ ।
ದೃಷ್ಟೇಃ ಪಥಮನುಪ್ರಾಪ್ತಾ ಮಮ ತ್ವಂ ಚಾರುಲೋಚನೇ ॥ ೨೪ ॥

ತತೋಽಹಂ ಮೂರ್ಛಿತೋ ದೇವಿ ವಿಸಂಜ್ಞಃ ಪತಿತಃ ಕ್ಷಿತೌ ।
ಸಾಂಪ್ರತಂ ಚೇತನಾಯುಕ್ತಸ್ತವ ವಾಕ್ಯಾಮೃತೇನ ಹಿ ॥ ೨೫ ॥

ಪುನರ್ಜಾತಮಿವಾತ್ಮಾನಂ ಮನ್ಯೇಽಹಂ ಲೋಕಮೋಹಿನಿ ।
ಪ್ರತ್ಯುತ್ತರಪ್ರದಾನೇನ ಪ್ರಸಾದಂ ಕರ್ತುಮರ್ಹಸಿ ॥ ೨೬ ॥

ನೃಪೇಣೈವಂ ಸಮುದ್ದಿಷ್ಟಾ ಮೋಹಿನ್ಯಾಹೋತ್ತರಂ ವಚಃ ।
ಅಹಂ ಬ್ರಹ್ಮಭವಾ ರಾಜಂಸ್ತ್ವದರ್ಥಂ ಸಮುಪಾಗತಾ ॥ ೨೭ ॥

---

೨೩. ಕುತೂಹಲಮನಸ್ಸಿನಿಂದ ಈ ಶ್ರೇಷ್ಠಪರ್ವತದಲ್ಲಿ ಸುತ್ತುತ್ತಿರುವಾಗ ನಿನ್ನ ಬಾಯಿಂದ ಹೊರಟ ಸಂಗೀತಧ್ವನಿಯು ಕೇಳಿಸಿತು.

೨೪. ಆ ಗಾನದಿಂದ ಆಕರ್ಷಿಸಲ್ಪಟ್ಟವನಾಗಿ ನಿನ್ನ ಹತ್ತಿರಕ್ಕೆ ಬಂದೆನು. ಮನೋಹರ ನೇತ್ರಳಾದ ನೀನು ನನ್ನ ದೃಷ್ಟಿಗೆ ಗೋಚರಿಸಿದೆ.

೨೫. ಅನಂತರ ನಾನು ಮೂರ್ಛೆಹೊಂದಿ ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದ್ದೆನು. ದೇವಿಯೇ ! ಈಗ ನಿನ್ನ ವಚನಾಮೃತದಿಂದ ಪ್ರಜ್ಞೆಯನ್ನು ಪಡೆದೆನು.

೨೬. ಲೋಕಮೋಹಿನಿಯೇ ! ಈಗ ನಾನು ಪುನಃ ಹುಟ್ಟಿದಂತೆ ಭಾವಿಸಿರುವೆನು ನನಗೆ ಉತ್ತರ ಕೊಟ್ಟು ಅನುಗ್ರಹವನ್ನು ದಯಪಾಲಿಸು.

೨೭-೨೮. ದೊರೆಯು ಹೀಗೆ ಹೇಳಿದುದನ್ನು ಕೇಳಿ ಮೋಹಿನಿಯು ಉತ್ತರವನ್ನು ಹೇಳಿದಳು.

ಶ್ರುತ್ವಾ ಕೀರ್ತಿಂ ಸ್ಮರೋಪೇತಾ ಮಂದರಂ ಕನಕಾಚಲಂ ।
ಪರಿತ್ಯಜ್ಯ ಸುರಾನ್ಸರ್ವಾನ್ವಿಶ್ವಂಭರಪುರೋಗಮಾನ್ ॥ ೨೮ ॥

ಸಮಾಹಿತಮನಾಸ್ತ್ವತ್ರ ತಪಸ್ಯಾನಿರತಾ ಸ್ಥಿತಾ ।
ಸಂಪೂಜಯಂತೀ ದೇವೇಶಂ ಗೀತದಾನೇನ ಶಂಕರಂ ॥ ೨೯ ॥

ಗೀತದಾನಮಹಂ ಮನ್ಯೇ ಸುರಾಣಾಮತಿವಲ್ಲಭಂ ।
ಸರ್ವದಾನಾಧಿಕಂ ಭೂಪ ಹ್ಯನಂತಗತಿದಾಯಕಂ ॥ ೩೦ ॥

ಯೇನ ತುಷ್ಟಃ ಪಶುಪತಿಃ ಸದ್ಯಃ ಪ್ರತ್ಯುಪಕಾರಕಃ ।
ಈಪ್ಸಿತೋಯಂ ಮಯಾ ಪ್ರಾಪ್ತೋ ಭವಾನವನಿಪಾಲಕಃ ॥ ೩೧ ॥

ಅಭಿಪ್ರೀತೋಽಸಿ ಮೇ ರಾಜನ್ನಭಿಪ್ರೀತಾಹ್ಯಹಂ ತವ ॥ ೩೨ ॥

---

ದೊರೆಯೇ! ನಾನು ಬ್ರಹ್ಮನಿಂದ ಹುಟ್ಟಿದವಳು. ನಿನ್ನ ಕೀತಿಯನ್ನು ಕೇಳಿ ಕಾಮಪೀಡಿತಳಾಗಿ ವಿಷ್ಣುಮುಂತಾದ ಸಕಲ ದೇವತೆಗಳನ್ನೂ ಬಿಟ್ಟು ನಿನಗಾಗಿ ಸುವರ್ಣಮಯವಾದ ಈ ಮಂದರಪರ್ವತಕ್ಕೆ ಬಂದಿರುವೆನು.

೨೯. ಇಲ್ಲಿ ಸಮಾಧಾನಚಿತ್ತಳಾಗಿ ಸಂಗೀತ ಹಾಡಿ ದೇವೇಶನಾದ ಶಂಕರನನ್ನು ಪೂಜಿಸುತ್ತಾ ತಪಶ್ಚರ್ಯೆಯಲ್ಲಿ ನಿರತಳಾಗಿರುವೆನು.

೩೦. ಭೂಪಾಲನೇ ! ಸಂಗೀತಸಮರ್ಪಣೆಯು ದೇವತೆಗಳಿಗೆ ಅತ್ಯಂತ ಪ್ರಿಯವು. ಸಕಲದಾನಗಳಿಗಿಂತಲೂ ಹೆಚ್ಚಾದುದು ಮತ್ತು ಶಾಶ್ವತಗತಿ ಎಂದರೆ ಮೋಕ್ಷಪ್ರದವೂ ಆಗಿದೆಯೆಂದು ನಾನು ತಿಳಿದಿರುವೆನು.

೩೧. ನಾನು ಸಂಗೀತಹಾಡಿ ಸಮರ್ಪಿಸಿದುದರಿಂದ ಈಶ್ವರನು ಪ್ರಸನ್ನನಾಗಿ ತಕ್ಷಣದಲ್ಲಿಯೇ ನಾನು ಬಯಸಿದ್ದ ಭೂಪಾಲಕನಾದ ನಿನ್ನನ್ನು ಇಲ್ಲಿಗೇ ಕರೆತಂದು ಪ್ರತ್ಯುಪಕಾರ ಮಾಡಿರುವನು.

೩೨. ರಾಜನೇ! ನೀನು ನನ್ನಲ್ಲಿ ಪ್ರೀತನಾಗಿರುವೆ. ನಾನೂ ಸಹ ನಿನ್ನನ್ನು ಪ್ರೀತಿಸುವೆನು.

ತಮೇವಮುಕ್ತ್ವಾ ದ್ವಿಜರಾಜವಕ್ತ್ರಾ
ಕರಂ ಗೃಹೀತ್ವಾ ನೃಪತೇಸ್ತು ವೇಗಾತ್ ।
ಉತ್ಥಾಪಯಾಮಾಸ ಧರಾಶಯಾನಂ
ಇಂದ್ರಸ್ಯ ಯಷ್ಟೀಮಿವ ಮೋಹಿನೀ ಸಾ ॥ ೩೩ ॥

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಸಮಯಕರಣಂ ನಾಮ ದ್ವಾದಶೋಽಧ್ಯಾಯಃ

---

೩೩. ಹೀಗೆ ಚಂದ್ರವದನೆಯಾದ ಆ ಮೋಹಿನಿಯು ರಾಜನಿಗೆ ಹೇಳಿ ಬೇಗ ಅವನ ಕೈಯನ್ನು ಹಿಡಿದುಕೊಂಡು ಭೂಮಿಯಮೇಲೆ ಮಲಗಿದ್ದ ರಾಜನನ್ನು ಇಂದ್ರಧ್ವಜವನ್ನು ಎತ್ತುವಂತೆ ಎಬ್ಬಿಸಿದಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಸಮಯಕರಣವೆಂಬ
ಹನ್ನೆರಡನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ.

ಮೋಹಿನಿಯು ಹೇಳಿದ ಮಾತನ್ನು ಕೇಳಿ ರುಕ್ಮಾಂಗದನು ತನ್ನ ಅನುಭವವನ್ನೂ, ಮೋಹಿನಿಯ ದರ್ಶನದಿಂದ ತನಗಾದ ಮೋಹಾದಿ ದುರವಸ್ಥೆಗಳನ್ನೂ ವಿವರಿಸಿ, ರಾಜ್ಯಕೋಶಾದಿ ಸರ್ವಸ್ವವನ್ನೂ ನಿನಗೆ ಕೊಡುವೆನು ನೀನು ನನಗೆ ಪತ್ನಿಯಾಗಬೇಕೆಂದು ಕೇಳಲಾಗಿ ಮೋಹಿನಿಯು ರಾಜ್ಯಾದಿಗಳಾವುದೂ ನನಗೆ ಬೇಡ, ಸಮಯ ಬಂದಾಗ ನಾನು ಬಯಸಿದ ಕಾರ್ಯವನ್ನು ನೀನು ಮಾಡುತ್ತೇನೆಂದು ಕೈಮೇಲೆ ಕೈಯನ್ನಿಟ್ಟು ಭಾಷೆಕೊಡಬೇಕೆಂದು ಹೇಳಿದಳು. ಅದಕ್ಕೆ ರಾಜನು ಸಮ್ಮತಿಸಲು ಮೋಹಿನಿಯು ಅವನನ್ನು ಕೈಹಿಡಿದೆಬ್ಬಿಸಿದಳು.

# ತ್ರಯೋದಶೋಽಧ್ಯಾಯಃ

**ವಸಿಷ್ಠ ಉವಾಚ**

**ಉತ್ಥಾಪಯಿತ್ವಾ ರಾಜಾನಂ ಮೋಹಿನೀಂ ವಾಕ್ಯಮಬ್ರವೀತ್ ।**
**ಮಾ ಶಂಕಾಂ ಕುರು ರಾಜೇಂದ್ರ ಕುಮಾರೀಂ ವಿದ್ಧ್ಯಕಲ್ಮಷಾಂ ॥ ೧ ॥**

**ಉದ್ವಹಸ್ವ ಮಹೀಪಾಲ ಗೃಹ್ಯೋಕ್ತವಿಧಿನಾ ಹಿ ಮಾಂ ।**
**ಅನೂಢಾ ಕನ್ಯಕಾ ರಾಜನ್ ಯದಿ ಗರ್ಭಂ ಬಿಭರ್ತಿ ಹಿ ॥ ೨ ॥**

**ಪ್ರಸೂಯತಿ ದಿವಾಕೀರ್ತಿಂ ಸರ್ವವರ್ಣವಿಗರ್ಹಿತಂ ।**
**ಚಾಂಡಾಲಯೋನಯಸ್ತ್ರಿಸ್ರಃ ಪುರಾಣೇ ಕವಯೋ ವಿದುಃ ॥ ೩ ॥**

---

## ಹದಿಮೂರನೆಯ ಅಧ್ಯಾಯವು

೧. ವಸಿಷ್ಠನು ಹೇಳಿದನು:—ರಾಜನನ್ನು ಎಬ್ಬಿಸಿ ಮೋಹಿನಿಯು ಹೀಗೆ ಹೇಳಿದಳು :-ರಾಜೇಂದ್ರನೇ ! ಸಂದೇಹಪಡಬೇಡ. ಕುಮಾರಿಯಾದ ನನ್ನನ್ನು ನಿರ್ದೋಷಳೆಂದು ತಿಳಿ.

೨-೮. ಭೂಪಾಲನೇ ! ಗೃಹ್ಯೋಕ್ತವಿಧಾನದಿಂದ ನನ್ನನ್ನು ವಿವಾಹ ಮಾಡಿಕೊ ! ರಾಜನೇ ! ಮದುವೆಮಾಡಿಕೊಳ್ಳದಿರುವ ಕನ್ಯೆಯು ಗರ್ಭಿಣಿಯಾದರೆ ಸಕಲಜಾತಿಗಳಲ್ಲಿಯೂ ನಿಂದಿತವಾದ ಚಂಡಾಲಶಿಶುವನ್ನು ಪ್ರಸವಿಸುವಳು. ಪುರಾಣದಲ್ಲಿ ಚಂಡಾಲರು ಮೂರುವಿಧರೆಂದು ಜ್ಞಾನಿಗಳು ಹೇಳಿರುವರು. ಮದುವೆಯಿಲ್ಲದ ಕನ್ಯೆಯಲ್ಲಿ ಹುಟ್ಟಿದ ಶಿಶು, ಸಗೋತ್ರಸ್ತ್ರೀಯಲ್ಲಿ ಜನಿಸಿದವನು ಮತ್ತು ಬ್ರಾಹ್ಮಣಸ್ತ್ರೀಯಲ್ಲಿ ಶೂದ್ರಪುರುಷನಿಂದ ಹುಟ್ಟಿದವನು ಎಂಬ ಮೂರು ಜನರೂ ಚಂಡಾಲರೆನಿಸುವರು. ರಾಜಶ್ರೇಷ್ಠನೇ ! ಈ ಕಾರಣದಿಂದ ಕನ್ಯೆಯಾದ ನನ್ನನ್ನು ವಿವಾಹ ಮಾಡಿಕೊಳ್ಳಬೇಕು ! ಎಂದು ಹೇಳಿದಳು.

ಕುಮಾರೀಸಂಭವಾ ತ್ವೇಕಾ ಸಗೋತ್ರಾಪಿ ದ್ವಿತೀಯಕಾ ।
ಬ್ರಾಹ್ಮಣ್ಯಾಂ ಶೂದ್ರಜನಿತಾ ತೃತೀಯಾ ನೃಪಪುಂಗವ ॥ ೪ ॥

ಏತಸ್ಮಾತ್ಕಾರಣಾದ್ರಾಜನ್ ಕುಮಾರೀ ಮಾಂ ಸಮುದ್ವಹ ।
ತತಸ್ತಾಂ ಚಪಲಾಪಾಂಗೀಂ ನೃಪೋ ರುಕ್ಮಾಂಗದೋ ಗಿರೌ ॥ ೫ ॥

ಉದ್ವಾಹ್ಯ ವಿಧಿನಾ ಯುಕ್ತಸ್ತಸ್ಥೌ ರಾಜಾ ಹಸನ್ನಿವ ।
ನ ತಥಾ ತ್ರಿದಿವಪ್ರಾಪ್ತಿಃ ಪ್ರೀಣಯೇನ್ಮಾಂ ವರಾನನೇ ॥ ೬ ॥

ತವ ಪ್ರಾಪ್ತಿರ್ಯಥಾ ದೇವಿ ಮಂದರೇಸ್ಮಿನ್ ಸುಖಾಯ ವೈ ।
ಮನ್ಯೇ ಪುರಂದರಾದ್ದೇವಿ ಆತ್ಮಾನಮಧಿಕಂ ಕ್ಷಿತೌ ॥ ೭ ॥

ತ್ರೈಲೋಕ್ಯೇ ಸುಂದರೀಂ ಪ್ರಾಪ್ಯ ಭಾರ್ಯಾಂ ತ್ವಾಂ ಚಾರುಲೋಚನೇ ।
ತಸ್ಮಾದ್ಯದನುಕೂಲಂ ತೇ ತತ್ಕರೋಮಿ ಪ್ರಶಾಧಿ ಮಾಂ ॥ ೮ ॥

---

ಅನಂತರ ರುಕ್ಮಾಂಗದರಾಜನು ಆ ಚಪಲಾಂಗಿಯನ್ನು ಪರ್ವತದಲ್ಲಿಯೇ ವಿಧಾನೋಕ್ತಪ್ರಕಾರದಿಂದ ಮದುವೆಮಾಡಿಕೊಂಡು ಅಲ್ಲಿಯೇ ಸಂತೋಷಿಸುವವನಂತಿದ್ದನು.

ವರಾನನೆಯಾದ ದೇವಿಯೇ! ಈ ಮಂದರಪರ್ವತದಲ್ಲಿ ನಿನ್ನ ಪ್ರಾಪ್ತಿಯು ಹೇಗೆ ಸುಖಸಾಧಕವಾಯಿತೋ ಅದರಂತೆ ಸ್ವರ್ಗಪ್ರಾಪ್ತಿಯೂ ಸಹ ಸುಖಕರವಾಗಲಾರದು

ದಿವ್ಯನೇತ್ರಗಳುಳ್ಳ ಮೋಹಿನಿಯೇ! ತ್ರಿಲೋಕಸುಂದರಿಯಾದ ನಿನ್ನನ್ನು ಪತ್ನಿಯನ್ನಾಗಿ ಹೊಂದಿದುದರಿಂದ ಭೂಲೋಕದಲ್ಲಿ ನಾನು ಇಂದ್ರನಿಗಿಂತಲೂ ಅಧಿಕನಾದೆನೆಂದು ತಿಳಿದಿರುವೆನು. ಆದಕಾರಣ ನಿನಗೆ ಹಿತವಾದುದೆಲ್ಲವನ್ನೂ ಮಾಡುವೆನು. ನನಗೆ ಅಪ್ಪಣೆಮಾಡು.

ಇಹೈವ ರಂಸ್ಯಸೇ ಬಾಲೇ ಅಥವಾ ಮಂದಿರೇ ಮಮ ।
ಮಲಯೇ ಮೇರುಶಿಖರೇ ವನೇ ವಾ ನಂದನೇ ವದ ॥ ೯ ॥

ತಚ್ಛ್ರುತ್ವಾ ನೃಪತೇರ್ವಾಕ್ಯಂ ಮೋಹಿನೀ ಮಧುರಂ ನೃಪ ।
ಉವಾಚಾನುಶಯಂ ರಾಜನ್ವಚನಂ ಪ್ರೀತಿವರ್ಧನಂ ॥ ೧೦ ॥

ಸಪತ್ನೀನಾಂ ಕಟಾಕ್ಷಾಣಿ ಕ್ರೂರಾಣಿ ನಗರೇ ಮಮ ।
ಭವಿಷ್ಯಂತಿ ಮಹೀಪಾಲ ಕಥಂ ಗಚ್ಛಾಮಿ ತೇ ಪುರಂ ॥ ೧೧ ॥

ಮಾ ಸ್ಮ ಸೀಮಂತಿನೀ ಕಾಚಿದ್ಭವೇದ್ಧಿ ಕ್ಷಿತಿಮಂಡಲೇ ।
ಯಸ್ಯಾಃ ಸಪತ್ನೀಪ್ರಭವಂ ದುಃಖಮಾಮರಣಂ ಭವೇತ್ ॥ ೧೨ ॥

ಸಾಹಂ ಲಬ್ಧ್ವಾ ಮಹೀಪಾಲ ಮನಸಾ ವಶ್ಯಗಾ ತವ ।
ಜ್ಞಾತ್ವಾ ಸಪತ್ನೀಪ್ರಭವಂ ದುಃಖಂ ಭರ್ತಾ ಕೃತೋ ಮಯಾ ॥ ೧೩ ॥

---

೯. ಬಾಲೆಯೇ! ಇಲ್ಲಿ ಅಥವಾ ನನ್ನ ಮನೆ, ಮಲಯಪರ್ವತ, ಮೇರುಶಿಖರ, ನಂದನವನ ಇವುಗಳ ಪೈಕಿ ಯಾವಸ್ಥಳದಲ್ಲಿ ನೀನು ಸಂಭೋಗಿಸುವೆ? ಅದನ್ನು ಹೇಳು.

೧೦-೧೧. ದೊರೆಯ ಆ ಮಧುರವಾಕ್ಯವನ್ನು ಕೇಳಿ ಮೋಹಿನಿಯು ಪ್ರೀತಿಯನ್ನಭಿವೃದ್ಧಿಗೊಳಿಸುವಂತಹ ಮಾತನ್ನು ಹೇಳಿದಳು.

ರಾಜನೇ! ನಗರದಲ್ಲಿ ನನ್ನ ಮೇಲೆ ಸವತಿಯರ ಕ್ರೂರದೃಷ್ಟಿಗಳು ಬೀಳುತ್ತವೆಯಾದಕಾರಣ ನಿನ್ನ ಮನೆಗೆ ನಾನು ಹೇಗೆ ಬರಲಿ?

೧೨. ಸಾಯುವವರೆಗೂ ಸವತಿಯಿಂದ ದುಃಖವನ್ನು ಅನುಭವಿಸಬೇಕಾಗಿರುವಂತಹ ಯಾವ ಸ್ತ್ರೀಯೂ ಭೂಮಂಡದಲ್ಲಿರಲೇಬಾರದು.

೧೩. ಸವತಿಯರಿದ್ದರೂ ಮನಃಪೂರ್ವಕವಾಗಿ ನಾನು ನಿನ್ನ ವಶಳಾಗಿರುವೆನು. ಸವತಿಯಿಂದುಂಟಾಗುವ ದುಃಖವನ್ನು ತಿಳಿದೂ ನಿನ್ನನ್ನು ಗಂಡನನ್ನಾಗಿ ವರಿಸಿರುವೆನು.

ವತ್ಸ್ಯಾಮಿ ಪರ್ವತಶ್ರೇಷ್ಠೇ ಬಹ್ವಾಶ್ಚರ್ಯಸಮನ್ವಿತೇ ।
ನ ತ್ವಂ ವಸಸಿ ರಾಜೇಂದ್ರ ಸಂಧ್ಯಾವಲ್ಯಾ ವಿನಾ ಕ್ವಚಿತ್ ॥ ೧೪ ॥

ತಸ್ಯಾಸ್ತ್ವಂ ವಿರಹೇ ದುಃಖೀ ಸಪುತ್ರಾಯಾ ಭವಿಷ್ಯಸಿ ।
ದುಃಖೇನ ಭವತೋ ರಾಜನ್ಭೂರಿ ದುಃಖಂ ಭವೇನ್ಮಮ ॥ ೧೫ ॥

ಯತ್ರೈವ ಭವತಃ ಸೌಖ್ಯಂ ತತ್ರಾಹಮಪಿ ಸಂಸ್ಥಿತಾ ।
ಯತ್ರ ತ್ವಂ ರಂಸ್ಯಸೇ ರಾಜಂಸ್ತತ್ರ ಮೇ ಮಂದರೋ ಗಿರಿಃ ॥ ೧೬ ॥

ಭರ್ತೃಸ್ಥಾನೇ ಹಿ ವಸ್ತವ್ಯಮೃದ್ಧಿಹೀನೇಽಪಿ ಭಾರ್ಯಯಾ ।
ಸ ಮೇರುಃ ಕಾಂಚನಮಯಃ ಸನ್ನಿಧಾನೇ ಪ್ರಚಕ್ಷತೇ ॥ ೧೭ ॥

ಮನೋರಥೋ ನಾಮ ಮೇರುಃ ಯತ್ರ ತ್ವಂ ರಮಸೇ ವಿಭೋ ।
ಭರ್ತೃಸ್ಥಾನಂ ಪರಿತ್ಯಜ್ಯ ಸ್ವಪಿತುರ್ವಾಪಿ ವರ್ಜಿತಂ ॥ ೧೮ ॥

---

೧೪. ಆಶ್ಚರ್ಯಕರವಾದ ಬಹುವಸ್ತುಗಳಿಂದ ಕೂಡಿದ, ಶ್ರೇಷ್ಠವಾದ ಈ ಪರ್ವತದಲ್ಲಿಯೇ ವಾಸಿಸಲಿಚ್ಛಿಸುವೆನು. ನೀನಾದರೋ ಯಾವ ಸಂದರ್ಭ ದಲ್ಲಿಯೂ ಸಂಧ್ಯಾವಳಿಯನ್ನು ಬಿಟ್ಟಿರಲಾರೆ.

೧೫. ಪುತ್ರಸಹಿತಳಾದ ಆ ಸಂಧ್ಯಾವಳಿಯ ವಿರಹದಿಂದ ನೀನು ದುಃಖ ಪಡುತ್ತೀಯೆ. ರಾಜನೇ! ನೀನು ದುಃಖಪಟ್ಟರೆ ನನಗೆ ಬಹುದುಃಖವಾಗು ವುದು.

೧೬. ಆದುದರಿಂದ ಎಲ್ಲಿ ನಿನಗೆ ಸೌಖ್ಯವುಂಟಾಗುವುದೋ ಅಲ್ಲಿಗೇ ನಾನೂ ಬರುವೆನು. ರಾಜನೇ! ನೀನು ನನ್ನನ್ನು ಭೋಗಿಸುವೆಡೆಯೇ ನನಗೆ ಮಂದರಪರ್ವತವು.

೧೭. ಸುಖವಿಲ್ಲದಿದ್ದರೂ ಗಂಡನಿರುವೆಡೆಯಲ್ಲಿಯೇ ಹೆಂಡತಿಯು ವಾಸ ಮಾಡಬೇಕು. ಪತಿಯಸನ್ನಿಧಾನವಿರುವ ಸ್ಥಾನವೇ ಸುವರ್ಣಮಯವಾದ ಮೇರುಪರ್ವತವೆಂದು ಹೇಳುತ್ತಾರೆ.

೧೮-೧೯. ಸ್ವಾಮಿಯೇ! ನೀನು ನನ್ನೊಡನೆ ರಮಿಸುವ ಸ್ಥಾನವೇ ಮನೋರಥವೆಂಬ ಮೇರುಪರ್ವತವು. ತನ್ನ ಪತಿ ಇರುವ ಸ್ಥಳ ಅಥವಾ ತನ್ನ

ಅನ್ಯಸ್ಥಾನಾಶ್ರಯೆರತಾ ನಾರೀ ತೆಮಸಿ ಮಜ್ಜತಿ ।
ಸರ್ವಧರ್ಮವಿಹೀನಾಪಿ ನಾರೀ ಭವತಿ ಸೂಕರೀ ॥ ೧೯ ॥

ಏವಂ ಜಾನಾಮ್ಯಹಂ ದೋಷಂ ಕಥಂ ವತ್ಸ್ಯಾಮಿ ಮಂದರೇ ।
ಗಮಿಷ್ಯಾಮಿ ತ್ವಯಾ ಸಾರ್ಧಂ ಈಶಸ್ತ್ವಂ ಸುಖದುಃಖಯೋಃ ॥ ೨೦ ॥

ಮೋಹಿನ್ಯಾಸ್ತದ್ವಚಃ ಶ್ರುತ್ವಾ ರಾಜಾ ಸಂಕೃಷ್ಟಮಾನಸಃ ।
ಪರಿಷ್ವಜ್ಯ ವರಾರೋಹಾಮಿದಂ ವಚನಮಬ್ರವೀತ್ ॥ ೨೧ ॥

ಭಾರ್ಯಾಣಾಂ ಮಮ ಸರ್ವಾಸಾಮುಪರಿಷ್ಟಾದ್ಭವಿಷ್ಯಸಿ ।
ಮಾ ಶಂಕಾಂ ಕುರು ವಾಮೋರು ಯತೋ ದುಃಖಂ ಭವಿಷ್ಯತಿ ॥ ೨೨ ॥

ಜೀವಿತಾದಧಿಕಾ ಸುಭ್ರು ಭವಿಷ್ಯಸಿ ಗೃಹೇ ಮಮ ।
ಏಹಿ ಗಚ್ಛಾವ ತನ್ವಂಗಿ ಸುಖಾಯ ನಗರಂ ಪ್ರತಿ ॥ ೨೩ ॥

---

ತಂದೆಯಿರುವ ಸ್ಥಳಗಳನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ವಾಸಿಸುವ ನಾರಿಯು ನರಕದಲ್ಲಿ ಮುಳುಗುವಳು. ವಿಹಿತಸಕಲಧರ್ಮಗಳನ್ನೂ ತ್ಯಜಿಸಿರುವ ನಾರಿಯು ಹಂದಿಯಾಗುವಳು.

೨೦. ಈ ರೀತಿಯಾಗಿ ಧರ್ಮಸೂಕ್ಷ್ಮವನ್ನು ತಿಳಿದಿರುವ ನಾನು ಮಂದರ ಪರ್ವತದಲ್ಲಿ ನೀನಿಲ್ಲದೆ ಹೇಗೆ ವಾಸಿಸಲಿ? ಹೇಗಾದರೂ ಸರಿ ನಿನ್ನೊಡನೆ ಬರುವೆನು. ನೀನೇ ಸುಖದುಃಖಗಳಿಗೆ ನಿಯಾಮಕನು.

೨೧. ಮೋಹಿನಿಯ ಆ ಮಾತನ್ನು ಕೇಳಿ ರಾಜನು ಮನಸ್ಸಿನಲ್ಲಿ ದುಃಖಪಟ್ಟು ವರಾರೋಹೆಯಾದ ಮೋಹಿನಿಯನ್ನು ಆಲಿಂಗನೆಮಾಡಿಕೊಂಡು ಈ ಮಾತನ್ನು ಹೇಳಿದನು.

೨೨. ವಾಮೋರೂ! ನೀನು ನನ್ನ ಪತ್ನಿಯರಲ್ಲೆಲ್ಲಾ ಮೇಲಾಗಿರುವೆ. ಅವರಿಂದ ದುಃಖವುಂಟಾದೀತೆಂದು ಶಂಕಿಸಬೇಡ.

೨೩. ನನ್ನ ಮನೆಯಲ್ಲಿ ನಿನ್ನನ್ನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ರಕ್ಷಿಸುವೆನು. ಕೃಶಾಂಗಿಯೇ! ಬಾ, ಪಟ್ಟಣಕ್ಕೆ ಹೋಗಿ ಸುಖಪಡೋಣ.

ಭುಂಕ್ಷ್ವ ಭೋಗಾನ್ಮಯಾ ಸಾರ್ಧಂ ತತ್ರಸ್ಥಾ ಸ್ವೇಚ್ಛಯಾ ಪ್ರಿಯೇ ॥೨೪॥

ಸಾ ತ್ವೇವಮುಕ್ತ್ವಾ ಶಶಿಗೌರವಕ್ತ್ರಾ
ರುಕ್ಮಾಂಗದೇನಾತ್ಮವಿನಾಶನಾಯ ।
ಸಂಪ್ರಸ್ಥಿತಾ ನೂಪುರಘೋಷಯುಕ್ತಾ
ವಿಕರ್ಷಯಂತೀ ಗಿರಿಜಾತಶೋಭಾಂ　　　　॥ ೨೫ ॥

ಇತಿ ಶ್ರೀ ನಾರದೀಯೆಮಹಾಪುರಾಣೋತ್ತರಭಾಗೇ
ಮೋಹಿನೀಸಂವಾಹನಂ ನಾಮ
ತ್ರಯೋದಶೋಽಧ್ಯಾಯಃ

---

೨೪. ಪ್ರಿಯೇ ! ನಗರದಲ್ಲಿದ್ದು ನನ್ನೊಡನೆ ಯಥೇಷ್ಟವಾಗಿ ಭೋಗಿಸು.

೨೫. ರುಕ್ಮಾಂಗದನು ಆತ್ಮವಿನಾಶಕ್ಕಾಗಿ ಹೇಳಿದ ಈ ಮಾತನ್ನು ಕೇಳಿ ಚಂದ್ರನಂತೆ ಗೌರಮುಖಳಾದ ಆ ಮೋಹಿನಿಯು ಕಾಲುರುಳಿಗಳನ್ನು ಶಬ್ದ ಮಾಡುತ್ತಾ ಪಾರ್ವತಿಯಂತೆ ವಿರಾಜಿಸುತ್ತಾ ಪಟ್ಟಣಕ್ಕೆ ಹೊರಟಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನಿಯನ್ನು ಪಟ್ಟಣಕ್ಕೆ
ಕರೆದೊಯ್ದು ಕಥೆಯನ್ನೊಳಗೊಂಡ ಹದಿಮೂರನೆಯ
ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ

ಮೂರ್ಛೆಹೊಂದಿದ್ದ ರುಕ್ಮಾಂಗದನನ್ನುಎಬ್ಬಿಸಿ, ಮೋಹಿನಿಯು ತನ್ನ ವೃತ್ತಾಂತವನ್ನು ಹೇಳಿ ನೀನು ನನ್ನನ್ನು ಭೋಗಿಸಬೇಕೆಂದು ಅಪೇಕ್ಷಿಸುವುದಾದರೆ ವಿವಾಹಮಾಡಿಕೊಂಡು ಭೋಗಿಸು ಎಂದು ಹೇಳಲಾಗಿ ರಾಜನು ಅವಳನ್ನುಮದುವೆಮಾಡಿಕೊಂಡು ತನ್ನಮುಂದಿರಕ್ಕೆ ಬರಬೇಕೆಂದು ಕೇಳಲು ಅವಳು ಸವತಿಯರೊಡನೆ ವಾಸಮಾಡುವುದರಲ್ಲಿ ಸಂಭವಿಸಬಹುದಾದ ದುಃಖವನ್ನು ವಿವರಿಸಿ ರಾಜನಿಂದ ಭರವಸೆ ಹೊಂದಿ ಅವನ ನಗರಕ್ಕೆ ಹೊರಟಳು.

## ಚತುರ್ದಶೋಽಧ್ಯಾಯಃ

---

ವಸಿಷ್ಠ ಉವಾಚ

ಸಂಪ್ರಸ್ಥಿತಾವುಭೌ ರಾಜನ್ ಗಿರಿಶೀರ್ಷಾದ್ಧರಾತಲಂ ।
ಪಶ್ಯಮಾನೌ ಬಹೂನ್ಭಾವಾನ್ ಗಿರಿಜಾತಾನ್ಮನೋಹರಾನ್ ॥ ೧ ॥

ಕೇಚಿದ್ವಿದ್ರುಮಸಂಕಾಶಾಃ ಕೇಚಿದ್ರಜತಸನ್ನಿಭಾಃ ।
ಕೇಚಿನ್ನೀಲಸಮುಪ್ರಖ್ಯಾಃ ಕೇಚಿತ್ಕಾಂಚನಸತ್ವಿಷಃ ॥ ೨ ॥

ಕೇಚಿತ್‌ಸ್ಫಾಟಿಕವರ್ಣಾಭಾ ಹರಿತಾಲನಿಭಾಃ ಪರೇ ।
ಅನ್ಯೋನ್ಯಶ್ಲೇಷತಾಂ ಪ್ರಾಪ್ತಾ ಸಕಲೈಃ ಸ್ಥಾವರೈರಿವ ॥ ೩ ॥

---

### ಹದಿನಾಲ್ಕನೆಯ ಅಧ್ಯಾಯವು.

೧. ವಸಿಷ್ಠನು ಹೇಳಿದನು :— ದೊರೆಯೇ ! ಮೋಹಿನೀ ರುಕ್ಮಾಂಗದರಿಬ್ಬರೂ ಪರ್ವತಶಿಖರದಿಂದ ಹೊರಟು ಬೆಟ್ಟದಲ್ಲಿನ ಮನೋಹರವಾದ ಬಹು ಪದಾರ್ಥಗಳನ್ನು ನೋಡುತ್ತಾ ಭೂತಲಕ್ಕೆ ಪ್ರಯಾಣಮಾಡಿದರು.

೨-೩. ಅಲ್ಲಿ ಕೆಲವು ಪದಾರ್ಥಗಳು ಹವಳದಂತೆಯೂ, ಇನ್ನು ಕೆಲವು ವಸ್ತುಗಳು ಬೆಳ್ಳಿಯಂತೆಯೂ, ಮತ್ತೆ ಕೆಲವು ಭಾವಗಳು ನೀಲಮಣಿಗೆ ಸಮವಾಗಿಯೂ, ಕೆಲವು ಸುವರ್ಣಕಾಂತಿಯಂತೆಯೂ, ಕೆಲವು ಸ್ಫಟಿಕವರ್ಣದಂತೆಯೂ, ಕೆಲವು ಹರಿತಾಳದಂತೆಯೂ, ಪ್ರಕಾಶಿಸುತ್ತಿದ್ದುವು. ಹೀಗೆ ಸಕಲ ಸ್ಥಾವರಗಳೂ ಅಲ್ಲಿ ಸೇರಿರುವಂತೆಯೇ ಅವರಿಬ್ಬರೂ ಸಹ ಅಲ್ಲಿಯೇ ಸಂಧಿಸಿದರು.

ಸಂಪ್ರಾಪ್ಯ ವಸುಧಾಂ ಭೂಪೋ ಹ್ಯಪಶ್ಯದ್ವಾಜಿನಾಂ ವರಂ ।
ಖನ್ಯಮಾನಂ ಖುರೇಣೋರ್ವೀಂ ಕುಲಶಾಭೇನ ವೇಗಿನಾ ॥ ೪ ॥

ತಸ್ಯ ದಾರಯತಃ ಪೃಥ್ವೀಂ ಸುತೀಕ್ಷ್ಣೇನ ಖುರೇಣ ಹಿ ।
ಗೃಹಗೋಧಾಭವತ್ತಸ್ಮಿನ್ ಭೂಭಾಗಾಂತರ್ಗತಾ ಕಿಲ ॥ ೫ ॥

ನಿರ್ಗಚ್ಛಮಾನಾ ನೃಪತೇ ಖುರೇಣ ವಿದಲೀಕೃತಾ ।
ವಿದೀರ್ಯಮಾಣಾಂ ನೃಪತಿರಪಶ್ಯತ್ಸ ದಯಾಪರಃ ॥ ೬ ॥

ಅಭ್ಯಧಾವತ ವೇಗೇನ ಹಾ ಹತೇತಿ ಪ್ರಿಯಾಂ ವದನ್ ।
ತತಃ ಸ ವೃಕ್ಷಪಕ್ಷೇಣ ಕೋಮಲೇನ ಮಹೀಪತಿಃ ॥ ೭ ॥

ಉತ್ಸಾರ್ಯ ತಾಂ ಖುರಾದಾಶು ಪ್ರಾಕ್ಷಿಪತ್ತೃಣಶಾದ್ವಲೇ ।
ತತಸ್ತು ಮೋಹಿನೀಂ ಪ್ರಾಹ ಪ್ರೇಕ್ಷ್ಯ ಮೂರ್ಧಾಗತಾಂ ಹಿ ತಾಂ ॥ ೮ ॥

---

೪. ಭೂಪಾಲನು ಭೂಮಿಗೆ ಬಂದು, ವಜ್ರದಂತೆ ಹೊಳೆಯುತ್ತಿರುವ, ವೇಗಯುಕ್ತವಾದ ಗೊರಸಿನಿಂದ ಭೂಮಿಯನ್ನು ಅಗಿಯುತ್ತಿರುವ, ಶ್ರೇಷ್ಠವಾದ ತನ್ನ ಕುದುರೆಯನ್ನು ನೋಡಿದನು.

೫. ಆ ಕುದುರೆಯು ಅತ್ಯಂತ ಹರಿತವಾದ ಗೊರಸಿನಿಂದ ಸೀಳಿದ ಭೂಮಿಯ ಒಳಭಾಗದಲ್ಲಿ ಒಂದು ಹಲ್ಲಿಯು ಸೇರಿಕೊಂಡಿದ್ದಿತು.

೬-೯. ದೊರೆಯೇ! ಆ ಹಲ್ಲಿಯು ಒಳಗಿನಿಂದ ಹೊರಕ್ಕೆ ಬರಲು ಯತ್ನಿಸುವುದರಲ್ಲಿ ಕುದುರೆಯ ಗೊರಸಿನಿಂದ ಕತ್ತರಿಸಲ್ಪಟ್ಟಿತು. ಹಾಗೆ ಕತ್ತರಿಸಲ್ಪಡುತ್ತಿದ್ದ ಹಲ್ಲಿಯನ್ನು ರಾಜನು ನೋಡಿದನು. ದಯಾಪರನಾದ ಆವನು ತನ್ನ ಪ್ರಿಯೆಯನ್ನು ಕುರಿತು "ಅಯ್ಯೋ ಸತ್ತು ಹೋಯಿತು!" ಎಂಬುದಾಗಿ ಹೇಳುತ್ತಾ ಓಡಿದನು.

ಅನಂತರ ಅವನು ಕೋಮಲವಾದ ಮರದ ಕೊನೆಯನ್ನು ತೆಗೆದುಕೊಂಡು ಆ ಹಲ್ಲಿಯನ್ನು ಬೇಗ ಗೊರಸಿನಿಂದ ಬಿಡಿಸಿ ಹುಲ್ಲಿರುವ ಸ್ಥಳದಲ್ಲಿರಿಸಿದನು.

**ಶೀಘ್ರಮಾಹರ ಚಾರ್ವಂಗಿ ಜಲಂ ಜಲಜಲೋಚನೇ ।**
**ಯೇನ ಮೂರ್ಛಾಗತಾಂ ಸಿಂಚೇ ಗೃಹಗೋಧಾಂ ವಿಮರ್ದಿತಾಂ ॥ ೯ ॥**

**ಸಾ ಭರ್ತುರ್ವಚನಾಚ್ಛೀಘ್ರಮಾನಯುಚ್ಛೀತಲಂ ಜಲಂ ।**
**ತೇನಾಭ್ಯಷಿಂಚನ್ನೃಪತಿರ್ಗೃಹಗೋಧಾಂ ವಿಮೂರ್ಛಿತಾಂ ॥ ೧೦ ॥**

**ಅವಾಪ ಚೇತನಾಂ ರಾಜನ್ ಶೀತಲಾಜ್ಜಲಸೇಚನಾತ್ ।**
**ಅಭಿಘಾತೇಷು ಸರ್ವೇಷು ಶಸ್ತಂ ವಾರಿಪ್ರಸೇಚನಂ ॥ ೧೧ ॥**

**ಅಥವಾ ಕ್ಲಿನ್ನವಸ್ತ್ರೇಣ ಸಹಸಾ ಬಂಧನಂ ಹಿತಂ ।**
**ಸಂಪ್ರಾಪ್ತಚೇತನಾ ಭೂಪ ಗೋಧಾ ವಚನಮಬ್ರವೀತ್ ॥ ೧೨ ॥**

**ರಾಜಾನಮಗ್ರತೋ ವೀಕ್ಷ್ಯ ವೇದನಾರ್ತಾ ಶನೈಃಶನೈಃ ।**
**ರುಕ್ಮಾಂಗದಮಹಾಬಾಹೋ ನಿಬೋಧ ಮಮ ಚೇಷ್ಟಿತಂ ॥ ೧೩ ॥**

---

ತರುವಾಯ ಮೂರ್ಛೆಯನ್ನು ಹೊಂದಿದ ಆ ಹಲ್ಲಿಯನ್ನು ನೋಡಿ ಮೋಹಿನಿಗೆ ಹೀಗೆ ಹೇಳಿದನು:—"ಕಮಲನಯನಳಾದ ಮನೋಹರಾಂಗಿಯೇ! ಬೇಗ ನೀರನ್ನು ತೆಗೆದುಕೊಂಡು ಬಾ. ಗೊರಸಿನಿಂದ ಗಾಯಹೊಂದಿ ಮೂರ್ಛೆಯನ್ನು ಹೊಂದಿದ ಹಲ್ಲಿಗೆ ಶೈತ್ಯೋಪಚಾರಮಾಡುವೆನು.''

೧೦. ಅವಳು ಗಂಡನ ಮಾತಿನಂತೆ ಬೇಗ ನೀರನ್ನು ತಂದಳು. ದೊರೆಯು ಮೂರ್ಛೆಹೊಂದಿದ್ದ ಹಲ್ಲಿಗೆ ಆ ನೀರಿನಿಂದ ಸೇಚನೆ ಮಾಡಿದನು.

೧೧. ರಾಜನೇ! ನೀರನ್ನು ಸೇಚನೆ ಮಾಡಿದುದರಿಂದ ಆ ಹಲ್ಲಿಗೆ ಚೈತನ್ಯ ಬಂದಿತು. ಪೆಟ್ಟು ಬಿದ್ದು ಗಾಯವಾದಾಗಲೆಲ್ಲಾ ನೀರನ್ನು ಸೇಚನೆ ಮಾಡುವುದು ಪ್ರಶಸ್ತವು.

೧೨. ಅಥವಾ ಗಾಯವಾದ ಅವಯವವನ್ನು ಒದ್ದೆಬಟ್ಟೆಯಿಂದ ಕಟ್ಟುವುದೂ ಒಳ್ಳೆಯದು. ಹೀಗೆ ಪ್ರಜ್ಞೆಯನ್ನು ಹೊಂದಿದ ಬಳಿಕ ಹಲ್ಲಿಯು ರಾಜನನ್ನು ಕುರಿತು ಮಾತನಾಡಿತು.

೧೩. ತನ್ನ ಮುಂದಿದ್ದ ರಾಜನನ್ನು ನೋಡಿ ನೋವಿನಿಂದ ಪೀಡಿತವಾದ ಹಲ್ಲಿಯು ಮೆಲ್ಲಮೆಲ್ಲಗೆ ಹೇಳತೊಡಗಿತು. ಮಹಾಪರಾಕ್ರಮಶಾಲಿಯಾದ ರುಕ್ಮಾಂಗದನೇ! ನನ್ನ ವೃತ್ತಾಂತವನ್ನು ಹೇಳುವೆನು ಕೇಳು.

ಶಾಕಲೇ ನಗರೇ ರಮ್ಯೇ ಭಾರ್ಯಾಹಂ ಹ್ಯಗ್ರಜನ್ಮನಃ |
ರೂಪಯೌವ್ವನಸಂಪನ್ನಾ ತಸ್ಯ ನಾತಿಪ್ರಿಯಾ ವಿಭೋ || ೧೪ ||

ಸದಾ ವಿದ್ವೇಷಸಂಯುಕ್ತೋ ಮಯಿ ನಿಷ್ಠುರಜಲ್ಪಕಃ |
ನಾನ್ಯಸ್ಯ ಕಸ್ಯಚಿದ್ದ್ವೇಷ್ಟಾ ಸ ತು ಮೇ ನೃಪತೇ ಪತಿಃ || ೧೫ ||

ತತೋಽಹಂ ಕ್ರೋಧಸಂಯುಕ್ತಾ ವಶೀಕರಣಲಂಪಟಾ |
ಅಪೃಚ್ಛಂ ಪ್ರಮದಾ ರಾಜನ್ಯಾಸ್ತ್ಯಕ್ತಾಃ ಪತಿಭಿಃ ಕಿಲ || ೧೬ ||

ತಾಭಿರುಕ್ತಾ ಹ್ಯಹಂ ಭೂಪ ವಶ್ಯೋ ಭರ್ತಾ ಭವಿಷ್ಯತಿ |
ಅಸ್ಮಾಕಂ ಪ್ರತ್ಯಯೋ ಜಾತೋ ಭರ್ತೃತ್ಯಾಗಾವಮಾನನಾತ್ || ೧೭ ||

ಪ್ರವ್ರಜ್ಯಾಭೇಷಜೈರ್ವಶ್ಯಾ ಜಾತಾ ಹಿ ಪತಯಸ್ತು ನಃ |
ತ್ವಂ ಪೃಚ್ಛ ತಾಂ ವರಾರೋಹೇ ದಾಸ್ಯತೇ ಭೇಷಜಂ ಶುಭಂ || ೧೮ ||

---

೧೪. ಸ್ವಾಮಿಯೇ! ನಾನು ಮನೋಹರವಾದ ಶಾಕಲನಗರದಲ್ಲಿನ ಒಬ್ಬ ಬ್ರಾಹ್ಮಣನ ಪತ್ನಿಯು. ರೂಪಯೌವನಯುಕ್ತಳಾದ ನಾನು ಅವನಿಗೆ ಅತ್ಯಂತ ಪ್ರಿಯಳಾಗಿರಲಿಲ್ಲ.

೧೫. ನನ್ನ ಪತಿಯು ಇತರ ಯಾರಿಗೂ ದ್ವೇಷಿಯಾಗದಿದ್ದರೂ ನನ್ನಲ್ಲಿ ಯಾವಾಗಲೂ ದ್ವೇಷಮಾಡುತ್ತಾ ನಿಷ್ಠುರ ಮಾತುಗಳನ್ನಾಡುತ್ತಿದ್ದನು.

೧೬. ಆದರಿಂದ ಕ್ರೋಧವನ್ನು ಹೊಂದಿದ ನಾನು ಗಂಡನನ್ನು ವಶಪಡಿಸಿಕೊಳ್ಳಬೇಕೆಂಬ ಆಶೆಯುಳ್ಳವಳಾಗಿ ಗಂಡಂದಿರು ಬಿಟ್ಟಿದ್ದ ಸ್ತ್ರೀಯರನ್ನು ಕುರಿತು ವಶೀಕರಣೋಪಾಯವನ್ನು ಕೇಳಿದೆನು.

೧೭-೧೮. ಭೂಪಾಲನೇ! ಆ ಸ್ತ್ರೀಯರು ನಾವು ಗಂಡನು ಬಿಟ್ಟುದರಿಂದ ಅವಮಾನಿತರಾಗಿ ತಾಪಸಿಯನ್ನು ಕೇಳಿ, ಆಕೆಯು ಹೇಳಿದ ಔಷಧಗಳನ್ನು ಮಾಡಿದೆವು ಅದರಿಂದ ನಮ್ಮ ಪತಿಗಳು ವಶರಾದರು. ನಮಗೆ ಅದರಲ್ಲಿ ನಂಬಿಕೆ ಹಟ್ಟಿತು. ನೀನೂ ಆ ತಾಪಸಿಯನ್ನು ಕೇಳು ಅವಳು ಒಳ್ಳೆಯ ಔಷಧವನ್ನು ಕೊಡುವಳು. ಆದರಿಂದ ನಿನ್ನ ಗಂಡನು ವಶನಾಗುವನು.

ನ ವಿಕಲ್ಪಸ್ತ್ವಯಾ ಕಾರ್ಯೋ ಭಣಿತಾ ದಾಸವತ್ಪತಿಃ |
ತತೋಽಹಂ ತ್ವರಿತಂ ಗತ್ವಾ ತಾಸಾಂ ವಾಕ್ಯೇನ ಭೂಪತೇ || ೧೯ ||

ಪ್ರಾಸಾದಃ ಕಥಿತಸ್ತಸ್ಯಾಃ ಪೃಚ್ಛಂತ್ಯಾ ಮಮ ಮಾನವೈಃ |
ಶತಸ್ತಂಭಸಮಾಯುಕ್ತಃ ಕಾಂತಿಮತ್ಸುಧಯಾ ಯುತಃ || ೨೦ ||

ಪ್ರವಿಶ್ಯ ತಾಂ ಸುತೇಜಸ್ಕಾಮಪಶ್ಯಂ ಬ್ರಹ್ಮಚಾರಿಣೀಂ |
ಪ್ರಾವೃತಾಂ ದೀರ್ಘವಸ್ತ್ರೇಣ ಸಂಧ್ಯಾರಾಗಸವರ್ಣಿನೀಂ || ೨೧ ||

ದೀರ್ಘಾಭಿಃ ಸಾ ಜಟಾಭಿಸ್ತು ಸಂವೃತಾ ದೀಪ್ತಿಸಂಯುತಾ |
ಪರಿಚಾರಕೈಸ್ತು ಸಂಯುಕ್ತಾ ವೀಜ್ಯಮಾನಾ ಶನೈಶ್ಶನೈಃ || ೨೨ ||

ಅಕ್ಷಸೂತ್ರಕರಾಂ ಸಾ ತು ಜಪಂತೀ ಭಗಮಾಲಿನೀಂ |
ಸರ್ವವಶ್ಯಕರಂ ಮಂತ್ರಂ ಕ್ಷೋಭಕಂ ಪ್ರತ್ಯಯಾವಹಂ || ೨೩ ||

---

೧೯-೨೦. ನೀನು ಸಂಶಯಪಡಬೇಡ. ಗಂಡನು ನಿನಗೆ ದಾಸನಂತಾಗುವನು ಎಂದು ಅವರು ಹೇಳಿದರು. ಅನಂತರ ನಾನು ಆ ಸ್ತ್ರೀಯರ ವಾಕ್ಯದಂತೆ ಬೇಗ ಹೊರಟು ಆ ತಾಪಸಿಯ ಅರಮನೆಯು ಎಲ್ಲಿದೆ? ಎಂದು ದಾರಿಯಲ್ಲಿ ಸಿಕ್ಕಿದ ಮನುಷ್ಯರನ್ನು ಕೇಳಿ ತಿಳಿದು ಅಲ್ಲಿಗೆ ಹೋದೆನು. ನೂರುಕಂಭಗಳಿಂದ ಯುಕ್ತವಾದ ಆ ಪ್ರಾಸಾದವು ಸುಣ್ಣಬಣ್ಣಗಳಿಂದ ಹೊಳೆಯುತ್ತಿದ್ದಿತು.

೨೧. ಆ ಗೃಹದೊಳಕ್ಕೆ ಹೋಗಿ ಅತ್ಯಂತ ತೇಜಸ್ಸುಳ್ಳ, ಬ್ರಹ್ಮಚಾರಿಣಿಯಾದ, ಉದ್ದವಾದ ಬಟ್ಟೆಯನ್ನು ಹೊದ್ದಿರುವ, ಸಂಧ್ಯಾಕಾಲದ ಕೆಂಪು ಬಣ್ಣದಂತೆ ಕೆಂಪಗಿದ್ದ ಆ ತಾಪಸಿಯನ್ನು ನೋಡಿದೆನು.

೨೨-೨೩. ಆಕೆಯು ಉದ್ದವಾದ ಜಟೆಗಳನ್ನು ಧರಿಸಿ ಪ್ರಕಾಶಿಸುತ್ತಾ, ಪರಿಚಾರಕರಿಂದ ಮೆಲ್ಲಮೆಲ್ಲಗೆ ಬೀಸಿಸಿಕೊಳ್ಳುತ್ತಾ ಜಪಮಾಲಿಕೆಯನ್ನು ಕೈಯಲ್ಲಿ ಧರಿಸಿ, ನಂಬಿಕೆಯನ್ನು ಹುಟ್ಟಿಸುವಂತಹ, ಸರ್ವವಶ್ಯಕರವೂ, ಶತ್ರುನಾಶಕವೂ ಆದ ಭಗಮಾಲಿನೀ ಮಂತ್ರವನ್ನು ಜಪಿಸುತ್ತಿದ್ದಳು.

ತತೋಽಹಂ ಪ್ರಣತಾ ಭೂತ್ವಾ ಪದಾಭ್ಯಾಂ ನ್ಯಸ್ಯಾಂಗುಲೀಯಕಂ ।
ಮೃದುಕಾಂಚನಸಂಭೂತಂ ಅತಿರಿಕ್ತಪ್ರಭಾನ್ವಿತಂ ॥ ೨೪ ॥

ತತೋ ಹೃಷ್ಟಾಽಭವತ್ಸ್ಪೃಷ್ಟ್ವಾ ಪದಸ್ಥಂ ಚಾಂಗುಲೀಯಕಂ ।
ಅಪೃಷ್ಟಯಾ ತಯಾ ಜ್ಞಾತಂ ಮಮ ಭರ್ತುರ್ವಿಮಾನನಂ ॥ ೨೫ ॥

ತಯೋಕ್ತಾಹಂ ತತೋ ಭೂಪ ತಾಪಸ್ಯಾ ಪ್ರಣತಾ ಸ್ಥಿತಾ ।
ಚೂರ್ಣೋ ರಕ್ಷಾನ್ವಿತೋ ಹ್ಯೇಷ ಸರ್ವಭೂತವಶಾನುಗಃ ॥ ೨೬ ॥

ತ್ವಯಾ ಭರ್ತರಿ ಸಂಯೋಜ್ಯೋ ರಕ್ಷಾಂ ಗ್ರೀವಾಶಯಾಂಕುರಂ ।
ಭವಿಷ್ಯತಿ ಪತಿರ್ವಶ್ಯೋ ನಾನ್ಯಾಂ ಯಾಸ್ಯತಿ ಸುಂದರೀಂ ॥ ೨೭ ॥

ಚೂರ್ಣರಕ್ಷಾಂ ಗೃಹೀತ್ವಾಹಂ ಪ್ರಾಪ್ಯಾ ಭರ್ತುರ್ಗೃಹಂ ಪುನಃ ।
ಪ್ರದೋಷೇ ಪಯಸಾ ಯುಕ್ತಶ್ಚೂರ್ಣೋ ಭರ್ತರಿ ಯೋಜಿತಃ ॥ ೨೮ ॥

---

೨೪. ಆಗ ನಾನು ಆ ತಾಪಸಿಯ ಪಾದಗಳಲ್ಲಿ ಬಂಗಾರದಿಂದ ಮಾಡಿದ್ದ, ಮೃದುವಾದ, ಅಧಿಕಕಾಂತಿಯುಕ್ತವಾದ ಮುದ್ರೆಯುಂಗುರವನ್ನು ಸಮರ್ಪಿಸಿ ನಮಸ್ಕಾರ ಮಾಡಿದೆನು.

೨೫. ಅನಂತರ ತಾಪಸಿಯು ತನ್ನ ಪಾದದಲ್ಲಿದ್ದ ಉಂಗರವನ್ನು ನೋಡಿ ಸಂತೋಷಪಟ್ಟಳು. ಮತ್ತು ನಾನು ಹೇಳಿಕೊಳ್ಳದಿದ್ದರೂ ನನಗಾಗಿರುವ ಗಂಡನ ತಿರಸ್ಕಾರಪ್ರಯುಕ್ತವಾದ ಅವಮಾನವನ್ನು ತಾಪಸಿಯು ತಿಳಿದಳು.

೨೬-೨೭. ಅನಂತರ ಆ ತಾಪಸಿಯು ನಮಸ್ಕಾರ ಮಾಡಿ ನಿಂತಿದ್ದ ನನಗೆ "ಈ ರಕ್ಷೆ ಮತ್ತು ಚೂರ್ಣಗಳು ಸಕಲಪ್ರಾಣಿಗಳನ್ನೂ ವಶಪಡಿಸುತ್ತವೆ, ಇವನ್ನು ನೀನು ತೆಗೆದುಕೊಂಡು ನಿನ್ನ ಪತಿಗೆ ಚೂರ್ಣವನ್ನು ಹೊಟ್ಟೆಗೆ ಕೊಟ್ಟು ರಕ್ಷೆಯನ್ನು ಕುತ್ತಿಗೆಗೆ ಲೇಪನಮಾಡು. ಆದರಿಂದ ಪತಿಯು ನಿನ್ನ ವಶನಾಗುವನು. ಬೇರೆ ಸುಂದರಿಯ ಬಳಿಗೆ ಹೋಗುವುದಿಲ್ಲ" ಎಂದು ಹೇಳಿದಳು.

೨೮. ನಾನು ಚೂರ್ಣ, ರಕ್ಷೆಗಳನ್ನು ತೆಗೆದುಕೊಂಡು ಪುನಃ ಪತಿಯ ಮನೆಗೆ ಬಂದು ಪ್ರದೋಷಕಾಲದಲ್ಲಿ ಚೂರ್ಣವನ್ನು ಹಾಲಿನೊಡನೆ ಸೇರಿಸಿ ಗಂಡನಿಗೆ ಕೊಟ್ಟು ಕುಡಿಸಿದೆನು.

ಗ್ರೀವಾಯಾಂ ಹಿ ಕೃತಾ ರಕ್ಷಾ ನ ವಿಚಾರೋ ಮಯಾ ಕೃತಃ ।
ಯದಾ ಸ ಪೀತಚೂರ್ಣಸ್ತು ಭರ್ತಾ ನೃಪವರೋತ್ತಮ ॥ ೨೯ ॥

ತದಹಃ ಕ್ಷಯರೋಗೋಭೂತ್ಪತಿಃ ಕ್ಷೀಣೋ ದಿನೇ ದಿನೇ ।
ಗುಹ್ಯೇ ತು ಕ್ರಿಮಯೋ ಜಾತಾಃ ಕ್ಷತದುಷ್ಟವ್ರಣೋದ್ಭವಾಃ ॥ ೩೦ ॥

ದಿನೈಃ ಕತಿಪಯೈರ್ಜಾತೈರ್ದೀಪವದ್ರವಿದರ್ಶನಾತ್ ।
ಹತತೇಜಾಸ್ತಥಾ ಭರ್ತಾ ಮಾಮುವಾಚಾಕುಲೇಂದ್ರಿಯಃ ॥ ೩೧ ॥

ಕ್ರಂದಮಾನೋ ದಿವಾ ರಾತ್ರೌ ದಾಸೋಽಸ್ಮಿ ತವ ಶೋಭನೇ ।
ತ್ರಾಹಿ ಮಾಂ ಶರಣಂ ಪ್ರಾಪ್ತಂ ನ ಗಚ್ಛೇಯಂ ಪರಸ್ತ್ರಿಯಂ ॥ ೩೨ ॥

ತತ್ತಸ್ಯ ರುದಿತಂ ಶ್ರುತ್ವಾ ಭಯಭೀತಾ ಮಹೀಪತೇ ।
ತಸ್ಯಾಂ ನಿವೇದಿತಂ ಸರ್ವಂ ಕಥಂ ಭರ್ತಾ ಭವೇತ್ಸುಖೀ ॥ ೩೩ ॥

---

೨೯-೩೦. ರಕ್ಷೆಯನ್ನು ಕುತ್ತಿಗೆಗೆ ಹಚ್ಚಿದೆನು. ಯಾವ ವಿಚಾರವನ್ನೂ ಮಾಡಲಿಲ್ಲ. ರಾಜನೇ! ಪತಿಯು ಚೂರ್ಣಮಿಶ್ರವಾದ ಹಾಲನ್ನು ಕುಡಿದ ಮೇಲೆ ಆ ದಿನವೇ ಅವನಿಗೆ ಕ್ಷಯರೋಗವು ಬಂದು ದಿನದಿನಕ್ಕೆ ಕೃಶವಾಗುತ್ತಾ ಬಂದನು. ಗುಹ್ಯಾವಯವದಲ್ಲಿ ಕೆಟ್ಟಹುಣ್ಣುಗಳಾಗಿ ಅದರಿಂದ ಕ್ರಿಮಿಗಳು ಹುಟ್ಟಿದವು.

೩೧-೩೨. ಕೆಲವು ದಿನಗಳು ಕಳೆದ ತರುವಾಯ ಸೂರ್ಯತೇಜಸ್ಸಿನಲ್ಲಿ ದೀಪದಂತೆ ತೇಜೋಹೀನನೂ, ವ್ಯಾಕುಲೇಂದ್ರಿಯನೂ ಆದ ಪತಿಯು ಹಗಲು ರಾತ್ರಿ ಅಳುತ್ತಾ, ನನ್ನನ್ನು ಕುರಿತು "ಶೋಭನಾಂಗಿಯೇ! ನಿನಗೆ ದಾಸನಾಗಿ ರುವೆನು. ಶರಣಾಗತನಾದ ನನ್ನನ್ನು ರಕ್ಷಿಸು ಪರಸ್ತ್ರೀಗೋಜಿಗೆ ಹೋಗುವುದಿಲ್ಲ" ಎಂಬುದಾಗಿ ಹೇಳಿದನು.

೩೩. ಭೂಪಾಲನೇ! ಅವನ ಆ ರೋದನವನ್ನು ಕೇಳಿ ನಾನು ಭಯ ಪಟ್ಟು ತಾಪಸಿಯ ಸನ್ನಿಧಿಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಹೇಳಿ ಪತಿಯು ಹೇಗೆ ಆರೋಗ್ಯವನ್ನು ಪಡೆಯುವನು? ಅದಕ್ಕೆ ಉಪಾಯವನ್ನು ಹೇಳಬೇ ಕೆಂದು ಕೇಳಿದೆನು.

ತಯಾಪಿ ಭೇಷಜಂ ದ್ವಿತೀಯಂ ದಾಹಶಾಂತಯೇ ।
ದತ್ತೇ ತು ಭೇಷಜೇ ತಸ್ಮಿನ್ ಸುಸ್ಥೋಽಭೂತ್ತತ್‌ಕ್ಷಣಾತ್ಪತಿಃ ॥ ೩೪ ॥

ಪೂರ್ವಚೂರ್ಣೋದ್ಭವೋ ದಾಹಃ ಶಾಂತಸ್ತೇನೌಷಧೇನ ಹ ।
ತತಃ ಪ್ರಭೃತಿ ಮೇ ಭರ್ತಾ ವಶ್ಯೋಽಭೂದ್ವಚನೇ ಸ್ಥಿತಃ ॥ ೩೫ ॥

ಕಾಲೇನ ಪಂಚತಾಂ ಪ್ರಾಪ್ತಾ ಗತಾ ನರಕಯಾತನಾಂ ।
ತಾಮ್ರಭ್ರಾಷ್ಟ್ರೇ ಹ್ಯಹಂ ದಗ್ಧಾ ಯುಗಾನಿ ದಶ ಪಂಚ ಚ ॥ ೩೬ ॥

ಸೂಕ್ಷ್ಮಾಣಿ ತಿಲಮಾತ್ರಾಣಿ ಕೃತ್ವಾ ಖಡ್ಗಾನ್ಯನೇಕಶಃ ।
ಕಿಂಚಿತ್ಪಾತಕಶೇಷೇಣ ಧರಾಯಾಮವತಾರಿತಾ ॥ ೩೭ ॥

ಗೃಹಗೋಧಾಮಯಂ ರೂಪಂ ಕೃತಂ ಭಾಸ್ಕರಜೇನ ಮೇ ।
ಸಾಹಮತ್ರ ಸ್ಥಿತಾ ಭೂಪ ವರ್ಷಾಣಾಮಯುತಂ ಪುರಾ ॥ ೩೮ ॥

---

೩೪. ಆ ತಾಪಸಿಯು ದಾಹಾದಿಗಳು ಶಾಂತವಾಗುವುದಕ್ಕಾಗಿ ಎರಡನೆಯ ಔಷಧವನ್ನು ಕೊಟ್ಟಳು. ನಾನು ಕೂಡಲೇ ಅದನ್ನು ಗಂಡನಿಗೆ ಕೊಡಲಾಗಿ ತಕ್ಷಣದಲ್ಲಿಯೇ ಅವನು ಸ್ವಸ್ಥನಾದನು.

೩೫ ಹಿಂದೆ ಕೊಟ್ಟ ಚೂರ್ಣದಿಂದುಂಟಾದ ದಾಹವು ಎರಡನೆಯ ಸಲ ಕೊಟ್ಟ ಔಷಧದಿಂದ ಶಾಂತವಾಯಿತು ಆಗಿನಿಂದ ನನ್ನ ಗಂಡನು ನನ್ನ ಮಾತನ್ನು ನಡೆಯಿಸುತ್ತಾ ನನ್ನ ವಶನಾದನು.

೩೬. ಹಾಗೆಯೇ ನಾನು ಆಯುಷ್ಯವನ್ನು ಕಳೆದು ಅಂತ್ಯಕಾಲದಲ್ಲಿ ಮೃತಳಾಗಿ ನರಕದಲ್ಲಿ ಬಿದ್ದೆನು. ಅಲ್ಲಿ ಹದಿನೈದು ಯುಗಗಳಕಾಲ ನನ್ನನ್ನು ತಾಮ್ರದ ಬಾಂಡಲೆಯಲ್ಲಿ ಹುರಿದರು. ಅದರಿಂದ ಬಹು ದುಃಖಪಟ್ಟಿರುವೆನು.

೩೭. ಅಲ್ಲದೆ ನಾನು ಎಳ್ಳಿನಷ್ಟು ಸೂಕ್ಷ್ಮಗಳಾದ ಕತ್ತಿಗಳಿಂದ ಅನೇಕಾವರ್ತಿ ತಿವಿಸಿಕೊಂಡು ಸ್ವಲ್ಪ ಪಾಪಶೇಷದಿಂದ ಭೂಮಿಗೆ ಬಂದಿರುವೆನು.

೩೮. ಸೂರ್ಯಪುತ್ರನಾದ ಯಮರಾಜನು ನನಗೆ ಈ ಹಲ್ಲಿಯ ರೂಪವನ್ನು ಕೊಟ್ಟಿರುವನು. ಅಂತಹ ನಾನು ಹತ್ತುಸಾವಿರ ವರ್ಷಗಳಿಂದಲೂ ಇಲ್ಲಿ ವಾಸವಾಗಿರುವೆನು.

ಯಾನ್ಯಾಪಿ ಯುವತಿರ್ಭೂಪ ಭರ್ತುರ್ವಶ್ಯಂ ಸಮಾಚರೇತ್ ।
ವೃಥಾಧರ್ಮಾ ದುರಾಚಾರಾ ದಹ್ಯತೇ ತಾಮ್ರಭ್ರಾಷ್ಟ್ರಕೇ ॥ ೩೯ ॥

ಭರ್ತಾ ನಾಥೋ ಗತಿರ್ಭರ್ತಾ ದೈವತಂ ಗುರುರೇವ ಚ ।
ತಸ್ಯ ವಶ್ಯಂ ಚರೇದ್ಯಾ ತು ಸಾ ಕಥಂ ಸುಖಮಾಪ್ನುಯಾತ್ ॥ ೪೦ ॥

ತಿರ್ಯಗ್ಯೋನಿಶತಂ ಯಾತಿ ಕ್ರಿಮಿಕುಷ್ಠಸಮನ್ವಿತಾ ।
ತಸ್ಮಾದ್ಭೂಪಾಲ ಕರ್ತವ್ಯಂ ಸ್ತ್ರೀಭಿರ್ಭರ್ತೃವಚಃ ಸದಾ ॥ ೪೧ ॥

ಸಾಹಂ ಯಾಸ್ಯೇ ಪುನರ್ಯೋನಿಂ ಕುತ್ಸಿತಾಂ ಪಾತಕಾನ್ವಿತಾಂ ।
ಯದಿ ನೋದ್ಧರಸೇ ರಾಜನ್ನದ್ಯ ಮಾಂ ಶರಣಾಗತಾಂ ॥ ೪೨ ॥

ಸುಕೃತಸ್ಯ ಪ್ರದಾನೇನ ವಿಜಯಾಜನಿತೇನ ಹಿ ।
ಯಾ ತ್ವಯಾ ಸಂಗಮೇ ಪುಣ್ಯೇ ಶ್ರವಣದ್ವಾದಶೀ ಕೃತಾ ॥ ೪೩ ॥

---

೩೯. ಇತರ ಯುವತಿಯರಾದರೂ ಪತಿಯನ್ನು ವಶಪಡಿಸಿಕೊಳ್ಳಲು ಯತ್ನಿಸಿದರೆ ಅಂತಹ ದುರಾಚಾರಳಾದ ಸ್ತ್ರೀಯು ತನ್ನ ಪುಣ್ಯವನ್ನೆಲ್ಲಾ ಕಳೆದುಕೊಂಡು ತಾಮ್ರದ ಬಾಂಡಲೆಯಲ್ಲಿ ದಹಿಸಲ್ಪಡುವಳು.

೪೦. ಸ್ತ್ರೀಯರಿಗೆ ಪತಿಯೇ ಸ್ವಾಮಿಯು, ದೇವತೆಯು, ಅವನೇ ಗುರುವು. ಹೀಗಿರುವಾಗ ಅಂತಹಗಂಡನನ್ನು ವಶಪಡಿಸಲೆತ್ನಿಸುವ ಪತ್ನಿಯು ಹೇಗೆ ಸುಖವನ್ನು ಹೊಂದಿಯಾಳು ?

೪೧. ಅಂತಹವಳು ಕ್ರಿಮಿಗಳಿಂದ ಸಹಿತವಾದ ಕುಷ್ಠರೋಗಯುಕ್ತಳಾಗಿ ನೂರಾರು ತಿರ್ಯಗ್ಜಂತುಗಳ ಜನ್ಮವನ್ನು ಹೊಂದುವಳು. ಭೂಪತಿಯೇ ! ಆದಕಾರಣ ಸ್ತ್ರೀಯು ಯಾವಾಗಲೂ ಗಂಡನ ಮಾತಿನಂತೆ ನಡೆಯಬೇಕು.

೪೨. ರಾಜನೇ! ಅಂತಹ ನಾನು ಈಗ ನಿನಗೆ ಶರಣಾಗತಳಾಗಿರುವೆನು. ನೀನು ನನ್ನನ್ನು ಉದ್ಧರಿಸದಿದ್ದರೆ ಪುನಃ ದುಷ್ಟವು, ಪಾತಕಯುಕ್ತವೂ ಆದ ನೀಚಜನ್ಮವನ್ನು ಪಡೆಯಬೇಕಾಗುತ್ತದೆ.

೪೩-೪೪. ಪಾಪನಾಶಕವಾದ, ಗಂಗೆ, ಸರಯೂ ನದಿಗಳ ಸಂಗಮವೆಂಬ ಪುಣ್ಯಕ್ಷೇತ್ರದಲ್ಲಿ ನೀನು ಆಚರಿಸಿರುವ ಪ್ರೇತತ್ವಪರಿಹಾರಕವು, ಪುಣ್ಯ

ಸರಯ್ವಾಶ್ಚೈವ ಗಂಗಾಯಾಃ ಪಾಪನಾಶವಿಧಾಯಿಕೇ ।
ಪ್ರೇತನಿರ್ಯಾತನೀ ಪುಣ್ಯಾ ಮಾನಸೇಪ್ಸಿತದಾಯಿನೀ ॥ ೪೪ ॥

ಯಸ್ಯಾಂ ಗೃಹೇಪಿ ಭೂಪಾಲ ಸಂಸ್ಮೃತೋ ಮನುಜೈರ್ಹರಿಃ ।
ಸರ್ವತೀರ್ಥಫಲಾವಾಪ್ತಂ ಕುರುತೇ ನಾತ್ರ ಸಂಶಯಃ ॥ ೪೫ ॥

ದತ್ತಂ ಜಪ್ತಂ ಹುತಂ ಯಚ್ಚ ಕೃತಂ ದೇವಾರ್ಚನಾದಿಕಂ ।
ಸರ್ವಂ ತದಕ್ಷಯಂ ಭೂಪ ಯತ್ಕೃತಂ ವಿಜಯಾದಿನೇ ॥ ೪೬ ॥

ಏವಂವಿಧಂ ಫಲಂ ಯಸ್ಯಾಸ್ತದ್ದೇಹಿ ಸುಕೃತಂ ಮಮ ।
ದ್ವಾದಶ್ಯಾಮುಪವಾಸೇನ ತ್ರಯೋದಶ್ಯಾಂ ತು ಪಾರಣೇ ॥ ೪೭ ॥

ದ್ವಾದಶಾಬ್ದೋಪವಾಸಸ್ಯ ಫಲಂ ಪ್ರಾಪ್ನೋತ್ಯುಪೋಷಣೇ ।
ದಯಾಂ ಕೃತ್ವಾ ಮಹೀಪಾಲ ಧರ್ಮಮೂರ್ತಿರ್ಭವಾನ್ ಕ್ಷಿತೌ ॥ ೪೮ ॥

---

ಕರವು, ಮನೋಭೀಷ್ಟದಾಯಕವೂ ಆದ ವಿಜಯಾನಾಮಕವಾದ ಶ್ರವಣದ್ವಾದಶೀ ವ್ರತದಿಂದ ಸಂಪಾದಿಸಿರುವ ಸುಕೃತವನ್ನು ಕೊಟ್ಟು ನನ್ನನ್ನುದ್ಧರಿಸಬೇಕು.

೪೫. ಭೂಪಾಲನೇ! ಮನೆಯಲ್ಲಿಯಾದರೂ ಹರಿಯನ್ನು ಸ್ಮರಿಸುವ ಮನುಷ್ಯರಿಗೆ ಹರಿಯು ಸಕಲತೀರ್ಥಫಲವನ್ನೂ ಕೊಡುವನು. ಈ ವಿಷಯದಲ್ಲಿ ಸಂದೇಹವಿಲ್ಲ.

೪೬. ದೊರೆಯೇ! ವಿಜಯಾ ದಿನದಲ್ಲಿ ಮಾಡಿದ ದಾನ, ಜಪ, ಹೋಮ, ದೇವಪೂಜೆ ಇವೆಲ್ಲವೂ ಅಕ್ಷಯ್ಯಫಲಕವಾಗುವುದು.

೪೭. ಈ ರೀತಿಯಾಗಿ ದ್ವಾದಶೀ ದಿನ ಉಪವಾಸ ಮಾಡಿ ತ್ರಯೋದಶೀ ದಿನದಲ್ಲಿ ಪಾರಣೆಯನ್ನೂ ಮಾಡಿ ಸಂಪಾದಿಸಿರುವ ಪುಣ್ಯವನ್ನು ನನಗೆ ಕೊಡು.

೪೮-೪೯. ಶ್ರವಣದ್ವಾದಶೀ ಉಪವಾಸ ಮಾಡಿದರೆ ಹನ್ನೆರಡು ವರ್ಷ ಉಪವಾಸಮಾಡಿದ ಫಲವನ್ನು ಹೊಂದುತ್ತಾನೆ. "ಭೂಪಾಲನೇ! ಭೂಲೋಕದಲ್ಲಿ ಧರ್ಮಮೂರ್ತಿಯಾಗಿ ಯಮಲೋಕದ ಮಾರ್ಗವನ್ನು ನಾಶಮಾಡಿರುವ

ವೈವಸ್ವತಪಥಧ್ವಂಸೀ ಪರಿತ್ರಾಹಿ ಸುದುಃಖಿತಾಂ ।
ಗೃಹಗೋಧಾವಚಃ ಶ್ರುತ್ವಾ ಮೋಹಿನೀ ವಾಕ್ಯಮಬ್ರವೀತ್ ॥ ೪೯ ॥

ಸ್ವಕೃತಂ ತು ಜನೋಽಶ್ನಾತಿ ಸುಖದುಃಖಾತ್ಮಕಂ ವಿಭೋ ।
ತಸ್ಮಾತ್ಕಿಮನಯಾ ಕಾರ್ಯಂ ಪಾಪಯಾ ಭರ್ತೃದುಷ್ಟಯಾ ॥ ೫೦ ॥

ಯಯಾ ಭರ್ತಾ ವಶಂ ನೀತೋ ರಕ್ಷಾಚೂರ್ಣಾದಿಭಿರ್ನೃಪ ।
ಸಾಧುಭ್ಯೋ ಯತ್ಕೃತಂ ರಾಜನ್ಯಶಃ ಸ್ವರ್ಗಕರಂ ಭವೇತ್ ॥ ೫೧ ॥

ಉಭಯೋರ್ಭ್ರಂಶತಾಮೇತಿ ಪಾಪೇಭ್ಯೋ ಯತ್ಕೃತಂ ಭವೇತ್ ।
ಶರ್ಕರಾಮಿಶ್ರಿತಂ ಕ್ಷೀರಂ ಕಾದ್ರವೇಯೇ ನಿಯೋಜಿತಂ ॥ ೫೨ ॥

ವಿಷವೃದ್ಧಿಂ ಕರೋತ್ಯೇವ ತದ್ವತ್ಪಾಪಕೃತಂ ಭವೇತ್ ।
ಪರಿತ್ಯಜೇಮಾಂ ತ್ವಂ ಪಾಪಾಂ ಗಚ್ಛಾವೋ ನಗರಾಯ ವೈ ॥ ೫೩ ॥

---

ನೀನು ದಯೆಮಾಡಿ ಅತ್ಯಂತದುಃಖಪೀಡಿತಳಾದ ನನ್ನನ್ನು ಸಂರಕ್ಷಿಸಬೇಕು" ಎಂದು ಹಲ್ಲಿಯು ಹೇಳಿತು. ಆ ಹಲ್ಲಿಯ ಮಾತನ್ನು ಕೇಳಿ ಮೋಹಿನಿಯು ಹೀಗೆ ಮಾತನಾಡಿದಳು.

೫೦. ಪ್ರಭುವೇ! ಅವರವರು ಮಾಡಿದ ಕರ್ಮಕ್ಕನುಗಣವಾಗಿ ಸುಖ ದುಃಖಗಳನ್ನು ಜನರು ಅನುಭವಿಸುವರು. ಆದಕಾರಣ ಪತಿಯವಿಷಯದಲ್ಲಿ ದುಷ್ಕೃತ್ಯವನ್ನಾಚರಿಸಿ ಪಾಪಿಯಾಗಿರುವ ಇವಳಿಗೆ ಮಾಡುವುದೇನು?

೫೧-೫೩. ರಾಜನೇ! ಇವಳು ರಕ್ಷೆ ಮತ್ತು ಚೂರ್ಣಗಳಿಂದ ಗಂಡನನ್ನು ವಶಮಾಡಿಕೊಂಡಿದ್ದಳು. ಸಾಧುಗಳಿಗೆ ಮಾಡಿದ ಉಪಕಾರವು ಸ್ವರ್ಗಕರವಾಗುವುದು. ಪಾಪಿಗಳಿಗೆ ಉಪಕಾರ ಮಾಡಿದರೆ ಇಬ್ಬರೂ ಭ್ರಷ್ಟರಾಗುವರು. ಸಕ್ಕರೆಮಿಶ್ರಮಾಡಿದ ಹಾಲನ್ನು ಹಾವಿಗೆ ಕೊಟ್ಟರೆ ಅದು ವಿಷವನ್ನು ಹೆಚ್ಚಿಸುವುದು. ಅದರಂತೆಯೇ ಪಾಪಿಗಳಿಗೆ ಮಾಡಿದ ಉಪಕಾರವು ಪಾಪವರ್ಧಕವೇ ಆಗುವುದು. ಆದಕಾರಣ ನೀನು ಪಾಪಿಯಾದ ಈ ಹಲ್ಲಿಯನ್ನು ಬಿಡು ನಾವಿಬ್ಬರೂ ಪಟ್ಟಣಕ್ಕೆ ಹೋಗೋಣ.

ಜನ್ಮವ್ಯಾಪಾರಸಕ್ತಾನಾಮಾತ್ಮಸೌಖ್ಯಂ ವಿನಶ್ಯತಿ ।

ರುಕ್ಮಾಂಗದ ಉವಾಚ

ಬ್ರಹ್ಮಾತ್ಮಜೇ ಕಥಂ ವಾಕ್ಯಮೀದೃಶಂ ವ್ಯಾಹೃತಂ ತ್ವಯಾ ।
ನ ಸಾಧೂನಾಮಿದಂ ವೃತ್ತಂ ಭವತೀತಿ ವರಾನನೇ ॥ ೫೪ ॥

ಆತ್ಮಸೌಖ್ಯಕರಾಃ ಪಾಪಾ ಭವಂತಿ ಪರತಾಪಿನಃ ।
ವಿಪ್ರಪನ್ನಾ ವರಾರೋಹೇ ಪರೋಪಕರಣಾಯ ವೈ ॥ ೫೫ ॥

ಶಶೀ ಸೂರ್ಯೋಥ ಪರ್ಜನ್ಯೋ ಮೇದಿನೀ ಹುತಭುಗ್ ಜಲಂ ।
ಚಂದನಂ ಪಾದಪಾಃ ಸಂತಃ ಪರೋಪಕರಣಾಯ ವೈ ॥ ೫೬ ॥

ಶ್ರೂಯತೇ ಕಿಲ ರಾಜಾಸೀದ್ಧರಿಶ್ಚಂದ್ರೋ ವರಾನನೇ ।
ಚಾಂಡಾಲಮಂದಿರಾವಾಸೀ ಭಾರ್ಯಾತನಯವಿಕ್ರಯೀ ॥ ೫೭ ॥

---

೫೪. ಪುನರ್ಜನ್ಮಸಾಧಕ ವ್ಯಾಪಾರದಲ್ಲಿ ಆಸಕ್ತರಾದವರಿಗೆ ಆತ್ಮಸೌಖ್ಯವು ಹಾಳಾಗುವುದು! ಎಂಬುದಾಗಿ ಮೋಹಿನಿಯು ಹೇಳಿದಳು.

ರುಕ್ಮಾಂಗದನು ಹೇಳಿದನು:—ಬ್ರಹ್ಮಪುತ್ರಿಯೇ! ನೀನು ಹೀಗೆ ಮಾತನಾಡಬಹುದೇ? ವರಾನನೇ! ನೀನು ಹೇಳುವ ಈ ನಡೆವಳಿಕೆಯು ಸಾಧುಸಮ್ಮತವಲ್ಲ.

೫೫. ಆತ್ಮಸೌಖ್ಯವನ್ನೇ ನೋಡುವ ಪಾಪಿಗಳು ಇತರರಿಗೆ ದುಃಖವವನ್ನುಂಟುಮಾಡುವರು ಶರಣಾಗತರಕ್ಷಕರು ಪರೋಪಕಾರ ಮಾಡುವರು.

೫೬. ಲೋಕದಲ್ಲಿ ಚಂದ್ರ, ಸೂರ್ಯ, ಮೇಘ, ಭೂಮಿ, ಅಗ್ನಿ, ನೀರು, ಗಂಧ, ವೃಕ್ಷ ಮತ್ತು ಸಜ್ಜನರು ಪರೋಪಕಾರವನ್ನೇ ಮಾಡುತ್ತಿರುವರು.

೫೭ ವರಾನನೇ! ಚಂಡಾಲಗೃಹವಾಸಿಯು, ಹೆಂಡತಿ, ಮಗನನ್ನು ಮಾರಿದವನೂ ಆದ ಹರಿಶ್ಚಂದ್ರನೆಂಬ ರಾಜನಿದ್ದನೆಂದು ಕೇಳಿರುವೆಯಷ್ಟೆ?

ಅಸತ್ಯವಚನಾದ್ಭೀತೋ ದುಃಖಾದ್ದುಃಖತರಂ ಗತಃ ।
ತಸ್ಯ ಸತ್ಯೇನ ಸಂತುಷ್ಟಾ ದೇವಾಃ ಶಕ್ರಪುರೋಗಮಾಃ ॥ ೫೮ ॥

ವರೇಣ ಛಂದಯಾಂಚಕ್ರುರ್ಹರಿಶ್ಚಂದ್ರಂ ಮಹೀಪತಿಂ ।
ತೇನ ಸತ್ಯವತಾ ಚೋಕ್ತಾ ದೇವಾ ಬ್ರಹ್ಮಪುರೋಗಮಾಃ ।
ಯದಿ ತುಷ್ಟಾ ಹಿ ವಿಬುಧಾ ವರಂ ಮೇ ದಾತುಮರ್ಹಥ ॥ ೫೯ ॥

ಏಷಾ ಹಿ ನಗರೀ ಸರ್ವಾ ಸದ್ರುಮಾ ಸಸರೀಸೃಪಾ ।
ಸಬಾಲವೃದ್ಧತರುಣಾ ಸನಾರೀ ಸಚತುಷ್ಪದಾ ॥ ೬೦ ॥

ಪ್ರಯಾತು ಕೃತಪಾಪಾಪಿ ಸ್ವರ್ಗತಿಂ ನಗರೀ ಮಮ ।
ಅಯೋಧ್ಯಾಪಾತಕಂ ಗೃಹ್ಯ ಗಂತಾಹಂ ನರಕಂ ಧ್ರುವಂ ॥ ೬೧ ॥

---

೫೮-೫೯. ಅವನು ಸುಳ್ಳುಹೇಳುವುದಕ್ಕೆ ಭಯಪಟ್ಟು, ಸತ್ಯವನ್ನೇ ನುಡಿಯುತ್ತಿದ್ದುದರಿಂದ ಬಹು ದುಃಖಕ್ಕೀಡಾದನು ಕೊನೆಗೆ ಅವನ ಸತ್ಯನಿಷ್ಠೆಯಿಂದ ಸಂತುಷ್ಟರಾದ ಇಂದ್ರಾದಿ ದೇವತೆಗಳು ಆ ಹರಿಶ್ಚಂದ್ರರಾಜನಿಗೆ ವರ ಕೊಟ್ಟು ಸಂತೋಷಪಡಿಸಿದರು.

ಸತ್ಯವಂತನಾದ ಆ ಹರಿಶ್ಚಂದ್ರನು ಬ್ರಹ್ಮಾದಿ ದೇವತೆಗಳನ್ನು ಕುರಿತು "ದೇವತೆಗಳೇ! ನೀವು ಸಂತುಷ್ಟರಾಗಿದ್ದರೆ ನನಗೆ ಈ ವರವನ್ನು ಕೊಡಿರಿ.

೬೦-೬೧. ವೃಕ್ಷ, ಸರ್ಪ, ಬಾಲಕ, ವೃದ್ಧ, ತರುಣ, ಸ್ತ್ರೀ, ನಾಲ್ಕು ಕಾಲುಗಳುಳ್ಳ ಪ್ರಾಣಿಗಳು ಇವುಗಳಿಂದ ಕೂಡಿರುವ ಈ ನನ್ನ ಪ್ರಜೆಗಳೆಲ್ಲರೂ ಪಾಪಮಾಡಿದ್ದರೂ ಅವರು ಸ್ವರ್ಗಲೋಕಕ್ಕೆ ಹೋಗುವಂತೆ ನೀವು ಅನುಗ್ರಹಿಸಬೇಕು. ಅಯೋಧ್ಯಾನಗರದವರ ಪಾಪವನ್ನು ನಾನು ತೆಗೆದುಕೊಂಡು ಖಂಡಿತವಾಗಿಯೂ ನರಕಕ್ಕೆ ಹೋಗುವೆನು.

ಏಕಾಕೀ ನ ಹಿ ಗಚ್ಛಾಮಿ ಪರಿತ್ಯಜ್ಯ ಜನಂ ಕ್ಷಿತೌ ।
ಸ್ವರ್ಗಂ ವಿಬುಧಶಾರ್ದೂಲಾಃ ಸತ್ಯಮೇತನ್ಮಯೇರಿತಂ ॥ ೬೨ ॥

ತಸ್ಯ ತಾಂ ಸ್ಥಿರತಾಂ ಜ್ಞಾತ್ವಾ ಸಹ ತೇನೈವ ಸಾ ಪುರೀ ।
ಜಗಾಮ ಸ್ವರ್ಗಲೋಕಂ ಚ ಇಂದ್ರಾದೀನಾಮನುಜ್ಞಯಾ ॥ ೬೩ ॥

ಸೋಽಪಿ ಸ್ವರ್ಗಸ್ಥಿತೋ ರಾಜಾ ಸ್ವಪುರೇಣ ಸಮನ್ವಿತಃ ।
ಕಾಮಗೇನ ವಿಮಾನೇನ ಪೂಜ್ಯಮಾನೋಽಮರೈರಪಿ ॥ ೬೪ ॥

ಅಸ್ಥಿದಾನಂ ಕೃತಂ ದೇವಿ ಕೃಪಯಾ ಹಿ ದಧೀಚಿನಾ ।
ದೇವಾನಾಮುಪಕಾರಾರ್ಥಂ ಶ್ರುತ್ವಾ ದೈತ್ಯೈಃ ಪರಾಜಿತಾನ್ ॥ ೬೫ ॥

---

೬೨. ಭೂಮಿಯಲ್ಲಿ ಜನರನ್ನು ಬಿಟ್ಟು ನಾನು ಏಕಾಕಿಯಾಗಿ ಸ್ವರ್ಗಕ್ಕೆ ಹೋಗಲಾರೆನು ನಾನು ಹೇಳಿರುವುದು ಸತ್ಯ" ಎಂಬುದಾಗಿ ಹರಿಶ್ಚಂದ್ರನು ಹೇಳಿದನು.

೬೩. ಇಂದ್ರಾದಿ ದೇವತೆಗಳು ಅವನ ಸ್ಥೈರ್ಯವನ್ನು ತಿಳಿದು ಅವನ ಇಚ್ಛೆಯಂತೆ ಆಗಲೆಂದು ಅಪ್ಪಣೆಕೊಟ್ಟುದರಿಂದ ಆ ಪಟ್ಟಣಿಗರೆಲ್ಲರೂ ಅವನೊಡನೆಯೇ ಸ್ವರ್ಗಕ್ಕೆ ಹೋಗಿ ಸುಖಭಾಗಿಗಳಾದರು.

೬೪. ಅವನೂ ಸಹ ತನ್ನ ಪಟ್ಟಣಿಗರಸಹಿತವಾಗಿ ಸ್ವರ್ಗದಲ್ಲಿ ಕಾಮಚಾರಿಯಾದ ವಿಮಾನದಲ್ಲಿ ಸಂಚರಿಸುತ್ತಾ ದೇವತೆಗಳಿಂದ ಸತ್ಕರಿಸಲ್ಪಡುತ್ತಿರುವನು.

೬೫. ದೇವಿಯೇ! ಪೂರ್ವದಲ್ಲಿ ದಧೀಚಿ ಮಹರ್ಷಿಯು ದೇವತೆಗಳು ದೈತ್ಯರಿಂದ ಪರಾಜಿತರಾದರೆಂದು ಕೇಳಿ ಅವರಿಗೆ ಉಪಕಾರ ಮಾಡಬೇಕೆಂದು ಅಸ್ಥಿದಾನವನ್ನು ಮಾಡಲಿಲ್ಲವೇ?

ಕಪೋತಾರ್ಥಂ ಸ್ವಮಾಂಸಾನಿ ಶಿಬಿನಾ ಭೂಭುಜಾ ಪುರಾ ।
ಪ್ರದತ್ತಾನಿ ವರಾರೋಹೇ ಶ್ಯೇನಾಯ ಕ್ಷುಧಿತಾಯ ವೈ ॥ ೬೬ ॥

ಜೀಮೂತವಾಹನೋ ರಾಜಾ ಪುರಾಸೀತ್ ಕ್ಷಿತಿಮಂಡಲೇ ।
ತೇನಾಪಿ ಜೀವಿತಂ ದತ್ತಂ ಪನ್ನಗಾಯ ವರಾನನೇ ॥ ೬೭ ॥

ತಸ್ಮಾದ್ದಯಾಲುನಾ ದೇವಿ ಭವಿತವ್ಯಂ ಮಹೀಭುಜಾ ।
ಶುಚಾವಮೇಧ್ಯೇಪಿ ಶುಭೇ ಸಮಂ ವರ್ಷತಿ ವಾರಿದಃ ॥ ೬೮ ॥

ಚಾಂಡಾಲಪತಿತೌ ಚಂದ್ರೋ ಹ್ಲಾದಯೇಚ್ಚ ನಿಜೈಃ ಕರೈಃ ।
ತಸ್ಮಾದಿಮಾಂ ವರಾರೋಹೇ ಗೃಹಗೋಧಾಂ ಸುದುಃಖಿತಾಂ ॥ ೬೯ ॥

ಉದ್ಧರಿಷ್ಯೇ ನಿಜೈಃ ಪುಣ್ಯೈರ್ದೌಹಿತ್ರೈರ್ನಹುಷೋ ಯಥಾ ।
ವಿಮೋಹಿನೀಂ ತಿರಸ್ಕೃತ್ಯ ಗೃಹಗೋಧಾಮುವಾಚ ಹ ॥ ೭೦ ॥

---

೬೬. ಪೂರ್ವದಲ್ಲಿ ಶಿಬಿರಾಜನು ಹಸಿವಿನಿಂದ ಬಳಲುತ್ತಿದ್ದ ಗಿಡಗಕ್ಕಾಗಿ ತನ್ನ ಮಾಂಸಗಳನ್ನು ಅದಕ್ಕೆ ಕೊಟ್ಟನು.

೬೭. ಈ ಭೂಮಂಡಲದಲ್ಲಿ ಜೀಮೂತವಾಹನನೆಂಬ ರಾಜನಿದ್ದನು. ಅವನೂ ಸಹ ಹಾವಿಗೋಸ್ಕರವಾಗಿ ತನ್ನ ಜೀವಿತವನ್ನೇ ದಾನಮಾಡಿದನು.

೬೮. ದೇವಿಯೇ! ಆದಕಾರಣ ರಾಜನು ದಯಾಳುವಾಗಿರಬೇಕು. ಮೇಘವು ಪರಿಶುದ್ಧಪ್ರದೇಶದಲ್ಲಿ ಮತ್ತು ಅಶುದ್ಧಸ್ಥಳದಲ್ಲಿಯೂ ಸಹ ಸಮಾನವಾಗಿ ಮಳೆಕರೆಯುತ್ತದೆ.

೬೯-೭೦. ಚಂದ್ರನು ಚಂಡಾಲ ಮತ್ತು ಪತಿತರನ್ನೂ ಸಹ ತನ್ನ ಕಿರಣಗಳಿಂದ ಆಹ್ಲಾದಪಡಿಸುವನು. ಆದಕಾರಣ ದುಃಖಪೀಡಿತವಾದ ಈ ಹಲ್ಲಿಯನ್ನು ದೌಹಿತ್ರರು ನಹುಷಪುತ್ರನನ್ನುದ್ಧರಿಸಿದಂತೆ ನಾನು ನನ್ನ ಪುಣ್ಯಗಳಿಂದ ಉದ್ಧರಿಸುವೆನು. ಎಂದು ಹೇಳಿ ಮೋಹಿನಿಯ ಮಾತನ್ನು ಕೇಳದೆ ಹಲ್ಲಿಯನ್ನು ಕುರಿತು ಹೀಗೆ ಹೇಳಿದನು.

ದತ್ತಂ ದತ್ತಂ ಮಯಾ ಪುಣ್ಯಂ ವಿಜಯಾಸಂಭವಂ ತವ ।
ಗಚ್ಛ ವಿಷ್ಣುಗತಾನ್ ಲೋಕಾನ್ ವಿಧೂತಾಶೇಷಕಲ್ಮಷಾ ॥ ೭೧ ॥

ತದ್ವಾಕ್ಯಾತ್ಸಹಸಾ ಭೂಪ ದಿವ್ಯಾಭರಣಭೂಷಿತಾ ।
ವಿಮುಚ್ಯ ದೇಹಂ ತಜ್ಜೀರ್ಣಂ ಗೃಹಗೋಧಾಸಮುದ್ಭವಂ ॥ ೭೨ ॥

ಜಗಾವಾಮಂತ್ರ್ಯ ತಂ ಭೂಪಂ ದ್ಯೋತಯಂತೀ ದಿಶೋ ದಶ ।
ಸೀಮಂತಮಿವ ಕುರ್ವಾಣಾ ವೈಷ್ಣವಂ ಪದಮದ್ಭುತಂ ॥ ೭೩ ॥

ಯದ್ಯೋಗಿಗಮ್ಯಂ ಹುತಭುಕ್ಪ್ರಕಾಶಂ
ವರಂ ವರೇಣ್ಯಂ ಪರಮಾತ್ಮಭೂತಂ ।
ತಸ್ಮಾದಿಯಂ ಚೈವ ಶಿಖಿಪ್ರದೀಪಾ
ಜಗತ್ಪ್ರಕಾಶಾಯ ನೃಪಪ್ರಸೂತಾ ॥ ೭೪ ॥

ಇತಿ ಶ್ರೀ ನಾರದೀಯಮಹಾಪುರಾಣೋತ್ತರಭಾಗೇ
ಗೋಧಾವಿಮುಕ್ತಿರ್ನಾಮ ಚತುರ್ದಶೋಽಧ್ಯಾಯಃ

---

೭೧. "ಹಲ್ಲಿಯೇ! ವಿಜಯಾವ್ರತದಿಂದ ಬಂದ ನನ್ನ ಪುಣ್ಯವನ್ನು ನಿನಗೆ ಕೊಟ್ಟಿರುವೆನು! ಕೊಟ್ಟಿರುವೆನು! ನೀನು ಪಾಪವನ್ನೆಲ್ಲಾ ಕಳೆದು ಕೊಂಡು ವಿಷ್ಣುವು ಸನ್ನಿಹಿತನಾಗಿರುವ ವೈಕುಂಠಲೋಕಕ್ಕೆ ಹೋಗು" ಎಂದು ಹೇಳಿದನು.

೭೨-೭೩. ರಾಜನು ಹಾಗೆ ಹೇಳಿದ ಕೂಡಲೇ ಜೀರ್ಣವಾದ ಹಲ್ಲಿಯ ಶರೀರವನ್ನು ಬಿಟ್ಟು ದಿವ್ಯಾಭರಣಗಳಿಂದಲಂಕೃತವಾದ ಸ್ತ್ರೀದೇಹವನ್ನು ಧರಿಸಿ, ದಶದಿಕ್ಕುಗಳನ್ನೂ ಪ್ರಕಾಶಗೊಳಿಸುವವಳಾಗಿ ಆ ದೊರೆಯ ಅನುಮತಿಯನ್ನು ಪಡೆದು ಅದ್ಭುತವಾದ ವೈಷ್ಣವ ಸ್ಥಾನಕ್ಕೆ ಹೋದಳು.

೭೪. ರಾಜನೇ! ಯೋಗಿಗಮ್ಯನು, ಅಗ್ನಿಯಂತೆ ಪ್ರಕಾಶವಾನನು, ಉತ್ತಮೋತ್ತಮನೂ ಆದ ಪರಮಾತ್ಮನ ಅನುಗ್ರಹದಿಂದ ಜಗತ್ತನ್ನು ಪ್ರಕಾಶಗೊಳಿಸುವುದಕ್ಕಾಗಿ ಈ ಅಗ್ನಿಜ್ವಾಲೆಯಂತೆ ಬೆಳಗುತ್ತಿರುವ ಈ ಸ್ಥಾನವು ನಿಯಮಿತವಾಗಿರುವುದು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಹಲ್ಲಿಯ ಮೋಕ್ಷ ಕಥನೆಯೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಮೋಹಿನೀರುಕ್ಮಾಂಗದರಿಬ್ಬರು ಮಂದರ ಪರ್ವತದ ಶಿಖರದಿಂದಿಳಿದು ಭೂಮಿಗೆ ಬಂದು ಅಲ್ಲಿ ಗೊರಸಿನಿಂದ ಭೂಮಿಯನ್ನು ಕೆರೆಯುತ್ತಿದ್ದ ಕುದುರೆಯನ್ನು ನೋಡಿದರು. ಆ ಭೂಮಿಯ ಕೆಳಭಾಗದಲ್ಲಿ ಬಿಲಮಾಡಿಕೊಂಡಿದ್ದ ಒಂದು ಹಲ್ಲಿಯು ಹೊರಕ್ಕೆ ಬರಲೆತ್ನಿಸಿ ಕುದುರೆಯ ಗೊರಸಿನಿಂದ ತುಂಡು ಮಾಡಲ್ಪಡುತ್ತಿತ್ತು. ಅದನ್ನು ನೋಡಿ ರುಕ್ಮಾಂಗದನು ಮೋಹಿನಿಯಿಂದ ನೀರನ್ನು ತರಿಸಿ ಅದರಿಂದ ಹಲ್ಲಿಗೆ ಶೈತ್ಯೋಪಚಾರ ಮಾಡಲಾಗಿ ಅದು ಚೇತರಿಸಿಕೊಂಡು ರಾಜನಿಗೆ ತನ್ನ ಪೂರ್ವಜನ್ಮವೃತ್ತಾಂತವನ್ನು ಹೇಳಿ ಶ್ರವಣದ್ವಾದಶೀವ್ರತಾನುಷ್ಠಾನಮಾಡಿ ಸಂಪಾದಿಸಿದ ಪುಣ್ಯವನ್ನು ಕೊಟ್ಟು ತನ್ನನ್ನುದ್ಧರಿಸಬೇಕೆಂದು ಪ್ರಾರ್ಥಿಸಿತು. ಆಗ ಮೋಹಿನಿಯು ಬೇಡವೆಂದು ತಡೆದರೂ ರಾಜನು ಲಕ್ಷೀಕರಿಸದೆ ತನ್ನ ಪುಣ್ಯವನ್ನು ಕೊಟ್ಟು ಹಲ್ಲಿಯ ಜನ್ಮವನ್ನು ಹೊಂದಿದ್ದ ಯುವತಿಯನ್ನುದ್ಧರಿಸಿ ಆಕೆಗೆ ಮುಕ್ತಿಯು ಲಭಿಸುವಂತೆ ಮಾಡಿದನು.

## ಪಂಚದಶೋಽಧ್ಯಾಯಃ

---

### ವಸಿಷ್ಠ ಉವಾಚ

ವಿಮೋಚ್ಯ ಪಾತಕಾದ್ರಾಜಾ ಗೃಹಗೋಧಾಂ ಹಸನ್ ತತಃ ।
ಉವಾಚ ಮೋಹಿನೀಂ ಹೃಷ್ಟಃ ಶೀಘ್ರಮಾರುಹ್ಯತಾಂ ಹಯಃ ॥ ೧ ॥

ಯೋಜನಾಯುತಗಾಮೀ ಚ ಕ್ಷಣಾತ್ಕೃಷ್ಣಹಯೋ ಯಥಾ ।
ತದಾಕರ್ಣ್ಯ ವಚೋ ರಾಜ್ಞೋ ಮೋಹಿನೀ ಮದಲಾಲಸಾ ॥ ೨ ॥

ಆರುರೋಹ ಸಮಂ ಭರ್ತ್ರಾ ತಂ ಹಯಂ ವಾತವೇಗಿನಂ ।
ಉವಾಚ ಚ ವಚೋ ಭೂಪಂ ಭರ್ತಾರಂ ಚಾರುಹಾಸಿನೀ ॥ ೩ ॥

---

### ಹದಿನೈದನೆಯ ಅಧ್ಯಾಯವು

೧-೩. ವಸಿಷ್ಠನು ಹೇಳಿದನು:—ರಾಜನು ಹಲ್ಲಿಯನ್ನು ಪಾಪದಿಂದ ಬಿಡುಗಡೆ ಮಾಡಿ ತರುವಾಯ ಸಂತೋಷದಿಂದ ನಗುತ್ತಾ ಕೃಷ್ಣಾಶ್ವದಂತೆ ಕ್ಷಣಮಾತ್ರದಲ್ಲಿ ಹತ್ತುಸಾವಿರಯೋಜನದೂರಹೋಗುವಂತಹ ಈ ಕುದುರೆಯನ್ನು ಹತ್ತಬೇಕೆಂದು ಮೋಹಿನಿಗೆ ಹೇಳಿದನು.

ರಾಜನ ಆ ಮಾತನ್ನು ಕೇಳಿ ಮದಲಾಲಸೆಯಾದ ಮೋಹಿನಿಯು ವಾಯುವಿನಂತೆ ಶೀಘ್ರಗಾಮಿಯಾದ ಕುದುರೆಯಮೇಲೆ ಪತಿಯೊಡನೆ ಹತ್ತಿ ಕುಳಿತಳು.

ಬಳಿಕ ಮನೋಹರಹಾಸಯುಕ್ತಳಾದ ಮೋಹಿನಿಯು ಪತಿಯಾದ ರುಕ್ಮಾಂಗದನನ್ನು ಕುರಿತು ಹೀಗೆ ಮಾತನಾಡಿದಳು.

ಪ್ರಚೋದಯೇಮಮುರ್ವಾಣಂ ಸ್ವಪುರಾಯ ಮಹೀಪತೇ ।
ಪುತ್ರವಕ್ತ್ರಂ ಸ್ಪೃಹಾ ದ್ರಷ್ಟುಂ ಲಂಪಟಾ ತವ ವರ್ತತೇ ॥ ೪ ॥

ತವಾಧೀನಾ ನೃಪಶ್ರೇಷ್ಠ ಗಮ್ಯತಾಂ ಯತ್ರ ತೇ ಮನಃ ।
ಮೋಹಿನ್ಯಾ ವಚನಂ ಶ್ರುತ್ವಾ ಪ್ರತಸ್ಥೇ ನಗರಂ ಪ್ರತಿ ॥ ೫ ॥

ಪಶ್ಯಮಾನಃ ಸುಸಂಹೃಷ್ಟಃ ಪಾದಪಾ್ ಪರ್ವತಾನ್ನದೀಃ ।
ವನಾನಿ ಸುವಿಚಿತ್ರಾಣಿ ಮೃಗಾನ್ಬಹುವಿಧಾನಪಿ ॥ ೬ ॥

ಗ್ರಾಮಾನ್ದುರ್ಗಾಂಸ್ತಥಾ ದೇಶಾನ್ನಗರಾಣಿ ಶುಭಾನಿ ಚ ।
ಸರಾಂಸಿ ಚ ವಿಚಿತ್ರಾಣಿ ಭೂಭಾಗಾನ್ಸುಮನೋಹರಾನ್ ॥ ೭ ॥

ಅಚಿರೇಣಾಶ್ರಮಂ ದೃಷ್ಟ್ವಾ ವಾಮದೇವಸ್ಯ ಭೂಪತೇ ।
ಆಕಾಶಸ್ಥೋ ಮಹೀಪಾಲೋ ನಮಸ್ಕೃತ್ಯ ತ್ವರಾನ್ವಿತಃ ॥ ೮ ॥

---

೪-೫. "ಭೂಪತಿಯೇ! ಪಟ್ಟಣಕ್ಕೆ ಹೋಗುವಂತೆ ಈ ಕುದುರೆಯನ್ನು ಪ್ರೇರಿಸು. ನಿನಗೆ ಮಗನ ಮುಖವನ್ನು ನೋಡಬೇಕೆಂದು ಉತ್ಕಟಾಶೆಯಿದೆ. ರಾಜವರ್ಯಾ! ನಿನ್ನ ಅಧೀನಳಾದ ನಾನೂ ನಿನ್ನ ಮನಸ್ಸಿನಂತಿರುವೆನು. ಹೊರಡೋಣವಾಗಲಿ" ಎಂದು ಹೇಳಿದ ಮೋಹಿನಿಯ ಮಾತನ್ನು ಕೇಳಿ ರಾಜನು ನಗರವನ್ನು ಕುರಿತು ಹೊರಟನು.

೬-೧೨. ಅವನು ದಾರಿಯಲ್ಲಿ ವೃಕ್ಷ, ಪರ್ವತ, ನದಿ, ವಿಚಿತ್ರವನಗಳು, ನಾನಾವಿಧಮೃಗಗಳು, ಗ್ರಾಮ, ದುರ್ಗ, ದೇಶ, ಒಳ್ಳೆಯ ನಗರಗಳು, ವಿಚಿತ್ರ ಸರೋವರಗಳು, ಮನೋಹರ ಭೂಭಾಗಗಳು ಇವುಗಳನ್ನು ನೋಡಿ ಸಂತೋಷಿಸುತ್ತಾ ಹಾಗೆಯೇ ಅಲ್ಲಿ ಪ್ರಾಪ್ತವಾದ ವಾಮದೇವಮುನಿಯ ಆಶ್ರಮವನ್ನು ನೋಡಿ ಮೇಲ್ಭಾಗದಲ್ಲಿ ವೇಗವಾಗಿ ಹೋಗುತ್ತಿದ್ದ ಭೂಪಾಲನು ಅದಕ್ಕೆ ನಮಸ್ಕಾರ ಮಾಡಿ ವಾಯುವೇಗವುಳ್ಳ ಕುದುರೆಯ ಮೇಲೆ ಹಾಗೆಯೇ ಮುಂದೆ ಸಾಗಿದನು.

ಪುನರೇವ ಯಯೌ ರಾಜಾ ವಾಯುವೇಗೇನ ವಾಜಿನಾ ।
ಪಶ್ಯಮಾನೋ ಬಹೂನ್ದೇಶಾನ್ಧನಧಾನ್ಯಸಮನ್ವಿತಾನ್ ॥ ೯ ॥

ಆಸಸಾದ ಪುರಂ ರಾಜಾ ವೈದಿಶಂ ಸ್ವವಶಂ ಚ ತತ್ ।
ಸಮಾಯಾಂತಂ ನೃಪಂ ಶ್ರುತ್ವಾ ಚಾರೈರ್ಧರ್ಮಾಂಗದಃ ಸುತಃ ॥ ೧೦ ॥

ಪಿತರಂ ಹರ್ಷಸಂಯುಕ್ತೋ ಭೂಪಾಲಾನ್ವಾಕ್ಯಮಬ್ರವೀತ್ ।
ಏಷಾ ಪ್ರಕಾಶಮಾಯಾತಿ ಉದೀಚೀದಿಙ್ನೃಪೋತ್ತಮಾಃ ॥ ೧೧ ॥

ಮತ್ಪಿತುರ್ವಾಜಿನಾಕ್ರಾಂತಾ ತತ್ತೇಜಃಪರಿರಂಜಿತಾ ।
ತಸ್ಮಾದ್ಗಚ್ಛಾಮಹೇ ಸರ್ವೇ ಸಂಮುಖಂ ಹ್ಯವನೀಪತೇಃ ॥ ೧೨ ॥

ಪಿತುರಾಗತಮಾತ್ರಸ್ಯ ಸಂಮುಖಂ ನ ಸುತೋ ವ್ರಜೇತ್ ।
ಸ ಯಾತಿ ನರಕಂ ಘೋರಂ ಯಾವದಿಂದ್ರಾಶ್ಚತುರ್ದಶ ॥ ೧೩ ॥

---

ದಾರಿಯಲ್ಲಿ ಧನ, ಧಾನ್ಯಸಮೃದ್ಧಿಯನ್ನು ಹೊಂದಿರುವ ಬಹು ದೇಶಗಳನ್ನು ನೋಡುತ್ತಾ ಸ್ವಾಧೀನವಾದ ವಿದಿಶ ನಗರವನ್ನು ತಲಪಿದನು.

ಚಾರರಿಂದ ತಂದೆಯಾದ ದೊರೆಯು ಬರುತ್ತಿರುವುದನ್ನು ಕೇಳಿ ಧರ್ಮಾಂಗದಕುಮಾರನು ಸಂತೋಷದಿಂದ ತನ್ನ ಬಳಿಯಿದ್ದ ರಾಜರನ್ನು ಕುರಿತು ಮಾತನಾಡಿದನು.

ರಾಜವರ್ಯರೇ! ಇದೋ ಉತ್ತರದಿಕ್ಕನ್ನು ನೋಡಿ! ನಮ್ಮ ತಂದೆಯು ಕುದುರೆಯನ್ನೇರಿ ಬರುತ್ತಿರುವುದರಿಂದ ಆ ದಿಕ್ಕೇ ಅತ್ಯಂತವಾಗಿ ಪ್ರಕಾಶಿಸುತ್ತಿದೆ. ಆದಕಾರಣ ನಾವೆಲ್ಲರೂ ಭೂಪಾಲನನ್ನು ಇದಿರುಗೊಳ್ಳಲು ಹೋಗೋಣ.

೧೩. ತಂದೆಯು ಬಂದ ಮೇಲೆ ಅವನೆದುರಿಗೆ ಮಗನು ಹೋಗಬಾರದು. ಹಾಗೆ ಬಂದನಂತರ ಹೋಗುವ ಮಗನು ಹದಿನಾಲ್ಕು ಇಂದ್ರರು ಇರುವಷ್ಟು ಕಾಲ ಘೋರನರಕದಲ್ಲಿ ಬೀಳುವನು.

**ಸಂಮುಖಂ ವ್ರಜಮಾನಸ್ಯ ಪುತ್ರಸ್ಯ ಪಿತರಂ ಪ್ರತಿ |**
**ಪದೇಪದೇ ಯಜ್ಞಫಲಂ ಪ್ರೋಚುಃ ಪೌರಾಣಿಕಾ ದ್ವಿಜಾಃ || ೧೪ ||**

**ಉತ್ತಿಷ್ಠಧ್ವಂ ವ್ರಜಾಮ್ಯೇಷ ಭವದ್ಭಿಃ ಪರಿವಾರಿತಃ |**
**ಅಭಿವಾದಯಿತುಂ ಪ್ರೇಮ್ಣಾ ಏಷ ಮೇ ದೇವದೇವತಾ || ೧೫ ||**

**ತಥೇತ್ಯುಕ್ತೈಸ್ತು ತೈಃ ಸರ್ವೈರ್ಭೂಮಿಪಾಲೈರ್ನೃಪಾತ್ಮಜಃ |**
**ಜಗಾಮ ಸಂಮುಖಂ ಪದ್ಭ್ಯಾಂ ಕ್ರೋಶಮಾತ್ರಂ ಪಿತುಸ್ತದಾ || ೧೬ ||**

**ತತೋ ರಾಜಸಹಸ್ರೇಣ ಮೂರ್ತಿಮಾನಿವ ಮನ್ಮಥಃ |**
**ಸ ಗತ್ವಾ ದೂರಮಧ್ವಾನಮಾಸಸಾದ ನೃಪಂ ಪಥಿ || ೧೭ ||**

**ಸಂಪ್ರಾಪ್ಯ ಪಿತರಂ ಸ್ನೇಹಾಜ್ಜಗಾಮ ಧರಣೀಂ ತದಾ |**
**ಶಿರಸಾ ರಾಜಭಿಃ ಸಾರ್ಧಂ ಪ್ರಣಾಮಮಕರೋತ್ತದಾ || ೧೮ ||**

---

೧೪. ತಂದೆಯು ಬರುತ್ತಿರುವಾಗ ಇದಿರಿಗೆ ಹೋಗುವ ಮಗನಿಗೆ ಹೆಜ್ಜೆಹೆಜ್ಜೆಗೂ ಯಜ್ಞಫಲವು ಬರುತ್ತದೆಯೆಂದು ಪೌರಾಣಿಕ ದ್ವಿಜರು ಹೇಳಿರುವರು.

೧೫. ಏಳಿರಿ! ನಾವೆಲ್ಲರೂ ಒಟ್ಟಿಗೆ ವಿಶ್ವಾಸಪೂರ್ವಕವಾಗಿ ತಂದೆಯನ್ನು ನಮಸ್ಕರಿಸಲು ಹೋಗೋಣ, ಈ ತಂದೆಯೇ ನನಗೆ ಪರದೇವತೆಯು.

೧೬. ಹಾಗೆಯೇ ಆಗಲೆಂದು ಅನುಮೋದಿಸಿದ ಆ ಭೂಪಾಲರೊಡನೆ ರಾಜಸುತನು ತಂದೆಯು ಬರುತ್ತಿದ್ದ ಮಾರ್ಗದಲ್ಲಿ ಒಂದು ಹರಿದಾರಿಯ ವರೆಗೆ ಕಾಲುನಡಗೆಯಿಂದ ಇದಿರಾಗಿ ಹೊರಟನು.

೧೭. ಅನಂತರವೂ ಸಾವಿರಾರು ರಾಜರಿಂದ ಸಹಿತನಾದ ಮೂರ್ತಿಮತ್ತಾದ ಮನ್ಮಥನಂತಿರುವ ಆ ಧರ್ಮಾಂಗದನು ಬಹುದೂರ ಹೋದ ಮೇಲೆ ದಾರಿಯಲ್ಲಿ ದೊರೆಯಾದ ರುಕ್ಮಾಂಗದನನ್ನು ಕಂಡನು.

೧೮. ತಂದೆಯನ್ನು ಕಂಡ ಕೂಡಲೇ ರಾಜರ ಸಹಿತವಾಗಿ ತಲೆಯನ್ನು ಭೂಮಿಗೆ ಬಗ್ಗಿಸಿ ನಮಸ್ಕಾರಮಾಡಿದನು.

ಪ್ರೇವಸ್ಥಾ ಸಮಾಗತಂ ಪ್ರೇಕ್ಷ್ಯ ತಂ ಪತಂತಂ ನೃಪೈಃ ಸಹ ।
ಅವರುಹ್ಯ ಹಯಾದ್ರಾಜಾ ಸಮುತ್ಥಾಪ್ಯ ಸುತಂ ವಿಭೋ ॥ ೧೯ ॥

ಭುಜಾಭ್ಯಾಂ ಸಾಧು ಪೀನಾಭ್ಯಾಂ ಪರ್ಯಷ್ವಜತ ಭೂಪತಿಃ ।
ಮೂರ್ಧ್ನಿ ಚೈವಮುಪಾಘ್ರಾಯ ಉವಾಚ ತನಯಂ ತದಾ ॥ ೨೦ ॥

ಕಚ್ಚಿತ್ಪಾಸಿ ಪ್ರಜಾಃ ಸರ್ವಾಃ ಕಚ್ಚಿದ್ದಂಡಯಸೇ ರಿಪೂನ್ ।
ನ್ಯಾಯಾಗತೇನ ವಿತ್ತೇನ ಕೋಶಂ ಪುತ್ರ ಬಿಭರ್ಷಿ ಚ ॥ ೨೧ ॥

ಕಚ್ಚಿದ್ವಿಪ್ರೇಷ್ವತ್ಯಧಿಕಾ ವೃತ್ತಿರ್ದತ್ತಾನಪಾಯಿನೀ ।
ಕಚ್ಚಿತ್ತೇ ಕಾಂತಶೀಲತ್ವಂ ಕಚ್ಚಿದ್ವಕ್ತಾ ನ ನಿಷ್ಠುರಂ ॥ ೨೨ ॥

ಕಚ್ಚಿದ್ಗಾವೋ ನ ದುಹ್ಯಂತೇ ಪುತ್ರ ಚಾಂಡಾಲವೇಶ್ಮನಿ ।
ಕಚ್ಚಿದ್ವಚನಕರ್ತಾರಸ್ತನಯಾಶ್ಚ ಪಿತುಃ ಸದಾ ॥ ೨೩ ॥

---

೧೯-೨೦. ವಿಶ್ವಾಸದಿಂದ ಬಂದು ರಾಜರೊಡನೆ ತಲೆಬಾಗಿ ನಮಸ್ಕರಿಸುತ್ತಿರುವ ಮಗನನ್ನು ನೋಡಿ ರುಕ್ಮಾಂಗದನು ಕುದುರೆಯಿಂದಿಳಿದು, ಅವನನ್ನು ಎಬ್ಬಿಸಿ, ಪುಷ್ಟವಾದ ಬಾಹುಗಳಿಂದ ಅವನನ್ನು ಆಲಿಂಗಿಸಿದನು. ಮತ್ತು ಶಿರಸ್ಸನ್ನು ಆಘ್ರಾಣಿಸಿ ಮಗನೊಡನೆ ಮಾತನಾಡಿದನು.

೨೧-೨೨. ವತ್ಸ! ಸಕಲ ಪ್ರಜೆಗಳನ್ನೂ ರಕ್ಷಿಸುತ್ತಿರುವೆಯಾ? ಶತ್ರುಗಳನ್ನು ಸರಿಯಾಗಿ ದಂಡಿಸುತ್ತಿರುವೆಯಾ? ನ್ಯಾಯಮಾರ್ಗವಾಗಿ ಬಂದ ಹಣದಿಂದ ಕೋಶವನ್ನು ತುಂಬುತ್ತಿರುವೆಯಾ? ಅಪಾಯವಿಲ್ಲದಂತಹ ವೃತ್ತಿಗಳನ್ನು ಬ್ರಾಹ್ಮಣರಿಗೆ ಹೆಚ್ಚಾಗಿ ಕೊಟ್ಟಿರುವೆಯಾ? ಏಕಾಂತಶೀಲನಾಗಿರುವೆಯಾ? ನಿಷ್ಠುರವಾದ ಮಾತುಗಳನ್ನಾಡುವುದಿಲ್ಲವಷ್ಟೆ?

೨೩. ಚಂಡಾಲರ ಮನೆಯಲ್ಲಿ ಗೋವುಗಳು ಕರೆಯುವುದಿಲ್ಲವಷ್ಟೇ? ಮಕ್ಕಳು ತಂದೆಯ ಮಾತನ್ನು ಕೇಳುತ್ತಿರುವರೇ?

ಕ್ವಚಿದ್ವಧೂಃ ಶ್ವಶ್ರುವಾಕ್ಯೇ ವರ್ತತೇ ಭರ್ತರಿಕ್ವಚಿತ್ ।
ಕ್ವಚಿದ್ವಿವಾದಾದ್ವಿಪ್ರೈಸ್ತು ಸಮಂ ನೇಕ್ಷಸ ಆತ್ಮಜ ॥ ೨೪ ॥

ಕಚ್ಚಿದ್ಗಾವೋ ನ ರುಧ್ಯಂತೇ ವಿಷಯೇ ವಿವಿಧೈಸ್ತೃಣೈಃ ।
ತುಲಾಮಾನಾನಿ ಸರ್ವಾಣಿ ಹ್ಯನ್ನಾದೀನಾಂ ಸದೇಕ್ಷ್ಯಸೇ ॥ ೨೫ ॥

ಕುಟುಂಬಿನಂ ಕರೈಃ ಪುತ್ರ ನಾತ್ಯರ್ಥಮಭಿದೂಯಸೇ ।
ಕ್ವಚಿನ್ನ ದ್ಯೂತಪಾನಾದಿ ವರ್ತೇತೇ ವಿಷಯೇ ತವ ॥ ೨೬ ॥

ಕ್ವಚಿದ್ಭಿನ್ನರಸೈರ್ಲೋಕಾ ಭಿನ್ನವಾಕ್ಯೈಃ ಪುರೇ ತವ ।
ನ ದಾನೈರ್ಜೀರ್ಣವಸ್ತ್ರೈಶ್ಚ ನೋಪಜೀವಂತಿ ಮಾನವಾಃ ॥ ೨೭ ॥

ಕಚ್ಚಿದ್ದೃಷ್ಟ್ವಾ ಸ್ವಯಂ ಪುತ್ರ ಹಸ್ತ್ಯಶ್ವಂ ಪರಿರಕ್ಷಸಿ ।
ಕಚ್ಚಿಚ್ಚ ಮಾತರಂ ಸರ್ವಾ ಹ್ಯವಿಶೇಷೇಣ ಪಶ್ಯಸಿ ॥ ೨೮ ॥

---

೨೪. ವಧುವು ಕೆಲವು ವಿಷಯಗಳಲ್ಲಿ ಅತ್ತೆಯ ಮಾತಿನಂತೆಯೂ, ಕೆಲವು ವಿಷಯಗಳಲ್ಲಿ ಗಂಡನ ಮಾತಿನಂತೆಯೂ ನಡೆಯುತ್ತಿರುವಳೇ? ಪುತ್ರನೇ! ಯಾವಾಗಲೂ ಬ್ರಾಹ್ಮಣರೊಡನೆ ವಿವಾದಮಾಡುವುದಿಲ್ಲವಷ್ಟೇ?

೨೫. ದೇಶದಲ್ಲಿ ಗೋವುಗಳು ನಾನಾವಿಧವಾದ ಹುಲ್ಲುಗಳನ್ನು ಮೇಯುವುದಕ್ಕೆ ಅಡಚಣೆ ಮಾಡುತ್ತಿಲ್ಲವಷ್ಟೇ? ಯಾವಾಗಲೂ ಧಾನ್ಯಗಳ ಅಳತೆಗಳನ್ನೆಲ್ಲಾ ವಿಮರ್ಶಿಸುತ್ತಿರುವೆಯಾ?

೨೬. ವತ್ಸ! ಕುಟುಂಬಿಯಾದವನನ್ನು ಹೆಚ್ಚು ತೆರಿಗೆಗಳಿಂದ ಕಷ್ಟ ಪಡಿಸುತ್ತಿಲ್ಲವಷ್ಟೆ? ನಿನ್ನ ದೇಶದಲ್ಲಿ ಎಲ್ಲಿಯೂ ಜೂಜು ಮದ್ಯಪಾನ ಮುಂತಾದ ದುಷ್ಕೃತ್ಯಗಳು ನಡೆಯದಂತೆ ನಿಯಮಿಸಿರುವೆಯಾ?

೨೭. ನಿನ್ನ ಪಟ್ಟಣದಲ್ಲಿ ಎಲ್ಲೆಲ್ಲಿಯೂ ಜನರು ಭಿನ್ನಾಭಿಪ್ರಾಯ ಮತ್ತು ವಿರುದ್ಧನುಡಿಗಳಿಂದ ಹೋರಾಡದಂತೆ ನಿಯಮಿಸಿರುವೆಯಾ? ಮನುಷ್ಯರು ಭಿಕ್ಷೆ ಮತ್ತು ಹರಕುಬಟ್ಟೆಗಳಿಂದ ಉಪಜೀವಿಸುತ್ತಿಲ್ಲವಷ್ಟೆ?

೨೮. ವತ್ಸ! ಆನೆ ಕುದುರೆಗಳನ್ನು ನೀನೇ ಆಗಾಗ ಸಾಕ್ಷಾತ್ತಾಗಿ ಪರಿಶೀಲಿಸಿ ಕಾಪಾಡುತ್ತಿರುವೆಯಾ! ನಿನ್ನ ತಾಯಿಯರನ್ನೆಲ್ಲಾ ಒಂದೇ ವಿಧವಾಗಿ ನೋಡುತ್ತಿರುವೆಯಾ?

ಕಚ್ಚಿನ್ನ ವಾಸರೇ ವಿಷ್ಣೋರ್ನರಾ ಭುಂಜಂತಿ ಪುತ್ರಕ |
ಶಶಿನಿ ಕ್ಷೀಣತಾಂ ಪ್ರಾಪ್ತೇ ಕಚ್ಚಿಚ್ಛ್ರಾದ್ಧಪರೋ ನರಃ ॥ ೨೯ ॥

ಕಚ್ಚಿಚ್ಚಾಪರರಾತ್ರೇಷು ಸದಾ ನಿದ್ರಾಂ ವಿಮುಂಚಸಿ |
ನಿದ್ರಾ ಮೂಲಮಧರ್ಮಸ್ಯ ನಿದ್ರಾ ಪಾಪವಿವರ್ಧಿನೀ ॥ ೩೦ ॥

ನಿದ್ರಾ ದಾರಿದ್ರ್ಯಜನನೀ ನಿದ್ರಾ ಶ್ರೇಯೋವಿನಾಶಿನೀ |
ನ ಹಿ ನಿದ್ರಾನ್ವಿತೋ ರಾಜಾ ಚಿರಂ ಶಾಸ್ತಿ ವಸುಂಧರಾಂ ॥ ೩೧ ॥

ಪುಂಶ್ಚಲೀವ ಸದಾ ಭರ್ತುರ್ಲೋಕದ್ವಯವಿನಾಶಿನೀ ॥ ೩೨ ॥

ಏವಮುಚ್ಚರಮಾಣಂ ತಂ ತನಯೋ ವಾಕ್ಯಮಬ್ರವೀತ್ |
ಧರ್ಮಾಂಗದೋ ಮಹೀಪಾಲಂ ಪ್ರಣಮ್ಯ ಚ ಪುನಃ ಪುನಃ |
ಸರ್ವಮೇತತ್ಕೃತಂ ತಾತ ಪುನಃ ಕರ್ತಾಸ್ಮಿ ತೇ ವಚಃ ॥ ೩೩ ॥

---

೨೯. ಪುತ್ರ ! ಯಾವ ಸಂದರ್ಭದಲ್ಲಿಯೂ ಜನರು ಹರಿದಿನದಲ್ಲಿ ಭೋಜನ ಮಾಡದಂತೆ ನೋಡಿಕೊಳ್ಳುತ್ತಿರುವೆಯಾ ? ಚಂದ್ರನು ಕ್ಷೀಣನಾಗಿರುವಾಗ-ಎಂದರೆ ಅಮಾವಾಸ್ಯೆಯ ದಿನದಲ್ಲಿ ಜನರು ಶ್ರಾದ್ಧಪರರಾಗಿರುವರೇ ?

೩೦. ಅಪರರಾತ್ರಿಗಳಲ್ಲಿ ಯಾವಾಗಲೂ ನಿದ್ದೆ ಮಾಡದೆ ಎಚ್ಚರದಿಂದಿರುವೆಯಾ ? ನಿದ್ರೆಯು ಅಧರ್ಮಕ್ಕೆ ಮೂಲವು. ಅದು ಪಾಪವನ್ನು ವೃದ್ಧಿಗೊಳಿಸುತ್ತದೆ.

೩೧. ನಿದ್ರೆಯು ಬಡತನವನ್ನುಂಟುಮಾಡುವುದು. ಶ್ರೇಯಸ್ಸನ್ನು ನಾಶಮಾಡುವುದು. ನಿದ್ರೆಮಾಡುವ ರಾಜನು ಬಹುಕಾಲ ರಾಜ್ಯವನ್ನಾಳಲಾರನು.

೩೨. ಸ್ವೈರಿಣಿಯು ಗಂಡನ ಇಹಪರಸುಖಗಳನ್ನು ನಾಶಮಾಡುವಂತೆ ನಿದ್ರೆಯು ರಾಜನಿಗೆ ಇಹ ಪರ ಸುಖಗಳನ್ನು ಹಾಳುಮಾಡುವುದು. ಹೀಗೆ ಹೇಳುತ್ತಿರುವ ತಂದೆಯನ್ನು ಕುರಿತು ಧರ್ಮಾಂಗದಕುಮಾರನು ಮಾತನಾಡಿದನು.

೩೩. ಧರ್ಮಾಂಗದನು ಪುನಃ ಪುನಃ ತಂದೆಗೆ ನಮಸ್ಕರಿಸಿ ಅಪ್ಪಾ ! ಇವೆಲ್ಲವನ್ನೂ ಮಾಡಿರುವೆನು. ಮುಂದೆಯೂ ನೀನು ಹೇಳುವುದನ್ನೆಲ್ಲಾ ಮಾಡಲು ಸಿದ್ಧನಾಗಿರುವೆನು.

ಪಿತುರ್ವಚನಕರ್ತಾರಃ ಪುತ್ರಾ ಧನ್ಯಾ ಜಗತ್ತ್ರಯೇ ।
ಕಿಂ ತತಃ ಪಾತಕಂ ರಾಜನ್ಯೋ ನ ಕುರ್ಯಾತ್ಪಿತುರ್ವಚಃ ॥ ೩೪ ॥

ಪಿತೃವಾಕ್ಯಮನಾದೃತ್ಯ ವ್ರಜೇತ್ ಸ್ನಾತುಂ ತ್ರಿಮಾರ್ಗಗಾಂ ।
ನ ತತ್ತೀರ್ಥಫಲಂ ಭುಂಕ್ತೇ ಯೋ ನ ಕುರ್ಯಾತ್ ಪಿತುರ್ವಚಃ ॥ ೩೫

ತ್ವದಧೀನಂ ಶರೀರಂ ಮೇ ತ್ವದಧೀನಂ ಹಿ ಜೀವಿತಂ ।
ತ್ವದಧೀನೋ ಹಿ ಮೇ ಧರ್ಮಸ್ತ್ವಂ ಚ ಮೇ ದೈವತಂ ಪರಂ ॥ ೩೬ ॥

ತ್ರೈಲೋಕ್ಯಸ್ಯಾಪಿ ದಾನೇನ ನ ಶುದ್ಧ್ಯೇತ ಋಣಾತ್ ಸುತಃ ।
ಕಿಂಪುನರ್ದೇಹವಿತ್ತಾಭ್ಯಾಂ ಕ್ಲೇಶದಾನಾದಿಭಿರ್ವಿಭೋ ॥ ೩೭ ॥

---

೩೪. ಪಿತೃವಾಕ್ಯಪರಿಪಾಲನೆ ಮಾಡುವ ಮಕ್ಕಳೇ ಮೂರು ಲೋಕಗಳಲ್ಲಿಯೂ ಧನ್ಯರು. ರಾಜನೇ! ಪಿತೃವಾಕ್ಯಪರಿಪಾಲನೆ ಮಾಡದಿರುವುದಕ್ಕಿಂತ ಬೇರೆ ಪಾತಕವಾವುದು ?

೩೫. ಯಾವನು ತಂದೆಯ ಮಾತನ್ನು ಅನಾದರಣೆ ಮಾಡಿ ಗಂಗೆಯಲ್ಲಿ ಸ್ನಾನಮಾಡಲು ಹೋಗುವನೋ, ಮತ್ತು ತಂದೆಯ ಮಾತನ್ನು ಕೇಳುವುದಿಲ್ಲವೋ ಅವನು ಆ ತೀರ್ಥಸ್ನಾನಾದಿಗಳ ಫಲವನ್ನು ಪಡೆಯುವುದಿಲ್ಲ.

೩೬. ತಂದೆಯೇ! ನನ್ನ ಈ ಶರೀರವು ನಿನ್ನ ಅಧೀನವು. ನನ್ನ ಬದುಕೂ ನಿನ್ನ ಅಧೀನವು. ನನ್ನ ಧರ್ಮವೂ ಸಹ ನಿನ್ನ ಅಧೀನವು. ಹೆಚ್ಚೇನು! ನೀನೇ ನನಗೆ ಪರದೇವತೆಯು.

೩೭. ಮಗನು ಮೂರುಲೋಕಗಳನ್ನು ದಾನ ಮಾಡಿದರೂ ಪಿತೃಋಣದಿಂದ ಮುಕ್ತನಾಗುವುದಿಲ್ಲ. ಹೀಗಿರುವಾಗ ದೇಹಪ್ರಯಾಸ ಮತ್ತು ಧನಾದಿಗಳಿಂದ ಋಣಮುಕ್ತನಾಗಲಾರನೆಂದು ಹೇಳತಕ್ಕುದೇನು ?

ಏವಂ ಬ್ರುವಾಣಂ ತನಯಂ ಬಹುಭೂಪಾಲಸಂವೃತಂ |
ರುಕ್ಮಾಂಗದಃ ಪರಿಷ್ವಜ್ಯ ಪುನರಾಹ ಸುತಂ ವಚಃ || ೩೮ ||

ಸತ್ಯಮೇತತ್ತ್ವಯಾ ಪುತ್ರ ವ್ಯಾಹೃತಂ ಧರ್ಮವೇದಿನಾ |
ಪಿತುರಭ್ಯಧಿಕಂ ಕಿಂಚಿದ್ದೈವತಂ ನ ಸುತಸ್ಯ ಹಿ |
ದೇವಾಃ ಪರಾಙ್ಮುಖಾಸ್ತಸ್ಯ ಪಿತರಂ ಯೋವಮನ್ಯತೇ || ೩೯ ||

ಸೋಹಂ ಮೂರ್ಧ್ನಾ ತ್ವಯಾ ಪುತ್ರ ಧೃತಸ್ತತ್ ಕ್ಷಿತಿರಕ್ಷಣಾತ್ |
ಜಿತ್ವಾ ದ್ವೀಪವತೀಂ ಪೃಥ್ವೀಂ ಬಹುಭೂಪಾಲಸಂವೃತಾಂ || ೪೦ ||

ಏತತ್ ಸೌಖ್ಯಂ ಪರಂ ಲೋಕೇ ಏತತ್ ಸ್ವರ್ಗಪದಂ ಧ್ರುವಂ |
ಪಿತುರಭ್ಯಧಿಕಃ ಪುತ್ರೋ ಯದ್ಭವೇತ್ ಕ್ಷಿತಿಮಂಡಲೇ || ೪೧ ||

---

೩೮. ಈರೀತಿಯಾಗಿ ಹೇಳುತ್ತಿರುವ, ಬಹುರಾಜರಿಂದ ಪರಿವೃತನಾದ ಕುಮಾರನನ್ನು ರುಕ್ಮಾಂಗದನು ಆಲಿಂಗನೆ ಮಾಡಿಕೊಂಡು ಪುನಃ ಮಗನನ್ನು ಕುರಿತು ಮಾತನಾಡಿದನು. ವತ್ಸ! ಧರ್ಮಜ್ಞನಾದ ನೀನು ಹೇಳಿದ ಮಾತು ನಿಜ.

೩೯. ಮಗನಿಗೆ ತಂದೆಗಿಂತ ಹೆಚ್ಚಾದ ದೇವತೆ ಯಾರೂ ಇಲ್ಲ. ತಂದೆಗೆ ಅವಮಾನ ಮಾಡುವ ಮಗನ ವಿಷಯದಲ್ಲಿ ದೇವತೆಗಳೆಲ್ಲರೂ ಪರಾಙ್ಮುಖರಾಗುವರು.

೪೦. ಕುಮಾರಾ! ನೀನು ಬಹುರಾಜರಿಂದ ಯುಕ್ತವಾದ ಸಪ್ತದ್ವೀಪಗಳುಳ್ಳ ಭೂಮಿಯನ್ನು ಜಯಿಸಿ ತಂದೆಯ ರಾಜ್ಯವನ್ನು ರಕ್ಷಿಸುತ್ತಿರುವುದರಿಂದ ನನ್ನನ್ನೇ ಶಿರಸ್ಸಿನಲ್ಲಿ ಧರಿಸಿದಂತಾಗಿದೆ.

೪೧. ತಂದೆಗಿಂತಲೂ ಮಗನು ಹೆಚ್ಚಾಗಿ ಧರ್ಮಿಷ್ಠನಾಗಿರುವುದೇ ಈ ಭೂಮಂಡಲದಲ್ಲಿ ತಂದೆಗೆ ಉತ್ತಮ ಸುಖವು. ಇದೇ ಶಾಶ್ವತವಾದ ಸ್ವರ್ಗಸ್ಥಾನವು.

ತ್ವಯೋ ಸಾಧಯತಾ ಭೂಪಾನ್ಯಥಾ ಹರಿದಿನಂ ಶುಭಂ । ॥ ೪೨ ॥
ತತ್ಪಿತುರ್ವಚನಂ ಶ್ರುತ್ವಾ ಪುತ್ರೋ ಧರ್ಮಾಂಗದೋಽಬ್ರವೀತ್ ।
ಕ್ವ ಗತಸ್ತ್ವಂ ಭವಾಂಸ್ತಾತ ನಿವೇಶ್ಯ ಮಯಿ ಸಂಪದಃ ॥ ೪೩ ॥

ಕಸ್ಮಿನ್ ಸ್ಥಾನೇ ಸ್ತ್ರಿಯಂ ಪ್ರಾಪ್ತಾ ಸೂರ್ಯಾಯುತಸಮಪ್ರಭಾ ।
ಮನ್ಯೇ ನಿರ್ವೇದಮಾಪನ್ನ ಇಮಾಂ ಸೃಷ್ಟ್ವಾ ಪ್ರಜಾಪತಿಃ ॥ ೪೪ ॥

ನೈತದ್ರೂಪಾ ಮಹೀಪಾಲ ನಾರೀ ತ್ರೈಲೋಕ್ಯಮಧ್ಯತಃ ।
ಮನ್ಯೇ ಭೂಧರಜಾತೇಯಮಥವಾ ಸಾಗರೋದ್ಭವಾ ॥ ೪೫ ॥

ಮಾಯಾ ವಾ ಮಯದೈತ್ಯಸ್ಯ ಪ್ರಮದಾರೂಪಸಂಸ್ಥಿತಾ ।
ಅಹೋ ಸುನಿಪುಣೋ ಧಾತಾ ಯೇನೇಯಂ ನಿರ್ಮಿತಾ ವಿಭೋ ।
ಬಾಲಾಗ್ರಶತಭಾಗೋ ಹಿ ವ್ಯಲೀಕೋ ನೋಪಪದ್ಯತೇ ॥ ೪೬ ॥

---

೪೨-೪೪. ನೀನಾದರೋ ನನಗಿಂತಲೂ ಹೆಚ್ಚಾಗಿ ರಾಜರನ್ನು ಜಯಿಸಿ ಶುಭವಾದ ಹರಿದಿನವ್ರತವನ್ನಾಚರಿಸುತ್ತಿರುವೆ. ಹೀಗೆ ಹೇಳಿದ ತಂದೆಯ ಮಾತನ್ನು ಕೇಳಿ ಧರ್ಮಾಂಗದಕುಮಾರನು ಪುನಃ ಮಾತನಾಡಿದನು.

ತಂದೆಯೇ! ಈ ಸಂಪತ್ತುಗಳನ್ನೆಲ್ಲಾ ನನಗೆ ಕೊಟ್ಟು ನೀನು ಎಲ್ಲಿ ಹೋಗಿದ್ದೆ? ಹತ್ತುಸಾವಿರ ಸೂರ್ಯರಂತೆ ಹೊಳೆಯುತ್ತಿರುವ ಈ ನಾರೀ ಮಣಿಯು ನಿನಗೆಲ್ಲಿ ದೊರಕಿದಳು? ಬ್ರಹ್ಮನು ಈಕೆಯನ್ನು ಸೃಷ್ಟಿಸಿದ ಮೇಲೆ ವೈರಾಗ್ಯವನ್ನು ಹೊಂದಿರುವನೆಂದು ನಾನು ತಿಳಿದಿರುವೆನು.

೪೫. ಭೂಪಾಲನೇ! ಇಂತಹ ರೂಪವತಿಯಾದ ನಾರೀಮಣಿಯನ್ನು ಮೂರು ಲೋಕಗಳಲ್ಲಿ ಎಲ್ಲಿಯೂ ಕಾಣೆನು. ಈಕೆಯು ಪ್ರಾಯಶಃ ಪರ್ವತ ಪುತ್ರಿಯಾದ ಪಾರ್ವತೀ ದೇವಿಯೋ! ಅಥವಾ ಕ್ಷೀರಸಾಗರದಲ್ಲಿ ಹುಟ್ಟಿದ ಲಕ್ಷ್ಮೀದೇವಿಯೋ! ಇರಬಹುದೆಂದು ತಿಳಿದಿರುವೆನು.

೪೬. ಅಥವಾ ಸ್ತ್ರೀರೂಪವನ್ನು ತಾಳಿದ ಮಯಾಸುರನ ಮಾಯೆಯೋ? ಆಶ್ಚರ್ಯ! ಪ್ರಭುವೇ! ಖಂಡಿತವಾಗಿಯೂ ಈಕೆಯನ್ನು ಸೃಷ್ಟಿಸಿದ ಚತುರ್ಮುಖನು ಅತಿಕುಶಲನು. ಈಕೆಯಲ್ಲಿ ಕುದುರೆಯ ಬಾಲದ ಕೊನೆಯಲ್ಲಿರುವ

ಇಯಂ ಹಿ ಯೋಗ್ಯಾ ಕನಕಾವದಾತಾ
ಗೃಹಾಯ ತುಭ್ಯಂ ಜಗತೀಪತೀಶ ।
ಏವಂವಿಧಾ ಮೇ ಜನನೀ ಯದಿ ಸ್ಯಾತ್
ಕೋನ್ಯೋಽಸ್ತಿ ಮತ್ತಃ ಸುಕೃತೀ ಮನುಷ್ಯಃ ॥ ೪೭ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಪಿತಾಪುತ್ರಸಂವಾದೋ ನಾಮ
ಪಂಚದಶೋಽಧ್ಯಾಯಃ

---

ಕೂದಲಿನ ಅಂತ್ಯಭಾಗದಲ್ಲಿ ನೂರನೆಯ ಒಂದು ಭಾಗದಷ್ಟಾದರೂ ದೋಷವು ಸಿಗುವುದಿಲ್ಲ.

೪೭. ಚಕ್ರವರ್ತಿಯೇ! ಸುವರ್ಣವನ್ನೇ ಅಲ್ಲಗಳೆಯುವಂತಹ ಈ ನಾರೀಮಣಿಯು ನಿನಗೆ ಗೃಹಿಣಿಯಾಗಲು ಅರ್ಹಳು. ಈ ವಿಧಳಾದ ನಾರೀ ಮಣಿಯು ನನಗೆ ಜನನಿಯಾದರೆ ನನಗಿಂತಲೂ ಪುಣ್ಯವಂತನಾದ ಮನುಷ್ಯನು ಬೇರೊಬ್ಬನಿಲ್ಲ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀಚರಿತ್ರೆಯೊಳು
ಪಿತಾಪುತ್ರಸಂವಾದವೆಂಬ ಹದಿನೈದನೆಯ
ಅಧ್ಯಾಯವು ಮುಗಿದುದು.

---

## ವಿಷಯಸಂಗ್ರಹ

ರುಕ್ಮಾಂಗದನು ಹಲ್ಲಿಗೆ ಪಾಪವಿಮೋಚನೆ ಮಾಡಿ ಅಲ್ಲಿದ್ದ ಕುದುರೆಯ ಮೇಲೆ ಮೋಹಿನಿಯನ್ನು ಕೂಡಿಸಿಕೊಂಡು ರಾಜಧಾನಿಯ ಕಡೆಗೆ ಹೊರಟು, ದಾರಿಯಲ್ಲಿ ನಾನಾವಿಧಪರ್ವತ, ನದೀ, ಉಪವನ ಮುಂತಾದವುಗಳನ್ನು ನೋಡಿ ಹರ್ಷಿಸುತ್ತಾ ಶೀಘ್ರವಾಗಿ ಬರುತ್ತಿರುವಾಗ ಮಧ್ಯದಲ್ಲಿ ಸಿಕ್ಕಿದ ವಾಮದೇವ ಮುನಿಯ ಆಶ್ರಮಕ್ಕೆ ನಮಸ್ಕಾರಮಾಡಿ, ರಾಜಧಾನಿಯ ಸಮೀಪಕ್ಕೆ ಬಂದನು. ಅದನ್ನು ತಿಳಿದು ಧರ್ಮಾಂಗದಕುಮಾರನು ಬಹುಜನ ಸಾಮಂತರಾಜರೊಡನೆ ಬಂದು ತಂದೆಯನ್ನು ಇದಿರುಗೊಂಡು ನಮಸ್ಕರಿಸಿದನು. ತಂದೆಯು ಅವನನ್ನು ಆಲಿಂಗನೆ ಮಾಡಿಕೊಂಡು ರಾಜ್ಯಭಾರ ಮುಂತಾದ ವಿಷಯಗಳಲ್ಲಿ ಬಹುಪ್ರಶ್ನೆಗಳನ್ನು ಮಾಡಿದನು. ಅದಕ್ಕೆ ಪುತ್ರನು ಉಚಿತವಾದ ಉತ್ತರಗಳನ್ನು ಹೇಳಿದನು. ಈ ಸಂವಾದದಲ್ಲಿ ಪುತ್ರಧರ್ಮವು ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಮಧ್ಯದಲ್ಲಿ ರಾಜಧರ್ಮ ಮುಂತಾದುವೂ ಹೇಳಲ್ಪಟ್ಟಿದೆ.

# ಷೋಡಶೋಽಧ್ಯಾಯಃ

—·—

**ವಸಿಷ್ಠ ಉವಾಚ**

**ಧರ್ಮಾಂಗದವಚಃ ಶ್ರುತ್ವಾ ಹೃಷ್ಟೋ ರುಕ್ಮಾಂಗದೋಽಬ್ರವೀತ್ ।**
**ಸತ್ಯಂ ತೇ ಜನನೀ ಪುತ್ರ ಸಂಪ್ರಾಪ್ತಾ ಮಂದರೇ ಮಯಾ ॥ ೧ ॥**

**ವೇದಾಶ್ರಯಸುತಾ ಬಾಲಾ ಮದರ್ಥಕೃತನಿಶ್ಚಯಾ ।**
**ಕುರ್ವಂತೀ ದಾರುಣಂ ಪುತ್ರ ತಪೋ ದೇವಗಿರೌ ಪುರಾ ॥ ೨ ॥**

**ಇತಃಪಂಚದಶಾದಹ್ನೋ ಹಯಗಾಮೀ ಗತೋಹ್ಯಯಂ ।**
**ಮಂದರೇ ಪರ್ವತಶ್ರೇಷ್ಠೇ ಬಹುಧಾತುಸಮನ್ವಿತೇ ॥ ೩ ॥**

---

## ಹದಿನಾರನೆಯ ಅಧ್ಯಾಯವು

೧. ವಸಿಷ್ಠನು ಹೇಳಿದನು: --ಧರ್ಮಾಂಗದನ ಮಾತನ್ನುಕೇಳಿ ಸಂತುಷ್ಟನಾದ ರುಕ್ಮಾಂಗದನು ಈ ರೀತಿ ಹೇಳಿದನು—ಕುಮಾರ! ಈ ನಾರೀಮಣಿಯು ನಿಜವಾಗಿಯೂ ನಿನಗೆ ಜನನಿಯು. ಮಂದರಪರ್ವತದಲ್ಲಿ ನನಗೆ ದೊರಕಿದಳು.

೨. ಚತುರ್ಮುಖಬ್ರಹ್ಮನ ಮಗಳಾದ ಈ ಬಾಲೆಯು ನನ್ನನ್ನು ವರಿಸಬೇಕೆಂದು ನಿಶ್ಚಯಿಸಿ ಅದಕ್ಕಾಗಿ ದೇವಗಿರಿಯಲ್ಲಿ ಕಠಿಣತಪಸ್ಸನ್ನು ಮಾಡುತ್ತಿದ್ದಳು.

೩-೪. ಇವತ್ತಿಗೆ ಹದಿನೈದು ದಿವಸಗಳ ಹಿಂದೆ ನಾನು ಕುದುರೆಯ ಮೇಲೆ ಕುಳಿತು ಅಲ್ಲಿಗೆ ಹೋದೆನು. ನಾನಾವಿಧ ಧಾತುಗಳಿಂದ ಕೂಡಿದ, ಶ್ರೇಷ್ಠವಾದ ಮಂದರಪರ್ವತದ ಶಿಖರ ಭಾಗದಲ್ಲಿ ಮಹೇಶ್ವರನನ್ನು ಸಂತೋಷ

ತಸ್ಯ ಮೂರ್ಧನಿ ಬಾಲೇಯಂ ತೋಷಯಂತೀ ಮಹೇಶ್ವರಂ ।
ಸ್ಥಿತಾ ಗಾನಪರಾ ದೃಷ್ಟ್ವಾ ಮಯಾ ತತ್ರ ಸುದರ್ಶನಾ ॥ ೪ ॥

ತತೋಽಹಂ ಮೂರ್ಛಯಾ ಯುಕ್ತಃ ಪತಿತೋ ಧರಣೀತಲೇ ।
ಅನಂಗಬಾಣಸಂವಿದ್ಧೋ ವ್ಯಾಧವಿದ್ಧೋ ಯಥಾ ಮೃಗಃ ॥ ೫ ॥

ತತೋಽಹಮನಯಾ ದೇವ್ಯಾ ಚಾಲಿತಶ್ಚಾರುನೇತ್ರಯಾ ।
ವೃತಶ್ಚೈವಾಪಿ ಭರ್ತೃತ್ವೇ ಕಿಂಚಿತ್ ಪ್ರಾರ್ಥನಯಾ ಸಹ ॥ ೬ ॥

ಮಯಾ ಚಾಪಿ ಪ್ರತಿಜ್ಞಾತಂ ಸ್ವದಕ್ಷಿಣಕರಾನ್ವಿತಂ ।
ಸೇಯಂ ಭಾರ್ಯಾ ವಿಶಾಲಾಕ್ಷೀ ಕೃತಾ ಭೂಧರಮಸ್ತಕೇ ॥ ೭ ॥

ಅವರುಹ್ಯ ಧರಾಪೃಷ್ಠೇ ಸಮಾರುಹ್ಯ ತುರಂಗಮಂ ।
ದಿನತ್ರಯೇಣ ತ್ವರಿತಃ ಸಂಪ್ರಾಪ್ತಸ್ತವ ಸನ್ನಿಧೌ ॥ ೮ ॥

---

ಹಾಡುತ್ತಾ ಗಾನಪರಳಾಗಿದ್ದು, ಚೆನ್ನಾಗಿ ಕಾಣಿಸುತ್ತಿದ್ದ ಈ ಬಾಲೆಯು ನನಗೆ ಕಾಣಿಸಿದಳು.

೫. ನೋಡಿದ ಮೇಲೆ ಬೇಡನ ಬಲೆಯಲ್ಲಿ ಸಿಕ್ಕಿಬಿದ್ದ ಮೃಗದಂತೆ ಕಾಮಬಾಣಹತನಾಗಿ, ಮೂರ್ಛೆ ಹೊಂದಿ ನೆಲದ ಮೇಲೆ ಬಿದ್ದೆನು.

೬ ತರುವಾಯ ಸುಂದರ ನಯನಗಳುಳ್ಳ ಈ ದೇವಿಯು ನನ್ನನ್ನು ಎಬ್ಬಿಸಿದಳು. ಬಳಿಕ ಒಂದು ಒಪ್ಪಂದದಮೇಲೆ ನನ್ನನ್ನು ಪತಿಯಾಗಿ ವರಿಸಿದಳು.

೭. ನಾನೂ ಸಹ ಆಕೆಯ ಕೈಮೇಲೆ ಬಲಗೈಯನ್ನಿಟ್ಟು ಪ್ರತಿಜ್ಞೆ ಮಾಡಿ ಪರ್ವತಶಿಖರದಲ್ಲಿ ವಿಶಾಲಾಕ್ಷಿಯಾದ ಈಕೆಯನ್ನು ವಿವಾಹ ಮಾಡಿಕೊಂಡು ಪತ್ನಿಯನ್ನಾಗಿ ಮಾಡಿಕೊಂಡಿರುವೆನು.

೮-೯. ಅನಂತರ ಶಿಖರದಿಂದಿಳಿದು ಭೂಮಿಗೆ ಬಂದು ಕುದುರೆಯ ಮೇಲೆ ಕುಳಿತು ವೇಗವಾಗಿ ಹೊರಟು ದಾರಿಯಲ್ಲಿ ಪರ್ವತ, ದೇಶ, ಸರೋವರ,

ಪಶ್ಯಮಾನೋ ಗಿರೀಞ್ ದೇಶಾಞ್ ಸರಾಂಸಿ ಸರಿತಸ್ತಥಾ ।
ಇಯಂ ಹಿ ಜನನೀ ಪುತ್ರ ತವ ಪ್ರೀತಿವಿವರ್ಧಿನೀ ॥ ೯ ॥

ಅಭಿವಾದಯ ಚಾರ್ವಾಂಗೀಂ ತ್ವಂ ನಿಜಾಮಿವ ಮಾತರಂ ।
ತತ್ಪಿತುರ್ವಚನಂ ಶ್ರುತ್ವಾ ಹಯಸಂಸ್ಥಾಮರಿಂದಮಃ ॥ ೧೦ ॥

ಶಿರಸಾ ಧರಣೀಂ ಗತ್ವಾ ಇದಂ ವಚನಮಬ್ರವೀತ್ ।
ಪ್ರಸೀದ ದೇವಿ ಮಾತಸ್ತ್ವಂ ಭೃತ್ಯೋ ದಾಸಃ ಸುತಸ್ತವ ॥ ೧೧ ॥

ನಮಸ್ಕರೋಮಿ ಜನನೀಂ ಬಹುಭೂಪಾಲಸಂಯುತಃ ।
ತಂ ಪುತ್ರಮವನೀಂ ಪ್ರಾಪ್ತಂ ಮೋಹಿನೀ ಪ್ರೇಕ್ಷ್ಯ ಭೂಪತೇ ॥ ೧೨ ॥

ಭರ್ತುರ್ದಾಕ್ಷಿಣ್ಯಯೋಗಾಚ್ಚ ಅವತೀರ್ಯ ತುರಂಗಮಾತ್ ।
ಅವಾಗೂಹತ ಬಾಹುಭ್ಯಾಮುತ್ಥಾಪ್ಯ ಪತಿತಂ ಸುತಂ ॥ ೧೩ ॥

---

ನದಿಗಳನ್ನು ನೋಡುತ್ತಾ ಮೂರು ದಿನಗಳಲ್ಲಿ ನಿನ್ನ ಹತ್ತಿರಕ್ಕೆ ಬಂದೆನು. ಕುಮಾರನೇ ! ಈಕೆಯು ನಿನಗೆ ಪ್ರೀತಿವರ್ಧಕಳಾದ ಜನನಿಯು.

೧೦-೧೩. ನಿನ್ನ ಸ್ವಂತ ತಾಯಿಯಂತೆ ಭಾವಿಸಿ ಈ ಸುಂದರಾಂಗಿಗೆ ನಮಸ್ಕಾರ ಮಾಡು. ಎಂಬುದಾಗಿ ಹೇಳಿದ ತಂದೆಯ ಮಾತನ್ನು ಕೇಳಿ ಶತ್ರು ನಾಶಕನಾದ ಧರ್ಮಾಂಗದನು ಕುದುರೆಯ ಮೇಲೆ ಕುಳಿತಿದ್ದ ಆ ದೇವಿಗೆ ನೆಲಕ್ಕೆ ತಲೆಬಾಗಿ ನಮಸ್ಕಾರ ಮಾಡಿ ಈ ಮಾತನ್ನು ಹೇಳಿದನು. " ದೇವಿ, ಜನನಿಯೇ ! ನೀನು ಪ್ರಸನ್ನಳಾಗು. ನಿನ್ನ ಪುತ್ರನು ಭೃತ್ಯನು, ದಾಸನೂ ಆದ ನಾನು ಬಹು ರಾಜರೊಡನೆ ಜನನಿಗೆ ನಮಸ್ಕಾರ ಮಾಡುವೆನು " ಎಂದು ಹೇಳಿದನು. ನೆಲಕ್ಕೆ ಬಾಗಿ ನಮಸ್ಕರಿಸಿದ ಆ ಮಗನನ್ನು ನೋಡಿ ಮೋಹಿನಿಯು ಪತಿಯ ದಾಕ್ಷಿಣ್ಯದಿಂದ ಕುದುರೆಯಿಂದಿಳಿದು ನೆಲದಮೇಲೆ ಬಿದ್ದಿದ್ದ ಮಗನನ್ನೆಬ್ಬಿಸಿ ಬಾಹುಗಳಿಂದ ಆಲಿಂಗಿಸಿಕೊಂಡಳು.

ಪರಿಷ್ವಕ್ತಸ್ತದಾ ಮಾತ್ರಾ ಪುನರೇವಾಭ್ಯನಂದಯತ್ ।
ತತಸ್ತಾಂ ಸುಮನೋಜ್ಞೈಸ್ತು ಚಾರುವಸ್ತ್ರೈಶ್ಚ ಭೂಷಣೈಃ ॥ ೧೪ ॥

ಭೂಷಯಿತ್ವಾ ಸಮಾರೋಪ್ಯ ಪುನರೇವ ಹಯೋತ್ತಮಂ ।
ಸ್ವ ಪೃಷ್ಠೇ ಚರಣಂ ಕೃತ್ವಾ ತಸ್ಯಾ ರಾಜೀವಲೋಚನಃ ॥ ೧೫ ॥

ತೇನೈವ ವಿಧಿನಾ ಭೂಪ ಪಿತರಂ ಚಾನ್ವರೋಹಯತ್ ।
ಭೂಪಾಲೈಃ ಸಂವೃತೋ ಗಚ್ಛನ್ ಪದ್ಭ್ಯಾಂ ಧರ್ಮಾಂಗದಃ ಸುತಃ ॥ ೧೬ ॥

ಪ್ರಹರ್ಷಪುಲಕೋ ಹ್ಯಾಸೀಜ್ಜನನೀಂ ಪ್ರೇಕ್ಷ್ಯ ಮೋಹಿನೀಂ ।
ಸ್ತೂಯಮಾನಃ ಸ್ವಯಂ ಚಾಪಿ ಮೇಘಗಂಭೀರಯಾ ಗಿರಾ ॥ ೧೭ ॥

ಧನ್ಯಸ್ಯತನಯೋ ಲೋಕೇ ಮಾತರೋ ಯಸ್ಯ ಭೂರಿಶಃ ।
ನವಾ ನವತರಾ ಭಾರ್ಯಾಃ ಪಿತುರಿಷ್ಟಾ ಮನೋಹರಾಃ ॥ ೧೮ ॥

---

೧೪-೧೬. ಆಗ ತಾಯಿಯಿಂದಾಲಿಂಗಿತನಾದ ಧರ್ಮಾಂಗದನು ಬಹಳ ಸಂತೋಷಪಟ್ಟನು- ತರುವಾಯ ಆ ಮೋಹಿನೀ ದೇವಿಯನ್ನು ಅತ್ಯಂತ ಮನೋಹರವಾದ ದಿವ್ಯವಸ್ತ್ರಾಭರಣಗಳಿಂದಲಂಕರಿಸಿ ಪುನಃ ಶ್ರೇಷ್ಠವಾದ ಕುದುರೆಯ ಮೇಲೆ ಕೂಡಿಸಿ ಕಮಲದಂತೆ ನೇತ್ರಗಳುಳ್ಳ ಧರ್ಮಾಂಗದ ಕುಮಾರನು ಆ ಮೋಹಿನಿಯ ಪಾದವನ್ನು ತನ್ನ ಹಿಂಭಾಗದಲ್ಲಿಟ್ಟು ಅದೇ ವಿಧಾನದಿಂದ ತಂದೆಯನ್ನೂ ಸಹ ಕುದುರೆಯ ಮೇಲೆ ಕುಳ್ಳಿರಿಸಿದನು. ತಾನು ಭೂಪಾಲರಿಂದೊಡಗೂಡಿ ಕಾಲ್ನಡಗೆಯಿಂದ ಹೊರಟನು.

೧೭. ಅವನು ಜನನಿಯಾದ ಮೋಹಿನಿಯನ್ನು ನೋಡಿ ಆನಂದದಿಂದ ರೋಮಾಂಚಗೊಂಡು ಮೇಘದಂತೆ ಗಂಭೀರಧ್ವನಿಯಿಂದ ಸ್ವತಃ ಸ್ತೋತ್ರ ಮಾಡುವವನಾದನು.

೧೮. ಲೋಕದಲ್ಲಿ ಬಹುಮಾತೃಗಳಿರುವ ಪುತ್ರನು ಧನ್ಯನು. ತಂದೆಗೆ ನೂತನ ಅತಿನೂತನರಾದ, ಸೌಂದರ್ಯವುಳ್ಳ ಪತ್ನಿಯರು ಇಷ್ಟರಾಗಿರುವರು.

ಯಸ್ಯೈಕಾ ಜನನೀ ಲೋಕೇ ಪಿತಾ ತಸ್ಯೈವ ದುಃಖಭಾಕ್ ।
ಪಿತುರ್ದುಃಖೇನ ಕಿಂ ಸೌಖ್ಯಂ ಪುತ್ರಸ್ಯ ಹೃದಿ ವರ್ತತೇ ॥ ೧೯ ॥

ಏಕಸ್ಯಾ ವಂದನೇ ಮಾತುಃ ಪೃಥಿವೀಫಲಮುಚ್ಯತೇ ।
ಮಾತೄಣಾಂ ವಂದನೇ ಮಹ್ಯಂ ಮಹತ್ಪುಣ್ಯಂ ಭವಿಷ್ಯತಿ ॥ ೨೦ ॥

ತಸ್ಮಾದಭ್ಯಧಿಕಂ ಪುಣ್ಯಂ ಭವಿಷ್ಯತಿ ದಿನೇದಿನೇ ।
ಏವಮುಚ್ಚರಮಾಣೋಽಸೌ ರಾಜಭಿಃ ಪರಿವಾರಿತಃ ॥ ೨೧ ॥

ಪ್ರವಿಷ್ಟೋ ನಗರಂ ರಮ್ಯಂ ವೈದಿಶಂ ಋದ್ಧಿಸಂಯುತಂ ।
ಹಯಸ್ಥಃ ಪ್ರಯಯೌ ರಾಜಾ ಮೋಹಿನ್ಯಾ ಸಹ ತತ್ಕ್ಷಣಾತ್ ॥ ೨೨ ॥

ತತೋ ಗೃಹವರಂ ಪ್ರಾಪ್ಯ ಪೂಜ್ಯಮಾನೋ ಜನೈರ್ನೃಪಃ ।
ಅವರುಹ್ಯ ಹಯಾತ್ತಸ್ಮಾತ್ ಮೋಹಿನೀಂ ವಾಕ್ಯಮಬ್ರವೀತ್ ॥ ೨೩ ॥

---

೧೯. ಲೋಕದಲ್ಲಿ ಯಾವನಿಗೆ ಒಬ್ಬಳೇ ತಾಯಿಯಿರುವಳೋ ಅಂತ ಹವನ ತಂದೆಯು ದುಃಖಭಾಗಿಯಾಗುವನು.

೨೦. ಒಬ್ಬ ತಾಯಿಗೆ ನಮಸ್ಕಾರಮಾಡುವವನಿಗೇ ಭೂಮಂಡಲ ಪ್ರದಕ್ಷಿಣೆಯ ಫಲ ಬರುತ್ತದೆ. ಹೀಗಿರುವಾಗ ಬಹುತಾಯಿಯರಿಗೆ ನಮಸ್ಕರಿಸುವ ಅವಕಾಶ ದೊರೆತಿರುವುದರಿಂದ ನನಗೆ ಮಹಾಪುಣ್ಯವು ಬರುತ್ತದೆ.

೨೧-೨೨. ಬಹುತಾಯಿಯರಿಗೆ ನಮಸ್ಕಾರಮಾಡುವುದರಿಂದ ದಿನ ದಿನಕ್ಕೆ ಹೆಚ್ಚು ಹೆಚ್ಚಾಗಿ ಪುಣ್ಯಬರುತ್ತದೆ ಎಂದು ಹೇಳುತ್ತಾ ಅವನು ರಾಜರುಗಳಿಂದ ಪರಿವೃತನಾಗಿ ಮನೋಹರವೂ ಐಶ್ವರ್ಯಯುತವೂ ಆದ ವಿದಿಶ ನಗರವನ್ನು ಪ್ರವೇಶಿಸಿದನು. ಕುದುರೆಯ ಮೇಲೆ ಕುಳಿತಿದ್ದ ರುಕ್ಮಾಂಗದ ರಾಜನು ಕೂಡಲೇ ಮೋಹಿನಿಯೊಡನೆ ಪ್ರಯಾಣಮಾಡಿದನು.

೨೩. ಅನಂತರ ದೊರೆಯು ಉತ್ತಮವಾದ ಅರಮನೆಗೆ ಬಂದು ಜನಗಳಿಂದ ಸತ್ಕರಿಸಲ್ಪಟ್ಟವನಾಗಿ ಕುದುರೆಯಿಂದಿಳಿದು ಮೋಹಿನಿಯನ್ನು ಕುರಿತು ಹೇಳಿದನು.

ಧರ್ಮಾಂಗದಸ್ಯ ಪುತ್ರಸ್ಯ ಗೃಹೇ ಗಚ್ಛ ಮನೋಹರೇ ।
ಏಷ ತೇ ಗುರುಶುಶ್ರೂಷಾಂ ಕರಿಷ್ಯತಿ ಯಥಾಗುಣಂ ॥ ೨೪ ॥

ನ ಸಖೀ ನೈವ ದಾಸೀ ತೇ ಶುಶ್ರೂಷಾಮಾಚರೇದಿತಿ ।
ಸಾ ಚೈವಮುಕ್ತಾ ಪತ್ಯಾ ತು ಪ್ರಸ್ಥಿತಾ ಸುತಮಂದಿರಂ ॥ ೨೫ ॥

ಧರ್ಮಾಂಗದೇನ ಸಾ ದೃಷ್ಟ್ವಾ ಗಚ್ಛಂತೀ ಮಂದಿರಾಯ ವೈ ।
ಪೂಜ್ಯಾಂ ತಾಂ ಮಾತರಂ ದೃಷ್ಟ್ವಾ ಪ್ರೋವಾಚ ಸ ಮಹೀಪತೀನ್ ॥೨೬॥

ತಿಷ್ಠಧ್ವಂ ಪಿತುರಾದೇಶಾದಿಮಾಂ ಶುಶ್ರೂಷಯೇ ಹ್ಯಹಂ ।
ಸ ಏವಮುಕ್ತ್ವಾ ಗತ್ವಾ ತು ಬಾಹುಭ್ಯಾಂ ಪರಿಗೃಹ್ಯ ವೈ ।
ಕ್ರಮೇ ಪಂಚದಶೇ ಪ್ರಾಪ್ತೇ ಪರ್ಯಂಕೇ ತ್ವವರೋಪಯತ್ ॥ ೨೭ ॥

ಕಾಂಚನೇ ಪಟ್ಟಸೂತ್ರೇಣ ರಚಿತೇ ಕೋಮಲೇ ದೃಢೇ ।
ಮೃದ್ವಾಸ್ತರಣಸಂಯುಕ್ತೇ ಮಣಿರತ್ನವಿಭೂಷಿತೇ ॥ ೨೮ ॥

---

೨೪-೨೫. ಮನೋಹರಳಾದ ಮೋಹಿನಿಯೇ! ಪುತ್ರನಾದ ಧರ್ಮಾಂಗದನ ಮನೆಗೆ ಹೋಗು. ಈ ಪುತ್ರನು ನಿನ್ನ ಗುಣಕ್ಕನುಸಾರವಾಗಿ ನಿನಗೆ ಗುರುಶುಶ್ರೂಷೆಯನ್ನು ಮಾಡುವನು.

ಸಖೀ, ದಾಸಿಯರು ಇವರಾರೂ ನಿನಗೆ ಈ ರೀತಿ ಸೇವೆಯನ್ನು ಮಾಡಲಾರರು ಎಂದು ಹೇಳಿದ ರುಕ್ಮಾಂಗದನ ಮಾತನ್ನು ಕೇಳಿ ಮೋಹಿನಿಯು ಮಗನ ಮನೆಗೆ ಹೊರಟಳು.

೨೬. ಧರ್ಮಾಂಗದನು ತನ್ನ ಮನೆಗೆ ಬರುತ್ತಿರುವ, ಪೂಜ್ಯಳಾದ, ಆ ತಾಯಿಯನ್ನು ನೋಡಿ ಹತ್ತಿರದಲ್ಲಿದ್ದ ರಾಜರನ್ನು ಕುರಿತು ಹೀಗೆ ಹೇಳಿದನು.

೨೭-೨೮. ರಾಜರೇ! ನೀವು ನಿಲ್ಲಿ. ತಂದೆಯ ಅಪ್ಪಣೆಯ ಪ್ರಕಾರ ಈ ಮೋಹಿನಿಯನ್ನು ಸೇವಿಸುವೆನು ಎಂಬುದಾಗಿ ಹೇಳಿ ಧರ್ಮಾಂಗದನು

ರತ್ನದೀಪೈಶ್ಚ ಬಹುಶಃ ಖಚಿತೇ ಸೂರ್ಯಸಪ್ರಭೇ ।
ತತಃ ಪಾದೋದಕಂ ಚಕ್ರೇ ಮೋಹಿನ್ಯಾ ಧರ್ಮಭೂಷಣಃ ॥ ೨೯ ॥

ಸಂಧ್ಯಾವಲ್ಯಾ ಗುರುತ್ವೇನ ಹ್ಯಪಶ್ಯತ್ತಾಂ ನೃಪಾತ್ಮಜಃ ।
ನೈವಮಸ್ಯಾಭವದ್ದುಷ್ಟಂ ಮನಸ್ತಾಂ ಮೋಹಿನೀಂ ಪ್ರತಿ ॥ ೩೦ ॥

ಸುಕುಮಾರೋಽಪಿ ತನ್ವಂಗೀಂ ಪೀನೋರುಜಘನಸ್ತನೀಂ ।
ಮೇನೇ ವರ್ಷಾಧಿಕ್ಯೈರ್ಯುಕ್ತೋಽಪ್ಯಾತ್ಮಾನಂ ಚ ತ್ರಿವತ್ಸರಂ ॥ ೩೧ ॥

ಪ್ರಕ್ಷಾಲ್ಯ ಚರಣೌ ತಸ್ಯಾಸ್ತಜ್ಜಲಂ ಶಿರಸಿ ನ್ಯಧಾತ್ ।
ಉವಾಚಾವನತೋ ಭೂತ್ವಾ ಸುಕೃತೀ ಮಾತರಸ್ಮ್ಯಹಂ ॥ ೩೨ ॥

---

ಮೋಹಿನಿಗೆ ಅಭಿಮುಖನಾಗಿ ಹೋಗಿ ಆಕೆಗೆ ಹಸ್ತಲಾಘವನ್ನು ಕೊಟ್ಟು ಕ್ರಮವಾಗಿ ಐದನೆಯ ಅಂತರ್ಗೃಹವು ಪ್ರಾಪ್ತವಾಗಲು ಅಲ್ಲಿ ಪಟ್ಟಸೂತ್ರಗಳಿಂದ ರಚಿತವು, ಮನೋಹರವು, ದೃಢವು, ಮೃದುವಾದ ಹಾಸಿಗೆಯಿಂದ ಕೂಡಿದುದು, ಮಣಿ ರತ್ನಗಳಿಂದಲಂಕೃತವು, ಬಹಳವಾಗಿ ದೀಪಗಳಂತೆ ಹೊಳೆಯುತ್ತಿರುವ ರತ್ನಖಚಿತವು, ಸೂರ್ಯನಂತೆ ಹೊಳೆಯುತ್ತಿರುವುದೂ ಆದ ಸುವರ್ಣಮಂಚದಲ್ಲಿ ಆಕೆಯನ್ನು ಕರೆತಂದು ಕೂಡಿಸಿದನು. ಅನಂತರ ಧರ್ಮಿಷ್ಠನಾದ ಧರ್ಮಾಂಗದನು ಮೋಹಿನಿಯ ಪಾದಪ್ರಕ್ಷಾಳನೆ ಮಾಡಿ ಆ ಉದಕವನ್ನು ಪ್ರೋಕ್ಷಿಸಿಕೊಂಡನು.

೩೦-೩೧ ರಾಜಪುತ್ರನು ಆ ಮೋಹಿನಿಯನ್ನು ಜನನಿಯಾದ ಸಂಧ್ಯಾವಳಿಗಿಂತಲೂ ಹೆಚ್ಚಾಗಿ ನೋಡುತ್ತಿದ್ದನು. ಕೃಶಾಂಗಿಯು, ಪುಷ್ಟವಾಗಿ ಉತ್ತಮವಾಗಿರುವ ಕಟಿಪಶ್ಚಾದ್ಭಾಗ ಮತ್ತು ಸ್ತನಗಳುಳ್ಳವಳೂ ಆಗಿರುವ ಆ ಮೋಹಿನಿಯ ವಿಷಯದಲ್ಲಿ ಇವನಿಗೆ ದುಷ್ಟಮನೋಭಾವವುಂಟಾಗಲಿಲ್ಲ. ಸುಕುಮಾರನಾದ ಧರ್ಮಾಂಗದನು ಹೆಚ್ಚು ವಯಸ್ಸಾದವನಾದರೂ ತನ್ನನ್ನು ಮೂರು ವರ್ಷದ ಶಿಶುವಿನಂತೆ ಭಾವಿಸಿದನು.

೩೨. ಆಕೆಯ ಕಾಲುಗಳನ್ನು ತೊಳೆದು ಆ ನೀರನ್ನು ತಲೆಯ ಮೇಲೆ ಹಾಕಿಕೊಂಡನು. ಅನಂತರ ಬಗ್ಗಿ ವಿನಯದಿಂದ ತಾಯಿಯೇ! ನಾನು ಸುಕೃತಿಯಾದೆನೆಂದು ಹೇಳಿದನು.

ಇತ್ಯುಕ್ತ್ವಾ ನರನಾರೀಭಿಃ ಸ್ವಯಂ ಚ ಶ್ರಮನಾಶನಂ ।
ಚಕಾರ ಸರ್ವಭೋಗೈಸ್ತಾಂ ಯುಯೋಜ ಚ ಮುದಾನ್ವಿತಃ ॥ ೩೩ ॥

ಕ್ಷೀರೋದಮಥನೇ ಜಾತೇ ಕುಂಡಲೇ ಚಾಮೃತಸ್ರವೇ ।
ಯೇ ಲಬ್ಧೇ ದಾನವಾಂಜಿತ್ವಾ ಪಾತಾಲೇ ಧರ್ಮಮೂರ್ತಿನಾ ॥ ೩೪ ॥

ಮೋಹಿನ್ಯಾ ಕರ್ಣಯೋಶ್ಚಕ್ರೇ ಸ್ವಯಮೇವ ವೃಷಾಂಗದಃ ।
ಅಷ್ಟೋತ್ತರಸಹಸ್ರೈಶ್ಚ ಧಾತ್ರೀಫಲನಿಭೈಃ ಶುಭೈಃ ॥ ೩೫ ॥

ಮೌಕ್ತಿಕೈ ರಚಿತೈಃ ಶುಭ್ರೈರ್ಹಾರೋ ದೇವ್ಯಾಃ ಕೃತೋ ಹೃದಿ ।
ನಿಷ್ಕಂ ಪಲಶತಂ ಸ್ವರ್ಣಂ ಕುಲಿಶಾಯುತಭೂಷಿತಂ ॥ ೩೬ ॥

ಹಾರಂ ಲಘೂತ್ತರಂ ಚಕ್ರೇ ಮಾತುರ್ನೃಪಸುತಸ್ತದಾ ।
ವಲಯಾ ವಜ್ರಖಚಿತಾ ದ್ವಿರಷ್ಟಾ ಕರಯೋರ್ದ್ವಯೋಃ ॥ ೩೭ ॥

---

೩೩. ಹೀಗೆ ಹೇಳಿ ಸ್ತ್ರೀಪುರುಷರಿಂದ ಸಹಿತನಾಗಿ ತಾನು ಆಕೆಗೆ ಶ್ರಮಪರಿಹಾರ ಮಾಡಿ ಸಂತೋಷದಿಂದ ಸಕಲಭೋಗಗಳನ್ನೂ ಒದಗಿಸಿ ಕೊಟ್ಟನು.

೩೪-೩೭. ನೃಪಸುತನು ಆಗ ಕ್ಷೀರಸಾಗರವನ್ನು ಮಥನಮಾಡಿದ ಕಾಲದಲ್ಲಿ ಹುಟ್ಟಿದ, ಅಮೃತವನ್ನು ಸುರಿಸುತ್ತಿರುವ, ಪಾತಾಲದಲ್ಲಿ ದಾನವರನ್ನು ಜಯಿಸಿ ಧರ್ಮಮೂರ್ತಿಯು ಸಂಪಾದಿಸಿದ್ದ ಕುಂಡಲಗಳನ್ನು ತಾನೇ ಮೋಹಿನಿಯ ಕಿವಿಗಳಿಗೆ ಇಟ್ಟನು. ನೆಲ್ಲಿಯ ಕಾಯಿನಷ್ಟು ದಪ್ಪವಾಗಿ ಪ್ರಕಾಶಮಾನವಾದ ಸಾವಿರದೆಂಟು ಒಳ್ಳೆಯ ಮುತ್ತುಗಳಿಂದ ಮಾಡಿದ ಹಾರವನ್ನು ದೇವಿಯ ಕುತ್ತಿಗೆಗೆ ಹಾಕಿದನು. ನೂರು ಪಲ ಸುವರ್ಣ, ಹತ್ತು ಸಾವಿರ ವಜ್ರ, ಇವುಗಳಿಂದ ಭೂಷಿತವಾದ, ಎದೆಯಲ್ಲಿ ಧರಿಸುವ ಹಾರವನ್ನು ತಾಯಿಯ ಕೊರಳಿಗೆ ಹಾಕಿದನು. ಒಂದೊಂದು ಕೈಗೆ ಎಂಟೆಂಟರಂತೆ ಹದಿನಾರು ವಜ್ರ ಖಚಿತವಾದ ಬಳೆಗಳನ್ನು ಎರಡು ಕೈಗಳಿಗೂ ತೊಡಿಸಿದನು.

ಏಕೈಕೇ ನಿಷ್ಕಕೋಟೇಭಿರ್ಮೂಲ್ಯವಿದ್ಭಿರ್ನರೈಃ ಕೃತಾಃ |
ಕೇಯೂರನೂಪುರೌ ತಸ್ಯಾ ಅನರ್ಘ್ಯೌ ಸ ನೃಪಾತ್ಮಜಃ || ೩೮ ||

ಪ್ರದದೌ ಪಿತುರಿಷ್ಟಾಯಾ ಭೂಷಣಾರ್ಥಂ ರವಿಪ್ರಭೌ |
ಕಟಿಸೂತ್ರಂ ತು ಶರ್ವಾಣ್ಯಾ ಯದಾಸೀತ್ಪಾವಕಪ್ರಭಂ || ೩೯ ||

ತದ್ಭ್ರಷ್ಟಂ ಭಯಭೀತಾಯಾಃ ಸಂಗ್ರಾಮೇ ತಾರಕಾಮಯೇ |
ಕಾಲನೇಮೌ ಸ್ಥಿತೇ ರಾಜ್ಯೇ ಪತಿತಂ ಮಲಯಾಚಲೇ || ೪೦ ||

ತದ್ಗೃಹೀತಂ ತು ದೈತ್ಯೇನ ಮಯೇನ ಲೋಕಮಾಯಿನಾ |
ತಂ ಹತ್ವಾ ಮಲಯೇ ದೈತ್ಯಂ ದೈತ್ಯಕೋಟಿಸಮಾವೃತಂ || ೪೧ ||

ಸಂವತ್ಸರರಣೇ ಘೋರೇ ಪಿತುರ್ವಚನಕಾರಣಾತ್ |
ಅವಾಪ ಕಟಿಸೂತ್ರಂ ತು ದೈತ್ಯರಾಜಪ್ರಿಯಾಸ್ಥಿತಂ || ೪೨ ||

---

೩೮-೪೬. ಅವು ಮೂಲ್ಯವನ್ನರಿತ ಜನರಿಂದ ಮಾಡಲ್ಪಟ್ಟು ಒಂದೊಂದು ಕೋಟಿ ನಿಷ್ಕ ತೂಕವುಳ್ಳದಾಗಿದ್ದುವು.

ಸೂರ್ಯನಂತೆ ಹೊಳೆಯುತ್ತಿರುವ ಅನರ್ಘ್ಯವಾದ ಬಾಹ್ವಾಭರಣ ಪಾದಾಭರಣಗಳನ್ನೂ ಸಹ ತಂದೆಗೆ ಇಷ್ಟಳಾದ ಮೋಹಿನೀ ದೇವಿಗೆ ಅಲಂಕರಣಾರ್ಥವಾಗಿ ಕೊಟ್ಟನು.

ಈಶ್ವರನು ತಾರಕಾಸುರನೊಡನೆ ಘೋರಯುದ್ಧಮಾಡುತ್ತಿರುವಾಗ ಅವನ ಪತ್ನಿಯಾದ ಪಾರ್ವತಿಯು ಭಯಪಟ್ಟುದರಿಂದ ಅಗ್ನಿಯಂತೆ ಹೊಳೆಯುತ್ತಿದ್ದ ದೇವಿಯ ಕಟಿಸೂತ್ರವು (ಡಾಬು) ಬಿದ್ದುಹೋಯಿತು. ಹಾಗೆಯೇ ಮಲಯಾಚಲದಲ್ಲಿ ಬಿದ್ದಿದ್ದ ಕಟಿಸೂತ್ರವನ್ನು ಕಾಲನೇಮಿಯು ರಾಜ್ಯಭಾರ ಮಾಡುತ್ತಿದ್ದಾಗ ಲೋಕಮಾಯಿಯಾದ ಮಯಾಸುರನು ತೆಗೆದುಕೊಂಡನು. ತಂದೆಯ ಅಪ್ಪಣೆಯಂತೆ ಧರ್ಮಾಂಗದನು ಕೋಟಿದೈತ್ಯರಿಂದ ಪರಿವೃತನಾದ ಆ ದೈತ್ಯನನ್ನು ಎದುರಿಸಿ ಒಂದು ವರ್ಷಕಾಲ ಘೋರಯುದ್ಧ ಮಾಡಿ ಅವನನ್ನು ಸಂಹರಿಸಿ ಅವನ ಭಾರ್ಯೆಯು ಧರಿಸಿದ್ದ ಆ ಕಟಸೂತ್ರವನ್ನು ಪಡೆದಿದ್ದನು. ಅದನ್ನೂ

ತದ್ದದೌ ಪಿತುರಿಷ್ಟಾಯೈಃ ಸಾನಂದಪುಲಕೋ ನೃಪಃ ।
ಹಿರಣ್ಯಕಶಿಪೋಃ ಪೂರ್ವಂ ಯಾ ಭಾರ್ಯಾ ಲೋಕಸುಂದರೀ ॥ ೪೩ ॥

ತಸ್ಯಾಃ ಸೀಮಂತಕಶ್ಚಾಸೀತ್ ಸೌದಾಮಿನಿಸಮಪ್ರಭಃ ।
ಸಾ ಪ್ರವಿಷ್ಟಾ ಸಮಂ ಪತ್ಯಾ ಯದಾ ಪಾವಕಮಂಗಲಾ ॥ ೪೪ ॥

ಸಮುದ್ರೇ ಕ್ಷಿಪ್ಯ ಸೀಮಂತಂ ದುಃಖೇನ ಮಹತಾನ್ವಿತಾ ।
ಸಾಗರಸ್ತತ್ತು ಸಂಗೃಹ್ಯ ರತ್ನಶ್ರೇಷ್ಠಯುಗಂ ಕಿಲ ॥ ೪೫ ॥

ದದೌ ಧರ್ಮಾಂಗದಾಯಾಥ ತಸ್ಯ ವೀರ್ಯೇಣ ತೋಷಿತಃ ।
ಜನನ್ಯಾಃ ಪ್ರದದೌ ಹೃಷ್ಟಃ ಸೂರ್ಯಕೋಟಿಸಮಪ್ರಭಂ ॥ ೪೬ ॥

ಅಗ್ನಿಶೌಚೇ ಶುಭೇ ವಸ್ತ್ರೇ ಕಂಚುಕೇ ಸುಮನೋಹರೇ ।
ಸಹಸ್ರಕೋಟಿಮೂಲ್ಯೇ ತೇ ಮೋಹಿನ್ಯಾಃ ಸಂನ್ಯವೇದಯತ್ ॥ ೪೭ ॥

---

ತಂದೆಗಿಷ್ಟಳಾದ ಮೋಹಿನಿಗೆ ಕೊಟ್ಟನು. ದೊರೆಯು ಆನಂದದಿಂದ ರೋಮಾಂಚವನ್ನು ಹೊಂದಿದನು.

ಪೂರ್ವದಲ್ಲಿ ಲೋಕಸುಂದರಿಯಾದ ಹಿರಣ್ಯಕಶಿಪುವಿನ ಭಾರ್ಯೆಯು ಮಿಂಚಿನಂತೆ ಕಾಂತಿಯುತವಾದ ಹೆರಳುಬಂಗಾರವನ್ನು ಧರಿಸಿದ್ದಳು. ಆಕೆಯ ಪತಿಯು ಹತನಾದಾಗ ಬಹುದುಃಖದಿಂದ ಕೂಡಿದವಳಾಗಿ ಆ ರತ್ನಖಚಿತವಾದ ಹೆರಳುಬಂಗಾರವನ್ನು ಸಮುದ್ರದಲ್ಲಿ ಎಸೆದು ಪತಿಯೊಡನೆ ಅಗ್ನಿಯನ್ನು ಪ್ರವೇಶಿಸಿದಳು. ಸಮುದ್ರರಾಜನು ಅದನ್ನು ಸಂಗ್ರಹಿಸಿಟ್ಟಿದ್ದು ಧರ್ಮಾಂಗದನ ಪರಾಕ್ರಮಕ್ಕೆ ಸಂತೋಷಪಟ್ಟು ಶ್ರೇಷ್ಠರತ್ನದ್ವಯದಿಂದ ಸಹಿತವಾದ ಅದನ್ನು ಧರ್ಮಾಂಗದನಿಗೆ ಕೊಟ್ಟನು. ಅವನು ಕೋಟಿಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ ಆ ಸೀಮಂತನನ್ನು ಜನನಿಗೆ ಕೊಟ್ಟನು.

೪೭. ಅಗ್ನಿಯಂತೆ ಪರಿಶುದ್ಧವಾದ, ಸಾವಿರಕೋಟಿ ಬೆಲೆ ಬಾಳುವ, ಅತ್ಯಂತ ಮನೋಹರವಾದ ಒಳ್ಳೆಯ ಸೀರೆ ಕುಪ್ಪಸಗಳನ್ನು ಮೋಹಿನೀ ದೇವಿಗೆ ಸಮರ್ಪಿಸಿದನು.

ದೇವಮಾಲ್ಯಂ ಸುಗಂಧಾಢ್ಯಂ ತಥಾ ದೇವವಿಲೇಪನಂ ।
ಸರ್ವದೇವಗುರೋಃ ಪೂರ್ವಂ ಸಿದ್ಧಹಸ್ತಾತ್ ಸುದುರ್ಲಭಂ ॥ ೪೮ ॥

ಧರ್ಮಾಂಗದೇನ ವೀರೇಣ ದ್ವೀಪಾನಾಂ ವಿಜಯೇ ಯಥಾ ।
ಲಬ್ಧಂ ತತ್ ಪ್ರದದೌ ದೇವ್ಯಾ ಮೋಹಿನ್ಯಾಃ ಕಾಮವರ್ಧನಂ ॥ ೪೯ ॥

ಸಂಭೂಷ್ಯ ಪರಯಾ ಭಕ್ತ್ಯಾ ಪಶ್ಚಾತ್ ಷಡ್ರಸಭೋಜನಂ ।
ಆನೀತಂ ಮಾತೃಹಸ್ತೇನ ಭೋಜಯಾಮಾಸ ಭೂಮಿಪ ॥ ೫೦ ॥

ಪುರಸ್ತಾದೇವ ಜನನೀಂ ವಾಕ್ಯೈಃ ಸಂಬೋಧ್ಯ ಭೂರಿಶಃ ।
ಮಯಾ ತ್ವಯಾ ಚ ಕರ್ತವ್ಯಂ ರಾಜ್ಞೋ ವಾಕ್ಯಂ ನ ಸಂಶಯಃ ॥ ೫೧ ॥

ಯಾ ಇಷ್ಟಾ ನೃಪತೇರ್ದೇವಿ ಸಾಸ್ಮಾಕಂ ಹಿ ಗರೀಯಸೀ ।
ಇಷ್ಟಾಯಾ ಭೂಪತೇರ್ಭರ್ತುಸ್ತಸ್ಯಾ ಯಾ ದುಷ್ಟಮಾಚರೇತ್ ॥ ೫೨ ॥

---

೪೮-೪೯. ಪರಾಕ್ರಮಶಾಲಿಯಾದ ಧರ್ಮಾಂಗದನು ಪೂರ್ವದಲ್ಲಿ ದ್ವೀಪಗಳನ್ನು ಜಯಿಸಿದ ಕಾಲದಲ್ಲಿ ಸಿಕ್ಕಿದ್ದ, ಸಕಲದೇವತೆಗಳ ಗುರುವಿಗೂ ಸಹ ಸಿದ್ಧಹಸ್ತದಿಂದ ಅತ್ಯಂತ ದುರ್ಲಭವಾದ, ಸುವಾಸನೆಯಿಂದ ತುಂಬಿದ, ಕಾಮವನ್ನು ವೃದ್ಧಿಗೊಳಿಸುವ, ದೇವ ಯೋಗ್ಯ ಮಾಲಿಕೆ ಮತ್ತು ಗಂಧಗಳನ್ನು ಮೋಹಿನೀದೇವಿಗೆ ಕೊಟ್ಟನು.

೫೦. ಈ ರೀತಿಯಾಗಿ ಅಲಂಕರಿಸಿ, ಬಳಿಕ ಮಾತೃಹಸ್ತದಿಂದ ತರಲ್ಪಟ್ಟ ಷಡ್ರಸಯುಕ್ತ ಮೃಷ್ಟಾನ್ನವನ್ನು ಉತ್ಕೃಷ್ಟಭಕ್ತಿಯಿಂದ ಭೋಜನ ಮಾಡಿಸಿದನು.

೫೧. ಸಾಕ್ಷಾತ್ತಾಗಿ ತನ್ನ ತಾಯಿಯನ್ನು ವಚನಗಳಿಂದ ಸಂಬೋಧಿಸಿ, ನಾನೂ ನೀನೂ ಸಹ ಬಹಳವಾಗಿ ರಾಜನ ಮಾತನ್ನು ನಡೆಯಿಸಬೇಕು. ಸಂದೇಹವಿಲ್ಲ.

೫೨-೫೪. ದೇವಿಯೇ ! ರಾಜನಿಗೆ ಇಷ್ಟವಾದುದೇ ನಮಗೆ ದೊಡ್ಡದು. ಅವನಿಗೆ ಇಷ್ಟಳಾದ ಆಕೆಗೆ ದ್ರೋಹವಮಾಡುವ ಪತ್ನಿಯು ಹದಿನಾಲ್ಕು ಇಂದ್ರ

ಸಾ ಪತ್ನೀ ನರಕಂ ಯಾತಿ ಯಾವದಿಂದ್ರಾಶ್ಚತುರ್ದಶ ।
ಸಾಪತ್ನ್ಯಭಾವಂ ಯಾ ಕುರ್ಯಾದ್ಭರ್ತೃಸ್ನೇಹೇಷ್ಟಯಾ ಸಹ ॥ ೫೩ ॥

ತಸ್ಯಾಃ ಸ್ನೇಹವಿಯೋಗಾರ್ಥಂ ತಪ್ಯತೇ ತಾಮ್ರಭ್ರಾಷ್ಟ್ರಕೇ ।
ಯಥಾ ಸುಖಂ ಭವೇದ್ಭರ್ತುಸ್ತಥಾ ಕಾರ್ಯಂ ಹಿ ಭಾರ್ಯಯಾ ॥ ೫೪ ॥

ಅನುಕೂಲಂ ಹಿತಂ ತಸ್ಯಾ ಇಷ್ಟಾಯಾ ಭರ್ತೃರಾಚರೇತ್ ।
ಯಥಾ ಭರ್ತಾ ತಥಾ ತಾಂ ಹಿ ಪಶ್ಯೇತ ವರವರ್ಣಿನಿ ॥ ೫೫ ॥

ಹೀನಾಯಾಶ್ಚಾಪಿ ಶುಶ್ರೂಷಾಂ ಕೃತ್ವಾ ಯಾತಿ ತ್ರಿವಿಷ್ಟಪಂ ।
ಪಶ್ಚಾತ್ ಸ್ಥಾನೇ ಭವೇತ್ಸಾಪಿ ಮನಸಾ ಯಾಭವತ್ಪ್ರಿಯೇ ॥ ೫೬ ॥

ಸರ್ವಾನ್ಭೋಗಾನವಾಪ್ನೋತಿ ಭರ್ತುರಿಷ್ಟಂ ಪ್ರಗೃಹ್ಯ ಹಿ ।
ಈರ್ಷ್ಯಾಭಾವಪರಿತ್ಯಾಗಾತ್ಸರ್ವೇಶ್ವರಪದಂ ಲಭೇತ್ ॥ ೫೭ ॥

---

ರಿರುವಷ್ಟುಕಾಲ ನರಕವಾಸಮಾಡಬೇಕಾಗುವುದು. ಗಂಡನಿಗೆ ಪ್ರಿಯಳಾದ ಆ ಮೋಹಿನಿಯನ್ನು ಓಡಿಸುವುದಕ್ಕೋಸ್ಕರ ಅವಳೊಡನೆ ಸವತೀಮಾತ್ಸರ್ಯವನ್ನಿಡುವವಳು ನರಕಕ್ಕೆ ಹೋಗಿ ತಾಮ್ರದ ಬಾಂಡಲೆಯಲ್ಲಿ ದಹಿಸಲ್ಪಡುವಳು. ಗಂಡನಿಗೆ ಸುಖವಾಗುವ ರೀತಿಯಲ್ಲಿ ಪತ್ನಿಯು ಆಚರಿಸಬೇಕು.

೫೫. ವರವರ್ಣಿನಿ! ಪತಿಪ್ರಿಯಳಾದ ಆಕೆಗೆ ಹಿತವೂ ಮತ್ತು ಅನುಕೂಲವೂ ಆದುದನ್ನೇ ಆಚರಿಸಬೇಕು. ಪತಿಯು ಆಕೆಯನ್ನು ನೋಡುವಂತೆಯೇ ನೀನೂ ನೋಡಬೇಕು.

೫೬. ಹೀನಳಾಗಿದ್ದರೂ ಸಪತ್ನಿಯ ಸೇವೆಯನ್ನು ಮಾಡಿದರೆ ಸ್ವರ್ಗಲೋಕಪ್ರಾಪ್ತಿಯಾಗುವುದು. ಅನಂತರವೂ ಪತಿಯಲ್ಲಿ ಮನಃಪೂರ್ವಕ ವಿಶ್ವಾಸವಿಟ್ಟಿರುವ ಪತ್ನಿಯು ಉತ್ತಮ ಸ್ಥಾನವನ್ನು ಪಡೆಯುವಳು.

೫೭- ಪತಿಯ ಇಷ್ಟವನ್ನು ತಿಳಿದು ಅದರಂತೆ ನಡೆದರೆ ಸಕಲ ಭೋಗಗಳನ್ನೂ ಪಡೆಯುವಳು. ಅಸೂಯೆಯ ಭಾವನೆಯನ್ನು ಬಿಟ್ಟುದರಿಂದ ಸರ್ವೇಶ್ವರನ ಸ್ಥಾನವು ಲಭಿಸುವುದು.

ಸಪತ್ನೀ ಯಾ ಸಪತ್ನ್ಯಾಸ್ತು ಶುಶ್ರೂಷಾಂ ಕುರುತೇ ಸದಾ ।
ಭರ್ತುರಿಷ್ಟಾಂ ಸಂನಿರೀಕ್ಷ್ಯ ತಸ್ಯಾ ಲೋಕೇಽಕ್ಷಯೋ ಭವೇತ್ ॥ ೫೮ ॥

ಭರ್ತುರಿಷ್ಟಾ ಪುರಾ ವೇಶ್ಯಾ ಹ್ಯಭವತ್ಸಾ ಕುಲೇಷು ವೈ ।
ಶೂದ್ರಜಾತೇಃ ಸುದುಷ್ಟಸ್ಯ ಪರಿತ್ಯಕ್ತಕ್ರಿಯಸ್ಯ ತು ॥ ೫೯ ॥

ಆಚರದ್ವೇಶ್ಯಯಾ ಸಾರ್ಧಂ ಸಾ ಭಾರ್ಯಾ ಪತಿರಂಜಿನೀ ।
ಪ್ರಕ್ಷಾಲನಂ ದ್ವಯೋಃ ಪಾದೌ ದ್ವಯೋರುಚ್ಛಿಷ್ಟಭೋಜಿನೀ ॥ ೬೦ ॥

ಉಭಯೋರಪ್ಯಧಃ ಶೇತೇ ಉಭಯೋರ್ನೈ ಹಿತೇ ರತಾ ।
ವೇಶ್ಯಯಾ ವಾರ್ಯಮಾಣಾಪಿ ಸದಾಚಾರಪಥೇ ಸ್ಥಿತಾ ॥ ೬೧ ॥

ಏವಂ ಶುಶ್ರೂಷಯಂತ್ಯಾ ಹಿ ಭರ್ತಾರಂ ವೇಶ್ಯಯಾ ಸಹ ।
ಜಗಾಮ ಸುಮಹಾನ್ಕಾಲೋ ವರ್ತಂತ್ಯಾ ದುಃಖಸಾಗರೇ ॥ ೬೨ ॥

---

೫೮. ಸೌತಿಯು ಗಂಡನ ಇಷ್ಟವನ್ನು ಗ್ರಹಿಸಿ ಅದರಂತೆ ಸವತಿಯ ಶುಶ್ರೂಷೆಯನ್ನು ಯಾವಾಗಲೂ ಮಾಡುವವಳಿಗೆ ಶಾಶ್ವತಲೋಕವು ಲಭಿಸುವುದು.

೫೯. ಪೂರ್ವದಲ್ಲಿ ಶೂದ್ರಜಾತಿಗೆ ಸೇರಿದ, ಅತ್ಯಂತ ದುಷ್ಟನಾದ ವಿಹಿತಕ್ರಿಯೆಗಳನ್ನು ಬಿಟ್ಟಿದ್ದ, ಪತಿಗೆ ಸೂಳೆಯೊಬ್ಬಳು ಇಷ್ಟಳಾಗಿಯೂ ಕುಲಾಂಗನೆಯು ಪತ್ನಿಯಾಗಿಯೂ ಇದ್ದರು.

೬೦-೬೧. ಆ ಪತ್ನಿಯು ವೇಶ್ಯೆ ಮತ್ತು ಆ ಪತಿಯ ಪಾದಗಳನ್ನು ತೊಳೆಯುತ್ತಾ, ಅವರಿಬ್ಬರ ಉಚ್ಛಿಷ್ಟಭೋಜನಮಾಡುವವಳಾಗಿ ವೇಶ್ಯೆಯ ಸಹಿತವಾಗಿ ಪತಿಯನ್ನು ಸಂತೋಷಪಡಿಸುತ್ತಿದ್ದಳು. ಅವರಿಬ್ಬರಿಗೂ ಅನುಕೂಲಮಾಡುತ್ತಾ ಅವರಿಬ್ಬರ ಕೆಳಗೆ ಮಲಗುತ್ತಿದ್ದಳು. ಸೂಳೆಯು ತಡೆಯುತ್ತಿದ್ದರೂ ಆಕೆಯು ಸದಾಚಾರಮಾರ್ಗದಲ್ಲಿಯೇ ಇದ್ದಳು.

೬೨. ಈ ರೀತಿಯಾಗಿ ಗಂಡನನ್ನು ವೇಶ್ಯೆಯ ಸಹಿತವಾಗಿ ಸೇವಿಸುತ್ತಾ, ದುಃಖವೆಂಬ ಸಮುದ್ರದಲ್ಲಿ ಮುಳುಗಿಯೇ ಅವಳಿಗೆ ಬಹುಕಾಲವು ಕಳೆಯಿತು.

ಅಪರಸ್ಮಿನ್ ದಿನೇ ಭರ್ತಾ ಮಾಹಿಷಂ ಶೂಲಕಾನ್ವಿತಂ |
ಅಭಕ್ಷಯತ ನಿಷ್ಪಾವಂ ದುರ್ಮೇಧಾಸ್ತೈಲಮಿಶ್ರಿತಂ || ೬೩ ||

ತದಪಥ್ಯಭುಜಸ್ತಸ್ಯ ಅವಮನ್ಯ ಪತಿವ್ರತಾಂ |
ಅಭವದ್ದಾರುಣೋ ರೋಗೋ ಗುದೇ ತಸ್ಯ ಭಗಂದರಃ || ೬೪ ||

ಸಂದಹ್ಯಮಾನೋತಿತರಾಂ ದಿವಾರಾತ್ರೌ ಸ ಭೂರಿಶಃ |
ತಸ್ಯ ಗೇಹೇ ಸ್ಥಿತಂ ವಿತ್ತಂ ಸಮಾದಾಯ ಜಗಾಮ ಸಾ || ೬೫ ||

ವೇಶ್ಯಾನ್ಯಸ್ಮೈ ದದೌ ಪ್ರೀತ್ಯಾ ಯೂನೇ ಕಾಮಪರಾಯಣಾ |
ತತಃ ಸ ದೀನವದನೋ ವ್ರೀಡಯಾ ಚ ಸಮನ್ವಿತಃ || ೬೬ ||

---

೬೩. ಬೇರೊಂದು ದಿನದಲ್ಲಿ ದುರ್ಬುದ್ಧಿಯುಳ್ಳ ಪತಿಯು ರಸಸಹಿತವಾದ ಮಾಹಿಷ ಮತ್ತು ತೈಲಮಿಶ್ರಿತವಾದ ಅವರೇಕಾಯಿಗಳನ್ನು ತಿಂದನು.

೬೪. ಪತಿವ್ರತೆಯಾದ ಭಾರ್ಯೆಯನ್ನು ಅವಮಾನಿಸಿ ಅಪಥ್ಯವನ್ನು ತಿಂದ ಅವನಿಗೆ ಗುದಸ್ಥಾನದಲ್ಲಿ ಭಯಂಕರವಾದ ಭಗಂದರರೋಗ ವುಂಟಾಯಿತು.

೬೫. ಅವನು ಹಗಲೂ ರಾತ್ರಿಯೂ ಸಹ ಬಹಳವಾಗಿ ತಪಿಸುತ್ತಿದ್ದನು. ಆ ವೇಶ್ಯೆಯು ಆಗ ಅವನ ಮನೆಯಲ್ಲಿದ್ದ ಹಣವನ್ನು ತೆಗೆದುಕೊಂಡು ಹೊರಟುಹೋದಳು.

೬೬. ಆ ಹಣವನ್ನು ಕಾಮಾಸಕ್ತಳಾದ ವೇಶ್ಯೆಯು ಪ್ರೀತಿಯಿಂದ ಬೇರೊಬ್ಬ ಯುವಕಪುರುಷನಿಗೆ ಕೊಟ್ಟಳು. ಅನಂತರ ವ್ಯಗ್ರಚಿತ್ತನಾದ ಆ ಶೂದ್ರನು ದೈನ್ಯಯುಕ್ತನಾಗಿ ನಾಚಿಕೆಯಿಂದ ಕೂಡಿ ಅಳುತ್ತಾ ಪತ್ನಿಯನ್ನು ಕುರಿತು ಈ ರೀತಿ ಹೇಳಿದನು. ದೇವೀ! ಸೂಳೆಯನ್ನು ಪ್ರೀತಿಸುತ್ತಿದ್ದೆನು. ನಿನ್ನಲ್ಲಿ ನಿಷ್ಠುರವಚನಗಳನ್ನಾಡುತ್ತಿದ್ದೆನು. ಅಂತಹ ನನ್ನನ್ನು ಕಾಪಾಡು.

ಉವಾಚ ಪ್ರರುದನ್ ಭಾರ್ಯಾಂ ಶೂದ್ರೋ ವ್ಯಾಕುಲಚೇತನಃ |
ಪರಿಪಾಲಯಮಾಂದೇವಿ ವೇಶ್ಯಾಸಕ್ತಂ ಸುನಿಷ್ಠುರಂ || ೬೭ ||

ನ ಮಯೋಽಪಕೃತಂ ಕಿಂಚಿತ್ತವ ಸುಂದರಿ ಪಾಪಿನಾ |
ರಮತೇ ವೇಶ್ಯಯಾ ಸಾರ್ಧಂ ಬಹೂನಬ್ದಾನ್ ಸುಮಧ್ಯಮೇ || ೬೮ ||

ಯೋ ಭಾರ್ಯಾಂ ಪ್ರಣತಾಂ ಪಾಪೋ ನಾನುಮನ್ಯೇತ ಗರ್ವಿತಃ |
ಸೋಽಶುಭಾನಿ ಸಮಾಪ್ನೋತಿ ಜನ್ಮಾನಿ ದಶ ಪಂಚ ಚ || ೬೯ ||

ದಿವಾಕೀರ್ತಿಗೃಹೇ ತಸ್ಮಾದ್ಯೋನಿಂ ಪ್ರಾಪ್ಸ್ಯಾಮಿ ಗರ್ಹಿತಾಂ |
ತವಾಪಮಾನತೋ ದೇವಿ ಮನೋ ಮೇ ಕಲುಷೀಕೃತಂ || ೭೦ ||

ಇತಿ ಭರ್ತೃರ್ವಚಃ ಶ್ರುತ್ವಾ ಭಾರ್ಯಾ ಭರ್ತಾರಮಬ್ರವೀತ್ |
ಪುರಾ ಕೃತಾನಿ ಪಾಪಾನಿ ದುಃಖಾನಿ ಪ್ರಭವಂತಿ ಹಿ |
ತಾನಿ ಸಂಕ್ಷಮತೇ ವಿದ್ವಾನ್ ಸ ವಿಜ್ಞೇಯೋ ನೃಣಾಂ ವರಃ || ೭೧ ||

---

೬೮. ಸುಂದರಿಯೇ! ಪಾಪಿಯಾದ ನಾನು ನಿನಗೆ ಸ್ವಲ್ಪವೂ ಉಪಕಾರ ಮಾಡಲಿಲ್ಲ. ಸಮೀಚೀನಮಧ್ಯಭಾಗವುಳ್ಳ ಸುಂದರಾಂಗಿಯೇ! ಬಹು ವರ್ಷಗಳವರೆಗೂ ಸೂಳೆಯೊಡನೆ ವಿಹಾರಮಾಡಿದೆನು.

೬೯. ಅಗ್ನಿಸಾಕ್ಷಿಯಾಗಿ ಮದುವೆಯಾದ, ವಿನೀತಳಾದ ಹೆಂಡತಿಯನ್ನು ಅಹಂಕಾರದಿಂದ ಸಂತೋಷಪಡಿಸದಿರುವ ಗಂಡನು ಹದಿನೈದು ದುಷ್ಟ ಜನ್ಮಗಳನ್ನು ಹೊಂದುವನು.

೭೦. ದೇವಿಯೇ! ನಾನು ಮನಃಕಾಲುಷ್ಯವನ್ನು ಹೊಂದಿ ನಿನಗೆ ಅವಮಾನಮಾಡಿರುವ ಕಾರಣ ಕ್ಷೌರಕ ಅಥವಾ ಚಂಡಾಲನ ಮನೆಯಲ್ಲಿ ನಿಂದಿತವಾದ ಜನ್ಮವನ್ನು ಪಡೆಯುವೆನು.

೭೧. ಈ ರೀತಿಯಾದ ಪತಿಯ ಮಾತನ್ನು ಕೇಳಿ ಹೆಂಡತಿಯು ಗಂಡನನ್ನು ಕುರಿತು ಹೀಗೆ ಹೇಳಿದಳು:—ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪಗಳಿಂದ ದುಃಖವುಂಟಾಗುತ್ತದೆ. ಅದನ್ನು ಜ್ಞಾನಿಯಾದವನು ಸಹಿಸುವನು. ಅಂತಹವನೇ ಪುರುಷಶ್ರೇಷ್ಠನೆಂದು ತಿಳಿಯಬೇಕು.

ತನ್ಮಯೋ ಪಾಪಯೋ ಪಾಪಂ ಕೃತಂ ವೈ ಪೂರ್ವಜನ್ಮನಿ ।
ತದ್ಭುಜಂತ್ಯಾ ನ ಮೇ ದುಃಖಂ ನ ವಿಷಾದಃ ಕಥಂಚನ ॥ ೭೨ ॥

ಏವಮುಕ್ತ್ವಾ ಸಮಾಶ್ವಾಸ್ಯ ಭರ್ತಾರಮನುಶಾಸ್ಯ ಚ ।
ಆನೀತಂ ಜನಕಾದ್ವಿತ್ತಂ ಬಂಧುಭ್ಯೋ ವರವರ್ಣಿನೀ ॥ ೭೩ ॥

ಕ್ಷೀರೋದನಿಲಯೋವಾಸಂ ಮನ್ಯತೇಸ್ಮ ಸತೀ ಪತಿಂ ।
ದಿವಾದಿವಾ ತ್ರಿರ್ಯತ್ನೇನ ರಾತ್ರೌ ಗುಹ್ಯವಿಶೋಧನಂ ॥ ೭೪ ॥

ರಜನೀಕರವೃಕ್ಷೋತ್ಥಂ ಗೃಹ್ಯ ನಿರ್ಯಾಸಮಂಜಸಾ ।
ನಖೇನ ಪಾತಯೇದ್ಭರ್ತುಃ ಕ್ರಿಮೀನ್ ಕುಕ್ಷೀನ್ ಶನೈಃಶನೈಃ ॥ ೭೫ ॥

ಮಯೂರಪುಚ್ಛಸಂಯುಕ್ತಂ ಪವನಂ ಚಾಕರೋತ್ತದಾ ।
ನ ದೇವೀ ರಾತ್ರೌ ಸ್ವಪಿತಿ ನ ದಿವಾ ಚ ವರಾನನಾ ॥ ೭೬ ॥

---

೭೨. ನಾನೂ ಹಿಂದಿನ ಜನ್ಮದಲ್ಲಿ ಅಂತಹ ಉಗ್ರಪಾಪವನ್ನು ಮಾಡಿರವೆನು. ಈಗ ಅದರ ಫಲವನ್ನೇ ಅನುಭವಿಸುವ ನಾನು ದುಃಖಪಟ್ಟೇನು ಫಲ? ಈ ವಿಷಯದಲ್ಲಿ ಸ್ವಲ್ಪವೂ ಸಂದೇಹವಿಲ್ಲ.

೭೩. ಹೀಗೆ ಹೇಳಿ ಆ ವರವರ್ಣಿನಿಯು ಗಂಡನನ್ನು ಸಮಾಧಾನಪಡಿಸಿ ಅವನ ಅಪ್ಪಣೆಯನ್ನು ಪಡೆದು ತಂದೆ ಮತ್ತು ಬಂಧುಗಳಿಂದ ಹಣವನ್ನು ತೆಗೆದುಕೊಂಡು ಬಂದಳು.

೭೪. ಸಾಧ್ವಿಯು ತನ್ನ ಪತಿಯನ್ನು ಕ್ಷೀರಸಾಗರಶಾಯಿಯಾದ ನಾರಾಯಣನೆಂದು ತಿಳಿಯುವಳು. ಆ ಸಾಧ್ವಿಯು ಪ್ರತಿ ಹಗಲು ರಾತ್ರಿಗಳಲ್ಲಿಯೂ ಮೂರುಬಾರಿ ಗುಹ್ಯವನ್ನು ತೊಳೆದು ಶುದ್ಧಿಮಾಡುತ್ತಾ ಬಂದಳು.

೭೫. ಚಕ್ರವರ್ತಿವೃಕ್ಷದ ರಸವನ್ನು ಲೇಪನಮಾಡಿ ಗಂಡನ ಗುಹ್ಯಾವಯವದಲ್ಲಿ ಸೇರಿದ್ದ ಕುಷ್ಠಕ್ರಿಮಿಗಳನ್ನು ಮೆಲ್ಲಮೆಲ್ಲಗೆ ಉಗುರಿನಿಂದ ಕೆಳಕ್ಕೆ ಬೀಳಿಸುತ್ತಿದ್ದಳು.

೭೬. ಆಗ ನವಿಲುಗರಿಯ ಬೀಸಣಿಗೆಯಿಂದ ಬೀಸುತ್ತಿದ್ದಳು. ಸುಂದರ ಮುಖಳಾದ ದೇವಿಯು ರಾತ್ರಿ ಹಗಲೂ ನಿದ್ರೆ ಮಾಡುತ್ತಿರಲಿಲ್ಲ.

ಭರ್ತೃರ್ದುಃಖೇನ ಸಂತಪ್ತಾ ಅಪಶ್ಯಜ್ಜ್ವಲಿತಂ ಜಗತ್ ।
ಯದ್ಯಸ್ತಿ ವಸುಧಾ ದೇವೀ ಪಿತರೋ ದೇವತಾಸ್ತಥಾ ॥ ೭೭ ॥

ಕುರ್ವಂತು ರೋಗಹೀನಂ ಮೇ ಭರ್ತಾರಂ ಗತಕಲ್ಮಷಂ ।
ಚಂಡಿಕಾಯೈ ಪ್ರದಾಸ್ಯಾಮಿ ರಕ್ತಂ ಮಾಂಸಸಮುದ್ಭವಂ ॥ ೭೮ ॥

ನೃಚ್ಛಾಗಮಹಿಷೋಪೇತಂ ಭರ್ತುರಾರೋಗ್ಯಹೇತವೇ ।
ಸಾದರಂ ಕಾರಯಿಷ್ಯಾಮಿ ಉಪವಾಸಾನ್ ದಶೈವ ತು ॥ ೭೯ ॥

ಶರೀರಂ ಸ್ಥಾಪಯಿಷ್ಯೇಽಹಂ ಸೂಕ್ಷ್ಮಕಂಟಕಸಂಸ್ತರೇ ।
ನೋಪಭೋಕ್ಷ್ಯಾಮಿ ಮಧುರಂ ನೋಪಭೋಕ್ಷ್ಯಾಮಿ ವೈ ಘೃತಂ ॥ ೮೦ ॥

ಬಾಹ್ಯಾಭ್ಯಂಗವಿಹೀನಾಹಂ ಸಂಸ್ಥಾಸ್ಯೇ ದಿನಸಂಚಯಂ ।
ಜೀವತಾಂ ರೋಗಹೀನೋ ಹಿ ಭರ್ತಾ ಮೇ ಶರದಾಂ ಶತಂ ॥ ೮೧ ॥

---

೭೭-೭೯. ಆಕೆಯು ಗಂಡನ ದುಃಖದಿಂದ ತಪಿಸುತ್ತಾ ಪ್ರಪಂಚವೇ ಶೋಕಾಗ್ನಿಯಿಂದ ಉರಿಯುತ್ತಿದೆಯೆಂದು ಭಾವಿಸಿದಳು. ಭೂದೇವಿಯು, ಪಿತೃಗಳು ಮತ್ತು ದೇವತೆಗಳು ಇರುವುದು ನಿಜವಾದರೆ ಅವರು ನನ್ನ ಗಂಡನ ರೋಗವನ್ನು ಹೋಗಲಾಡಿಸಿ ಅವನನ್ನು ಕಲ್ಮಷರಹಿತನನ್ನಾಗಿ ಮಾಡಲಿ ! ಪತಿಗೆ ಆರೋಗ್ಯವುಂಟಾಗುವುದಕ್ಕಾಗಿ ಚಂಡಿಕಾದೇವಿಗೆ ನರ, ಆಡು, ಮಹಿಷಗಳ ಮಾಂಸದಿಂದುಂಟಾಗುವ ರಕ್ತವನ್ನು ಕೊಡುವೆನು. ಭಕ್ತಿಯಿಂದ ಹತ್ತು ಉಪವಾಸಗಳನ್ನು ಮಾಡುವೆನು.

೮೦. ನಾನು ಸೂಕ್ಷ್ಮಕಂಟಕಗಳ ಹಾಸಿಗೆಯಲ್ಲಿ ಮಲಗುವೆನು. ಮಧುರಾಹಾರವನ್ನೂ ತುಪ್ಪವನ್ನೂ ಸಹ ತಿನ್ನುವುದಿಲ್ಲ.

೮೧. ನಾನು ಎರೆದುಕೊಳ್ಳದಂತೆ ಬಹುದಿನಗಳಿರುವೆನು. ನನ್ನ ಗಂಡನು ನೂರುವರ್ಷಗಳ ಕಾಲ ರೋಗವಿಲ್ಲದೇ ಬದುಕಲಿ !

ಏವಂ ಪ್ರವ್ಯಾಹರಂತೀ ಸಾ ವಾಸರೇ ವಾಸರೇ ಗತೇ ।
ಅಥ ಕಾಲೇನ ಚಾಲ್ಪೇನ ತ್ರಿದೋಷೋಽಸ್ಯ ವ್ಯಜಾಯತ ॥ ೮೨ ॥

ತ್ರಿಕಟುಂ ಪ್ರದದೌ ಭರ್ತುರ್ಯತ್ನೇನ ಮಹತಾ ತದಾ ।
ಶೀತಾರ್ತಃ ಕಂಪಮಾನೋಽಸೌ ಪತ್ನ್ಯಂಗುಲಿಮಖಂಡಯತ್ ॥ ೮೩ ॥

ಉಭಯೋರ್ದಂತಯೋಃ ಶ್ಲೇಷಃ ಸಹಸಾ ಸಮುಪದ್ಯತ ।
ತತ್ಖಂಡಮಂಗುಲೇರ್ವಕ್ತ್ರೇ ಸ್ಥಿತಂ ನೃಪತಿವಲ್ಲಭೇ ॥ ೮೪ ॥

ಅಥ ವಿಕ್ರೀಯ ವಲಯಂ ಕ್ರೀತ್ವಾ ಕಾಷ್ಠಾನಿ ಭೂರಿಶಃ ।
ಚಿತಾಂ ಸರ್ಪಿಯುತಾಂ ಚಕ್ರೇ ಮಧ್ಯೇ ಧೃತ್ವಾ ಪತಿಂ ತದಾ ॥ ೮೫ ॥

ಅವರುಹ್ಯ ಚ ಬಾಹುಭ್ಯಾಂ ಪಾದೇನಾಕೃಷ್ಯ ಪಾವಕಂ ।
ಮುಖೇ ಮುಖಂ ಸಮಾಧಾಯ ಹೃದಯೇ ಹೃದಯಂ ತಥಾ ॥ ೮೬ ॥

---

೮೨. ಹೀಗೆ ಆಕೆಯು ಹೇಳಿ ದಿನಗಳನ್ನು ಕಳೆಯುತ್ತಾ ಬರಲು ಸ್ವಲ್ಪಕಾಲದಲ್ಲಿಯೇ ಇವನಿಗೆ ವಾತಾಪಿತ್ತ ಶ್ಲೇಷ್ಮದೋಷಗಳುಂಟಾದವು.

೮೩. ಆಗ ಆಕೆಯು ತ್ರಿಕಟು ಕಷಾಯವನ್ನು ಮಹಾಪ್ರಯಾಸದಿಂದ ಗಂಡನಿಗೆ ಕೊಟ್ಟಳು. ಇವನು ಶೈತ್ಯದಿಂದ ಪೀಡಿತನಾಗಿ ನಡಗುತ್ತಾ ಹೆಂಡತಿಯ ಬೆರಳನ್ನು ಹಲ್ಲಿನಿಂದ ಕತ್ತರಿಸಿದನು.

೮೪. ಕೂಡಲೇ ಎರಡು ಹಲ್ಲುಸಾಲುಗಳು ಗರಿಹಾಕಿಕೊಂಡು ಒಂದಕ್ಕೊಂದು ಸೇರಿಕೊಂಡವು. ಆ ಬೆಟ್ಟಿನ ಚೂರು ಬಾಯಿಯಲ್ಲಿಯೇ ಸಿಕ್ಕಿಕೊಂಡಿರಲು ಪ್ರಾಣಬಿಟ್ಟನು.

೮೫-೮೮. ಅನಂತರ ಅವಳು ತನ್ನ ಕಡಗವನ್ನು ಮಾರಿ ಬಹಳವಾಗಿ ಕಟ್ಟಿಗೆಗಳನ್ನು ಕೊಂಡು ಘೃತಸಹಿತವಾಗಿ ಚಿತೆಯನ್ನು ಮಾಡಿ, ಅದರ ಮಧ್ಯದಲ್ಲಿ ಪತಿಯನ್ನು ಮಲಗಿಸಿ, ಬಾಹುಗಳಿಂದ ಅವನ ಕೆಳಗೆ ತಾನು ಅವನ

ಜಘನೇ ಜಘನಂ ದೇವಿ ಆತ್ಮನಃ ಸಂನಿವೇಶ್ಯ ವೈ ।
ದಾಹಯಾಮಾಸ ಕಲ್ಯಾಣೀ ಭರ್ತುರ್ದೇಹಂ ರುಜಾನ್ವಿತಂ ॥ ೮೭ ॥

ಆತ್ಮನಾ ಸಹ ಚಾರ್ವಂಗೀ ಜ್ವಲಿತೇ ಜಾತವೇದಸಿ ॥ ೮೮ ॥

ವಿಮುಚ್ಯ ದೇಹಂ ಸಹಸಾ ಜಗಾಮ
ಪತಿಂ ಸಮಾದಾಯ ಚ ದೇವಲೋಕಂ ।
ವಿಶೋಧಯಿತ್ವಾ ಬಹುಪಾಪಸಂಘಾನ್
ಸ್ವಕರ್ಮಣಾ ದುಷ್ಕರಸಾಧನೇನ ॥ ೮೯ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ
ಪತಿವ್ರತೋಪಾಖ್ಯಾನಂ ನಾಮ
ಷೋಡಶೋಽಧ್ಯಾಯಃ

---

ಮುಖದಲ್ಲಿ ಮುಖವನ್ನೂ, ಹೃದಯದಲ್ಲಿ ಹೃದಯವನ್ನೂ ಕಟಿಪ್ರದೇಶದಲ್ಲಿ ಕಟಿಭಾಗವನ್ನೂ ಸಂಯೋಜನೆ ಮಾಡಿ, ಕಾಲಿನಿಂದ ಬೆಂಕಿಯನ್ನು ಸೆಳೆದು ಕೊಂಡು, ವ್ಯಾಧಿಗ್ರಸ್ತವಾದ ಗಂಡನ ದೇಹವನ್ನು ತನ್ನ ಶರೀರದೊಡನೆ ಉರಿಯುತ್ತಿರುವ ಬೆಂಕಿಯಲ್ಲಿ ಸುಟ್ಟಳು.

೮೯. ಆ ಸುಂದರಾಂಗಿಯು ಮಾಡಲಶಕ್ಯವಾದ ಕರ್ಮದಿಂದ ಬಹು ಪಾಪಗಳನ್ನು ನಾಶಮಾಡಿಕೊಂಡು ಶೀಘ್ರವಾಗಿ ದೇಹವನ್ನು ಬಿಟ್ಟು ಪತಿ ಯನ್ನು ಕರೆದುಕೊಂಡು ದೇವಲೋಕಕ್ಕೆ ಹೋದಳು.

ಇಂತು ಶ್ರೀನಾರದೀಯ ಪುರಾಣೋತ್ತರಭಾಗದಲ್ಲಿ ಪತಿವ್ರತೆಯ ಚರಿತ್ರೆಯೆಂಬ
ಹದಿನಾರನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಮೋಹಿನಿಯು ಎಲ್ಲಿ ಹೇಗೆ ದೊರಕಿದಳೆಂಬ ಧರ್ಮಾಂಗದನ ಪ್ರಶ್ನೆಗೆ ರುಕ್ಮಾಂಗದನು ಆಕೆಯು ಮಂದರಾಚಲದಲ್ಲಿ ದೊರೆತು ಸ್ವಯಂವರ ಮಾಡಿಕೊಂಡ ವೃತ್ತಾಂತವನ್ನು ಹೇಳಿ ಉತ್ತರಕೊಟ್ಟನು. ಅನಂತರ ಧರ್ಮಾಂಗದನು ಆಕೆಗೂ ತಂದೆಗೂ ನಮಸ್ಕರಿಸಿ ತನಗೆ ಬಹು ಮಾತೃಗಳಿರುವುದರಿಂದ ತಾನು ಧನ್ಯನೆಂದು ಹೊಗಳಿಕೊಳ್ಳುತ್ತಾ, ಅವರನ್ನು ಕುದುರೆಯ ಮೇಲೆ ಕುಳ್ಳಿರಿಸಿ ಮುಂಭಾಗದಲ್ಲಿ ಸಪರಿವಾರನಾಗಿ ಹೊರಟು ಮನೆಗೆ ಬಂದನು. ನಂತರ ಬಂದ ಮಾತಾಪಿತೃಗಳನ್ನು ಸತ್ಕರಿಸಿ, ಮೋಹಿನೀದೇವಿಗೆ ಅಮೂಲ್ಯವಾದ ಆಭರಣಗಳನ್ನು ಸಮರ್ಪಿಸಿ, ತನ್ನ ತಾಯಿಯಿಂದಾಕೆಗೆ ಮೃಷ್ಟಾನ್ನ ಭೋಜನ ಮಾಡಿಸಿದನು. ತರುವಾಯ ತಾಯಿಗೆ ಸವತಿಯು ಮಾತ್ಸರ್ಯ ಮಾಡಬಾರದು ಮುಂತಾಗಿ ಪತಿವ್ರತಾಧರ್ಮವನ್ನು ಹೇಳುವ ಪ್ರಸಂಗದಿಂದ ಸೂಳೆಯಲ್ಲಾಸಕ್ತನಾದ ಶೂದ್ರನ ಹೆಂಡತಿಯ ಪಾತಿವ್ರತ್ಯ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿರುವನು.

## ಸಪ್ತದಶೋಽಧ್ಯಾಯಃ

### ಪುತ್ರ ಉವಾಚ

ತಸ್ಮಾದೀರ್ಷ್ಯಾಂ ಪರಿತ್ಯಜ್ಯ ಮೋಹಿನೀಮನುಭೋಜಯ ।
ನ ಮಾತರೀದೃಶೋ ಧರ್ಮೋ ಲೋಕೇಷು ತ್ರಿಷು ಲಭ್ಯತೇ ॥ ೧ ॥

ಸ್ವಹಸ್ತೇನ ಪ್ರಿಯಾಂ ಭರ್ತುರ್ಭಾರ್ಯಾಂ ಯಾ ತು ಪ್ರಭೋಜಯೇತ್ ।
ಸಪತ್ನ್ಯಾಂ ತು ಸಪತ್ನೀ ಹಿ ಕಿಂಚಿದನ್ನಂ ದದಾತಿ ಚ ॥ ೨ ॥

ತದನಂತಂ ಭವೇದ್ದೇವಿ ಮಾತರಿತ್ಯಾಹ ನಾಭಿಜಃ ।
ಕುರು ವಾಕ್ಯಂ ಮಯೋಕ್ತಂ ಹಿ ಸ್ವಾಮಿನಿ ತ್ವಂ ಪ್ರಸೀದ ಮೇ ॥ ೩ ॥

ತಾತಸ್ಯ ಸೌಖ್ಯಂ ಕರ್ತವ್ಯಮಾವಾಭ್ಯಾಂ ವರವರ್ಣಿನಿ ।
ಭವೇತ್ ಪಾಪಕ್ಷಯಃ ಸಮ್ಯಕ್ ಸ್ವರ್ಗಪ್ರಾಪ್ತಿಸ್ತಥಾಕ್ಷಯಾ ॥ ೪ ॥

---

### ಹದಿನೇಳನೆಯ ಅಧ್ಯಾಯ

೧-೩. ಮಗನು ಹೇಳಿದನು—ತಾಯಿಯೇ! ಆದಕಾರಣ ಈರ್ಷ್ಯೆಯನ್ನು ಬಿಟ್ಟು, ಮೋಹಿನಿಗೆ ಭೋಜನಮಾಡಿಸು. ಮೂರುಲೋಕಗಳಲ್ಲಿಯೂ ತನ್ನ ಪತಿಗೆ ಪ್ರಿಯಳಾದ ಹೆಂಡತಿಗೆ (ಸೌತಿ) ತನ್ನ ಕೈಯಿಂದ ಭೋಜನ ಮಾಡಿಸುವಂತಹ ಧರ್ಮವು ಸಿಕ್ಕುವುದಿಲ್ಲ. ಸೌತಿಯು ತನ್ನ ಸೌತಿಗೆ ಕೊಡುವ ಸ್ವಲ್ಪ ಅನ್ನವು ಅನಂತವಾಗುವುದು. ನಾನು ಹೇಳಿದುದನ್ನು ನಡೆಯಿಸು. ಯಜಮಾನಿಯಾದ ತಾಯಿಯೇ! ನನ್ನಲ್ಲಿ ಪ್ರಸನ್ನಳಾಗು.

೪. ವರವರ್ಣಿನೀ! ನಾವಿಬ್ಬರೂ ತಂದೆಗೆ ಸೌಖ್ಯವನ್ನುಂಟುಮಾಡಬೇಕು. ಅದರಿಂದ ಪಾಪವು ಸಮಗ್ರವಾಗಿ ಹೋಗಿ ಶಾಶ್ವತ ಸ್ವರ್ಗಲೋಕ ಪ್ರಾಪ್ತಿಯಾಗುವುದೆಂದು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ತಾಯಿಗೆ ಹೇಳಿದನು.

ಪುತ್ರಸ್ಯ ವಚನಂ ಶ್ರುತ್ವಾ ದೇವೀ ಸಂಧ್ಯಾವಲೀ ತದಾ ।
ಅಭಿಮಂತ್ರ್ಯ ಪರಿಷ್ವಜ್ಯ ತನಯಂ ಸಾ ಪುನಃ ಪುನಃ ॥ ೫ ॥

ಮೂರ್ಧ್ನಿ ಚೈನಮುಪಾಘ್ರಾಯ ವಚನಂ ಚೇದಮಬ್ರವೀತ್ ।
ಕರಿಷ್ಯೇ ವಚನಂ ಪುತ್ರ ತ್ವದೀಯಂ ಧರ್ಮಸಂಯುತಂ ॥ ೬ ॥

ಈರ್ಷ್ಯಾಂ ಮಾನಂ ಪರಿತ್ಯಜ್ಯ ಭೋಜಯಿಷ್ಯಾಮಿ ಮೋಹಿನೀಂ ।
ಶತಪುತ್ರಾ ಹ್ಯಹಂ ಪುತ್ರ ತ್ವಯೈಕೇನ ಸುತೇನ ಹಿ ॥ ೭ ॥

ನಿಯಮೈರ್ಬಹುಭಿರ್ಜಾತೋ ದೇಹಕ್ಲೇಶಕರೈರ್ಭವಾನ್ ।
ವ್ರತರಾಜೇನ ಚೀರ್ಣೇನ ಪ್ರಾಪ್ತಸ್ತ್ವಮಚಿರಾತ್ ಸುತಃ ॥ ೮ ॥

ನಹೀದೃಶಂ ವ್ರತಂ ಲೋಕೇ ಫಲದಾಯಿ ಪ್ರದೃಶ್ಯತೇ ।
ಸದ್ಯಃ ಪ್ರತ್ಯಯಕಾರೀದಂ ಮಹಾಪಾತಕನಾಶನಂ ॥ ೯ ॥

---

೫-೬. ಮಗನ ಮಾತನ್ನು ಕೇಳಿ ಆಗ ಸಂಧ್ಯಾವಳೀದೇವಿಯು ಮಗನನ್ನು ಕರೆದು; ಪುನಃ ಪುನಃ ಆಲಿಂಗನೆಮಾಡಿಕೊಂಡು ಶಿರಸ್ಸಿನಲ್ಲಿ ಮೂಸಿನೋಡಿ ಈ ಮಾತನ್ನಾಡಿದಳು. ಮಗನೇ! ಧರ್ಮಯುಕ್ತವಾದ ನಿನ್ನ ಮಾತನ್ನು ನಡೆಯಿಸುವೆನು.

೭. ಅಸೂಯೆ, ಅಹಂಕಾರಗಳನ್ನು ಬಿಟ್ಟು ಮೋಹಿನಿಗೆ ಊಟ ಮಾಡಿಸುವೆನು. ವತ್ಸ! ನೀನೊಬ್ಬ ಮಗನು ನನಗೆ ಹುಟ್ಟಿರುವುದರಿಂದ ನೂರುಮಕ್ಕಳಾದಂತೆ ತಿಳಿದಿರುವೆನು.

೮. ಶರೀರಕ್ಕೆ ಕಷ್ಟವನ್ನುಂಟುಮಾಡುವಂತಹ ಬಹು ನಿಯಮಗಳನ್ನು ಮಾಡಿದುದರಿಂದ ನೀನು ಮಗನಾಗಿ ಹುಟ್ಟಿರುವೆ. ಶ್ರೇಷ್ಠವ್ರತವನ್ನು ಆಚರಿಸಿದುದರಿಂದ ನೀನು ಮಗನಾಗಿರುವೆ.

೯. ತಕ್ಷಣದಲ್ಲಿಯೇ ಫಲವನ್ನು ಕೊಟ್ಟು ವಿಶ್ವಾಸವನ್ನು ಹುಟ್ಟಿಸುವಂತಹ, ಮಹಾಪಾತಕಗಳನ್ನೂ ಸಹ ಪರಿಹರಿಸುವಂತಹ, ಫಲದಾಯಕವಾದ ಇಂತಹ ವ್ರತವು ಲೋಕದಲ್ಲಿ ಯಾವುದೂ ಕಂಡುಬಂದಿಲ್ಲ.

ಕಿಂ ಜಾತ್ಯೈರ್ಬಹುಭಿಃ ಪುತ್ರೈಃ ಶೋಕಸಂತಾಪಕಾರಕೈಃ ।
ವರಮೇಕಃ ಕುಲಾಲಂಬೀ ಯತ್ರ ವಿಶ್ರಮತೇ ಕುಲಂ ॥ ೧೦ ॥

ತ್ರೈಲೋಕ್ಯಾದುಪರಿಷ್ಟಾಹಂ ತ್ವಾಂ ಪ್ರಾಪ್ಯ ಜಠರೇ ಸ್ಥಿತಂ ।
ಧನ್ಯಾನಿ ತಾನಿ ಶೂಲಾನಿ ಯೈರ್ಜಾತಸ್ತ್ವಂ ಸುತೋಽನಘಃ ॥ ೧೧ ॥

ಸಪ್ತದ್ವೀಪಪತಿಃ ಶೂರಃ ಪಿತುರ್ವಚನಕಾರಕಃ ।
ಆಹ್ಲಾದಯತಿ ಯಸ್ತಾತಂ ಜನನೀಂ ವಾಪಿ ಪುತ್ರಕಃ ॥ ೧೨ ॥

ತಂ ಪುತ್ರಂ ಕವಯಃ ಪ್ರಾಹುರ್ನಾಮಾಖ್ಯಮಪರಂ ಸುತಂ ।
ಏವಮುಕ್ತ್ವಾ ತು ವಚನಂ ದೇವೀ ಸಂಧ್ಯಾವಲೀ ತದಾ ॥ ೧೩ ॥

ವೀಕ್ಷಾಂ ಚಕ್ರೇಽಥ ಭಾಂಡಾನಿ ಷಡ್ರಸಸ್ಯ ತು ಹೇತವೇ ।
ತಸ್ಯಾ ವೀಕ್ಷಣಮಾತ್ರೇಣ ಪರಿಪೂರ್ಣಾನಿ ಭೂಪತೇ ॥ ೧೪ ॥

---

೧೦. ದುಃಖಸಂತಾಪಗಳನ್ನು ಹುಟ್ಟಿಸುವಂತಹ ಬಹುಮಕ್ಕಳು ಹುಟ್ಟಿದುದರಿಂದೇನು ಫಲ? ವಂಶೋದ್ಧಾರಕನಾದ ಒಬ್ಬ ಮಗನು ಜನಿಸಿ ಅಲ್ಲಿಗೆ ವಂಶವು ವಿಶ್ರಾಂತವಾಗುವುದೇ ಒಳ್ಳೆಯದು.

೧೧. ನಾನು ನಿನ್ನನ್ನು ಉದರದಲ್ಲಿ ಧರಿಸಿದಾಗ ತ್ರೈಲೋಕ್ಯಕ್ಕಿಂತಲೂ ಮೇಲಿದ್ದೆನು. ಯಾವ ವೇದನೆಗಳಿಂದ ಪಾಪರಹಿತನಾದ ನೀನು ಮಗನಾಗಿ ಹುಟ್ಟಿದೆಯೋ ಆ ಶೂಲೆಗಳು ಧನ್ಯಗಳಾದವು.

೧೨-೧೩. ಸಪ್ತದ್ವೀಪಗಳಿಗೊಡೆಯನು, ಪರಾಕ್ರಮಶಾಲಿಯು, ತಂದೆಯ ಮಾತನ್ನು ಪಾಲಿಸುವವನೂ ಆಗಿ ಯಾವಸುತನು ತಾಯಿತಂದೆಗಳನ್ನು ಸಂತೋಷಪಡಿಸುವನೋ ಅಂತಹವನನ್ನೇ ಜ್ಞಾನಿಗಳು ಪುತ್ರನೆಂದು ಕರೆಯುವರು. ಅಂತಹ ಗುಣಶಾಲಿಯಲ್ಲದ ಮಗನನ್ನು ಹೆಸರಿಗೆ ಮಾತ್ರ ಪುತ್ರನೆಂದೂ ಹೇಳುವರು.

ಈ ರೀತಿಯಾಗಿ ಮಾತನಾಡಿ ಸಂಧ್ಯಾವಳೀದೇವಿಯು ಆಗ ಷಡ್ರಸಯುಕ್ತವಾದ ಅನ್ನವಾಗಬೇಕೆಂಬ ಇಚ್ಛೆಯಿಂದ ಪಾತ್ರೆಗಳನ್ನು ನೋಡಿದಳು.

ಷಡ್ರಸಸ್ಯ ಸುಖೋಷ್ಣಸ್ಯ ಮೋಹಿನೀಭೋಜನೇಚ್ಛಯಾ ।
ಅಮೃತಸ್ವಾದುಕಲ್ಪಸ್ಯ ಜನಸ್ಯ ತು ಮಹೀಪತೇ ॥ ೧೫ ॥

ತತೋ ದರ್ವೀಂ ಸಮಾದಾಯ ಕಾಂಚನೀಂ ರತ್ನಸಂಯುತಾಂ ।
ಪರಿವೇಷಯದವ್ಯಗ್ರಾ ಮೋಹಿನ್ಯಾಶ್ಚಾರುಹಾಸಿನೀ ॥ ೧೬ ॥

ಕಾಂಚನೇ ಭೋಜನೇ ಶ್ಲಕ್ಷ್ಣೇ ಪಾನಭಾಜನವೇಷ್ಟಿತೇ ।
ಶನೈಃ ಶನೈಶ್ಚ ಬುಭುಜೇ ಇಷ್ಟಮನ್ನಂ ಸುಸಂಸ್ಕೃತಂ ॥ ೧೭ ॥

ಉಪವಿಶ್ಯಾಸನೇ ದೇವೀ ಶಾತಕೌಂಭಮಯೇ ಶುಭೇ ।
ವೀಜ್ಯಮಾನಾ ವರಾರೋಹಾ ವ್ಯಜನೇನ ಸುಗೀತಿನಾ ॥ ೧೮ ॥

ಧರ್ಮಾಂಗದಗೃಹೀತೇನ ಶಿಖಿಪುಚ್ಛಭವೇನ ತು ।
ಸಾ ಭುಕ್ತ್ವಾ ಬ್ರಹ್ಮತನಯಾ ತದನ್ನಮಮೃತೋಪಮಂ ॥ ೧೯ ॥

ಚತುರ್ಗುಣೇನ ಶೀತೇನ ಕೃತ್ವಾ ಶೌಚಮಥಾತ್ಮನಃ ।
ಜಗೃಹೇ ಪುತ್ರದತ್ತಂ ತು ತಾಂಬೂಲಂ ತತ್ಸುಗಂಧಿಮತ್ ॥ ೨೦ ॥

---

ಆಕೆಯು ಷಡ್ರಸೋಪೇತವೂ, ಸುಖೋಷ್ಣವೂ, ಜನಕ್ಕೆ ಅಮೃತದಂತೆ ರುಚಿಕರವೂ ಆಗಿರುವ ಅನ್ನವನ್ನು ಮೋಹಿನೀದೇವಿಗೆ ಭೋಜನಮಾಡಿಸಬೇಕೆಂದು ಅಪೇಕ್ಷಿಸಿ ನೋಡಿದಮಾತ್ರದಿಂದ ಪಾತ್ರೆಗಳೆಲ್ಲವೂ ಅಂತಹ ಮೃಷ್ಟಾನ್ನದಿಂದ ತುಂಬಿದವು.

೧೬-೨೧. ಅನಂತರ ದಿವ್ಯಹಸ್ತಯುಕ್ತಳಾದ, ಸಂತುಷ್ಟಮನಸ್ಕಳಾದ ಸಂಧ್ಯಾವಳಿಯು ರತ್ನಖಚಿತವಾದ, ಬಂಗಾರದಸೌಟನ್ನು ತೆಗೆದುಕೊಂಡು ಸುತ್ತಲೂ ಕುಡಿಯುವ ಪಾತ್ರೆಗಳಿಂದಯುಕ್ತವಾದ, ನುಣುಪಾದ ಬಂಗಾರದತಟ್ಟೆಯಲ್ಲಿ ಮೋಹಿನೀದೇವಿಗೆ ಬಡಿಸಿದಳು. ಮೋಹಿನೀದೇವಿಯು ಒಳ್ಳೆಯಬಂಗಾರದ ಪೀಠದಲ್ಲಿ ಕುಳಿತಳು. ಧರ್ಮಾಂಗದನು ನವಿಲುಗರಿಯ ಬೀಸಣಿಗೆಯಿಂದ ಬೀಸುತ್ತಿರಲು, ಅವಳು ತನಗೆ ಇಷ್ಟವಾದ, ಚೆನ್ನಾಗಿ ಪಕ್ವಮಾಡಿದ ಅನ್ನವನ್ನು ಮೆಲ್ಲಮೆಲ್ಲಗೆ ತೆಗೆದುಕೊಂಡು ಭೋಜನಮಾಡಿದಳು. ಬ್ರಹ್ಮಪುತ್ರಿಯಾದ ಆ

ವರಚಂದನಯುಕ್ತೇನ ಹಸ್ತೇನ ವರವರ್ಣಿನೀ ।
ತತಃ ಪ್ರಹಸ್ಯ ಶನಕೈಃ ಪ್ರಾಹ ಸಂಧ್ಯಾವಲೀಂ ನೃಪ ॥ ೨೧ ॥

ಜನನೀಂ ಕಿಂ ತು ದೇವಿ ತ್ವಂ ವೃಷಾಂಗದನೃಪಸ್ಯ ತು ।
ನ ಮಯಾ ಹಿ ಪರಿಜ್ಞಾತಾ ಶ್ರಮಸ್ವೇದಿತಯಾ ಶುಭೇ ॥ ೨೨ ॥

ವದಂತ್ಯೇವಂ ಬ್ರಹ್ಮಸುತಾ ಯಾವತ್‌ಸಂಧ್ಯಾವಲೀ ನೃಪ ।
ತಾವತ್ ಪ್ರಣಮ್ಯ ನೃಪತೇಃ ಪುತ್ರೋ ವಚನಮಬ್ರವೀತ್ ॥ ೨೩ ॥

ಉದರೇ ಹ್ಯನಯಾ ದೇವ್ಯಾ ಧೃತಃ ಸಂವತ್ಸರತ್ರಯಂ ।
ತವ ಭರ್ತುಃ ಪ್ರಸಾದೇನ ವೃದ್ಧಿಂ ಸಂಪ್ರಾಪ್ತವಾನಹಂ ॥ ೨೪ ॥

---

ಮೋಹಿನಿಯು ಅಮೃತಸಮಾನವಾದ ಆ ಅನ್ನವನ್ನು ಭೋಜಮಾಡಿ, ನಾಲ್ಕರಷ್ಟು ನೀರಿನಿಂದ ತನ್ನ ಕೈಗಳನ್ನು ತೊಳೆದುಕೊಂಡು ಉತ್ತಮಗಂಧಯುಕ್ತವಾದ ಹಸ್ತದಿಂದ ಸುವಾಸನೆಯುಳ್ಳ, ಮಗನಿಂದಕೊಡಲ್ಪಟ್ಟ ತಾಂಬೂಲನ್ನು ತೆಗೆದುಕೊಂಡಳು. ಅನಂತರ ವರವರ್ಣಿನಿಯು ನಕ್ಕು ಸಂಧ್ಯಾವಳಿಯನ್ನು ಕುರಿತು ಮೆಲ್ಲಗೆ ಮಾತನಾಡಿದಳು.

೨೨. ಮಂಗಳಕರಳಾದ ದೇವಿಯೆ! ನೀನು ಧರ್ಮಾಂಗದರಾಜನ ಜನನಿಯೆಂಬುದನ್ನು ಶ್ರಮದಿಂದಬಳಲಿ ಬೆವರಿರುವುದರಿಂದ ನಾನು ತಿಳಿಯಲಿಲ್ಲ.

೨೩. ಹೀಗೆ ಬ್ರಹ್ಮಪುತ್ರಿಯಾದ ಮೋಹಿನಿಯು ಸಂಧ್ಯಾವಳಿಯನ್ನು ಕುರಿತು ಹೇಳುವಷ್ಟರಲ್ಲಿ ರಾಜಪುತ್ರನು ನಮಸ್ಕರಿಸಿ ಮಾತನಾಡಿದನು.

೨೪. ಸುಂದರಿಯೇ! ಈ ಸಂಧ್ಯಾವಳಿದೇವಿಯು ಮೂರುವರ್ಷಗಳಕಾಲ ಗರ್ಭದಲ್ಲಿ ನನ್ನನ್ನು ಧರಿಸಿದ್ದಳು. ನಿನ್ನ ಪತಿಯ ಅನುಗ್ರಹದಿಂದ ನಾನು ವೃದ್ಧಿಹೊಂದಿದೆನು.

ಸಂತ್ಯನೇಕಾನಿ ಮಾತೄಣಾಂ ಶತಾನಿ ಮಮ ಸುಂದರಿ ।
ಅಸ್ಯಾಃ ಪೀತಂ ಪಯೋ ಭೂರಿ ಕುಚಯೋಃ ಸ್ನೇಹಸಂಪ್ಲುತಂ ॥ ೨೫ ॥
ಅನಯಾ ಸಾ ರುಜಾ ತೀವ್ರಾ ವಿಧೃತಾ ಪ್ರಾಯಶೋ ಜರಾ ।
ಇಯಂ ಮಾಂ ಜನಯಿತ್ವೈವ ಜಾತಾ ಶಿಥಿಲಬಂಧನಾ ॥ ೨೬ ॥
ತೆನ್ನಾಸ್ತಿ ತ್ರಿಷು ಲೋಕೇಷು ಯದ್ದತ್ವಾ ಚಾನೃಣೋ ಭವೇತ್ ।
ಮಾತುಃ ಪುತ್ರಸ್ಯ ಚಾರ್ವಂಗಿ ಸತ್ಯಮೇತನ್ಮಯೇರಿತಂ ॥ ೨೭ ॥
ಸೋಹಂ ಧನ್ಯತರೋ ಲೋಕೇ ನಾಸ್ತಿ ಮತ್ತೋಧಿಕಃ ಪುಮಾನ್ ।
ಉತ್ಸಂಗೇ ವರ್ತಯಿಷ್ಯಾಮಿ ಮಾತೃಸಂಘಸ್ಯ ನಿತ್ಯಶಃ ॥ ೨೮ ॥
ನೋತ್ಸಂಗೇ ಚೇಜ್ಜನನ್ಯಾ ಹಿ ತನಯೋ ವಿಶತಿ ಕ್ವಚಿತ್ ।
ಮಾತೃಸೌಖ್ಯಂ ನ ಜಾನಾತಿ ಕುಮಾರೀ ಭರ್ತೃಜಂ ಯಥಾ ॥ ೨೯ ॥

---

೨೫. ನನಗೆ ನೂರಾರುಜನ ಮಾತೃಗಳಿದ್ದಾರೆ ಅವರಲ್ಲಿ ಈ ಸಂಧ್ಯಾವಳೀ ದೇವಿಯ ಸ್ತನಗಳಲ್ಲಿನ ಸ್ನಿಗ್ಧವಾದ ಬಹುಹಾಲನ್ನು ಕುಡಿದಿರುವೆನು.

೨೬. ಈ ಹಿಂಸೆಯಿಂದ ಆಕೆಯು ಪ್ರಾಯಶಃ ಹೆಚ್ಚಾದ ಮುಪ್ಪಿಗೆ ಗುರಿಯಾಗಿರುವಳು. ಈಕೆಯು ನನ್ನನ್ನು ಪ್ರಸವಿಸಿಯೇ ಬಂಧನ ಶೈಥಿಲ್ಯವನ್ನು ಹೊಂದಿರುವಳು.

೨೭. ಮನೋಹರಾಂಗಿಯೇ! ಮಗನು ತಾಯಿಗೆ ಯಾವ ಪ್ರತ್ಯುಪಕಾರವನ್ನು ಮಾಡಿ ಋಣವನ್ನು ನೀಗಿಕೊಳ್ಳುವನೋ ಅಂತಹದು ಮೂರು ಲೋಕಗಳಲ್ಲಿ ಯಾವುದೂ ಇಲ್ಲ. ನಾನು ಹೇಳಿರುವ ಈ ವಿಷಯವು ಸತ್ಯವು.

೨೮. ಯಾವಾಗಲೂ ಮಾತೃಸಮುದಾಯದ ತೊಡೆಯಮೇಲೆ ಕುಳಿತೇ ನಾನು ಕಾಲಕಳೆಯುತ್ತಿರುವೆನು. ಈರೀತಿಯಾಗಿ ವರ್ತಿಸುತ್ತಿರುವ ನಾನು ಬಹು ಧನ್ಯನು. ಲೋಕದಲ್ಲಿ ನನಗಿಂತ ಹೆಚ್ಚು ಪುಣ್ಯವಂತನಾದ ಪುರುಷನಾರೂ ಇಲ್ಲ.

೨೯. ಪುತ್ರನು ಯಾವಾಗಲೂ ಜನನಿಯ ತೊಡೆಯಮೇಲೆ ಕೂಡದಿದ್ದರೆ ಅವನು, ಕುಮಾರಿಯು ಪತಿಸೌಖ್ಯದಸವಿಯನ್ನರಿಯದಿರುವಂತೆ ಮಾತೃ ಸೌಖ್ಯವನ್ನು ತಿಳಿಯಲಾರನು.

ಮಾತುರುತ಼್ಂಗಮಾರೂಢಃ ಪುತ್ರೋ ದರ್ಪಾನ್ವಿತೋ ಭವೇತ್ ।
ಹಾರಮುತ್ತಮದೇಹಸ್ಥಂ ಹಸ್ತೇನಾಹರ್ತುಮಿಚ್ಛತಿ ॥ ೩೦ ॥

ಪಾಲ್ಯಮಾನೋ ಜನನ್ಯಾ ಹಿ ಪಿತೃಹೀನೋಽಪಿ ದರ್ಪಿತಃ ।
ಸಮಾಹರೇ ಜಗದ್ಭರ್ತುಂ ಸವೀರ್ಯಂ ಮಾತೃಜಂ ಪಯಃ ॥ ೩೧ ॥

ಏತಜ್ಜಠರಸಂಸರ್ಗೀ ಭವಂತ್ಯುತ್ಸಂಗಶಂಕಿನಃ ।
ಅಸ್ಯಾಶ್ಚೈವಾಪರಾಣಾಂ ಚ ವಿಶೇಷೋ ಯದಿ ಮೇ ನ ಚೇತ್ ॥ ೩೨ ॥

ತೇನ ಸತ್ಯೇನ ಮೇ ತಾತೋ ಜೀವತಾಚ್ಛರದಾಂ ಶತಂ ।
ಏವಂ ಬ್ರುವಾಣೇ ತನಯೇ ಮೋಹಿನೀ ವಿಸ್ಮಯಂ ಗತಾ ॥ ೩೩ ॥

---

೩೦. ತಾಯಿಯ ತೊಡೆಯಮೇಲೆ ಕುಳಿತಿರುವ ಮಗನು ಗರ್ವದಿಂದ ಕೂಡಿದವನಾಗುವನು. ಆಗ ತಾಯಿಯ ಕುತ್ತಿಗೆಯಲ್ಲಿದ್ದ ಹಾರವನ್ನು ಕೈಯಿಂದ ತೆಗೆದುಕೊಳ್ಳಬೇಕೆಂದಿಚ್ಛಿಸುವನು.

೩೧. ತಂದೆಯಿಲ್ಲದಿದ್ದರೂ ತಾಯಿಯು ಪಾಲಿಸುತ್ತಿರುವ ಮಗನು ಗರ್ವದಿಂದಯುಕ್ತನಾಗುವನು. ತಾಯಿಯ ಸ್ತನ್ಯವು ವೀರ್ಯವತ್ತಾದುದು. ಅಂತಹವನು ಜಗತ್ತನ್ನೇ ಧರಿಸಲಿಚ್ಛಿಸುವನು.

೩೨. ಈ ಜನನಿ ಮತ್ತು ಇತರ ಮಾತೆಯರ ವಿಷಯದಲ್ಲಿ ನಾನು ವ್ಯತ್ಯಾಸವನ್ನು ಭಾವಿಸದೆ ಎಲ್ಲರ ತೊಡೆಯಮೇಲೆಯೂ ಅವರವರ ಮಕ್ಕಳಂತೆಯೇ ನಲಿಯುತ್ತಿರುವುದನ್ನು ನೋಡಿ ಜನರು ನಾನು ಆ ಮಾತೆಯರ ಗರ್ಭಸಂಭೂತನೆಂದು ಶಂಕಿಸುತ್ತಿರುವರು.

೩೩. ಅಂತಹ ಸತ್ಯವರ್ತನೆಯಿಂದ ನನ್ನ ತಂದೆಯು ನೂರುವರ್ಷಗಳ ಕಾಲ ಬದುಕಲಿ. ಹೀಗೆ ಪುತ್ರನು ಹೇಳಲು, ಮೋಹಿನಿಯು ಅದನ್ನು ಕೇಳಿ ವಿಸ್ಮಿತಳಾದಳು.

ಕಥಮಸ್ಯ ಪ್ರಹರ್ತವ್ಯಂ ಮಯಾ ನಿರ್ಘೃಣಶೀಲಯಾ ।
ವಿನೀತಸ್ಯ ಹ್ಯಪಾಪಸ್ಯ ಔಚಿತ್ಯಂ ಪಾಪಿನೋ ಗೃಹೇ ॥ ೩೪ ॥

ಪಿತುಃ ಶುಶ್ರೂಷಣಂ ಯಸ್ಯ ನ ತಸ್ಯ ಸದೃಶಂ ಕ್ಷಿತೌ ।
ಏವಂ ಗುಣಾಧಿಕಸ್ಯಾಹಂ ಕರ್ತುಂ ಕರ್ಮ ಜುಗುಪ್ಸಿತಂ ॥ ೩೫ ॥

ಪುತ್ರಸ್ಯ ಧರ್ಮಶೀಲಸ್ಯ ಭೂತ್ವಾ ಸಂಜನನೀ ಕ್ಷಿತೌ ।
ಏವಂ ವಿಮೃಶ್ಯ ಬಹುಧಾ ಮೋಹಿನೀ ಲೋಕಸುಂದರೀ ॥ ೩೬ ॥

ಉವಾಚ ತನಯಂ ಬಾಲಾ ಶೀಘ್ರಮಾನಯ ಮೇ ಪತಿಂ ।
ನ ಶಕ್ನೋಮಿ ವಿನಾ ತೇನ ಮುಹೂರ್ತಮಪಿ ವರ್ತಿತುಂ ॥ ೩೭ ॥

ತತಃ ಸ ತ್ವರಿತಂ ಗತ್ವಾ ಪ್ರಣಮ್ಯ ಪಿತರಂ ನೃಪ ।
ಕನಿಷ್ಠಾ ಜನನೀ ತಾತ ಶೀಘ್ರಂ ತ್ವಾಂ ದ್ರಷ್ಟುಮಿಚ್ಛತಿ ॥ ೩೮ ॥

---

೩೪. ನಿಷ್ಕರುಣಿಯಾದ ನಾನು ವಿನೀತನು, ಪಾಪರಹಿತನೂ ಆಗಿರುವ ಇವನಿಗೆ ಪಾಪಿಗಳಮನೆಯಲ್ಲಿ ನಡೆಯಿಸಲು ಯೋಗ್ಯವಾದುದನ್ನು ಹೇಗೆ ಹೇಳಲಿ ?

೩೫-೩೭. ತಂದೆಯ ಸೇವೆಮಾಡುವವನಿಗೆ ಸಮಾನನು ಭೂಮಿಯಲ್ಲಿಲ್ಲ. ಈರೀತಿ ಅಧಿಕಗುಣಶಾಲಿಯಾದ ಇವನವಿಷಯದಲ್ಲಿ ಧರ್ಮಿಷ್ಠನಾದ ಪುತ್ರನ ತಾಯಿಯಾಗಿರುವ ನಾನು ನಿಂದಿತವ್ಯಾಪಾರವನ್ನು ನಡೆಯಿಸಲು ಹೇಗೆ ಪ್ರವರ್ತಿಸಲಿ ? ಎಂದು ಮುಂತಾಗಿ ಬಹುವಿಧವಾಗಿ ವಿಚಾರಮಾಡಿ ಲೋಕಸುಂದರಿಯಾದ ಮೋಹಿನಿಯು " ನನ್ನ ಪತಿಯನ್ನು ಬೇಗಕರೆದುಕೊಂಡು ಬರಬೇಕು. ಅವನಿಲ್ಲದೆ ಒಂದು ಮುಹೂರ್ತವೂ ಸಹ ಇರಲಾರೆನು " ಎಂದು ಮಗನಿಗೆ ಹೇಳಿದಳು.

೩೮. ಅನಂತರ ಅವನು ಬೇಗ ತಂದೆಯಬಳಿಗೆ ಹೋಗಿ ನಮಸ್ಕಾರಮಾಡಿ, ಅಪ್ಪಾ ! ಚಿಕ್ಕತಾಯಿಯು ನಿನ್ನನ್ನು ಬೇಗನೋಡಬೇಕೆಂದು ಅಪೇಕ್ಷಿಸುತ್ತಾಳೆ.

ಪ್ರಸಾದಃ ಕ್ರಿಯತಾಂ ತಸ್ಯಾಃ ಪೂಜ್ಯತಾಂ ಬ್ರಹ್ಮಣಃ ಸುತಾ |
ಪುತ್ರವಾಕ್ಯೇನ ನೃಪತಿಸ್ತತ್ಕ್ಷಣಾದ್ಗಂತುಮುದ್ಯತಃ || ೩೯ ||

ಪ್ರಹೃಷ್ಟವದನೋ ಭೂತ್ವಾ ಸಂಧ್ಯಾವಲ್ಯಾ ನಿವೇಶನಂ |
ಸಂಪ್ರವಿಶ್ಯ ಗೃಹೇ ರಾಜಾ ದದರ್ಶ ಶಯನಸ್ಥಿತಾಂ || ೪೦ ||

ಮೋಹಿನೀಂ ಮೋಹಸಂಯುಕ್ತಾಂ ತಪ್ತಕಾಂಚನಸುಪ್ರಭಾಂ |
ಉಪಾಸ್ಯಮಾನಾಂ ಪ್ರಿಯಯಾ ಸಂಧ್ಯಾವಲ್ಯಾ ಶನೈಃ ಶನೈಃ || ೪೧ ||

ಪುತ್ರವಾಕ್ಯಾತ್ಪರಿತ್ಯಜ್ಯ ಕ್ರೋಧಂ ಸಾಪತ್ನ್ಯಜಂ ತಥಾ |
ದೃಷ್ಟ್ವಾ ರುಕ್ಮಾಂಗದಂ ಪ್ರಾಪ್ತಂ ಶಯನಂ ಪ್ರೋಹ್ಯ ಸುಂದರೀ || ೪೨ ||

ಪ್ರಹೃಷ್ಟವದನಾ ಪ್ರಾಹ ರಾಜಾನಂ ಭೂರಿದಕ್ಷಿಣಂ |
ಇಹೋಪವಿಶ್ಯತಾಂ ಕಾಂತ ಪರ್ಯಂಕೇ ಮೃದುತೂಲಕೇ || ೪೩ ||

---

೩೯. ಆಕೆಗೆ ಅನುಗ್ರಹಮಾಡಿ, ಬ್ರಹ್ಮಪುತ್ರಿಯಾದ ಆಕೆಯನ್ನು ಸತ್ಕರಿಸೋಣವಾಗಲಿ ಎಂಬುದಾಗಿ ಹೇಳಿದನು. ಅದನ್ನು ಕೇಳಿ ರಾಜನು ತಕ್ಷಣದಲ್ಲಿಯೇ ಹೊರಡಲುದ್ಯುಕ್ತನಾದನು.

೪೦-೪೩. ಅಲ್ಲಿಂದ ಹೊರಟು ರಾಜನು ಪ್ರಸನ್ನ ಮುಖನಾಗಿ ಸಂಧ್ಯಾವಳಿಯ ವಾಸಸ್ಥಾನವನ್ನು ಪ್ರವೇಶಿಸಿ ಮನೆಯಲ್ಲಿ ಮಲಗಿದ್ದ ಮೋಹಾಕ್ರಾಂತಳಾದ, ಕರಗಿಸಿದ ಬಂಗಾರದಂತೆ ಹೊಳೆಯುತ್ತಿರುವ ಮಗನಮಾತಿನಿಂದ ಸೌತಿಯ ಮಾತ್ಸರ್ಯವನ್ನು ಬಿಟ್ಟು ಪ್ರೀತಿಸುತ್ತಿರುವ ಸಂಧ್ಯಾವಳೀದೇವಿಯಿಂದ ಮೆಲ್ಲಮೆಲ್ಲಗೆ ಸೇವಿಸಲ್ಪಡುತ್ತಿರುವ, ಮೋಹಿನಿಯನ್ನು ನೋಡಿ ಹಾಸಿಗೆಯ ಬಳಿಗೆ ಬಂದನು. ಆಗ ಸುಂದರಿಯಾದ ಮೋಹಿನಿಯು ಪ್ರಸನ್ನಮುಖಳಾಗಿ ಬಹುದಾನಮಾಡಿದ ರಾಜನನ್ನು ಸಂಬೋಧಿಸಿ, ಕಾಂತ! ಮೃದುವಾದ ಸುಪ್ಪತ್ತಿಗೆಯುಳ್ಳ, ಈ ಮಂಚದಮೇಲೆ ಕೂಡೋಣವಾಗಲಿ.

ಸರ್ವಂ ನಿರೀಕ್ಷಿತಂ ಭೂಪ ರಾಜ್ಯತಂತ್ರಂ ತ್ವಯಾ ಚಿರಂ ।
ಅದ್ಯಾಪಿ ನ ಹಿ ತೇ ವಾಂಛಾ ರಾಜ್ಯೇ ಪರಿನಿವರ್ತತೇ ॥ ೪೪ ॥

ಮನ್ಯೇ ದುಷ್ಕೃತಿನಂ ಭೂಪ ತ್ವಾಮತ್ರ ಧರಣೀತಲೇ ।
ಯಃ ಸಮರ್ಥಂ ಸುತಂ ಜ್ಞಾತ್ವಾ ಸ್ವಯಂ ಪಶ್ಯೇನ್ನೃಪಶ್ರಿಯಂ ॥ ೪೫ ॥

ತಸ್ಮಾತ್ತ್ವತ್ತೋಽಧಿಕೋ ನಾಸ್ತಿ ದುಃಖೀ ಲೋಕೇಷು ಕಶ್ಚನ ।
ಸುಪುತ್ರಾಣಾಂ ಪಿತೄಣಾಂ ಹಿ ಸುಖಂ ಯಾತಿ ಕ್ಷಣಂ ನೃಪ ॥ ೪೬ ॥

ದುಃಖೇನ ಪಾಪಭೋಕ್ತೄಣಾಂ ವಿಷಯಾಸಕ್ತಚೇತಸಾಂ ।
ಸರ್ವಾಶ್ಚ ಪ್ರಕೃತೀ ರಾಜಂಸ್ತವೇಷ್ಟಾಃ ಪೂರ್ಣಪುಣ್ಯಜಾಃ ॥ ೪೭ ॥

ಧರ್ಮಾಂಗದೇ ಪಾಲಯಾನೇ ಕಥಂ ತ್ವಂ ವೀಕ್ಷಸೇಽಧುನಾ ।
ಪರಿತ್ಯಜ್ಯ ಪ್ರಿಯಾಸೌಖ್ಯಂ ಕೀನಾಶ ಇವ ದುರ್ಬಲಃ ॥ ೪೮ ॥

---

೪೪. ದೊರೆಯೇ! ಬಹುಕಾಲದಿಂದಲೂ ರಾಜ್ಯಾಡಳಿತವೆಲ್ಲವನ್ನೂ ನೀನೇ ನಡೆಯಿಸುತ್ತಿರುವೆ. ಆದರೂ ನಿನಗೆ ರಾಜ್ಯಾಧಿಕಾರದಾಶೆಯು ಇನ್ನೂ ಹೋಗಲಿಲ್ಲ.

೪೫-೪೬. ಆದುದರಿಂದ ಈ ಭೂತಲದಲ್ಲಿ ನಿನ್ನನ್ನು ಪಾಪಿಯೆಂದು ತಿಳಿದಿರುವೆನು. ಪುತ್ರನು ರಾಜ್ಯಭಾರನಡೆಸಲು ಸಮರ್ಥನಾಗಿರುವನೆಂದು ನೀನು ತಿಳಿದೂ ಸ್ವತಃ ರಾಜ್ಯಾಡಳಿತವನ್ನು ನಡೆಯಿಸುತ್ತಿರುವಿಯಾದಕಾರಣ ನಿನಗಿಂತಲೂ ಹೆಚ್ಚುದುಃಖಪಡುವವನು ಲೋಕದಲ್ಲಿ ಯಾರೂ ಇಲ್ಲ. ದೊರೆಯೇ! ಒಳ್ಳೆಯಮಕ್ಕಳನ್ನು ಪಡೆದಿರುವ ಪಿತೃಗಳಿಗೆ ಕ್ಷಣಮಾತ್ರದಲ್ಲಿ ಸುಖವುಬರುತ್ತದೆ.

೪೭. ರಾಜನೇ! ದುಃಖದಿಂದ ಪಾಪವನ್ನು ಭೋಗಿಸುವ ವಿಷಯಾಸಕ್ತಚಿತ್ತರ ಪೂರ್ವಪುಣ್ಯಜನಿತವಾದ ಸಕಲ ಪ್ರಕೃತಿಗಳೂ ನಿನಗೆ ಇಷ್ಟವಾಗಿವೆ.

೪೮. ಧರ್ಮಾಂಗದನು ರಾಜ್ಯವನ್ನು ಪಾಲಿಸುತ್ತಿರುವಾಗ ದುರ್ಬಲನಾದ ಧರಿದ್ರನಂತೆ ಪತ್ನೀಸುಖವನ್ನು ಬಿಟ್ಟು ನೀನು ರಾಜ್ಯಾಡಳಿತವನ್ನು ಹೇಗೆ ನೋಡುತ್ತಿರುವೆ?

ಯದಿ ಪಾಲಯಸೇ ರಾಜ್ಯಂ ಮಯಾ ಕಿಂ ತೇ ಪ್ರಯೋಜನಂ |
ನಿಷ್ಪ್ರಯೋಜನಮಾನೀತಾ ಕ್ಷೀರಸಾಗರಮಸ್ತಕಾತ್ || ೪೯ ||

ವಿಡ್ಭೋಜ್ಯಾ ಹಿ ಭವಿಷ್ಯಾಮಿ ಪಕ್ಷಿಣಾಮಾಮಿಷಂ ಯಥಾ |
ಯೋ ಭಾರ್ಯಾಂ ಯೌವನೋಪೇತಾಂ ನ ಸೇವೇದಿಹ ದುರ್ಮತಿಃ ||೫೦ ||

ಕೃತ್ಯಾಚರಣಶಕ್ತಸ್ತು ಕುತಸ್ತಸ್ಯ ಭವೇತ್ಪ್ರಿಯಾ |
ಅಸೇವಿತಾ ವ್ರಜೇದ್ಭಾರ್ಯಾ ಅದತ್ತಂ ಹಿ ಧನಂ ವ್ರಜೇತ್ || ೫೧ ||

ಅರಕ್ಷಿತಂ ವ್ರಜೇದ್ರಾಜ್ಯಂ ಅನಭ್ಯಸ್ತಶ್ರುತಂ ವ್ರಜೇತ್ |
ನಾಲಸ್ಯೈಃ ಪ್ರಾಪ್ಯತೇ ವಿದ್ಯಾ ನ ಭಾರ್ಯಾ ವ್ರತಸಂಸ್ಥಿತೈಃ || ೫೨ ||

ನಾನುಷ್ಠಾನಂ ವಿನಾ ಲಕ್ಷ್ಮೀರ್ನಾಭಕ್ತೈಃ ಪ್ರಾಪ್ಯತೇ ಯಶಃ |
ನೋದ್ಯಮೀ ಸುಖಮಾಪ್ನೋತಿ ನಾಭಾರ್ಯಃ ಸಂತತಿಂ ಲಭೇತ್ || ೫೩ ||

---

೪೯. ನೀನು ರಾಜ್ಯಪಾಲನೆಯಲ್ಲಿಯೇ ಆಸಕ್ತನಾಗಿರುವುದಾದರೆ ನನ್ನಿಂದ ನಿನಗೇನು ಪ್ರಯೋಜನ? ವ್ಯರ್ಥವಾಗಿ ಕ್ಷೀರಸಮುದ್ರದ ಶಿರೋಭಾಗ ದಿಂದ ನನ್ನನ್ನು ಕರೆದುಕೊಂಡುಬಂದಂತಾಯಿತು.

೫೦-೫೧. ಪಕ್ಷಿಗಳು ಮಾಂಸವನ್ನು ತಿನ್ನುವಂತೆ ನಾನು ಮಲ ವನ್ನು ತಿನ್ನುವೆನು. ಕೃತ್ಯಾಚರಣಶಕ್ತನಾದ ಯಾವದುರ್ಬುದ್ಧಿಯು ಈ ಲೋಕ ದಲ್ಲಿ ಯುವತಿಯಾದ ಪತ್ನಿಯೊಡನೆ ಭೋಗಿಸುವುದಿಲ್ಲವೋ ಅಂತಹವನಿಗೆ ಪತ್ನಿ ಯೇತಕ್ಕೆ? ಭೋಗಿಸಲ್ಪಡದಿರುವ ಭಾರ್ಯೆಯು ಹೋಗುವಳು. ದಾನಮಾಡದಿ ರುವ ಧನವು ಹೋಗುವುದು.

೫೨. ಕಾಪಾಡದಿದ್ದಲ್ಲಿ ರಾಜ್ಯವು ಹೋಗುವುದು. ಅಭ್ಯಾಸಮಾಡ ದಿದ್ದರೆ ಅಧ್ಯಯನವು ವ್ಯರ್ಥವಾಗುವುದು. ಸೋಮಾರಿಗಳಿಗೆ ವಿದ್ಯೆಯು ಬರು ವುದಿಲ್ಲ. ವ್ರತನಿಷ್ಠರಿಗೆ ಭಾರ್ಯೆಯು ಒಲಿಯುವುದಿಲ್ಲ.

೫೩. ಅನುಷ್ಠಾನವಿಲ್ಲದೆ ಸಂಪತ್ತು ದೊರೆಯುವುದಿಲ್ಲ. ಭಕ್ತರಲ್ಲದವ ರಿಗೆ ಕೀರ್ತಿಯು ಬರುವುದಿಲ್ಲ. ಉದ್ಯೋಗಪರನಲ್ಲದವನು ಸುಖವನ್ನು ಪಡೆಯು ವುದಿಲ್ಲ. ಹೆಂಡತಿಯಿಲ್ಲದವನು ಸಂತಾನವನ್ನು ಹೊಂದುವುದಿಲ್ಲ.

ನಾಶುಚಿರ್ಧರ್ಮಮಾಪ್ನೋತಿ ನ ವಿಪ್ರೋ ಪ್ರಿಯವಾಗ್ಧನಂ ।
ಅಪೃಚ್ಛನ್ನೈವ ಜಾನಾತಿ ಅಗಚ್ಛನ್ನ ಕ್ವಚಿದ್ವ್ರಜೇತ್ ॥ ೫೪ ॥
ಅಶಿಷ್ಯೋ ನ ಕ್ರಿಯಾಂ ವೇತ್ತಿ ನ ಭಯಂ ವೇತ್ತಿ ಜಾಗರೀ ।
ತಸ್ಮಾದ್ಭೂಪಾಲ ಮಾಂ ತ್ಯಕ್ತ್ವಾ ಧರ್ಮಾಂಗದಗೃಹೇ ಶುಭೇ ॥ ೫೫ ॥
ವೀಕ್ಷ್ಯಸೇ ರಾಜ್ಯಪವವೀಂ ಸಮರ್ಥೇ ತನಯೇ ವಿಭೋ ॥ ೫೬ ॥

ಏವಂ ಬ್ರುವಾಣಾಂ ತನಯಾಂ ವಿಧೇಸ್ತು
ರತಿಪ್ರಿಯಾಂ ಚಾರುವಿಶಾಲನೇತ್ರಾಂ ।
ವ್ರೀಡಾನ್ವಿತಃ ಪುತ್ರಸಮೀಪವರ್ತೀ
ಪ್ರೋವಾಚ ವಾಕ್ಯಂ ನೃಪತಿಃ ಪ್ರಿಯಾಂ ತಾಂ ॥ ೫೭ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ
ಮೋಹಿನೀಚರಿತೇ ಮೋಹಿನೀವಚನಂ ನಾಮ
ಸಪ್ತದಶೋಽಧ್ಯಾಯಃ

---

೫೪. ಅಶುದ್ಧನು ಧರ್ಮವನ್ನು ಹೊಂದುವುದಿಲ್ಲ. ಒಳ್ಳೆಯಮಾತನಾಡುವ ಬ್ರಾಹ್ಮಣನು ಹಣವನ್ನು ಸಂಪಾದಿಸಲಾರನು. ಪ್ರಶ್ನೆಮಾಡದಿರುವವನು ತತ್ವವನ್ನು ತಿಳಿಯುವುದಿಲ್ಲ. ಸಂಚಾರಮಾಡದಿರುವವನು ಎಲ್ಲಿಯೂ ಹೋಗಲಾರನು.

೫೫-೫೬. ಶಿಷ್ಯನಾಗದಿದ್ದವನು ವಿಹಿತಕ್ರಿಯೆಗಳನ್ನು ತಿಳಿಯುವುದಿಲ್ಲ. ಎಚ್ಚರದಿಂದಿರುವವನು ಭಯವನ್ನು ತಿಳಿಯುವುದಿಲ್ಲ. ಭೂಪಾಲನೇ! ಶುಭವಾದ ಧರ್ಮಾಂಗದನ ಮನೆಯಲ್ಲಿ ನನ್ನನ್ನು ಬಿಟ್ಟು ಪುತ್ರನು ಸಮರ್ಥನಾಗಿದ್ದರೂ ನೀನೇ ರಾಜ್ಯಾಡಳಿತವನ್ನು ಏಕೆ ನೋಡುತ್ತಿರುವೆ?

೫೭. ಈ ರೀತಿ ಹೇಳುತ್ತಿರುವ ಸಂಭೋಗಪ್ರಿಯಳಾದ, ಮನೋಹರವಾದ ವಿಶಾಲನೇತ್ರಗಳುಳ್ಳ, ಪ್ರಿಯಳಾದ, ಆ ಬ್ರಹ್ಮಪುತ್ರಿಯನ್ನು ಕುರಿತು ದೊರೆಯು ಮಾತನಾಡಿದನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತೆಯೊಳು
ಮೋಹಿನೀನುಡಿಯೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ.

ಧರ್ಮಾಂಗದಕುಮಾರನು ಹೇಳಿದ ಪತಿವ್ರತೋಪಾಖ್ಯಾನವನ್ನು ಕೇಳಿ ಸಂಧ್ಯಾವಳಿಯು, ಕುಮಾರನನ್ನು ಪ್ರಶಂಸಿಸಿ, ಅವನಮಾತಿನಂತೆ ಮೋಹಿನಿಗೆ ಮೃಷ್ಟಾನ್ನ ಭೋಜನಮಾಡಿಸಿದಳು. ಅನಂತರ ಮೋಹಿನಿಯು ನನ್ನ ಮಾರ್ಗಾಯಾಸದಿಂದ ನೀನು ಧರ್ಮಾಂಗದಜನನಿಯೆಂಬುದನ್ನೂ ಸಹ ತಿಳಿಯಲಿಲ್ಲವೆಂದು ಸಂಧ್ಯಾವಳಿಗೆ ಹೇಳಲು ಧರ್ಮಾಂಗದನು ಮಾತನಾಡಲುಪಕ್ರಮಿಸಿ ತನ್ನ ಸಮಾನ ನಡೆವಳಿಕೆಯಿಂದ ಜನನಿಯನ್ನು ನಿರ್ಣಯಿಸುವುದು ಕಷ್ಟವೆಂದು ಮುಂತಾಗಿ ನುಡಿದು ತನ್ನ ಮಾತಾಪಿತೃಗಳಭಕ್ತಿಯನ್ನು ವ್ಯಕ್ತಪಡಿಸಿದನು. ಅದನ್ನು ಕೇಳಿ ವಿಸ್ಮಿತಳಾದ ಮೋಹಿನಿಯು ರುಕ್ಮಾಂಗದನನ್ನು ಕರೆಯಿಸಿಕೊಂಡು ಸಮರ್ಥನಾದ ಮಗನಿರುವಾಗ ನೀನು ರಾಜ್ಯಾಧಿಕಾರವನ್ನು ಅವನಿಗೆ ವಹಿಸಿ ನನ್ನೊಡನೆ ಸುಖವಾಗಿರದೆ ನೀನೇ ರಾಜ್ಯಭಾರಮಾಡುತ್ತಿರುವುದು ತಪ್ಪುಮುಂತಾಗಿ ಹೇಳಿದಳು. ಅದನ್ನು ಕೇಳಿ ರಾಜನು ಉತ್ತರಹೇಳುವನೆಂಬಲ್ಲಿ ಅಧ್ಯಾಯವು ಕೊನೆಗಂಡಿದೆ.

# ಅಷ್ಟಾದಶೋಽಧ್ಯಾಯಃ

---

## ರಾಜೋವಾಚ

ಸಾಧಿಕಾರೋ ಮಯಾ ಭೀರು ಕೃತೋ ನೃಪಪರಿಗ್ರಹೇ ।
ಶ್ರಮಾತುರಸ್ಯ ನಿದ್ರಾ ಮೇ ಪ್ರವೃತ್ತಾ ಸುಖದಾಯಿನೀ ॥ ೧ ॥

ಧರ್ಮಾಂಗದಂ ಸಮಾಭಾಷ್ಯ ಮೋಹಿನೀಂ ನಯ ಮಂದಿರಂ ।
ಪೂಜಯಸ್ವ ಯಥಾನ್ಯಾಯ್ಯಮೇಷಾ ಪತ್ನೀ ಪ್ರಿಯಾ ಮಮ ॥ ೨ ॥

ನಿಜಂ ಕಮಲಪತ್ರಾಕ್ಷಂ ಸರ್ವರತ್ನವಿಭೂಷಿತಂ ।
ನಿರ್ವಾತವಾತಸಂಯುಕ್ತಂ ಸರ್ವತ್ರ ಸುಖದಾಯಕಂ ॥ ೩ ॥

ಏವಮಾದಿಶ್ಯ ತನಯಮಹಂ ನಿದ್ರಾಮುಪಾಗತಃ ।
ಶಯನಂ ಪ್ರಾಪ್ಯ ಕಷ್ಟಾರ್ತ ಅಭಾಗ್ಯೋ ಹಿ ಧನಂ ಯಥಾ ॥ ೪ ॥

---

## ಹದಿನೆಂಟನೆಯ ಅಧ್ಯಾಯವು

೧-೪. ರಾಜನು ಹೇಳಿದನು :—ರಾಜಪತ್ನಿಯೇ ! ನಾನು ರಾಜ್ಯಾಡಳಿತಗಳನ್ನು ನೋಡುತ್ತಿರಲಿಲ್ಲ. ಮಾರ್ಗಾಯಾಸದಿಂದ ಬಳಲಿದ ನನಗೆ ಸುಖಕರವಾದ ನಿದ್ರೆಯು ಬಂದಿತು. ಆದುದರಿಂದ ಕಮಲದಳದಂತೆ ಕಣ್ಣುಳ್ಳ, ಸಕಲರತ್ನಗಳಿಂದಲಂಕೃತನಾದ, ಗಾಳಿಯಿಲ್ಲದಿರುವಾಗಲೂ ಗಾಳಿಯನ್ನು ಸಂಯೋಜನೆ ಮಾಡುವ, ಎಲ್ಲಾಕಡೆಗಳಲ್ಲಿಯೂ ಸುಖಪ್ರದನಾದ, ನನ್ನ ಮಗ ಧರ್ಮಾಂಗದನನ್ನು ಕೂಗಿ “ ಈ ಮೋಹಿನಿಯು ನನಗೆ ಪ್ರಿಯಪತ್ನಿಯು, ಈಕೆಯನ್ನು ಮನೆಗೆ ಕರೆದುಕೊಂಡು ಹೋಗು. ಅಲ್ಲಿ ಯಥಾಯೋಗ್ಯವಾಗಿ ಸತ್ಕಾರಮಾಡು ” ಎಂದು ಅವನಿಗೆ ಅಪ್ಪಣೆಮಾಡಿ ಹಾಸಿಗೆಯಮೇಲೆ ಮಲಗಿ, ಕಷ್ಟಪಡುತ್ತಿರುವ ದರಿದ್ರನು ಧನವನ್ನು ಹೊಂದಿದಂತೆ ನಿದ್ರೆಯನ್ನು ಹೊಂದಿದೆನು,

ವಿಬುದ್ಧಮಾತ್ರಃ ಸಹಸಾ ತ್ವತ್ಸಮೀಪಮುಪಾಗತಃ !
ಯದ್ಬ್ರವೀಷಿ ವಚೋ ದೇವಿ ತತ್ಕರೋಮಿ ನ ಸಂಶಯಃ ॥ ೫ ॥

ಮೋಹಿನ್ಯುವಾಚ

ಪರಿಸಾಂತ್ವಯ ರಾಜೇಂದ್ರ ಇಮಾನ್ ದಾರಾನ್ ಸುದುಃಖಿತಾನ್ ।
ಮನ್ಮೋದ್ವಾಹೇನ ನಿರ್ವಿಣ್ಣಾನ್ನಿರಾಶಾನ್ ಕಾಮಭೋಗಯೋಃ ॥ ೬ ॥

ಜ್ಯೇಷ್ಠಾನಾಂ ರೂಪಯುಕ್ತಾನಾಂ ಕಲತ್ರಾಣಾಂ ವಿಶಾಂಪತೇ ।
ಮೂರ್ಧ್ನಿ ಕೀಲಂ ಕನಿಷ್ಠಾಖ್ಯಂ ಯೋ ಹಿ ರಾಜನ್ನಿಖಾನಯೇತ್ ॥ ೭ ॥

ನ ಸದ್ಗತಿರ್ಭವೇತ್ತಸ್ಯ ನ ಚ ಸಾ ವಿಂದತೇ ಪರಂ ।
ಪತಿವ್ರತಾಶ್ರುದಗ್ಧಾಯಾಃ ಕಾ ಶಾಂತಿರ್ಮೇ ಭವಿಷ್ಯತಿ ॥ ೮ ॥

ಜನಿತಾರಂ ಹಿ ಮೇ ಭಸ್ಮ ಕುರ್ಯುರ್ದೇವ್ಯಃ ಪತಿವ್ರತಾಃ ।
ಕಿಂ ಪುನಃ ಪ್ರಾಕೃತಿಂ ಭೂಪ ತ್ವಾದೃಶೀಂ ಮಾದೃಶೀಂ ತಥಾ ॥ ೯ ॥

---

೫. ಎದ್ದಕೂಡಲೇ ನಿನ್ನಬಳಿಗೆ ಬಂದಿರುವೆನು. ದೇವಿಯೇ! ನೀನು ಹೇಳುವುದನ್ನು ನಡೆಯಿಸುವೆನು ಸಂದೇಹಪಡಬೇಡ.

೬. ಮೋಹಿನಿಯು ಹೇಳಿದಳು :—ರಾಜೇಂದ್ರನೇ! ನೀನು ನನ್ನನ್ನು ಮದುವೆಮಾಡಿಕೊಂಡುದರಿಂದ ಕಾಮಭೋಗಗಳಲ್ಲಿ ನಿರಾಶೆಹೊಂದಿದ, ದೀನರಾಗಿ ದುಃಖಪಡುತ್ತಿರುವ, ನಿನ್ನಭಾರ್ಯೆಯರನ್ನು ಮೊದಲು ಸಮಾಧಾನಪಡಿಸು.

೭-೮. ರಾಜನೇ! ಹಿರಿಯರೂ, ರೂಪವತಿಯರೂ ಆಗಿರುವ ಪತ್ನಿಯರ ಶಿರಸ್ಸಿನಲ್ಲಿ ಕನಿಷ್ಠಪತ್ನಿಯೆಂಬ ಗೂಟವನ್ನು ನಾಟುವವನಿಗೆ ಸದ್ಗತಿಯಾಗುವುದಿಲ್ಲ. ಆ ಚಿಕ್ಕಹೆಂಡತಿಯೂ ಸಹ ಉತ್ತಮಗತಿಯನ್ನು ಪಡೆಯಲಾರಳು. ಪತಿವ್ರತೆಯರ ಕಣ್ಣೀರಿನಿಂದ ಸುಡಲ್ಪಟ್ಟ ನನಗೆ ಯಾವಸುಖವಾದೀತು?

೯. ಪತಿವ್ರತೆಯರಾದ ದೇವಿಯರು ನನ್ನಜನಕನಾದ ಬ್ರಹ್ಮನನ್ನೇ ಸುಟ್ಟು ಬೂದಿಮಾಡುವರು. ಹೀಗಿರುವಾಗ ನನ್ನ ನಿನ್ನಂತಹ ಪ್ರಾಕೃತಮನುಷ್ಯರ ಪಾಡೇನು?

ಸಂಧ್ಯಾವಲೀಸಮಾ ನಾರೀ ತ್ರೈಲೋಕ್ಯೇ ನಾಸ್ತಿ ಭೂಮಿಪ ।
ತವ ಸ್ನೇಹನಿಬದ್ಧಾಂಗೀ ಸಂಭೋಜಯತಿ ಷಡ್ರಸೈಃ ॥ ೧೦ ॥

ಪ್ರಿಯಾಣಿ ಚಾಟುವಾಕ್ಯಾನಿ ವದತೀ ತವ ಗೌರವಾತ್ ।
ಏವಂ ವಿಧಾ ಹಿ ಸುದೃಶೋ ನಾರ್ಯಃ ಸಂತಿ ಗೃಹೇ ತವ ॥ ೧೧ ॥

ಯಾಸಾಂ ನ ಪಾದರಜಸಾ ತುಲ್ಯಾಹಂ ಭೂಪತೇ ಕ್ವಚಿತ್ ।
ಮೋಹಿನೀವಚನಂ ಶ್ರುತ್ವಾ ವ್ರೀಡಿತೋ ಹ್ಯಭವನ್ನೃಪಃ ॥ ೧೨ ॥

ಸುಪುತ್ರಾಯಾಃ ಸಮೀಪೇ ತು ಜ್ಯೇಷ್ಠಾಯಾ ನೃಪತಿಸ್ತದಾ ।
ಇಂಗಿತಜ್ಞಃ ಸುತೋ ಜ್ಞಾತ್ವಾ ದಶಾವಸ್ಥಾಗತಂ ನೃಪಂ ॥ ೧೩ ॥

ಪಿತರಂ ಕಾಮಸಂತಪ್ತಂ ಮೋಹಿನ್ಯರ್ಥೇ ವಿಮೋಹಿತಂ ।
ಮಾತೄಃ ಸರ್ವಾಃ ಸಮಾಹೂಯ ಸಂಧ್ಯಾವಲಿಪುರೋಗಮಾಃ ॥ ೧೪ ॥

---

೧೦. ಭೂಪಾಲನೇ! ಸಂಧ್ಯಾವಳಿದೇವಿಗೆ ಸಮಾನಳಾದ ನಾರೀಮಣಿಯು ಮೂರುಲೋಕಗಳಲ್ಲಿಯೂ ಇಲ್ಲ. ನಿನ್ನಲ್ಲಿ ಅನುರಕ್ತಳಾಗಿ ಷಡ್ರಸಯುಕ್ತವಾದ ಮೃಷ್ಟಾನ್ನವನ್ನು ಭೋಜನಮಾಡಿಸುವಳು.

೧೧. ನಿನ್ನಲ್ಲಿನ ಗೌರವದಿಂದ ಹಿತವಾದ ಪರಿಹಾಸವಚನಗಳನ್ನಾಡುವಳು. ಈರೀತಿಯಾದ ಸುಜ್ಞನಾರೀಮಣಿಗಳು ನಿನ್ನ ಮನೆಯಲ್ಲಿರುವರು.

೧೨-೧೫. ಭೂಪತಿಯೇ! ಅವರ ಪಾದಧೂಳಿಗೂ ನಾನು ಸಮಾನಳಲ್ಲ. ಹೀಗೆ ಮೋಹಿನಿಯು ಹೇಳಿದಮಾತನ್ನು ಕೇಳಿ ದೊರೆಯು ಪುತ್ರಸಹಿತಳಾದ ಹಿರೀಹೆಂಡತಿಯ ಇದಿರಿಗೆ ನಾಚಿಕೆಯನ್ನು ಹೊಂದಿದನು.

ಆಗ ಇಂಗಿತವನ್ನು ತಿಳಿಯಲು ಸಮರ್ಥನಾದ ಮಗನು ಕಾಮಪೀಡಿತನೂ, ಮೋಹಿನಿಯಲ್ಲಿ ಮೋಹಗೊಂಡಿರುವವನೂ, ದಶಾವಸ್ಥೆಯನ್ನು ಹೊಂದಿರುವವನೂ ಆದ ತಂದೆಯ ಮನೋಭಿಪ್ರಾಯವನ್ನರಿತು ಸಂಧ್ಯಾವಳಿಯೇ ಮೊದಲಾದ

**ಕೃತಾಂಜಲಿಪುಟೋ ಭೂತ್ವಾ ಏವಮಾಹ ಪ್ರಿಯಂ ವಚಃ ।**
**ವಿಮೋಹಿನೀ ಮೇ ಜನನೀ ನವೋಢಾ ಬ್ರಹ್ಮಣಃ ಸುತಾ ॥ ೧೫ ॥**

**ಸಾ ಚ ಪ್ರಾರ್ಥಯತೇ ದೇವ್ಯೋ ರಾಜಾನಂ ರಹಸಿ ಸ್ಥಿತಂ ।**
**ಆತ್ಮನಾ ಸಹ ಖೇಲಾರ್ಥಂ ತನ್ಮೋದಧ್ವಂ ಸುಹರ್ಷಿತಾಃ ॥ ೧೬ ॥**

ಮಾತರ ಊಚುಃ

**ಕೋನುಮೋದಯತೇ ಪುತ್ರ ಸರ್ಪಭಕ್ಷಣಮಾತ್ಮನಃ ।**
**ಕೋಹಿ ದೀಪಯತೇ ವಹ್ನಿಂ ಸ್ವದೇಹೇ ದೇಹಿನಾಂ ವರ ॥ ೧೭ ॥**

**ಕೋ ಭಕ್ಷಯೇದ್ವಿಷಂ ಘೋರಂ ಕಶ್ಛಿಂದ್ಯಾದಾತ್ಮನಃ ಶಿರಃ ।**
**ಕಸ್ತರೇತ್ಸಾಗರಂ ಬಧ್ವಾ ಗ್ರೀವಾಯಾಂ ದಾರುಣೀಂ ಶಿಲಾಂ ॥ ೧೮ ॥**

---

ಮಾತೆಯರೆಲ್ಲರನ್ನೂ ಕರೆದು ಕೈಮುಗಿದುಕೊಂಡು ಈರೀತಿಯಾಗಿ ಪ್ರಿಯನುಡಿಗಳನ್ನಾಡಿದನು.

ಈಗತಾನೇ ನನ್ನ ತಂದೆಯನ್ನು ಮದುವೆಮಾಡಿಕೊಂಡಿರುವ, ಬ್ರಹ್ಮಪುತ್ರಿಯಾದ ಮೋಹಿನಿಯು ನನಗೆ ಮಾತೆಯು.

೧೬. ದೇವಿಯರೇ! ಆಕೆಯು ತನ್ನೊಡನೆ ವಿಹರಿಸುವುದಕ್ಕಾಗಿ ರಾಜನನ್ನು ಏಕಾಂತದಲ್ಲಿರಬೇಕೆಂದು ಪ್ರಾರ್ಥಿಸುತ್ತಾಳೆ. ಅದನ್ನು ನೀವು ಸಂತೋಷದಿಂದ ಅನುಮೋದಿಸಬೇಕೆಂದು ಪ್ರಾರ್ಥಿಸಿದನು.

೧೭. ಮಾತೆಯರು ಹೇಳಿದರು :—ಪುತ್ರಾ! ವಿಷಮಯವಾದ ಸರ್ಪಭಕ್ಷಣವನ್ನು ಯಾರು ಒಪ್ಪುವರು? ದೇಹಿ ಶ್ರೇಷ್ಠನೇ! ಯಾವನು ತನ್ನ ಶರೀರಕ್ಕೆ ಬೆಂಕಿಹಾಕಿ ಉರಿಸಿಯಾನು?

೧೮. ಯಾವನು ಘೋರವಿಷವನ್ನು ಕುಡಿಯುವನು? ಯಾವನು ತನ್ನ ತಲೆಯನ್ನು ಕತ್ತರಿಸಿಕೊಳ್ಳುವನು? ಯಾವನು ಕುತ್ತಿಗೆಯಲ್ಲಿ ಕಠಿನಶಿಲೆಯನ್ನು ಕಟ್ಟಿಕೊಂಡು ಸಮುದ್ರವನ್ನು ದಾಟಲು ಹೊರಡುವನು?

ಕೋ ಗಚ್ಛೇದ್ದ್ವಿಪಿವದನಂ ಕಃ ಕೇಶಾನ್ ಸುಹರೇರ್ಹರೇತ್ |
ಕೋ ನಿಷೀದತಿ ಧಾರಾಯಾಂ ಖಡ್ಗಸ್ಯಾಕಾಶಭಾಸಿನಃ || ೧೯ ||

ಕಾನುಮೋದಯತೇ ಭರ್ತ್ರಾ ಸಪತ್ನ್ಯಾಃ ಕ್ರೀಡನಂ ಕಿಲ |
ಸರ್ವಸ್ಯಾಪಿ ಪ್ರದಾನೇನ ನೈತನ್ಮನಸಿ ವರ್ತತೇ || ೨೦ ||

ವರಂ ಹಿ ಛೇದನಂ ಮೂರ್ಧ್ನಸ್ತತ್ಕ್ಷಣಾತ್ತು ವರಾಸಿನಾ |
ಕಾ ದೃಷ್ಟ್ವಾ ದಯಿತಂ ಕಾಂತಂ ನಿರೀಕ್ಷೇದನ್ಯಯಾದೃತಂ || ೨೧ ||

ಕಾ ಸಾ ಸೀಮಂತಿನೀ ಲೋಕೇ ಭವೇದೇತಾದೃಶೀ ಕ್ವಚಿತ್ |
ಆತ್ಮಪ್ರಾಣಸಮಂ ಕಾಂತಮನ್ಯಸ್ತ್ರೀಕುಚಪೀಡನಂ || ೨೨ ||

ಸಂಶ್ರುತ್ಯ ಸಹತೇ ಯಾ ತು ಕಿಂಪುನಃ ಸ್ವೇನ ಚಕ್ಷುಷಾ |
ಸರ್ವೇಷಾಮೇವ ದುಃಖಾನಾಂ ದುಃಖಮೇತದನಂತಕಂ || ೨೩ ||

---

೧೯-೨೦. ಆನೆಯಬಾಯಿಗೆ ಸಿಕ್ಕಲು ಯಾವನಿಚ್ಛಿಸುವನು? ಯಾವನು ಸಿಂಹದಕೇಶಗಳನ್ನು ಅಪಹರಿಸಿಯಾನು? ಆಕಾಶದಲ್ಲಿ ಪ್ರಕಾಶಿಸುತ್ತಿರವ ಖಡ್ಗ ಧಾರೆಗೆ ಸಿಕ್ಕುವವನಾರು? ಯಾವಳು ಸೌತಿಯೊಡನೆ ಗಂಡನು ವಿಹರಿಸುವುದನ್ನು ಒಪ್ಪಿಯಾಳು! ಸರ್ವಸ್ವವನ್ನೂ ಕೊಟ್ಟರೂ ಇದುಮನಸ್ಸಿಗೆ ಬರುವುದಿಲ್ಲ.

೨೧. ಇದನ್ನು ಕೇಳಿದ ತಕ್ಷಣದಲ್ಲಿಯೇ ಒಳ್ಳೆಯಕತ್ತಿಯಿಂದ ತಲೆಯನ್ನು ಕತ್ತರಿಸಿಕೊಳ್ಳುವುದೇ ಲೇಸು! ಯಾವಳು ಇನ್ನೊಬ್ಬಳ ಅನುರಾಗಕ್ಕೆ ಪಾತ್ರನಾದ ಪ್ರಿಯಪತಿಯನ್ನು ಕಣ್ಣಿನಿಂದ ನೋಡಿಯಾಳು?

೨೨-೨೩. ಇದನ್ನೂ ಸಹಿಸುವಂತಹ ಸ್ತ್ರೀಯು ಲೋಕದಲ್ಲಿ ಎಲ್ಲಿ ಯಾವಳಿರುವಳು? ತನ್ನ ಪ್ರಾಣಕ್ಕೆ ಸಮಾನನಾದ ಕಾಂತನು ಇನ್ನೊಬ್ಬಹೆಂಗಸಿನ ಸ್ತನಮರ್ದನೆಮಾಡುತ್ತಿರುವುದನ್ನು ಕೇಳಿಯೇ ಯಾರೂ ಸಹಿಸಲಾರರು. ಹೀಗಿರುವಾಗ ಅದನ್ನು ತನ್ನ ಕಣ್ಣಿನಿಂದನೋಡಿ ಸಹಿಸುವವಳಾರು? ಸಕಲದುಃಖಗಳಿಗಿಂತಲೂ ಈ ದುಃಖವು ಅಪರಿಮಿತವಾದುದು.

ಯದ್ಭರ್ತಾನ್ಯಾಂಗನಾಸಕ್ತೋ ದೃಶ್ಯತೇ ಸ್ವೇನ ಚಕ್ಷುಷಾ ।
ವರಂ ಸರ್ವಾ ಮೃತಾಃ ಪುತ್ರ ಯುಗಪನ್ಮಾತರಸ್ತವ ॥ ೨೪ ॥

ನ ತು ಮೋಹಿನಿಸಂಯುಕ್ತೋ ದೃಶ್ಯೋಽಯಂ ನೃಪತಿಃ ಪತಿಃ ।

ಧರ್ಮಾಂಗದ ಉವಾಚ

ಯದಿ ಮೇ ನ ಪಿತುಃ ಸೌಖ್ಯಂ ಕರಿಷ್ಯಥ ಶುಭಾನನಾಃ ॥ ೨೫ ॥

ವಿಷಮಾಲೋಡ್ಯ ಪಾಸ್ಯಾಮಿ ಯುಷ್ಮತ್ಸೌಖ್ಯಂ ಮೃತೇ ಮಯಿ ।
ಕರ್ಮಣಾ ಮನಸಾ ವಾಚಾ ಯಾ ಪಿತುರ್ದುಃಖಮಾಚರೇತ್ ॥ ೨೬ ॥

ಸಾ ಮೇ ಶತ್ರುರ್ವಧಾರ್ಹಾಸ್ತಿ ಯದಿ ಸಂಧ್ಯಾವಲೀ ಭವೇತ್ ।
ಸರ್ವಾಸಾಂ ಸಾಧಿಕಾ ದೇವೀ ಮೋಹಿನೀ ಜನಕಪ್ರಿಯಾ ॥ ೨೭ ॥

ಕ್ರೀಡಾರ್ಥಮಾಗತಾ ಬಾಲಾ ಮಂದರಾಚಲಮಂದಿರಾತ್ ।
ತತ್ಪುತ್ರವಚನಂ ಶ್ರುತ್ವಾ ವೇಪಮಾನಾ ಹಿ ಮಾತರಃ ॥ ೨೮ ॥

---

೨೪. ಪತಿಯು ಅನ್ಯನಾರಿಯಲ್ಲಾಸಕ್ತನಾಗಿರುವುದನ್ನು ನಮ್ಮ ಕಣ್ಣಿನಿಂದ ನೋಡಿದರೆ ನಿನ್ನ ಮಾತೆಯರೆಲ್ಲರೂ ಒಟ್ಟಿಗೆ ಮೃತರಾಗುವರು.

೨೫-೨೭. ನಮ್ಮ ಪತಿಯಾದ ಈ ರಾಜನು ಮೋಹಿನಿಯೊಡಗೂಡಿರುವುದನ್ನು ನೋಡಲಾರೆವು.

ದರ್ಮಾಂಗದನು ಹೇಳಿದನು :—ಶುಭಾನನೆಯರೇ! ನೀವು ನನ್ನ ತಂದೆಗೆ ಸೌಖ್ಯವನ್ನುಂಟುಮಾಡದಿದ್ದರೆ ವಿಷವನ್ನು ಕಲೆಸಿ ಕುಡಿಯುವೆನು. ನಾನು ಸತ್ತರೆ ನಿಮಗೆ ಸೌಖ್ಯವು. ಕರ್ಮಮನೋವಾಕ್ಕುಗಳಿಂದ ಯಾವಳು ತಂದೆಗೆ ದುಃಖವನ್ನುಂಟುಮಾಡುವಳೋ ಅಂತಹವಳು ನನಗೆ ಶತ್ರುವು. ಸಂಧ್ಯಾವಳಿಯಾದರೂ ಸರಿ ಅಂತಹವಳು ಸಂಹಾರಕ್ಕೆ ಯೋಗ್ಯಳಾಗುವಳು. ಜನಕನಿಗೆ ಪ್ರಿಯಳಾದ ಆ ಮೋಹಿನೀದೇವಿಯು ಎಲ್ಲರಿಗಿಂತಲೂ ಅಧಿಕಳು.

೨೮-೩೨. ಆ ಬಾಲೆಯು ಮಂದರಪರ್ವತದಲ್ಲಿನ ತನ್ನ ಮನೆಯನ್ನು ಬಿಟ್ಟು ವಿಹಾರಾರ್ಥವಾಗಿ ಇಲ್ಲಿಗೆ ಬಂದಿರುವಳು. ಹೀಗೆ ಮಗನು ಹೇಳಿದ

ಊಚುಃ ಸಗದ್ಗದಾಂ ವಾಚಂ ಹಿತಾರ್ಥಂ ತನಯಸ್ಯ ಹಿ ।
ಅವಶ್ಯಂ ತವ ವಾಕ್ಯಂ ಹಿ ಕರ್ತವ್ಯಂ ನ್ಯಾಯಸಂಯುತಂ ॥ ೨೯ ॥

ಕಿಂ ತು ದಾನಪ್ರದೋ ಭೂತ್ವಾ ಮೋಹಿನೀಂ ಯಾತು ತೇ ಪಿತಾ ।
ಯೋ ಭಾರ್ಯಾಮುದ್ವಹೇದ್ಭರ್ತಾ ದ್ವಿತೀಯಾಮಪರಾಮಪಿ ॥ ೩೦ ॥

ಜ್ಯೇಷ್ಠಾಯೈ ದ್ವಿಗುಣಂ ತಸ್ಯೈ ದದ್ಯಾಚ್ಚೈವಾನ್ಯಥಾ ಋಣೀ ।
ಅನುಜ್ಞಾಪ್ಯ ಯದಾ ಭರ್ತಾ ಜ್ಯೇಷ್ಠಾಮನ್ಯಾಂ ಸಮುದ್ವಹೇತ್ ॥ ೩೧ ॥

ತದಾ ಜ್ಯೇಷ್ಠಾಭಿಲಷಿತಂ ದೇಯಮಾಹುಃ ಪುರಾವಿದಃ ।
ಜ್ಯೇಷ್ಠ್ಯಾ ಸಹಿತಃ ಕುರ್ಯಾದಿಷ್ಟಾಪೂರ್ತಂ ನರೋತ್ತಮಃ ॥ ೩೨ ॥

ಏಷ ಧರ್ಮೋಽನ್ಯಥಾನ್ಯೋ ಯೋ ಜಾಯತೇ ಧರ್ಮಸಂಕ್ಷಯಃ ।
ಶ್ರುತ್ವಾ ತು ಮಾತೃವಚನಂ ಪ್ರಹೃಷ್ಟೇನಾಂತರಾತ್ಮನಾ ॥ ೩೩ ॥

---

ಮಾತನ್ನು ಕೇಳಿ ಮಾತೆಯರು ನಡುಗುತ್ತಾ ಗದ್ಗದಕಂಠದಿಂದ ಕುಮಾರನಿಗೆ ಹಿತವಾದ ಮಾತನ್ನಾಡಿದರು :—

ಪುತ್ರನೇ! ನೀನು ಹೇಳಿದುದು ನ್ಯಾಯವಾದುದು. ಅದರಂತೆ ಅವಶ್ಯವಾಗಿ ನಡೆಯುವೆವು. ಆದರೆ ನಿನ್ನ ಜನಕನು ನಮಗಭಿಲಷಿತವಾದುದನ್ನು ಕೊಟ್ಟು ಮೋಹಿನಿಯೊಡನೆ ಭೋಗಿಸಲಿ. ಹಿರಿಯಹೆಂಡತಿಯಿರುವಾಗ ಬೇರೆ ಭಾರ್ಯೆಯನ್ನು ಮದುವೆಮಾಡಿಕೊಳ್ಳುವ ಗಂಡನು ಹಿರಿಯವಳಿಗೆ ಎರಡರಷ್ಟನ್ನು ಕೊಡಬೇಕು. ಹಾಗೆ ಕೊಡದಿದ್ದರೆ ಅವನು ಋಣಿಯಾಗುವನು. ಜ್ಯೇಷ್ಠಪತ್ನಿಯ ಸಮ್ಮತಿಪಡೆದು ಗಂಡನು ಇನ್ನೊಬ್ಬಳನ್ನು ಮದುವೆಯಾದಾಗ ಹಿರಿಯವಳು ಅಪೇಕ್ಷಿಸಿದುದನ್ನು ಕೊಡಬೇಕೆಂದು ಪುರಾತನಜ್ಞಾನಿಗಳು ಹೇಳುವರು. ಅಂತಹ ಪುರುಷನು ಜ್ಯೇಷ್ಠಪತ್ನಿಯೊಡನೆಯೇ ಇಷ್ಟಾಪೂರ್ತಗಳನ್ನಾಚರಿಸಬೇಕು.

೩೩-೩೪. ಇದು ಧರ್ಮಮಾರ್ಗವು. ಹೀಗೆ ನಡೆಯದಿದ್ದರೆ ಧರ್ಮಹಾನಿಯಾಗುವುದು. ಈರೀತಿಯಾಗಿ ಹೇಳಿದ ಮಾತೆಯರ ಮಾತನ್ನು ಕೇಳಿ

ಏಕೈಕಸ್ಯೈ ದದೌ ಸಾಗ್ರಾಂ ಕೋಟಿಂ ಕೋಟಿಂ ಸುತಸ್ತದಾ ।
ಸಹಸ್ರಂ ನಗರಾಣಾಂ ಚ ಗ್ರಾಮಾಣಾಂ ಪ್ರದದೌ ತಥಾ ॥ ೩೪ ॥

ಚತುರಶ್ವತರೀಭಿಶ್ಚ ಪೃಥಗ್ಯುಕ್ತಾ ನೃಪಾತ್ಮಜಃ ।
ಏಕೈಕಸ್ಯೈ ದದಾವಷ್ಟೌ ರಥಾನ್ ಕಾಂಚನಮಾಲಿನಃ ॥ ೩೫ ॥

ವಾಸಸಾಮಯುತಂ ಪ್ರಾದಾದ್ಯೇಷಾಂ ಮೂಲ್ಯಂ ಶತಾಧಿಕಂ ।
ಶುದ್ಧಸ್ಯ ಮೇರುಜಾತಸ್ಯ ಅಕ್ಷಯಸ್ಯ ನೃಪಾತ್ಮಜಃ ॥ ೩೬ ॥

ಕಾಂಚನಸ್ಯ ದದೌ ಲಕ್ಷಮೇಕೈಕಂ ಪ್ರತಿಮಾತರಂ ।
ದಾಸಾನಾಂ ಚ ಶತಂ ಸಾಗ್ರಂ ದಾಸೀನಾಂಚ ನೃಪಾತ್ಮಜಃ ॥ ೩೭ ॥

ಧೇನೂನಾಂ ಘಟದೋಗ್ಧ್ರೀಣಾಮೇಕೈಕಸ್ಯ ತಥಾಯುತಂ ।
ಯುಗಂಧರಾಣಾಂ ಭದ್ರಾಣಾಂ ಶತಾನಿ ದಶ ವೈ ಪೃಥಕ್ ॥ ೩೮ ॥

---

ಮನಸ್ಸಿನಲ್ಲಿ ಸಂತೋಷಪಟ್ಟು ಮಗನು ಒಬ್ಬೊಬ್ಬ ಮಾತೆಗೆ ಒಂದೊಂದು ಕೋಟಿಗಿಂತಲೂ ಹೆಚ್ಚಾಗಿ ಕೊಟ್ಟನು. ಹಾಗೆಯೇ ಸಾವಿರನಗರ ಮತ್ತು ಗ್ರಾಮಗಳನ್ನೂ ಸಹ ಕೊಟ್ಟನು.

೩೫. ರಾಜಪುತ್ರನು ಒಂದೊಂದಕ್ಕೂ ನಾಲ್ಕು ಹೇಸರಕತ್ತೆಗಳನ್ನು ಕಟ್ಟಿರುವ, ಕಾಂಚನಮಾಲೆಯುಳ್ಳ ಎಂಟೆಂಟು ರಥಗಳನ್ನು ಒಬ್ಬೊಬ್ಬ ಮಾತೆಯರಿಗೂ ಕೊಟ್ಟನು.

೩೬-೩೭. ನೂರಕ್ಕಿಂತ ಹೆಚ್ಚು ಬೆಲೆಬಾಳುವ ಹತ್ತುಸಾವಿರವಸ್ತ್ರಗಳನ್ನು ಒಬ್ಬೊಬ್ಬರಿಗೂ ಕೊಟ್ಟನು. ರಾಜಪುತ್ರನು ಪರಿಶುದ್ಧವಾದ, ಮೇರುಪರ್ವತದಲ್ಲಿ ಉದ್ಭವಿಸಿದ, ಅಕ್ಷಯವಾದ ಸುವರ್ಣನಾಣ್ಯಗಳನ್ನು ಒಬ್ಬೊಬ್ಬ ತಾಯಿಗೆ ಒಂದೊಂದುಲಕ್ಷದಂತೆ ಎಲ್ಲರಿಗೂ ಕೊಟ್ಟನು.

೩೮-೪೦. ಒಬ್ಬೊಬ್ಬ ಮಾತೆಗೂ ಒಂದು ಕೊಡ ಹಾಲು ಕರೆಯುವಂತಹ ಹತ್ತುಸಾವಿರ ಹಸುಗಳನ್ನು ಕೊಟ್ಟನು. ಒಂದುಸಾವಿರ ಒಳ್ಳೆಯ

ದಶಪ್ರಕಾರಂ ನೃಪತೇ ಧಾನ್ಯಂ ಚ ಪ್ರದದೌ ಸುತಃ |
ವಾಟೀನಾಂ ತು ಸಹಸ್ರಾಣಾಂ ಶತಂ ಪ್ರಾದಾದ್ಧಸನ್ನಿವ || ೩೯ ||

ಕುಂಭಾಯುತಂ ಸರ್ಪಿಷಸ್ತು ತೈಲಸ್ಯ ಚ ಪೃಥಗ್ದದೌ |
ಅಜಾವಿಕಮಸಂಖ್ಯಾತಮೇಕೈಕಸ್ಯೈ ನ್ಯವೇದಯತ್ || ೪೦ ||

ಸಹಸ್ರೇಣ ಸಹಸ್ರೇಣ ಸುವರ್ಣಸ್ಯ ವ್ಯಭೂಷಯತ್ |
ಆಖಂಡಲಾಸ್ತ್ರಯುಕ್ತಸ್ಯ ಭೂಷಣಸ್ಯ ಸುಭಕ್ತಿಮಾನ್ || ೪೧ ||

ಅಪ್ರಮಾಣೈರ್ಮೌಕ್ತಿಕಾದ್ಯೈರ್ಹರ್ರಕೈರ್ದೀಪ್ತಿಸಂಯುತೈಃ |
ಪ್ರದದೌ ಸಂಹತಾನ್ ಕೃತ್ವಾ ವಲಯಾನ್ ಪಂಚ ಸಪ್ತ ಚ || ೪೨ ||

ಪಂಚಾಶಚ್ಚ ಶತೇ ದ್ವೇ ತು ಮೌಕ್ತಿಕಾನಿ ಮಹೀಪತೇ |
ಸಂಧ್ಯಾವಲ್ಯಾ ಸ್ಥಿತಾನೀಹ ಶೀತಾಂಶುಪ್ರತಿಮಾನಿ ಚ || ೪೩ ||

ಏಕೈಕಸ್ಯೈ ದದೌ ಪುತ್ರೋ ಹಾರಯುಗ್ಮಂ ಮನೋಹರಂ |
ಕುಂಕುಮಂ ಚಂದನಂ ಭೂರಿ ಕರ್ಪೂರಂ ಪ್ರಸ್ಥಸಂಖ್ಯಯಾ || ೪೪ ||

---

ನಗಗಳನ್ನು ಮತ್ತು ಹತ್ತುವಿಧ ಧಾನ್ಯಗಳನ್ನೂ ಕೊಟ್ಟನು. ಒಂದುಲಕ್ಷ ಗೃಹೋದ್ಯಾನಗಳನ್ನೂ ಸಂತೋಷದಿಂದ ಮಾತೆಯರಿಗೆ ಕೊಟ್ಟನು. ಒಬ್ಬೊಬ್ಬರಿಗೂ ಅಸಂಖ್ಯಾತವಾದ ಆಡುಗಳನ್ನು ಸಮರ್ಪಿಸಿದನು.

೪೧. ಒಬ್ಬೊಬ್ಬರನ್ನೂ ಒಂದುಸಾವಿರವಜ್ರಸಹಿತವಾದ ಸುವರ್ಣಾಭರಣಗಳಿಂದ ಅಲಂಕರಿಸಿದನು.

೪೨. ಪ್ರಕಾಶಮಾನಗಳಾದ, ಅಳತೆಯಿಲ್ಲದಷ್ಟು ಮುತ್ತುರತ್ನಗಳನ್ನು ಸೇರಿಸಿ ಮಾಡಿದ ಹನ್ನೆರಡು ಕಡಗಗಳನ್ನು ಒಬ್ಬೊಬ್ಬರಿಗೂ ಕೊಟ್ಟನು.

೪೩. ಸಂಧ್ಯಾವಳೀದೇವಿಗೆ ಚಂದ್ರನಂತೆ ಹೊಳೆಯುತ್ತಿರುವ ಇನ್ನೂರೈವತ್ತು ಮುತ್ತುಗಳನ್ನು ಇಲ್ಲಿ ಸಮರ್ಪಿಸಿದನು.

೪೪-೪೭. ಒಬ್ಬೊಬ್ಬರಿಗೂ ಮಗನು ಸುಂದರವಾದ ಎರಡೆರಡು ಹಾರಗಳನ್ನೂ, ಕುಂಕುಮ, ಚಂದನ, ಬಹಳವಾಗಿ ಕರ್ಪೂರ, ಹೆಚ್ಚಾಗಿ ಕಸ್ತೂರಿ

ಕಸ್ತೂರಿಕಾಂ ತಥಾ ತಾಭ್ಯೋ ಭೂಯಸೀಂ ಪ್ರದದೌ ಸುತಃ ।
ಮಾತೄಣಾಮವಿಶೇಷೇಣ ಪಿತುಃ ಸುಖಮಭೀಪ್ಸಯನ್ ॥ ೪೫ ॥

ಭೋಜನಾನಿ ವಿಚಿತ್ರಾಣಿ ಜಲಪಾತ್ರಾಣ್ಯನೇಕಶಃ ।
ಘೃತಕ್ಷೀರಸ್ಯ ಪಾತ್ರಾಣಿ ಪೇಯಸ್ಯ ವಿವಿಧಸ್ಯ ಚ ॥ ೪೬ ॥

ಚತುರ್ದಶಶತಂ ಪ್ರಾದಾತ್ ಸಹಸ್ರೇಣ ಸಮನ್ವಿತಂ ।
ಸ್ಥಾಲೀನಾಂ ಕಾಂಚನೀನಾಂ ಹಿ ಸಕುಂಭಾನಾಂ ನೃಪಾತ್ಮಜಃ ॥ ೪೭ ॥

ಏಕೈಕಸ್ಯೈ ದದೌ ಭೂಪಃ ಶತಾನಿ ತ್ರೀಣಿ ಪಂಚ ಚ ।
ಕರೇಣೂನಾಂ ಸವೇಗಾನಾಂ ಮಾಂಸವಿಕ್ರಾಂತಕರ್ಮಿಣೀಂ ॥ ೪೮ ॥

ವಿಂಶತಿಂ ವಿಂಶತಿಂ ಪ್ರಾದಾದುಷ್ಟ್ರೀಣಾಂ ಚ ಶತಂ ಶತಂ ।
ಶಿಬಿಕಾನಾಂ ಸವೇಷಾಣಾಂ ಪುಂಸಾಂ ಶೀಘ್ರಗಾಮಿನಾಂ ॥ ೪೯ ॥

ಪ್ರದದೌ ದಶಸಂಭೂಯ ಮಾತೄಣಾಂ ಸುಖಯಾಯಿನಃ ।
ಏವಂ ದತ್ವಾ ಬಹುಧನಂ ಬಹ್ವೀಭ್ಯೋ ನೃಪನಂದನಃ ॥ ೫೦ ॥

---

ಇವನ್ನೂ ಬಳ್ಳಗಳಲ್ಲಿ ಅಳೆದುಕೊಟ್ಟನು. ಆ ಮಗನು ತಂದೆಯ ಸುಖದಲ್ಲಿ ದೃಷ್ಟಿಯಿಟ್ಟು, ಎಲ್ಲಾ ಮಾತೆಯರಿಗೂ ವ್ಯತ್ಯಾಸವಿಲ್ಲದಂತೆ ವಿಚಿತ್ರಭೋಜನ, ಅನೇಕ ನೀರುಕುಡಿಯುವಪಾತ್ರೆಗಳು, ತುಪ್ಪದಬಟ್ಟಲುಗಳು, ಹಾಲಿನಪಾತ್ರೆಗಳು ಹದಿನಾಲ್ಕುನೂರು ನಾನಾವಿಧಪಾನೀಯಗಳು ಇವುಗಳನ್ನು ಕುಂಭಸಹಿತವಾದ ಬಂಗಾರದ ಸಾವಿರ ಥಾಲಿಗಳೊಡನೆ ಕೊಟ್ಟನು.

೪೮-೫೧. ಒಬ್ಬೊಬ್ಬ ಮಾತೆಯರಿಗೂ ವೇಗವುಳ್ಳ ಮುನ್ನೂರೈದು ಆನೆಗಳು, ಇಪ್ಪತ್ತು ಒಂಟೆಗಳು, ನೂರುನೂರು ಪಲ್ಲಕ್ಕಿಗಳು, ವೇಷವನ್ನು ಧರಿಸಿದ, ಶೀಘ್ರಗಾಮಿಗಳಾದ ಸುಖವಾಗಿ ಕಾಲಕಳೆಸುವ ಹತ್ತುಮಂದಿ ಪುರುಷರು (ವಿದೂಷಕರು) ಇವರನ್ನೆಲ್ಲಾ ಒಟ್ಟಿಗೆ ಕೊಟ್ಟನು. ಈರೀತಿಯಾಗಿ ರಾಜಕುಮಾರನು ಬಹುಮಾತೆಯರಿಗೆ ಹೆಚ್ಚುಹಣವನ್ನು ಕೊಟ್ಟು, ಕುಬೇರನಿಗೆ

ಧನ್ಯೋ ಧನಪತಿಪ್ರಖ್ಯಶ್ಚಕ್ರೇ ತಾಸಾಂ ಪ್ರದಕ್ಷಿಣಾಃ ।
ಕೃತಾಂಜಲಿಪುಟೋ ಭೂತ್ವಾ ಇದಂ ವಚನಮಬ್ರವೀತ್ ॥ ೫೧ ॥

ಮಮೋಪರೋಧಾತ್ ಪ್ರಣತಸ್ಯ ಮೂರ್ಧ್ನಾ
ಪತಿಂ ಸಮುದ್ದಿಶ್ಯ ಯಥಾ ಭವತ್ಯಃ ।
ಬ್ರುವಂತು ಸರ್ವಾಃ ಪಿತರಂ ಮಮಾದ್ಯ
ಸ್ವರೇಣ ಸಂಭುಂಕ್ಷ್ವ ನರೇಶ ಮೋಹಿನೀಂ ॥ ೫೨ ॥

ನ ಚಾಸ್ಮದೀಯಾ ಭವತಾ ಕಿಲೇರ್ಷ್ಯಾ
ಸ್ವಲ್ಪಾಽಪಿ ಕಾರ್ಯಾ ಮನಸಿ ಪ್ರತೀತಾ ।
ವಿಮೋಹಿನೀಂ ಬ್ರಹ್ಮಸುತಾಂ ಸುಶೀಲಾಂ
ರಮಸ್ವ ಸೌಖ್ಯಂ ಶರದಾಂ ಶತಾನಿ ॥ ೫೩ ॥

ಸ ಪುತ್ರವಾಕ್ಯಂ ಹಿ ನಿಶಮ್ಯ ಸರ್ವಾಃ
ಸಹೃಷ್ಟಲೋಮ್ನ್ಯೋ ನೃಪನಾಥಮೂಚುಃ ।
ಸ್ವಭೂದುಹಿತ್ರಾ ಸುಚಿರಂ ರಮಸ್ವ
ವಿದೇಹಪುತ್ರ್ಯೇವ ರಘುಪ್ರವೀರಃ ॥ ೫೪ ॥

---

ಸಮನಾದ ಅವನು ಧನ್ಯನಾಗಿ ಆ ಮಾತೆಯರನ್ನು ಪ್ರದಕ್ಷಿಣೆಮಾಡಿ ಕೈಮುಗಿದು ನಿಂತು ಈ ಮಾತನ್ನಾಡಿದನು.

೫೨-೫೩. ಮಾತೆಯರೇ! ನಿಮ್ಮ ಪತಿಯ ಸಲುವಾಗಿ ನಿಮಗೆ ನಾನು ತಲೆಬಾಗಿ ನಮಸ್ಕರಿಸಿ ತಡೆಗಟ್ಟಿ ಪ್ರಾರ್ಥಿಸಿದಂತೆ ನೀವುಗಳೆಲ್ಲರೂ ನನ್ನ ತಂದೆಯಬಳಿಗೆ ಹೋಗಿ 'ನರೇಶನೇ! ನೀನು ಈಗ ನಿನ್ನ ಇಚ್ಛಾನುಸಾರವಾಗಿ ಮೋಹಿನಿಯನ್ನು ಸಂಭೋಗಿಸು. ನಮಗೆ ಮನಸ್ಸಿನಲ್ಲಿ ಸ್ವಲ್ಪವೂ ಹೊಟ್ಟೇಕಿಚ್ಚಿದೆಯೆಂದು ನೀನು ತಿಳಿಯಬಾರದು. ಸುಶೀಲೆಯೂ, ಬ್ರಹ್ಮಪುತ್ರಿಯೂ ಆದ ಮೋಹಿನಿಯೊಡನೆ ನೂರುವರ್ಷಗಳವರೆಗೂ ಸೌಖ್ಯವಾಗಿ ರಮಿಸು' ಎಂಬುದಾಗಿ ಹೇಳಬೇಕು ಎಂದು ಹೇಳಿದನು.

೫೪. ಮಗನ ಆ ಮಾತನ್ನು ಕೇಳಿ ಮಾತೆಯರೆಲ್ಲರೂ ಹರ್ಷಪುಲಕಿತರಾಗಿ ಪತಿಯಾದ ರಾಜನನ್ನು ಕುರಿತು, ನಾಥನೇ! ರಘುರಾಮನು ವೈದೇಹಿ

ನ ಶಲ್ಯಭೂತಾ ಕುಶಕೇತುಪುತ್ರೀ
ತ್ವತ್ಸಂಗಮಾದ್ವಿದ್ಧಿ ನ ಸಂಶಯೋತ್ರ ।
ಪುತ್ರೌಜಸಾ ದುಃಖವಿಮುಕ್ತಭಾವಾತ್
ಸಮೀರಿತಂ ವಾಕ್ಯಮಿದಂ ಪ್ರತೀಹಿ || ೫೫ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ
ಮಾತೃಸನ್ಮಾನಂ ನಾಮ ಅಷ್ಟಾದಶೋಽಧ್ಯಾಯಃ

---

ಯೊಡನೆ ರಮಿಸಿದಂತೆ ನೀನು ಬ್ರಹ್ಮಪುತ್ರಿಯಾದ ಈ ಮೋಹಿನಿಯೊಡನೆ ಬಹುಕಾಲ ರಮಿಸು.

೫೫. ಬ್ರಹ್ಮಪುತ್ರಿಯು ನಿನ್ನ ಸಂಗಮಕ್ಕೆ ಅಡ್ಡಿಮಾಡುವಳಲ್ಲವೆಂದು ತಿಳಿ. ಈ ವಿಷಯದಲ್ಲಿ ಸಂದೇಹವಿಲ್ಲ. ಮಗನ ಸಾಮರ್ಥ್ಯದಿಂದ ನಾವು ದುಃಖವನ್ನು ಬಿಟ್ಟು ಒಳ್ಳೆಯ ಭಾವನೆಯಿಂದ ಈ ಮಾತನ್ನು ಹೇಳಿರುವೆವು ತಿಳಿ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮಾತೃಸನ್ಮಾನಕಥನೆಯೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಮೋಹಿನಿಯ ಅಪ್ಪಣೆಯಮೇರೆಗೆ ಧರ್ಮಾಂಗದನು ತಂದೆಯನ್ನು ಕರೆದುಕೊಂಡು ಬಂದನು. ರಾಜನು ಬಂದು ನಾನು ಆಡಳಿತವನ್ನು ಮಾಡತೊಡಗಲಿಲ್ಲ; ಮಾರ್ಗಾಯಾಸದಿಂದ ನಿದ್ರೆಯು ಬಂದಿತು; ಅದಕ್ಕಾಗಿ ನಿನ್ನನ್ನು ಉಪಚರಿಸುವಂತೆ ಮಗನಿಗೆ ಹೇಳಿ ಮಲಗಿದೆನು; ಎದ್ದಕೂಡಲೇ ಇಲ್ಲಿಗೆ ಬಂದಿರುವೆನು; ಈಗ ನೀನು ಹೇಳಿದುದನ್ನು ನಡೆಯಿಸುವೆನು. ಎಂದ ಮೋಹಿನಿಗೆ ಹೇಳಲು ಆಕೆಯು ಈ ನಿನ್ನ ಹೆಂಡತಿಯರನ್ನೆಲ್ಲಾ ಸಮಾಧಾನ ಮಾಡೆಂದು ಹೇಳಿದಳು. ಆಗ ರಾಜನ ಇಂಗಿತವನ್ನು ತಿಳಿದು ಧರ್ಮಾಂಗದನು ಮಾತೆಯರಿಗೆಲ್ಲಾ ಸಮಾಧಾನಹೇಳಿ ಅವರಿಗೆ ಇಷ್ಟವಾದುದೆಲ್ಲವನ್ನೂ ಕೊಟ್ಟು ಅವರಿಂದ ರಾಜನಿಗೆ ಮೋಹಿನಿಯನ್ನು ಸಂಭೋಗಿಸಲು ಸಮ್ಮತಿಯನ್ನು ಕೊಡಿಸಿದನು.

---

# ಏಕೋನವಿಂಶೋಽಧ್ಯಾಯಃ

ಸೋಽನುಜ್ಞಾತೋ ಮಹೀಪಾಲಃ ಪ್ರಿಯಾಭಿಃ ಪ್ರಿಯಕಾಮುಕಃ ।
ಪ್ರಹರ್ಷಮತುಲಂ ಲೇಭೇ ಧರ್ಮಾಂಗದಮುವಾಚ ಹ ॥ ೧ ॥

ಏತದ್ದ್ವೀಪವತೀಂ ಪೃಥ್ವೀಂ ಪರಿಪಾಲಯ ಪುತ್ರಕ ।
ಕೃತ್ವಾ ದುಷ್ಟವಧಂ ತ್ವಾದಾವಪ್ರಮತ್ತಃ ಸದೋದ್ಯತಃ ॥ ೨ ॥

ಸದಾವಸರಸಂಯುಕ್ತಃ ಸದಾಚಾರನಿರೀಕ್ಷಕಃ ।
ಸದಾ ಚೇತನಸಂಯುಕ್ತಃ ಸದಾ ವಾಣಿಜ್ಯವಲ್ಲಭಃ ॥ ೩ ॥

ಸದಾ ಭ್ರಮಣಶೀಲಶ್ಚ ಸದಾ ದಾನರತಿರ್ಭವ ।
ಸದಾ ಕೌಟಿಲ್ಯಹೀನಶ್ಚ ಸದಾಚಾರರತಃ ಸದಾ ॥ ೪ ॥

---

## ಹತ್ತೊಂಬತ್ತನೆಯ ಅಧ್ಯಾಯ

೧. ವಸಿಷ್ಠನು ಹೇಳಿದನು:—ಪತ್ನಿಯರಿಂದ ಅನುಜ್ಞೆಯನ್ನು ಪಡೆದ ಪ್ರಿಯಾಕಾಮುಕನಾದ ಭೂಪಾಲನು ಅಸದೃಶವಾದ ಆನಂದವನ್ನು ಹೊಂದಿದನು. ಧರ್ಮಾಂಗದನನ್ನು ಕುರಿತು ಹೀಗೆ ಹೇಳಿದನು.

೨-೪. ಮಗನೇ! ಮೊದಲು ದುಷ್ಟರನ್ನು ಸಂಹರಿಸಿ ಸಪ್ತದ್ವೀಪ ಯುಕ್ತವಾದ ಈ ಭೂಮಂಡಲವನ್ನು ಪಾಲಿಸು. ನೀನು ಯಾವಾಗಲೂ ಮದವಿಲ್ಲದವನು, ಉದ್ಯೋಗಶೀಲನು, ಯಾವಾಗಲೂ ಅವಕಾಶವುಳ್ಳವನು, ಸದಾಚಾರವನ್ನು ನಿರೀಕ್ಷಿಸುವವನು, ಯಾವಾಗಲೂ ಎಚ್ಚರಗೊಂಡಿರುವವನು, ವ್ಯಾಪಾರಪ್ರಿಯನು, ಯಾವಾಗಲೂ ಸಂಚಾರಶೀಲನು, ಸರ್ವದಾ ದಾನಮಾಡುವುದರಲ್ಲಾಸಕ್ತನು, ಸದಾ ಮೋಸಮಾಡದಿರುವವನು, ಸದಾಚಾರದಲ್ಲಾಸಕ್ತನೂ ಆಗಿರು.

ಅಪರಂ ಶೃಣು ಮೇ ಪುತ್ರ ಯತ್ಕರ್ತವ್ಯಂ ತ್ವಯಾಧುನಾ ।
ಅವಿಶ್ವಾಸಸ್ತು ಸರ್ವತ್ರ ಭೂಮಿಪಾನಾಂ ಪ್ರಶಸ್ಯತೇ ॥ ೫ ॥

ಕೋಶಸ್ಯ ಚ ಪರಿಜ್ಞಾನಂ ಜನಾನಾಂ ಜನವಲ್ಲಭ ।
ರಸವದ್ದ್ರವ್ಯಮಾಕರ್ಷೇಃ ಪುಷ್ಪೇಭ್ಯ ಇವ ಷಟ್ಪದಃ ॥ ೬ ॥

ತ್ವಯಾ ಪುತ್ರೇಣ ಸಂಪ್ರಾಪ್ತಂ ಪುನರೇವೇಹ ಯೌವನಂ । ॥ ೭ ॥

ಇಮಾಮಪೂರ್ವಾಂ ವರರೂಪಮೋಹಿನೀಂ
ಸಂಪ್ರಾಪ್ಯ ಭಾರ್ಯಾಂ ದ್ವಿಜರಾಜವಕ್ತ್ರಾಂ ।
ಸುಖೇನ ಸಂಯೋಜ್ಯ ಚ ತೇದ್ಯ ಭಾರಂ
ಸಪ್ತೋದಧಿದ್ವೀಪಭವಂ ಪ್ರರಂಸ್ಯೇ ॥ ೮ ॥

ವ್ರೀಡಾಕರಸ್ತಾತ ಮನುಷ್ಯಲೋಕೇ
ಸಮರ್ಥಪುತ್ರೇ ಸುರತಾಭಿಕಾಮೀ ।
ಭವೇಜ್ಜನಾನಾಮತಿಹಾಸ್ಯಕಾರೀ
ಜೀರ್ಣದ್ವಿಜಃ ಶ್ವೇತಶಿರೋರುಹಶ್ಚ ॥ ೯ ॥

---

೫. ಪುತ್ರಾ! ನೀನು ಈಗ ಮಾಡಬೇಕಾದ ಇನ್ನೊಂದು ಕಾರ್ಯವನ್ನು ಹೇಳುವೆನು ಕೇಳು. ರಾಜರು ಯಾರನ್ನೂ ನಂಬದಿರುವುದು ಉತ್ತಮ.

೬. ಕೋಶ ಮತ್ತು ಜನಗಳ ಪರಿಚಯವನ್ನು ಸಂಪಾದಿಸಬೇಕು. ಜನಪ್ರಿಯನೇ! ಹೂವುಗಳಿಂದ ಭ್ರಮರಗಳು ರಸವನ್ನು ಆಕರ್ಷಿಸುವಂತೆ ರಸವತ್ತಾದ ಪದಾರ್ಥಗಳನ್ನು ಸಂಗ್ರಹಿಸು.

೭. ಮಗನಾದ ನಿನ್ನಿಂದ ಇಲ್ಲಿ ಪುನಃ ನನಗೆ ಯೌವನವು ಬಂದಿತು.

೮. ಅಪರೂಪಳು, ಉತ್ಕೃಷ್ಟರೂಪದಿಂದ ಮೋಹಪಡಿಸುವವಳು, ಚಂದ್ರವದನೆಯೂ ಆಗಿರುವ ಈ ಪತ್ನಿಯನ್ನು ಪಡೆದು, ಸಪ್ತದ್ವೀಪಗಳುಳ್ಳ ರಾಜ್ಯಭಾರವನ್ನು ಈಗ ನಿನಗೆ ವಹಿಸಿ ಈಕೆಯೊಡನೆ ಕ್ರೀಡಿಸುವೆನು.

ಜೀರ್ಣೋಽಪ್ಯಜೀರ್ಣಸ್ತವ ಸೌಖ್ಯರುದ್ಧೋ
ವಾಂಛೇ ಇಮಾಂ ಲೋಕವರಾಂ ವರಾರ್ಹಾಂ ।
ಸಂತ್ಯಜ್ಯ ದೇವಾನ್ ಮಮ ಹೇತುಮಾಗತಾ
ಮನಂಗಬಾಣಾಭಿಹತಾಂ ಸುನೇತ್ರಾಂ ॥ ೧೦ ॥

ಕಾಮಂ ರಮಿಷ್ಯೇ ದ್ರುತಕಾಂಚನಾಭಾಂ
ಹ್ಯೇಕಾಂತಶೀಲಃ ಪರಿಪೂರ್ಣಚೇತಾಃ ।
ಭೂತ್ವಾ ತು ಗುಪ್ತೋ ವನನಿರ್ಝರೇಷು
ರಮ್ಯೇಷು ದಿವ್ಯೇಷು ನದೀತಟೇಷು ॥ ೧೧ ॥

ಇಯಂ ಪುರಂಧ್ರೀ ಮಮ ಜೀವಿತಾಧಿಕಾ
ಸುಖೇನ ಧಾರ್ಯಾ ತ್ರಿದಿವೈಕನಾರೀ ।
ಅಸ್ಯಾಸ್ತು ಹೇತೋರ್ವಿಬುಧಾ ವಿಮೂಢಾ
ಯಥಾ ರಮಾಯೈ ಧರಣೀಶಸಂಘಾಃ ॥ ೧೨ ॥

---

೯-೧೧. ವತ್ಸಾ! ಈ ಮನುಷ್ಯಲೋಕದಲ್ಲಿ ವಯಸ್ಕನಾಗಿ ಸಮರ್ಥನಾದ ಮಗನಿದ್ದು, ಕೂದಲುಗಳು ಬೆಳ್ಳಗಾಗಿ ಮುದಿತನದಿಂದ ಹಲ್ಲುಗಳು ಅಲ್ಲಾಡುತ್ತಿರುವಾಗ ಸಂಭೋಗವನ್ನು ಕಾಮಿಸುವವನು ನಾಚಿಕೆಗೇಡಾಗಿ ಜನಗಳ ಅತ್ಯಂತ ಹಾಸ್ಯಕ್ಕೆ ಪಾತ್ರನಾಗುವನು. ಹೀಗೆ ನಾನು ಮುದುಕನಾಗಿದ್ದರೂ ನೀನು ಸುಖಪಡಿಸುತ್ತಿರುವುದರಿಂದ ಯುವಕನಂತಾಗಿ ಲೋಕೋತ್ತರಳು, ವರಾರ್ಹಳೂ ಆದ ಈ ಮೋಹಿನಿಯನ್ನು ಅಪೇಕ್ಷಿಸಿರುವೆನು. ದೇವತೆಗಳನ್ನು ಬಿಟ್ಟು ನನಗೋಸ್ಕರವಾಗಿ ಬಂದಿರುವ, ಕಾಮಬಾಣದಿಂದ ತಪ್ತಳಾದ, ಒಳ್ಳೆಯನೇತ್ರಗಳುಳ್ಳ, ಕಾಯಿಸಿದ ಬಂಗಾರದಂತೆ ಹೊಳೆಯುತ್ತಿರುವ, ಈ ಮೋಹಿನಿಯೊಡನೆ ಸಂತುಷ್ಟಚಿತ್ತನೂ, ಏಕಾಂತನಿವಾಸಿಯೂ ಆಗಿ ಮನೋಹರವಾದ ವನನಿರ್ಝರಗಳು ಮತ್ತು ದಿವ್ಯ ನದೀದಡಗಳಲ್ಲಿ ಯಥೇಷ್ಟವಾಗಿ ಕ್ರೀಡಿಸುವೆನು.

ತದ್ವಾಕ್ಯಮಾಕರ್ಣ್ಯ ಪಿತುಃ ಸುಬುದ್ಧಿಃ
ಪ್ರಣಮ್ಯ ಭಕ್ತ್ಯಾ ಜನನೀಸಮೇತಂ ।
ನೃಪೋತ್ತಮಂ ತಂ ನೃಪನಂದನೋಽಸೌ
ದಿದೇಶ ಭೋಗಾರ್ಥಮನೇಕವಿತ್ತಂ ॥ ೧೩ ॥

ಆಜ್ಞಾವಿಧೇಯಾಂಸ್ತು ಪಿತುರ್ನಿಯೋಜ್ಯ
ದಾಸಾಂಶ್ಚ ದಾಸೀಶ್ಚ ಹಿರಣ್ಯಕಂಠೀಃ ।
ಮತ್ಸ್ಯಧ್ವಜಾರ್ತಸ್ಯ ಸುಖಾಯ ಪುತ್ರಃ
ತತೋ ಮಹೀರಕ್ಷಣಮಾಚಚಾರ ॥ ೧೪ ॥

ನೃಪಾತ್ಮಜೈರ್ಧರ್ಮವಿಭೂಷಣೋಽಸೌ
ಸಮಾವೃತೋ ದ್ವೀಪವತೀಂ ಸಮಗ್ರಾಂ ।
ತಸ್ಯೇತ್ಥಮುರ್ವೀಂ ಚರತಶ್ಚ
ಭೂಪ ನ ಪಾಪಬುದ್ಧಿಂ ಕುರುತೇ ಜನೌಘಃ ॥ ೧೫ ॥

---

೧೨. ದೇವಲೋಕದ ನಾರೀಮಣಿಯಾದ ಈ ಭಾರ್ಯೆಯು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿರುವಳು. ಇವಳನ್ನು ಸುಖವಾಗಿ ಲಾಲಿಸಬೇಕು. ರಾಜಸಂಘಗಳು ಲಕ್ಷ್ಮಿಗೆ (ಸಂಪತ್ತಿಗೆ) ಮುಗ್ಧರಾಗುವಂತೆ ದೇವತೆಗಳು ಈಕೆಯಲ್ಲಿ ಮೋಹಪಡುವರು.

೧೩. ತಂದೆಯ ಆ ಮಾತುಗಳನ್ನು ಕೇಳಿ ಸುಬುದ್ಧಿಯಾದ ಈ ರಾಜಪುತ್ರನು ಜನನೀಸಹಿತವಾಗಿ ಭಕ್ತಿಯಿಂದ ಆ ರಾಜಶ್ರೇಷ್ಠನನ್ನು ನಮಸ್ಕರಿಸಿ ಅವನಿಗೆ ಭೋಗಕ್ಕೋಸ್ಕರ ಬಹುಧನಗಳನ್ನು ಕೊಟ್ಟನು.

೧೪-೧೫. ತಂದೆಗೆ ಆಜ್ಞಾನುವರ್ತಿಗಳಾದ ದಾಸದಾಸಿಯರನ್ನು ನಿಯಮಿಸಿ, ಕಾಮಾರ್ತನಾದ ಅವನ ಸುಖಕ್ಕಾಗಿ ಬಂಗಾರದ ಕಂಠೀಸರಗಳನ್ನೂ ಕೊಟ್ಟು ಭೂರಕ್ಷಣೆಗಾಗಿ ರಾಜಕುಮಾರರಿಂದ ಪರಿವೃತನಾಗಿ ಧರ್ಮವಿಭೂಷಣನಾದ ಈ ಪುತ್ರನು ಸಪ್ತದ್ವೀಪಯುಕ್ತವಾದ ಸಮುದ್ರ ಭೂಮಂಡಲ

ನ ಚಾಪಿ ವೃಕ್ಷಃ ಫಲಪುಷ್ಪಹೀನೋ
ನ ಕ್ಷೇತ್ರ ಮಾಸೀದ್ಯವಶಾಲಿಹೀನಂ ।
ಸ್ರವಂತಿ ಗಾವೋ ಘಟಪೂರದುಗ್ಧಂ
ಘೃತಾಧಿಕಂ ಶರ್ಕರವತ್ಸುಮಿಷ್ಟಂ ॥ ೧೬ ॥

ಕ್ಷೀರಂ ಸುಪೇಯಂ ಸಕಲಾರ್ತಿನಾಶನಂ
ಪಾಪಾಪಹಂ ಪುಷ್ಟಿವಿವರ್ಧನಂ ಚ ।
ಜನೋ ನ ಕಶ್ಚಿತ್ ವಿಭವಸ್ಯ ಗೋಪ್ತಾ
ಭರ್ತುರ್ಹಿ ಭಾರ್ಯಾ ನ ಕಟೂಕ್ತಿವಾದಿನೀ ॥ ೧೭ ॥

ಪುತ್ರೋ ವಿನೀತಃ ಪಿತೃಶಾಸನೇ ರತೋ
ವಧೂಃ ಸ್ಥಿತಾ ಹಸ್ತಪುಟೇ ಚ ಶ್ವಶ್ರ್ವಾಃ ।
ದ್ವಿಜೋಪದೇಶೇ ಹಿ ಜನೋ ವ್ಯವಸ್ಥಿತೋ
ವೇದೋಕ್ತಧರ್ಮಾಚರಣಾದ್ದ್ವಿಜೋತ್ತಮಾಃ ॥ ೧೮ ॥

---

ವನ್ನೂ ಸಂಚರಿಸಿದನು. ಈರೀತಿಯಾಗಿ ಸಂಚರಿಸುತ್ತಿದ್ದ ಅವನ ವಿಷಯದಲ್ಲಿ ಜನರೆಲ್ಲರೂ ಪಾಪಬುದ್ಧಿಯನ್ನು ಮಾಡಲಿಲ್ಲ.

೧೬-೧೭. ದೇಶದಲ್ಲಿ ಧರ್ಮಾಂಗದನು ರಾಜ್ಯಭಾರಮಾಡುತ್ತಿದ್ದಾಗ ಫಲಪುಷ್ಪಗಳಿಲ್ಲದ ವೃಕ್ಷಗಳಿಂಲಿಲ್ಲ. ಗೋಧಿ ಭತ್ತ ಮುಂತಾದ ಧಾನ್ಯಹೀನವಾದ ಗದ್ದೆಹೊಲಗಳಿರಲಿಲ್ಲ. ಗೋವುಗಳು ಕೊಡದ ತುಂಬ ಹಾಲನ್ನು ಕರೆಯುತ್ತಿದ್ದುವು. ಹಾಲು, ತುಪ್ಪಕ್ಕಿಂತಲೂ ಹೆಚ್ಚುಪುಷ್ಟಿಕರವೂ, ಸಕ್ಕರೆಯಂತೆ ಸಿಹಿಯಾಗಿಯೂ, ಸಕಲರೋಗಪರಿಹಾರಕವೂ, ಪಾಪನಾಶಕವೂ ಮತ್ತು ಪುಷ್ಟಿವರ್ಧಕವೂ ಆಗಿ ಒಳ್ಳೆಯಪಾನೀಯವಾಗಿದ್ದಿತು. ಯಾವಜನರೂ ತಮ್ಮ ಐಶ್ವರ್ಯವನ್ನು ರಕ್ಷಿಸಿಕೊಳ್ಳಲು ಶ್ರಮಪಡಬೇಕಾಗಿರಲಿಲ್ಲ. ಹೆಂಡತಿಯು ಗಂಡನ ವಿಷಯದಲ್ಲಿ ಕಠಿನೋಕ್ತಿಯನ್ನಾಡುತ್ತಿರಲಿಲ್ಲ.

೧೮. ಮಗನು ತಂದೆತಾಯಿಗಳಿಗೆ ವಿಧೇಯನಾಗಿ ಅವರ ಅಪ್ಪಣೆಯನ್ನು ಪಾಲಿಸುತ್ತಿದ್ದನು. ಸೊಸೆಯು ಅತ್ತೆಯ ಹಿಡಿತದಲ್ಲಿದ್ದಳು. ದ್ವಿಜರ

ನ ಭುಂಜತೇ ಮಾಧವವಾಸರೇ ಜನಾ
ನ ಯಾಂತಿ ಶೋಷಂ ಭುವಿ ನಿಮ್ನಗಾಸ್ತು ।
ಸಂಭುಜ್ಯಮಾನಾ ನ ಹಿ ಯಾಂತಿ ಸಂಪದಃ
ಸಂಭೋಗಯುಕ್ತೈರಪಿ ಮಾನವೈಃ ಕ್ಷಯಂ ॥ ೧೯ ॥

ವಿವೃದ್ಧಿಮಾಯಾಂತಿ ಜಲೈರಿವೋರ್ಧ್ವಂ
ದೂರ್ವಾತೃಣಂ ಶಾದ್ವಲತಾಮುಪೈತಿ ।
ಕೃತೀ ಚ ಲೋಕೋ ಹ್ಯಭವತ್ ಸಮಸ್ತೋ
ಧರ್ಮಾಂಗದೇ ಪಾಲನಸಂಪ್ರವೃತ್ತೇ ॥ ೨೦ ॥

ಭುಕ್ತ್ವಾ ತು ಸೌಖ್ಯಾನಿ ಚ ಯಾಂತಿ ಮಾನವಾ
ಹರೇಃ ಪದಂ ತದ್ದಿನಸೇವನೇನ ।
ದ್ವಾರಾಣಿ ಸಂಧ್ಯಾಸ್ತು ನಿಶಾಸು ಭೂಪ
ಗುಪ್ತಾನಿ ಕುರ್ವಂತಿ ನ ದಸ್ಯುಭೀತಾಃ ॥ ೨೧ ॥

---

ಉಪದೇಶದಂತೆ ಜನರು ನಡೆಯುತ್ತಿದ್ದರು. ದ್ವಿಜೋತ್ತಮರು ವೇದೋಕ್ತ ಕರ್ಮಗಳನ್ನಾಚರಿಸುತ್ತಿದ್ದರು.

೧೯. ಹರಿದಿನದಲ್ಲಿ ಜನರು ಊಟಮಾಡುತ್ತಿರಲಿಲ್ಲ ಭೂಲೋಕದಲ್ಲಿನ ನದಿಗಳು ಒಣಗುತ್ತಿರಲಿಲ್ಲ ಮನುಷ್ಯರು ಎಷ್ಟು ಭೋಗಿಸಿದರೂ ಎಷ್ಟು ಭಾಗ ಮಾಡಿಕೊಂಡರೂ ಸಂಪತ್ತುಗಳು ಕ್ಷಯವಾಗುತ್ತಿರಲಿಲ್ಲ.

೨೦. ಅವು ಖರ್ಚುಮಾಡಿದಹಾಗೆಲ್ಲಾ ಹೆಚ್ಚುತ್ತಿದ್ದುವು. ಹುಲ್ಲು ಗಾವಲುಗಳು ನೀರುಹಾಕಿ ಬೆಳೆಸಿದಂತಿರುವ ಗರಿಕೆಹುಲ್ಲುಗಳಿಂದ ತುಂಬಿದ್ದುವು. ಸಮಸ್ತಜನರೂ ಜ್ಞಾನಿಗಳಾಗಿದ್ದರು.

೨೧. ಮನುಷ್ಯರು ಹರಿದಿನವ್ರತಾನುಷ್ಠಾನದಿಂದ ಇಲ್ಲಿ ಸೌಖ್ಯಗಳನ್ನನುಭವಿಸಿ ಹರಿಲೋಕಕ್ಕೆ ಹೋಗುತ್ತಿದ್ದರು. ಸಂಧ್ಯಾಕಾಲ ಮತ್ತು ರಾತ್ರಿ ಕಾಲಗಳಲ್ಲಿ ಕಳ್ಳರಿಗೆ ಭಯಪಟ್ಟು ಬಾಗಿಲುಗಳನ್ನು ಮುಚ್ಚಬೇಕಾಗಿರಲಿಲ್ಲ.

ನ ಚಾಪಿ ಗೋಪೇಷು ದದಾತಿ ವೃತ್ತಿಂ
ಸ್ವೇಚ್ಛಾಚರಾ ಮಂದಿರಮಾವ್ರಜಂತಿ ।
ಕ್ಷೀರಂ ಕ್ಷರಂತ್ಯೋ ಘಟವತ್ಸು ಭೂರಿಶೋ
ವತ್ಸಪ್ರಿಯಾಃ ಕಾಂತಿಕರಾಶ್ಚ ಗಾವಃ ॥ ೨೨ ॥

ಅಕೃಷ್ಟಪಚ್ಯಾ ಧರಣೀ ಸಮಸ್ತಾ
ಪ್ರರೂಢಸಸ್ಯಾ ಕಿಲ ಲಾಂಗಲಂ ವಿನಾ ।
ಮಾತುಃ ಪಯೋಭಿಃ ಶಿಶವಃ ಸುಪುಷ್ಟಾ
ಭರ್ತುಃ ಪ್ರಯೋಗೈಃ ಪ್ರಮುದಾಃ ಸುಪುಷ್ಟಾಃ ॥ ೨೩ ॥

ನೃಪೈಃ ಸುಗುಪ್ತಾಸ್ತು ಜನಾಃ ಸುಪುಷ್ಟಾಃ
ಸತ್ಯಾಭಿಯುಕ್ತೋ ಹಿ ವೃಷಃ ಸುಪುಷ್ಟಃ ।
ಏವಂವಿಧೇ ಧರ್ಮರತಿಪ್ರಧಾನೇ
ಜನೇ ಪ್ರವೃತ್ತೇ ಹರಿಭಕ್ತಿಯುಕ್ತೇ ।
ಸಂರಕ್ಷ್ಯಮಾಣೇ ಹಿ ನೃಪಾತ್ಮಜೇನ
ಜಗಾಮ ಕಾಲಃ ಸುಖಹೇತುಭೂತಃ ॥ ೨೪ ॥

---

೨೨. ಗೋಪಾಲಕರಿಗೆ ದನಕಾಯುವ ಕೆಲಸವಿರಲಿಲ್ಲ. ಗೋವುಗಳು ಸ್ವೇಚ್ಛೆಯಾಗಿ ತಿರುಗಿಕೊಂಡು ಅವುಗಳೇ ಮನೆಗೆ ಬರುತ್ತಿದ್ದವು. ಅವು ಘಟವುಳ್ಳ ಸ್ಥಳಗಳಿಗೆ ಬಂದು ತಾವಾಗಿಯೇ ಹಾಲನ್ನು ಹೆಚ್ಚಾಗಿ ಕರೆಯುತ್ತಿದ್ದವು. ಅವು ವತ್ಸಪ್ರಿಯಗಳು ತೇಜಸ್ವಿಗಳೂ ಆಗಿದ್ದವು.

೨೩. ಸಕಲಭೂಮಿಯೂ ನೇಗಿಲಿನಿಂದ ಉಳದೇ ಪಕ್ವವಾಗಿ ಚೆನ್ನಾಗಿ ಬೆಳೆಯುತ್ತಿದ್ದವು. ತಾಯಿಯ ಸ್ತನ್ಯಗಳಿಂದ ಮಕ್ಕಳು ಅತ್ಯಂತ ಪುಷ್ಟರಾಗಿದ್ದರು. ಪತಿಯ ಮೈಥುನಾದಿಗಳಿಂದ ಸ್ತ್ರೀಯರು ಪುಷ್ಟರಾಗಿದ್ದರು.

೨೪. ಜನರು ರಾಜನಿಂದ ರಕ್ಷಿತರಾಗಿ ಅತ್ಯಂತ ಪುಷ್ಟರಾಗಿದ್ದರು. ಧರ್ಮವು ಸತ್ಯದಿಂದ ಸಹಿತವಾಗಿ ವೃದ್ಧಿಗೊಂಡಿತು. ಈ ವಿಧವಾದ, ಧರ್ಮಾಭಿಮಾನವೇ ಪ್ರಧಾನವಾಗಿ ಉಳ್ಳ, ಹರಿಭಕ್ತಿಯಿಂದ ಕೂಡಿ ಪ್ರವರ್ತಿಸುತ್ತಿದ್ದ

ನಿರಾಮಯೋ ಭೂತಿಸಮನ್ವಿತಶ್ಚ
ಸ ಭೂರಿವರ್ಷೋತ್ಸವಕಾರಕಶ್ಚ ।
ಪೃಥ್ವೀಪತಿಶ್ಚಾತಿವಿನೋಹಿತಶ್ಚ
ವಿನೋಹಿನೀಚೇಷ್ಟಿತಸೌಖ್ಯಯುಕ್ತಃ ॥ ೨೫ ॥

ದಿನಂ ನ ಜಾನಾತಿ ನ ಚಾಪಿ ರಾತ್ರಿಂ
ಮಾಸಂ ಚ ಪಕ್ಷಂ ಚ ಸವತ್ಸರಂ ಚ ।
ಅತೀವ ಮುಗ್ಧಃ ಸುರತೇನ ತಸ್ಯಾ
ವಿರಂಚಿಪುತ್ರ್ಯಾಃ ಶುಭಚೇಷ್ಟಿತಾಯಾಃ ॥ ೨೬ ॥

ವಿನೋಹಿನೀಸಂಗಮನೇ ನೃಪಸ್ಯ
ಬಭೂವ ಶಕ್ತಿಸ್ತ್ವಧಿಕಾ ಮನೋಜೇ ।
ಯಥಾ ಯಥಾಸೇವತ ಏವ ಭೂಪ
ಸ್ತಥಾ ತಥಾ ವೃದ್ಧಿಮುಪೈತಿ ವೀರ್ಯಂ ।
ಪಕ್ಷೇಷು ಶುಕ್ಲೇಷ್ವಿವ ಶೀತಭಾನು
ರ್ನ ಕ್ಷೀಯತೇ ಸಂತತಸೇವನೇನ ॥ ೨೭ ॥

---

ಜನರು ರಾಜಪುತ್ರನಿಂದ ರಕ್ಷಿತರಾಗುತ್ತಿರಲು ಕಾಲವು ಸುಖಮಯವಾಗಿ ಕಳೆಯುತ್ತಿದ್ದಿತು.

೨೫. ರೋಗವಿಲ್ಲದೇ ಐಶ್ವರ್ಯ ಯುಕ್ತನಾಗಿ, ಬಹುವರ್ಷಜನ್ಮೋತ್ಸವವನ್ನು ಮಾಡಿಕೊಂಡಿದ್ದ, ಆ ರುಕ್ಮಾಂಗದರಾಜನು ಮೋಹಿನಿಯ ವಿಲಾಸದಿಂದ ಸೌಖ್ಯಪಡುತ್ತಾ ಅತ್ಯಂತ ಮೋಹಿತನಾಗಿದ್ದನು.

೨೬. ಆವನು ಹಗಲು, ರಾತ್ರಿ, ಮಾಸ, ಪಕ್ಷ, ಸಂವತ್ಸರ ಇವುಗಳಾವುದನ್ನೂ ತಿಳಿಯದೇ ಶುಭವಿಲಾಸಿನಿಯಾದ ಆ ಬ್ರಹ್ಮಪುತ್ರಿಯ ಸಂಭೋಗದಿಂದ ಅತ್ಯಂತ ಮುಗ್ಧನಾದನು.

೨೭. ಮೋಹಿನಿಯ ಸಂಭೋಗ ಮಾಡಿದಹಾಗೆಲ್ಲಾ ದೊರೆಗೆ ಕಾಮ ಶಕ್ತಿಯು ಹೆಚ್ಚುತ್ತ ಬಂದಿತು. ರಾಜನು ಆಕೆಯನ್ನು ಸೇವಿಸಿದ ಹಾಗೆಲ್ಲಾ

ವೃಂದಾರಕಃ ಪೀತಸುಧಾರಸೋ ಯಥಾ
ಸಂಸ್ಪೃಶ್ಯ ಸಂಸ್ಪೃಶ್ಯ ಪುನರ್ನವೋಽಸೌ ।
ಪಿಬಂಸ್ತು ಪಾನಂ ಸುಮನೋಹರಂ ಹಿ
ಶೃಣ್ವಂಸ್ತು ಗೀತಂ ಸುಪದಪ್ರಯುಕ್ತಂ ॥ ೨೮ ॥

ಪಶ್ಯಂಶ್ಚ ರೂಪಂ ಸ ನಿತಂಬಿನೀನಾಂ
ಸ್ಪೃಶನ್ ಸ್ಪೃಶನ್ ಮೋಹಿನಿವಕ್ತ್ರಚಂದ್ರಂ ।
ವಿಮರ್ದಮಾನಸ್ತು ಕರೇಣ ತುಂಗೌ
ಸುಖೇನ ಪೀನೌ ಪಿಶಿತೋಪರೂಢೌ ॥ ೨೯ ॥

ಘನಸ್ತನೌ ಕಾಂಚನಕುಂಭತುಲ್ಯೌ
ಪ್ರಚ್ಛಾದಿತೌ ಹಾರವಿಭೂಷಣೇನ ।
ವಲಿತ್ರಯಂ ನಾತಿವಿವರ್ಧಮಾನಂ
ಮನೋಹರಂ ಲೋಮಶರಾಜಿಶೋಭಂ ॥ ೩೦ ॥

---

ವೀರ್ಯವು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಹೊಂದಿತು. ಯಾವಾಗಲೂ ಸೇವಿಸಿದರೂ ಸಹ ರಾಜನ ವೀರ್ಯವು ಕ್ಷಯಹೊಂದಲಿಲ್ಲ.

೨೮-೩೪. ಅಮೃತರಸವನ್ನು ಪಾನಮಾಡಿದ ದೇವತೆಯಂತೆ ಈ ರುಕ್ಮಾಂಗದನು ಮೋಹಿನಿಯನ್ನು ಸ್ಪರ್ಶಮಾಡಿ ಮಾಡಿ ಪುನಃ ಹೊಸಬನಾಗುತ್ತಿದ್ದನು. ಅವನು ಅತ್ಯಂತ ಮನೋಹರವಾದ ಪಾನೀಯಗಳನ್ನು ಕುಡಿಯುತ್ತಾ, ಒಳ್ಳೆಯ ಪದಗಳಿಂದ ಕೂಡಿದ ಸಂಗೀತವನ್ನು ಕೇಳುತ್ತಾ, ಹೆಂಗಸರ ರೂಪವನ್ನು ನೋಡುತ್ತಾ, ಮೋಹಿನಿಯ ಮುಖಚಂದ್ರವನ್ನು ಪುನಃ ಪುನಃ ಮುಟ್ಟುತ್ತಾ, ಮಾಂಸಪೂರಿತವಾದ, ದಪ್ಪವೂ ಮತ್ತು ಎತ್ತರವಾಗಿರುವ, ಬಂಗಾರದ ಕುಂಭಗಳಿಗೆ ಸಮಾನವಾಗಿರುವ, ಹಾರಾಲಂಕಾರದಿಂದ ಮುಚ್ಚಿರುವ ಘನಕುಚಗಳನ್ನು ಸುಖವಾಗಿ ಕೈಯಿಂದ ಮರ್ದನಮಾಡುವವನಾಗಿ, ಹೆಚ್ಚುವೃದ್ಧಿಹೊಂದದಿರುವ, ಮನೋಹರವಾದ, ಲೋಮಶ (ಜಟಾಮಾಂಸಿ) ಎಂಬ ಮೂಲಿಕೆಯ ರೇಖೆಯಿಂದ ಶೋಭಿಸುತ್ತಿರುವ, ಸ್ತನದವಲಿತ್ರಯಯುಕ್ತವಾದ, ಉತ್ಕೃಷ್ಟಾವಯವಗಳುಳ್ಳ ಸುಲೋಚನೆಯ ಸೌಂದರ್ಯವನ್ನು

ಸ್ತನಸ್ಯ ರೂಪಂ ಪರಿತೋ ವಿಲೋಕ್ಯ
ದಧ್ರೇ ವರಾಂಗ್ಯಾಃ ಶುಭಲೋಚನಾಯಾಃ ।
ನ ಹೀದೃಶಂ ಚಾರುತರಂ ನಿತಂಬಿ
ನಿತಂಬಿನೀನಾಂ ಮನಸೋಭಿರಾಮಂ || ೩೧ ||

ಯಾದೃಗ್ವಿಧಂ ಮೋಹಿನಿ ಮೋಹನಾರ್ಥಂ
ವಿನಿರ್ಮಿತಂ ಯದ್ವಿಧಿನಾ ಸ್ವರೂಪಂ ।
ಮೃಗೇಂದ್ರಶತ್ರೋಃ ಕರಸನ್ನಿಕಾಶೇ
ಜಂಘೇ ವಿಲೋಮೇ ದೃತಕಾಂಚನಾಭೇ || ೩೨ ||

ಶಶಾಂಕಕೀರ್ತಿರ್ದ್ವಿಜನಸ್ಯ ಪಂಕ್ತಿಃ
ನಿಗೂಢಗುಲ್ಫೇ ಜನಮೋಹನಾರ್ಥಂ ।
ಆಪಾದಶೀರ್ಷಂ ಕಿಲ ತತ್ಸ್ವರೂಪಂ
ಸಂಪಶ್ಯ ತಚ್ಚಾರುವಿಶಾಲನೇತ್ರ್ಯಾಃ || ೩೩ ||

---

ಸುತ್ತಲೂ ನೋಡಿ, ಮೋಹಿನಿಯನ್ನು ನೋಹಿಸುವುದಕ್ಕಾಗಿ ಬ್ರಹ್ಮನು ಎಂತಹ ಸ್ವರೂಪವನ್ನು ಸೃಷ್ಟಿಸಿರುವನೋ ಅಂತಹ, ಮನಸ್ಸಿಗೆ ಸಂತೋಷದಾಯಕವಾದ, ಅತಿಸುಂದರ ನಿತಂಬ (ಪಿರ್‍ರೆಗಳು) ವುಳ್ಳ ಸ್ತ್ರೀ ಸ್ವರೂಪವಾವುದೂ ಇಲ್ಲವೆಂದು ಭಾವಿಸಿದನು.

ಹಾಗೆಯೇ ಆನೆಯಸೊಂಡಿಲಕ್ಕೆ ಸಮಾನಗಳಾದ, ಕೂದಲಿಲ್ಲದ, ಕಾಯಿಸಿದ ಬಂಗಾರದಂತೆ ಹೊಳೆಯುತ್ತಿರುವ ಕಣಕಾಲುಗಳು, ಚಂದ್ರಕೀರ್ತಿಯನ್ನು ಹೋಲುವ ದಂತಪಂಕ್ತಿ, ಮುಚ್ಚಲ್ಪಟ್ಟಿರುವ ಗುಲ್ಫಪ್ರದೇಶಗಳು ಮುಂತಾಗಿ ಕಾಲಿನಿಂದ ಶಿರಸ್ಸಿನವರೆಗೂ ಜನಮೋಹಕವಾದ, ದಿವ್ಯವಿಶಾಲನಯನಗಳುಳ್ಳ ಮೋಹಿನಿಯ ಸೌಂದರ್ಯವನ್ನು ಚೆನ್ನಾಗಿ ನೋಡಿ ರಾಜನು ಬಹಳ ಸಂತೋಷಪಟ್ಟು ದೇವತೆಗಳಿಗಿಂತಲೂ ಹೆಚ್ಚಾಗಿ ತಾನು ಕೃತಾರ್ಥನೆಂದು ತಿಳಿದನು.

ಮೇನೇ ಸುರಾಣಾಮಧಿಕಂ ಹಿ ರಾಜಾ
ಕೃತಾರ್ಥಮಾತ್ಮಾನಮತೀವ ಹರ್ಷಾತ್ ।
ಅಹೋ ಸುತನ್ವೀ ವಿಪುಲೇಕ್ಷಣೇಯಂ
ಯಾಚಿಷ್ಯತೇ ಯಚ್ಚ ತದೇವ ದೇಯಂ ॥ ೩೪ ॥

ಅಸ್ಯಾಸ್ತು ರಮ್ಯೇ ಸುರತೇ ಶುಭಾಯಾ
ದಾಸ್ಯಾಮಿ ಚಾಂತೇ ನಿಜವಿತ್ತಜಾತಂ ।
ಸುದುರ್ಲಭಂ ದೇಯಮದೇಯಮನ್ಯೈ
ರ್ದಾಸ್ಯಾಮಿ ಚಾಸ್ಯಾ ಯದಿ ವಾಪ್ಯದೇಯಂ ॥ ೩೫ ॥

ಯದ್ಯಪ್ಯದೇಯಂ ಮಮ ಜೀವಿತಂ ಹಿ
ಯಾಚಿಷ್ಯತೇ ಚೇದ್ಯದಿ ಹೇಮವರ್ಣಾ ।

---

ಅಹಾ ! ವಿಶಾಲವಾದ ಕಣ್ಣುಗಳುಳ್ಳ ಈ ಶೋಭನಾಂಗಿಯು ಏನನ್ನು ಕೇಳಿದರೂ ಕೊಡಬೇಕು ಎಂದು ನಿಶ್ಚಯಿಸಿದನು.

೩೫. ಈ ಸುಂದರಾಂಗಿಯನ್ನು ಮನೋಹರವಾಗಿ ಸಂಭೋಗಿಸಿದಮೇಲೆ ನನ್ನ ಧನಸಮೂಹವನ್ನೆಲ್ಲಾ ಈಕೆಗೆ ಕೊಡುವೆನು. ಇತರರಿಂದ ಕೊಡಲು ಸಾಧ್ಯವಾಗದ, ಅತ್ಯಂತದುರ್ಲಭವಾದ, ದಾನಾರ್ಹವಸ್ತುವನ್ನೆಲ್ಲಾ ಕೊಡುವೆನು. ದೇಯವಲ್ಲದಿದ್ದರೂ ಸಹ ಅಂತಹದನ್ನೂ ಈಕೆಗೆ ಕೊಡುವೆನು.

೩೬. ನನ್ನ ಪ್ರಾಣವು ದಾನಾರ್ಹವಲ್ಲ. ಆದರೂ ಈ ಸುವರ್ಣವರ್ಣಳಾದ ಮೋಹಿನಿಯು ಅಪೇಕ್ಷಿಸಿ ಕೇಳಿದರೆ ಅದನ್ನೂ ಸಹ ಕೊಡುವೆನು, ವಿಚಾರ

ದಾಸ್ಯಾಮಿ ಚೇದಂ ನ ವಿಚಾರಯಿಷ್ಯೇ
ಪುತ್ರಂ ವಿನಾ ನಾಸ್ತಿ ಅದೇಯಮಸ್ಯಾಃ ॥ ೩೬ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ
ಮೋಹಿನೀಪ್ರಣಯವರ್ಣನಂ ನಾಮ
ಏಕೋನವಿಂಶೋಽಧ್ಯಾಯಃ

---

ಮಾಡುವುದೇ ಇಲ್ಲ. ಈಕೆಗೆ ಮಗನೊಬ್ಬನು ಹೊರತು ಬೇರಾವ ಕೊಡಬಾರದ ವಸ್ತುವೂ ಇಲ್ಲ.

ಇಂತು ಶ್ರೀನಾರದೀಯ ಪುರಾಣೋತ್ತರಭಾಗದಲ್ಲಿ ಮೋಹಿನಿಯ ಪ್ರಣಯ
ವರ್ಣನೆಯೆಂಬ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ.

ರುಕ್ಮಾಂಗದನು ತನ್ನ ಪತ್ನಿಯರ ಅನುಜ್ಞೆಯನ್ನು ಪಡೆದು ಸಂತೋಷಪಟ್ಟು, ಧರ್ಮಾಂಗದನಿಗೆ ರಾಜಧರ್ಮಗಳನ್ನುಪದೇಶಿಸಿ, ರಾಜ್ಯಾಧಿಕಾರವನ್ನೆಲ್ಲಾ ವಹಿಸಿ, ಅವನಿಂದ ತನ್ನ ಭೋಗಕ್ಕೆ ಬೇಕಾಗುವ ಸಾಮಗ್ರಿಗಳನ್ನು ಮಾತ್ರ ತೆಗೆದುಕೊಂಡು ಮೋಹಿನಿಯೊಡನೆ ವಿಹರಿಸುತ್ತಿದ್ದನು. ಅನಂತರ ಧರ್ಮಾಂಗದನ ರಾಜ್ಯಭಾರಕಾಲದಲ್ಲಿ ರಾಜ್ಯದ ಸ್ಥಿತಿಯು ಹೇಗಿತ್ತೆಂಬುದನ್ನು ವರ್ಣಿಸಿ, ರುಕ್ಮಾಂಗದನ ಮೋಹಿನೀಪ್ರಣಯಪ್ರಕಾರವನ್ನು ವಿಸ್ತಾರವಾಗಿ ವರ್ಣಿಸಿದೆ.

# ವಿಂಶೋಽಧ್ಯಾಯಃ

**ವಸಿಷ್ಠ ಉವಾಚ**

**ಏವಂ ಸುರತಮೂಢಸ್ಯ ರಾಜ್ಞೋ ರುಕ್ಮಾಂಗದಸ್ಯ ಚ |**
**ತ್ರೀಣಿ ಪಂಚ ಚ ವರ್ಷಾಣಿ ವ್ಯತೀತಾನಿ ಸುಖೇನ ವೈ || ೧ ||**

**ಸಂಪ್ರಾಪ್ತೇ ನವಮೇ ವರ್ಷೇ ಪುತ್ರೋ ಧರ್ಮಾಂಗದೋ ಬಲೀ |**
**ಜಿತ್ವಾ ವಿದ್ಯಾಧರಾಢ್ಯಂ ಚ ಮಲಯೇ ಪರ್ವತೋತ್ತಮೇ || ೨ ||**

**ಆಜಹಾರ ಮಣೀನ್ ಪಂಚ ಸರ್ವಕಾಮಪ್ರದಾನ್ ಶುಭಾನ್ |**
**ಏಕಂ ಕಾಂಚನದಾತಾರಂ ಕೋಟಿಕೋಟಿಗುಣಂ ಶುಭಂ || ೩ ||**

**ದ್ವಿತೀಯಂ ವಸ್ತ್ರಭೂಷಾದಿಲಕ್ಷಕೋಟಿಪ್ರದಂ ತಥಾ |**
**ತೃತೀಯಮಮೃತಸ್ರಾವಿ ಪುನರ್ಯೌವನಕಾರಕಂ || ೪ ||**

---

## ಇಪ್ಪತ್ತನೆಯ ಅಧ್ಯಾಯವು.

೧. ವಸಿಷ್ಠನು ಹೇಳಿದನು:—ಈರೀತಿಯಾಗಿ ಸಂಭೋಗದಲ್ಲಿ ಮೋಹಿತನಾದ ರುಕ್ಮಾಂಗದರಾಜನಿಗೆ ಸುಖವಾಗಿ ಎಂಟುವರ್ಷಗಳು ಕಳೆದವು.

೨-೪. ಒಂಬತ್ತನೆಯ ವರ್ಷವು ಬರಲು ಬಲಿಷ್ಠನಾದ ಧರ್ಮಾಂಗದ ಕುಮಾರನು ಶ್ರೇಷ್ಠವಾದ ಮಲಯಪರ್ವತದಲ್ಲಿದ್ದ ವಿದ್ಯಾಧರರನ್ನು ಜಯಿಸಿ ಸಕಲೇಷ್ಟಾರ್ಥದಾಯಕಗಳಾದ, ಶುಭಕರವಾದ ಐದುಮಣಿಗಳನ್ನು ಅವರಿಂದ ತೆಗೆದುಕೊಂಡನು.

ಅವುಗಳಲ್ಲಿ ಒಂದು ಮಣಿಯು ಕೋಟಿಕೋಟಿಯಷ್ಟು ಸುವರ್ಣಪ್ರದವು. ಎರಡನೆಯದು ಲಕ್ಷಕೋಟಿ ವಸ್ತ್ರಾಭರಣಗಳನ್ನು ಕೊಡತಕ್ಕದು. ಮೂರನೆಯದು ಪುನಃ ಯೌವನವನ್ನುಂಟುಮಾಡುವ ಅಮೃತವನ್ನು ಸುರಿಸುವುದು.

ಸಭಾಗೃಹಪ್ರಕರ್ತಾರಂ ಚತುರ್ಥಂ ಚಾನ್ನಸಾಧಕಂ ।
ಪಂಚಮಂ ವ್ಯೋಮಗತಿದಂ ತ್ರೈಲೋಕ್ಯಪರಿಸರ್ಪಣಂ ॥ ೫ ॥

ತಾನ್ ಮಣೀನ್ ಗೃಹ್ಯ ಮನಸಾ ವಿದ್ಯಾಧರಸಮನ್ವಿತಃ ।
ಸ್ತ್ರೀಭಿರ್ವಿದ್ಯಾಧರಾಣಾಂ ಚ ಸಾಶ್ರುನೇತ್ರಾಭಿರಾವೃತಃ ॥ ೬ ॥

ವವಂದೇ ಚರಣೌ ಮಾತುಃ ಪಿತೂ ರುಕ್ಮಾಂಗದಸ್ಯ ಚ ।
ಮಣೀನ್ ಪಂಚ ಸಮರ್ಪ್ಯಾಥ ಪಾದಯೋಃ ಪ್ರಾಹ ಸಂನತಃ ॥ ೭ ॥

ಇಮೇ ಜಿತಾ ಮಯಾ ತಾತ ಪಂಚ ವಿದ್ಯಾಧರಾ ರಣೇ ।
ಮಲಯೇ ಭೂಧರಶ್ರೇಷ್ಠೇ ವೈಷ್ಣವಾಸ್ತ್ರೇಣ ಭೂಪತೇ ॥ ೮ ॥

ಇಮೇ ತೇ ಭೃತ್ಯತಾಂ ಪ್ರಾಪ್ತಾಃ ಸಸ್ತ್ರೀಕಾ ನೃಪಸತ್ತಮ ।
ಮಣೀನ್ ಪ್ರಯಚ್ಛ ಮೋಹಿನ್ಯೈ ಭುಜಭೂಷಣಹೇತವೇ ॥ ೯ ॥

---

೫. ನಾಲ್ಕನೆಯದು ಸಭಾಗೃಹಗಳನ್ನೂ ಅನ್ನವನ್ನೂ ಸಹ ಸಾಧಿಸಿ ಕೊಡುವುದು. ಐದನೆಯದು ಮೂರುಲೋಕಗಳಲ್ಲಿಯೂ ತಿರುಗುವಂತಹ ಆಕಾಶ ಸಂಚಾರ ಶಕ್ತಿಪ್ರದವು.

೬-೭. ಅಂತಹ ಮಹಿಮೆಯುಳ್ಳ, ಮಣಿಗಳನ್ನು ತೆಗೆದುಕೊಂಡು ಕಣ್ಣಿನಲ್ಲಿ ನೀರುತುಂಬಿಕೊಂಡಿರುವ ಎಂದರೆ ಅಳುತ್ತಿರುವ ಪತ್ನಿಯರಿಂದ ಸಹಿತರಾದ ವಿದ್ಯಾಧರರನ್ನೂ ಕರೆದುಕೊಂಡು ಮನಸ್ಸಿನಲ್ಲಿಯೇ ತಾಯಿ ಮತ್ತು ತಂದೆಯಾದ ರುಕ್ಮಾಂಗದನ ಪಾದಗಳನ್ನು ಸ್ಮರಿಸುತ್ತಾ ಹೊರಟನು.

ಹೀಗೆ ತನ್ನಪಟ್ಟಣಕ್ಕೆ ಬಂದು ಐದುಮಣಿಗಳನ್ನೂ ತಂದೆಯ ಪಾದಗಳಲ್ಲಿ ಸಮರ್ಪಿಸಿ, ನಮಸ್ಕರಿಸಿ ಮಾತನಾಡಿದನು.

೮. ತಾತ! ಶ್ರೇಷ್ಠವಾದ ಮಲಯಪರ್ವತದಲ್ಲಿ ಈ ಐದು ವಿದ್ಯಾಧರರನ್ನೂ ವೈಷ್ಣವಾಸ್ತ್ರದಿಂದ ಜಯಿಸಿದೆನು.

೯. ರಾಜಶ್ರೇಷ್ಠನೇ! ಪತ್ನಿಯರಿಂದ ಸಹಿತರಾದ ಈ ವಿದ್ಯಾಧರರು ನಿನ್ನ ಸೇವಕರಾಗಿರುವರು. ಭುಜಗಳನ್ನಲಂಕರಿಸಿಕೊಳ್ಳಲು ಮೋಹಿನೀದೇವಿಗೆ ಈ ಮಣಿಗಳನ್ನು ಕೊಡು.

ಸರ್ವಕಾಮಪ್ರದಾ ಹ್ಯೇತೇ ಪುನರ್ಯೌವನಕಾರಿಣಃ |
ಜೀರ್ಣದಂತಾಃ ಪುನರ್ಬಾಲಾ ಭವಂತಿ ಮಣಿಧಾರಣಾತ್ || ೧೦ ||

ವಸ್ತ್ರಹರ್ಮ್ಯಸುವರ್ಣಾನಾಂ ಸ್ವರ್ಗತೇರಮೃತಸ್ಯ ಚ |
ದಾತಾರೋ ಮಾಸಯುದ್ಧೇನ ಸಾಧಿತಾಸ್ತವ ತೇಜಸಾ || ೧೧ ||

ಸಾಧಿತಾನಿ ಮಯಾ ಕೃಚ್ಛ್ರಾತ್ ಸಪ್ತದ್ವೀಪಾನಿ ಭೂಪತೇ |
ಕರದಾನಿ ಸಮಸ್ತಾನಿ ಕೃತಾನಿ ತವ ತೇಜಸಾ || ೧೨ ||

ಸಮುದ್ರೇ ಚ ಪ್ರವಿಷ್ಟಸ್ಯ ಗತಃ ಸಂವತ್ಸರೋ ಮಮ |
ಜಿತಾ ಭೋಗವತೀ ತಾತ ಮಯಾ ನಾಗಸಮಾವೃತಾ || ೧೩ ||

ಆಹೃತಾ ನಾಗಕನ್ಯಾಶ್ಚ ಮಯಾ ಚಾಯುತಸಂಖ್ಯಕಾಃ |
ತತ್ರಾಪಿ ಹಾರರತ್ನಾನಿ ಸುಬಹೂನ್ಯಾಹೃತಾನಿ ಚ || ೧೪ ||

---

೧೦. ಇವು ಸಕಲೇಷ್ಟಾರ್ಥಗಳನ್ನೂ ಕೊಡುತ್ತವೆ. ಮುದುಕರಿಗೆ ಪುನಃ ಯೌವನವನ್ನುಂಟುಮಾಡುತ್ತವೆ. ಈ ಮಣಿಗಳನ್ನು ಧರಿಸುವುದರಿಂದ ಹಲ್ಲುಗಳು ಸಡಲಿದ ಮುದುಕರು ಪುನಃ ಯುವಕರಾಗುವರು.

೧೧. ಇವು ವಸ್ತ್ರ, ಅರಮನೆ, ಬಂಗಾರಗಳನ್ನೂ ದೇವಲೋಕಸಂಚಾರ ಶಕ್ತಿ ಮತ್ತು ಅಮೃತವನ್ನೂ ಸಹ ಕೊಡತಕ್ಕವು ನಿನ್ನ ತೇಜಸ್ಸಿನಿಂದ ಒಂದು ತಿಂಗಳು ಯುದ್ಧಮಾಡಿ ಇವನ್ನು ಸಾಧಿಸಿರುವೆನು.

೧೨. ಭೂಪತಿಯೇ! ನಿನ್ನ ಪ್ರಭಾವದಿಂದ ನಾನು ಸಪ್ತದ್ವೀಪಗಳನ್ನೂ ಕಷ್ಟಪಟ್ಟು ಸ್ವಾಧೀನಪಡಿಸಿಕೊಂಡಿರುವೆನು ಮತ್ತು ಎಲ್ಲರನ್ನೂ ಪೊಗದಿ ಕೊಡುವಂತೆ ಮಾಡಿರುವೆನು.

೧೩. ಸಮುದ್ರದಲ್ಲಿ ಪ್ರವೇಶಮಾಡಿ ಒಂದು ವರ್ಷಕಾಲ ಅಲ್ಲಿದ್ದೆನು. ಸರ್ಪಗಳಿಂದ ಪರಿವೃತವಾದ ಭೋಗವತಿಯನ್ನು ಜಯಿಸಿದೆನು.

೧೪. ಹತ್ತುಸಾವಿರ ನಾಗಕನ್ಯೆಯರನ್ನು ಅಲ್ಲಿಂದ ಕರೆತಂದೆನು. ಹಾಗೂ ಹಾರ, ರತ್ನಗಳನ್ನು ಬಹುಹೆಚ್ಚಾಗಿ ತೆಗೆದುಕೊಂಡುಬಂದೆನು.

ಪುನಶ್ಚಾಹಂ ಗತಸ್ತಾತ ದಾನವಾನಾಂ ಪುರಂ ಮಹತ್ ।
ತಾನ್ನಿರ್ಜಿತ್ಯ ಚ ಕನ್ಯಾನಾಂ ಸುರೂಪಾಣಾಂ ಸುವರ್ಚಸಾಂ ॥ ೧೫ ॥

ಆಹೃತಾನಿ ಮಯಾ ತ್ರೀಣಿ ಸಹಸ್ರಾಣಿ ಚ ಪಂಚ ಚ ।
ದಶಕೋಟ್ಯಸ್ತು ರತ್ನಾನಾಂ ದೀಪಕರ್ಮನಿಶಾಗಮೇ ॥ ೧೬ ॥

ಕುರ್ವತಾಂ ತೇ ಮಹೀಪಾಲ ಆನೀತಾಸ್ತವ ಮಂದಿರೇ ।
ತತೋಽಹಂ ವಾರುಣಂ ಲೋಕಂ ರಸಾತಲತಲಸ್ಥಿತಂ ॥ ೧೭ ॥

ಗತೋ ವೀರ್ಯಬಲೋತ್ಸಿಕ್ತಸ್ತ್ವದಂಘ್ರಿಯುಗಸೇವಕಃ ।
ತತ್ರೋಕ್ತೋ ವರುಣೋ ದೇವಃ ಸ್ಥೀಯತಾಂ ಮತ್ಪಿತುರ್ವಶೇ ॥ ೧೮ ॥

ರುಕ್ಮಾಂಗದಸ್ಯ ನೃಪತೇರ್ಯದಿ ಜೀವಿತುಮಿಚ್ಛಸಿ ।
ಕುಪಿತೋ ಮಮ ವಾಕ್ಯೇನ ವರುಣೋ ಯೋದ್ಧುಮಾಗತಃ ॥ ೧೯ ॥

---

೧೫-೧೯. ತಾತ! ಪುನಃ ನಾನು ಮಹತ್ತಾದ ದಾನವಪಟ್ಟಣಕ್ಕೆ ಹೋದೆನು. ಅಲ್ಲಿ ಅವರನ್ನು ಸೋಲಿಸಿ, ರೂಪವತಿಯರಾದ' ಒಳ್ಳೆಯ ತೇಜಸ್ಸುಳ್ಳ ಮೂರುಸಾವಿರದ ಐದು ಕನ್ಯೆಯರನ್ನು ಕರೆತಂದೆನು.

ಭೂಪಾಲನೇ! ರಾತ್ರಿಕಾಲದಲ್ಲಿ ದೀಪದಂತೆ ಪ್ರಕಾಶವನ್ನುಂಟುಮಾಡುವ ಹತ್ತುಕೋಟಿ ರತ್ನಗಳನ್ನು ನಿನ್ನಮನೆಗೆ ತಂದಿರುವೆನು.

ತರುವಾಯ ರಸಾತಲಲೋಕದ ಕೆಳಭಾಗದಲ್ಲಿರುವ ವರುಣಲೋಕಕ್ಕೆ ಹೋದೆನು. ಅಲ್ಲಿ ಪರಾಕ್ರಮಬಲಗಳಿಂದ ಉತ್ಸಾಹವನ್ನುಹೊಂದಿ, ನಿನ್ನಪಾದಸೇವಕನಾದ ನಾನು ವರುಣದೇವನಿಗೆ "ನೀನು ಬದುಕಿರಬೇಕೆಂಬ ಅಪೇಕ್ಷೆಯಿದ್ದರೆ ನನ್ನತಂದೆಯಾದ ರುಕ್ಮಾಂಗದರಾಜನ ಅಧೀನನಾಗು" ಎಂದು ಹೇಳಿದೆನು. ನನ್ನಮಾತಿನಿಂದ ಕೋಪಗೊಂಡ ವರುಣನು ಯುದ್ಧಕ್ಕೆ ಬಂದನು.

ತೇನ ಸಂವತ್ಸರಂ ಯುದ್ಧಂ ಘೋರಂ ಜಾತಂ ರಸಾತಲೇ |
ಜಿತೋ ನಾರಾಯಣಾಸ್ತ್ರೇಣ ಮಯಾ ಸ ಜಲನಾಯಕಃ || ೨೦ ||

ನ ಹತಃ ಪ್ರಮದಾವಾಕ್ಯೈಸ್ತಸ್ಯ ಜೀವಿತರಕ್ಷಣೇ |
ನಿರ್ಜಿತೇನಾಯುತಂ ದತ್ತಂ ವಾಜಿನಾಂ ವಾತರಂಹಸಾಂ || ೨೧ ||

ಏಕತಃ ಶ್ಯಾಮಕರ್ಣಾನಾಂ ಶುಭ್ರಾಣಾಂ ಚಂದ್ರವರ್ಚಸಾಂ |
ತೃಣತೋಯವಿಹೀನಾ ಯೇ ಜೀವಿತಂ ಬಹುಶಃ ಸಮಾಃ || ೨೨ ||

ಏಕಾಂ ಕನ್ಯಾಂ ಸುರೂಪಾಂ ಮೇ ಪುರಸ್ಕೃತ್ಯ ಸ್ವಲಂಕೃತಾಂ |
ಭಾರ್ಯಾರ್ಥೇ ವರುಣಃ ಪ್ರಾದಾತ್ ಸಾಪ್ಯಾನೀತಾ ಮಯಾ ಶುಭಾ ||

ಕುಮಾರೀ ತು ಸಮಾನೀತಾ ಬಹುವಿತ್ತಸಮನ್ವಿತಾ |
ತನ್ನಾಸ್ತಿ ತ್ರಿಷು ಲೋಕೇಷು ಸ್ಥಾನಂ ತಾತ ಸುದುರ್ಗಮಂ || ೨೪ ||

---

೨೦. ರಸಾತಲಲೋಕದಲ್ಲಿ ಅವನೊಡನೆ ಒಂದುವರ್ಷ ಘೋರಯುದ್ಧ ಮಾಡಿ ನಾನು ನಾರಾಯಣಾಸ್ತ್ರದಿಂದ ಜಲನಾಯಕನಾದ ವರುಣನನ್ನು ಜಯಿಸಿದೆನು.

೨೧-೨೨. ಅವನ ಸ್ತ್ರೀಯರು ಅವನನ್ನು ಜೀವಸಹಿತವಾಗಿ ಉಳಿಸಬೇಕೆಂದು ಕೇಳಿಕೊಂಡುದರಿಂದ ನಾನು ಅವನನ್ನು ಸಂಹಾರಮಾಡಲಿಲ್ಲ.

ಸೋತ ವರುಣನು ಗಾಳಿಯಂತೆ ವೇಗಶೀಲಗಳಾದ, ಒಂದುಕಡೆ ಶ್ಯಾಮವರ್ಣದ ಕಿವಿಗಳುಳ್ಳ, ಶುಭ್ರವಾದ ಚಂದ್ರನಂತೆ ಕಾಂತಿಯುಳ್ಳ, ಬಹುವರ್ಷಗಳು ಹುಲ್ಲುನೀರೂ ಇಲ್ಲದೆಯೇ ಬದುಕಿರುವಂತಹ ಹತ್ತುಸಾವಿರ ಕುದುರೆಗಳನ್ನು ನನಗೆ ಕೊಟ್ಟನು.

೨೩. ವರುಣನು ನನ್ನನ್ನು ಪುರಸ್ಕರಿಸಿ ಸುರೂಪಿಯೂ, ಚೆನ್ನಾಗಿ ಅಲಂಕೃತಳೂ ಆದ ಒಂದು ಕನ್ಯೆಯನ್ನು ವಿವಾಹಮಾಡಿಕೊಳ್ಳಬೇಕೆಂದು ನನಗೆ ಕೊಟ್ಟನು. ಆ ಶುಭಾಂಗಿಯನ್ನೂ ನಾನು ಕರೆದುಕೊಂಡು ಬಂದಿರುವೆನು.

೨೪. ಕುಮಾರಿಯನ್ನು ಬಹುಧನಸಹಿತವಾಗಿ ಕರೆದುಕೊಂಡು ಬಂದೆನು. ಅಪ್ಪ ! ಮೂರುಲೋಕಗಳಲ್ಲಿಯೂ ನನಗೆ ಹೋಗಲಶಕ್ಯವಾದ ಸ್ಥಾನವೇ ಇಲ್ಲ.

ಯನ್ಮಯಾ ನ ಜಿತಂ ಹ್ಯಸ್ತಿ ತವಾಂಘ್ರಿಪರಿಸೇವನಾತ್ ।
ತದುತ್ತಿಷ್ಠ ಪರೀಕ್ಷಸ್ವ ತ್ವತ್ಪ್ರಸಾದಾರ್ಜಿತಾಂ ಶ್ರಿಯಂ ॥ ೨೫ ॥

ಅಹಂ ಚ ಸಂಪದಃ ಸರ್ವಾಸ್ತ್ವದಧೀನಾ ವಿಶಾಂಪತೇ ।
ಯಃ ಪುತ್ರಸ್ತಾತ ವದತಿ ಮಯಾ ಲಕ್ಷ್ಮೀಃ ಸಮಾರ್ಜಿತಾ ॥ ೨೬ ॥

ನ ದೇಯಾ ಭೂಮಿದೇವೇಭ್ಯಃ ಸೋಽಪಿ ವೈ ನರಕಂ ವ್ರಜೇತ್ ।
ಆತ್ಮಸಂಭಾವನಂ ತಾತ ನ ಕರ್ತವ್ಯಂ ಸುತೇನ ಹಿ ॥ ೨೭ ॥

ಕುಠಾರದಾತ್ರಸದೃಶಃ ಪುತ್ರಃ ಸಂಪತ್ಸಮುಚ್ಚಯೇ ।
ಪಿತುಃ ಶೌರ್ಯೇಣ ಪುತ್ರಸ್ಯ ವರ್ಧತೇ ಧನಸಂಚಯಃ ॥ ೨೮ ॥

ತೈಜಸಂ ದಾತ್ರಮಾದಾಯ ಲುನಾತಿ ತೃಣಸಂಚಯಾನ್ ।
ವಾಯುನಾ ಪೂರಿತಂ ವಸ್ತ್ರಂ ತಾರಯೇನ್ನಾಃ ಗತಂ ಜಲೇ ॥ ೨೯ ॥

---

೨೫. ತಾತ! ನಿನ್ನ ಪಾದಸೇವೆಯ ಪ್ರಭಾವದಿಂದ ನಾನು ಎಲ್ಲವನ್ನೂ ಜಯಿಸಿರುವೆನು. ಜಯಿಸದಿರುವುದಾವುದೂ ಇಲ್ಲ. ಆದಕಾರಣ ನಿನ್ನ ಅನುಗ್ರಹ ದಿಂದ ಸಂಪಾದಿಸಿರುವ ಸಂಪತ್ತನ್ನು ನೋಡು.

೨೬-೨೭. ನಾನು ಮತ್ತು ಈ ಸಕಲಸಂಪತ್ತುಗಳೂ ನಿನ್ನ ಅಧೀನವಾ ಗಿವೆ. ಜನಪತಿಯೇ! ಯಾವ ಮಗನು "ನಾನು ಐಶ್ವರ್ಯವನ್ನು ಸಂಪಾದಿ ಸಿರುವೆನು ಅದನ್ನು ಬ್ರಾಹ್ಮಣರಿಗೆ ದಾನಮಾಡಬಾರದು" ಎಂಬುದಾಗಿ ಹೇಳು ವನೋ ಅವನೂ ಸಹ ನರಕಕ್ಕೆ ಹೋಗುವನು. ಅಪ್ಪ! ಮಗನು ತನ್ನನ್ನು ಹೊಗಳಿಕೊಳ್ಳಬಾರದು.

೨೮. ಐಶ್ವರ್ಯವನ್ನು ಸಂಗ್ರಹಿಸುವುದರಲ್ಲಿ ಪುತ್ರನು ಕೊಡಲಿ ಕುಡು ಗೋಲುಗಳಿಗೆ ಸಮಾನನು. ತಂದೆಯ ಶೌರ್ಯದಿಂದ ಮಗನಿಗೆ ಧನಸಂಗ್ರಹವು ಹೆಚ್ಚುತ್ತದೆ.

೨೯. ತೇಜೋಮಯವಾದ ಕುಡುಗೋಲನ್ನು ತೆಗೆದುಕೊಂಡು ತೃಣ ಸಮೂಹಗಳನ್ನು ಕತ್ತರಿಸುತ್ತಾನೆ. ಗಾಳಿಯಿಂದ ತುಂಬಿದ ಬಟ್ಟೆಯೂ ನೀರಿ ನಲ್ಲಿದ್ದ ನೌಕೆಯನ್ನು ದಾಟಿಸುತ್ತದೆ.

**ಯಥಾ ದಾರುಮಯೀ ಯೋಷಾ ಚೇಷ್ಟತೇ ಕುಹಕೇಚ್ಛಯಾ ।**
**ತಥಾಹಿ ಪಿತೃವೀರ್ಯೇಣ ಪುತ್ರಾಸ್ತೇಜೋಬಲಾನ್ವಿತಾಃ ॥ ೩೦ ॥**

**ತಸ್ಮಾದಿಮಾಂ ಮಾಧವದೇವವಲ್ಲಭಾಂ**
**ವಿಲೋಕಯಸ್ವಾದ್ಯ ಮಯೋಪನೀತಾಂ ।**
**ಆತ್ಮೇಚ್ಛಯಾ ಯಚ್ಛತು ರಕ್ಷತಾದ್ವಾ**
**ಸ್ವಸಂಪದೋ ಮಾತೃಸಮೂಹವರ್ಯೆ ॥ ೩೧ ॥**

**ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಧರ್ಮಾಂಗದ ದಿಗ್ವಿಜಯೋ ನಾಮ ವಿಂಶೋಽಧ್ಯಾಯಃ**

---

೩೦. ಸೂತ್ರಧಾರಿಯ ಕೈಚಳಕದಿಂದ ಮರದ ಹೆಣ್ಣುಬೊಂಬೆಯು ಚೇಷ್ಟೆಮಾಡುವಂತೆ ತಂದೆಯ ಸಾಮರ್ಥ್ಯದಿಂದ ಮಕ್ಕಳು ತೇಜೋಬಲಗಳಿಂದ ಯುಕ್ತರಾಗುವರು.

೩೧. ಆದಕಾರಣ ಮಾತೃಸಂಘಸ್ವಾಮಿಯೇ! ನಾನು ತೆಗೆದು ಕೊಂಡುಬಂದಿರುವ ಐಶ್ವರ್ಯವನ್ನು ಈಗಲೇ ನೋಡು! ನಿನ್ನ ಇಷ್ಟಾನುಸಾರ ವಾಗಿ ದಾನಮಾಡು ಅಥವಾ ರಕ್ಷಿಸು. ಇವೆಲ್ಲಾ ನಿನ್ನ ಸಂಪತ್ತುಗಳೇ ಆಗಿವೆ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಧರ್ಮಾಂಗದನ ದಿಗ್ವಿಜಯವೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ

ರುಕ್ಮಾಂಗದನು ಮಗನಿಗೆ ರಾಜ್ಯಭಾರವನ್ನು ವಹಿಸಿ ತಾನು ಮೋಹಿನಿ ಯೊಡನೆ ಎಂಟುವರ್ಷಗಳಕಾಲ, ಸಂಭೋಗಸುಖವನ್ನನುಭವಿಸಿದನು. ಒಂಬ ತ್ತನೆಯ ವರ್ಷದಲ್ಲಿ ಧರ್ಮಾಂಗದನು ಮಲಯಪರ್ವತದಲ್ಲಿದ್ದ ಐದುವಿದ್ಯಾಧರರನ್ನು ಜಯಿಸಿ ಅವರಲ್ಲಿದ್ದ ಐದು ಮಣಿಗಳಸಹಿತವಾಗಿ ಆ ವಿದ್ಯಾಧರ ದಂಪತಿಗಳನ್ನು ಕರೆದುಕೊಂಡುಬಂದು ಅನರ್ಘ್ಯವಾದ ಮಣಿಗಳನ್ನು ತಂದೆಯ ಪಾದಕ್ಕೊಪ್ಪಿಸಿ, ತನ್ನ ದಿಗ್ವಿಜಯಪ್ರಕಾರಗಳನ್ನೆಲ್ಲಾ ತಂದೆಯಲ್ಲಿ ವಿಜ್ಞಾಪಿಸಿ, ಅದುವರೆಗೆ ತಾನು ಸಂಪಾದಿಸಿದ್ದ ಸಂಪತ್ತುಗಳನ್ನೆಲ್ಲಾ ತಂದೆಗೆ ಒಪ್ಪಿಸಿದನು.

## ಏಕವಿಂಶೋಽಧ್ಯಾಯಃ

—

### ಮಾಂಧಾತೋವಾಚ

ಪುತ್ರಸ್ಯ ವಚನಂ ಶ್ರುತ್ವಾ ಕಿಂ ಚಕಾರ ಮಹೀಪತಿಃ ।
ಸಾ ಚಾಪಿ ಮೋಹಿನೀ ಬ್ರಹ್ಮನ್ ಪ್ರಿಯಾ ರಾಜ್ಞೋ ವಿಧೇಃ ಸುತಾ ॥ ೧ ॥

ಆಶ್ಚರ್ಯರೂಪಂ ಕಥಿತಮಾಖ್ಯಾನಂ ತು ಸುಧೋಪಮಂ ।
ವಿಶೇಷತಸ್ತ್ವಯಾ ಪುಣ್ಯಂ ಸರ್ವಸಂದೇಹಭಂಜನಂ ॥ ೨ ॥

### ವಸಿಷ್ಠ ಉವಾಚ

ತತ್ಪುತ್ರವಚನಂ ಶ್ರುತ್ವಾ ಪ್ರಹೃಷ್ಟೋ ನೃಪಪುಂಗವಃ ।
ಉದತಿಷ್ಠತ್ ಪ್ರಿಯಾಯುಕ್ತಸ್ತಾಃ ಶ್ರಿಯಶ್ಚಾವಲೋಕಯತ್ ॥ ೩ ॥

---

### ಇಪ್ಪತ್ತೊಂದನೆಯ ಅಧ್ಯಾಯವು.

೧. ಮಾಂಧಾತನು ಹೇಳಿದನು :—ರುಕ್ಮಾಂಗದಭೂಪಾಲನು ಮಗನ ಮಾತನ್ನು ಕೇಳಿ ಏನು ಮಾಡಿದನು? ಬ್ರಾಹ್ಮಣನೇ! ಬ್ರಹ್ಮಪುತ್ರಿಯೂ, ರಾಜಪ್ರಿಯಳೂ ಆದ ಆ ಮೋಹಿನಿಯೂ ಸಹ ಏನು ಮಾಡಿದಳು?

೨. ಆಶ್ಚರ್ಯಕರವು, ಅಮೃತಕ್ಕೆ ಸಮಾನವು, ಪುಣ್ಯಕರವು, ಸಕಲ ಸಂಶಯಪರಿಹಾರಕವೂ ಆದ ಕಥೆಯು ನಿನ್ನಿಂದ ಉಕ್ತವಾಯಿತು.

೩. ವಸಿಷ್ಠನು ಹೇಳಿದನು :—ಮಗನ ಆ ಮಾತನ್ನು ಕೇಳಿ ರಾಜಶ್ರೇಷ್ಠನು ಬಹಳ ಸಂತೋಷಪಟ್ಟು ಪ್ರಿಯೆಯಿಂದ ಸಹಿತನಾಗಿ ಎದ್ದು ಆ ಸಂಪತ್ತುಗಳನ್ನು ನೋಡಿದನು.

ಕ್ಷಣಂ ಹರ್ಷಾನ್ವಿತೋ ಭೂಪ ರಾಜಾ ವಿಷ್ಣುಪರಾಯಣಃ |
ನಾಗಕನ್ಯಾಸ್ತು ತಾಃ ಸರ್ವಾ ವಾರುಣೀಸಹಿತಾ ಮುದಾ || ೪ ||

ಪ್ರದದೌ ತನಯಪ್ರೇಮ್ಣಾ ಭಾರ್ಯಾರ್ಥಂ ಧರ್ಮಭೂಷಣೇ |
ಶೇಷಂ ದಾನವನಾರೀಭಿರ್ಬಹುರತ್ನಸಮನ್ವಿತಂ || ೫ ||

ಮೋಹಿನ್ಯೈ ಪ್ರದದೌ ರಾಜಾ ಕಾಮಬಾಣಪ್ರಪೀಡಿತಃ |
ಸಂವಿಭಜ್ಯ ಪಿತಾ ವಿತ್ತಂ ಧರ್ಮಾಂಗದಸಮಾಹೃತಂ || ೬ ||

ಪುರೋಹಿತಮುವಾಚೇದಂ ಕಾಲೇ ಚಾಹೂಯ ಭೂಪತಿಃ |
ಸರ್ವಾಸಾಂ ಮತ್ಸುತೋ ಬ್ರಹ್ಮನ್ ಪಾಣಿಂ ಗೃಹ್ಣೀತು ಧರ್ಮತಃ || ೭ ||

ಕುಮಾರೀಣಾಂ ಚ ಕುಮಾರೋಽಯಂ ಮದ್ವಾಕ್ಯೇ ಸಂಸ್ಥಿತಃ ಸದಾ |
ವೈವಾಹ್ಯಲಗ್ನಂ ನಕ್ಷತ್ರೇ ಮುಹೂರ್ತೇ ಸರ್ವಕಾಮದೇ || ೮ ||

---

೪-೬. ದೊರೆಯೇ ! ವಿಷ್ಣುಭಕ್ತನಾದ ರಾಜನು ಸಂತುಷ್ಟನಾಗಿ ತಕ್ಷಣ ವರುಣಪುತ್ರಿಯಿಂದ ಸಹಿತರಾದ ಆ ನಾಗಕನ್ಯೆಯರನ್ನೆಲ್ಲಾ ದಾನವಕನ್ಯೆಯರೊಡನೆ ಪುತ್ರಪ್ರೇಮದಿಂದ ಧರ್ಮಿಷ್ಠನಾದ ಆ ಕುಮಾರನಿಗೆ ಭಾರ್ಯೆಯರನ್ನಾಗಿ ಮಾಡಿಕೊಳ್ಳಲು ಕೊಟ್ಟನು. ಧರ್ಮಾಂಗದನು ತಂದಿದ್ದ ಬಹುರತ್ನಸಹಿತವಾದ ಉಳಿದ ಧನವನ್ನು ತಂದೆಯಾದ ರಾಜನು ಕಾಮಬಾಣದಿಂದ ಪೀಡಿತನಾಗಿ ಮೋಹಿನಿಗೆ ವಿಭಾಗಿಸಿಕೊಟ್ಟನು.

೭. ಭೂಪತಿಯು ಪುರೋಹಿತನನ್ನು ಕರೆಯಿಸಿ ನನ್ನ ಮಗನಿಗೆ ಒಳ್ಳೆಯ ಮುಹೂರ್ತದಲ್ಲಿ ಈ ಕನ್ಯೆಯರೆಲ್ಲರ ಪಾಣಿಗ್ರಹಣವನ್ನು ಗೃಹ್ಯಧರ್ಮಾನುಸಾರವಾಗಿ ಮಾಡಿಸಬೇಕು.

೮-೯. ಇವನು ಕುಮಾರಿಗಳ ಕುಮಾರನು ; ಯಾವಾಗಲೂ ನನ್ನ ಮಾತಿನಂತೆ ನಡೆಯುತ್ತಿರುವನು. ಸಕಲಾಭೀಷ್ಟಪ್ರದವಾದ ನಕ್ಷತ್ರಮುಹೂರ್ತದಲ್ಲಿ ವಿವಾಹಲಗ್ನವನ್ನು ಗೊತ್ತುಮಾಡಿ, ಗೋವು, ಸುವರ್ಣವಸ್ತ್ರಗಳನ್ನು

ವಾಚಯಿತ್ವಾ ದ್ವಿಜಾನ್ ಸ್ವಸ್ತಿ ಗೋಸ್ವರ್ಣಾಂಬರತೋಷಿತಾನ್ ।
ವಿವಾಹಂ ಕುರು ಪುತ್ರಸ್ಯ ಮಮ ಧರ್ಮಾಂಗದಸ್ಯ ವೈ ॥ ೯ ॥

ಯಃ ಪುತ್ರಸ್ಯ ಪಿತೋದ್ವಾಹಂ ನ ಕರೋತೀಹ ಮಂದಧೀಃ ।
ಸ ಮಜ್ಜೇನ್ನರಕೇ ಘೋರೇ ಹ್ಯಪ್ರತಿಷ್ಠೇ ಯುಗಾಯುತಂ ॥ ೧೦ ॥

ತಸ್ಮಾಚ್ಛೋದ್ವಾಹಯೇತ್ ಪುತ್ರಂ ಪಿತಾ ಧರ್ಮಸಮನ್ವಿತಃ ।
ಆತ್ಮಾ ಸಂಸ್ಥಾಪಿತಸ್ತೇನ ಯೇನ ಸಂಸ್ಥಾಪಿತಃ ಸುತಃ ॥ ೧೧ ॥

ಸರ್ವಕ್ರತುಫಲಂ ತಸ್ಯ ಪುತ್ರೋದ್ವಾಹೇ ಕೃತೇ ಭವೇತ್ ।
ಪುತ್ರಸ್ಯ ಗುಣಯುಕ್ತಸ್ಯ ನಿರ್ಗುಣಸ್ಯಾಪಿ ಭೂಸುರ ॥ ೧೨ ॥

ಪಿತ್ರಾ ಕಾರಯಿತವ್ಯೋ ಹಿ ವಿವಾಹೋ ಧರ್ಮಮಿಚ್ಛತಾ ।
ಯೋ ನ ದಾರೈಶ್ಚ ವಿತ್ತೈಶ್ಚ ಪುತ್ರಾನ್ ಸಂಯೋಜಯೇತ್ಪಿತಾ ॥ ೧೩ ॥

---

ಕೊಟ್ಟು ಸಂತೋಷಪಡಿಸಿದ ಬ್ರಾಹ್ಮಣರಿಂದ ಸ್ವಸ್ತಿವಾಚನೆಮಾಡಿಸಿ ನನ್ನ ಮಗನಾದ ಧರ್ಮಾಂಗದನಿಗೆ ವಿವಾಹವನ್ನು ಮಾಡಿಸು.

೧೦. ಯಾವ ಮಂದಬುದ್ಧಿಯು ಮಗನಿಗೆ ವಿವಾಹವನ್ನು ಮಾಡಿಸುವುದಿಲ್ಲವೋ ಅಂತಹವನು ಘೋರವಾದ ಪ್ರತಿಷ್ಠೆಯಿಲ್ಲದ ನರಕದಲ್ಲಿ ಹತ್ತುಸಾವಿರ ಯುಗಗಳವರೆಗೆ ಮಗ್ನನಾಗುವನು.

೧೧. ಆದಕಾರಣ ಧರ್ಮಿಷ್ಠನಾದ ತಂದೆಯು ಮಗನಿಗೆ ಸಕಾಲದಲ್ಲಿ ಮದುವೆಯನ್ನು ಮಾಡಿಸಬೇಕು. ಮಗನನ್ನೂ ಗೃಹ್ಯಧರ್ಮದಲ್ಲಿ ಸ್ಥಾಪಿಸಿದುದರಿಂದ ತನ್ನನ್ನೇ ಸ್ಥಾಪಿಸಿದಂತಾಗುವುದು.

೧೨. ಬ್ರಾಹ್ಮಣನೇ! ಪುತ್ರನು ಗುಣಶಾಲಿಯಾಗಲಿ ಅಥವಾ ಆಗದಿರಲಿ, ಅವನಿಗೆ ತಂದೆಯು ವಿವಾಹಮಾಡಿಸಿದರೆ ಸಕಲ ಯಜ್ಞಗಳ ಫಲವೂ ಬರುತ್ತದೆ.

೧೩-೧೯. ಧರ್ಮವನ್ನು ಬಯಸುವ ತಂದೆಯು ಮಗನಿಗೆ ವಿವಾಹವನ್ನು ಮಾಡಿಸಬೇಕು. ಮಕ್ಕಳಿಗೆ ವಿವಾಹಮಾಡಿಸಿ ಆಸ್ತಿಯನ್ನು ಸಂಪಾದಿಸಿ

ನ ಪುರ್ಮಾ ಸ ತು ವಿಜ್ಞೇಯ ಇಹಾಮುತ್ರ ವಿಗರ್ಹಿತಃ |
ತಸ್ಮಾದ್ವೃತ್ತಿಯುತಾಃ ಕಾರ್ಯಾಃ ಪುತ್ರಾ ದಾರೈಃ ಸಮನ್ವಿತಾಃ || ೧೪ ||

ಯಥಾ ರಮಂತೇ ತೇ ತುಷ್ಟಾಃ ಸುಖಂ ಪುತ್ರಾಃ ಸುಮಾನಿತಾಃ |
ತಚ್ಛ್ರುತ್ವಾ ವಚನಂ ರಾಜ್ಞೋ ದ್ವಿಜಸ್ತಸ್ಯ ಪುರೋಹಿತಃ || ೧೫ ||

ಧರ್ಮಾಂಗದವಿವಾಹಾರ್ಥಮುದ್ಯತೋ ಹರ್ಷಸಂಯುತಃ |
ಸ ಯುವಾನಿಚ್ಛಮಾನೋಽಪಿ ಸ್ತ್ರೀಸೌಖ್ಯಂ ಲಜ್ಜಯಾ ಸುತಃ || ೧೬ ||

ಸ್ವೀಚಕಾರ ಪಿತುರ್ವಾಕ್ಯಾದ್ದಾರಸಂಗ್ರಹಣಂ ತದಾ |
ವರುಣಾತ್ಮಜಯಾ ಸಾರ್ಧಂ ನಾಗಕನ್ಯಾ ಮನೋಹರಾಃ || ೧೭ ||

ಉಪಯೇಮೇ ಮಹಾಬಾಹೂ ರೂಪೇಣಾಪ್ರತಿಮಾ ಭುವಿ |
ಉದ್ವಾಹಯಿತ್ವಾ ಸರ್ವಾಸ್ತಾ ವಿಧಿದೃಷ್ಟೇನ ಕರ್ಮಣಾ || ೧೮ ||

---

ಕೊಡದಿರುವ ತಂದೆಯು ಇಹಪರಗಳಲ್ಲಿ ನಿಂದಿತಪುರುಷನೆಂದು ತಿಳಿಯಬೇಕು. ಆದಕಾರಣ ತಂದೆಯು ಮಕ್ಕಳಿಗೆ ವೃತ್ತಿಯನ್ನು ಕಲ್ಪಿಸಿ ಅವರು ಸಂತುಷ್ಟರಾಗಿ ಮರ್ಯಾದೆಯಿಂದ ಸುಖವಾಗಿ ವಿಹರಿಸುವಂತೆ ಮದುವೆಮಾಡಬೇಕು.

ಹೀಗೆ ರುಕ್ಮಾಂಗದನು ಪುರೋಹಿತನಿಗೆ ಹೇಳಿದನು. ರಾಜನ ಆ ಮಾತನ್ನು ಕೇಳಿ ಪುರೋಹಿತದ್ವಿಜನು ಸಂತೋಷಯುಕ್ತನಾಗಿ ಧರ್ಮಾಂಗದನ ವಿವಾಹಕ್ಕೋಸ್ಕರ ಉದ್ಯುಕ್ತನಾದನು. ಆ ಯುವಕನಾದ ಕುಮಾರನು ನಾಚಿಕೆಯಿಂದ ಸ್ತ್ರೀಸೌಖ್ಯವನ್ನು ಅಪೇಕ್ಷಿಸದಿದ್ದರೂ ತಂದೆಯ ಅಪ್ಪಣೆಯಂತೆ ಆಗ ಮದುವೆಮಾಡಿಕೊಳ್ಳಲು ಒಪ್ಪಿದನು. ಮಹಾಪರಾಕ್ರಮಿಯಾದ ಧರ್ಮಾಂಗದನು ಭೂಲೋಕದಲ್ಲಿ ಅವರಿಗೆ ಸಮಾನರೂಪವಂತರಿಲ್ಲದಂತಹ, ಮನೋಹರ ನಾಗಕನ್ಯೆಯರನ್ನು ವರುಣಪುತ್ರಿಯಸಹಿತವಾಗಿ ವಿವಾಹಮಾಡಿಕೊಂಡನು. ವಿಧಾನೋಕ್ತ ಕರ್ಮಾಚರಣೆಮಾಡಿ ಅವರೆಲ್ಲರನ್ನೂ ವಿವಾಹಮಾಡಿಕೊಂಡು, ಸಂತೋಷದಿಂದ ಧನ, ಗೋವು ಮತ್ತು ರತ್ನಗಳನ್ನು ಬ್ರಾಹ್ಮಣರಿಗೆ ದಾನ

ವಸುಗೋರತ್ನದಾನಾನಿ ವಿಪ್ರೇಭ್ಯಃ ಪ್ರದದೌ ಮುದಾ |
ಕೃತದಾರೋ ವವಂದೇಽಥ ಪಾದಾನ್ ಮಾತುಃ ಪಿತುರ್ಮುದಾ || ೧೯ ||

ತತಃ ಸಂಧ್ಯಾವಲೀದೇವೀಮಾಹ ಧರ್ಮಾಂಗದಃ ಸುತಃ |
ಪಿತುರ್ವಾಕ್ಯೇನ ಮೇ ದೇವಿ ಸಂಜಾತೋ ದಾರಸಂಗ್ರಹಃ || ೨೦ ||

ಏತನ್ಮೇ ನಾಸ್ತಿ ಮನಸಿ ಯತ್ ಪಿತ್ರೋರ್ದ್ವಾಹಿತೋ ಹ್ಯಹಂ |
ಅವ್ಯಯಂ ಪಿತರಂ ವಿಜ್ಞಂ ದೇವಿ ಶುಶ್ರೂಷಯೇ ಹ್ಯಹಂ || ೨೧ ||

ದಿವ್ಯೈರ್ಭೋಗೈರ್ನ ಮೇ ಕಿಂಚಿತ್ ಸ್ವರ್ಗೇಣಾಪಿ ಪ್ರಯೋಜನಂ |
ಕಾರ್ಯಾ ಮೇ ಪಿತೃಶುಶ್ರೂಷಾ ತವ ಚೈವ ದಿವಾನಿಶಂ || ೨೨ ||

ಸಂಧ್ಯಾವಲ್ಯುವಾಚ

ಚಿರಂ ಜೀವ ಸುಖಂ ಪುತ್ರ ಭುಂಕ್ಷ್ವ ಭೋಗಾನ್ ಮನೋನುಗಾನ್ |
ಪಿತುಃ ಪ್ರಸಾದಾದ್ದೀರ್ಘಾಯುರ್ಮನೋ ನಂದಯ ಮೇ ಸುತ || ೨೩ ||

---

ಮಾಡಿದನು. ವಿವಾಹಿತನಾದಮೇಲೆ ಅವನು ಮಾತಾಪಿತೃಗಳ ಪಾದಗಳನ್ನು ನಮಸ್ಕರಿಸಿದನು.

೨೦. ಅನಂತರ ಧರ್ಮಾಂಗದಕುಮಾರನು ಸಂಧ್ಯಾವಳೀದೇವಿಯನ್ನು ಕುರಿತು ಹೀಗೆ ಹೇಳಿದನು:—ದೇವಿಯೇ! ತಂದೆಯ ಮಾತಿನಿಂದ ನನಗೆ ಮದುವೆಯಾಯಿತು.

೨೧. ಮದುವೆಮಾಡಿಕೊಳ್ಳಬೇಕೆಂದು ನನಗೆ ಸ್ವತಃ ಇಚ್ಛೆಯಿರಲಿಲ್ಲ. ತಂದೆಯ ಅಪ್ಪಣೆಯನ್ನು ಮೀರಲಾರದೆ ಮದುವೆಯಾದೆನು. ದೇವಿಯೇ! ಈಗಲೂ ಸಹ ನಾನು ಪ್ರಾಜ್ಞನಾದ ತಂದೆಯನ್ನು ಯಾವಾಗಲೂ ಸೇವಿಸುವೆನು.

೨೨. ದಿವ್ಯ ಭೋಗ ಮತ್ತು ಸ್ವರ್ಗಗಳಿಂದ ನನಗೆ ಸ್ವಲ್ಪವೂ ಪ್ರಯೋಜನವಿಲ್ಲ. ಹಗಲು ರಾತ್ರಿಯೂ ತಂದೆ ಮತ್ತು ನಿನ್ನ ಶುಶ್ರೂಷೆಯೇ ನನಗೆ ಕರ್ತವ್ಯವು ಎಂಬುದಾಗಿ ಹೇಳಿದನು.

೨೩. ಸಂಧ್ಯಾವಳಿಯು ಹೇಳಿದಳು :—ವತ್ಸ! ಸುಖವಾಗಿ ಬಹುಕಾಲ ಬದುಕು! ಮನಸ್ಸಿಗೆಬಂದ ಭೋಗಗಳನ್ನನುಭವಿಸು! ತಂದೆಯ ಅನುಗ್ರಹದಿಂದ ದೀರ್ಘಾಯುಷ್ಯವಂತನಾಗಿರು. ನನ್ನ ಮನಸ್ಸನ್ನು ಸಂತೋಷಪಡಿಸು.

ತ್ವಯಾ ಸುಪುತ್ರಿಣೀ ಪುತ್ರ ಜಾತಾ ಗುಣವತಾ ಕ್ಷಿತೌ ।
ಸಪತ್ನೀನಾಂ ಚ ಸರ್ವಾಸಾಂ ಹೃದಯೇ ಸಂಸ್ಥಿತಾ ಹ್ಯಹಂ ॥ ೨೪ ॥

ಏವಮುಕ್ತ್ವಾ ಪರಿಷ್ವಜ್ಯ ಮೂರ್ಧನ್ಯಾಘ್ರಾಯ ಚಾಸಕೃತ್ ।
ವ್ಯಸರ್ಜಯತ್ತತಃ ಪುತ್ರಂ ರಾಜ್ಯತಂತ್ರಾವಲೋಕನೇ ॥ ೨೫ ॥

ವಿಸರ್ಜಿತಸ್ತದಾ ಮಾತ್ರಾ ಮಾತೄರನ್ಯಾಃ ಪ್ರಣಮ್ಯ ಚ ।
ರಾಜ್ಯತಂತ್ರಂ ತದಖಿಲಂ ಚಕ್ರೇ ಪಿತೃವಚಸ್ಥಿತಃ ॥ ೨೬ ॥

ದುಷ್ಟನಿಗ್ರಹಣಂ ಚಕ್ರೇ ಶಿಷ್ಟಾನಾಂಪರಿಪಾಲನಂ ।
ಅಟನಂ ಸರ್ವದೇಶೇಷು ವೀಕ್ಷಣಂ ಸರ್ವಕರ್ಮಣಾಂ ॥ ೨೭ ॥

ಚಕ್ರೇ ಸರ್ವತ್ರ ಕಾರ್ಯಾಣಾಂ ಮಾಸಿಮಾಸಿ ನಿರೀಕ್ಷಣಂ ।
ಹಸ್ತ್ಯಶ್ವಪೋಷಣಂ ಚಕ್ರೇ ಚಾರಚಕ್ರೇಕ್ಷಣಂ ತಥಾ ॥ ೨೮ ॥

---

೨೪. ಕುಮಾರನೇ! ಗುಣವಂತನಾದ ನೀನು ನನ್ನ ಉದರದಲ್ಲಿ ಹುಟ್ಟಿದ್ದರಿಂದ ಭೂಮಿಯಲ್ಲಿ ನಾನು ಸುಪುತ್ರವತಿಯೆನಿಸಿದೆನು. ಇದರಿಂದ ಸೌತಿಯರೆಲ್ಲರೂ ನನ್ನಲ್ಲಿ ಸೌಹಾರ್ದದಿಂದಿರುವಂತಾಯಿತು.

೨೫. ಈರೀತಿಯಾಗಿ ಹೇಳಿ ಮಗನನ್ನಾಲಿಂಗಿಸಿ ಅನೇಕಾವರ್ತಿ ಶಿರಸ್ಸಿನಲ್ಲಿ ಮೂಸಿನೋಡಿ ಬಳಿಕ ರಾಜ್ಯಾಡಳಿತಗಳನ್ನು ನೋಡುವುದಕ್ಕಾಗಿ ಮಗನನ್ನು ಬೀಳ್ಕೊಟ್ಟಳು.

೨೬. ಆಗ ತಾಯಿಯ ಅನುಮತಿಯಿಂದ ಹೊರಟ ಅವನು ಇತರ ಮಾತೆಯರನ್ನು ನಮಸ್ಕರಿಸಿ, ತಂದೆಯ ಮಾತಿನಂತೆ ನಡೆಯುತ್ತಾ ಸಮಸ್ತ ರಾಜ್ಯಾಡಳಿತವನ್ನೂ ನಡೆಯಿಸುತ್ತಿದ್ದನು.

೨೭. ದುಷ್ಟನಿಗ್ರಹ, ಶಿಷ್ಟಪರಿಪಾಲನೆ, ಸಕಲದೇಶಗಳಲ್ಲಿಯೂ ಸಂಚಾರ ಸಕಲವ್ಯಾಪಾರಗಳನ್ನೂ ನೋಡುವಿಕೆ ಇವೆಲ್ಲವನ್ನು ಮಾಡಿದನು.

೨೮-೨೯. ಎಲ್ಲಾ ಕಡೆಗಳಲ್ಲಿಯೂ ಪ್ರತಿ ತಿಂಗಳಲ್ಲಿಯೂ ಕಾರ್ಯಗಳ ನಿರೀಕ್ಷಣೆ, ಆನೆ ಕುದುರೆಗಳ ಪೋಷಣೆ, ದೂತರ ಸಂಘವನ್ನು ನಿರೀಕ್ಷಿಸುವುದು

ಪಾದಸಂವೀಕ್ಷಣಂ ಚಕ್ರೇ ತುಲಾಮಾನಂ ದಿನೇದಿನೇ |
ಗೃಹೇಗೃಹೇ ನರಾಣಾಂ ಚ ಚಕ್ರೇ ಸಂರಕ್ಷಣಂ ನೃಪಃ || ೨೯ ||

ಸ್ತನಂಧಯೋ ಕ್ವಚಿದ್ಬಾಲಃ ಸ್ತನಹೀನೋ ನ ರೋದಿತಿ |
ಶ್ವಶ್ರ್ವಾ ವಧ್ವಾ ನ ಕುತ್ರಾಪಿ ಪ್ರರೋದಿತ್ಯವಮಾನಿತಾ || ೩೦ ||

ಕ್ವಚಿತ್ ಸಮರ್ಥಸ್ತನಯಃ ಪಿತರಂ ನ ಹಿ ಯಾಚತೇ |
ನ ವರ್ಣಸಂಕರೋ ರಾಜ್ಯೇ ಕೇಷಾಂಚಿದಭವತ್ ಪುನಃ || ೩೧ ||

ನ ಗೂಢವಿಭವೋ ಲೋಕೋ ಧರ್ಮೇ ವದತಿ ದೂಷಣಂ |
ನ ಕಂಚುಕವಿಹೀನಾ ತು ಭವೇನ್ನಾರೀ ಸಭರ್ತೃಕಾ || ೩೨ ||

ಗೃಹಾನ್ನಿಷ್ಕ್ರಮಣಂ ಸ್ತ್ರೀಣಾಂ ಮಾಸ್ತು ರಾಜ್ಯೇ ಮದೀಯಕೇ |
ಮಾ ಸಕೇಶಾ ಹಿ ವಿಧವಾ ಮಾಸ್ತ್ವಕೇಶಾ ಸಭರ್ತೃಕಾ || ೩೩ ||

---

ಮತ್ತು ಪಾದಸಂವೀಕ್ಷಣೆ ಇವುಗಳನ್ನು ಮಾಡುತ್ತಿದ್ದನು. ಪ್ರತಿದಿನವೂ ತೂಕದ ಬಟ್ಟು, ಅಳತೆಯ ಸೇರು ಮುಂತಾದುವನ್ನು ವಿಮರ್ಶಿಸುತ್ತಾ ಪ್ರತಿಯೊಂದು ಮನೆಯಲ್ಲಿಯೂ ಜನರನ್ನು ಸಂರಕ್ಷಿಸುತ್ತಿದ್ದನು.

೩೦. ಸ್ತನ್ಯಪಾನಮಾಡುತ್ತಿರುವ ಶಿಶುವು ಸ್ತನ್ಯವಿಲ್ಲದೆ ಎಲ್ಲಿಯೂ ಅಳುತ್ತಿರಲಿಲ್ಲ. ಅತ್ತೆಯು ಸೊಸೆಯಿಂದ ಅವಮಾನಮಾಡಲ್ಪಟ್ಟು ಎಲ್ಲಿಯೂ ದುಃಖಿಸುತ್ತಿರಲಿಲ್ಲ.

೩೧. ಎಲ್ಲಿಯೂ ಸಮರ್ಥನಾದ ಮಗನು ತಂದೆಯನ್ನು ಕಾಡಿ ಬೇಡುತ್ತಿರಲಿಲ್ಲ. ಅವನ ರಾಜ್ಯದಲ್ಲಿ ಯಾರಿಗೂ ವರ್ಣಸಾಂಕರ್ಯವುಂಟಾಗಲಿಲ್ಲ.

೩೨. ಐಶ್ವರ್ಯವನ್ನು ಮುಚ್ಚಿಕೊಂಡ ಜನರು ಧರ್ಮನಿಂದೆಯನ್ನು ಮಾಡುತ್ತಿರಲಿಲ್ಲ. ಮುತ್ತೈದೆಯು ಕುಪ್ಪಸವಿಲ್ಲದೆ ಇರುತ್ತಿರಲಿಲ್ಲ.

೩೩. ತನ್ನ ರಾಜ್ಯದಲ್ಲಿ ಸ್ತ್ರೀಯರು ಮನೆಯಿಂದ ಹೊರಗೆ ಹೋಗಕೂಡದು. ಗಂಡನಿಲ್ಲದವಳು ಸಕೇಶಿಯಾಗಿರಕೂಡದು. ಗಂಡನಿರುವವಳು ಕೇಶವಿಲ್ಲದೆಯೂ ಇರಕೂಡದು.

**ಮಾವ್ರತೀಹ ಸದಾಕ್ರೋಶೀ ಮಾರಣ್ಯಾನಗರಾಶ್ರಯಾಃ |**
**ಸಾಮಾನ್ಯವೃತ್ಯದಾತಾ ಮೇ ರಾಜ್ಯೇ ವಸತು ನಿರ್ಘೃಣಃ || ೩೪ ||**

**ಗೋಪಾಲೋ ನಗರಾಕಾಂಕ್ಷೀ ನಿರ್ಗುಣಸ್ತೂಪದೇಶಕಃ |**
**ಋತ್ವಿಗ್ವಾ ಶಾಸ್ತ್ರಹೀನಶ್ಚ ಮಾ ಮೇ ರಾಜ್ಯೇ ವಸೇದಿಹ || ೩೫ ||**

**ಯೋ ಹಿ ನಿಷ್ಪಾದಯೇನ್ನೀಲೀಂ ನೀಲೀರಂಗಾತಿಸೇಚಕಃ |**
**ನಿರ್ವಾಸ್ಯೌ ತಾವುಭೌ ಪಾಪೌ ಯೋ ವೈ ಮದ್ಯಂ ಕರೋತಿ ಚ || ೩೬ ||**

**ವೃಥಾ ಮಾಂಸಂ ಹಿ ಯೋಽಶ್ನಾತಿ ಪೃಷ್ಠಮಾಂಸಪ್ರಿಯೋ ಹಿ ಯಃ |**
**ತಸ್ಯ ವಾಸೋ ನ ಮೇ ರಾಜ್ಯೇ ಸ್ವಕಳತ್ರಂ ತ್ಯಜೇಚ್ಚ ಯಃ || ೩೭ ||**

---

೩೪. ನನ್ನರಾಜ್ಯದಲ್ಲಿ ವ್ರತವನ್ನಾಚರಿಸದಿರುವವನು ಆಗ್ರಹಯುಕ್ತನು, ಯಾವಾಗಲೂ ಅರಣ್ಯನಗರಗಳನ್ನಾಶ್ರಯಿಸಿರುವವನು, ಸಾಮಾನ್ಯವಾಗಿ ಜೀವನಕ್ಕೆ ಅನುಕೂಲಮಾಡಿಕೊಡದಿರುವವನು ಮತ್ತು ನಿರ್ದಯಮನುಷ್ಯನು ಇವರಾರೂ ವಾಸಮಾಡಬಾರದು.

೩೫. ಪಟ್ಟಣದಲ್ಲಿ ವಾಸಮಾಡಬೇಕೆಂದು ಅಪೇಕ್ಷಿಸುವ ಗೋಪಾಲಕನು, ಗುಣಶಾಲಿಯಲ್ಲದ ಉಪದೇಶಕನು, ಶಾಸ್ತ್ರಜ್ಞನಲ್ಲದ ಋತ್ವಿಕ್ಕು ಇವರಾರೂ ನನ್ನ ರಾಜ್ಯದಲ್ಲಿ ವಾಸಮಾಡಬಾರದು.

೩೬. ನೀಲಿಯನ್ನು ನಿರ್ಮಾಣಮಾಡುವವನು, ನೀಲಿರಂಗುಗಳನ್ನು ಹಾಕುವವನು ಇವರಿಬ್ಬರೂ ಪಾಪಿಗಳು. ಅವರನ್ನು ಮತ್ತು ಮದ್ಯಮಾಡುವವನನ್ನೂ ಸಹ ದೇಶದಿಂದ ಹೊರಕ್ಕೆ ಕಳುಹಿಸುವೆನು.

೩೭. ಸುಮ್ಮನೆ ಮಾಂಸತಿನ್ನುವವನು, ಪೃಷ್ಠಮಾಂಸಪ್ರಿಯನು ಮತ್ತು ತನಗೆ ವಿಹಿತರೀತಿಯಿಂದ ಪತ್ನಿಯಾಗಿರುವವಳನ್ನು ಬಿಟ್ಟಿರುವವನು ಇವರುಗಳು ನನ್ನ ರಾಜ್ಯದಲ್ಲಿ ವಾಸಿಸಕೂಡದು.

ವಿಷ್ಣುಂ ಪರಿತ್ಯಜ್ಯ ವರಂ ಸುರಾಣಾಂ
ಸುಪೂಜಯೇದ್ಯೋऽನ್ಯತಮಂ ಹಿ ದೇವಂ ।
ಗಚ್ಛೇತ್ ಸಗರ್ಭಾಂ ಯುವತೀಂ ಪ್ರಸೂತಾಂ
ದಂಡ್ಯಶ್ಚ ವಧ್ಯಶ್ಚ ಸ ಚಾಸ್ಮದೀಯೈಃ ॥ ೩೮ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ
ಶಿಕ್ಷಾನಿರೂಪಣಂ ನಾಮ ಏಕವಿಂಶೋऽಧ್ಯಾಯಃ

---

೩೮. ಯಾವನು ದೇವಶ್ರೇಷ್ಠನಾದ ವಿಷ್ಣುವನ್ನು ಬಿಟ್ಟು ಬೇರೆ ದೇವನನ್ನು ಪೂಜಿಸುವನೊ, ಯಾವನು ಗರ್ಭಿಣೀ ಅಥವಾ ಪ್ರಸವಿಸಿದ ಯುವತಿಯ ಸಂಭೋಗಮಾಡುವನೋ ಅಂತಹವರು ನಮ್ಮ ಭಟರ ದಂಡನೆಗೆ ಗುರಿಯಾಗುವರು ಮತ್ತು ವಧ್ಯರಾಗುವರು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಶಾಸನನಿರೂಪಣೆಯೆಂಬ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಮಗನ ಮಾತನ್ನು ಕೇಳಿ ರುಕ್ಮಾಂಗದನು ಮೋಹಿನೀಸಹಿತನಾಗಿ ಬಂದು ಮಗನು ಸಂಗ್ರಹಿಸಿದ್ದ ಕನ್ಯೆಯರನ್ನೂ, ರತ್ನಾದಿಸಂಪತ್ತನ್ನೂ ನೋಡಿ ಆ ಕನ್ಯೆಯರನ್ನೆಲ್ಲಾ ಧರ್ಮಾಂಗದನಿಗೆ ಕೊಟ್ಟು ಪುರೋಹಿತನನ್ನು ಕರೆಯಿಸಿ ವಿವಾಹ ಮಾಡಿಸಿದನು. ರತ್ನಾಭರಣಾದಿಗಳನ್ನು ಮೋಹಿನಿಗೆ ಕೊಟ್ಟನು. ಈ ಸಂದರ್ಭದಲ್ಲಿ ಮಗನಿಗೆ ತಂದೆಯು ವಿವಾಹಮಾಡಿಸುವುದು ಅತ್ಯಾವಶ್ಯಕವು; ಅದನ್ನು ಮಾಡಿಸದಿದ್ದರೆ ಆಗುವ ಅನರ್ಥ ಮುಂತಾದುವುಗಳನ್ನು ವಿಸ್ತರಿಸಿದೆ. ಅನಂತರ ಧರ್ಮಾಂಗದನ ರಾಜ್ಯಭಾರಕಾಲದಲ್ಲಿ ಅವನು ನಡೆಯಿಸುತ್ತಿದ್ದ ಆಡಳಿತಕ್ರಮ, ದುಷ್ಟರನ್ನು ಶಿಕ್ಷಿಸುವ ರೀತಿ ಮುಂತಾದುವು ನಿರೂಪಿತವಾಗಿದೆ.

---

# ದ್ವಾವಿಂಶೋಽಧ್ಯಾಯಃ

---

ವಸಿಷ್ಠ ಉವಾಚ

ಏವಂ ಧರ್ಮಾಂಗದೋ ರಾಜ್ಯಂ ಚಕಾರ ವಸುಧಾತಲೇ ।
ಪಿತುರ್ನಿಯೋಗಾದ್ರಾಜೇಂದ್ರ ಪಾಲಯನ್ ಹರಿವಾಸರಂ ॥ ೧ ॥

ನ ಬಭೂವ ಜನಃ ಕಶ್ಚಿದ್ಯೋ ನ ಧರ್ಮೇ ವ್ಯವಸ್ಥಿತಃ ।
ನಾಸುಖೀ ನಾಪ್ರಜಃ ಕಶ್ಚಿನ್ನ ವಾ ಕುಷ್ಠೀ ಮಹೀಪತೇ ॥ ೨ ॥

ಹೃಷ್ಟಪುಷ್ಟಜನೇ ತಸ್ಮಿನ್ ಕ್ಷ್ಮಾ ಚೈವ ನಿಧಿದಾಯಿನೀ ।
ಘಟದೋಗ್ಧ್ರೀ ಸುನೃಪತೇ ತೃಪ್ತವತ್ಸಾಸು ಧೇನುಷು ॥ ೩ ॥

---

ಇಪ್ಪತ್ತೆರಡನೆಯ ಅಧ್ಯಾಯವು.

೧. ವಸಿಷ್ಠನು ಹೇಳಿದನು :—ರಾಜೇಂದ್ರನೇ! ಈರೀತಿಯಾಗಿ ಧರ್ಮಾಂಗದನು ತಂದೆಯ ಅಪ್ಪಣೆಯ ಪ್ರಕಾರ ಏಕಾದಶೀವ್ರತವನ್ನು ಪಾಲಿಸುತ್ತಾ ಭೂತಲದಲ್ಲಿ ರಾಜ್ಯಭಾರಮಾಡುತ್ತಿದ್ದನು.

೨. ಧರ್ಮಾಂಗದನ ರಾಜ್ಯಭಾರಕಾಲದಲ್ಲಿ ದೇಶದಲ್ಲಿ ತಮ್ಮ ಧರ್ಮವನ್ನಾಚರಿಸದಿರುವವನಾವನೂ ಇರಲಿಲ್ಲ ಮತ್ತು ಸುಖವಿಲ್ಲದವನು, ಸಂತಾನವಿಲ್ಲದವನು, ಕುಷ್ಠರೋಗದವನೂ ಸಹ ಇರಲಿಲ್ಲ.

೩. ಸಂತುಷ್ಟರು ಮತ್ತು ಪುಷ್ಟರೂ ಆದ ಆ ಜನರಿಗೆ ಭೂಮಿಯೂ ಸಹ ನಿಧಿಯನ್ನು ಕೊಡುತ್ತಿದ್ದಿತು. ದೊರೆಯೇ! ಹಸುಗಳು ಕರುಗಳನ್ನು ತೃಪ್ತಿಪಡಿಸಿ ಕೊಡದತುಂಬ ಹಾಲುಕರೆಯುತ್ತಿದ್ದುವು.

ಪುಟಕೇಪುಟಕೇ ಕ್ಷೌದ್ರಂ ದ್ರೋಣಮಾತ್ರಂ ದ್ರುಮೇ ದ್ರುಮೇ ।
ಪ್ರಕೃಷ್ಟಾಯಾಂ ತು ಮೇದಿನ್ಯಾಂ ಸರ್ವಧಾನ್ಯಸಮುದ್ಭವಃ ॥ ೪ ॥

ಕೃತಸ್ಯ ಸ್ಪರ್ಧಿನಿ ಯುಗೇ ತ್ರೇತಾಂತೇ ದ್ವಾಪರೇ ಯುಗೇ ।
ವ್ಯತೀತೇ ಜಲದಾಪಾಯೇ ನಿರ್ಮಲೇ ಚಾಂಬರೇ ಗೃಹೇ ॥ ೫ ॥

ಸುಗಂಧಿಶಾಲಿಪಕ್ವಾಢ್ಯೇ ಕುಂಭೋದ್ಭವವಿಲೋಕಿತೇ ।
ಮಧ್ಯಪ್ರವಾಹಯುಕ್ತಾಸು ನಿಮ್ನಗಾಸು ಸಮಂತತಃ ॥ ೬ ॥

ತೀರೋತ್ಥೈಃ ಕಾಶಪುಷ್ಪೈಶ್ಚ ಶುಕ್ಲಕೇಶೈರಿವಾಂಗನಾ ।
ಚಂದ್ರಾಂಶುಧವಲೇ ಲೋಕೇ ನಾತಿತೀವ್ರೇ ದಿವಾಕರೇ ॥ ೭ ॥

ತಸ್ಮಿನ್ ಸುಪುಷ್ಪಬಹುಲೈರ್ಜಲಸ್ನಾನವಿಚಿತ್ರಿತೈಃ ।
ಯತ್ರೋತ್ಸುಕೈಃ ಪ್ರಯಾತೈಸ್ತು ಭೂಮಿಪಾಲೈಃ ಸಮಂತತಃ ॥ ೮ ॥

---

೪. ಪ್ರತಿಯೊಂದು ವೃಕ್ಷದ ಪೊಟರೆಗಳಲ್ಲಿಯೂ ಕೊಳಗಜೇನುತುಪ್ಪವು ಸಿಕ್ಕುತ್ತಿದ್ದಿತು. ಭೂಮಿಯನ್ನು ಉತ್ತು ಬಿತ್ತಿದರೆ ಸಕಲ ಧಾನ್ಯಗಳೂ ಬೆಳೆಯುತ್ತಿದ್ದುವು.

೫-೬. ಹೀಗೆ ಅವನು ತ್ರೇತಾಂತವಾದ ದ್ವಾಪರಯುಗದಲ್ಲಿ ರಾಜ್ಯಭಾರ ಮಾಡುತ್ತಿದ್ದರೂ ಅದು ಕೃತಯುಗವನ್ನು ಸ್ಪರ್ಧಿಸುವಂತಿದ್ದಿತು.

ಆಗ ಮೇಘಗಳು ಹೋಗಿ ಆಕಾಶವು ನಿರ್ಮಲವಾಗಿದ್ದಿತು. ಗೃಹವು ಸುಗಂಧಯುಕ್ತವಾದ ಪಕ್ವಾನ್ನಗಳಿಂದ ತುಂಬಿದ್ದಿತು. ಅಗಸ್ತ್ಯನ ದೃಷ್ಟಿ ಬೀಳಲಾಗಿ ಸುತ್ತಲೂ ನದಿಗಳೂ ಮಧ್ಯಮಪ್ರವಾಹವುಳ್ಳವುಗಳಾಗಿದ್ದುವು.

೭-೮. ನದಿಯತೀರಗಳಲ್ಲಿ ಬಿಳಿಯಕೂದಲುಳ್ಳ ಹೆಂಗಸರಂತೆ ಜಂಡು ಹುಲ್ಲಿನ ಹೂವುಗಳು ಕಾಣುತ್ತಿದ್ದುವು. ಲೋಕವು ಬೆಳದಿಂಗಳಿನಿಂದ ಧವಳವಾಗಿದ್ದಿತು. ಸೂರ್ಯನೂ ಅತ್ಯಂತ ತೀವ್ರವಾಗಿರಲಿಲ್ಲ. ಒಳ್ಳೆಯ ಪುಷ್ಪಗಳಿಂದ ಕೂಡಿದ ನದೀಜಲವು ಸುತ್ತಲೂ ಪ್ರಯಾಣಮಾಡುತ್ತಿರುವ, ಉತ್ಸಾಹಶೀಲರಾದ ರಾಜರು ಸ್ನಾನಮಾಡುತ್ತಿದ್ದುದರಿಂದ ಕದಡಿ ಚಿತ್ರಿತವಾಗಿದ್ದಿತು.

ಪ್ರಬೋಧಸಮಯೇ ವಿಷ್ಣೋರಾಶ್ವಿನಾಂತೇ ಜಗದ್ಗುರೋಃ ।
ಮೋಹಿನೀ ರಮಯಾಮಾಸ ತತ್ಕಾಲೇ ಹೃಚ್ಛಯಾರ್ದಿತಾ ॥ ೯ ॥

ರಾಜಾನಂ ವಿವಿಧೈಃ ಸೌಖ್ಯೈಃ ಸರ್ವಭಾವೇನ ಸುಂದರೀ ।
ವನೇಷು ಗಿರಿಶೃಂಗೇಷು ನದೀನಾಂ ಸಂಗಮೇಷು ಚ ॥ ೧೦ ॥

ಪದ್ಮಿನೀ ಕುಸುಮಾಢ್ಯೇಷು ಸರಸ್ಸು ವಿವಿಧೇಷು ಚ ।
ಮಲಯೇ ಮಂದರೇ ವಿಂಧ್ಯೇ ಮಹೇಂದ್ರೇ ವಿಬುಧಾಲಯೇ ॥ ೧೧ ॥

ಸಹ್ಯೇ ಪ್ರಾಲೇಯಸಂಜ್ಞೇ ಚ ದಿಗಂಬರಗಿರೌ ಶುಭೇ ।
ಅನ್ಯೇಷು ಚೈವ ರಾಜಾನಂ ಸ್ವರ್ಗಸ್ಥಾನಾದಿಕೇಷು ಚ ॥ ೧೨ ॥

ರಮಯಾಮಾಸ ರಾಜೇಂದ್ರ ದಿವ್ಯರೂಪಾ ದಿನೇದಿನೇ ।
ರಾಜಾಪಿ ಮೋಹಿನೀಂ ಪ್ರಾಪ್ಯ ಸರ್ವಕೃತ್ಯಂ ಪರಿತ್ಯಜತ್ ॥ ೧೩ ॥

---

೯-೧೦. ಆಶ್ವಯುಜಮಾಸದ ಕೊನೆಯಭಾಗದಲ್ಲಿ ಜಗದ್ಗುರುವಾದ ವಿಷ್ಣುವು ಏಳುವ ಸಮಯದಲ್ಲಿ ಮೋಹಿನಿಯು ಆಗಲೇ ಕಾಮಪೀಡಿತಳಾಗಿ ಸಕಲಭಾವಗಳು ಮತ್ತು ನಾನಾವಿಧ ಸೌಖ್ಯಗಳಿಂದ ರಾಜನೊಡನೆ ವನ, ಪರ್ವತಶಿಖರ, ನದೀಸಂಗಮಸ್ಥಾನಗಳಲ್ಲಿ ಕ್ರೀಡಿಸುತ್ತಿದ್ದಳು.

೧೧-೧೩. ಆ ಸುಂದರಿಯು ಹಾಗೆಯೇ ಪದ್ಮಪುಷ್ಪಗಳಿಂದ ತುಂಬಿದ ನಾನಾವಿಧ ಸರೋವರಗಳು, ಮಲಯ, ಮಹೇಂದ್ರ, ಮಂದರ, ವಿಂಧ್ಯ ಮುಂತಾದ ಪರ್ವತಗಳು, ಸುರಲೋಕ, ಸಹ್ಯಾಚಲ, ಪ್ರಾಲೇಯಾದ್ರಿ, ಶುಭಕರವಾದ ದಿಗಂಬರಗಿರಿ, ಸ್ವರ್ಗಸ್ಥಾನವೇ ಮುಂತಾದ ಇತರ ಸ್ಥಾನಗಳಲ್ಲಿ ದಿನದಿನದಲ್ಲಿಯೂ ದಿವ್ಯರೂಪವನ್ನು ಧರಿಸಿ ರುಕ್ಮಾಂಗದನೊಡನೆ ಭೋಗಿಸಿದಳು. ರಾಜನೂ ಸಹ ಮೋಹಿನಿಯನ್ನು ಹೊಂದಿ ಸಕಲ ಕೃತ್ಯಗಳನ್ನೂ ಬಿಟ್ಟನು.

ತ್ಯಕ್ತಂ ನ ವಾಸರಂ ವಿಷ್ಣೋರ್ಜನ್ಮಮೃತ್ಯುನಿಕೃಂತನಂ ।
ವ್ರತಂ ನೋಪೇಕ್ಷತೇ ತತ್ತು ಅತಿಮುಗ್ಧೋಽಪಿ ಪಾರ್ಥಿವಃ ॥ ೧೪ ॥

ಕ್ರೀಡಾಂ ತ್ಯಜತಿ ಭೂಪಾಲೋ ದಶಮ್ಯಾದಿದಿನತ್ರಯೇ ।
ಏವಂ ಪ್ರಕ್ರೀಡತಸ್ತಸ್ಯ ಪೂರ್ಣೇ ಸಂವತ್ಸರೇ ಗತೇ ॥ ೧೫ ॥

ಕಾಲೇ ಕಾಲವಿದಾಂ ಶ್ರೇಷ್ಠಃ ಸಂಪ್ರಾಪ್ತಃ ಕಾರ್ತಿಕಃ ಶುಭಃ ।
ನಿದ್ರಾಚ್ಛೇದಕರೋ ವಿಷ್ಣೋಃ ಸ ಮಾಸಃ ಪುಣ್ಯದಾಯಕಃ ॥ ೧೬ ॥

ಯಸ್ಮಿನ್ ಕೃತಂ ಹಿ ಸುಕೃತಂ ವೈಷ್ಣವೈರ್ಮನುಜೈರ್ನೃಪ ।
ಅಕ್ಷಯಂ ಹಿ ಭವೇತ್ ಸರ್ವಂ ವಿಷ್ಣುಲೋಕಪ್ರದಾಯಕಂ ॥ ೧೭ ॥

ನ ಕಾರ್ತಿಕಸಮೋ ಮಾಸೋ ನ ಕೃತೇನ ಸಮಂ ಯುಗಂ ।
ನ ಧರ್ಮಸ್ತು ದಯಾತುಲ್ಯೋ ನ ಜ್ಯೋತಿಶ್ಚಕ್ಷುಷಾ ಸಮಂ ॥ ೧೮ ॥

---

೧೪. ಆದರೆ ರಾಜನು ಜನನಮರಣನಾಶಕವಾದ ಏಕಾದಶೀವ್ರತವನ್ನು ಮಾತ್ರ ಬಿಟ್ಟಿರಲಿಲ್ಲ. ಅತ್ಯಂತವಾಗಿ ಮೋಹಿತನಾಗಿದ್ದರೂ ಆ ವ್ರತವನ್ನು ಮಾತ್ರ ಉದಾಸೀನ ಮಾಡಲಿಲ್ಲ.

೧೫-೧೬. ಭೂಪಾಲನು ದಶಮೀ, ಏಕಾದಶೀ, ದ್ವಾದಶೀ ಈ ದಿನ ತ್ರಯಗಳಲ್ಲಿ ಸಂಭೋಗಾದಿ ವಿಹಾರವನ್ನೂ ಬಿಡುತ್ತಿದ್ದನು. ಈ ರೀತಿಯಾಗಿ ವಿಹರಿಸುತ್ತಾ ಒಂದು ವರ್ಷವು ಸಂಪೂರ್ಣವಾಗಿ ಕಳೆಯಿತು.

ಅನಂತರ ಜ್ಞಾನಿಗಳು ಶ್ರೇಷ್ಠವೆಂದು ತಿಳಿದಿರುವ ಶುಭವಾದ ಕಾರ್ತಿಕ ಮಾಸವು ಬಂದಿತು. ವಿಷ್ಣುವಿಗೆ ನಿದ್ರಾವಿಚ್ಛೇದವನ್ನುಂಟುಮಾಡಿದ ಆ ಮಾಸವು ಪುಣ್ಯದಾಯಕವು.

೧೭. ಆ ಕಾರ್ತಿಕಮಾಸದಲ್ಲಿ ವಿಷ್ಣುಭಕ್ತರಾದ ಮನುಷ್ಯರು ಮಾಡಿದ ಸುಕೃತವೆಲ್ಲವೂ ಅಕ್ಷಯವಾಗಿ ವಿಷ್ಣುಲೋಕಪ್ರಾಪ್ತಿಗೆ ಸಾಧಕವಾಗುವುದು.

೧೮. ಕಾರ್ತಿಕಕ್ಕೆ ಸಮಾನವಾದ ಮಾಸವಿಲ್ಲ. ಕೃತಯುಗಕ್ಕೆ ಸದೃಶವಾದ ಯುಗವಿಲ್ಲ. ದಯೆಗೆ ಸಾಟಿಯಾಗುವ ಧರ್ಮವಿಲ್ಲ. ಕಣ್ಣಿಗೆಸಮಾನವಾದ ತೇಜಸ್ಸಿಲ್ಲ.

ನ ವೇದೇನ ಸಮಂ ಶಾಸ್ತ್ರಂ ನ ತೀರ್ಥಂ ಗಂಗಯಾ ಸಮಂ ।
ನ ಭೂಮ್ಯಾ ಸದೃಶಂ ದಾನಂ ನ ಸುಖಂ ಭಾರ್ಯಯಾ ಸಮಂ ॥ ೧೯ ॥

ನ ಕೃಷ್ಯಾ ತು ಸಮಂ ವಿತ್ತಂ ನ ಲಾಭಃ ಸುರಭೀಸಮಃ ।
ನ ತಪೋಽನಶನಾದನ್ಯನ್ನ ದಮೇನ ಸಮಂ ಸುಖಂ ॥ ೨೦ ॥

ತೃಪ್ತಿರ್ನ ರಸನಾ ತುಲ್ಯಾ ನ ಸಮೋಽನ್ಯೋ ದ್ವಿಜೇನ ಚ ।
ನ ಧರ್ಮೇಣ ಸಮಂ ಮಿತ್ರಂ ನ ಸತ್ಯೇನ ಸಮಂ ಯಶಃ ॥ ೨೧ ॥

ನಾರೋಗ್ಯಸಮಮುತ್ಥಾನಂ ನ ದೇವಂ ಕೇಶವಾತ್ಪರಂ ।
ನ ಕಾರ್ತಿಕಸಮಂ ಲೋಕೇ ಪಾವನಂ ಕವಯೋ ವಿದುಃ ॥ ೨೨ ॥

ಕಾರ್ತಿಕಃ ಪ್ರವರೋ ಮಾಸೋ ವಿಷ್ಣೋಶ್ಚಾಪಿ ಪ್ರಿಯಃ ಸದಾ ।
ಅವ್ರತೋ ಹಿ ಕ್ಷಿಪೇದ್ಯಸ್ತು ಮಾಸಂ ದಾಮೋದರಪ್ರಿಯಂ ॥ ೨೩ ॥

---

೧೯. ವೇದಸಮಾನವಾದ ಶಾಸ್ತ್ರವಿಲ್ಲ. ಗಂಗೆಗೆ ಸದೃಶವಾದ ತೀರ್ಥವಿಲ್ಲ. ಭೂದಾನಸಮಾನವಾದ ದಾನವಿಲ್ಲ. ಪತ್ನಿಯಸುಖಕ್ಕೆ ಸಮಾನವಾದ ಸೌಖ್ಯವಿಲ್ಲ.

೨೦. ವ್ಯವಸಾಯಕ್ಕೆ ಸದೃಶವಾದ ಧನವಿಲ್ಲ. ಕಾಮಧೇನುವಿಗಿಂತಲೂ ಲಾಭಕರವಸ್ತುವಿಲ್ಲ. ಉಪವಾಸಕ್ಕಿಂತ ಬೇರೆ ತಪಸ್ಸಿಲ್ಲ. ಇಂದ್ರಿಯನಿಗ್ರಹಕ್ಕೆ ಸಮಾನವಾದ ಸುಖವಿಲ್ಲ.

೨೧. ತೃಪ್ತಿಯು ಜಿಹ್ವೆಗೆ ಸಮಾನವಾಗಲಾರದು. ಇತರರು ದ್ವಿಜರಿಗೆ ಸಮರಾಗಲಾರರು. ಧರ್ಮಕ್ಕೆ ಸಮಾನವಾದ ಸ್ನೇಹಿತನಿಲ್ಲ. ಸತ್ಯಕ್ಕೆ ಸಮಾನವಾದ ಕೀರ್ತಿಯಿಲ್ಲ.

೨೨. ಆರೋಗ್ಯಸದೃಶವಾದ ಬದುಕಿಲ್ಲ. ಕೇಶವನಿಗಿಂತ ಉತ್ತಮ ದೇವತೆಯಿಲ್ಲ. ಕಾರ್ತಿಕಕ್ಕೆ ಸಮಾನವಾದ ಪವಿತ್ರಮಾಸವು ಲೋಕದಲ್ಲಿಲ್ಲವೆಂದು ಜ್ಞಾನಿಗಳು ತಿಳಿದಿರುವರು.

೨೩-೨೪. ಕಾರ್ತಿಕವು ಉತ್ತಮಮಾಸವು. ಅದು ಯಾವಾಗಲೂ ವಿಷ್ಣುವಿಗೆ ಪ್ರಿಯವಾದುದು. ದಾಮೋದರಮೂರ್ತಿಗೆ ಪ್ರಿಯವಾದ ಆ ಮಾಸವನ್ನು

ತಿರ್ಯಗ್ಯೋನಿಮವಾಪ್ನೋತಿ ಸರ್ವಧರ್ಮಬಹಿಷ್ಕೃತಃ ॥ ೨೪ ॥

ಮಾಂಧಾತೋವಾಚ

ಸಂಪ್ರಾಪ್ಯ ಕಾರ್ತಿಕೇ ಮಾಸೇ ರಾಜಾ ರುಕ್ಮಾಂಗದೋ ಮುನೇ ।
ಮೋಹಿನೀಂ ಮೋಹಸಂಯುಕ್ತಾಂ ಕಥಂ ಸ ಬುಭುಜೇ ವದ ॥ ೨೫ ॥

ವಿಷ್ಣುಭಕ್ತಃ ಶ್ರುತಿಪರಃ ಪ್ರವರಃ ಸ ಮಹೀಕ್ಷಿತಾಂ ।
ತಸ್ಮಿನ್ ಪುಣ್ಯತಮೇ ಮಾಸೇ ಕಿಂ ಚಕಾರ ನೃಪೋತ್ತಮಃ ॥ ೨೬ ॥

ವಸಿಷ್ಠ ಉವಾಚ

ಸಂಪ್ರಾಪ್ತಂ ಕಾರ್ತಿಕಂ ದೃಷ್ಟ್ವಾ ಪ್ರಬೋಧಕರಣಂ ಹರೇಃ ।
ಅತಿಪ್ರಮುಗ್ಧೋ ರಾಜೇಂದ್ರೋ ಮೋಹಿನೀಂ ವಾಕ್ಯಮಬ್ರವೀತ್ ॥೨೭॥

ರತಂ ದೇವಿ ತ್ವಯಾ ಸಾರ್ಧಂ ಮಯಾ ಸಂವತ್ಸರಾನ್ ಬಹೂನ್ ।
ತವಾಪಮಾನಭೀತೇನ ನೋಕ್ತಂ ಕಿಂಚಿದಪಿ ಕ್ವಚಿತ್ ॥ ೨೮ ॥

---

ವ್ರತಾಚರಣೆಮಾಡದೆಯೇ ಕಳೆಯುವವನು ಸಕಲಧರ್ಮಬಹಿಷ್ಕೃತನಾಗಿ ತಿರ್ಯಗ್ಯೋನಿಯನ್ನು ಹೊಂದುವನು.

೨೫-೨೬. ಮಾಂಧಾತರಾಜನು ಹೇಳಿದನು :—ವಸಿಷ್ಠಮುನಿಯೇ ! ರುಕ್ಮಾಂಗದರಾಜನು ಕಾರ್ತಿಕಮಾಸವು ಬಂದಮೇಲೆ ಮೋಹಯುಕ್ತಳಾದ ಮೋಹಿನಿಯನ್ನು ಹೇಗೆ ಭೋಗಿಸಿದನು ? ವಿಷ್ಣುಭಕ್ತನು, ಅಧ್ಯಯನಪರನೂ ಆದ ಆ ರಾಜೋತ್ತಮನು ಅತ್ಯಂತಪುಣ್ಯಕರವಾದ ಕಾರ್ತಿಕಮಾಸದಲ್ಲಿ ಏನು ಮಾಡಿದನು ? ಅದನ್ನು ನನಗೆ ಹೇಳು.

೨೭. ವಸಿಷ್ಠನು ಹೇಳಿದನು :—ಕಾರ್ತಿಕಮಾಸವು ಬಂದು ಹರಿಯು ಎದ್ದುದನ್ನು ಕಂಡು ಬಹು ಮೋಹಿತನಾಗಿದ್ದ ರಾಜೇಂದ್ರನು ಮೋಹಿನಿಯನ್ನು ಕುರಿತು ಮಾತನಾಡಿದನು.

೨೮. ದೇವಿಯೇ ! ನಿನ್ನೊಡನೆ ಬಹುವರ್ಷಗಳು ವಿಹರಿಸಿರುವೆನು. ನಿನಗೆ ಅವಮಾನಮಾಡಿದಂತಾಗುತ್ತೆಂಬ ಭಯದಿಂದ ಯಾವಾಗಲೂ ಏನನ್ನೂ ಹೇಳಲಿಲ್ಲ.

ಸಾಂಪ್ರತಂ ವಕ್ತುಕಾಮೋಽಹಂ ತನ್ನಿಬೋಧ ಶುಭಾನನೇ ।
ತ್ವಯ್ಯಾಸಕ್ತಸ್ಯ ಮೇ ದೇವಿ ಬಹವಃ ಕಾರ್ತಿಕಾ ಗತಾಃ ॥ ೨೯ ॥

ನ ವ್ರತೀ ಕಾರ್ತಿಕೇ ಜಾತೋ ಮುಕ್ತ್ವೈಕಂ ಹರಿವಾಸರಂ ।
ಸೋಽಹಂ ಕಾರ್ತಿಕಮಿಚ್ಛಾಮಿ ವ್ರತೇನ ಪರ್ಯುಪಾಸಿತುಂ ॥ ೩೦ ॥

ಅವ್ರತೇನ ಗತೋ ಯೇಷಾಂ ಕಾರ್ತಿಕೋ ಮರ್ತ್ಯಧರ್ಮಿಣಾಂ ।
ಇಷ್ಟಾಪೂರ್ತಂ ವೃಥಾ ತೇಷಾಂ ಧರ್ಮೋ ದ್ರುಹಿಣಸಂಭವೇ ॥ ೩೧ ॥

ಮಾಂಸಾಶಿನೋಽಪಿ ಭೂಪಾಲಾಃ ಅತ್ಯರ್ಥಂ ಮೃಗಯಾರತಾಃ ।
ತೇ ಮಾಂಸಂ ಕಾರ್ತಿಕೇ ತ್ಯಕ್ತ್ವಾ ಗತಾ ವಿಷ್ಣ್ವಾಲಯಂ ಶುಭೇ ॥ ೩೨ ॥

ಪ್ರವೃತ್ತಾನಾಂ ಹಿ ಭಕ್ಷ್ಯಾಣಾಂ ಕಾರ್ತಿಕೇ ನಿಯಮೋ ಕೃತೇ ।
ಅವಶ್ಯಂ ವಿಷ್ಣುರೂಪತ್ವಂ ಪ್ರಾಪ್ಯತೇ ಸಾಧಕೇನ ಹಿ ॥ ೩೩ ॥

---

೨೯. ಶುಭಾನನೆ! ಈಗ ನಿನಗೆ ಹೇಳಬೇಕೆಂದಿರುವುದನ್ನು ಕೇಳು. ದೇವಿಯೇ! ನಿನ್ನಲ್ಲಿ ಅನುರಕ್ತನಾದ ನನಗೆ ಬಹುಕಾರ್ತಿಕಮಾಸಗಳು ಹಾಗೆಯೇ ಕಳೆದುವು.

೩೦. ಯಾವಕಾರ್ತಿಕಮಾಸದಲ್ಲಿಯೂ ಏಕಾದಶೀ ಒಂದು ಹೊರತು ಯಾವವ್ರತವನ್ನೂ ಮಾಡಲಿಲ್ಲ. ಅಂತಹ ನಾನು ಈಗ ವ್ರತಾಚರಣೆಯಿಂದ ಕಾರ್ತಿಕಮಾಸವನ್ನು ಉಪಾಸನೆಮಾಡಲು ಬಯಸುವೆನು.

೩೧. ಬ್ರಹ್ಮಪುತ್ರಿಯೇ! ವ್ರತಾಚರಣೆಯಿಲ್ಲದೇ ಕಾರ್ತಿಕಮಾಸವನ್ನು ಕಳೆದ ಮನುಷ್ಯರು ಮಾಡುವಯಾಗ, ತಟಾಕಾದಿನಿರ್ಮಾಣ ಮುಂತಾ ಧರ್ಮವೆಲ್ಲವೂ ನಿಷ್ಪ್ರಯೋಜನವಾಗುವುದು.

೩೨. ಮಾಂಸಭೋಜಿಗಳೂ, ಬಹಳವಾಗಿ ಬೇಟೆಯಲ್ಲಾಸಕ್ತರೂ ಆಗಿರುವ ರಾಜರೂ ಸಹ ಕಾರ್ತಿಕಮಾಸದಲ್ಲಿ ಮಾಂಸವನ್ನುಬಿಟ್ಟು ವಿಷ್ಣ್ವಾಲಯಕ್ಕೆ ಹೋಗಿ ಆರಾಧಿಸುವರು.

೩೩. ಕಾರ್ತಿಕಮಾಸದಲ್ಲಿ ಆಹಾರನಿಯಮವನ್ನು ಮಾಡುವ ಸಾಧಕನು ಖಂಡಿತವಾಗಿಯೂ ವಿಷ್ಣುಸಾರೂಪ್ಯವನ್ನು ಹೊಂದುವನು.

ತಿಷ್ಠಂತು ಬಹುವಿತ್ತಾನಿ ದಾನಾನಿ ವರವರ್ಣಿನಿ |
ಹೃದಯೋಯಾಸಕರ್ತ್ರಾಣಿ ದೀಪದಾನಾದ್ದಿವಂ ವ್ರಜೇತ್ || ೩೪ ||

ತಸ್ಯಾಪ್ಯಭಾವಾತ್ ಸುಭಗೇ ಪರದೀಪಪ್ರಬೋಧನಂ |
ಕರ್ತವ್ಯಂ ಭಕ್ತಿಭಾವೇನ ಸರ್ವದಾನಾಧಿಕಂ ಚ ತತ್ || ೩೫ ||

ಏಕತಃ ಸರ್ವದಾನಾನಿ ದೀಪದಾನಂ ಹಿ ಚೈಕತಃ |
ಕಾರ್ತಿಕೇನ ಸಮಂ ಪ್ರೋಕ್ತಂ ದೀಪದಾನಾತ್ ಪ್ರಬೋಧನಂ || ೩೬ ||

ಕರ್ತವ್ಯಂ ಭಕ್ತಿಭಾವೇನ ಸರ್ವದಾನಾಧಿಕಂ ಸ್ಮೃತಂ |
ಕಾರ್ತಿಕೀಂ ಚ ತಿಥಿಂ ಕೃತ್ವಾ ವಿಷ್ಣೋರ್ನಾಭಿಸರೋರುಹೇ || ೩೭ ||

ಆಜನ್ಮಕೃತಪಾಪಾತ್ತು ಮುಚ್ಯತೇ ನಾತ್ರ ಸಂಶಯಃ |
ವ್ರತೋಪವಾಸನಿಯಮ್ಯೈಃ ಕಾರ್ತಿಕೋ ಯಸ್ಯ ಗಚ್ಛತಿ || ೩೮ ||

---

೩೪. ವರವರ್ಣಿನಿಯೇ ! ಮನಸ್ಸಿಗೆ ಆಯಾಸವನ್ನುಂಟುಮಾಡುವ, ಬಹುಧನಸಾಧ್ಯಗಳಾದ ದಾನಗಳಲ್ಲೆಲ್ಲಾ ದೀಪದಾನವು ಉತ್ತಮ. ಆದನ್ನು ಮಾಡಿದವನು ಸ್ವರ್ಗಕ್ಕೆ ಹೋಗುವನು.

೩೫. ಅಂತಹ ದೀಪದಾನಮಾಡಲು ಅನುಕೂಲವಿಲ್ಲದಿದ್ದರೆ ಇತರರು ಹಚ್ಚಿದ ದೀಪವನ್ನಾದರೂ ಭಕ್ತಿಯಿಂದ ಆರದೆ ಸರಿಯಾಗಿ ಉರಿಯುವಂತೆ ನೋಡಿಕೊಳ್ಳಬೇಕು. ಅದು ಸಕಲದಾನಗಳಿಗಿಂತಲೂ ಹೆಚ್ಚಾದುದು.

೩೬-೪೦. ಒಂದುಕಡೆ ಸಕಲದಾನಗಳು, ಇನ್ನೊಂದುಕಡೆ ಕಾರ್ತಿಕದಲ್ಲಿ ಮಾಡಿದ ದೀಪದಾನ ಇವನ್ನಿರಿಸಿ ತುಲನಮಾಡಿದರೆ ಸಕಲದಾನಗಳೂ ದೀಪದಾನಕ್ಕೆ ಸಮವಾಗಲಾರವೆಂದು ಹೇಳಿದೆ. ಆದಕಾರಣ ಕಾರ್ತಿಕದಲ್ಲಿ ಭಕ್ತಿಯಿಂದ ದೀಪದಾನಮಾಡಿ ಪ್ರಬೋಧನ್ಯೈಕಾದಶೀವ್ರತವನ್ನು ಮಾಡಬೇಕು. ಅದು ಸಕಲ ದಾನಗಳಿಗಿಂತಲೂ ಹೆಚ್ಚಾದುದೆಂದು ವಿಹಿತವಾಗಿದೆ.

ಪುಷ್ಕರವೆಂಬ ತೀರ್ಥದಲ್ಲಿ ಸ್ನಾನಮಾಡಿಕಾರ್ತಿಕಶುಕ್ಲ ಪೂರ್ಣಿಮೆಯದಿನ ಉಪವಾಸಮಾಡಿದರೆ ಹುಟ್ಟಿದಾಗಿನಿಂದಲೂ ಮಾಡಿದ ಪಾಪಗಳಿಂದ ಮುಕ್ತನಾ

ದೇವೋ ವೈಮಾನಿಕೋ ಭೂತ್ವಾ ಸ ಯಾತಿ ಪರಮಾಂ ಗತಿಂ ।
ತಸ್ಮಾನ್ಮೋಹಿನಿ ಮೋಹಂ ತ್ವಂ ಪರಿತ್ಯಜ್ಯ ಮಮೋಪರಿ ॥ ೩೯ ॥

ಆಜ್ಞಾಂ ವಿಧೇಹಿ ತತ್ಕಾಲಂ ಕರಿಷ್ಯೇ ಕಾರ್ತಿಕವ್ರತಂ ।
ತವ ವಕ್ಷೋಜಪೂಜಾಯಾ ವಿರತೋ ನೀರಜೇಕ್ಷಣೇ ॥ ೪೦ ॥

ಅಹಂ ವ್ರತಧರಶ್ಚೈವ ಭವಿಷ್ಯೇ ಹರಿಪೂಜನೇ ।

ಮೋಹಿನ್ಯುವಾಚ

ವಿಸ್ತರೇಣ ಸಮಾಖ್ಯಾಹಿ ಮಾಹಾತ್ಮ್ಯಂ ಕಾರ್ತಿಕಸ್ಯ ಚ ॥ ೪೧ ॥

ಸರ್ವಪುಣ್ಯಾಕರಃ ಪ್ರೋಕ್ತೋ ಮಾಸೋಽಯಂ ರಾಜಸತ್ತಮ ।
ವಿಶೇಷಾತ್ಕುತ್ರ ಕಥಿತಸ್ತದಾದಿಶ ಮಹಾಮತೇ ॥ ೪೨ ॥

ಶ್ರುತ್ವಾ ಕಾರ್ತಿಕಮಾಹಾತ್ಮ್ಯಂ ಕರಿಷ್ಯೇಽಹಂ ಯಥೇಪ್ಸಿತಂ ॥ ೪೩ ॥

---

ಗುವನು. ಇದರಲ್ಲಿ ಸಂದೇಹವಿಲ್ಲ. ವ್ರತ, ಉಪವಾಸ, ನಿಯಮಗಳಿಂದ ಕಾರ್ತಿಕ ಮಾಸವನ್ನು ಕಳೆಯುವವನು ವಿಮಾನದಲ್ಲಿ ಕೂಡುವ ದೇವಪದವಿಯನ್ನು ಹೊಂದಿ ಉತ್ತಮಗತಿಯನ್ನು ಪಡೆಯುವನು.

ಆದಕಾರಣ ಮೋಹಿನಿಯೇ! ನೀನು ನನ್ನಮೇಲಿನ ಮೋಹವನ್ನು ಬಿಟ್ಟು ಅಪ್ಪಣೆಯನ್ನು ಕೊಡು! ಪದ್ಮನಯನಳೇ! ತಕ್ಷಣದಲ್ಲಿಯೇ ನಿನ್ನ ಸ್ತನಪೂಜೆಯಿಂದ ಬಿಡುಗಡೆಯನ್ನು ಹೊಂದಿ, ಕಾರ್ತಿಕವ್ರತವನ್ನಾಚರಿಸುವೆನು.

೪೧. ನಾನು ಹರಿಪೂಜೆಯ ವ್ರತವನ್ನು ಧರಿಸುವೆನು ಎಂಬುದಾಗಿ ರಾಜನು ಮೋಹಿನಿಗೆ ಹೇಳಿದನು.

ಮೋಹಿನಿಯು ಹೇಳಿದಳು :—ಮಹಾಜ್ಞಾನಿಯಾದ ರಾಜೋತ್ತಮನೇ! ಕಾರ್ತಿಕಮಾಸದ ಮಾಹಾತ್ಮ್ಯೆಯನ್ನು ವಿಸ್ತಾರವಾಗಿ ಹೇಳು.

೪೨-೪೩. ಈಮಾಸವು ವಿಶೇಷವಾಗಿ ಸಕಲಪುಣ್ಯನಿಧಿಯೆಂದು ಎಲ್ಲಿ ಹೇಳಿದೆ? ಆದನ್ನು ನನಗೆ ಅಪ್ಪಣೆಕೊಡಿಸು. ಕಾರ್ತಿಕಮಾಹಾತ್ಮ್ಯೆಯನ್ನು ಕೇಳಿ ನಿನ್ನ ಇಷ್ಟದಂತೆ ಮಾಡುವೆನು.

ರುಕ್ಮಾಂಗದ ಉವಾಚ

ಮಾಹಾತ್ಮ್ಯಮಭಿಧಾಸ್ಯಾಮಿ ಮಾಸಸ್ಯಾಸ್ಯ ವರಾನನೇ ।
ಯೇನ ಭಕ್ತಿರ್ಭವಿತ್ರೀ ತೇ ಪ್ರಕರ್ತುಂ ಹರಿಪೂಜನಂ ॥ ೪೪ ॥

ಕಾರ್ತಿಕೇ ಕೃಚ್ಛ್ರಸೇವೀ ಯಃ ಪ್ರಾಜಾಪತ್ಯಚರೋಽಪಿ ವಾ ।
ಏಕಾಂತರೋಪವಾಸೀ ವಾ ತ್ರಿರಾತ್ರೋಪೋಷಿತೋಽಪಿ ವಾ ॥ ೪೫ ॥

ಯದ್ವಾ ದಶಾಹಃ ಪಕ್ಷಂ ವಾ ಮಾಸಂ ವಾ ವರವರ್ಣಿನಿ ।
ಕ್ಷಪಯಿತ್ವಾ ನರೋ ಯಾತಿ ಸ ವಿಷ್ಣೋಃ ಪರಮಂ ಪದಂ ॥ ೪೬ ॥

ಏಕಭಕ್ತೇನ ನಕ್ತೇನ ತಥೈವಾಯಾಚಿತೇನ ಚ ।
ಅಸ್ಮಿನ್ ನರೈರ್ಧರಾ ಚೈವ ಪ್ರಾಪ್ಯತೇ ದ್ವೀಪಮಾಲಿನೀ ॥ ೪೭ ॥

---

೪೪. ರುಕ್ಮಾಂಗದನು ಹೇಳಿದನು :—ವರಾನನೇ ! ಹರಿಪೂಜೆಯನ್ನು ಮಾಡಲು ಭಕ್ತಿಯನ್ನುಂಟುಮಾಡುವ ಈ ಕಾರ್ತಿಕಮಾಸದ ಮಾಹಾತ್ಮ್ಯೆಯನ್ನು ನಿನಗೆ ಹೇಳುವೆನು.

೪೫-೪೬. ವರವರ್ಣಿನೀ ! ಕಾರ್ತಿಕಮಾಸದಲ್ಲಿ ಕೃಚ್ಛ್ರವ್ರತ ಅಥವಾ ಪ್ರಾಜಾಪತ್ಯವ್ರತವನ್ನಾಚರಿಸುವವನು, ಧಾರಣ ಪಾರಣೆವ್ರತ ಅಥವಾ ತ್ರಿರಾತ್ರೋಪೋಷಣವ್ರತ ಮಾಡುವವನು ಅಥವಾ ಹತ್ತುದಿನಗಳು, ಪಕ್ಷ, ಮಾಸೋಪವಾಸವ್ರತಗಳಲ್ಲಾವುದಾದರೊಂದನ್ನು ಮಾಡುವಮನುಷ್ಯನು ವೈಕುಂಠಲೋಕಕ್ಕೆ ಹೋಗುವನು.

೪೭. ಈ ಮಾಸದಲ್ಲಿ ಒಪ್ಪತ್ತೂಟಮಾಡುವುದು, ನಕ್ತವ್ರತ, ಅಯಾಚಿತವ್ರತ ಇವನ್ನಾಶ್ರಯಿಸುವ ಮನುಷ್ಯರು ದ್ವೀಪಮಾಲಿನಿಯಾದ ಈ ಭೂಮಿಯನ್ನೇ ಪಡೆಯುವರು.

ವಿಶೇಷಾತ್ಪುಷ್ಕರೇ ತೀರ್ಥೇ ದ್ವಾರಾವತ್ಯಾಂ ಚ ಸೌಕರೇ ।
ಮಸೋಽಯಂ ಭಕ್ತಿದಃ ಪ್ರೋಕ್ತೋ ವ್ರತದಾನಾರ್ಚನಾದಿಭಿಃ ॥ ೪೮ ॥

ತಸ್ಮಿನ್ ಹರಿದಿನಂ ಪುಣ್ಯಂ ತಥಾ ವೈ ಭೀಷ್ಮಪಂಚಕಂ ।
ಪ್ರಬೋಧನೀಂ ನರಃ ಕೃತ್ವಾ ಜಾಗರೇಣ ಸಮನ್ವಿತಾಂ ॥ ೪೯ ॥

ನ ಮಾತುರ್ಜಠರೇ ತಿಷ್ಠೇದಪಿ ಪಾಪಾನ್ವಿತೋ ನರಃ ।
ತಸ್ಮಿನ್ ದಿನೇ ವರಾರೋಹೇ ಮಂಡಲಂ ಯಸ್ತು ಪಶ್ಯತಿ ॥ ೫೦ ॥

ವಿನಾ ಸಾಂಖ್ಯೇನ ಯೋಗೇನ ಸ ಯಾತಿ ಪರಮಂ ಪದಂ ।
ಕಾರ್ತಿಕೇ ಮಂಡಲಂ ದೃಷ್ಟ್ವಾ ಸೌಕರೇ ಸೂಕರಂ ಶುಭೇ ॥ ೫೧ ॥

ದೃಷ್ಟ್ವಾ ಕೋಕವರಾಹಂ ವಾ ನ ಭೂಯಸ್ತನಯೋ ಭವೇತ್ ।
ತ್ರಿವಿಧಸ್ಯಾಪಿ ಪಾಪಸ್ಯ ದೃಷ್ಟ್ವಾ ಮುಕ್ತಿರ್ಭವೇನ್ನೃಣಾಂ ॥ ೫೨ ॥

---

೪೮. ಈ ಮಾಸವು ಪುಷ್ಕರತೀರ್ಥ, ದ್ವಾರಾವತೀ, ಶ್ರೀಮುಷ್ಣ ಈ ಕ್ಷೇತ್ರಗಳಲ್ಲಿ ವ್ರತದಾನಪೂಜಾದಿಗಳನ್ನು ಮಾಡುವುದು ವಿಶೇಷ ಭಕ್ತಿಪ್ರದವೆಂದು ಉಕ್ತವಾಗಿದೆ.

೪೯-೫೪. ಕಾರ್ತಿಕಮಾಸದಲ್ಲಿಯೂ ಹರಿದಿನ ಮತ್ತು ಭೀಷ್ಮಪಂಚಕಗಳು ಪುಣ್ಯಕರವಾದುವು. ರಾತ್ರಿಯಲ್ಲಿ ಜಾಗರಣೆಸಹಿತವಾಗಿ ಕಾರ್ತಿಕ ಶುಕ್ಲೈಕಾದಶಿಯ ವ್ರತವನ್ನಾಚರಿಸುವ ಮನುಷ್ಯನು ಪಾಪಿಷ್ಠನಾಗಿದ್ದರೂ ಪುನಃ ಜನ್ಮವನ್ನು ಹೊಂದುವುದಿಲ್ಲ.

ಆ ದಿನದಲ್ಲಿ ಮಂಡಲದರ್ಶನಮಾಡುವವನು ಸಾಂಖ್ಯಯೋಗವನ್ನಾಚರಿಸದೆಯೇ ಪರಮಪದವಿಯನ್ನು ಹೊಂದುವನು.

ಶ್ರೀಮುಷ್ಣಕ್ಷೇತ್ರದಲ್ಲಿ ಕಾರ್ತಿಕದಲ್ಲಿ ಮಂಡಲವನ್ನು ಅಥವಾ ಕೋಕವರಾಹನನ್ನಾದರೂ ದರ್ಶನಮಾಡಿದರೆ ಪುನರ್ಜನ್ಮವನ್ನು ಹೊಂದದೆ ಮುಕ್ತನಾಗುವನು.

ಮಂಡಲಂ ಚಪಲಾಪಾಂಗಿ ಶ್ರೀಧರಂ ಕುಬ್ಜಕೇ ತಥಾ ।
ಕಾರ್ತಿಕೇ ವರ್ಜಯೇತ್ತೈಲಂ ಕಾರ್ತಿಕೇ ವರ್ಜಯೇನ್ಮಧು ॥ ೫೩ ॥

ಕಾರ್ತಿಕೇ ವರ್ಜಯೇನ್ಮಾಂಸಂ ಕಾರ್ತಿಕೇ ವರ್ಜಯೇತ್ ಸ್ತ್ರಿಯಃ ।
ನಿಷ್ಪಾವಾನ್ ಕಾರ್ತಿಕೇ ದೇವಿ ಸಂತ್ಯಜೇದ್ವಿಷ್ಣುತತ್ಪರಃ ॥ ೫೪ ॥

ಸಂವತ್ಸರಕೃತಾತ್ ಪಾಪಾತ್ ಬಹಿರ್ಭವತಿ ತತ್ಕ್ಷಣಾತ್ ।
ಪ್ರಾಪ್ನೋತಿ ರಾಜಕೀಂ ಯೋನಿಂ ಸಕೃದ್ಭಕ್ಷಣಸಂಭವಾತ್ ॥ ೫೫ ॥

ಕಾರ್ತಿಕೇ ಸೌಕರಂ ಮಾಂಸಂ ಯಸ್ತು ಭುಂಜೀತ ದುರ್ಮತಿಃ ।
ಷಷ್ಟಿವರ್ಷಸಹಸ್ರಾಣಿ ರೌರವೇ ಪರಿಪಚ್ಯತೇ ।
ತಸ್ಮಾತ್ಕ್ರೋ ಜಾಯತೇ ಪಾಪೀ ವಿಷ್ಠಾಶೀ ಗ್ರಾಮ್ಯಸೂಕರಃ ॥ ೫೬ ॥

ಮಾತ್ಸ್ಯಂ ಮಾಂಸಂ ನ ಭುಂಜೀತ ನ ಕೌರ್ಮಂ ನಾಪಿ ಹಾರಿಣಂ ।
ಚಾಂಡಾಲೋ ಜಾಯತೇ ದೇವಿ ಕಾರ್ತಿಕೇ ಮಾಂಸಭಕ್ಷಣಾತ್ ॥ ೫೭ ॥

---

ಚಪಲಾಕ್ಷಿಯೇ! ಕುಬ್ಜಕಕ್ಷೇತ್ರದಲ್ಲಿ ಶ್ರೀಧರಮಂಡಲವನ್ನು ದರ್ಶನ ಮಾಡುವ ಮನುಷ್ಯರಿಗೆ ತ್ರಿವಿಧಪಾಪವೂ ಪರಿಹಾರವಾಗುವುದು. ಕಾರ್ತಿಕಮಾಸದಲ್ಲಿ ಎಣ್ಣೆ, ಜೇನುತುಪ್ಪ, ಮಾಂಸ, ಸ್ತ್ರೀಸಂಗ, ಅವರೇಕಾಯಿ ಇವುಗಳನ್ನು ವಿಷ್ಣುಭಕ್ತನು ಬಿಡಬೇಕು.

೫೫. ಇದನ್ನು ಬಿಟ್ಟರೆ ಕೂಡಲೇ ಒಂದುವರ್ಷಮಾಡಿದ ಪಾಪವು ದೂರವಾಗುವುದು. ಆಗ ಒಂದಾವರ್ತಿ ಅವನ್ನು ತಿಂದರೆ ಅಗಸನಜನ್ಮವು ಬರುವುದು.

೫೬. ಕಾರ್ತಿಕಮಾಸದಲ್ಲಿ ಹಂದಿಯಮಾಂಸವನ್ನು ತಿನ್ನುವ ದುರ್ಬುದ್ಧಿ ಮನುಷ್ಯನು ಅರವತ್ತುಸಾವಿರ ವರ್ಷಗಳು ರೌರವನರಕದಲ್ಲಿ ಬಿದ್ದು ದುಃಖ ಪಡುವನು.

೫೭. ಅದರಿಂದ ಬಿಡುಗಡೆಯಾದಮೇಲೆ ಆ ಪಾಪಿಯು ಅಮೇಧ್ಯತಿನ್ನುವ ಹಂದಿಯಾಗಿ ಹುಟ್ಟುವನು. ಮೀನು, ಆಮೆ ಮತ್ತು ಜಿಂಕೆಗಳ ಮಾಂಸವನ್ನೂ ಆಗ ತಿನ್ನಬಾರದು.

ಕಾರ್ತಿಕಃ ಸರ್ವಪಾಪಘ್ನಃ ಕಿಂಚಿದ್ವ್ರತಧರಸ್ಯ ಹಿ || ೫೮ ||

ಕಾರ್ತಿಕೇ ತು ಕೃತಾ ದೀಕ್ಷಾ ನೃಣಾಂ ಜನ್ಮನಿಕೃಂತಿನೀ |
ತಸ್ಮಾತ್ಸರ್ವಪ್ರಯತ್ನೇನ ದೀಕ್ಷಾಂ ಕುರ್ವೀತ ಕಾರ್ತಿಕೇ || ೫೯ ||

ಅದೀಕ್ಷಿತಸ್ಯ ವಾಮೋರು ಕೃತಂ ಸರ್ವಂ ನಿರರ್ಥಕಂ |
ಪಶುಯೋನಿಮವಾಪ್ನೋತಿ ದೀಕ್ಷಯಾ ರಹಿತೋ ನರಃ || ೬೦ ||

ನ ಗೃಹೇ ಕಾರ್ತಿಕಂ ಕುರ್ಯಾತ್ ವಿಶೇಷೇಣ ತು ಕಾರ್ತಿಕೀಂ |
ತೀರ್ಥೇ ಹಿ ಕಾರ್ತಿಕೀಂ ಕುರ್ವನ್ನರೋ ಯಾತಿ ಹರೇಃ ಪದಂ || ೬೧ ||

ಕಾರ್ತಿಕೇ ಶುಕ್ಲಪಕ್ಷಸ್ಯ ಕೃತ್ವಾ ಹ್ಯೇಕಾದಶೀಂ ನರಃ |
ಪ್ರಾತರ್ದತ್ವಾ ಶುಭಾನ್ ಕುಂಭಾನ್ ಪ್ರಯಾತಿ ಹರಿಮಂದಿರಂ || ೬೨ ||

---

೫೮. ದೇವಿಯೇ! ಕಾರ್ತಿಕಮಾಸದಲ್ಲಿ ಮಾಂಸ ತಿನ್ನುವುದರಿಂದ ಚಂಡಾಲನಾಗಿ ಹುಟ್ಟುವನು. ಕಾರ್ತಿಕಮಾಸದಲ್ಲಿ ಸ್ವಲ್ಪವಾಗಿ ವ್ರತವನ್ನಾಚರಿಸಿದವರಿಗೂ ಸಹ ಸಕಲಪಾಪಗಳೂ ಪರಿಹಾರವಾಗುವುವು.

೫೯. ಕಾರ್ತಿಕಮಾಸದಲ್ಲಿ ಸ್ವೀಕರಿಸಿದ ದೀಕ್ಷೆಯು ಮನುಷ್ಯಜನ್ಮವುಂಟಾಗದಂತೆ ಮಾಡುವುದು. ಆದಕಾರಣ ಸಕಲಪ್ರಯತ್ನಗಳಿಂದಲೂ ಕಾರ್ತಿಕಮಾಸದಲ್ಲಿ ದೀಕ್ಷೆಯನ್ನು ಸ್ವೀಕರಿಸಬೇಕು.

೬೦. ಸುಂದರಿಯೇ! ದೀಕ್ಷೆಯಿಲ್ಲದವನು ಮಾಡಿದುದೆಲ್ಲಾ ನಿಷ್ಫಲವಾಗುವುದು. ದೀಕ್ಷೆಯಿಲ್ಲದಮನುಷ್ಯನು ಪಶುಜನ್ಮವನ್ನು ಹೊಂದುವನು.

೬೧. ಮನೆಯಲ್ಲಿ ಕಾರ್ತಿಕವ್ರತವನ್ನೂ, ವಿಶೇಷವಾಗಿ ಕಾರ್ತಿಕಶುಕ್ಲಪೂರ್ಣಿಮಾವ್ರತವನ್ನೂ ಸಹ ಮಾಡಬಾರದು. ತೀರ್ಥದಲ್ಲಿ ಅಂತಹ ಪೂರ್ಣಿಮಾವ್ರತವನ್ನಾಚರಿಸುವ ಮನುಷ್ಯನು ವೈಕುಂಠಕ್ಕೆ ಹೋಗುವನು.

೬೨. ಕಾರ್ತಿಕಶುಕ್ಲಪಕ್ಷದ ಏಕಾದಶೀವ್ರತವನ್ನು ಮಾಡಿ ಪ್ರಾತಃಕಾಲದಲ್ಲಿ ಒಳ್ಳೆಯ ಕುಂಭಗಳನ್ನು ದಾನಮಾಡುವವನು ಹರಿಮಂದಿರಕ್ಕೆ ಹೋಗುವನು.

ಸಂವತ್ಸರವ್ರತಾನಾಂ ಹಿ ಸಮಾಪ್ತಿಃ ಕಾರ್ತಿಕೇ ಸ್ಮೃತಾ |
ವಿವಾಹಾ ಯತ್ರ ದೃಶ್ಯಂತೇ ವಿಷ್ಣೋರ್ನಾಭಿಸರೋರುಹೇ || ೬೩ ||

ದಿನಾನಿ ತತ್ರ ಚತ್ವಾರಿ ಯುಷ್ಮೈಕಂ ವರವರ್ಣಿನಿ |
ವಿನೋತ್ತರಾಯಣಂ ಕಾಲಂ ಲಗ್ನಶುದ್ಧಿಂ ವಿನಾಪಿ ಚ || ೬೪ ||

ದೃಶ್ಯಂತೇ ಯತ್ರ ಸಂಬಂಧಾಃ ಪುತ್ರಪೌತ್ರವಿವರ್ಧನಾಃ |
ತಸ್ಮಾನ್ಮೋಹಿನಿ ಕರ್ತಾಸ್ಮಿ ಕಾರ್ತಿಕೇ ವ್ರತಸೇವನಂ || ೬೫ ||

ಅಶೇಷಪಾಪನಾಶಾಯ ತವ ಪ್ರೀತಿವಿವೃದ್ಧಯೇ |

ಮೋಹಿನ್ಯುವಾಚ

ಅಹೋ ಮಾಹಾತ್ಮ್ಯಮತುಲಂ ಕಾರ್ತಿಕಸ್ಯ ತ್ವಯೇರಿತಂ || ೬೬ ||
ಚಾತುರ್ಮಾಸ್ಯವ್ರತಾನಾಂ ಹಿ ವಿಧಿಮುದ್ಯಾಪನಂ ವದ |
ಪೂರ್ಣತಾ ಯೇನ ಭವತಿ ವ್ರತಾನಾಂ ಪೃಥಿವೀಪತೇ || ೬೭ ||

---

೬೩. ಸಂವತ್ಸರವ್ರತಗಳಿಗೆಲ್ಲಾ ಕಾರ್ತಿಕದಲ್ಲಿಯೇ ಸಮಾಪ್ತಿಯೆಂದು ಹೇಳಿದೆ. ಕಾರ್ತಿಕದಲ್ಲಿಯೇ ಪುಷ್ಕರಕ್ಷೇತ್ರದಲ್ಲಿ ವಿವಾಹಗಳು ನಡೆಯುವುವು.

೬೪-೬೬. ಅದರಲ್ಲಿಯೂ ನಾಲ್ಕುದಿನಗಳು ಮುಖ್ಯವಾದುವು ಉತ್ತರಾಯಣ, ಲಗ್ನಶುದ್ಧಿ ಮುಂತಾದುವಾವುವನ್ನೂ ನಿರೀಕ್ಷಿಸದೆ ಆ ಕಾಲದಲ್ಲಿ ಮಾಡಿದ ವಿವಾಹಗಳು ಪುತ್ರಪೌತ್ರವರ್ಧಕವಾಗಿ ಶುಭಕರವಾಗಿ ಕಂಡಿವೆ.

ಆದಕಾರಣ ಮೋಹಿನಿಯೇ ! ನಾನು ಕಾರ್ತಿಕಮಾಸದಲ್ಲಿ ಸಮಸ್ತಪಾಪ ಪರಿಹಾರ, ನಿನ್ನಪ್ರೀತಿಯ ಅಭಿವೃದ್ಧಿ ಇವುಗಳಿಗಾಗಿ ವ್ರತವನ್ನು ಸೇವನೆಮಾಡುವೆನು.

ಮೋಹಿನಿಯು ಹೇಳಿದಳು :—ನೀನು ಹೇಳಿದ ಅಸದೃಶವಾದ ಕಾರ್ತಿಕ ಮಾಸ ಮಾಹಾತ್ಮ್ಯೆಯು ಆಶ್ಚರ್ಯಕರವಾದುದು.

೬೭-೬೮. ಭೂಪತಿಯೇ ! ಯಾವುದರಿಂದ ವ್ರತಗಳು ಸಾಂಗವೂ, ಸಂಪೂರ್ಣವೂ ಆಗಿ ಪುಣ್ಯಫಲಪ್ರದವಾಗುವುವೋ ಅಂತಹ ಚಾತುರ್ಮಾಸ್ಯವ್ರತಗಳ ವಿಧಾನವನ್ನೂ ಉದ್ಯಾಪನೆಯನ್ನೂ ಸಹ ಹೇಳು.

**ಅನ್ವೈಕಲ್ಯಂ ಭವೇಚ್ಚೈವ ವ್ರತಂ ಪುಣ್ಯಫಲಸ್ಯ ತು ।**

**ರಾಜೋವಾಚ**

**ನಕ್ತವ್ರತೀ ಷಡ್ರಸೇನ ಬ್ರಾಹ್ಮಣಂ ಭೋಜಯೇತ್ಪ್ರಿಯೇ ॥ ೬೮ ॥**

**ಅಯಾಚಿತೇ ತ್ವನಡ್ವಾಹಂ ಸಹಿರಣ್ಯಂ ಪ್ರದಾಪಯೇತ್ ।**
**ಅಮಾಂಸಾಶೀ ಭವೇದ್ಯಸ್ತು ಗಾಂ ಪ್ರದದ್ಯಾತ್ ಸದಕ್ಷಿಣಾಂ ॥ ೬೯ ॥**

**ಧಾತ್ರೀಸ್ಥಾನೇ ನರೋ ದದ್ಯಾದ್ದಧಿ ಪಾಯಸಮೇವ ಚ ।**
**ಫಲಾನಾಂ ನಿಯಮೇ ಸುಭ್ರು ಫಲದಾನಂ ಸಮಾಚರೇತ್ ॥ ೭೦ ॥**

**ತೈಲತ್ಯಾಗೇ ಘೃತಂ ದದ್ಯಾದ್ಘೃತತ್ಯಾಗೇ ಪಯಸ್ತಥಾ ।**
**ಧಾನ್ಯಾನಾಂ ನಿಯಮೇ ಶಾಲೀಂಸ್ತತ್ತದ್ಧಾನ್ಯಮಥಾಪಿ ವಾ ॥ ೭೧ ॥**

**ದದ್ಯಾದ್ಭೂಶಯನೇ ಶಯ್ಯಾಂ ತೂಲಿಕಾಗಂಡಕಾನ್ವಿತಾಂ ।**
**ಪತ್ರಭೋಜೀ ನರೋ ದದ್ಯಾದ್ಭಾಜನಂ ಘೃತಸಂಯುತಂ ॥ ೭೨ ॥**

---

ರಾಜನು ಹೇಳಿದನು :—ಪ್ರಿಯೇ ! ನಕ್ತವ್ರತಕರ್ತನು ಬ್ರಾಹ್ಮಣನಿಗೆ ಷಡ್ರಸ ಸಹಿತವಾದ ಅನ್ನವನ್ನು ಭೋಜನಮಾಡಿಸಬೇಕು.

೬೯-೭೦. ಅಯಾಚಿತವ್ರತದಲ್ಲಿ ಸುವರ್ಣಸಹಿತನಾದ ವೃಷಭವನ್ನು ದಾನಮಾಡಬೇಕು. ಮಾಂಸವನ್ನು ತಿನ್ನದೇ ಬಿಟ್ಟಿರುವವನು ದಕ್ಷಿಣೆಸಹಿತವಾಗಿ ಗೋದಾನಮಾಡಬೇಕು. ಧಾತ್ರಿಯ ಸನ್ನಿಧಾನದಲ್ಲಿ ಮನುಷ್ಯನು ಮೊಸರು ಮತ್ತು ಪಾಯಸಗಳನ್ನು ದಾನಮಾಡಬೇಕು. ಫಲನಿಯಮ ಮಾಡಿದವನು ಫಲದಾನಮಾಡಬೇಕು.

೭೧. ತೈಲ ತ್ಯಾಗಮಾಡಿದವನು ಘೃತದಾನವನ್ನೂ, ಘೃತತ್ಯಾಗಮಾಡಿದವನು ಕ್ಷೀರವನ್ನೂ, ಧಾನ್ಯನಿಯಮಕರ್ತನು ಭತ್ತ ಅಥವಾ ಆಯಾಯ ಧಾನ್ಯಗಳನ್ನೂ ದಾನಮಾಡಬೇಕು.

೭೨. ನೆಲದ ಮೇಲೆ ಮಲಗುವ ವ್ರತವನ್ನಾಚರಿಸಿದವನು ದಿಂಬು ಹೊದ್ದಿಗೆ ಮುಂತಾದ ಸಾಮಗ್ರೀಸಹಿತವಾದ ಹಾಸಿಗೆಯನ್ನು ದಾನಮಾಡಬೇಕು. ಪತ್ರಭೋಜಿಯು ತುಪ್ಪತುಂಬಿದ ಪಾತ್ರೆಯನ್ನು ದಾನಮಾಡಬೇಕು.

ಮೌನೇ ಘಟಂ ತಿಲಾನ್ವಾಪಿ ಸಹಿರಣ್ಯಾನ್ ಪ್ರದಾಪಯೇತ್ ।
ದಂಪತ್ಯೋರ್ಭೋಜನಂ ಕಾರ್ಯಮುಭಯೋಃ ಶಯನಾನ್ವಿತಂ ॥ ೭೩ ॥

ಸಭೋಗಂ ದಕ್ಷಿಣೋಪೇತಂ ವ್ರತಸ್ಯ ಪರಿಪೂರ್ತಯೇ ।
ಪ್ರಾತಃಸ್ನಾನೇ ಹಯಂ ದದ್ಯಾನ್ನಿಃಸ್ನೇಹೇ ಘೃತಸಕ್ತುಕಾನ್ ॥ ೭೪ ॥

ನಖರಾಣಾಂ ಚ ಕೇಶಾನಾಂ ಧಾರಣೇ ದರ್ಪಣಂ ದದೇತ್ ।
ಉಪಾನಹೌ ಪ್ರದದ್ಯಾತ್ತು ಪಾದತ್ರಾಣವಿವರ್ಜನೇ ॥ ೭೫ ॥

ಲವಣಸ್ಯ ತು ಸಂತ್ಯಾಗೇ ದಾತವ್ಯಾ ಸುರಭಿಸ್ತಥಾ ।
ಆಮಿಷಸ್ಯ ಪರಿತ್ಯಾಗೇ ಸವತ್ಸಾಂ ಕಪಿಲಾಂ ದದೇತ್ ॥ ೭೬ ॥

ನಿತ್ಯಂ ದೀಪಪ್ರದೋ ಯಸ್ತು ವ್ರತೇಭೀಷ್ಟೇ ಸುರಾಲಯೇ ।
ಸಕಾಂಚನಂ ತಥಾ ತಾಮ್ರಂ ಸಘೃತಂ ದೀಪಕಂ ಪ್ರಿಯೇ ॥ ೭೭ ॥

---

೭೩-೭೪. ಮೌನಿಯು ಕುಂಭ ಅಥವಾ ಎಳ್ಳನ್ನು ಬಂಗಾರಸಹಿತವಾಗಿ ದಾನಮಾಡಬೇಕು. ದಂಪತಿಗಳಿಗೆ ಭೋಜನಮಾಡಿಸಿ ವ್ರತವು ಪೂರ್ತಿಗೊಳ್ಳುವುದಕ್ಕಾಗಿ ಭೋಗದಕ್ಷಿಣೆಗಳ ಸಹಿತವಾಗಿ ಹಾಸಿಗೆಯನ್ನು ದಾನಮಾಡಬೇಕು. ಪ್ರಾತಃಸ್ನಾನಮಾಡಿದರೆ ಕುದುರೆಯನ್ನೂ, ಸ್ನೇಹ ಎಂದರೆ ಘೃತಾದಿಗಳನ್ನು ಬಿಟ್ಟಿದ್ದರೆ ಘೃತಸಕ್ತುಗಳನ್ನೂ ದಾನಮಾಡಬೇಕು.

೭೫. ಉಗುರು ಕೂದಲುಗಳನ್ನು ಬೆಳೆಸಿ ದೀಕ್ಷೆಯನ್ನು ವಹಿಸಿದ್ದರೆ ಕನ್ನಡಿಯನ್ನು ದಾನಮಾಡಬೇಕು. ಪಾದರಕ್ಷೆಯನ್ನು ಬಿಟ್ಟಿದ್ದರೆ ಅದನ್ನೂ ದಾನಮಾಡಬೇಕು.

೭೬. ಉಪ್ಪನ್ನು ಬಿಟ್ಟಿದ್ದರೆ ಗೋದಾನಮಾಡಬೇಕು. ಮಾಂಸವನ್ನು ಬಿಟ್ಟಿದ್ದರೆ ಕರುಸಹಿತವಾಗಿ ಗೋದಾನಮಾಡಬೇಕು.

೭೭-೭೮. ಇಷ್ಟವ್ರತದಲ್ಲಿ ದೇವಾಲಯದಲ್ಲಿ ನಿತ್ಯವೂ ದೀಪಹಚ್ಚುತ್ತಿದ್ದವನು ತಾಮ್ರಪಾತ್ರೆಯಲ್ಲಿ ತುಪ್ಪದದೀಪವನ್ನು ಸುವರ್ಣಸಹಿತವಾಗಿಯೂ, ವ್ರತ

ಪ್ರದದ್ಯಾದ್ವಾಸಸಾ ಛತ್ರಂ ವೈಷ್ಣವೇ ವ್ರತಪೂರ್ತಯೇ ।
ಏಕಾಂತರೋಪವಾಸೀ ತು ಕ್ಷೌಮವಸ್ತ್ರಂ ಪ್ರದಾಪಯೇತ್ ॥ ೭೮ ॥

ತ್ರಿರಾತ್ರೇ ಕಾಂಚನೋಪೇತಾಂ ದದ್ಯಾಚ್ಛಯ್ಯಾಂ ಸ್ವಲಂಕೃತಾಂ ।
ಷಡ್ರಾತ್ರೇಷೂಪವಾಸೇಷು ಶಿಬಿಕಾಂ ಛತ್ರಸಂಯುತಾಂ ॥ ೭೯ ॥

ಸವಾಹಪುರುಷಂ ಪೀನಮನಡ್ವಾಹಮಥಾರ್ಪಯೇತ್ ।
ಅಜಾವಿಕಂ ತ್ವೇಕಭಕ್ತೇ ಫಲಾಹಾರೇ ಸುವರ್ಣಕಂ ॥ ೮೦ ॥

ಶಾಕಾಹಾರೇ ಫಲಂ ದದ್ಯಾತ್ ಸೌವರ್ಣಂ ಘೃತಸಂಯುತಂ ।
ರಸಾನಾಂ ಚೈವ ಸರ್ವೇಷಾಂ ತ್ಯಾಗೇನುಕ್ತಸ್ಯ ವಾಪಿ ಚ ॥ ೮೧ ॥

ದಾತವ್ಯಂ ರಾಜತಂ ಪಾತ್ರಂ ಸೌವರ್ಣಂ ವಾಪಿ ಶಕ್ತಿತಃ ।
ಯಥೋಕ್ತಸ್ಯಾಪ್ರದಾನೇ ತು ಯಥೋಕ್ತಾಕರಣೇಪಿ ವಾ ॥ ೮೨ ॥

---

ಸಂಪೂರ್ಣವಾಗಲು ಛತ್ರಿಯನ್ನು ವಸ್ತ್ರಸಹಿತವಾಗಿಯೂ ವಿಷ್ಣುಭಕ್ತನಿಗೆ ದಾನ ಕೊಡಬೇಕು. ಧಾರಣೆ ಪಾರಣೆವ್ರತಮಾಡಿದವನು ರೇಷ್ಮೆವಸ್ತ್ರವನ್ನು ದಾನ ಮಾಡಬೇಕು.

೭೯. ಮೂರುದಿನಗಳು ಉಪವಾಸಮಾಡಿದರೆ ಚೆನ್ನಾಗಿ ಅಲಂಕಾರ ಮಾಡಿದ ಹಾಸಿಗೆಯನ್ನು ಸುವರ್ಣಸಹಿತವಾಗಿಯೂ, ಆರುದಿನಗಳು ಉಪವಾಸ ಮಾಡಿದರೆ ಪಲ್ಲಕ್ಕಿಯನ್ನು ಛತ್ರಿಸಹಿತವಾಗಿಯೂ ದಾನಮಾಡಬೇಕು.

೮೦-೮೪. ಪುರುಷನನ್ನು ಹೊರುವಂತಹ, ಪುಷ್ಟವಾದ ಎತ್ತನ್ನೂ ಸಮ ರ್ಪಿಸಬೇಕು. ಒಪ್ಪತ್ತೂಟಮಾಡಿದರೆ ಧಾವಳಿಯನ್ನೂ, ಫಲಾಹಾರಮಾಡಿದರೆ ಸುವರ್ಣವನ್ನೂ, ಶಾಕಾಹಾರಮಾಡಿದರೆ ಫಲವನ್ನೂ, ಸಕಲ ರಸವಸ್ತುಗಳನ್ನು ಅಥವಾ ಇಲ್ಲಿ ಹೇಳದಿರುವುದನ್ನು ತ್ಯಾಗಮಾಡಿದರೆ ತುಪ್ಪತುಂಬಿದ ಸುವರ್ಣ ಪಾತ್ರೆಯನ್ನೂ ಅದಿಲ್ಲದಿದ್ದರೆ ತನ್ನ ಶಕ್ತ್ಯನುಸಾರವಾಗಿ ಬೆಳ್ಳಿಬಂಗಾರದ ಪಾತ್ರೆಗಳನ್ನೂ ದಾನಮಾಡಬೇಕು. ವಿಹಿತವಾದುದನ್ನು ಕೊಡದೇ, ವಿಹಿತವಾದುದನ್ನು ಮಾಡದೇ ಇದ್ದರೂ ವಿಷ್ಣುಸ್ಮರಣೆಪೂರ್ವಕವಾಗಿ ಬ್ರಾಹ್ಮಣವಾಕ್ಯವನ್ನಾದರೂ ನಡೆಯಿಸಬೇಕು.

ವಿಪ್ರವಾಕ್ಯಂ ಚರೇತ್ಸುಭ್ರು ವಿಷ್ಣುಸ್ಮರಣಪೂರ್ವಕಂ ।
ವೃಥಾ ವಿಪ್ರವಚಾ ಯಸ್ತು ಮನ್ಯತೇ ಮನುಜಃ ಶುಭೇ ॥ ೮೩ ॥

ದಕ್ಷಿಣಾಂ ನೈವ ದದ್ಯಾದ್ವಾ ಸ ಯಾತಿ ನರಕೇ ಧ್ರುವಂ ।
ವ್ರತವೈಕಲ್ಯಮಾಸಾದ್ಯ ಕುಷ್ಠೀ ನಾಂಧಃ ಪ್ರಜಾಯತೇ ॥ ೮೪ ॥

ಧರಾಮರಾಣಾಂ ವಚನೇ ವ್ಯವಸ್ಥಿತಾ
ದಿವೌಕಸಸ್ತೀರ್ಥಗಣಾ ಮಖಾಶ್ಚ ।
ಕೋ ಲಂಘಯೇತ್ಸುಭ್ರು ವಚೋ ಹಿ ತೇಷಾಂ
ಶ್ರೇಯೋಭಿಕಾಮೋ ಮನುಜಸ್ತು ವಿದ್ವಾನ್ ॥ ೮೫ ॥

ಇದಂ ಮಯಾ ದಮರಹಸ್ಯಮುಕ್ತಂ
ವಿರಂಚಯೇ ಶ್ರೀಪತಿನಾ ಯಥೋಕ್ತಂ ।

---

ಶುಭಾಂಗಿಯೇ! ಯಾವನು ತಿಳಿದೂ ಸುಮ್ಮನೆ ಒಳ್ಳೆಯಮಾತುಗಳನ್ನಾಡುವನೋ, ದಕ್ಷಿಣೆಯನ್ನು ಕೊಡುವುದಿಲ್ಲವೋ ಅವನು ನರಕದಲ್ಲಿ ಬೀಳುವನು ಖಂಡಿತ. ವ್ರತವೈಕಲ್ಯವನ್ನು ಮಾಡಿದರೆ ಕುಷ್ಠರೋಗಿ ಅಥವಾ ಕುರುಡನಾಗುವನು.

೮೫. ದೇವತೆಗಳು, ತೀರ್ಥಸಮೂಹ, ಯಜ್ಞ ಇವುಗಳು ಬ್ರಾಹ್ಮಣವಚನದಲ್ಲಿ ಸನ್ನಿಹಿತವಾಗಿರುವುವು. ಆದಕಾರಣ ಶ್ರೇಯಸ್ಸನ್ನು ಬಯಸುವ ಜ್ಞಾನಿಯಾದ ಯಾವ ಮನುಷ್ಯನುತಾನೇ ಅಂತಹ ಬ್ರಾಹ್ಮಣರ ಮಾತನ್ನು ಮೀರಬಲ್ಲನು?

೮೬. ಶ್ರೀಪತಿಯಿಂದ ಬ್ರಹ್ಮನಿಗೆ ಉಕ್ತವಾದ, ಇತರರಿಗೆ ಹೇಳಲರ್ಹವಲ್ಲದ, ಫಲದಾಯಕವಾದ, ಲಕ್ಷ್ಮೀಪತಿಗೆ ತುಷ್ಟಿಯನ್ನುಂಟುಮಾಡುವ, ಧರ್ಮ

ಪ್ರಕಾಶಿತಂ ತುಭ್ಯಮನನ್ಯವಾಚ್ಯಂ
ಫಲಪ್ರದಂ ಮಾಧವತುಷ್ಟಿಹೇತುಂ || ೮೬ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಕಾರ್ತಿಕ ಮಾಹಾತ್ಮ್ಯಂ ನಾಮ ದ್ವಾವಿಂಶೋಽಧ್ಯಾಯಃ

---

ರಹಸ್ಯಯುಕ್ತವಾದ ಈ ಮಾಹಾತ್ಮ್ಯೆಯನ್ನು ನಾನು ನಿನಗಾಗಿ ಪ್ರಕಾಶಪಡಿಸಿರುವೆನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಕಾರ್ತಿಕ ಮಾಹಾತ್ಮ್ಯೆಯೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ.

ಧರ್ಮಾಂಗದನು ರಾಜ್ಯಭಾರವಮಾಡುತ್ತಿರುವಾಗ ದೇಶದಲ್ಲಿ ಕೃತಯುಗದಂತೆ ಧರ್ಮವು ನಡೆಯುತ್ತಿದ್ದಿತು. ರುಕ್ಮಾಂಗದನು ಬಹುವರ್ಷಕಾಲ ಮೋಹಿನಿಯೊಡನೆ ವಿಹರಿಸುತ್ತಾ ದಶಮ್ಯಾದಿ ದಿನತ್ರಯಹೊರತು ಉಳಿದ ಎಲ್ಲಾವ್ರತವನ್ನೂ ಬಿಟ್ಟಿದ್ದನು. ಆಶ್ವಯುಜಮಾಸವು ಕಳೆದು ಹರಿಯಪ್ರಬೋಧಕಾಲವಾದ ಕಾರ್ತಿಕಮಾಸವು ಪ್ರಾಪ್ತವಾಗಲು ರಾಜನು ಈಮಾಸವು ಬಹಳ ಉತ್ತಮಕಾಲವು ಇದರಲ್ಲಿ ವ್ರತವನ್ನಾಚರಿಸದಿದ್ದರೆ ನರಕವಾಗುವುದು, ಬಹುಕಾಲವು ಹೀಗೆಯೇ ಕಳೆಯಿತು. ಈಗಲಾದರೂ ನೀನು ಅಪ್ಪಣೆಯನ್ನು ಕೊಟ್ಟರೆ ನಾನು ಈಮಾಸದಲ್ಲಿ ಕರ್ತವ್ಯವ್ರತವನ್ನಾಚರಿಸುವೆನೆಂದು ಮೋಹಿನಿಗೆ ಹೇಳಲು, ಆಕೆಯು ಕಾರ್ತಿಕಮಾಹಾತ್ಮ್ಯೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಬಯಸಿದಳು. ಅದರಂತೆ ಧರ್ಮರಹಸ್ಯಯುಕ್ತವಾದ ಕಾರ್ತಿಕಮಾಹಾತ್ಮ್ಯೆಯನ್ನು ಮೋಹಿನಿಗೆ ಉಪದೇಶಿಸಿರುವನು.

---

# ತ್ರಯೋವಿಂಶೋಽಧ್ಯಾಯಃ

---

**ಮೋಹಿನ್ಯುವಾಚ**

**ವಾಕ್ಯಮುಕ್ತಂ ತ್ವಯಾ ಸಾಧು ಕಾರ್ತಿಕೇ ಯದುಪೋಷಣಂ ।**
**ವ್ರತಾದಿಕರಣಂ ರಾಜ್ಞಾ ನೋಕ್ತಂ ಕ್ವಾಪಿ ನಿದರ್ಶನೇ ॥ ೧ ॥**

**ಮುಕ್ತ್ವೈಕಂ ಬ್ರಾಹ್ಮಣಂ ಲೋಕೇ ನೋಕ್ತಂ ಶೂದ್ರವಿಶೋರಪಿ ।**
**ದಾನಂ ಹಿ ಪಾಲನಂ ಯುದ್ಧಂ ತೃತೀಯಂ ಭೂಭುಜಾಂ ಸ್ಮೃತಂ ॥ ೨ ॥**

**ನ ವ್ರತಂ ಹಿ ತ್ವಯಾ ಕಾರ್ಯಂ ಯದಿ ಮಾಮಿಚ್ಛಸಿ ಪ್ರಿಯಾಂ ।**
**ಮುಹೂರ್ತಮಪಿ ರಾಜೇಂದ್ರ ನ ಶಕ್ನೋಮಿ ತ್ವಯಾ ವಿನಾ ॥ ೩ ॥**

---

## ಇಪ್ಪತ್ತಮೂರನೆಯ ಅಧ್ಯಾಯವು

೧. ಮೋಹಿನಿಯು ಹೇಳಿದಳು :—ರಾಜನೇ! ಕಾರ್ತಿಕಮಾಸದಲ್ಲಿ ಉಪವಾಸಮಾಡಬೇಕೆಂದು ನೀನು ಹೇಳಿದಮಾತು ಸಾಧುವಾದುದು. ಆದರೆ ಯಾವ ಉದಾಹರಣೆಗಳಲ್ಲಿಯೂ ರಾಜನು ವ್ರತಮಾಡಿದುದನ್ನು ಹೇಳಿರುವುದಿಲ್ಲ.

೨. ಲೋಕದಲ್ಲಿ ಬ್ರಾಹ್ಮಣನೊಬ್ಬನನ್ನು ಬಿಟ್ಟು ಶೂದ್ರವೈಶ್ಯರಿಗೂ ಸಹ ಹೇಳಲಿಲ್ಲ. ದಾನ, ಪ್ರಜಾಪರಿಲಾಲನೆ, ಮೂರನೆಯದಾಗಿ ಯುದ್ಧ ಇವೇ ಕ್ಷತ್ರಿಯರಿಗೆ ವಿಹಿತಧರ್ಮಗಳು.

೩-೪. ರಾಜೇಂದ್ರನೇ! ಪ್ರಿಯಳಾದ ನನ್ನನ್ನು ನೀನು ಇಚ್ಛಿಸುವುದಾದರೆ ವ್ರತವನ್ನು ಮಾಡಕೂಡದು. ಒಂದು ಮುಹೂರ್ತವೂ ಸಹ ನಾನು

ಸ್ಥಾತುಂ ಕಮಲಗರ್ಭಾಭ ಕಿಂ ಪುನರ್ಮಾಸಸಂಖ್ಯಯಾ ।
ಯತ್ರೋಪವಾಸಕರಣಂ ಮನ್ಯಸೇ ವಸುಧಾಧಿಪ ॥ ೪ ॥

ತತ್ರ ವೈ ಭೋಜನಂ ದೇಯಂ ವಿಪ್ರಾಣಾಂ ಚ ಮಹಾತ್ಮನಾಂ ।
ಅಥವಾ ಜ್ಯೇಷ್ಠಪತ್ನೀ ಯಾ ಸಾ ಕರೋತು ವ್ರತಾದಿಕಂ ।
ಏವಮುಕ್ತೇ ತು ವಚನೇ ಮೋಹಿನ್ಯಾ ರುಕ್ಮಭೂಷಣಃ ॥ ೫ ॥

ಆಜುಹಾವ ಪ್ರಿಯಾಂ ಭಾರ್ಯಾಂ ನಾಮ್ನಾ ಸಂಧ್ಯಾವಲೀಂ ಶುಭಾಂ ।
ಆಹೂತಾ ತತ್ಕ್ಷಣಾತ್ ಪ್ರಾಪ್ತಾ ರಾಜಾನಂ ಭೂರಿದಕ್ಷಿಣಂ ॥ ೬ ॥

ಆಸೀನಂ ಶಯನೇ ದಿವ್ಯೇ ಮೋಹಿನೀಬಾಹುಸಂವೃತಂ ।
ಸಂಸ್ಪೃಷ್ಟಂ ಹಿ ಕುಚಾಗ್ರೇಣ ಸ್ವರ್ಣಕುಂಭನಿಭೇನ ಹಿ ॥ ೭ ॥

ಶಯನೇ ವಾಮನೇತ್ರಾಯಾಃ ಸಕಾಮಾಯಾ ಮಹೀಪತೇ ।
ಕೃತಾಂಜಲಿಪುಟಾ ಭೂತ್ವಾ ಭರ್ತುರ್ನಮಿತಕಂಧರಾ ॥ ೮ ॥

---

ನಿನ್ನನ್ನು ಬಿಟ್ಟಿರಲು ಸಾಧ್ಯವಿಲ್ಲ. ಹೀಗಿರುವಾಗ ತಿಂಗಳುಗಟ್ಟಲೆ ನಿನ್ನನ್ನು ಬಿಟ್ಟು ಇರಲು ಸಾಧ್ಯವಿಲ್ಲವೆಂದು ಹೇಳಬೇಕಾದುದೇನು ?

ಭೂಪತಿಯೇ ! ಯಾವ ಮಾಸದಲ್ಲಿ ಉಪವಾಸಮಾಡಬೇಕೆಂದು ತಿಳಿದಿರುವೆಯೋ ಆ ಕಾಲದಲ್ಲಿ ಮಹಾತ್ಮರಾದ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಅಥವಾ ಜ್ಯೇಷ್ಠಪತ್ನಿಯಾದ ಸಂಧ್ಯಾವಳಿಯು ವ್ರತಾದಿಗಳನ್ನು ಮಾಡಲಿ ಎಂಬುದಾಗಿ ಮೋಹಿನಿಯು ಹೇಳಲು ರುಕ್ಮಾಂಗದನು ಸಂಧ್ಯಾವಳೀ ನಾಮಕಳಾದ, ಶುಭಳಾದ ಪ್ರಿಯಭಾರ್ಯೆಯನ್ನು ಕರೆಸಿದನು.

ಆಹ್ವಾನಿಸಲ್ಪಟ್ಟ ಆಕೆಯು ತಕ್ಷಣದಲ್ಲಿಯೇ ಬಹುದಕ್ಷಿಣಾಪ್ರದಾನಮಾಡಿದ, ಮನೋಹರವಾದ ಹಾಸಿಗೆಯಮೇಲೆ ಕುಳಿತಿದ್ದ, ಮೋಹಿನಿಯ ಬಾಹುಗಳಿಂದ ಬಿಗಿದಪ್ಪಿಕೊಂಡಿದ್ದ, ಕಾಮಿನಿಯಾದ ಸುಂದರನೇತ್ರಗಳುಳ್ಳ ಮೋಹಿನಿಯ ಸುವರ್ಣಕುಂಭ ಸದೃಶವಾದ ಸ್ತನಗಳ ಅಗ್ರಭಾಗದಿಂದ ಘರ್ಷಿಸಲ್ಪಡುತ್ತಿದ್ದ ರಾಜನಬಳಿಗೆ ಬಂದಳು.

ಸಂಧ್ಯಾವಲೀ ಪ್ರಾಹ ನೃಪಂ ಕಿಮಾಹೂತಾ ಕರೋಮ್ಯಹಂ |
ತವ ವಾಕ್ಯೇ ಸ್ಥಿತಾ ಕಾಂತ ದುಃಸಾಪತ್ನ್ಯವಿವರ್ಜಿತಾ ॥ ೯ ॥

ಯಥಾ ಯಥಾ ಹಿ ರಮಸೇ ಮೋಹಿನ್ಯಾ ಸಹ ಭೂಪತೇ |
ತಥಾ ತಥಾ ಮಮ ಪ್ರೀತಿರ್ವರ್ಧತೇ ನಾತ್ರ ಸಂಶಯಃ ॥ ೧೦ ॥

ಭರ್ತುಃ ಸೌಖ್ಯೇನ ಯಾ ನಾರೀ ದುಃಖಯುಕ್ತಾ ಪ್ರಜಾಯತೇ |
ಸಾ ತು ಶ್ಯೇನೀ ಭವೇದ್ರಾಜಂಸ್ತ್ರೀಣಿ ವರ್ಷಾಣಿ ಪಂಚ ಚ ॥ ೧೧ ॥

ಆಜ್ಞಾಂ ಮೇ ದೇಹಿ ರಾಜೇಂದ್ರ ಮಾ ವ್ರೀಡಾಂ ಕಾಮಿಕಾಂ ಕುರು ೧೨ ॥

ರುಕ್ಮಾಂಗದ ಉವಾಚ

ಜಾನಾಮಿ ತವ ಶೀಲಂ ತು ಕುಲಂ ಜಾನಾಮಿ ಭಾಮಿನಿ |
ತವ ವಾಕ್ಯೇನ ಹಿ ಚಿರಂ ಮೋಹಿನೀ ರಮಿತಾ ಮಯಾ ॥ ೧೩ ॥

---

ಅನಂತರ ಹಾಸಿಗೆ ಸಮೀಪದಲ್ಲಿ ನಿಂತು ಗಂಡನಿಗೆ ತಲೆಬಾಗಿ ಕೈಮುಗಿದುಕೊಂಡು ಸಂಧ್ಯಾವಳಿಯು ದೊರೆಯನ್ನು ಕುರಿತು ನನ್ನನ್ನು ಕರೆಸಿರುವುದೇತಕ್ಕೆ? ತಿಳಿಸಿದರೆ ಅದನ್ನು ನಡೆಯಿಸುವೆನು. ಕಾಂತನೇ! ನಾನು ನಿನ್ನ ಮಾತಿನಂತೆ ನಡೆಯತಕ್ಕವಳು, ನನಗೆ ಸೌತಿಯ ಮಾತ್ಸರ್ಯವಿಲ್ಲ.

೧೦. ಭೂಪತೀ! ನೀನು ಮೋಹಿನಿಯೊಡನೆ ಹೇಗೆ ಹೇಗೆ ರಮಿಸುವೆಯೋ ಅಷ್ಟಷ್ಟು ನನ್ನಪ್ರೀತಿಯು ಹೆಚ್ಚುವುದು. ಈ ವಿಷಯದಲ್ಲಿ ಸಂದೇಹವಿಲ್ಲ.

೧೧. ಯಾವ ಸ್ತ್ರೀಯು ಗಂಡನ ಸೌಖ್ಯವನ್ನು ನೋಡಿ ದುಃಖಪಡುವಳೋ ಆವಳು ಎಂಟುವರ್ಷಗಳು ಗಿಡಗಪಕ್ಷಿಯಾಗುವಳು.

೧೨ ರಾಜೇಂದ್ರನೇ! ನನಗೆ ಅಪ್ಪಣೆಯನ್ನು ಕೊಡು, ನಾಚಿಕೆಪಡಬೇಡ. ಕಾಮವ್ಯಾಪಾರವನ್ನು ನಡೆಯಿಸು.

೧೩. ರುಕ್ಮಾಂಗದನು ಹೇಳಿದನು :—ಭಾಮಿನೀ! ನಿನ್ನ ಕುಲಶೀಲಗಳನ್ನು ತಿಳಿದಿರುವೆನು. ನಿನ್ನಮಾತಿನಿಂದಲೇ ಬಹುಕಾಲಪರ್ಯಂತವಾಗಿ ನಾನು ಮೋಹಿನಿಯೊಡನೆ ವಿಹರಿಸಿದೆನು.

ರಮಮಾಣಸ್ಯ ಸುಚಿರಂ ಬಹವಃ ಕಾರ್ತಿಕಾ ಗತಾಃ ।
ಪ್ರಿಯಾಸೌಖ್ಯೇನ ಮುಗ್ಧಸ್ಯ ನ ಗತೋ ಹರಿವಾಸರಃ ॥ ೧೪ ॥

ಸೋಹಂ ತೃಪ್ತಿಮನುಪ್ರಾಪ್ತಃ ಕಾಮಭೋಗಾತ್ ಪುನಃ ಪುನಃ ।
ಜ್ಞಾತೋಽಯಂ ಕಾರ್ತಿಕೋ ಮಾಸಃ ಸರ್ವಪಾಪಕ್ಷಯಂಕರಃ ॥ ೧೫ ॥

ಕರ್ತುಕಾಮೋ ವ್ರತಂ ದೇವಿ ಕಾರ್ತಿಕಾಖ್ಯಂ ಸುಪುಣ್ಯದಂ ।
ಇಯಂ ವಾರಯತೇ ಮಾಂ ಚ ವ್ರತಾದ್ಬ್ರಹ್ಮಸುತಾ ಶುಭೇ ॥ ೧೬ ॥

ಅಸ್ಯಾ ನ ವಿಪ್ರಿಯಂ ಕಾರ್ಯಂ ಸರ್ವಥಾ ವರವರ್ಣಿನಿ ।
ಮಾಮಕಂ ವ್ರತಮಾಧತ್ಸ್ವ ಕೃಚ್ಛ್ರಾಖ್ಯಂ ಕಾಯಶೋಷಕಂ ॥ ೧೭ ॥

---

೧೪. ಪ್ರಿಯೆಯೊಡನೆ ಬಹುಕಾಲದಿಂದಲೂ ಸುಖವಾಗಿ ವಿಹರಿಸುತ್ತಿರುವ, ಆ ಸುಖದಿಂದ ಮೋಹಿತನಾಗಿರುವ ನನಗೆ ಬಹುಕಾರ್ತಿಕಮಾಸಗಳು ಕಳೆದುವು. ಆದರೆ ಹರಿವಾಸರವನ್ನು ಮಾತ್ರ ನಾನು ಬಿಡಲಿಲ್ಲ.

೧೫. ಅಂತಹ ನಾನು ಪುನಃ ಪುನಃ ಕಾಮಭೋಗವನ್ನು ಅನುಭವಿಸಿ ತೃಪ್ತಿಯನ್ನು ಹೊಂದಿರುವೆನು. ಈಗ ಸಕಲಪಾಪನಾಶಕವಾದ ಈ ಕಾರ್ತಿಕ ಮಾಸವು ಬಂದಿದೆ.

೧೬. ದೇವಿಯೇ! ಅತ್ಯಂತಪುಣ್ಯಕರವಾದ ವ್ರತವನ್ನು ಮಾಡಬೇಕೆಂದು ಅಪೇಕ್ಷಿಸಿರುವೆನು. ಆದರೆ ನನ್ನನ್ನು ಬ್ರಹ್ಮಸುತೆಯಾದ ಮೋಹಿನಿಯು ವ್ರತಕ್ಕೆ ಹೋಗದಂತೆ ತಡೆಯುತ್ತಿರುವಳು.

೧೭. ವರವರ್ಣಿನೀ! ಈಕೆಗೆ ಅನಿಷ್ಟವಾದುದನ್ನು ಸರ್ವಥಾ ನಾನು ಮಾಡಲಾರೆನು. ಆದುದರಿಂದ ನಾನುಮಾಡಬೇಕಾದ ಕೃಚ್ಛ್ರವೆಂಬ ಶರೀರ ಶೋಷಕ ವ್ರತವನ್ನು ನೀನು ನಡೆಯಿಸು.

ಸಾ ಏವಮುಕ್ತಾ ನವಹೇಮವರ್ಣಾ
ಭರ್ತ್ರಾ ತದಾ ಪೀನಪಯೋಧರಾಂಗೀ ।
ಉವಾಚ ವಾಕ್ಯಂ ದ್ವಿಜರಾಜವಕ್ತ್ರಾ
ವ್ರತಂ ಚರಿಷ್ಯೇ ತವ ತುಷ್ಟಿಹೇತೋಃ ॥ ೧೮ ॥

ಯೇನೈವ ಕೀರ್ತಿಸ್ತು ಯಶೋ ಭವೇಚ್ಚ
ತಥೈವ ಸೌಖ್ಯಂ ತವ ಕೀರ್ತಿಯುಕ್ತಂ ।
ಕರೋಮಿ ಸೌಖ್ಯಂ ನರದೇವನಾಥ
ಕ್ಷಿಪಾಮಿ ದೇಹಂ ಜ್ವಲನೇ ತ್ವದರ್ಥಂ ॥ ೧೯ ॥

ಅಕಾರ್ಯಮೇತನ್ನ ಹಿ ಭೂಮಿಪಾಲ
ವಾಕ್ಯೇನ ತೇ ಹನ್ಮಿ ಸುತಂ ಸ್ವಕೀಯಂ ।
ಕಿಂ ತ್ವೇವಮೇತದ್ವ್ರತಕರ್ಮ ಭೂಯಃ
ಕರೋಮಿ ಸೌಮ್ಯಂ ನರದೇವನಾಥ ॥ ೨೦ ॥

---

೧೮. ಗಂಡನು ಹೇಳಿದ ಈ ಮಾತನ್ನು ಕೇಳಿ, ನೂತನಬಂಗಾರವರ್ಣಳಾದ, ಪುಷ್ಪಸ್ತನಾದಿಗಳುಳ್ಳ, ಚಂದ್ರವದನೆಯಾದ ಆ ಸಂಧ್ಯಾವಳಿಯು ನಿನ್ನ ಪ್ರೀತಿಗೆ ಕಾರಣವಾದ ವ್ರತವನ್ನು ಮಾಡುವೆನು.

೧೯. ನರದೇವನಾದ ನಾಥನೇ! ಯಾವವ್ರತಮಾಡಿದರೆ ಕೀರ್ತಿ, ಯಶಸ್ಸು ಮತ್ತು ಸೌಖ್ಯಗಳು ನಿನ್ನ ಕೀರ್ತಿ ಸಹಿತವಾಗಿ ಸಂಭವಿಸುವುವೋ ಅಂತಹ ಸೌಮ್ಯವಾದ ಈವ್ರತವನ್ನು ಮಾಡುವೆನು. ನಿನಗಾಗಿ ಶರೀರವನ್ನೇ ಬೆಂಕಿಯಲ್ಲಿ ಉರಿಸಲು ಸಿದ್ಧಳಾಗಿರುವೆನು.

೨೦. ಭೂಪಾಲನೇ! ಇದು ಮಾಡಬಾರದುದಲ್ಲ. ನೀನು ಹೇಳಿದರೆ ನನ್ನ ಮಗನನ್ನಾದರೂ ಕೊಲ್ಲುವೆನು. ಹೀಗಿರುವಾಗ ನರದೇವನಾಥ! ಸೌಮ್ಯವಾದ ಈ ವ್ರತಕರ್ಮವನ್ನಾಚರಿಸುವುದೇನು ಹೆಚ್ಚು! ಬೇಕಾದಹಾಗೆ ಮಾಡುವೆನು.

ಇತ್ಯೇವಮುಕ್ತ್ವಾ ರವಿಪುತ್ರಶತ್ರುಂ
ಪ್ರಣಮ್ಯ ತಂ ಚಾರುವಿಶಾಲನೇತ್ರಾ ।
ವ್ರತಂ ಚಕಾರಾಥ ತದಾ ಹಿ ದೇವೀ
ಹ್ಯಶೇಷಪಾಪೌಘವಿನಾಶನಾಯ ॥ ೨೧ ॥

ವ್ರತೇ ತು ದತ್ತೇ ವರಕೃಚ್ಛ್ರಸಂಜ್ಞೇ
ಪ್ರಿಯಾಕೃತೇ ಹರ್ಷಮವಾಪ ರಾಜಾ ।
ಉವಾಚ ವಾಕ್ಯಂ ಕುಶಕೇತುಪುತ್ರೀಂ
ಕೃತಂ ವಚಃ ಸುಭ್ರು ಸಮೀಹಿತಂ ತೇ ॥ ೨೨ ॥

ರಮಸ್ವ ಕಾಮಂ ಮಯಿ ಸನ್ನಿವಿಷ್ಟ-
ಸಂಪೂರ್ಣವಾಂಛಾ ಕರಭೋರು ಹೃಷ್ಟಾ ।
ವಿಮುಕ್ತಕಾರ್ಯಸ್ತವ ಸುಭ್ರು ಹೇತೋ-
ರ್ನಾನ್ಯಾಸ್ತಿ ನಾರೀ ಮಮ ಸೌಖ್ಯಹೇತುಃ ॥ ೨೩ ॥

---

೨೧. ಈರೀತಿಯಾಗಿ ಹೇಳಿ, ಮನೋಹರವು, ವಿಶಾಲವೂ ಆದ ನೇತ್ರಗಳುಳ್ಳ ಸಂಧ್ಯಾವಳಿಯು ಯಮವೈರಿಯಾದ ಆ ರುಕ್ಮಾಂಗದನಿಗೆ ನಮಸ್ಕಾರ ಮಾಡಿ ಆಗ ಸಮಸ್ತ ಪಾಪಸಮೂಹಗಳನ್ನೂ ಕಳೆದುಕೊಳ್ಳುವುದಕ್ಕಾಗಿ ದೇವಿಯು ಕೃಚ್ಛ್ರವ್ರತವನ್ನು ಮಾಡಿದಳು.

೨೨-೨೩. ಸಂಧ್ಯಾವಳಿಯು ಕೃಚ್ಛ್ರವ್ರತವನ್ನು ಮಾಡಿ ರಾಜನಿಗೆ ಧಾರೆಯೆರೆದಳು. ಅವನು ಆದರಿಂದ ಸಂತೋಷಪಟ್ಟು ಬ್ರಹ್ಮಪುತ್ರಿಯಾದ ಮೋಹಿನಿಯನ್ನು ಕುರಿತು ಸುಭ್ರೂ! ನಿನ್ನ ಇಷ್ಟಪ್ರಕಾರ ಸಂಧ್ಯಾವಳಿಯು ವ್ರತವನ್ನಾಚರಿಸಿರುವಳು. ನೀನು ಸಂತೋಷವಾಗಿ ನನ್ನಲ್ಲಿಟ್ಟಿರುವ ಸಂಪೂರ್ಣವಾದ ಅಪೇಕ್ಷೆಯು ತೀರುವವರೆಗೂ ಯಥೇಷ್ಟವಾಗಿ ವಿಹರಿಸು. ನಿನಗೋಸ್ಕರವಾಗಿ ಕರ್ತವ್ಯವನ್ನು ಬಿಟ್ಟಿರುವೆನು. ನನಗೆ ನೀನೇ ಸೌಖ್ಯಕರಳು, ಬೇರೆಯಿಲ್ಲ ಎಂಬುದಾಗಿ ಹೇಳಿದನು.

ಸಾ ತ್ವೇವಮುಕ್ತ್ವಾ ನಿಜನಾಯಕೇನ
ಪ್ರಹರ್ಷಮಭ್ಯೇತ್ಯ ಜಗಾದ ಭೂಪಂ ।
ಜ್ಞಾತ್ವಾ ಭವಂತಂ ಬಹುಕಾಮಯುಕ್ತಂ।
ತ್ರಿವಿಷ್ಟಪಾನ್ನಾಥ ಸಮಾಗತಾಹಂ ॥ ೨೪ ॥

ತ್ಯಕ್ತ್ವಾಮರಾನ್ ದೈತ್ಯಗಣಾಂಶ್ಚ ಸರ್ವಾನ್
ಗಂಧರ್ವಯಕ್ಷೋರಗರಾಕ್ಷಸಾಂಶ್ಚ ।
ಸಂದೃಶ್ಯಮಾನಾನ್ ಮಮ ನಾಥ ಹೇತೋಃ
ಸ್ನೇಹಾನ್ವಿತಾಹಂ ತವ ಮಂದರಾದ್ರೌ ॥ ೨೫ ॥

ಏತತ್ ಕಾಮಫಲಂ ಲೋಕೇ ಯದ್ದ್ವಯೋರೇಕಚಿತ್ತತಾ ।
ಅನ್ಯಚೇತಃಕೃತಃ ಕಾಮಃ ಶವಯೋರಿವ ಸಂಗಮಃ ॥ ೨೬ ॥

ಸಫಲಂ ಹಿ ವಪುರ್ಮೇದ್ಯ ಸಫಲಂ ರೂಪಮೇವ ಹಿ ।
ತ್ವಯಾ ಕಾಮವತಾ ಕಾಂತ ದುರ್ಲಭಂ ಯಜ್ಜಗತ್ತ್ರಯೇ ॥ ೨೭ ॥

---

೨೪-೨೫. ಈರೀತಿಯಾಗಿ ಪತಿಯು ಹೇಳಿದುದನ್ನು ಕೇಳಿ ಆ ಮೋಹಿನಿಯು ಸಂತೋಷಪಟ್ಟು ದೊರೆಗೆ ಹೇಳಿದಳು. ನಾಥ! ನೀನು ಬಹುಕಾಮುಕನೆಂದು ತಿಳಿದು ನಾನು ಎದಿರಿಗೆ ಕಾಣಿಸುತ್ತಿರುವ ದೇವತೆಗಳು, ದೈತ್ಯಸಮೂಹ, ಸಮಸ್ತರಾದ ಗಂಧರ್ವ, ಯಕ್ಷ, ರಾಕ್ಷಸ, ಉರಗ ಇವರನ್ನೆಲ್ಲಾ ಬಿಟ್ಟು ನಿನಗೋಸ್ಕರವಾಗಿ ಮಂದರಾಚಲಕ್ಕೆ ಬಂದು ಅಲ್ಲಿ ನಿನ್ನ ಸ್ನೇಹವನ್ನು ಸಂಪಾದಿಸಿ ನಿನ್ನೊಡನೆ ವಿಹರಿಸಲು ಇಲ್ಲಿಗೆ ಬಂದಿರುವೆನು.

೨೬. ಲೋಕದಲ್ಲಿ ಇಬ್ಬರೂ ಏಕಮನಸ್ಕರಾಗಿರುವುದೇ ಈ ಕಾಮದ ಫಲವು. ಭಿನ್ನಮನಸ್ಕರು ಮಾಡುವ ಕಾಮವು ಶವಗಳಸಂಗಮದಂತೆ ನಿಷ್ಫಲವು.

೨೭. ಕಾಂತನೇ! ಕಾಮುಪಂತನಾದ ನಿನ್ನಿಂದ ನನ್ನ ಶರೀರವು ಈಗ ಸಫಲವಾಯಿತು. ನನ್ನ ಸೌಂದರ್ಯವೂ ಸಫಲವಾಯಿತು. ಇಂತಹ ಸಂಗಮವು ಮೂರುಲೋಕಗಳಲ್ಲಿಯೂ ದುರ್ಲಭವು.

ಪ್ರೋನ್ನತಾಭ್ಯಾಂ ಕುಚಾಭ್ಯಾಂ ಹಿ ಕಾಮಿನೋ ಹೃದಯಂ ಯದಿ ।
ಸಂಶ್ಲಿಷ್ಟಂ ನಹಿ ಶೀರ್ಯೇತ ಮನ್ಯೇ ವಜ್ರಸಮಂ ದೃಢಂ ।
ತದೇವ ಚಾಮೃತಂ ಲೋಕೇ ಯತ್ಪರಂಧ್ರ್ಯಧರಾಸವಂ ॥ ೨೮ ॥

ಕುಚಾಭ್ಯಾಂ ಹೃದಿ ನೀಲಾಭ್ಯಾಂ ಮುಖೇನ ಪರಿಪೀಯತೇ ।
ಏವಮುಕ್ತ್ವಾ ಪರಿಷ್ವಜ್ಯ ರಾಜಾನಂ ರಹಸಿ ಸ್ಥಿತಂ ॥ ೨೯ ॥

ರಮಯಾಮಾಸ ತನ್ವಂಗೀ ಸುಖೇನಾಪಿ ವಿಧಾನತಃ ।
ತಸ್ಯೈವಂ ರಮಮಾಣಸ್ಯ ಮೋಹಿನ್ಯಾ ಸಹಿತಸ್ಯ ಹಿ ॥ ೩೦ ॥

ರುಕ್ಮಾಂಗದಸ್ಯ ಕರ್ಣಾಭ್ಯಾಂ ಪಟಹಧ್ವನಿರಾಗತಃ ।
ಮತ್ತೇಭಕುಂಭಸಂಸ್ಥಸ್ತು ಧರ್ಮಾಂಗವನಿದೇಶತಃ ॥ ೩೧ ॥

ಪ್ರಾತರ್ಹರಿದಿನಂ ಲೋಕಾಸ್ತಿಷ್ಠಧ್ವಂ ತ್ವೇಕಭೋಜನಾಃ ।
ಅಕ್ಷಾರಲವಣಾಃ ಸರ್ವೇ ಹವಿಷ್ಯಾನ್ನನಿಷೇವಿಣಃ ॥ ೩೨ ॥

---

೨೮-೩೧. ಎತ್ತರವಾದ ಕುಚಗಳಿಂದ ಆಲಿಂಗಿತವಾದ ಕಾಮುಕನ ಹೃದಯವು ಕರಗದಿದ್ದಲ್ಲಿ ಅದನ್ನು ಗಟ್ಟಿಯಾದ ವಜ್ರಕ್ಕೆ ಸಮಾನವೆಂದು ತಿಳಿದಿರುವೆನು- ಮುಖದಿಂದ ಪಾನಮಾಡುವ ಸುಂದರಿಯು ಅಧರಾಸವವೇ ಲೋಕದಲ್ಲಿ ಅಮೃತವು ಎಂಬುದಾಗಿ ಹೇಳಿ ಹೃದಯದಲ್ಲಿ ಅಡಗಿದ ಸ್ತನಗಳಿಂದ ಏಕಾಂತದಲ್ಲಿದ್ದ ರಾಜನನ್ನು ಆಲಂಗಿಸಿ, ವಿಧಾನಾನುಸಾರವಾಗಿ ಕೃಶಾಂಗಿಯು ಸುಖದಿಂದ ವಿಹರಿಸಿದಳು.

ಈ ರೀತಿಯಾಗಿ ಮೋಹಿನಿಯೊಡನೆ ವಿಹರಿಸುತ್ತಿರುವ ರುಕ್ಮಾಂಗದರಾಜನ ಕಿವಿಗಳಿಗೆ ಧರ್ಮಾಂಗದನ ಅಪ್ಪಣೆಯಿಂದ ಹೊರಟ ಮದಿಸಿದ ಆನೆಯ ಕುಂಭಸ್ಥಳದಲ್ಲಿನ ಪಟಹಧ್ವನಿಯು ಕೇಳಿಸಿತು.

೩೨-೩೩. ಜನರೇ! ಬೆಳಗ್ಗೆ ಏಕಾದಶಿಯು, ಆದಕಾರಣ ಎಲ್ಲರೂ ಉಪ್ಪಿಲ್ಲದೇ ಹವಿಷ್ಯಾನ್ನಭೋಜಿಗಳಾಗಿ ಈದಿನ ಒಪ್ಪತ್ತೂಟಮಾಡಿರಿ. ಪತ್ನಿಯ

ಅವನೀತಲ್ಪಶಯನಾಃ ಪ್ರಿಯಾಸಂಗವಿವರ್ಜಿತಾಃ |
ಸ್ಮರಧ್ವಂ ದೇವದೇವೇಶಂ ಪುರಾಣಂ ಪುರುಷೋತ್ತಮಂ || ೩೩ ||

ಸಕೃದ್ಭೋಜನಸಂಯುಕ್ತಾ ಉಪವಾಸಂ ಕರಿಷ್ಯಥ |
ಅಕೃತಶ್ರಾದ್ಧನಿಚಯಾ ಅದತ್ತನಸಪಿಂಡಕಾಃ || ೩೪ ||

ಗಯಾಮಗತಪುತ್ರಾಶ್ಚ ಗಚ್ಛಧ್ವಂ ಶ್ರೀಹರೇಃ ಪದಂ |
ಏಷಾ ಕಾರ್ತಿಕಶುಕ್ಲಾಸ್ಯೈ ಹರೇರ್ನಿದ್ರಾವ್ಯಪೋಹನೀ || ೩೫ ||

ಪ್ರಾತರೇಕಾದಶೀ ಪ್ರಾಪ್ತಾ ಮಾ ಕೃಥಾ ಭೋಜನಂ ಕ್ವಚಿತ್ |
ಬ್ರಹ್ಮಹತ್ಯಾನಿ ಪಾಪಾನಿ ಕಾಮಕಾರಕೃತಾನಿ ಚ || ೩೬ ||

ತಾನಿ ಯಾಸ್ಯಂತಿ ಸರ್ವಾಣಿ ಉಪೋಷ್ಯೈನಾಂ ಪ್ರಬೋಧಿನೀಂ |
ಪ್ರಬೋಧಯೇದ್ಧರ್ಮಪರಾನ್ನ್ಯಾಯಾಚಾರಸಮನ್ವಿತಾನ್ || ೩೭ ||

ಹರೇಃ ಪ್ರಬೋಧಮಾಧತ್ತೇ ತೇನೈಷಾ ಬೋಧಿನೀ ಸ್ಮೃತಾ |
ಸಕೃಚ್ಚೋಪೋಷಿತಾ ತ್ವೇತಾ ನಿದ್ರಾಚ್ಛೇದಕರೀ ಹರೇಃ || ೩೮ ||

---

ಸಂಪರ್ಕಮಾಡದೇ ನೆಲಮೇಲೆ ಮಲಗಿರಿ. ಪುರಾತನನೂ, ಪುರುಷೋತ್ತಮನೂ ಆದ ದೇವದೇವೇಶನನ್ನು ಸ್ಮರಿಸಿರಿ.

೩೪-೩೫. ಈದಿನ ಒಪ್ಪತ್ತೂಟಮಾಡಿ ನಾಳೆ ಹರಿದಿನದಲ್ಲಿ ಯಾವ ಶ್ರಾದ್ಧವನ್ನೂ ಮಾಡದೇ ಉಪವಾಸಮಾಡಿರಿ. ಸಪಿಂಡರು ನಿಮಗಾಗಿ ಪಿಂಡ ದಾನಮಾಡದಿದ್ದರೂ, ನಿಮ್ಮ ಮಕ್ಕಳು ಗಯೆಗೆಹೋಗಿ ಶ್ರಾದ್ಧವನ್ನಾಚರಿಸದಿದ್ದರೂ, ನೀವು ಈ ಹರಿದಿನ ವ್ರತಮಾಡುವುದರಿಂದ ವೈಕುಂಠಲೋಕಕ್ಕೆ ಹೋಗುವಿರಿ. ಇದು ಹರಿಯ ಎಚ್ಚತ್ತ ಕಾರ್ತಿಕ ಶುಕ್ಲೈಕಾದಶಿಯು.

೩೬-೩೮. ಬೆಳಗ್ಗೆ ಏಕಾದಶಿಯು ಬರುತ್ತದೆ. ಭೋಜನಮಾಡಬೇಡಿರಿ ಈ ಪ್ರಬೋಧಿನೀ ಎಂಬ ಏಕಾದಶಿಯಲ್ಲಿ ಉಪವಾಸಮಾಡಿದರೆ ಕಾಮಕಾರಕೃತವಾದ ಬ್ರಹ್ಮಹತ್ಯಾದಿಪಾಪಗಳೆಲ್ಲವೂ ಹೋಗುವುವು. ಈ ಏಕಾದಶಿಯು ಧರ್ಮಪರರೂ, ನ್ಯಾಯಾಚಾರಯುಕ್ತರೂ ಆದವರನ್ನು ಮೇಲಕ್ಕೆ ಎತ್ತುವುದು ಮತ್ತು

ಸ್ತನಯೋರ್ನರ್ಭವೇನ್ಮರ್ತ್ಯೋ ನ ಗರ್ಭೇ ಜಾಯತೇ ಪುನಃ ।
ಕುರುಧ್ವಂ ಚಕ್ರಿಣಃ ಪೂಜಾಮಾತ್ಮವಿತ್ತೇನ ಮಾನವಾಃ ॥ ೩೯ ॥

ವಸ್ತ್ರೈಃ ಪುಷ್ಪೈರ್ಧೂಪದೀಪೈರ್ವರಚಂದನಕುಂಕುಮೈಃ ।
ಸಹೃದ್ಯೈಶ್ಚ ಫಲೈರ್ಗಂಧೈರ್ಯಜಧ್ವಂ ಶ್ರೀಹರೇಃ ಪದಂ ॥ ೪೦ ॥

ಯೋ ನ ಕುರ್ಯಾದ್ವಚೋ ಮೇದ್ಯ ಧರ್ಮ್ಯಂ ವಿಷ್ಣುಗತಿಪ್ರದಂ ।
ಸ ಮೇ ದಂಡ್ಯಶ್ಚ ವಧ್ಯಶ್ಚ ನಿರ್ವಾಸ್ಯೋ ವಿಷಯಾದ್ಧ್ರುವಂ ॥ ೪೧ ॥

ಏವಂ ವಿಧಂ ವಾದ್ಯಮಾನೇ ಪಟಹೇ ಮೇಘನಿಸ್ವನೇ ।
ಹಸ್ತಾದವಮುಂಚತ್ತಾಂಬೂಲಂ ಸಕರ್ಪೂರಂ ನೃಪೋತ್ತಮಃ ॥ ೪೨ ॥

---

ಹರಿಗೆ ಎಚ್ಚರಿಕೆಯನ್ನುಂಟುಮಾಡುವುದು. ಆದಕಾರಣ ಇದು ಪ್ರಬೋಧಿನೀ ಎಂದು ಸ್ಮೃತ್ಯಾದಿಗಳಲ್ಲಿ ಉಕ್ತವಾಗಿದೆ.

ಹರಿಯ ನಿದ್ರೆಗೆ ವಿಚ್ಛೇದವನ್ನುಂಟುಮಾಡುವ ಈ ಏಕಾದಶಿಯನ್ನು ಒಂದಾವರ್ತಿ ಉಪವಾಸಮಾಡಿದರೆ ಮನುಷ್ಯನು ಪುನಃ ಸ್ತನ್ಯಪಾನಮಾಡುವು ದಿಲ್ಲ, ಗರ್ಭವಾಸವನ್ನೂ ಸಹ ಮಾಡುವುದಿಲ್ಲ. ಆದಕಾರಣ ಮನುಷ್ಯರೇ! ನೀವು ಸಂಪಾದಿಸಿರುವ ಹಣದಿಂದ ಚಕ್ರಪಾಣಿಯ ಪೂಜೆಯನ್ನು ಮಾಡಿರಿ.

೪೦. ವಸ್ತ್ರ, ಪುಷ್ಪ, ಧೂಪ, ದೀಪ, ಉತ್ತಮಚಂದನ, ಕುಂಕುಮ, ಮನೋಹರಫಲ ಮತ್ತು ಗಂಧಗಳಿಂದ ಶ್ರೀಹರಿಯ ಪಾದವನ್ನು ಪೂಜಿಸಿ.

೪೧. ಈಗ ಧರ್ಮಸಾಧನವೂ, ವಿಷ್ಣುಪ್ರಾಪ್ತಿಕರವೂ ಆದ ಈ ನನ್ನ ಮಾತನ್ನು ಯಾವನು ನಡಯಿಸುವುದಿಲ್ಲವೋ, ಅವನು ಶಿಕ್ಷೆಗೂ ವಧೆಗೂ ಸಹ ಗುರಿಯಾಗುವನು ಮತ್ತು ನನ್ನದೇಶದಿಂದ ಹೊರಕ್ಕೆ ಹೊರಡಿಸಲ್ಪಡುವನು ಖಂಡಿತ.

೪೨. ಈರೀತಿಯಾಗಿ ಮೇಘಧ್ವನಿಯುಳ್ಳ ಪಟಹವು ಸಾರುತ್ತಿರಲು ಅದನ್ನು ಕೇಳಿ ಕರ್ಪೂರಸಹಿತವಾದ ತಾಂಬೂಲವನ್ನು ಕೈಯಿಂದ ಬಿಸುಟನು.

ಮೋಹಿನೀಕುಚಯೋರ್ಲಗ್ನಂ ಹೃದಯಂ ಸ ವಿಕೃಷ್ಯ ವೈ ।
ಉದತಿಷ್ಠನ್ಮಹೀಪಾಲಃ ಶಯ್ಯಾಯಾಂ ರತಿವರ್ಧನಃ ॥ ೪೩ ॥

ಮೋಹಿನೀಂ ಮೋಹಕಾಮಾರ್ತಾಂ ಸಾಂತ್ವಯನ್ ಶ್ಲಕ್ಷ್ಣಯಾ ಗಿರಾ ।
ದೇವಿ ಪ್ರಾತರ್ಹರಿದಿನಂ ಭವಿಷ್ಯತ್ಯಘನಾಶನಂ ॥ ೪೪ ॥

ಸಂಯಮೀಹಂ ಭವಿಷ್ಯಾಮಿ ಕ್ಷಮ್ಯತಾಂ ಕ್ಷಮ್ಯತಾಮಿತಿ ।
ತವಾಜ್ಞಯಾ ಮಯಾ ಕೃಚ್ಛ್ರಂ ಸಂಧ್ಯಾವಲ್ಯಾ ತು ಕಾರಿತಂ ॥ ೪೫ ॥

ಇಯಮೇಕಾದಶೀ ಕಾರ್ಯಾ ಪ್ರಬೋಧಕರಣೀ ಮಯಾ ।
ಅಶೇಷಪಾತಬಂಧಸ್ಯ ಭೇದಿನೀ ಗತಿದಾಯಿನೀ ॥ ೪೬ ॥

ತ್ರಯಾಣಾಮಪಿ ಲೋಕಾನಾಂ ಮಹೋತ್ಸವವಿಧಾಯಿನೀ ।
ತಸ್ಮಾದ್ಧವಿಷ್ಯಂ ಭೋಕ್ಷ್ಯೇಹಂ ನಿಯತೋ ಮತ್ತಗಾಮಿನೀ ॥ ೪೭ ॥

---

೪೩. ಹಾಸಿಗೆಯಮೇಲೆ ವಿಹರಿಸುತ್ತಿದ್ದ ರುಕ್ಮಾಂಗದಭೂಪಾಲನು ತಕ್ಷಣದಲ್ಲಿಯೇ ಮೋಹಿನಿಯ ಕುಚಗಳಿಗೆ ಅಪ್ಪಿಕೊಂಡಿದ್ದ ತನ್ನ ಹೃದಯವನ್ನು ಸೆಳೆದುಕೊಂಡು ಎದ್ದನು.

೪೪-೪೬. ಆಗ ಕಾಮಮೋಹಪೀಡಿತಳಾದ ಮೋಹಿನಿಯನ್ನು ಕುರಿತು ದೇವಿಯೇ! ಬೆಳಗ್ಗೆ ಪಾಪನಾಶಕನಾದ ಹರಿದಿನವು ಬರುತ್ತದೆ. ನಾನು ವ್ರತನಿಯಮವನ್ನು ಧರಿಸುವೆನು, ಕ್ಷಮಿಸು! ಕ್ಷಮಿಸು! ನಿನ್ನ ಅಪ್ಪಣೆಯ ಮೇರೆಗೆ ನಾನು ಕೃಚ್ಛ್ರವನ್ನು ಸಂಧ್ಯಾವಳಿಯಿಂದ ಮಾಡಿಸಿರುವೆನು. ಪ್ರಬೋಧಕರವಾದ ಈ ಏಕಾದಶಿಯು ಅವಶ್ಯಕರ್ತವ್ಯವು. ಇದು ಸಮಸ್ತಪಾಪಗಳನ್ನೂ ಪರಿಹಾರಮಾಡಿ ಸದ್ಗತಿಯನ್ನು ಕೊಡತಕ್ಕದು. ಮೂರುಲೋಕಗಳಿಗೂ ಮಹೋತ್ಸವ ಪ್ರದಾಯಕವು.

ಆದಕಾರಣ ಮತ್ತಗಾಮಿನಿಯೇ! ನಾನು ಈಗ ನಿಯಮದಿಂದ ಹವಿಷ್ಯ ಭೋಜನ ಮಾಡುವೆನು. ವಿಶಾಲನೇತ್ರಳೇ! ನನ್ನೊಡನೆ ನೀನೂ ಸಹ ಉಪ

ಮಯಾ ಸಹ ವಿಶಾಲಾಕ್ಷಿ ತ್ವಂ ಚಾಪಿ ತಮಧೋಕ್ಷಜಂ ।
ಆರಾಧಯ ಹೃಷೀಕೇಶಮುಪವಾಸಪರಾಯಣಾ ।
ಯೇನ ಯಾಸ್ಯತಿ ನಿರ್ವಾಣಂ ದಾಹಪ್ರಲಯವರ್ಜಿತಂ ॥ ೪೮ ॥

ಮೋಹಿನ್ಯುವಾಚ

ಸಾಧೂಕ್ತಂ ಹಿ ತ್ವಯಾ ರಾಜನ್ ಪೂಜನಂ ಚಕ್ರಪಾಣಿನಃ ।
ಜನ್ಮಮೃತ್ಯುಜರಾಭೇದಿ ಕರಿಷ್ಯೇಽಹಂ ತವಾಜ್ಞಯಾ ॥ ೪೯ ॥

ಪ್ರತಿಜ್ಞಾ ಯಾ ತ್ವಯಾ ಪೂರ್ವಂ ಕೃತಾ ಮಂದರಮಸ್ತಕೇ ।
ಕರಪ್ರದಾನಸಹಿತಾ ಭವತಾ ಸುಕೃತಾಂಕಿತಾ ॥ ೫೦ ॥

ತಸ್ಯಾಸ್ತು ಸಮಯಃ ಪ್ರಾಪ್ತೋ ದೀಯತಾಂ ಸ ಹಿ ಮೇ ತ್ವಯಾ ।
ಜನ್ಮಪ್ರಭೃತಿ ಯತ್ಪುಣ್ಯಂ ತ್ವಯಾ ಯತ್ನೇನ ಸಂಚಿತಂ ॥ ೫೧ ॥

---

ವಾಸನಿರತಳಾಗಿ ಇಂದ್ರಿಯಸ್ವಾಮಿಯಾದ ಹರಿಯನ್ನು ಆರಾಧಿಸು. ಅದರಿಂದ ದಾಹಪ್ರಳಯರಹಿತವಾದ ಮೋಕ್ಷಪದವಿಯನ್ನು ಹೊಂದುವೆ ಎಂಬುದಾಗಿ ವಿಶ್ವಾಸಯುಕ್ತವಾದ ಮಾತುಗಳಿಂದ ಸಮಾಧಾನಮಾಡುವವನಾಗಿ ಹೇಳಿದನು.

೪೯. ಮೋಹಿನಿಯು ಹೇಳಿದಳು :—ರಾಜನೇ ! ಒಳ್ಳೆಯ ಮಾತನ್ನು ಹೇಳಿರುವೆ. ಜನನಮರಣ ಮುಪ್ಪುಗಳನ್ನು ಪರಿಹರಿಸುವಂತಹ ಚಕ್ರಪಾಣಿಯ ಪೂಜೆಯನ್ನು ನಿನ್ನ ಅಪ್ಪಣೆಯಮೇರೆ ಮಾಡುವೆನು.

೫೦-೫೨. ಆದರೆ ಹಿಂದೆ ಮಂದರಪರ್ವತಶಿಖರದಲ್ಲಿ ಮನಃಪೂರ್ವಕವಾಗಿ ಮಾಡಿದುದಕ್ಕೆ ಗುರುತಾದ ಕರಪ್ರದಾನಸಹಿತವಾಗಿ ನೀನು ಮಾಡಿರುವ ಪ್ರತಿಜ್ಞೆಯನ್ನು ನೆರವೇರಿಸುವ ಸಮಯವು ಬಂದಿದೆ. ನೀನು ನನಗೆ ಅದನ್ನು ನಡೆಯಿಸಿಕೊಡು. ಒಂದುವೇಳೆ ನೀನು ಈಗ ನನಗೆ ವರವನ್ನು ಕೊಡದಿದ್ದರೆ ಹುಟ್ಟಿದಾಗಿನಿಂದ ಇದುವರೆಗೆ ನೀನು ಪ್ರಯಾಸಪಟ್ಟು ಸಂಪಾದಿಸಿರುವ ಪುಣ್ಯವೆಲ್ಲವೂ ಶೀಘ್ರವಾಗಿ ಹಾಳಾಗುವುದು ಎಂಬುದಾಗಿ ರಾಜನಿಗೆ ಹೇಳಿದಳು.

ತತ್ಸರ್ವಂ ನಶ್ಯತಿ ಕ್ಷಿಪ್ರಂ ನ ದದಾಸಿ ವರಂ ಯದಿ ।

ರುಕ್ಮಾಂಗದ ಉವಾಚ

ಏಹಿ ಚಾರ್ವಾಂಗಿ ಕರ್ತಾಸ್ಮಿ ಯತ್ತೇ ಮನಸಿ ವರ್ತತೇ ॥ ೫೨ ॥

ನಾದೇಯಂ ವಿದ್ಯತೇ ಕಿಂಚಿತ್ತುಭ್ಯಂ ಮೇ ಜೀವಿತಾವಧಿ ।
ಕಿಂಪುನರ್ಗ್ರಾಮವಿತ್ತಾದಿ ಧರಾಯುಕ್ತಂ ಚ ಭಾಮಿನಿ ॥ ೫೩ ॥

ಮೋಹಿನ್ಯುವಾಚ

ನಾಥ ಕಾಂತ ವಿಭೋ ರಾಜನ್ ಜೀವತೇಶ ರತಿಪ್ರಿಯ ।
ನೋಪೋಷ್ಯಂ ವಾಸರಂ ವಿಷ್ಣೋರ್ಭೋಕ್ತವ್ಯಾ ಯದ್ಯಹಂ ಪ್ರಿಯಾ ॥

ನ ಚ ತೇಹಂ ಪ್ರಿಯಾ ರಾಜನ್ ಮುಹೂರ್ತಮಪಿ ಕಾಮಯೇ ।
ನಾದ್ಯಾಪಿ ಮಮ ತೃಪ್ತಿರ್ಹಿ ತ್ವತ್ಸಂಯೋಗಂ ವಿನಾ ಪ್ರಭೋ ॥ ೫೫ ॥

---

ರುಕ್ಮಾಂಗದನು ಹೇಳಿದನು :—ಮನೋಹರಾಂಗಿಯೇ ! ಬಾ ನಿನ್ನಮನಸ್ಸಿನಲ್ಲಿರುವುದನ್ನು ನಡೆಯಿಸಿಕೊಡುವೆನು.

೫೩. ನನ್ನ ಜೀವಿತದವರೆಗೂ ನಿನಗೆ ಕೊಡಬಾರದಾವುದೂ ಇಲ್ಲ. ಹೀಗಿರುವಾಗ ಧರಾಯುಕ್ತವಾದ ಗ್ರಾಮ, ಹಣ ಮುಂತಾದುವು ದೇಯವೆಂದು ಹೇಳುವುದೇನು ? ಖಂಡಿತ ಕೊಡುತ್ತೇನೆ.

೫೪-೫೬. ಮೋಹಿನಿಯು ಹೇಳಿದಳು :—ನಾಥ, ಕಾಂತ, ವಿಭೋ, ಜೀವಿತೇಶ, ರತಿಪ್ರಿಯ ರಾಜನೇ! ನಾನು ನಿನಗೆ ಪ್ರಿಯಳೇ ಆಗಿದ್ದರೆ ಈ ಹರಿದಿನದಲ್ಲಿ ನೀನು ಉಪವಾಸಮಾಡದೇ ಭೋಜನಮಾಡಬೇಕು. ರಾಜನೇ ! ನಿನ್ನಪ್ರಿಯಳಾದ ನಾನು ಒಂದು ಮುಹೂರ್ತವೂ ಸಹ ನಿನ್ನೊಡನೆ ವಿಹರಿಸದಿರಲಾರೆನು. ನಿನ್ನ ಸಂಭೋಗದಲ್ಲಿ ಈಗಲೂ ನನಗೆ ತೃಪ್ತಿಯಾಗಿಲ್ಲವಾದಕಾರಣ ನಿನ್ನನ್ನು ಬಿಟ್ಟಿರಲಾರೆನು.

**ತಸ್ಮಾನ್ಮಾಂ ಯದಿ ವಾಂಛೇಥಾ ಭೋಕ್ತುಂ ಸತ್ಯಪರಾಯಣ ।**
**ತದಾ ತ್ಯಜೋಪವಾಸಂ ಹಿ ಭುಜ್ಯತಾಂ ಹರಿವಾಸರೇ ॥ ೫೬ ॥**

**ಏಷ ಏವ ವರೋ ದೇಯೋ ಯೋ ಮಯಾ ಪ್ರಾರ್ಥಿತಃ ಪುರಾ ।**
**ನ ಚೇದ್ದಾಸ್ಯಸಿ ರಾಜೇಂದ್ರ ಭೂತ್ವಾನೃತವಚಾ ಭವಾನ್ ॥ ೫೭ ॥**

**ಯಾಸ್ಯತೇ ನರಕೇ ಘೋರೇ ಯಾವದಾಭೂತಸಂಪ್ಲವಃ ।**

ರಾಜೋವಾಚ

**ನೈವಂ ತ್ವಂ ವದ ಕಲ್ಯಾಣಿ ನೇದಂ ತ್ವಯ್ಯುಪಪದ್ಯತೇ ॥ ೫೮ ॥**

**ವಿಧೇಶ್ಚ ತನಯಾ ಭೂತ್ವಾ ಧರ್ಮವಿಘ್ನಂ ಕರೋಷಿ ಕಿಂ ।**
**ಜನ್ಮಪ್ರಭೃತ್ಯಹಂ ನೈವ ಭುಕ್ತವಾನ್ ಹರಿವಾಸರೇ ॥ ೫೯ ॥**

**ಸ ಚಾದ್ಯಾಹಂ ಕಥಂ ಭೋಕ್ತಾ ಸಂಜಾತಪಲಿತಃ ಶುಭೇ ।**
**ಯೌವನಾತೀತಮರ್ತ್ಯಸ್ಯ ಕ್ಷೀಣೇಂದ್ರಿಯಬಲಸ್ಯ ಚ ॥ ೬೦ ॥**

---

ಆದಕಾರಣ ಸತ್ಯಪರಾಯಣನೇ! ನೀನು ನನ್ನನ್ನು ಭೋಗಿಸಲಿಚ್ಛಿಸುವು ದಾದರೆ ಉಪವಾಸವನ್ನು ಬಿಡು, ಹರಿದಿನದಲ್ಲಿ ಊಟಮಾಡು.

೫೭-೫೮. ಈ ವರವೇ ಹಿಂದೆ ನಾನು ಪ್ರಾರ್ಥಿಸಿಕೊಂಡುದು. ಅದನ್ನೇ ಈಗ ನೀನು ಕೊಡಬೇಕು. ರಾಜೇಂದ್ರನೇ! ಕೊಡದಿದ್ದರೆ ಸುಳ್ಳುಗಾರನಾಗಿ ನೀನು ಪ್ರಳಯಪರ್ಯಂತವಾಗಿ ಘೋರನರಕದಲ್ಲಿ ಬೀಳಬೇಕಾಗುವುದು.

ರಾಜನು ಹೇಳಿದನು :—ಶೋಭನೆಯೇ! ನೀನು ಹೀಗೆ ಹೇಳಬೇಡ. ಇದು ನಿನ್ನಂತಹವಳಿಗೆ ಯೋಗ್ಯವಲ್ಲ ಬ್ರಹ್ಮನ ಮಗಳಾಗಿ ಧರ್ಮವಿಘ್ನವನ್ನು ಮಾಡು ವೆಯಾ ಏನು? ಹುಟ್ಟಿದಾಗಿನಿಂದಲೂ ನಾನು ಹರಿದಿನದಲ್ಲಿ ಊಟಮಾಡಿದವನಲ್ಲ.

೬೦-೬೨. ಅಂತಹ ನಾನು ಕೂದಲುನರೆತಮೇಲೆ ಈಗ ಹೇಗೆ ಊಟ ಮಾಡಲಿ? ಯೌವನವು ಹೋಗಿ ಮುಪ್ಪುಬಂದು ಇಂದ್ರಿಯಶಕ್ತಿಯು ಕ್ಷೀಣವಾಗಿ ರುವ ಮನುಷ್ಯನಿಗೆ ಗಂಗಾಯಾತ್ರೆ ಅಥವಾ ಹರಿಪೂಜೆಯು ಕರ್ತವ್ಯ. ನಾನು

ಸ್ವರ್ಣದೀಸೇವನಂ ಯುಕ್ತಮಥವಾ ಹರಿಪೂಜನಂ ।
ನ ಕೃತಂ ಯನ್ಮಯಾ ಬಾಲ್ಯೇ ಯೌವನೇ ನ ಕೃತಂ ಚ ಯತ್ ॥ ೬೧ ॥

ತದಹಂ ಕ್ಷೀಣವೀರ್ಯಸ್ತು ಕಥಂ ಕುರ್ಯಾಜ್ಜುಗುಪ್ಸಿತಂ ।
ಪ್ರಸೀದ ಚಪಲಾಪಾಂಗಿ ಪ್ರಸೀದ ವರವರ್ಣಿನಿ ॥ ೬೨ ॥

ಮಾ ಕುರುಷ್ವ ವ್ರತೇ ಭಂಗಂ ದಾತಾಹಂ ರಾಜ್ಯಸಂಪದಾಂ ।
ಅಥವಾ ನೇಚ್ಛಸಿ ತ್ವಂ ತತ್ಕರೋಮ್ಯನ್ಯತ್ಸುಲೋಚನೇ ॥ ೬೩ ॥

ಆರೋಪಯಿತ್ವಾ ಶಿಬಿಕಾಂ ವಿಮಾನಪ್ರತಿಮಾಂ ಶುಭಾಂ ।
ಯತ್ರೇಚ್ಛಸಿ ನಯಿಷ್ಯಾಮಿ ಪಾದಚಾರೀ ಕಲತ್ರಯುಕ್ ॥ ೬೪ ॥

ಯದಿ ತಚ್ಚಾಪಿ ನೈಚ್ಛಸ್ತ್ವಂ ವಿಮಾನಂ ಹಿ ಕೃತಂ ಮಯಾ ।
ತರ್ಹಿ ಸ್ವರ್ಣಮಯೌ ಸ್ತಂಭೌ ಕೃತ್ವಾ ವಿದ್ರುಮಭೂಷಿತೌ ॥ ೬೫ ॥

ಮುಕ್ತಾಫಲಮಯೀಂ ದೋಲಾಂ ಕರಿಷ್ಯೇ ತ್ವತ್ಕೃತೇ ಪ್ರಿಯೇ ।
ತತ್ರ ತ್ವಾಂ ದೋಲಯಿಷ್ಯಾಮಿ ಬಹೂನ್ಮಾಸಾನಹರ್ನಿಶಂ ॥ ೬೬ ॥

---

ಬಾಲ್ಯ ಯೌವ್ವನಗಳಲ್ಲಿ ಮಾಡದಿರುವ ನಿಂದಿತಕೃತ್ಯವನ್ನು ಸಾಮರ್ಥ್ಯಹೀನನಾಗಿರುವ ಈ ಅವಸ್ಥೆಯಲ್ಲಿ ಹೇಗೆ ಮಾಡಲಿ? ಚಪಲಾಕ್ಷಿಯೇ! ಪ್ರಸನ್ನಳಾಗು! ವರವರ್ಣಿನಿಯೇ! ಪ್ರಸನ್ನಳಾಗು!

೬೩. ವ್ರತಭಂಗವನ್ನು ಮಾಡಿಸಬೇಡ, ನಾನು ರಾಜ್ಯಸಂಪತ್ತುಗಳನ್ನು ಕೊಡುವೆನು. ಅದನ್ನು ನೀನು ಅಪೇಕ್ಷಿಸದಿದ್ದರೆ ಬೇರೆ ಏನನ್ನಾದರೂ ಮಾಡುವೆನು.

೬೪. ವಿಮಾನಸದೃಶವಾದ, ಶುಭವಾದ ಪಲ್ಲಕ್ಕಿಯಲ್ಲಿ ನಿನ್ನನ್ನು ಕೂಡಿಸಿ ನೀನು ಅಪೇಕ್ಷಿಸುವ ಸ್ಥಳಕ್ಕೆ ಹೆಂಡತಿಯುಸಹಿತ ಪಾದಚಾರಿಯಾಗಿ ಒಯ್ಯುವೆನು.

೬೫-೬೬. ನನ್ನಿಂದ ರಚಿಸಲ್ಪಟ್ಟ ಆ ವಿಮಾನವನ್ನೂ ನೀನು ಅಪೇಕ್ಷಿಸದಿದ್ದರೆ ಹವಳದಿಂದಲಂಕೃತವಾದ ಎರಡು ಬಂಗಾರದ ಕಂಭಗಳನ್ನು ಸ್ಥಾಪಿಸಿ ನಿನಗೋಸ್ಕರವಾಗಿ ಮುತ್ತಿನ ತೊಟ್ಟಿಲನ್ನು ಕಟ್ಟಿ, ಅದರಲ್ಲಿ ನಿನ್ನನ್ನು ಕುಳ್ಳಿರಿಸಿ, ಹಗಲುರಾತ್ರಿಗಳಲ್ಲಿಯೂ ಬಹುತಿಂಗಳುಕಾಲ ತೂಗುವೆನು.

ವ್ರತಭಂಗಂ ವರಾರೋಹೇ ಮಾ ಕುರುಷ್ವ ಮಮ ಪ್ರಿಯೇ ।
ವರಂ ಶ್ವಪಚಮಾಂಸಂ ಹಿ ಶ್ವಮಾಂಸಂ ವಾ ವರಾನನೇ ॥ ೬೭ ॥

ಆತ್ಮನೋ ವಾ ನರೈರ್ಭುಕ್ತಂ ಯೈರ್ಭುಕ್ತಂ ಹರಿವಾಸರೇ ।
ತ್ರೈಲೋಕ್ಯಘಾತಿನಃ ಪಾಪಂ ಮೈಥುನೇ ಶಶಿನಃ ಕ್ಷಯೇ ॥ ೬೮ ॥

ನರಸ್ಯ ಸಂಚರೇತ್ಪಾಪಂ ಭೂತಾನಾಂ ಕ್ಷೌರಕರ್ಮಣಿ ।
ಭೋಜನೇ ವಾಸರೇ ವಿಷ್ಣೋಸ್ತೈಲೇ ಷಷ್ಠ್ಯಾಂ ವ್ಯವಸ್ಥಿತೇ ॥ ೬೯ ॥

ಲವಣೇ ತು ತೃತೀಯಾಯಾಂ ಸಪ್ತಮ್ಯಾಂ ಪಿಶಿತೇ ಶುಭೇ ।
ಆಜ್ಯೇಷು ಪೌರ್ಣಮಾಸ್ಯಾಂ ವೈ ಸುರಾಯಾಂ ರವಿಸಂಕ್ರಮೇ ॥ ೭೦ ॥

ಗೋಚಾರಸ್ಯ ಪ್ರಲೋಪೇ ಚ ಕೂಟಸಾಕ್ಷ್ಯಪ್ರದಾಯಕೇ ।
ನಿಕ್ಷೇಪಹಾರಕೇ ವಾಪಿ ಕುಮಾರೀವಿಘ್ನಕಾರಕೇ ॥ ೭೧ ॥

---

೬೭ ೬೩. ಪ್ರಿಯೇ! ನನ್ನ ವ್ರತಭಂಗವನ್ನು ಮಾತ್ರ ಮಾಡಬೇಡ. ವರಾನನೆಯೇ! ಏಕಾದಶಿಯದಿನ ಭೋಜನಮಾಡುವುದಕ್ಕಿಂತ ಶ್ವಪಚಮಾಂಸ ನಾಯಿಮಾಂಸ, ತನ್ನಮಾಂಸ ಇವುಗಳನ್ನು ತಿನ್ನುವುದಾದರೂ ಒಳ್ಳೆಯದು.

ಮೂರು ಲೋಕಗಳನ್ನೇ ನಾಶಪಡಿಸುವವನಿಗೆ ಬರುವಪಾಪ, ಅಮಾವಾಸ್ಯೆಯದಿನ ಸಂಭೋಗಮಾಡಿದರೆ, ಚತುರ್ದಶಿಯದಿನ ಕ್ಷೌರಮಾಡಿಸಿಕೊಂಡರೆ, ಹರಿದಿನದಲ್ಲಿ ಭೋಜನಮಾಡಿದರೆ, ಷಷ್ಠಿಯದಿವಸ ಅಭ್ಯಂಜನಮಾಡಿಕೊಂಡರೆ ಬರುವಪಾಪವು, ತದಿಗೆಯದಿನ ಉಪ್ಪಿನಲ್ಲಿಯೂ, ಸಪ್ತಮಿಯದಿನ ಮಾಂಸದಲ್ಲಿಯೂ, ಪೂರ್ಣಿಮಿಯದಿನ ತುಪ್ಪಗಳಲ್ಲಿಯೂ, ಸಂಕ್ರಮಣ ಪರ್ವಕಾಲದಲ್ಲಿ ಮದ್ಯದಲ್ಲಿಯೂ, ಗೋಚಾರವು ಲುಪ್ತವಾದಾಗಲೂ, ಸುಳ್ಳುಸಾಕ್ಷಿ ಹೇಳುವವನಲ್ಲಿಯೂ, ನಿಕ್ಷೇಪವನ್ನಪಹರಿಸುವವನಲ್ಲಿಯೂ, ಕುಮಾರಿಗೆ ವಿಘ್ನಮಾಡುವವನಲ್ಲಿಯೂ, ನಂಬಿಕೆದ್ರೋಹಮಾಡುವವನಲ್ಲಿಯೂ, ಕರುವು ಸತ್ತಮೇಲೆ ಹಸುವನ್ನು

ವಿಶ್ವಸ್ತಘಾತಕೇ ಚಾಪಿ ಮೃತವತ್ಸಾಪ್ರದೋಗ್ಧರಿ ।
ದದಾಮೀತಿ ದ್ವಿಜಾಗ್ರ್ಯಾಯ ಪ್ರತಿಶ್ರುತ್ಯ ನ ದಾತರಿ ॥ ೭೨ ॥

ಮಣಿಕೂಟೇ ತುಲಾಕೂಟೇ ಕನ್ಯಾನೃತೆಗವಾನೃತೇ ।
ಯತ್ಪಾತಕಂ ತದನ್ನೇ ಹಿ ಸಂಸ್ಥಿತಂ ಹರಿವಾಸರೇ ॥ ೭೩ ॥

ತದ್ವಿದ್ವಾಂಶ್ಚಾರುನಯನೇ ಕಥಂ ಭೋಕ್ಷ್ಯಾಮಿ ಪಾತಕಂ ।
ಮೋಹಿನ್ಯುವಾಚ
ಏಕಭಕ್ತೇನ ನಕ್ತೇನ ತಥೈವಾಯಾಚಿತೇನ ಚ ॥ ೭೪ ॥

ಉಪವಾಸೇನ ರಾಜೇಂದ್ರ ದ್ವಾದಶೀಂ ನ ಹಿ ಲಂಘಯೇತ್ ।
ಗುರ್ವಿಣೀನಾಂ ಗೃಹಸ್ಥಾನಾಂ ಕ್ಷೀಣಾನಾಂ ರೋಗಿಣಾಂ ತಥಾ ॥ ೭೫ ॥

ಶಿಶೂನಾಂ ವಲಿಗಾತ್ರಾಣಾಂ ನ ಯುಕ್ತಂ ಸಮುಪೋಷಣಂ ।
ಯಜ್ಞಭೋಗೋದ್ಯತಾನಾಂ ಚ ಸಂಗ್ರಾಮಕ್ಷಿತಿಸೇವಿನಾಂ ॥ ೭೬ ॥

---

ಕರೆಯುವವನಲ್ಲಿಯೂ, ದ್ವಿಜಶ್ರೇಷ್ಠನಿಗೆ ಕೊಡುತ್ತೇನೆಂದು ಹೇಳಿಯೂ ಕೊಡದಿರುವವನಲ್ಲಿಯೂ, ಮಣಿಕೂಟ, ತುಲಾಕೂಟ, ಕನ್ಯಾನೃತ, ಗವಾನೃತಗಳಲ್ಲಿಯೂ ಸಹ ಯಾವಪಾಪವಿರುವುದೋ ಅಂತಹ ಪಾಪವು ಹರಿದಿನದಲ್ಲಿ ಅನ್ನವನ್ನಾಶ್ರಯಿಸಿರುತ್ತದೆ.

೭೪-೭೭. ಸುಂದರಾಕ್ಷಿಯೇ! ಇದನ್ನು ತಿಳಿದಿರುವ ನಾನು ಪಾಪಭೂಯಿಷ್ಠವಾದ ಅನ್ನವನ್ನು ಹೇಗೆ ತಿನ್ನಲಿ?

ಮೋಹಿನಿಯು ಹೇಳಿದಳು :—ರಾಜೇಂದ್ರನೇ! ಏಕಭುಕ್ತ, ನಕ್ತ ಮತ್ತು ಅಯಾಚಿತವ್ರತಗಳು, ಉಪವಾಸ ಇವುಗಳಿಂದ ದ್ವಾದಶಿಯನ್ನುಲ್ಲಂಘಿಸಬಾರದು. ಆದರೆ ಗರ್ಭಿಣಿಸ್ತ್ರೀಯರು, ಗೃಹಸ್ಥರು, ಅಶಕ್ತರು, ರೋಗಿಗಳು, ಮಕ್ಕಳು, ಮತ್ತು ಮುದುಕರು ಇವರು ಉಪವಾಸಮಾಡುವುದು ಯುಕ್ತವಲ್ಲ ಮತ್ತು ಯಜ್ಞದೀಕ್ಷಿತರು, ಭೋಗದಲ್ಲುದ್ಯುಕ್ತರು, ಯುದ್ಧದಲ್ಲಿ ತೊಡಗಿರುವವರು,

ಪತಿವ್ರತಾನಾಂ ರಾಜೇಂದ್ರ ನ ಯುಕ್ತಂ ಸಮುಪೋಷಣಂ ।
ಏತನ್ಮೇ ಗೌತಮಃ ಪ್ರಾಹ ಸ್ಥಿತಾಯಾ ಮಂದರಾಚಲೇ ॥ ೭೭ ॥

ನಾವ್ರತೇನ ದಿನಂ ವಿಷ್ಣೋರ್ನೇಯಂ ಮನುಜಸತ್ತಮ ।
ತೇ ಗೃಹಸ್ಥಾ ದ್ವಿಜಾಗ್ರೇಯಾ ಯೇಷಾಮಗ್ನಿಪರಿಗ್ರಹಃ ॥ ೭೮ ॥

ರಾಜಾನಸ್ತೇ ತು ವಿಜ್ಞೇಯಾ ಯೇ ಪ್ರಜಾಪಾಲನೇ ಸ್ಥಿತಾಃ ।
ಗುರ್ವಿಣೀ ಹ್ಯಷ್ಟಮಾಸೀ ಯಾ ಶಿಶವಶ್ಚಾಷ್ಟವತ್ಸರಾಃ ॥ ೭೯ ॥

ಅತಿಲಂಘನಿನಃ ಕ್ಷೀಣಾ ವಲಿಗಾತ್ರಾಸ್ತು ವಾರ್ಧಕಾಃ ।
ಯೇ ವಿವಾಹಾದಿಮಾಂಗಲ್ಯಕರ್ಮವ್ಯಗ್ರಾ ಮಹೋತ್ಸವಾಃ ॥ ೮೦ ॥

ನಿವೃತ್ತಾಶ್ಚ ಪ್ರವೃತ್ತೇಭ್ಯೋ ಯಜ್ಞಾನಾಂ ಚೋದ್ಯತಾ ಹಿ ತೇ ।
ತ್ರಿವಿಧೇನ ಪುರಾಣೇನ ಭರ್ತುರ್ಯರ್ಾ ಸ್ತ್ರೀ ಹಿತೇ ರತಾ ॥ ೮೧ ॥

ಪತಿವ್ರತಾ ತು ಸಾ ಜ್ಞೇಯಾ ಯೋನಿಸಂರಕ್ಷಣಾ ತಥಾ ।
ಕಿಮನ್ಯೈರ್ಬಹುಭಿರ್ಭೂಪ ವಾಕ್ಯಾಲಾಪಕೃತೈರ್ಮಯಾ ॥ ೮೨ ॥

---

ಲೋಕಸೇವಾನಿರತರು ಮತ್ತು ಪತಿವ್ರತೆಯರೂ ಸಹ ಉಪವಾಸಮಾಡುವುದು ಯುಕ್ತವಲ್ಲ, ಈ ತತ್ವವನ್ನು ಮಂದರಾಚಲದಲ್ಲಿದ್ದ ನನಗೆ ಗೌತಮನು ಹೇಳಿದನು.

೭೮. ಮನುಜಶ್ರೇಷ್ಠನೇ! ವ್ರತವನ್ನಾಚರಿಸದೇ ಹರಿದಿನವನ್ನು ಕಳೆಯಬಾರದು. ದ್ವಿಜರೆದುರಿಗೆ ಅಗ್ನಿಯನ್ನು ಪರಿಗ್ರಹಿಸಿರುವವರೇ ಗೃಹಸ್ಥರು.

೭೯.೮೨. ಪ್ರಜೆಗಳನ್ನು ಕಾಪಾಡುವುದರಲ್ಲಾಸಕ್ತರಾದವರೇ ರಾಜರೆನಿಸುವರು, ಎಂಟುತಿಂಗಳಾದವಳೇ ಗರ್ಭಿಣಿಯು, ಎಂಟುವರ್ಷದವರೇ ಮಕ್ಕಳು, ಅತಿಲಂಘನಿಗಳೇ ಅಶಕ್ತರು ದೇಹದಲ್ಲಿ ಸುಕ್ಕುಂಟಾದವರೇ ಮುದುಕರು, ವಿವಾಹ ಮುಂತಾದ ಶುಭಕರ್ಮಗಳಲ್ಲಿ ವ್ಯಗ್ರಚಿತ್ತರೇ ಮಹೋತ್ಸವನಿರತರು, ಪ್ರವೃತ್ತ ಕರ್ಮಗಳಿಂದ ನಿವೃತ್ತರೇ ಯಜ್ಞಕರ್ಮಗಳಲ್ಲುದ್ಯುಕ್ತರು, ತ್ರಿಕರಣಗಳಿಂದಲೂ ಪತಿಯ ಹಿತದಲ್ಲಿ ನಿರತಳಾದವಳೇ ಪತಿವ್ರತೆಯು ಮತ್ತು ಯೋನಿರಕ್ಷಣೆಯನ್ನು ಮಾಡುವವಳೂ ಸಹ ಪತಿವ್ರತೆಯು. ದೊರೆಯೇ! ನಾನು ಬೇರೆ ಬಹುಮಾತುಗಳನ್ನಾಡುವುದರಿಂದೇನು ಫಲ?

ಭೋಜನೇ ತು ಕೃತೇ ಪ್ರೀತಿರೇಕಾದಶ್ಯಾಂ ತ್ವಯಾ ಮಮ |
ನ ಪ್ರೀತಿರ್ಯದಿ ಮೇ ಛಿತ್ವಾ ಶಿರಃ ಸ್ವಂ ಹಿ ಪ್ರಯಚ್ಛಸಿ || ೮೩ ||

ನ ಕರಿಷ್ಯಸಿ ಚೇದ್ರಾಜನ್ ಭೋಜನಂ ಹರಿವಾಸರೇ |
ತದಾ ಹ್ಯಸತ್ಯವಚನೋ ದೇಹಂ ನ ಸ್ಪರ್ಶಯಾಮಿ ತೇ || ೮೪ ||

ವರ್ಣಾನಾಮಾಶ್ರಮಾಣಾಂ ಹಿ ಸತ್ಯಂ ರಾಜೇಂದ್ರ ಪೂಜ್ಯತೇ |
ವಿಶೇಷಾದ್ಭೂಮಿಪಾಲಾನಾಂ ತ್ವದ್ವಿಧಾನಾಂ ಮಹೀಪತೇ || ೮೫ ||

ಸತ್ಯೇನ ಸೂರ್ಯಸ್ತಪತಿ ಶಶೀ ಸತ್ಯೇನ ರಾಜತೇ |
ಸತ್ಯೇ ಸ್ಥಿತಾ ಕ್ಷಿತಿರ್ಭೂಪ ಸತ್ಯಂ ಧಾರಯತೇ ಜಗತ್ || ೮೬ ||

ಸತ್ಯೇನ ವಾಯುರ್ವಹತಿ ಸತ್ಯೇನ ಜ್ವಲತೇ ಶಿಖೀ |
ಸತ್ಯಾಧಾರಮಿದಂ ಸರ್ವಂ ಜಗತ್‌ಸ್ಥಾವರಜಂಗಮಂ || ೮೭ ||

---

೮೩. ನೀನು ಏಕಾದಶಿಯದಿನದಲ್ಲಿ ಭೋಜನಮಾಡಿದರೆ ನನಗೆ ಸಂತೋಷವಾಗುವುದು. ಹಾಗೆ ಮಾಡದೇ ನಿನ್ನ ತಲೆಯನ್ನು ಕತ್ತರಿಸಿ ನನಗೆ ಕೊಟ್ಟರೂ ನನಗೆ ಸಂತೋಷವಾಗುವುದಿಲ್ಲ.

೮೪. ರಾಜನೇ! ಏಕಾದಶಿಯದಿನದಲ್ಲಿ ಊಟಮಾಡದಿದ್ದರೆ ನೀನು ಸುಳ್ಳುಗಾರನಾಗುವಿಯಾದಕಾರಣ ನಿನ್ನ ದೇಹವನ್ನು ನಾನು ಮುಟ್ಟುವುದಿಲ್ಲ.

೮೫. ರಾಜೇಂದ್ರನೇ! ಸಕಲವರ್ಣಾಶ್ರಮಗಳಲ್ಲಿಯೂ ಸತ್ಯವಚನವನ್ನು ಪಾಲಿಸುವುದು ಉತ್ತಮಧರ್ಮವು. ಆದರಲ್ಲಿಯೂ ನಿನ್ನಂತಹ ದೊರೆಗಳಿಗೆ ವಿಶೇಷವಾಗಿ ಸತ್ಯನುಡಿಯಾವಶ್ಯಕವು.

೮೬. ಸತ್ಯದಿಂದಲೇ ಸೂರ್ಯನು ತಪಿಸುತ್ತಿರುವನು. ಚಂದ್ರನೂ ಅದರಿಂದಲೇ ಬೆಳಗುತ್ತಿರುವನು. ಸತ್ಯದಲ್ಲಿಯೇ ಭೂಮಿಯು ನಿಂತಿದೆ. ಜಗತ್ತೂ ಸತ್ಯವನ್ನೇ ಧರಿಸಿದೆ.

೮೭. ಸತ್ಯದಿಂದಲೇ ಗಾಳಿ ಬೀಸುತ್ತಿದೆ ಸತ್ಯದಿಂದಲೇ ಅಗ್ನಿಯು ಉರಿಯುತ್ತಿದೆ. ಈ ಚರಾಚರಾತ್ಮಕ ಪ್ರಪಂಚವೆಲ್ಲವೂ ಸತ್ಯದ ಮೇಲೆಯೇ ನಿಂತಿದೆ.

ನ ಸತ್ಯಾಚ್ಚಲತೇ ಸಿಂಧುರ್ನ ವಿಂಧ್ಯೋ ವರ್ಧತೇ ನೃಪ ।
ನ ಗರ್ಭಂ ಯುವತೀ ಧತ್ತೇ ವೇಲಾತೀತಂ ಕದಾಚನ ॥ ೮೮ ॥

ಸತ್ಯೇ ಸ್ಥಿತಾ ಹಿ ತರವಃ ಫಲಪುಷ್ಪಪ್ರದರ್ಶಿನಃ ।
ದಿವ್ಯಾದಿಸಾಧನಂ ನ್ಯಾಣಾಂ ಸತ್ಯಾಧಾರಂ ಮಹೀಪತೇ ॥ ೮೯ ॥

ಅಶ್ವಮೇಧಸಹಸ್ರೇಭ್ಯಃ ಸತ್ಯಮೇವ ವಿಶಿಷ್ಯತೇ ।
ಮದಿರಾಪಾನತುಲ್ಯೇನ ಕರ್ಮಣಾ ಲಿಪ್ಯತೇಽನೃತಾತ್ ॥ ೯೦ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ರುಕ್ಮಾಂಗದ
ಸಲ್ಲಾಪೋ ನಾಮ ತ್ರಯೋವಿಂಶೋಽಧ್ಯಾಯಃ

---

೮೮. ಸತ್ಯದಿಂದಲೇ ಸಮುದ್ರವು ಚಲಿಸದೇ ನಿಂತಿದೆ. ಅದರಿಂದಲೇ ವಿಂದ್ಯಾದಿಪರ್ವತವು ವೃದ್ಧಿಯಾಗದೆ ಇದ್ದಂತೆಯೇ ಇದೆ. ಅದರಿಂದಲೇ ಯುವತಿಯು ಯಾವಾಗಲೂ ಎಲ್ಲೆಯನ್ನು ಮೀರಿ ಗರ್ಭಧಾರಣೆಮಾಡುವುದಿಲ್ಲ.

೮೯. ಸತ್ಯಸ್ಥಿತವಾದ ವೃಕ್ಷಗಳು ಫಲಪುಷ್ಪಗಳನ್ನು ಕೊಡುತ್ತವೆ. ಮನುಷ್ಯರಿಗೆ ಸತ್ಯಾಧಾರವೇ ಸ್ವರ್ಗಾದಿ ಸಾಧನವು.

೯೦. ಸಾವಿರಾರು ಅಶ್ವಮೇಧಯಾಗಗಳಿಗಿಂತಲೂ ಸತ್ಯವೇ ಹೆಚ್ಚಿನದು. ಸುಳ್ಳುಹೇಳುವುದರಿಂದ ಮದ್ಯಪಾನಕ್ಕೆ ಸಮಾನವಾದ ಪಾಪವನ್ನು ಹೊಂದುವನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ರುಕ್ಮಾಂಗದನ ಸಂಭಾಷಣೆ
ಯೆಂಬ ಇಪ್ಪತ್ತುಮೂರನೆಯ ಅಧ್ಯಾಯವು ಮುಗಿದುದು.

## ವಿಷಯ ಸಂಗ್ರಹ

ಮೋಹಿನಿಯು ರುಕ್ಮಾಂಗದನ ಮಾತನ್ನು ಕೇಳಿ ಬ್ರಾಹ್ಮಣನಿಗೆ ಮಾತ್ರ ವ್ರತಾದಿಗಳು ವಿಹಿತವು, ರಾಜನಿಗೆ ಅವು ಕರ್ತವ್ಯವಲ್ಲ ಮುಂತಾಗಿ ಹೇಳಿ ಹಾಗೆ ಕೃಚ್ಛ್ರವನ್ನಾಚರಿಸಬೇಕೆಂವರೆ ಜೇಷ್ಠಪತ್ನಿಯು ಅದನ್ನಾಚರಿಸಲಿ. ನೀನು ನನ್ನೊಡನೆ ಭೋಗಿಸು ಎಂದು ರುಕ್ಮಾಂಗದನಿಗೆ ಹೇಳಿದಳು. ಅದರಂತೆ ಅವನು ಹಿರಿಯ ಹೆಂಡತಿಯಾದ ಸಂಧ್ಯಾವಳೀ ದೇವಿಗೆ ಈ ವಿಷಯವನ್ನು ತಿಳಿಸಲಾಗಿ ಆಕೆಯು ಆ ವ್ರತವನ್ನನುಷ್ಠಾನ ಮಾಡಿದಳು. ರಾಜನು ಮೋಹಿನಿಯೊಡನೆ ಭೋಗಿಸುತ್ತಿರುವಾಗ "ನಾಳೆಯ ದಿನ ಏಕಾದಶೀ ಈ ದಿನ ಜನರೆಲ್ಲರೂ ಏಕಭುಕ್ತವನ್ನಾಚರಿಸಿ ಸಂಭೋಗಾದಿಗಳನ್ನು ಬಿಟ್ಟು ಹರಿದಿನ ವ್ರತವನ್ನಾಚರಿಸಲೇ ಬೇಕು" ಎಂಬುದಾಗಿ ಧರ್ಮಾಂಗದನು ಸಾರಿದುದು ಕೇಳಿಸಿತು. ತಕ್ಷಣವೇ ಅವನು ಮೋಹಿನಿಯ ಸಂಪರ್ಕವನ್ನು ಬಿಟ್ಟು ಎದ್ದು ಏಕಾದಶೀ ವ್ರತಮಹಿಮೆಯನ್ನು ಮೋಹಿನಿಗೆ ಹೇಳಿ ಅದನ್ನಾಚರಿಸಲು ಅಪ್ಪಣೆಯನ್ನು ಬೇಡಿದನು. ಮೋಹಿನಿಯು ಹಿಂದೆ ಕೇಳಿದ್ದ ವರವನ್ನು ಸಾಧಿಸಲು ಇದೇ ಸಮಯವೆಂದು ಅರಿತು ನೀನು ಹಿಂದೆ ಪ್ರತಿಜ್ಞೆ ಮಾಡಿರುವ ಪ್ರಕಾರ ನಾನು ಈ ವರವನ್ನು ಕೇಳುವೆನು. ಇದನ್ನು ನಡೆಯಿಸದಿದ್ದರೆ ನೀನು ಸುಳ್ಳುಗಾರನಾಗುವಿಯಾದ ಕಾರಣ ಖಂಡಿತ ನಡೆಯಿಸಬೇಕು. ಉಪವಾಸವನ್ನು ಮಾಡಕೂಡದು. ಎಂದು ಹೇಳಿ ಸತ್ಯದ ಮಹಿಮಾತಿಶಯವನ್ನು ವರ್ಣಿಸಿರುವಳು. ಸತ್ಯದ ಮಹಿಮೆಯ ವರ್ಣನೆಯಲ್ಲಿ ಆಧ್ಯಾತ್ಮಿಕಾರ್ಥವೂ ಗುಂಭಿತವಾಗಿದೆ. ಉಪನಿಷತ್ತು ಮೊದಲಾದುವುಗಳನ್ನು ವಿಮರ್ಶಿಸಿದರೆ ಸತ್ಯ ಶಬ್ದವು ಭಗವಂತನನ್ನು ಭೋಧಿಸುತ್ತದೆಂಬುದು ಸ್ಪಷ್ಟಪಡುತ್ತದೆ- ಸತ್ಯ ಎಂದರೆ ಭಗವಂತನೆಂದು ಅರ್ಥ ಮಾಡಿಕೊಂಡಲ್ಲಿ ಭಗವಂತನು ಸರ್ವಾಧಾರನು, ಸರ್ವನಿಯಾಮಕನು ಮುಂತಾದ ಮಹಿಮಾತಿಶಯವೂ ಇಲ್ಲಿ ಉಕ್ತವಾಗಿದೆಯೆಂದು ರಹಸ್ಯವನ್ನು ತಿಳಿಯಬೇಕು.

## ಚತುರ್ವಿಂಶೋಽಧ್ಯಾಯಃ

ರಾಜೋವಾಚ

ಏತತ್ತ್ವಯಾ ವ್ಯಾಹೃತಂ ವಾಕ್ಯಂ ಮಮೇದಂ ಗೌತಮೇರಿತಂ ।
ಮಂದರೇ ಪರ್ವತಶ್ರೇಷ್ಠೇ ಹರಿವಾಸರಭೋಜನಂ ॥ ೧ ॥

ಅಮತೇನ ಪುರಾಣಾನಾಂ ವ್ಯಾಹೃತಂ ಯದ್ದ್ವಿಜನ್ಮನಾ ।
ಕ್ಷುದ್ರಶಾಸ್ತ್ರೋಪದೇಶೇನ ಲೋಲುಪೇನ ವರಾನನೇ ॥ ೨ ॥

ಪುರಾಣೇ ನಿರ್ಣಯೋ ಹ್ಯೇಷ ವಿದ್ವದ್ಭಿಃ ಸಮುದಾಹೃತಃ ।
ನ ಶಂಖೇನ ಪಿಬೇತ್ತೋಯಂ ನ ಹನ್ಯಾತ್ ಕೂರ್ಮಸೂಕರೌ ॥ ೩ ॥

ಏಕಾದಶ್ಯಾಂ ನ ಭೋಕ್ತವ್ಯಂ ಪಕ್ಷಯೋರುಭಯೋರಪಿ ।
ಅಗಮ್ಯಾಗಮನೇ ದೇವಿ ಅಭಕ್ಷ್ಯಸ್ಯ ಚ ಭಕ್ಷಣೇ ॥ ೪ ॥

---

## ಇಪ್ಪತ್ತುನಾಲ್ಕನೆಯ ಅಧ್ಯಾಯವು

೧-೨ ರಾಜನು ಹೇಳಿದನು :—ಸುಂದರಿಯೇ ! ಶ್ರೇಷ್ಠವಾದ ಮಂದರ ಪರ್ವತದಲ್ಲಿ ನಿನಗೆ ಗೌತಮನು ಹೇಳಿದನೆಂದು ನೀನು ಹೇಳಿದ ಹರಿವಾಸರದಲ್ಲಿ ಭೋಜನ ಮಾಡಬೇಕೆಂಬ ಈ ಮಾತನ್ನು ಬ್ರಾಹ್ಮಣನಾದ ಗೌತಮನು ಪುರಾಣಗಳನ್ನು ಮನನ ಮಾಡದಿರುವುದರಿಂದಲೂ, ಕ್ಷುದ್ರಶಾಸ್ತ್ರೋಪದೇಶದಿಂದಲೂ ಜಿಹ್ವಾಚಾಪಲ್ಯದಿಂದಲೂ ಸಹ ಹೇಳಿರುವನು.

೩-೪ ಪುರಾಣಗಳನ್ನು ವಿದ್ವಾಂಸರು ವಿಚಾರಪೂರ್ವಕವಾಗಿ ಪರಿಶೀಲಿಸಿ ಹೀಗೆ ನಿರ್ಣಯ ಮಾಡಿರುವರು. ಶಂಖದಿಂದ ನೀರನ್ನು ಕುಡಿಯಬಾರದು. ಆಮೆ ಮತ್ತು ಹಂದಿಗಳನ್ನು ಕೊಲ್ಲಬಾರದು. ಶುಕ್ಲ ಕೃಷ್ಣ ಪಕ್ಷಗಳೆರಡರಲ್ಲಿಯೂ ಏಕಾದಶಿಯ ದಿನ ಭೋಜನ ಮಾಡಬಾರದು. ಇವುಗಳನ್ನು ಮಾಡಿದರೆ ಅಗೆ

ಅಕಾರ್ಯಕರಣೇ ಜಂತೋರ್ಗೋಸಹಸ್ರವಧಃ ಸ್ಮೃತಃ ।
ಜಾನನ್ನಪಿ ಕಥಂ ದೇವಿ ಭೋಕ್ಷ್ಯೇಽಹಂ ಹರಿವಾಸರೇ ॥ ೫ ॥

ಪುರೋಡಾಶೋಽಪಿ ವಾಮೋರು ಸಂಪ್ರಾಪ್ತೇ ಹರಿವಾಸರೇ ।
ಅಭಕ್ಷ್ಯೇಣ ಸಮಃ ಪ್ರೋಕ್ತಃ ಕಿಂಪುನಶ್ಚಾಶನಕ್ರಿಯಾ ॥ ೬ ॥

ಅನುಕೂಲಂ ನೃಣಾಂ ಪ್ರೋಕ್ತಂ ಕ್ಷೀಣಾನಾಂ ವರವರ್ಣಿನಿ ।
ಮೂಲಂ ಫಲಂ ಪಯಸ್ತೋಯಮುಪಭೋಜ್ಯಂ ಮುನೀಶ್ವರೈಃ ॥ ೭ ॥

ನ ತ್ವತ್ರ ಭೋಜನಂ ಕೈಶ್ಚಿದೇಕಾದಶ್ಯಾಂ ಪ್ರದರ್ಶಿತಂ ।
ಜ್ವರಿಣಾಂ ಲಂಘನಂ ಶಸ್ತಂ ಧಾರ್ಮಿಕಾಣಾಮುಪೋಷಣಂ ॥ ೮ ॥

ಶುಭಂ ಗತಿಪ್ರದಂ ಪ್ರೋಕ್ತಂ ಸಂಪ್ರಾಪ್ತೇ ಹರಿವಾಸರೇ ।
ಜ್ವರಮಧ್ಯೇ ಕೃತಂ ಪಥ್ಯಂ ನಿಧನಾಯ ಪ್ರಕಲ್ಪತೇ ॥ ೯ ॥

---

ಮ್ಯೆ ಸ್ತ್ರೀಸಂಭೋಗ ಮಾಡಿದರೆ ತಿನ್ನಬಾರದುದನ್ನು ತಿಂದರೆ, ಕರ್ತವ್ಯವಲ್ಲದುದನ್ನು ಮಾಡಿದರೂ ಸಹ ಸಾವಿರ ಗೋವುಗಳನ್ನು ಸಂಹರಿಸಿದಂತೆಯೇ ಸರಿ ಎಂದು ಉಕ್ತವಾಗಿದೆ. ದೇವಿಯೇ! ಈ ನಿರ್ಣಯವನ್ನು ತಿಳಿದೂ ನಾನು ಹರಿದಿನದಲ್ಲಿ ಹೇಗೆ ಭೋಜನ ಮಾಡಲಿ?

೬. ಯಜ್ಞಶಿಷ್ಟವಾದ ಪುರೋಡಾಶವೂ ಸಹ ಹರಿವಾಸರದಲ್ಲಿ ಪ್ರಾಪ್ತವಾದರೆ ಅದು ಅಭಕ್ಷ್ಯ ವಸ್ತುವಿಗೆ ಸಮಾನವೆಂದು ಹೇಳಿದೆ. ಹೀಗಿರುವಾಗ ಆ ದಿನ ಭೋಜನವು ನಿಷಿದ್ಧವೆಂದು ಹೇಳುವುದೇನು?

೭. ವರವರ್ಣಿನಿಯೇ! ಅಶಕ್ತಮನುಷ್ಯರು ಗೆಡ್ಡೆ, ಗೆಣಸು, ಹಣ್ಣು, ಹಾಲು ಇವನ್ನು ದೇಹ ಧಾರಣೆಗೆ ತಕ್ಕಷ್ಟು ತಿನ್ನಬಹುದೆಂದು ಮುನೀಶ್ವರರು ಹೇಳಿರುವರು.

೮-೯. ಏಕಾದಶಿಯಲ್ಲಿ ಭೋಜನ ಮಾಡಬೇಕೆಂದು ಯಾರೂ ಹೇಳಿಲ್ಲ. ಜ್ವರಗ್ರಸ್ತರಾದವರಿಗೆ ಉಪವಾಸವು ಪ್ರಶಸ್ತವು. ಧಾರ್ಮಿಕರಿಗೆ ಹರಿವಾಸರ ಬಂದಾಗ ಉಪವಾಸ ಮಾಡುವುದು ಸದ್ಗತಿದಾಯಕವೆಂದೂ ಹೇಳಿದೆ. ಜ್ವರ ಮಧ್ಯದಲ್ಲಿ ಮಾಡಿದ ಪಥ್ಯವೂ ನಾಶಕರವು.

ವೈಷ್ಣವೇ ತು ದಿನೇ ಭುಕ್ತಂ ನರಕಾಯೈವ ಕೇವಲಂ |
ಮಾಗ್ರಹಂ ಕುರು ವಾಮೋರು ವ್ರತಭಂಗೋ ಭವೇನ್ಮಮ || ೧೦ ||

ಯದನ್ಯದ್ರೋಚತೇ ತುಭ್ಯಂ ತತ್ಕರ್ತಾಸ್ಮಿ ನ ಸಂಶಯಃ |
ಮೋಹಿನ್ಯುವಾಚ
ನ ಚಾನ್ಯದ್ರೋಚತೇ ರಾಜನ್ವಿನಾ ವೈ ಭೋಜನಂ ತವ || ೧೧ ||

ಜೀವಿತಸ್ಯಾಪಿ ದಾನೇನ ನ ಮೇ ಕಿಂಚಿತ್ ಪ್ರಯೋಜನಂ |
ನ ಚ ವೇದೇಷು ದೃಷ್ಟೋಯಮುಪವಾಸೋ ಹರೇರ್ದಿನೇ || ೧೨ ||

ಅಗ್ನಿಮಂತೋ ನ ವಿಪ್ರಾ ಹಿ ಮನ್ಯಂತೇ ಸಮುಪೋಷಣಂ |
ವೇದಬಾಹ್ಯಂ ಕಥಂ ಧರ್ಮಂ ಭವಾಂಶ್ಚರಿತುಮಿಚ್ಛತಿ || ೧೩ ||

---

೧೦. ಏಕಾದಶಿಯಲ್ಲಿ ಭೋಜನ ಮಾಡುವುದು ಕೇವಲ ನರಕ ಸಾಧನವು. ಆದುದರಿಂದ ಆಗ್ರಹಮಾಡಬೇಡ. ನನಗೆ ವ್ರತಭಂಗವಾಗುವುದು.

೧೧. ನಿನಗೆ ಬೇರೆ ಯಾವುದು ಇಷ್ಟವೋ ಅದನ್ನು ಮಾಡುವೆನು. ಸಂಶಯಪಡಬೇಡ ಎಂಬುದಾಗಿ ಹೇಳಿದನು.

ಮೋಹಿನಿಯು ಹೇಳಿದಳು :—ರಾಜನೇ ! ನೀನು ಭೋಜನ ಮಾಡು ವುದು ಹೊರತು ಇನ್ನಾವುದೂ ನನಗೆ ರುಚಿಸುವುದಿಲ್ಲ.

೧೨. ಪ್ರಾಣವನ್ನು ಕೊಟ್ಟರೂ ಅದರಿಂದ ನನಗೇನೂ ಪ್ರಯೋಜನ ವಾಗುವುದಿಲ್ಲ. ವೇದಗಳಲ್ಲಿ ಎಲ್ಲಿಯೂ ಈ ಹರಿದಿನೋಪವಾಸವನ್ನು ಹೇಳಿರುವಂತೆ ಕಾಣೆನು.

೧೩. ಅಗ್ನ್ಯುಪಾಸನೆಯನ್ನು ಮಾಡುವ ಬ್ರಾಹ್ಮಣಗೃಹಸ್ಥರು ಉಪ ವಾಸವು ವಿಹಿತವೆಂದು ತಿಳಿದಿಲ್ಲ. ವೇದೋಕ್ತವಲ್ಲದ ಈ ಧರ್ಮವನ್ನು ಮಾಡಲು ನೀನು ಹೇಗೆ ಬಯಸುವೆ ?

ವಚೋ ನಿಶಮ್ಯ ಮೋಹಿನ್ಯಾ ರಾಜಾ ವೇದವಿದಾಂ ವರಃ |
ಉವಾಚ ಮಾನಸೇ ಕ್ರುದ್ಧಃ ಪ್ರಹಸನ್ನಿವ ಭೂಪತೇ || ೧೪ ||

ಶೃಣು ಮೋಹಿನಿ ಮದ್ವಾಕ್ಯಂ ವೇದೋಽಯಂ ಬಹುಧಾ ಸ್ಥಿತಃ |
ಯಜ್ಞಕರ್ಮಕ್ರಿಯಾ ವೇದಃ ಸ್ಮೃತಿರ್ವೇದೋ ಗೃಹಾಶ್ರಮೇ || ೧೫ ||

ಸ್ಮೃತಿರ್ವೇದಃ ಕ್ರಿಯಾ ವೇದಃ ಪುರಾಣೇಷು ಪ್ರತಿಷ್ಠಿತಃ |
ಪುರಾಣಪುರುಷಾಜ್ಜಾತಂ ಯಥೇದಂ ಜಗದದ್ಭುತಂ || ೧೬ ||

ತಥೇದಂ ವಾಙ್ಮಯಂ ಜಾತಂ ಪುರಾಣೇಭ್ಯೋ ನ ಸಂಶಯಃ |
ವೇದಾರ್ಥಾದಧಿಕಂ ಮನ್ಯೇ ಪುರಾಣಾರ್ಥಂ ವರಾನನೇ || ೧೭ ||

ವೇದಾಃ ಪ್ರತಿಷ್ಠಿತಾಃ ಸರ್ವೇ ಪುರಾಣೇಷ್ವೇವ ಸರ್ವದಾ |
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ || ೧೮ ||

---

೧೪. ಮೋಹಿನಿಯು ಹೇಳಿದ ಈ ಮಾತನ್ನು ಕೇಳಿ ವೇದಜ್ಞಶ್ರೇಷ್ಠನಾದ ರಾಜನು ಮನಸ್ಸಿನಲ್ಲಿ ಕೋಪಗೊಂಡರೂ ಮೇಲೆ ನಗುವವನಂತೆ ತೋರಿಸಿ ಮಾತನಾಡಿದನು.

೧೫. ಮೋಹಿನಿಯೇ! ನಾನು ಹೇಳುವುದನ್ನು ಕೇಳು. ಈ ವೇದವು ಗೃಹಸ್ಥಾಶ್ರಮದಲ್ಲಿ ವಿಹಿತವಾದ ಯಜ್ಞಾದಿ ಶ್ರೌತಕ್ರಿಯಾಬೋಧಕವೇದ, ಸ್ಮಾರ್ತಕರ್ಮಬೋಧಕವೇದ ಎಂಬುದಾಗಿ ಬಹುವಿಧವಾಗಿದೆ.

೧೬-೧೭. ಸ್ಮೃತಿವೇದ ಕ್ರಿಯಾವೇದಗಳೆರಡೂ, ಪುರಾಣಗಳಲ್ಲಿ ಪ್ರತಿಷ್ಠಿತವಾಗಿವೆ. ಈ ಅದ್ಭುತವಾದ ಜಗತ್ತು ಪುರಾಣಪುರುಷನಾದ ಪರಬ್ರಹ್ಮನಿಂದ ಹುಟ್ಟಿದಂತೆ ಈ ವಾಙ್ಮಯವು ಪುರಾಣಗಳಿಂದ ಹುಟ್ಟಿದೆ. ಸಂದೇಹವಿಲ್ಲ. ವರಾನನೇ! ವೇದಾರ್ಥಕ್ಕಿಂತಲೂ ಪುರಾಣಾರ್ಥವು ಹೆಚ್ಚೆಂದು ತಿಳಿದಿರುವೆನು.

೧೮. ಸಕಲ ವೇದಗಳೂ ಪುರಾಣಗಳಲ್ಲಿಯೇ ಯಾವಾಗಲೂ ಪ್ರತಿಷ್ಠಿತವಾಗಿವೆ. ಪುರಾಣಾದಿಗಳನ್ನು ಸಂಪೂರ್ಣವಾಗಿ ಓದಿ ರಹಸ್ಯವನ್ನು ತಿಳಿದುಕೊಳ್ಳದೇ ಸ್ವಲ್ಪವಾಗಿ ಓದಿಕೊಂಡಿರುವವನನ್ನು ನೋಡಿ ವೇದವು ‘ ಇವನು ಅಪಾರ್ಥಗಳನ್ನು ಹೇಳಿ ನನ್ನನ್ನು ಕೆಡಿಸುವನು ’ ಎಂಬುದಾಗಿ ಭಯಪಡುತ್ತದೆ.

ನ ವೇದೇ ಗ್ರಹಸಂಚಾರೋ ನ ಶುದ್ಧಿಃ ಕಾಲಬೋಧಿನೀ ।
ತಿಥಿವೃದ್ಧಿಕ್ಷಯೋ ವಾಪಿ ಪರ್ವಗ್ರಹವಿನಿರ್ಣಯಃ ॥ ೧೯ ॥

ಇತಿಹಾಸಪುರಾಣೈಸ್ತು ನಿಶ್ಚಯೋಯಂ ಕೃತಃ ಪುರಾ ।
ಯನ್ನ ದೃಷ್ಟಂ ಹಿ ವೇದೇಷು ತತ್ಸರ್ವಂ ಲಕ್ಷ್ಯತೇ ಸ್ಮೃತೌ ॥ ೨೦ ॥

ಉಭಯೋರ್ಯನ್ನ ದೃಷ್ಟಂ ಹಿ ತತ್ಪುರಾಣೈಃ ಪ್ರಗೀಯತೇ ।
ಪ್ರಾಯಶ್ಚಿತ್ತಂ ತು ಹತ್ಯಾಯಾ ಮಾತುರಸ್ತ್ಯೌಷಧಂ ಪ್ರಿಯೇ ॥ ೨೧ ॥

ನ ಚಾಪಿ ಪಾಪಶುದ್ಧಿಃ ಸ್ಯಾದ್ಗಾತ್ಮನಶ್ಚ ಪರಸ್ಯ ವಾ ।
ಯದ್ವೇದೈರ್ಗೀಯತೇ ಸುಭ್ರು ಉಪಾಂಗೈರ್ಯತ್ಪ್ರಗೀಯತೇ ॥ ೨೨ ॥

ಪುರಾಣೈಃ ಸ್ಮೃತಿಭಿಶ್ಚೈವ ವೇದ ಏವ ನಿಗದ್ಯತೇ ।
ರಟಂತೀಹ ಪುರಾಣಾನಿ ಭೂಯೋ ಭೂಯೋ ವರಾನನೇ ॥ ೨೩ ॥

ನ ಭೋಕ್ತವ್ಯಂ ನ ಭೋಕ್ತವ್ಯಂ ಸಂಪ್ರಾಪ್ತೇ ಹರಿವಾಸರೇ ।
ಪುರಾಣಮನ್ಯಥಾ ಮತ್ವಾ ತಿರ್ಯಗ್ಯೋನಿಮವಾಪ್ನುಯಾತ್ ॥ ೨೪ ॥

---

೧೯. ವೇದದಲ್ಲಿ ಗ್ರಹಗತಿಯು, ಶುದ್ಧಿ ಪ್ರಕಾರವು, ಕಾಲಬೋಧನೆ, ತಿಥಿ ವೃದ್ಧಿಕ್ಷಯಗಳು ಮತ್ತು ಪರ್ವನಿರ್ಣಯ ಇವುಗಳು ಉಕ್ತವಾಗಿಲ್ಲ.

೨೦-೨೧. ಇವುಗಳ ನಿರ್ಣಯವು ಪೂರ್ವದಲ್ಲಿ ಇತಿಹಾಸ ಪುರಾಣಗಳಿಂದ ಮಾಡಲ್ಪಟ್ಟಿದೆ. ವೇದದಲ್ಲಿ ಹೇಳದಿರುವುದೆಲ್ಲವೂ ಸ್ಮೃತಿಗಳಲ್ಲಿ ಉಕ್ತವಾಗಿವೆ. ಆವೆರಡರಲ್ಲಿಯೂ ಕಾಣದಿರುವ ವಿಷಯಗಳು ಪುರಾಣಗಳಲ್ಲಿ ಹೇಳಿವೆ. ಪ್ರಿಯೇ! ತಾಯಿಯ ಸಂಹಾರದಿಂದುಂಟಾದ ಪಾಪವನ್ನಾದರೂ ಪ್ರಾಯಶ್ಚಿತ್ತದಿಂದ ಕಳೆದುಕೊಳ್ಳಬಹುದು.

೨೨-೨೪. ಯಾರೇ ಆಗಲಿ ಏಕಾದಶಿಯಲ್ಲಿ ಬೋಜನಮಾಡುವುದರಿಂದ ಬರುವ ಪಾಪವನ್ನು ಪರಿಹರಿಸಿಕೊಳ್ಳಲಾಗುವುದಿಲ್ಲ. ವೇದ, ಉಪಾಂಗ, ಪುರಾಣ ಮತ್ತು ಸ್ಮೃತಿಗಳಲ್ಲಿ ಹೇಳಲ್ಪಟ್ಟಿರುವುದೆಲ್ಲವೂ ವೇದದಲ್ಲಿಯೇ ಹೇಳಿದೆ.

ವರಾನನೇ! ಹರಿವಾಸರದಲ್ಲಿ ಭೋಜನ ಮಾಡಬಾರದು, ಭೋಜನ ಮಾಡಬಾರದು ಎಂಬುದಾಗಿ ಪುರಾಣಗಳು ಬಾರಿ ಬಾರಿಗೂ ಹೇಳುತ್ತಿವೆ. ಈ ರಹಸ್ಯವನ್ನು ತಿಳಿಯದೆ ಪುರಾಣಕ್ಕೆ ಬೇರೆ ಅರ್ಥವನ್ನು ಮಾಡಿಕೊಂಡರೆ ತಿರ್ಯಗ್ಜಂತುವಿನ ಜನ್ಮವು ಬರುವುದು.

ಸಂಸ್ನಾತೋಽಪಿ ಸ ದಾಂತೋಽಪಿ ನ ಗತಿಂ ಪ್ರಾಪ್ನುಯಾದಿತಿ ।
ಪಿತರಂ ಕೋ ನ ವಂದೇತ ಮಾತರಂ ಕೋ ನ ಪೂಜಯೇತ್ ॥ ೨೫ ॥

ಕೋ ನ ಗಚ್ಛೇತ್ ಸರಿಚ್ಛ್ರೇಷ್ಠಾಂ ಕೋ ಭುಂಕ್ತೇ ಹರಿವಾಸರೇ ।
ಕೋ ಹಿ ದೂಷಯತೇ ವೇದಂ ಬ್ರಾಹ್ಮಣಂ ಕೋ ನಿಪಾತಯೇತ್ ॥ ೨೬॥

ಕೋ ಗಚ್ಛೇತ್ ಪರದಾರಾನ್ ಹಿ ಕೋ ಭುಂಕ್ತೇ ಹರಿವಾಸರೇ ॥ ೨೭ ॥

ನ ಹೀದೃಶಂ ಪಾಪಮಿಹಾಸ್ತಿ ಜಂತೋ
ರ್ವಿಮೂಢಚಿತ್ತಸ್ಯ ದಿನೇ ಹರೇಃ ಪ್ರಿಯೇ ।
ಯದ್ಭೋಜನೇನಾತ್ಮವಿನಾಶಕಾರಿಣಾ
ಯಮಸ್ಯ ಖಾತೇಷು ಚಿರಂ ಸುಲೋಚನೇ ॥ ೨೮ ॥

---

೨೫. ಅಂತಹ ಅನ್ಯಥಾಜ್ಞಾನಿಯು ಸ್ನಾತಕನಾಗಿದ್ದರೂ, ನಿಗ್ರಹೀತೇಂದ್ರಿಯನಾಗಿದ್ದರೂ ಸದ್ಗತಿಯನ್ನು ಹೊಂದಲಾರನು. ತಂದೆಗೆ ಯಾವನು ತಾನೇ ನಮಸ್ಕಾರ ಮಾಡಲಾರನು ? ತಾಯಿಯನ್ನು ಯಾವನು ತಾನೇ ಸತ್ಕರಿಸದಿರುವನು ?

೨೬. ಉತ್ತಮವಾದ ಗಂಗಾನದಿಗೆ ಹೋಗದಿರುವವನಾವನು ? ಯಾವನು ತಾನೇ ಹರಿದಿನದಲ್ಲಿ ಊಟಮಾಡಿಯಾನು ? ವೇದವನ್ನು ದೂಷಿಸುವವನಾವನು ? ಬ್ರಾಹ್ಮಣನಿಗೆ ಅಧೋಗತಿಯನ್ನುಂಟುಮಾಡುವವನಾವನು ?

೨೭. ಯಾವನು ಪರಸ್ತ್ರೀಸಂಗ ಮಾಡಿಯಾನು ? ಯಾವನು ಹರಿದಿನದಲ್ಲಿ ಭೋಜನ ಮಾಡಿಯಾನು ?

೨೮. ಮೂಢಚಿತ್ತನಾದ ಪ್ರಾಣಿಯು ಆತ್ಮವಿನಾಶಕ್ಕೆ ಕಾರಣವಾದ, ಹರಿಪ್ರಿಯವಾದ ಏಕಾದಶೀ ದಿನದಲ್ಲಿ ಭೋಜನ ಮಾಡುವುದರಿಂದ ಬಹುಕಾಲ ಯಮನ ಕಂದಕಗಳಲ್ಲಿ ಬಿದ್ದು ಒದ್ದಾಡುವಂತಹ ಯಾವ ಪಾಪವುಂಟಾಗುವುದೋ ಅಂತಹ ಪಾಪವು ಇನ್ನಾವುದೂ ಇಲ್ಲ. ಎಂದರೆ ಸಕಲ ಅಕಾರ್ಯಗಳಿಗಿಂತಲೂ ಏಕಾದಶಿಯ ಭೋಜನವು ದೊಡ್ಡದು. ಅದರಿಂದ ಬರುವಷ್ಟು ಪಾಪವು ಇನ್ನಾವುದರಿಂದಲೂ ಬರುವುದಿಲ್ಲವೆಂದು ತಾತ್ಪರ್ಯ.

**ಮೋಹಿನ್ಯುವಾಚ**

**ಶೀಘ್ರಮಾನಯ ವಿಪ್ರಾಂಸ್ತ್ವಂ ಘೂರ್ಣಿಕೇ ವೇದಪಾರಗಾನ್ ।**
**ಯೇಷಾಂ ವಾಕ್ಯೇನ ಯುಕ್ತೋಽಯಂ ರಾಜಾ ಕುರ್ಯಾದ್ಧಿ ಭೋಜನಂ ॥**

**ಸಾ ತದ್ವಾಕ್ಯಮುಪಾಕರ್ಣ್ಯ ಬ್ರಾಹ್ಮಣಾನ್ವೇದಶಾಲಿನಃ ।**
**ಗೌತಮಾದೀನ್ ಸಮಾಹೂಯ ಮೋಹಿನೀಪಾರ್ಶ್ವಮಾನಯೆತ್ ॥ ೩೦ ॥**

**ತಾನ್ವಿಪ್ರಾನಾಗತಾನ್ ದೃಷ್ಟ್ವಾ ವೇದವೇದಾಂಗಪಾರಗಾನ್ ।**
**ಮೋಹಿನೀ ಸಹಿತಾ ರಾಜ್ಞಾ ವವಂದೇ ಕಾರ್ಯತತ್ಪರಾ ॥ ೩೧ ॥**

**ಉಪವಿಷ್ಟಾಸ್ತು ತೇ ಸರ್ವೇ ಶಾತಕೌಂಭಮಯೇಷು ಚ ।**
**ಆಸನೇಷು ಮಹೀಪಾಲ ಜ್ವಲದಗ್ನಿಸಮಪ್ರಭಾಃ ॥ ೩೨ ॥**

**ತೇಷಾಂ ಮಧ್ಯೇ ವಯೋವೃದ್ಧೋ ಗೌತಮೋ ವಾಕ್ಯಮಬ್ರವೀತ್ ।**
**ವಯಂ ಸಮಾಗತಾ ದೇವಿ ನಾನಾಶಾಸ್ತ್ರವಿಶಾರದಾಃ ॥ ೩೩ ॥**

---

೨೯-೩೦. ಮೋಹಿನಿಯು ಹೇಳಿದಳು;—ಘೂರ್ಣಿಕೇ! "ನೀನು ವೇದ ಪಾರಂಗತರಾದ ಬ್ರಾಹ್ಮಣರನ್ನು ಬೇಗ ಕರೆದುಕೊಂಡು ಬಾ. ಅವರ ಮಾತನ್ನು ಕೇಳಿಯಾದರೂ ರಾಜನು ಊಟಮಾಡಲಿ" ಎಂದು ಹೇಳಿದ ಮೋಹಿನಿಯ ಮಾತನ್ನು ಕೇಳಿ ಆಕೆಯು ಗೌತಮ ಮುಂತಾದ ವೇದಜ್ಞಾನಿಗಳಾದ ಬ್ರಾಹ್ಮಣರನ್ನು ಮೋಹಿನಿಯ ಬಳಿಗೆ ಕರೆತಂದಳು.

೩೧. ಬಂದ ವೇದ ವೇದಾಂಗ ಪಾರಂಗತರಾದ ಆ ಬ್ರಾಹ್ಮಣರನ್ನು ನೋಡಿ, ಕಾರ್ಯನಿರತಳಾದ ಮೋಹಿನಿಯು ರಾಜನಿಂದ ಸಹಿತಳಾಗಿ ಅವರಿಗೆ ನಮಸ್ಕಾರ ಮಾಡಿದಳು.

೩೨. ದೊರೆಯೇ! ಉರಿಯುತ್ತಿರುವ ಅಗ್ನಿಗೆ ಸಮಾನವಾದ ತೇಜಸ್ಸುಳ್ಳ ಆ ಗೌತಮಾದಿಮುನಿಗಳೆಲ್ಲರೂ ಬಂಗಾರದ ಪೀಠಗಳ ಮೇಲೆ ಕುಳಿತರು.

೩೩-೩೬. ಅವರ ಪೈಕಿ ವಯೋವೃದ್ಧನಾದ ಗೌತಮನು ದೇವಿಯೇ! ನಾನಾ ಶಾಸ್ತ್ರಗಳಲ್ಲಿ ವಿಶಾರದರು, ಸಕಲ ಸಂಶಯಗಳನ್ನೂ ಪರಿಹರಿಸಲು ಸಮ

ಸರ್ವಸಂದೇಹಹಂತಾರೋ ಯದರ್ಥಂ ತೇ ಸಮಾಹುತಾಃ ।
ತಚ್ಛ್ರುತ್ವಾ ವಚನಂ ತೇಷಾಂ ಮೋಹಿನೀ ಬ್ರಹ್ಮಣಃ ಸುತಾ ॥ ೩೪ ॥

ಸರ್ವಾಸಾಧ್ಯಕೃತಂ ಕರ್ತುಂ ಪ್ರವೃತ್ತಾಂಸ್ತಾನುವಾಚ ಹ ।
ಮೋಹಿನ್ಯುವಾಚ
ಸಂದೇಹಸ್ತು ಜಡೋ ಹ್ಯೇಷ ಸ್ವಲ್ಪೋ ವಾ ಸ್ವಮತಿರ್ಯಥಾ ॥ ೩೫ ॥

ಸೋಽಯಂ ವದತಿ ರಾಜಾ ವೈ ನಾಹಂ ಭೋಕ್ಷ್ಯೇ ಹರೇರ್ದಿನೇ ।
ಅನ್ನಾಧಾರಮಿದಂ ಸರ್ವಂ ಜಗತ್ ಸ್ಥಾವರಜಂಗಮಂ ॥ ೩೬ ॥

ಮೃತಾ ಹ್ಯಪಿ ತಥಾನ್ನೇನ ಪ್ರೀಯಂತೇ ಪಿತರೋ ದಿವಿ ।
ಕರ್ಕಂಧುಮಾತ್ರಂ ಪ್ರಹುತಂ ಪುರೋಡಾಶಂ ಹಿ ದೇವತಾಃ ॥ ೩೭ ॥

ಕಾಮಯಂತಿ ದ್ವಿಜಶ್ರೇಷ್ಠಾಸ್ತತೋಽನ್ನಂ ಹ್ಯಮೃತಂ ಪರಂ ।
ಪಿಪೀಲಿಕಾಪಿ ಕ್ಷುಧಿತಾ ಮುಖೇನಾದಾಯ ದುರ್ಬಲಾ ॥ ೩೮ ॥

---

ರ್ಥರೂ ಆಗಿರುವ ನಾವು ಬಂದಿರುವೆವು. ಏತಕ್ಕೋಸ್ಕರ ನಮ್ಮನ್ನು ಕರೆಯಿ ಸಿರುವೆ ? ಅಪ್ಪಣೆಯಾಗಬೇಕೆಂದು ಹೇಳಿದನು. ಅವರ ಆ ಮಾತನ್ನು ಕೇಳಿ ಬ್ರಹ್ಮಪುತ್ರಿಯಾದ ಮೋಹಿನಿಯು ಎಲ್ಲರಿಗೂ ಅಸಾಧ್ಯವಾದ ಕಾರ್ಯವನ್ನು ಮಾಡಲು ಪ್ರವರ್ತಿಸಿರುವ ಆ ಮುನಿಗಳನ್ನು ಕುರಿತು ಮಾತನಾಡಿದಳು.

ಮೋಹಿನಿಯು ಹೇಳಿದಳು :—ಅಜ್ಞಾನ ಮತ್ತು ಅಲ್ಪಮತಿಯಿಂದ ಸಂದೇಹ ಪಡುತ್ತಿರುವ ಈ ರಾಜನು ಹರಿದಿನದಲ್ಲಿ ನಾನು ಊಟಮಾಡುವುದಿಲ್ಲ ವೆಂದು ಹೇಳುತ್ತಿರುವನು. ಈ ಚರಾಚರಾತ್ಮಕಜಗತ್ತೆಲ್ಲವೂ ಅನ್ನವನ್ನೇ ಉಪಜೀವಿಸಿಕೊಂಡಿದೆ.

೩೭. ಸತ್ತ ಪಿತೃಗಳೂ ಸಹ ದೇವಲೋಕದಲ್ಲಿ ಅನ್ನದಿಂದಲೇ ಪ್ರೀತ ರಾಗುವರು. ದೇವತೆಗಳೂ ಸಹ ಅಗ್ನಿಯಲ್ಲಿ ಹೋಮ ಮಾಡಿದ ಕೇವಲ ಬೋರೆ ಕಡ್ಡಿಗಳೆಂಬ ಪುರೋಡಾಶವನ್ನು ಇಚ್ಛಿಸುವರು.

೩೮-೩೯. ದ್ವಿಜಶ್ರೇಷ್ಠರು ಅನ್ನವೆಂಬ ಉತ್ತಮವಾದ ಅಮೃತವನ್ನು ಬಯಸುವರು. ದುರ್ಬಲವಾದ ಇರುವೆಯೂ ಸಹ ಹಸಿವೆಯಿಂದ ಬಳಲಿ ಸಿಕ್ಕಿದ

ಬಿಲಂ ವ್ರಜತಿ ದುಃಖೇನ ಕಸ್ಯಾನ್ನಂ ನ ಹಿ ರೋಚತೇ ।
ಅಯಂ ನಿಂದತಿ ಚಾನ್ನಾದ್ಯಂ ಸಂಪ್ರಾಪ್ತೇ ಹರಿವಾಸರೇ ॥ ೩೯ ॥

ನಿಜಧರ್ಮಂ ಪರಿತ್ಯಜ್ಯ ಪರಧರ್ಮೇ ವ್ಯವಸ್ಥಿತಃ ।
ವಿಧವಾನಾಂ ಯತೀನಾಂ ಚ ಯುಜ್ಯತೇ ವ್ರತಸೇವನಂ ॥ ೪೦ ॥

ಪರಧರ್ಮೇ ರತಿರ್ಯಸ್ಯ ಸ್ವಧರ್ಮವಿಮುಖೋ ನರಃ ।
ಸೋಂಧೇ ತಮಸಿ ಮಜ್ಜೇತ ಯಾವದಿಂದ್ರಾಶ್ಚತುರ್ದಶ ॥ ೪೧ ॥

ಉಪವಾಸಾದಿಕರಣಂ ಭೂಭುಜಾಂ ನೋದಿತಂ ಕ್ವಚಿತ್ ।
ಪ್ರಜಾಸಂರಕ್ಷಣಂ ತ್ಯಕ್ತ್ವಾ ಚತುರ್ವರ್ಗಫಲಪ್ರದಂ ॥ ೪೨ ॥

---

ಅನ್ನವನ್ನು ಬಾಯಿಯಲ್ಲಿ ಕಚ್ಚಿಕೊಂಡು ಬಹು ಕಷ್ಟದಿಂದ ತನ್ನ ಬಿಲಕ್ಕೆ ಹೋಗುತ್ತದೆ. ಯಾರಿಗೆ ತಾನೇ ಅನ್ನವು ರುಚಿಸದೇ ಇದ್ದೀತು ? ಈ ರಾಜನಾದರೋ ಹರಿದಿನವು ಬಂದಾಗ ಅನ್ನವನ್ನು ನಿಂದಿಸುತ್ತಿರುವನು.

೪೦. ಈ ರಾಜನು ತನ್ನ ವಿಹಿತ ಧರ್ಮವನ್ನು ಬಿಟ್ಟು ಪರಧರ್ಮವನ್ನಾಚರಿಸುತ್ತಿರುವನು. ವಿಧವೆಯರು ಮತ್ತು ಸನ್ಯಾಸಿಗಳಿಗೆ ವ್ರತಸೇವನೆಯು ವಿಹಿತವಾದುದು.

೪೧. ತನ್ನ ವರ್ಣಾಶ್ರಮೋಚಿತಧರ್ಮಗಳನ್ನು ಉದಾಸೀನ ಮಾಡಿ, ಪರಧರ್ಮಾಚರಣೆಯಲ್ಲಾಸಕ್ತನಾದ ಮನುಷ್ಯನು ಹದಿನಾಲ್ಕು ಇಂದ್ರರು ಆಧಿಪತ್ಯದಲ್ಲಿರುವಷ್ಟು ಕಾಲ ಅಂಧಂತಮಸ್ಸಿನಲ್ಲಿ ಬೀಳುವನು.

೪೨. ದೊರೆಗಳು ನಾಲ್ಕು ಪುರುಷಾರ್ಥಗಳನ್ನೂ ಕೊಡುವ, ಸ್ವಧರ್ಮವಾದ ಪ್ರಜಾಪಾಲನೆಯನ್ನು ಬಿಟ್ಟು ಉಪವಾಸಾದಿಗಳನ್ನು ಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ.

ನಾರೀಣಾಂ ಭರ್ತೃಶುಶ್ರೂಷಾ ಪುತ್ರಾಣಾಂ ಪಿತೃಸೇವನಂ ।
ಶೂದ್ರಾಣಾಂ ದ್ವಿಜಸೇವಾ ಚ ಲೋಕರಕ್ಷಾ ಮಹೀಭೃತಾಂ　　॥ ೪೩ ॥

ಸ್ವಕಂ ಕರ್ಮ ಪರಿತ್ಯಜ್ಯ ಯೋನ್ಯತ್ರ ಕುರುತೇ ಶ್ರಮಂ ।
ಅಜ್ಞಾನಾದ್ವಾ ಪ್ರಮಾದಾಚ್ಚ ಪತಿತಃ ಸ ನ ಸಂಶಯಃ　　॥ ೪೪ ॥

ಪ್ರಾಯಶೋಯಂ ಮಹೀಪಾಲೋ ಯತಿಧರ್ಮೇ ವ್ಯವಸ್ಥಿತಃ ।
ಸುಬುಧ್ಯಾಚಾರಶೀಲಶ್ಚ ವೇದೋಕ್ತಂ ತ್ಯಜತಿ ದ್ವಿಜಾಃ　　॥ ೪೫ ॥

ಸ್ವೇಚ್ಛಾಚಾರಾ ತು ಯಾ ನಾರೀ ಯೋಽವಿನೀತಃ ಸುತೋ ದ್ವಿಜಾಃ ।
ಏಕಾಂತಶೀಲೋ ನೃಪತಿರ್ಭೃತ್ಯಃ ಕರ್ಮವಿವರ್ಜಿತಃ　　॥ ೪೬ ॥

ಸರ್ವೇ ತೇ ನರಕಂ ಯಾಂತಿ ಹ್ಯಪ್ರತಿಷ್ಠಾಶ್ಚ ಭೋ ದ್ವಿಜಾಃ ।
ಅಯಂ ಹಿ ನಿಯಮೋಪೇತೋ ಹರಿಪೂಜನತತ್ಪರಃ　　॥ ೪೭ ॥

---

೪೩. ಸ್ತ್ರೀಯರಿಗೆ ಪತಿಶುಶ್ರೂಷೆಯು, ಮಕ್ಕಳಿಗೆ ತಂದೆತಾಯಿಗಳ ಸೇವೆಯು, ಶೂದ್ರರಿಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರ ಸೇವೆಯು, ರಾಜರಿಗೆ ಪ್ರಜಾಪರಿಪಾಲನೆಯೂ ವಿಹಿತಧರ್ಮವಾಗಿದೆ.

೪೪. ತಿಳಿಯದೇ ಆಗಲಿ ಅಥವಾ ಆಲಸ್ಯದಿಂದಾಗಲಿ ತನ್ನ ವರ್ಣಾಶ್ರಮೋಚಿತಧರ್ಮವನ್ನು ಬಿಟ್ಟು, ಪರಧರ್ಮಾಚರಣೆಯಲ್ಲಿ ಶ್ರಮಿಸುವವನು ಪತಿತನಾಗುವನು ಸಂಶಯವಿಲ್ಲ.

೪೫. ಬ್ರಾಹ್ಮಣರೇ! ಬಹಳವಾಗಿ ಯತಿಧರ್ಮದಲ್ಲಿ ತೊಡಗಿರುವ ಈ ದೊರೆಯು ಜ್ಞಾನಿಯಂತೆ ಆಚಾರಶೀಲನಾಗಿ ವೇದೋಕ್ತಧರ್ಮವನ್ನು ಬಿಟ್ಟಿರುವನು.

೪೬-೪೭. ಓ ಬ್ರಾಹ್ಮಣರೇ! ಸ್ವೇಚ್ಛಾವಿಹಾರ ಮಾಡುವ ಸ್ತ್ರೀಯು, ಅವಿಧೇಯನಾದ ಮಗನು, ಏಕಾಂತದಲ್ಲಿ ತಪೋನಿಷ್ಠನಾದ ರಾಜನು, ಹೇಳಿದ ಕೆಲಸವನ್ನು ಮಾಡದಿರುವ ಸೇವಕನು ಅವರೆಲ್ಲರೂ ಸ್ಥಾನಭ್ರಷ್ಟರಾಗಿ ನರಕಕ್ಕೆ ಹೋಗುವರು. ಈ ರಾಜನು ನಿಯಮಯುಕ್ತನಾಗಿ ಹರಿಪೂಜೆಯಲ್ಲಿ ಆಸಕ್ತನಾಗಿರುವನು.

ಆಕ್ರಂದೇ ವರ್ತಮಾನೇ ತು ಯದ್ಯೇಷೋ ನ ಪ್ರಧಾವತಿ ।
ವ್ಯಪೋಹ್ಯ ಹರಿಪೂಜಾಂ ವೈ ಬ್ರಹ್ಮಹತ್ಯಾಂ ತು ವಿಂದತಿ ॥ ೪೮ ॥

ಕ್ಷೀಣದೇಹೇ ಹರಿದಿನೇ ಕಥಂ ಸಂಯಮಯಿಷ್ಯತಿ ।
ಅನ್ನಾತ್ಪ್ರಭವತಿ ಪ್ರಾಣಃ ಪ್ರಾಣೋ ದೇಹವಿಚೇಷ್ಟನಂ ॥ ೪೯ ॥

ಚೇಷ್ಟಯಾ ರಿಪುನಾಶಶ್ಚ ತದ್ಧೀನಃ ಪರಿಭೂಯತೇ ।
ಏವಂ ಜ್ಞಾತ್ವಾ ಮಯಾ ರಾಜಾ ಬೋಧ್ಯಮಾನೋ ನ ಬುಧ್ಯತಿ ॥ ೫೦ ॥

ಏತದೇವ ವ್ರತಂ ರಾಜ್ಞೋ ಯತ್ಪ್ರಜಾಪಾಲನಂ ಚರೇತ್ ।
ನ ವ್ರತಂ ಕಿಂಚಿದಸ್ತ್ಯನ್ಯನ್ನೃಪಸ್ಯ ದ್ವಿಜಸತ್ತಮಾಃ ॥ ೫೧ ॥

---

೪೮. ಪ್ರಜೆಗಳು ಗೋಳಿಡುತ್ತಿದ್ದರೂ ಇವನು ಹರಿಪೂಜೆಯನ್ನು ಬಿಟ್ಟು ಓಡಿಹೋಗಿ ಅವರನ್ನು ವಿಚಾರಿಸುವುದಿಲ್ಲವಾದಕಾರಣ ಬ್ರಹ್ಮಹತ್ಯೆಯನ್ನು ಸಂಪಾದಿಸುತ್ತಿರುವನು.

೪೯-೫೦. ಹರಿದಿನದಲ್ಲಿ ಅನ್ನವಿಲ್ಲದೆ ದೇಹವು ದುರ್ಬಲವಾಗಿರುವಾಗ ಪ್ರಯಾಸಸಾಧ್ಯವ್ಯಾಪಾರವನ್ನು ಹೇಗೆ ಮಾಡಿಯಾನು ? ಅನ್ನದಿಂದ ಪ್ರಾಣವು ಶಕ್ತವಾಗುವುದು. ಶರೀರಾಯಾಸದಿಂದ ಕೆಲಸಮಾಡಲು ಪ್ರಾಣವೇ ಕಾರಣ. ಹಾಗೆ ಕೆಲಸ ಮಾಡುವುದರಿಂದಲೇ ಶತ್ರುನಾಶವಾಗುವುದು. ಅದಿಲ್ಲದವನು ತಿರಸ್ಕೃತನಾಗುವನು. ಈ ರೀತಿಯಾಗಿ ತಿಳಿದು ನಾನು ಎಷ್ಟು ಬೋಧಿಸಿದರೂ ರಾಜನು ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ.

೫೧. ದ್ವಿಜವರ್ಯರೇ ! ಪ್ರಜಾಪಾಲನೆಮಾಡುವುದೇ ರಾಜರಿಗೆ ಉತ್ತಮವ್ರತವು. ಅವರಿಗೆ ಅದಕ್ಕಿಂತ ಬೇರೆ ಯಾವವ್ರತವೂ ವಿಹಿತವಲ್ಲ.

ಕಿಂ ದೇವಕಾರ್ಯೇಣ ನರಾಧಿಪಸ್ಯ
ಕೃತ್ವಾ ಹಿ ಮನ್ಯುಂ ವಿಷಯಸ್ಥಿತಾನಾಂ ।
ತದೇವ ಕಾರ್ಯಂ ಸ ಚ ಯಜ್ಞಹೋಮೋ
ಯದ್ರಕ್ತಪಾತೋ ನ ಭವೇತ್ಸ್ವರಾಷ್ಟ್ರೇ ॥ ೫೨ ॥

ಇತಿ ಶ್ರೀನಾರದೀಯಪುರಾಣೋತ್ತರಭಾಗೇ ಮೋಹಿನೀ ಪ್ರಶ್ನೋ ನಾಮ ಚತುರ್ವಿಂಶೋಽಧ್ಯಾಯಃ

---

೫೨. ನರೇಶನು ತನ್ನ ದೇಶದಲ್ಲಿರುವ ಪ್ರಜೆಗಳಿಗೆ ಕೋಪಬರುವಂತೆ ಮಾಡಿ ಪೂಜೆ ಮುಂತಾದ ದೇವಕಾರ್ಯ ಮಾಡುತ್ತೇನೆಂದು ಕುಳಿತರೇನು ಫಲ? ರಾಜನು ತನ್ನ ದೇಶದಲ್ಲಿ ರಕ್ತಪಾತವಾಗದಂತೆ ನೋಡಿಕೊಳ್ಳುವುದೇ ಅವನಿಗೆ ಮುಖ್ಯಕರ್ತವ್ಯವು. ಅದೇ ಅವನಿಗೆ ಯಜ್ಞಹೋಮಾದಿಗಳು ಎಂದು ತಿಳಿಯ ಬೇಕು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನಿಯ ಪ್ರಶ್ನೆಯೆಂಬ ಇಪ್ಪತ್ತುನಾಲ್ಕನೆಯ ಅಧ್ಯಾಯವು ಮುಗಿದುದು

## ವಿಷಯಸಂಗ್ರಹ

ಮೋಹಿನಿಯೇ! ನಿನಗೆ ಗೌತಮನು ಹೇಳಿರುವುದು ಪುರಾಣಗಳ ರಹಸ್ಯ ವನ್ನರಿಯದ ಮಾತು. ಏಕಾದಶಿಯ ಉಪವಾಸವೇ ಪುರಾಣಸಿದ್ಧಾಂತವು. ಅದನ್ನು ಮಾಡದಿದ್ದರೆ ಮಹಾನರ್ಥವಾಗುವುದು. ಇದನ್ನು ತಿಳಿದೂ ನಾನು ಹೇಗೆ ಊಟಮಾಡಲಿ? ಎಂದು ರಾಜನು ಹೇಳಿದನು. ಆದರೂ ಮೋಹಿನಿಯು ವೇದದಲ್ಲಿ ಏಕಾದಶಿಯ ಉಪವಾಸವು ಹೇಳಿಲ್ಲ. ಇದನ್ನು ನೀನು ಮಾಡಕೂಡದು ಊಟ ಮಾಡಲೇಬೇಕೆಂದು ನಿರ್ಬಂಧಿಸಲು ರಾಜನು ವೇದದ ಭಾಗಗಳು, ಪುರಾಣವೈಶಿಷ್ಟ್ಯ ಮುಂತಾದುವನ್ನು ವಿವರಿಸಿ ಉಪವಾಸಮಾಡುವುದೇ ಯುಕ್ತವೆಂದು ತಿಳಿಸಿದನು. ಆಗ ಮೋಹಿನಿಯು ತನ್ನ ಸೇವಕಿಯಿಂದ ಗೌತಮಾದಿ ಬ್ರಾಹ್ಮಣ ರನ್ನು ಕರೆಯಿಸಿಕೊಂಡು ಅವರಿಗೆ ತನ್ನ ಇಷ್ಟದಂತೆ ರಾಜನು ಭೋಜನಮಾಡ ದಿರುವುದನ್ನು ವರ್ಣಾಶ್ರಮೋಚಿತಧರ್ಮಗಳ ವಿವರಣೆಯೊಂದಿಗೆ ತಿಳಿಸಿದಳು.

# ಪಂಚವಿಂಶೋಽಧ್ಯಾಯಃ

## ವಸಿಷ್ಠ ಉವಾಚ

ತದ್ವಾಕ್ಯಂ ಬ್ರಾಹ್ಮಣಃ ಶ್ರುತ್ವಾ ಮೋಹಿನ್ಯಾ ಸಮುದೀರಿತಂ ।
ತಥ್ಯಮಿತ್ಯೇವಮುಕ್ತ್ವಾ ತು ರಾಜಾನಂ ವಾಕ್ಯಮಬ್ರವೀತ್ ॥ ೧ ॥

## ಬ್ರಾಹ್ಮಣ ಉವಾಚ

ಯಸ್ತ್ವಯಾ ನೃಪತೇ ಪುಣ್ಯಃ ಕೃತೋಽಯಂ ಶಪಥಃ ಕಿಲ ।
ಏಕಾದಶ್ಯಾಂ ನ ಭೋಕ್ತವ್ಯಂ ಪಕ್ಷಯೋರುಭಯೋರಪಿ ॥ ೨ ॥

ನ ಕೃತಃ ಶಾಸ್ತ್ರದೃಷ್ಟ್ಯಾ ತು ಸ್ವಬುದ್ಧ್ಯೈವಂ ಪ್ರಕಲ್ಪಿತಃ ।
ಸಾಗ್ನೀನಾಂ ಪ್ರಾಶನಂ ಪ್ರೋಕ್ತಮುಭಯೋಃ ಸಂಧ್ಯಯೋಃ ಕಿಲ ॥ ೩ ॥

---

## ಇಪ್ಪತ್ತೈದನೆಯ ಅಧ್ಯಾಯವು

೧. ವಸಿಷ್ಠನು ಹೇಳಿದನು :—ಬ್ರಾಹ್ಮಣನು ಮೋಹಿನಿಯು ಹೇಳಿದ ಆ ಮಾತನ್ನು ಕೇಳಿ ಸತ್ಯವೆಂದು ಹೇಳಿ ರಾಜನನ್ನು ಕುರಿತು ಮಾತನಾಡಿದನು.

೨. ದೊರೆಯೇ! ಶುಕ್ಲ ಕೃಷ್ಣಪಕ್ಷಗಳೆರಡರ ಏಕಾದಶಿಯದಿನಗಳಲ್ಲಿಯೂ ಭೋಜನಮಾಡುವುದಿಲ್ಲವೆಂಬ ಶಪಥವನ್ನು ಪುಣ್ಯಕರವೆಂದು ತಿಳಿದು ನೀನು ಮಾಡಿರುವೆಯಷ್ಟೆ ?

೩-೬. ಅದು ಶಾಸ್ತ್ರದೃಷ್ಟಿಯಿಂದ ಕೃತವಲ್ಲ. ನಿನ್ನ ಸ್ವಂತ ಬುದ್ಧಿಯಿಂದ ಈರೀತಿಯಾಗಿ ಕಲ್ಪಿತವಾಗಿದೆ. ಶಾಸ್ತ್ರದಲ್ಲಿ ಸಾಗ್ನಿಕರಾದ ಗೃಹಸ್ಥರಿಗೆ ಸಂಧ್ಯಾಕಾಲಗಳೆರಡರಲ್ಲಿಯೂ ಪ್ರಾಶನವು ಉಕ್ತವಾಗಿದೆ. ಬ್ರಾಹ್ಮಣ, ಕ್ಷತ್ರಿಯ

ಹೋಮೋಚ್ಛಿಷ್ಟಪ್ರಭೋಕ್ತಾರಸ್ತ್ರಯೋ ವರ್ಣಾಃ ಪ್ರಕೀರ್ತಿತಾಃ ।
ವಿಶೇಷಾತ್ ಭೂಮಿಪಾಲಾನಾಂ ಕಥಮುಕ್ತಮುಪೋಷಣಂ ॥ ೪ ॥

ಸರ್ವದೋದ್ಯತಶಸ್ತ್ರಾಣಾಂ ದುಷ್ಟಸಂಯಮಿನಾಂ ವಿಭೋ ।
ಶಾಸ್ತ್ರತೋ ಶಾಸ್ತ್ರತೋ ವಾಪಿ ಯಸ್ತ್ವಯಾ ಶಪಥಃ ಕೃತಃ ॥ ೫ ॥

ಪರಿಪೂರ್ಣೋ ಭವತ್ಯದ್ಯ ವಾಕ್ಯೇನ ಹಿ ದ್ವಿಜನ್ಮನಾಂ ।
ವ್ರತಭಂಗೋ ನ ತೇಸ್ತೀಹ ಭುಂಕ್ಷ್ವ ವಿಪ್ರಸಮನ್ವಿತಃ ॥ ೬ ॥

ಪರಿತಾಪೋ ನ ತೇ ಕಾರ್ಯೋ ವಿಪ್ರವಾಕ್ಯಂ ಮಹತ್ತರಂ ।
ಯೋನ್ಯಥಾ ಮನ್ಯತೇ ವಾಕ್ಯಂ ವಿಪ್ರಾಣಾಂ ನೃಪಸತ್ತಮ ॥ ೭ ॥

ಸ ಯಾತಿ ರಾಕ್ಷಸೀಂ ಯೋನಿಂ ಜನ್ಮಾನಿ ದಶ ಪಂಚ ಚ ।
ತಚ್ಛ್ರುತ್ವಾ ವಚನಂ ರೌದ್ರಂ ರಾಜಾ ಕೋಪಸಮನ್ವಿತಃ ॥ ೮ ॥

---

ವೈಶ್ಯಜಾತಿಯವರು ಹೋಮಶೇಷವನ್ನು ತಿನ್ನಬೇಕು. ವಿಶೇಷವಾಗಿ ಸರ್ವದಾ ಶಸ್ತ್ರಪಾಣಿಗಳಾಗಿ ದುಷ್ಟನಿಗ್ರಹಮಾಡಬೇಕಾಗಿರುವ ರಾಜರು ಭೋಜನಮಾಡ ಬೇಕು. ಎಂಬುದಾಗಿಯೂ ಹೇಳಿದೆ.

ಹೀಗಿರುವಾಗ ರಾಜನಾದ ನೀನು ಉಪವಾಸಮಾಡುವುದು ಹೇಗೆ? ಶಾಸ್ತ್ರಾಧಾರದಿಂದಲೋ ಅಥವಾ ಶಾಸ್ತ್ರಾಧಾರವಿಲ್ಲದೆಯೋ ನೀನು ಶಪಥವನ್ನು ಮಾಡಿರುವೆ. ಹೇಗಾದರೂ ಇರಲಿ, ಅದು ಈಗ ಬ್ರಾಹ್ಮಣರ ವಾಕ್ಯದಿಂದ ಪರಿ ಪೂರ್ಣವಾಗುವುದು. ನಿನಗೆ ವ್ರತಭಂಗವಾಗುವುದಿಲ್ಲ. ಬ್ರಾಹ್ಮಣರ ಸಹಿತವಾಗಿ ಇಲ್ಲಿಯೇ ಬೋಜನಮಾಡು.

೭-೧೦. ಬ್ರಾಹ್ಮಣರ ವಚನವು ದೊಡ್ಡದು. ನೀನು ಪಶ್ಚಾತ್ತಾಪಪಡ ಬೇಕಾದುದಿಲ್ಲ. ವಿಪ್ರವಚನವನ್ನು ಹಿಯ್ಯಾಳಿಸುವವನು ಹದಿನೈದು ರಾಕ್ಷಸ ಜನ್ಮಗಳನ್ನು ಹೊಂದುವನು

ಉವಾಚ ಸ್ಫುರಮಾಣೌಷ್ಠಸ್ತಾನ್ ವಿಪ್ರಾನ್ ಶ್ಲಕ್ಷ್ಣಯಾ ಗಿರಾ ।
ಸರ್ವೇಷಾಮೇವ ಭೂತಾನಾಂ ಭವಂತೋ ಮಾರ್ಗದರ್ಶಿನಃ ॥ ೯ ॥

ಯತೀನಾಂ ವಿಧವಾನಾಂ ಚ ಶ್ಲೋಕೋಯಂ ಪಠ್ಯತೇ ದ್ವಿಜಾಃ ।
ವಿಮಾರ್ಗಗಾಮಿನಾಂ ಚೈತನ್ಮತಂ ನ ಸಾತ್ವತಾಂ ಕ್ವಚಿತ್ ॥ ೧೦ ॥

ಯದ್ಭವದ್ಭಿಃ ಸಮುದ್ದಿಷ್ಟಂ ರಾಜ್ಞಾಂ ನೋಪೋಷಣಂ ಸ್ಮೃತಂ ।
ತತ್ರ ವಾಕ್ಯಾನಿ ಶೃಣುತ ವೈಷ್ಣವಾಚಾರಲಕ್ಷಣೇ ॥ ೧೧ ॥

ನ ಶಂಖೇನ ಪಿಬೇತ್ತೋಯಂ ನ ಹನ್ಯಾತ್ ಕೂರ್ಮಸೂಕರೌ ।
ಏಕಾದಶ್ಯಾಂ ನ ಭೋಕ್ತವ್ಯಂ ಪಕ್ಷಯೋರುಭಯೋರಪಿ ॥ ೧೨ ॥

---

ಹೀಗೆ ಹೇಳಿದ ಗೌತಮರ ಭಯಂಕರಮಾತನ್ನು ಕೇಳಿ ಕೋಪಗೊಂಡ ರಾಜನು ತುಟಿಗಳನ್ನು ಕಚ್ಚಿಕೊಂಡು ಸ್ನೇಹಯುಕ್ತವಾದ ಮಾತಿನಿಂದ ಆ ಬ್ರಾಹ್ಮಣರಿಗೆ ಹೇಳಿದನು :—

ನೀವೇ ಸಕಲಪ್ರಾಣಿಗಳಿಗೂ ಮಾರ್ಗದರ್ಶಿಗಳು. ದ್ವಿಜರೇ! ಈ ಶ್ಲೋಕವು ಯತಿ ಮತ್ತು ವಿಧವೆಯರಿಗಾಗಿ ಉಕ್ತವಾಗಿದೆಯೆಂದು ಹೇಳವುದು ದುರ್ಮಾರ್ಗಗಾಮಿಗಳ ಅಭಿಪ್ರಾಯವು. ಅದು ಎಂದಿಗೂ ಸಾತ್ವಿಕರ ಮತವಾಗ ಲಾರದು.

೧೧. ರಾಜರು ಏಕಾದಶಿಯ ಉಪವಾಸ ಮಾಡಬಾರದೆಂದು ನೀವು ಹೇಳಿದ ವಿಷಯವು ಯುಕ್ತವಲ್ಲ. ವೈಷ್ಣವಾಚಾರವಿಧಾಯಕ ಶಾಸ್ತ್ರದಲ್ಲಿ ಹೇಳಿ ರುವ ಪ್ರಮಾಣವಚನಗಳನ್ನು ಹೇಳುವೆನು ಕೇಳಿರಿ.

೧೨. ಶಂಖದಿಂದ ನೀರನ್ನು ಕುಡಿಯಬಾರದು. ಆಮೆ, ಹಂದಿಗಳನ್ನು ಕೊಲ್ಲಬಾರದು. ಶುಕ್ಲಕೃಷ್ಣಪಕ್ಷಗಳೆರಡರ ಏಕಾದಶಿಯಲ್ಲಿ ಭೋಜನ ಮಾಡ ಬಾರದು.

ನ ಪಾತವ್ಯಂ ಹಿ ಮದ್ಯಂ ತು ನ ಹಂತವ್ಯೋ ದ್ವಿಜಃ ಕ್ವಚಿತ್ ।
ಕ್ರೀಡೇನ್ನಾಕ್ಷೈಸ್ತು ಧರ್ಮಜ್ಞೋ ನಾಶ್ನೀಯಾದ್ಧರಿವಾಸರೇ ॥ ೧೩ ॥

ಅಭಕ್ಷ್ಯಭಕ್ಷಣಂ ಪಾಪಂ ಪರದಾರಾಭಿಮರ್ಶನಂ ।
ಏಕಾದಶ್ಯಾಂ ಭೋಜನಂ ಚ ಪತನಸ್ಯೈವ ಕಾರಣಂ ॥ ೧೪ ॥

ಅಕಾರ್ಯಕರಣಂ ಕೃತ್ವಾ ಕಿಂ ಜೀವೇಚ್ಛರದಾಂ ಶತಂ ।
ಕೋ ಹಿ ಸಂಚೇಷ್ಟಮಾನಸ್ತು ಭುನಕ್ತಿ ಹರಿವಾಸರೇ ॥ ೧೫ ॥

ಚತುಷ್ಪದೇಭ್ಯೋಽಪಿ ಜನ್ಯೈರ್ನಾನ್ನಂ ದೇಯಂ ಹರೇರ್ದಿನೇ ।
ಉತ್ತರಾಶಾಸ್ಥಿತೈರ್ವಿಪ್ರೈರ್ವಿಷ್ಣುಧರ್ಮಪರಾಯಣೈಃ ॥ ೧೬ ॥

ಸೋಽಹಂ ಕಥಂ ಕರೋಮ್ಯದ್ಯ ಅಭಕ್ಷ್ಯಸ್ಯ ತು ಭಕ್ಷಣಂ ।
ನೋಪಕ್ಷೀಣಶರೀರೋಽಹಂ ನಾಮಯಾವೀ ದ್ವಿಜೋತ್ತಮಾಃ ॥ ೧೭ ॥

---

೧೩. ಹೆಂಡವನ್ನು ಕುಡಿಯಬಾರದು. ಬ್ರಾಹ್ಮಣನನ್ನು ಸಂಹರಿಸಕೂಡದು. ಧರ್ಮಜ್ಞನಾದವನು ಪಗಡೆಯಾಟವನ್ನಾಡಬಾರದು. ಹರಿದಿನಗಳಲ್ಲಿ ಊಟಮಾಡಬಾರದು.

೧೪. ಅಭಕ್ಷ್ಯಭಕ್ಷಣ, ಪಾಪಕರವಾದ ಪರಸ್ತ್ರೀಸಂಗ ಮತ್ತು ಏಕಾದಶಿಯಲ್ಲಿ ಭೋಜನ ಇವುಗಳು ಅಧಃಪತನಕ್ಕೆ ಕಾರಣಗಳು.

೧೫. ನಿಷಿದ್ಧಕರ್ಮವನ್ನು ಮಾಡಿ ನೂರು ವರ್ಷಗಳು ಬದುಕಬೇಕೇನು? ಜ್ಞಾನಪೂರ್ವಕವಾಗಿ ಕೆಲಸಗಳನ್ನು ಮಾಡುವ ಯಾವ ಮನುಷ್ಯನು ಹರಿದಿನದಲ್ಲಿ ಊಟಮಾಡಿಯಾನು ?

೧೬. ವಿಷ್ಣುಧರ್ಮನಿರತರಾದ, ಭಾವಿಶ್ರೇಯಸ್ಸನ್ನು ಬಯಸುವ ಬ್ರಾಹ್ಮಣರು ಹರಿದಿನದಲ್ಲಿ ನಾಲ್ಕು ಕಾಲುಗಳುಳ್ಳ ಪಶುಗಳಿಗೂ ಸಹ ಅನ್ನವನ್ನು ಕೊಡಬಾರದು.

೧೭-೨೫. ಇದನ್ನೆಲ್ಲಾ ತಿಳಿದವನಾದ ನಾನು ಈಗ ನಿಷಿದ್ಧ ಭೋಜನವನ್ನು ಹೇಗೆ ಮಾಡಲಿ ?

ಸ ಕಥಂ ಹಿ ವ್ರತಂ ತ್ಯಕ್ಷೇ ವಿಮಾರ್ಗಸ್ಥದ್ವಿಜೋಕ್ತಿತಃ ।
ಧರ್ಮಭೂಷಣಸಂಜ್ಞೇನ ರಕ್ಷಮಾಣೇ ಧರಾತಲೇ ॥ ೧೮ ॥

ನ ಚ ರಕ್ಷಾವಿಹೀನೋಽಹಂ ಶತ್ರುಃ ಕೋಽಪಿ ನಮೇಽಸ್ತಿ ಚ ।
ಏವಂ ಜ್ಞಾತ್ವಾ ದ್ವಿಜಶ್ರೇಷ್ಠಾ ವೈಷ್ಣವವ್ರತಶಾಲಿನಃ ॥ ೧೯ ॥

ಭವದ್ಭಿರ್ನೋಽಚಿತಂ ವಕ್ತುಂ ಪ್ರತಿಕೂಲಂ ವ್ರತಾಪಹಂ ।
ಅಸಂಪರೀಕ್ಷ್ಯ ಯೇ ದದ್ಯುಃ ಪ್ರಾಯಶ್ಚಿತ್ತಂ ದ್ವಿಜಾತಯಃ ॥ ೨೦ ॥

ತೇಷಾಮೇವ ಹಿ ತತ್ಪಾಪಂ ಸ್ಮೃತಿವೈಕಲ್ಯಸಂಭವಂ ।
ದೇವೋ ವಾ ದಾನವೋ ವಾಪಿ ಗಂಧರ್ವೋ ರಾಕ್ಷಸೋಽಪಿ ವಾ ॥ ೨೧ ॥

ಸಿದ್ಧೋ ವಾ ಬ್ರಾಹ್ಮಣೋ ವಾಪಿ ಪಿತಾಸ್ಮಾಕರಿ ಸ್ವಯಂ ವದೇತ್ ।
ಹರಿರ್ವಾಪಿ ಹರೋ ವಾಪಿ ಮೋಹಿನೀಜನಕೋಽಪಿ ವಾ ॥ ೨೨ ॥

---

ದ್ವಿಜೋತ್ತಮರೇ! ನಾನು ಕ್ಷೀಣಶರೀರನೂ ಅಲ್ಲ. ರೋಗಿಯೂ ಆಗಿಲ್ಲ, ಹೀಗಿರುವಾಗ ಅಮಾರ್ಗದಲ್ಲಿರುವ ದ್ವಿಜರ ಮಾತಿನಿಂದ ವ್ರತವನ್ನು ಹೇಗೆ ಬಿಡಲಿ?

ಧರ್ಮಾಂಗದನಾಮಕನಾದ ಪುತ್ರನಿಂದ ಭೂಮಂಡಲವು ರಕ್ಷಿಸಲ್ಪಡುತ್ತಿರುವಾಗ ನಾನು ರಕ್ಷಕ ವಿಹೀನನಾಗಿಲ್ಲ. ಸುರಕ್ಷಿತನಾಗಿರುವೆನು. ನನಗೆ ಶತ್ರುಗಳಾರೂ ಇಲ್ಲ. ಇವನ್ನೆಲ್ಲಾ ತಿಳಿದೂ ವೈಷ್ಣವ ವ್ರತನಿಷ್ಠರು, ದ್ವಿಜಶ್ರೇಷ್ಠರೂ ಆದ ನೀವು ವ್ರತನಾಶಕವಾದ ಅಹಿತ ವಚನವನ್ನಾಡುವುದು ಯುಕ್ತವಲ್ಲ.

ವಿಮರ್ಶೆಮಾಡದೇ ಪ್ರಾಯಶ್ಚಿತ್ತವನ್ನು ಹೇಳುವ ದ್ವಿಜರಿಗೆ ಧರ್ಮಶಾಸ್ತ್ರವನ್ನು ಕೆಡಿಸಿದುದರಿಂದಾಗುವ ಆ ಪಾಪವು ಬರುತ್ತದೆ.

ದೇವತೆ, ದಾನವ, ಗಂಧರ್ವ, ರಾಕ್ಷಸ, ಸಿದ್ಧ, ಬ್ರಾಹ್ಮಣ, ತಂದೆ, ಹರಿ, ಹರ, ಬ್ರಹ್ಮ, ಸೂರ್ಯ, ಲೋಕಪಾಲಕ ಇವರಲ್ಲಿ ಯಾರೇ ಆಗಲಿ ಸಾಕ್ಷಾತ್ತಾಗಿ ಬಂದು ಹೇಳಿದರೂ ಏಕಾದಶಿಯ ದಿನದಲ್ಲಿ ನಾನು ಊಟಮಾಡುವುದಿಲ್ಲ.

ಬ್ರಾಹ್ಮಣರೇ! ಈ ಭೂಮಂಡಲದಲ್ಲಿ ಪ್ರಸಿದ್ಧನಾದ ರುಕ್ಮಾಂಗದ ರಾಜನು ನಿಷ್ಪ್ರಯೋಜನವಾದ ಸತ್ಯಪ್ರತಿಜ್ಞೆಯನ್ನು ಯಾವಾಗಲೂ ಮಾಡಲಾ

ದಿನಕೃಲ್ಲೋಕಪಾಲೋ ವಾ ನೋ ಭೋಕ್ಷ್ಯೇ ಹರಿವಾಸರೇ ।
ಯೋ ಹಿ ರುಕ್ಮಾಂಗದೋ ರಾಜಾ ವಿಖ್ಯಾತೋ ಭೂತಲೇ ದ್ವಿಜಾಃ ॥೨೩॥

ಸತ್ಯಪ್ರತಿಜ್ಞಾಂ ವಿಫಲಾಂ ನ ಕದಾಚಿತ್ಕರೋತಿ ಹಿ ।
ದ್ಯುಪತೇಃ ಕ್ಷೀಯತೇ ತೇಜೋ ಹಿಮವಾನ್ ಪರಿವರ್ತತೇ ॥ ೨೪ ॥

ಜಲಧಿಃ ಶೋಷಮಾಯಾತಿ ಪಾವಕಶ್ಚೋಷ್ಣತಾಂ ತ್ಯಜೇತ್ ।
ತಥಾಪಿ ನ ತ್ಯಜೇ ವಿಪ್ರಾ ವ್ರತಮೇಕಾದಶೀದಿನೇ ॥ ೨೫ ॥

ಪ್ರಸಿದ್ಧಿರೇಷಾ ಭುವನತ್ರಯೇಽಪಿ
ಆರಟ್ಯತೇ ಮೇ ಪಟಹೇನ ವಿಪ್ರಾಃ ।
ಗ್ರಾಮೇಷು ದೇಶೇಷು ಪರೇಷು ವಾಪಿ
ಯೇ ಭುಂಜ್ಯತೇ ರುಕ್ಮವಿಭೂಷಣಸ್ಯ ॥ ೨೬ ॥

---

ರನು. ಸೂರ್ಯನ ತೇಜಸ್ಸು ಕ್ಷೀಣವಾದರೂ, ಹಿಮವತ್ಪರ್ವತವು ಚಲಿಸಿದರೂ, ಸಮುದ್ರವು ಒಣಗಿಹೋದರೂ, ಅಗ್ನಿಯು ಉಷ್ಣತ್ವವನ್ನು ಬಿಟ್ಟರೂ (ಬೆಂಕಿಯು ಸುಡದಿದ್ದರೂ) ಏಕಾದಶಿಯ ದಿನದಲ್ಲಿ ಉಪವಾಸವ್ರತವನ್ನು ನಾನು ಬಿಡಲಾರೆನು.

೨೬-೩೦. ಬ್ರಾಹ್ಮಣರೇ! ಸಕಲ ಯಜ್ಞಗಳಲ್ಲಿಯೂ ಪ್ರಧಾನವಾದ ಪಾಪವನ್ನು ಪರಿಹರಿಸುವ, ಧರ್ಮವರ್ಧಕವಾದ ಮೋಕ್ಷವನ್ನು ಕೊಡುವ, ಜನ್ಮವನ್ನೇ ನಾಶಪಡಿಸುವುದೆಂದು ಪ್ರಸಿದ್ಧವಾಗಿರುವ, ತೇಜಸ್ಸಿಗಾಕರವಾದ ಹರಿದಿನದಲ್ಲಿ ರುಕ್ಮಾಂಗದರಾಜನ ದೇಶಕ್ಕೆ ಸೇರಿದ ಗ್ರಾಮ ಮತ್ತು ಪಟ್ಟಣಗಳಲ್ಲಿನ ಯಾವ ಜನರೇ ಆಗಲಿ ಊಟಮಾಡಿದರೆ ಅಂತಹವರು ವಧಾರ್ಹರು. ಶಿಕ್ಷಿಸಲ್ಪಟ್ಟು ದೇಶದಿಂದ ಹೊರಕ್ಕೆ ಕಳುಹಿಲ್ಪಡುವರು ಎಂಬು ದಾಗಿ ನನ್ನ ಪಟಹವು ಸಾರುತ್ತಿದೆಯೆಂಬುದು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ.

ದಂಡ್ಯಾಶ್ಚ ವಧ್ಯಾಶ್ಚ ಸುಯತ್ನಕಾಸ್ತೇ
ನ ಚಾಪಿ ವಾಸೋ ವಿಷಯೇ ಹಿ ತೇಷಾಂ ।
ಹರೇರ್ದಿನೇ ಸರ್ವಮುಖಪ್ರಧಾನೇ
ಪಾಪಾಪಹೇ ಧರ್ಮವಿವರ್ಧನೇ ಚ ॥ ೨೭ ॥

ಮೋಕ್ಷಪ್ರದೇ ಜನ್ಮನಿ ಕೃಂತನಾಖ್ಯೇ
ತೇಜೋನಿಧೌ ಸರ್ವಜನಪ್ರರೂಢೇ ।
ಏವಂವಿಧೇ ಪ್ರೋದ್ಗತ ಏವ ಶಬ್ದೇ
ಯದ್ಯಸ್ಮಿ ಭೋಕ್ತಾ ವೃಜಿನಸ್ಯ ಕರ್ತಾ ॥ ೨೮ ॥

ಅಮೇಧ್ಯಲಿಪ್ತಃ ಪಟಹೋ ಭವೇತ್ತದಾ
ಸಂಛಾದಿತೋ ನೀಲಮಯೇನ ವಾಸಸಾ ।
ಉತ್ಪಾದ್ಯ ಕೀರ್ತಿಂ ಸ್ವಯಮೇವ
ಜಂತುರ್ನಿಕೃಂತತಿ ಪ್ರಾಣಭಯಾಚ್ಚ ಪಾಪಾತ್ ॥ ೨೯ ॥

ಯಸ್ತಸ್ಯ ವಾಸೋ ನಿರಯೇ ಯುಗಾನಾಂ
ಷಷ್ಟಿರ್ಭವೇದ್ವಾ ಕ್ರಿಮಿದಂಶಸಂಜ್ಞೇ ।
ವೃಥಾ ಹಿ ಸೂತಾ ಮಮ ಸಾ ಜನಿತ್ರೀ
ಭವೇನ್ನಿರಾಶಾ ದ್ವಿಜಪಿತೃದೇವಾಃ ॥ ೩೦ ॥

---

ಈ ವಿಧವಾದ ಶಬ್ದವು ಹೊರಟು ಸಕಲಜನಗಳಲ್ಲಿಯೂ ರೂಢಮೂಲವಾಗಿ ನಾಟಿರುವಾಗ ನಾನೇ ಭೋಜನಮಾಡಿ ಪಾಪಕೃತ್ಯವನ್ನು ಮಾಡಿದರೆ ನನ್ನ ಪಟಹಕ್ಕೆ ಅಮೇಧ್ಯ ಬಳಿದಂತಾಗುವುದು.

ಅಷ್ಟೇ ಅಲ್ಲ ಪಟಹವನ್ನು ಕರಿಯಬಟ್ಟೆಯಲ್ಲಿ ಕಟ್ಟಿ ಮುಚ್ಚಿಡಬೇಕಾಗುತ್ತದೆ. ಯಾವ ಮನುಷ್ಯನಾದರೂ ಕೀರ್ತಿಯನ್ನು ತಾನೇ ಸಂಪಾದಿಸಿ ಪ್ರಾಣಭಯದಿಂದ ಪಾಪಮಾಡಿ ಆದನ್ನು ಕಳೆದುಕೊಳ್ಳುವನೋ ಅಂತಹವನು ಕ್ರಿಮಿದಂಶನಾಮಕವಾದ ನರಕದಲ್ಲಿ ಅರವತ್ತು ಯುಗಗಳಕಾಲ ವಾಸಮಾಡಬೇಕಾಗುವುದು. ನನ್ನ ತಾಯಿಯು ವ್ಯರ್ಥವಾಗಿ ನನ್ನನ್ನು ಪ್ರಸುವಿಸಿದಂತಾಗುವುದು. ದ್ವಿಜ ಪಿತೃದೇವತೆಗಳು ನಿರಾಶರಾಗುವರು.

ನೈವಸ್ತತೋ ಹರ್ಷಮುಪಾಶ್ರಯೇಚ್ಚ
ಸಲೇಖಕೋ ಮೇ ವ್ರತಭಂಗ ಏವ ।
ಕಿಂ ತೇನ ಜಾತೇನ ದುರಾತ್ಮನಾ ಹಿ
ದದಾತಿ ಹರ್ಷಂ ರಿಪುಸುಂದರೀಣಾಂ ॥ ೩೧ ॥

ಕುಕರ್ಮಣಾ ಪಾಪರತಿಃ ಕುಜಾತಿಃ
ಸರ್ವಸ್ಯ ನಾಶೀ ತ್ವಶುಚಿಸ್ಸ ಮೂಢಃ
ನ ಮನ್ಯತೇ ವೇದಪುರಾಣಶಾಸ್ತ್ರ
ಸಂತೇ ಪುರೀಂ ಯಾತಿ ದಿನೇಶಸೂನೋಃ ॥ ೩೨ ॥

ಕೃತ್ವೈವ ವಾಂತಿಂ ಪುನರತ್ತಿ ತಾಂ ಯು
ಸ್ತದ್ವತ್ಪ್ರತಿಜ್ಞಾವ್ರತಭಂಗಕಾರೀ ।
ವೇದಾಶ್ಚ ಶಾಸ್ತ್ರಂ ನ ಚ ತತ್ಪುರಾಣಂ
ನ ಚಾಪಿ ಸಂತಸ್ಮೃತಯೋ ನ ಚ ಸ್ಯುಃ ॥ ೩೩ ॥

---

೩೧. ಲೇಖಕನಾದ ಚಿತ್ರಗುಪ್ತನ ಸಹಿತ ಯಮನು ಸಂತೋಷವನ್ನು ಹೊಂದುವನು. ನನಗೆ ವ್ರತಭಂಗವಾಗುವುದು ಖಂಡಿತ. ಶತ್ರು ಪತ್ನಿಯರಿಗೆ ಸಂತೋಷವನ್ನುಂಟುಮಾಡುವಂತಹ ದುರಾತ್ಮನು ಹುಟ್ಟಿದುದರಿಂದ ಫಲವೇನು?

೩೨. ನಿಷಿದ್ಧಾಚರಣೆಯಿಂದ ಪಾಪವನ್ನು ಗಳಿಸುವುದರಲ್ಲಾಸಕ್ತನಾದ ಮೂಢನು ದುಷ್ಟಜಾತಿಯಲ್ಲಿ ಜನ್ಮವನ್ನು ಹೊಂದಿ ಅಶುದ್ಧನಾಗಿ ಸಕಲವನ್ನೂ ನಾಶಪಡಿಸಿಕೊಳ್ಳುವುದರಿಂದ ಅವನು ವೇದಪುರಾಣ ಶಾಸ್ತ್ರಗಳ ರಹಸ್ಯವನ್ನು ತಿಳಿಯಲಾರನು. ಅಂತಹವನು ಹಾಗೆಯೇ ಇದ್ದು ಕೊನೆಯಲ್ಲಿ ಯಮಪಟ್ಟಣಕ್ಕೆ ಹೋಗುವನು.

೩೩-೩೪. ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ ವ್ರತವನ್ನು ಬಿಡುವವನು ವಾಂತಿಯನ್ನು ಮಾಡಿ ಪುನಃ ಅದನ್ನೇ ತಿನ್ನುವವನಂತೆ ಅಶುಚಿಯಾಗು

ಯೇ ಮಾಧವಸ್ಯ ಪ್ರಿಯಕೃತ್ಯನಾಕುಲಾ
ವದಂತಿ ಶುದ್ಧೇಹ್ನಿ ಭುಜಿಕ್ರಿಯಾಂ ತು ।
ಶ್ರಾದ್ಧೇನ ತೇನಾಪಿ ನ ಚಾಸ್ತಿ ತೃಪ್ತಿಃ
ಪಿತುಶ್ಚ ಜೀರ್ಣೇನ ಹರೇರ್ದಿನೇ ತು ॥ ೩೪ ॥

ವ್ರತೇನ ಯದ್ವಿಷ್ಣುಪದಪ್ರದೇನ
ಸಾಕಂ ಕ್ಷಯಾಹೇ ನ ವದಂತು ಮೂಢಾಃ ॥ ೩೫ ॥

ಏತಚ್ಛ್ರುತ್ವಾ ತು ತದ್ವಾಕ್ಯಂ ಮೋಹಿನೀ ಜ್ವಲಿತಾಂತರಾ ।
ಕೋಪಸಂರಕ್ತನಯನಾ ಭರ್ತಾರಂ ಪರ್ಯಭಾಷತ ॥ ೩೬ ॥

ಕರೋಷಿ ಚೇನ್ನ ಮೇ ವಾಕ್ಯಂ ಧರ್ಮಬಾಹ್ಯೋ ಭವಿಷ್ಯಸಿ ।
ಧರ್ಮಬಾಹ್ಯೋ ಹಿ ಪುರುಷಃ ಪಾಂಸುನಾ ತುಲ್ಯತಾಂ ವ್ರಜೇತ್ ॥ ೩೭ ॥

---

ವನು. ಯಾವುದು ಮಾಧವನ ಇಷ್ಟಕ್ಕೆ ವಿರುದ್ಧವಾಗಿ ಶುದ್ಧವಾದ ಹರಿದಿನದಲ್ಲಿ ಭೋಜನಮಾಡಬೇಕೆಂದು ಹೇಳುತ್ತದೆಯೋ ಅದು ವೇದ, ಶಾಸ್ತ್ರ, ಪುರಾಣ ಅಥವಾ ಸ್ಮೃತಿಯೂ ಆಗಲಾರದು. ಮತ್ತು ಹಾಗೆ ಹೇಳುವವರು ಸಜ್ಜನರೆನಿಸಲಾರರು. ಹರಿದಿನದಲ್ಲಿ ಮಾಡಿದ ಶ್ರಾದ್ಧದಿಂದ ಪಿತೃಗಳಿಗೆ ತೃಪ್ತಿಯಾಗಲಾರದು.

೩೫. ಮೂಢರೇ! ಈ ವ್ರತವು ವೈಕುಂಠವನ್ನು ಕೊಡುತ್ತದೆ. ಇಂತಹ ಉತ್ತಮವ್ರತವನ್ನು ನರಕಸಾಧನವಾಗುವ ರೀತಿಯಲ್ಲಿ ಹೇಳಬಾರದು.

೩೬. ರಾಜನ ಈ ವಾಕ್ಯವನ್ನು ಕೇಳಿ ಮನಸ್ಸಿನಲ್ಲಿ ಕಿಚ್ಚು ಹತ್ತಿದಂತಾದ ಮೋಹಿನಿಯು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಗಂಡನನ್ನು ಕುರಿತು ಮಾತನಾಡಿದಳು.

೩೭. ರಾಜನೇ! ನೀನು ನನ್ನ ಮಾತನ್ನು ನಡೆಯಿಸದಿದ್ದರೆ ಧರ್ಮಬಾಹ್ಯನಾಗುವೆ. ಧರ್ಮಬಾಹ್ಯನಾದ ಮನುಷ್ಯನು ಧೂಳಿಗೆ ಸಮಾನನಾಗುವನು.

ಪಾಂಸುನಾ ಪೂರ್ಯತೇ ಗರ್ತಃ ಸ ಗರ್ತಖನಕೋ ಭವೇತ್ |
ತ್ವಯಾ ಮಮಾರ್ಪಿತಃ ಪಾಣಿರ್ವರಾಯ ಪೃಥಿವೀಪತೇ || ೩೮ ||

ತಾಮುಲ್ಲಂಘ್ಯ ಪ್ರತಿಜ್ಞಾಂ ಸ್ವಾಂ ಪಾಲಯಿಷ್ಯಸಿ ನೋ ಯದಿ |
ಕೃತಕೃತ್ಯಾ ತದಾ ಯಾಸ್ಯೇ ಪ್ರಾಪ್ತೋ ಧರ್ಮೋ ಮಯಾ ತವ || ೩೯ ||

ನ ಚಾಹಂ ತೇ ಪ್ರಿಯಾ ಭಾರ್ಯಾ ನ ಚ ತ್ವಂ ಮೇ ಪತಿರ್ನೃಪ |
ಉಪಧಾನಂ ಕರಿಷ್ಯಾಮಿ ಸ್ವಕಂ ಬಾಹುಂ ನ ತೇ ಯುಧಿ || ೪೦ ||

ಧಿಕ್ ತ್ವಾಂ ಧರ್ಮಕ್ಷಯಕರಂ ಸ್ವವಚೋಲೋಪಕಾರಕಂ |
ಮ್ಲೇಚ್ಛೇಷ್ವಪಿ ನ ದೃಶ್ಯೇತ ತ್ವಾದೃಶೋ ಧರ್ಮಲೋಪಕಃ || ೪೧ ||

ಸತ್ಯಾಚ್ಚಲಿತಮದ್ಯ ತ್ವಾಂ ಪರಿತ್ಯಕ್ಷ್ಯೇ ಸುಪಾಪಿನಂ |
ಏವಮುಕ್ತ್ವಾ ವರಾರೋಹಾ ಹ್ಯುದತಿಷ್ಠತ್ತ್ವರಾನ್ವಿತಾ || ೪೨ ||

---

೩೮. ಗರ್ತವು ಧೂಳಿಯಿಂದ ತುಂಬಲ್ಪಡುತ್ತದೆ. ಅವನು ಗರ್ತವನ್ನಗಿಯುವ ಇಲಿಯಾಗುವನು. ಭೂಪಾಲನೇ! ನಿನ್ನ ಕೈಯನ್ನು ನನ್ನ ಕೈ ಮೇಲಿಟ್ಟು ವರವನ್ನು ಕೊಟ್ಟಿರುವೆ.

೩೯. ಆ ಪ್ರತಿಜ್ಞೆಯನ್ನು ಲ್ಲಂಘಿಸಿ ನೀನೇ ಅದನ್ನು ನಡೆಯಿಸದಿದ್ದರೆ ಆಗ ನಾನು ಕೃತಕೃತ್ಯಳಾಗುವೆನು. ನನಗೆ ನಿನ್ನ ಪುಣ್ಯವೆಲ್ಲವೂ ಬಂದಿತು ನಾನು ಹೋಗುವೆನು.

೪೦. ದೊರೆಯೇ! ನಾನು ನಿನಗೆ ಹೆಂಡತಿಯಲ್ಲ, ನೀನು ನನಗೆ ಗಂಡನೂ ಅಲ್ಲ. ನನ್ನ ಬಾಹುವನ್ನು ನಿನಗೆ ತಲೆದಿಂಬನ್ನಾಗಿ ಮಾಡಲಾರೆನು.

೪೧. ನೀನು ಧರ್ಮಹಾನಿಕರನು. ಆಡಿದ ಮಾತನ್ನೇ ನಡೆಯಿಸದಿರುವವನು. ನಿನಗೆ ಧಿಕ್ಕಾರ! ಮ್ಲೇಂಛರಲ್ಲಿಯೂ ಸಹ ನಿನ್ನಂತಹ ಧರ್ಮನಾಶಕರಿಲ್ಲ.

೪೨. ಸತ್ಯವನ್ನು ಬಿಟ್ಟು ಅತ್ಯಂತ ಪಾಪಿಯಾದ ನಿನ್ನನ್ನು ಈಗಲೇ ಬಿಟ್ಟು ಬಿಡುವೆನು ಎಂಬುದಾಗಿ ಹೇಳಿ ವರಾರೋಹೆಯು ಬೇಗ ಎದ್ದಳು.

ಯಥಾ ಸತೀ ಹರಂ ತ್ಯಕ್ತ್ವಾ ದಿವ್ಯಾಭರಣಭೂಷಿತಾ |
ಪ್ರಸ್ಥಿತಾ ಸಾ ತದಾ ತನ್ವೀ ಭೂಸುರೈಶ್ಚ ಸಮನ್ವಿತಾ || ೪೩ ||

ವರಂ ಮದ್ಯಸ್ಯ ಸಂಸ್ಪರ್ಶೋ ನಾಸ್ಯ ಸಂಗೋ ನೃಪಸ್ಯ ವೈ |
ವರಂ ನೀಲಾಂಬರಸ್ಪರ್ಶೋ ನಾಸ್ಯ ಧರ್ಮಚ್ಯುತಸ್ಯ ಹಿ || ೪೪ ||

ಏವಂ ಹಿ ಮೋಹಿನೀ ರುಷ್ಟಾ ಪ್ರಲಪಂತೀ ತದಾ ಭೃಶಂ |
ಗೌತಮಾದಿಸಮಾಯುಕ್ತಾ ನಿರ್ಜಗಾಮ ಗೃಹಾದ್ಬಹಿಃ || ೪೫ ||

ಹಾ ತಾತ ಹಾ ಜಗನ್ನಾಥ ಸೃಷ್ಟಿಸ್ಥಿತ್ಯಂತಕಾರಕ |
ಇತ್ಯೇವ ಶಬ್ದಂ ಕ್ರೋಶಂತೀ ಬ್ರಹ್ಮಣೋ ಮಾನಸೋದ್ಭವಾ || ೪೬ ||

ಏತಸ್ಮಿನ್ನೇವ ಕಾಲೇ ತು ವಾಜಿರಾಜಂ ಸಮಾಸ್ಥಿತಃ |
ಅಟಿತ್ವಾ ಸಕಲಾಮುರ್ವೀಂ ಸಂಪ್ರಾಪ್ತೋ ಧರ್ಮಭೂಷಣಃ || ೪೭ ||

---

೪೩. ಮನೋಹರವಾದ ಆಭರಣಗಳಿಂದಲಂಕೃತಳಾದ ಸತೀ ದೇವಿಯು ಈಶ್ವರನನ್ನು ಬಿಟ್ಟು ಹೋದಂತೆ ಆ ಮೋಹಿನಿಯು ಬ್ರಾಹ್ಮಣ ಸಹಿತಳಾಗಿ ದೊರೆಯನ್ನು ಬಿಟ್ಟು ಹೊರಟಳು.

೪೪. ಮದ್ಯವನ್ನು ಸ್ಪರ್ಶಮಾಡುವುದಾದರೂ ಉತ್ತಮ. ಈ ದೊರೆಯ ಸಂಗವನ್ನು ಮಾಡಬಾರದು. ಕರಿಬಟ್ಟೆಯನ್ನಾದರೂ ಮುಟ್ಟುವುದು ಉತ್ತಮ ಧರ್ಮಭ್ರಷ್ಟನಾದ ಇವನನ್ನು ಮುಟ್ಟಬಾರದು.

೪೫. ಈರೀತಿ ಕುಪಿತಳಾದ ಮೋಹಿನಿಯು ಆಗ ಬಹಳವಾಗಿ ಅರಿಚಿ ಕೊಳ್ಳುತ್ತಾ ಗೌತಮಾದಿ ಬ್ರಾಹ್ಮಣರೊಡನೆ ಮನೆಯಿಂದ ಹೊರಕ್ಕೆ ಹೊರಟಳು.

೪೬. ಬ್ರಹ್ಮ ಮಾನಸಪುತ್ರಿಯಾದ ಮೋಹಿನಿಯು ಅಯ್ಯೋ! ಅಪ್ಪ! ಜಗನ್ನಾಥ! ಸೃಷ್ಟಿಸಂರಕ್ಷಣೆ ಲಯಗಳಕರ್ತನೇ! ಎಂಬುದಾಗಿಯೇ ಕೂಗುತ್ತಾ ಹೊರಟಳು.

೪೭. ಆ ಸಮಯಕ್ಕೆ ಸರಿಯಾಗಿ ಧರ್ಮಾಂಗದನು ಉತ್ತಮವಾದ ಕುದುರೆಯ ಮೇಲೆ ಕುಳಿತುಕೊಂಡು ಭೂಮಿಯನ್ನೆಲ್ಲಾ ಸಂಚರಿಸಿಕೊಂಡು ಅಲ್ಲಿಗೆ ಬಂದನು.

ಸಂಮುಖೋಭೂಜ್ಜನನ್ಯಾಸ್ತು ತ್ವರಾಶ್ವಸ್ಥೋ ವಿಮತ್ಸರಃ ।
ಕರ್ಣಾಭ್ಯಾಂ ತಸ್ಯ ಶಬ್ದೋಸೌ ವಿಶ್ರುತಃ ಪಿತೃವತ್ಸಲಃ ॥ ೪೮ ॥

ಮೋಹಿನೀವಕ್ತ್ರಸಂಭೂತೋ ವಿಪ್ರವಾಕ್ಯೋಪಬೃಂಹಿತಃ ।
ಧರ್ಮಾಂಗದೋ ಧರ್ಮಮೂರ್ತಿಃ ರುಕ್ಮಾಂಗದಸುತಸ್ತದಾ ॥ ೪೯ ॥

ಅವರುಹ್ಯ ಹಯಾತ್ತೂರ್ಣಂ ಪಪಾತ ಚರಣಾಂತಿಕೇ ।
ಪುನರುತ್ಥಾಯ ವಿಪ್ರೇಂದ್ರಾನ್ನನಾಮ ವಿಹಿತಾಂಜಲಿಃ ॥ ೫೦ ॥

ತತಃ ಶೀಘ್ರಗತಿಂ ದೃಷ್ಟ್ವಾ ಮೋಹಿನೀಂ ರುಷ್ಟಮಾನಸಾಂ ।
ಆಲಪ್ಯ ತರಸಾ ಮಾತಃ ಪ್ರಾಹ ರಾಜಜಃ ಕೃತಾಂಜಲಿಃ ॥ ೫೧ ॥

ಕೇನಾವಮಾನಿತಾ ದೇವಿ ಕಥಂ ರುಷ್ಟಾ ಪಿತುಃ ಪ್ರಿಯೇ ।
ಏಭಿರ್ದ್ವಿಜೇಂದ್ರೈಃ ಸಹಿತಾ ಕ್ವ ತ್ವಂ ಸಂಪ್ರಸ್ಥಿತಾಧುನಾ ॥ ೫೨ ॥

---

೪೮-೫೦. ಮಾತ್ಸರ್ಯರಹಿತನು, ಪಿತೃಪ್ರಿಯನೂ ಆದ ಧರ್ಮಾಂಗದನು ವೇಗವಾಗಿ ಓಡುವ ಕುದುರೆಯ ಮೇಲೆ ಕುಳಿತು ತಾಯಿಯಾದ ಮೋಹಿನಿಯ ಸಮ್ಮುಖಕ್ಕೆ ಬಂದನು. ಬ್ರಾಹ್ಮಣರ ಮಾತುಗಳಿಂದ ಸಮರ್ಥಿಸಲ್ಪಟ್ಟ, ಮೋಹಿನಿಯ ಬಾಯಿಯಿಂದ ಬರುತ್ತಿದ್ದ ಈ ಮಾತುಗಳನ್ನು ಕಿವಿಗಳಿಂದ ಕೇಳಿದನು.

ಆಗ ಧರ್ಮಮೂರ್ತಿಯೂ, ರುಕ್ಮಾಂಗದಪುತ್ರನೂ ಆದ ಧರ್ಮಾಂಗದನು ಕೂಡಲೇ ಕುದುರೆಯಿಂದಿಳಿದು ತಾಯಿಯ ಪಾದಗಳಿಗೆ ಅಡ್ಡಬಿದ್ದನು. ಪುನಃ ಎದ್ದು ಕೈಮುಗಿದುಕೊಂಡು ಬ್ರಾಹ್ಮಣವರ್ಯರಿಗೆ ನಮಸ್ಕಾರ ಮಾಡಿದನು.

೫೧-೫೨. ತರುವಾಯ ಬೇಗ ಹೋಗುತ್ತಿದ್ದ, ಕೋಪಗೊಂಡ ಮೋಹಿನಿಯನ್ನು ನೋಡಿ ಧರ್ಮಾಂಗದನು ವೇಗವಾಗಿ ಆಕೆಯನ್ನು ಹಿಂಬಾಲಿಸಿ ಮಾತೆಯೇ! ನನ್ನ ತಂದೆಗೆ ಪ್ರಿಯಳಾದ ನೀನು ಯಾರಿಂದ ಅವಮಾನಪಟ್ಟು ಕುಪಿತಳಾಗಿರುವೆ? ಈ ಬ್ರಾಹ್ಮಣಶ್ರೇಷ್ಠರ ಸಹಿತವಾಗಿ ನೀನು ಈಗ ಎಲ್ಲಿಗೆ ಹೊರಟಿರುವೆ?

ಧರ್ಮಾಂಗದವಚಃ ಶ್ರುತ್ವಾ ಮೋಹಿನೀ ವಾಕ್ಯಮಬ್ರವೀತ್ ।
ಪಿತಾ ತವಾನೃತೀ ಪುತ್ರ ಕರೋ ಯೇನ ವೃಥಾ ಕೃತಃ ॥ ೫೩ ॥

ಯಃ ಕರ್ತಾ ಸುಕೃತಂ ಭೂರಿ ರಕ್ತಾಶೋಕಾಕೃತಿಸ್ಥಿತಃ ।
ಧ್ವಜಾಂಕುಶಾಂಕಿತಃ ಶ್ರೀಮಾನ್ ದಕ್ಷಿಣಃ ಕನಕಾಂಗದಃ ॥ ೫೪ ॥

ರುಕ್ಮಾಂಗದೇನ ತೇ ಪಿತ್ರಾ ನ ಚಾಹಂ ವಸ್ತುಮುತ್ಸಹೇ ॥ ೫೫ ॥

ಧರ್ಮಾಂಗದ ಉವಾಚ

ಯದ್ಬ್ರವೀಷಿ ವಚೋ ದೇವಿ ತತ್ಕರ್ತಾಹಂ ನ ಸಂಶಯಃ ।
ಮಾ ಕೋಪಂ ಕುರು ಮಾತಸ್ತ್ವಂ ನಿವರ್ತಸ್ವ ಪಿತುಃ ಪ್ರಿಯೇ ॥ ೫೬ ॥

ಮೋಹಿನ್ಯುವಾಚ

ಅನೇನ ಸಮಯೇನಾಹಂ ತ್ವತ್ಪಿತ್ರಾ ಮಂದರಾಚಲೇ ।
ಕೃತಾ ಭಾರ್ಯಾ ಶಿವಃ ಸಾಕ್ಷೀ ಸ್ಥಿತೋ ಯತ್ರ ಸುರಾಧಿಪಃ ॥ ೫೭ ॥

---

೫೩-೫೪. ಧರ್ಮಾಂಗದನ ಮಾತನ್ನುಕೇಳಿ ಮೋಹಿನಿಯು, ಕುಮಾರ ! ಬಹು ಸುಕೃತವನ್ನು ಮಾಡಿದ ಧ್ವಜ, ಅಂಕುಶಗಳಿಂದಂಕಿತನಾದ, ಶ್ರೀಮಂತನೂ ಉದಾರನೂ ಆದ ಯಾವ ರುಕ್ಮಾಂಗದನು ವ್ಯರ್ಥವಾಗಿ ನನಗೆ ಕೈಯಿಂದ ಭಾಷೆ ಕೊಟ್ಟು ನನ್ನಲ್ಲಿ ಅನುರಾಗ ಹೊಂದಿ ಸುಖಪಟ್ಟಿರುವನೋ ಅಂತಹ ನಿನ್ನ ತಂದೆಯು ಈಗ ಸುಳ್ಳುಗಾರನಾಗಿರುವನು.

೫೫. ಆದಕಾರಣ ನಿನ್ನ ತಂದೆಯಾದ ರುಕ್ಮಾಂಗದನೊಡನೆ ನಾನು ಇರಲು ಇಷ್ಟಪಡುವುದಿಲ್ಲ ಎಂಬುದಾಗಿ ಹೇಳಿದಳು.

೫೬. ಧರ್ಮಾಂಗದನು ಹೇಳಿದನು :—ದೇವಿಯೇ! ನೀನು ಹೇಳುವುದನ್ನು ನಾನು ನಡೆಯಿಸುವೆನು ಸಂಶಯವಿಲ್ಲ. ಮಾತೆಯೇ! ಕೋಪಮಾಡಬೇಡ ; ಪಿತೃಪ್ರಿಯೆಯೇ ! ಹಿಂದಿರುಗಿ ಬಾ ಎಂದು ಹೇಳಿದನು.

೫೭. ಮೋಹಿನಿಯು ಹೇಳಿದಳು :—ಕುಮಾರನೇ! ನಾನು ಮಂದರಾಚಲದಲ್ಲಿ ನಿನ್ನ ತಂದೆಯಿಂದ ಈ ಪ್ರತಿಜ್ಞೆಯನ್ನು ತೆಗೆದುಕೊಂಡು ಅವನಿಗೆ ಪತ್ನಿಯಾದೆನು. ಇದಕ್ಕೆ ಅಲ್ಲಿದ್ದ ಸುರಾಧಿಪನಾದ ಶಿವನೇ ಸಾಕ್ಷಿಯು.

ಸಮಯೋತ್ಸ ಚ್ಯುತಃ ಸಮ್ಯಕ್ ಪಿತಾ ತೇ ರುಕ್ಮಭೂಷಣಃ ।
ನ ಪ್ರಯಚ್ಛತಿ ಮೇ ದೇಯಂ ತಸ್ಯ ವೃದ್ಧಿಂ ವಿಚಿಂತಯೇ ॥ ೫೮ ॥

ನ ಯಾಚೇ ಕಾಂಚನಂ ಧಾನ್ಯಂ ಹಸ್ತ್ಯಶ್ವಂ ಗ್ರಾಮವಾಸಸೀ ।
ಯೇನ ತಸ್ಯ ಭವೇದ್ಧಾನಿರ್ನ ಯಾಚೇ ತನ್ನೃಪಾತ್ಮಜ ॥ ೫೯ ॥

ಯೇನಾಸೌ ಪ್ರೀಣಯೇದ್ದೇಹಂ ಸ್ವಕೀಯಂ ದೇಹಿನಾಂ ವರ ।
ತನ್ಮಯಾ ಪ್ರಾರ್ಥಿತಂ ಪುತ್ರ ಸ ಮೋಹಾನ್ನ ಪ್ರಯಚ್ಛತಿ ॥ ೬೦ ॥

ತಸ್ಯೈವ ಚೋಪಕಾರಾಯ ಶರೀರಸ್ಯ ನೃಪಾತ್ಮಜ ।
ಯಾಚಿತಃ ಸುಖಹೇತೋಸ್ತು ಮಯಾ ನೃಪತಿಸತ್ತಮಃ ॥ ೬೧ ॥

ಸ್ಥಿತಃ ಸೋದ್ಯಾನೃತೇ ಘೋರೇ ಸುರಾಪಾನಸಮೋ ವಿಭುಃ ॥ ೬೨ ॥

---

೫೮. ನಿನ್ನ ತಂದೆಯಾದ ರುಕ್ಮಾಂಗದನು ಈಗ ಆ ಪ್ರತಿಜ್ಞೆಯನ್ನು ನಡೆಸದೆ ವಚನ ಭ್ರಷ್ಟನಾಗಿರುವನು. ನಾನು ಕೇಳಿದುದನ್ನು ನಡೆಸಲಿಲ್ಲ. ಅವನ ವೃದ್ಧಿಯನ್ನು ಚಿಂತಿಸುತ್ತಿರುವೆನು.

೫೯. ರಾಜಕುಮಾರಾ! ಸುವರ್ಣ, ಧಾನ್ಯ, ಆನೆ, ಕುದುರೆ, ಗ್ರಾಮ, ವಸ್ತ್ರ ಇವಾವುದನ್ನೂ ನಾನು ಬೇಡುವುದಿಲ್ಲ. ನನ್ನ ಬೇಡಿಕೆಯಿಂದ ಅವನಿಗೆ ಹಾನಿಯಾಗಲಾರದು.

೬೦. ಯಾವುದರಿಂದ ಪ್ರಾಣಿಗಳಿಗೆ ತಮ್ಮ ದೇಹವು ಸಂತುಷ್ಟವಾಗಿ ಪುಷ್ಟಿಯಾಗುವುದೋ ಅಂತಹ ವರವನ್ನು ನಾನು ಪ್ರಾರ್ಥಿಸುವೆನು. ಕುಮಾರ! ಆದರೂ ಮೋಹದಿಂದ ಅದನ್ನು ನನಗೆ ಕೊಡಲಿಲ್ಲ.

೬೧. ರಾಜಕುಮಾರಾ! ಅವನ ಶರೀರಕ್ಕೆ ಸುಖವನ್ನುಂಟುಮಾಡುವುದರಿಂದ ಉಪಕಾರವಾಗುವಂತಹ ವರವನ್ನು ನೃಪಶ್ರೇಷ್ಠನಲ್ಲಿ ಯಾಚಿಸಿದೆನು.

೬೨. ಆ ಪ್ರಭುವು ಈಗ ಮದ್ಯಪಾನಕ್ಕೆ ಸಮಾನವಾದ, ಘೋರಾನೃತದಲ್ಲಿ ತೊಡಗಿರುವನು.

ಸತ್ಯಚ್ಯುತಂ ನಿಷ್ಠುರವಾಕ್ಯಭಾಷಿಣಂ
ವಿಮುಕ್ತಧರ್ಮಂ ತ್ವನೃತಂ ಶಠಂ ಚ ।
ಪರಿತ್ಯಜೇಯಂ ಜನಕಂ ತವಾಧಮಂ
ನೈವ ಸ್ಥಿತಿರ್ಮೇ ಭವಿತಾ ಹಿ ತೇನ ॥ ೬೩ ॥

ತಚ್ಛ್ರುತ್ವಾ ಮೋಹಿನೀವಾಕ್ಯಂ ಪುತ್ರೋ ಧರ್ಮಾಂಗದೋಽಬ್ರವೀತ್ ।
ಮಯಿ ಜೀವತಿ ತಾತೋ ಮೇ ನ ಭವೇದನೃತೀ ಕ್ವಚಿತ್ ॥ ೬೪ ॥

ನಿವರ್ತಸ್ವ ವರಾರೋಹೇ ಕರಿಷ್ಯೇಽಹಂ ತವೇಪ್ಸಿತಂ ।
ಪಿತ್ರಾ ಮೇ ನಾನೃತಂ ದೇವಿ ಪೂರ್ವಮುಕ್ತಂ ಕದಾಚನ ॥ ೬೫ ॥

ಸ ಕಥಂ ಮಯಿ ಜಾತೇ ತು ವದಿಷ್ಯತಿ ಮಹೀಪತಿಃ ।
ಯಸ್ಯ ಸತ್ಯೇ ಸ್ಥಿತಾ ಲೋಕಾಃ ಸದೇವಾಸುರಮಾನುಷಾಃ ॥ ೬೬ ॥

---

೬೩. ಸತ್ಯವನ್ನು ಬಿಟ್ಟವನು, ನಿಷ್ಠುರವಾಕ್ಯಗಳನ್ನಾಡುತ್ತಿರುವವನು, ಧರ್ಮತ್ಯಾಗಿಯೂ, ಸುಳ್ಳುಗಾರನೂ, ದುಷ್ಟನು, ಅಧಮನೂ ಆದ ನಿನ್ನ ತಂದೆಯನ್ನು ಬಿಡುವೆನು ; ನಾನು ಅವನೊಡನೆ ಇರಲಾರೆನು.

೬೪. ಮೋಹಿನಿಯ ಆ ವಾಕ್ಯವನ್ನು ಕೇಳಿ ಧರ್ಮಾಂಗದ ಕುಮಾರನು ದೇವಿಯೇ! ನಾನು ಬದುಕಿರುವಾಗ ಎಂತಹ ಸಂದರ್ಭಬಂದರೂ ನನ್ನ ತಂದೆಯು ಸುಳ್ಳುಗಾರನಾಗಲಾರನು.

೬೫-೬೬. ವರಾರೋಹೇ! ನಿನ್ನ ಇಷ್ಟವನ್ನು ನಾನು ನೆರವೇರಿಸುವೆನು ಹಿಂದಿರುಗಿ ಬಾ! ಹಿಂದೆ ಯಾವಾಗಲೂ ನನ್ನ ತಂದೆಯು ಸುಳ್ಳು ಹೇಳಿದವನಲ್ಲ. ಅಂತಹ ದೊರೆಯು ನಾನಿರುವಾಗ ಹೇಗೆ ಸುಳ್ಳುಹೇಳಿಯಾನು! ಅವನ ಸತ್ಯನಿಷ್ಠೆಯಿಂದಲೇ ದೇವಾಸುರ ಮಾನುಷ ಲೋಕಗಳು ಸ್ಥಿತವಾಗಿರುವುವು.

ನ್ವೈವಸ್ವತಗೃಹಂ ಯೇನ ಕೃತಂ ಶೂನ್ಯಂ ಹಿ ಪಾಪಿಭಿಃ ।
ವಿಜೃಂಭತೇ ಯಸ್ಯ ಕೀರ್ತಿರ್ವ್ಯಾಪ್ತಂ ಬ್ರಹ್ಮಾಂಡಮಂಡಲಂ ॥ ೬೭ ॥

ಸ ಕಥಂ ಜಾಯತೇ ಭೂಪೋ ಮಿಥ್ಯಾ ವಚನಸಂಸ್ಥಿತಃ ।
ಅಶ್ರುತಂ ಭೂಪತೇರ್ವಾಕ್ಯಂ ಪರೋಕ್ಷೇ ಶ್ರದ್ದಧೇ ಕಥಂ ॥ ೬೮ ॥

ಮಮೋಪರಿ ದಯಾಂ ಕೃತ್ವಾ ನಿವರ್ತಸ್ವ ಶುಭಾನನೇ ।
ಏತದ್ಧರ್ಮಾಂಗದೇನೋಕ್ತಂ ವಾಕ್ಯಮಾಕರ್ಣ್ಯ ಮೋಹಿನೀ ॥ ೬೯ ॥

ನ್ಯವರ್ತತ ಮಹೀಪಾಲ ಪುತ್ರಸ್ಕಂಧಾವಲಂಬಿನೀ ।
ಯತ್ರ ರುಕ್ಮಾಂಗದಃ ಶೇತೇ ಮೃತಕಲ್ಪೋ ರವಿಪ್ರಭಃ ॥ ೭೦ ॥

ತಸ್ಮಿನ್ನಿವೇಶಯಾಮಾಸ ಶಯನೇ ಕಾಂಚನಾನ್ವಿತೇ ।
ದೀಪರತ್ನೈಃ ಸುಪ್ರಕಾಶೇ ವಿದ್ರುಮೈ ಶ್ಚಿತ್ರಿತೇ ವರೇ ॥ ೭೧ ॥

---

೬೭. ಅವನು ಯಮಲೋಕವನ್ನೇ ಪಾಪಿಗಳಿಲ್ಲದಂತೆ ಬರಿಯದಾಗಿ ಮಾಡಿರುವನು. ಅವನ ಕೀರ್ತಿಯು ಬ್ರಹ್ಮಾಂಡ ಮಂಡಲದಲ್ಲೆಲ್ಲಾ ವ್ಯಾಪಿಸಿ ಪ್ರಕಾಶಿಸುತ್ತಿದೆ.

೬೮. ಅಂತಹ ಭೂಪನು ಹೇಗೆ ಅನೃತಭಾಷಿಯಾಗುವನು! ದೊರೆಯ ಮಾತನ್ನು ಕೇಳದೆ ಪರೋಕ್ಷದಲ್ಲಿ ಇದನ್ನು ಹೇಗೆ ನಂಬಲಿ?

೬೯-೭೦. ಶುಭಾನನೇ! ನನ್ನ ಮೇಲೆ ದಯೆಮಾಡಿ ಹಿಂದಿರುಗಿ ಬಾ ಎಂದು ಹೇಳಿದ ಧರ್ಮಾಂಗದನ ಮಾತನ್ನು ಕೇಳಿ ಮೋಹಿನಿಯು ರಾಜಪುತ್ರನ ಭುಜದ ಮೇಲೆ ಕುಳಿತು ಸೂರ್ಯನಂತೆ ತೇಜಸ್ವಿಯಾದ ಮೃತಪ್ರಾಯನಾದ ರುಕ್ಮಾಂಗದನು ಮಲಗಿದ್ದೆಡೆಗೆ ಬಂದಳು.

೭೧-೭೨. ಸುವರ್ಣಯುಕ್ತವಾದ ದೀಪ ರತ್ನಗಳಿಂದ ಅತ್ಯಂತವಾಗಿ ಪ್ರಕಾಶಿಸುತ್ತಿರುವ, ಹವಳಗಳಿಂದ ಚಿತ್ರಿಸಲ್ಪಟ್ಟಿರುವ, ಉತ್ತಮವಾದ ವಜ್ರ

ಆಖಂಡಲಾಸ್ತ್ರಮಣಿಭಿಃ ಕೃತಪಾದೇ ಸುಕೋಮಲೇ |
ದೀರ್ಘವಿಸ್ತಾರಸಂಯುಕ್ತೇ ಹ್ಯನೌಪಮ್ಯೇ ಮನೋಹರೇ || ೭೨ ||

ತತಃ ಕೃತಾಂಜಲಿಃ ಪ್ರಾಹ ಪಿತರಂ ಶ್ಲಕ್ಷ್ಣಯಾ ಗಿರಾ |
ತಾತೈಷಾ ಜನನೀ ಮೇದ್ಯ ತ್ವಾಂ ವದಂತ್ಯನೃತೀ ತ್ವಿತಿ || ೭೩ ||

ಕಸ್ಮಾತ್ತ್ವಮನೃತೀ ಭೂಪ ಭವಿಷ್ಯಸಿ ಮಹೀತಲೇ |
ಕೋಶರತ್ನಾದಿನಿಚಯೇ ಗಜಾಶ್ವರಥಸಂಯುತೇ || ೭೪ ||

ರಾಜ್ಯೇ ಪ್ರಶಸ್ಯಮಾನೇ ತು ಸಪ್ತೋದಧಿಸಮನ್ವಿತೇ |
ಪ್ರದೇಹಿ ಸಕಲಂ ಹ್ಯಸ್ಯೈ ಯತ್ತ್ವಯಾ ಶ್ರಾವಿತಂ ವಿಭೋ || ೭೫ ||

ಮಯಿ ಚಾಪಧರೇ ತಾತ ಕೋ ವ್ಯಲೀಕಂ ಚರೇತ್ತವ |
ದೇಹಿ ಶಕ್ರಪದಂ ದೇವ್ಯೈ ಜಿತಂ ವಿದ್ಧಿ ಪುರಂದರಂ || ೭೬ ||

---

ಮಣಿಗಳಿಂದ ರಚಿಸಲ್ಪಟ್ಟ ಪಾದಗಳುಳ್ಳ, ಅತ್ಯಂತ ಕೋಮಲವಾದ, ಉದ್ದವಾಗಿ ಅಗಲವುಳ್ಳ, ಅಸದೃಶವಾದ ಆ ಸುಂದರ ಶಯನದಲ್ಲಿ ಆಕೆಯನ್ನು ಕೂಡಿಸಿದನು.

೭೩-೭೫. ಅನಂತರ ಕೈಮುಗಿದುಕೊಂಡು ತಂದೆಯನ್ನು ಕುರಿತು ಸ್ನೇಹಪೂರಿತವಾದ ವಚನಗಳಿಂದ ಅಪ್ಪ! ಈ ಮಾತೆಯು ಈಗ ನಿನ್ನನ್ನು ಸುಳ್ಳುಗಾರನೆಂದು ಹೇಳುತ್ತಿರುವಳು. ಭೂಪನೇ! ನೀನು ಭೂಮಂಡಲದಲ್ಲಿ ಭಂಡಾರ, ರತ್ನ ಮುಂತಾದವುಗಳ ಸಮೂಹವುಳ್ಳ ಗಜ, ಅಶ್ವ, ರಥಗಳಿಂದ ಕೂಡಿದ ಸಪ್ತ ಸಮುದ್ರಯುಕ್ತವಾದ ರಾಜ್ಯವನ್ನಾಳುತ್ತಿರುವಾಗ ಏತಕ್ಕಾಗಿ ಸುಳ್ಳುಗಾರನಾಗಿರುವೆ? ಸ್ವಾಮಿಯೇ! ನೀನು ಹೇಳಿರುವುದನ್ನೆಲ್ಲಾ ಈಕೆಗೆ ಕೊಡು.

೭೬. ಅಪ್ಪಾ! ನಾನು ಧನುರ್ಧಾರಿಯಾಗಿರುವಾಗ ನಿನ್ನನ್ನು ತಡೆಯುವವರಾರು? ಇಂದ್ರನೂ ಪರಾಜಿತನೆಂದು ತಿಳಿ. ದೇವಿಗೆ ಇಂದ್ರನ ಸ್ಥಾನವನ್ನೇ ಕೊಡು,

ವೈರಿಂಚ್ಯಂ ದುರ್ಲಭಂ ಯಚ್ಚ ಯೋಗಗಮ್ಯಂ ನಿರಂಜನಂ ।
ತಚ್ಚಾಪ್ಯಹಂ ಪ್ರದಾಸ್ಯಾಮಿ ತಪಸಾ ತೋಷ್ಯ ಪದ್ಮಜಂ ॥ ೭೭ ॥

ಸಮೀಹತೇ ಯಜ್ಜನನೀ ಮದೀಯಾ
ರಸಾತಲೇ ವಾಪಿ ಧರಾತಲೇ ವಾ ।
ತ್ರಿವಿಷ್ಟಪೇ ವಾಪಿ ಪರೇ ಪದೇ ವಾ
ದಾಸ್ಯಾಮಿ ಜಿತ್ವಾ ನರದೇವದಾನವಾನ್ ॥ ೭೮ ॥

ಅಹಂ ಹಿ ದಾಸಸ್ತವ ಭೂಪ ಯಸ್ಮಾತ್
ವಿಕ್ರೀಯತಾಂ ಮಾಮಥ ವಾ ತ್ವದರ್ಥಾಯ ।
ಹಸ್ತೇ ಹಿ ಪಾಪಸ್ಯ ದಿವಾಪ್ರಕೀರ್ತೇ
ರ್ವತ್ಸ್ಯಾಮಿ ತತ್ಕರ್ಮಕರಃ ಸುಭುಕ್ತಃ ॥ ೭೯ ॥

ಯದ್ದುಷ್ಕರಂ ಭೂಮಿಪತೇ ತ್ರಿಲೋಕ್ಯಾಂ
ನಾದೇಯಮಸ್ತೀಹ ತದಿಷ್ಟಭಾವಾತ್ ।
ತಚ್ಚಾಪಿ ರಾಜೇಂದ್ರ ದದಸ್ವ ದೇವ್ಯೈ
ಮಜ್ಜೀವಿತಂ ಮಜ್ಜನನೀಭವಂ ವಾ ॥ ೮೦ ॥

---

೭೭. ಯೋಗಿಗಮ್ಯವೂ, ನಿರ್ದೋಷವೂ, ಹೊಂದಲಶಕ್ಯವೂ ಆದ ಚತುರ್ಮುಖನ ಪದವಿಯನ್ನೂ ಸಹ ನಾನು ತಪಸ್ಸಿನಿಂದ ಅವನನ್ನು ಸಂತೋಷಪಡಿಸಿ ಕೊಡಿಸುವೆನು.

೭೮. ನನ್ನ ತಾಯಿಯು ಅಪೇಕ್ಷಿಸುವುದು ಏನೇ ಆಗಲಿ ಅದು ರಸಾತಳ, ಧರಾತಳ, ಸ್ವರ್ಗ, ಪರಮಪದ ಇವುಗಳಲ್ಲಿ ಎಲ್ಲಿದ್ದರೂ ಸರಿಯೆ ಮನುಷ್ಯರು, ದೇವತೆಗಳು ಅಥವಾ ದಾನವರನ್ನಾದರೂ ಜಯಿಸಿ ಅದನ್ನು ಕೊಡಿಸುವೆನು.

೭೯. ಭೂಪನೇ! ನಾನು ನಿನ್ನ ದಾಸನಾಗಿರುವುದರಿಂದ ಪಾಪಿಯಾದ ನೀಚನಿಗಾದರೂ ಸರಿ ನನ್ನನ್ನು ವಿಕ್ರಯಿಸಿ ಆಕೆಯನ್ನು ಸಂತೋಷಪಡಿಸು; ನಾನು ಅವನ ಆಳಾಗಿ ಅನುಭವಿಸಿಕೊಂಡಿರುವೆನು.

೮೦. ಭೂಮಿಪತಿಯೇ! ಆಕೆಯು ಅಪೇಕ್ಷಿಸಿದ ಮೇಲೆ ಮೂರುಲೋಕಗಳಲ್ಲಿಯೂ ದುಷ್ಕರವಾದರೂ ಅದು ಅವಶ್ಯ ಕೊಡತಕ್ಕುದೇ ಸರಿ. ಅಂತಹದನ್ನೂ

ತೇನೈವ ಸದ್ಯೋ ನೃಪನಾಥ ಲೋಕೇ
ಸತ್ಕೀರ್ತಿಯುಕ್ತೋ ಭವ ಸರ್ವದೈವ ।
ವಿರಾಜಯಿತ್ವಾ ಸ್ವಗುಣೈರ್ನೃಪೌಘಾನ್
ಕರೈರಿವಾತ್ಮಪ್ರಭವೈಃ ಖಶೋಭ್ಯೈಃ ॥ ೮೧ ॥

ಕೀರ್ತಿಪ್ರಭಂಗೇ ವೃಜಿನಂ ಭವಿಷ್ಯತಿ
ಪ್ರಜಾವಧೇ ಯನ್ಮನುರಾಹ ಸತ್ಯಂ ।
ಸಮಾಪಯಿತ್ವಾ ವಿಮಲಂ ಯಶಃ ಸ್ವಂ
ಕಥಂ ಸುಖೀ ಸ್ಯಾಂ ನೃಪತೇ ತತಃ ಕ್ಷಮಃ ॥ ೮೨ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಪಂಚವಿಂಶೋಽಧ್ಯಾಯಃ

---

ಕೊಡು. ರಾಜೇಂದ್ರನೇ! ದೇವಿಗೆ ನನ್ನ ಪ್ರಾಣವನ್ನಾಗಲಿ ಅಥವಾ ನನ್ನ ಜನನಿಯ ಪ್ರಾಣವನ್ನಾಗಲಿ ಆಕೆಯು ಅಪೇಕ್ಷಿಸಿದರೆ ಕೊಡು.

೮೧. ರಾಜರಾಜನೇ! ಅಂತಹುದನ್ನಾದರೂ ಕೊಟ್ಟು ತನ್ನಿಂದಲೇ ಉತ್ಪನ್ನವಾದ, ಆಕಾಶದಲ್ಲಿ ಶೋಭಿಸುತ್ತಿರುವ ಕಿರಣಗಳಿಂದಲೋಪಾದಿಯಲ್ಲಿ ತನ್ನಗುಣಗಳಿಂದಲೇ ರಾಜಸಮೂಹವನ್ನು ಪ್ರಕಾಶಗೊಳಿಸಿ, ಲೋಕದಲ್ಲಿ ಶಾಶ್ವತವಾದ ಸತ್ಕೀರ್ತಿಯನ್ನು ಗಳಿಸುವವನಾಗು.

೮೨. ರಾಜನು ಯಶಸ್ಸನ್ನು ಕಳೆದುಕೊಂಡರೆ ಪ್ರಜೆಗಳನ್ನು ಸಂಹರಿಸಿದ ಪಾಪಭಾಗಿಯಾಗುವನೆಂದು ಮನುವು ಹೇಳಿರುವುದು ಸತ್ಯವಾದುದು. ನಿರ್ಮಲವಾದ ತನ್ನ ಯಶಸ್ಸನ್ನು ಹೋಗಲಾಡಿಸಿಕೊಂಡಮೇಲೆ ಸುಖಿಯಾಗಿರುವುದು ಹೇಗೆ? ಆಮೇಲೆ ಶಾಂತಿಯಾದರೂ ಹೇಗಿದ್ದೀತು?

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯ
ಕಥನೆಯೆಂಬ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಮೋಹಿನಿಯ ಮಾತನ್ನು ಕೇಳಿ ಬ್ರಾಹ್ಮಣರು ಅದನ್ನೇ ಸಾಧುವೆಂದು ಭಾವಿಸಿ ರಾಜನಿಗೆ ಹರಿದಿನದಲ್ಲಿ ಭೋಜನಮಾಡಬಹುದೆಂದು ಮುಂತಾಗಿ ನಾನಾವಿಧವಾಗಿ ಬೋಧಿಸಿದರು. ರಾಜನು ನೀವು ಹೇಳುವುದು ಶಾಸ್ತ್ರರಹಸ್ಯ ವನ್ನರಿಯದ ಮಾತು, ಸರ್ವಥಾ ಏಕಾದಶಿಯ ದಿನ ಭೋಜನ ಮಾಡಬಾರದು. ಎಂಬುದಾಗಿ ಬ್ರಾಹ್ಮಣರಿಗೆ ಹೇಳಲು ಮೋಹಿನಿಯು ನೀನು ಏಕಾದಶಿಯಲ್ಲಿ ಭೋಜನಮಾಡದಿದ್ದರೆ ನನಗೆ ಕೊಟ್ಟಿರುವ ವರವನ್ನು ನಡೆಯಿಸದೆ ಸುಳ್ಳುಗಾರ ನಾಗುತ್ತೀಯೆ. ನಿನ್ನಂತಹವನ ಸಹವಾಸವನ್ನು ನಾನು ಮಾಡುವುದಿಲ್ಲವೆಂದು ರಾಜನನ್ನು ಧಿಕ್ಕರಿಸಿ ಬ್ರಾಹ್ಮಣರ ಸಹಿತವಾಗಿ ಗಟ್ಟಿಯಾಗಿ ಕೂಗಿಕೊಳ್ಳುತ್ತಾ ಅಲ್ಲಿಂದ ವೇಗವಾಗಿ ಹೊರಗೆ ಹೊರಟಳು. ಆ ಹೊತ್ತಿಗೆ ಸರಿಯಾಗಿ ಧರ್ಮಾಂ ಗದನು ಕುದುರೆಯಮೇಲೆ ಕುಳಿತುಕೊಂಡು ಅಲ್ಲಿಗೆ ಬಂದು ಆಕೆಯನ್ನು ನೋಡಿ ಕುದುರೆಯಿಂದಿಳಿದು ನಮಸ್ಕರಿಸಿ, ಹೀಗೆ ಕೋಪದಿಂದ ಹೊರ ಹೊರಡಲು ಕಾರ ಣವೇನೆಂದು ಕೇಳಲಾಗಿ ರುಕ್ಮಾಂಗದನು ಕೊಟ್ಟವರವನ್ನು ನಡೆಯಿಸದೇ ಸುಳ್ಳು ಗಾರನಾಗಿರುವುದರಿಂದ ನಾನು ಅವನನ್ನು ಬಿಟ್ಟುಹೋಗುವೆನೆಂದು ಮೋಹಿ ನಿಯು ಹೇಳಿದಳು. ಆಗ ಧರ್ಮಾಂಗದನು ನಿನ್ನ ಇಷ್ಟವನ್ನು ನಾನು ನೆರವೇರಿ ಸುವೆನು, ನನ್ನ ತಂದೆಯು ಎಂದಿಗೂ ಆಡಿದ ಮಾತನ್ನು ತಪ್ಪಲಾರನು. ಅಲ್ಲಿನ ವಿದ್ಯಮಾನಗಳನ್ನು ವಿಚಾರಿಸೋಣ, ನೀನು ಹಿಂದಿರುಗಿ ಬಾ ಎಂದು ಹೇಳಿ ಆಕೆ ಯನ್ನು ಕರೆದುಕೊಂಡು ರುಕ್ಮಾಂಗದನು ಮಲಗಿದ್ದೆಡೆಗೆ ಬಂದು ಅವನ ಹಾಸಿ ಗೆಯ ಮೇಲೆ ಕುಳ್ಳಿರಿಸಿ ತಂದೆಯನ್ನು ನಡೆದ ವೃತ್ತಾಂತವೇನೆಂದು ಕೇಳಿ ಮೋಹಿ ನಿಯು ಏನನ್ನು ಇಚ್ಛಿಸಿದರೂ ಅದನ್ನು ಕೊಟ್ಟು ನೀನು ಯಶಸ್ಸನ್ನು ಸಂಪಾ ದಿಸು. ಅದಕ್ಕೆ ನಾನು ಸರ್ವವಿಧದಿಂದಲೂ ನೆರವಾಗುವೆನು ಮುಂತಾಗಿ ತಂದೆ ಯಲ್ಲಿ ವಿಜ್ಞಾಪಿಸಿದನು.

---

# ಷಡ್ವಿಂಶೋಽಧ್ಯಾಯಃ

---

**ರಾಜೋವಾಚ**

**ಕೀರ್ತಿರ್ನಶ್ಯತು ಮೇ ಪುತ್ರ ಹ್ಯನೃತೀ ವಾ ಭವಾಮ್ಯಹಂ ।**
**ಗತೋ ವಾ ನರಕಂ ಘೋರಂ ಕಥಂ ಭೋಕ್ಷ್ಯೇ ಹರೇರ್ದಿನೇ ॥ ೧ ॥**

**ಬ್ರಹ್ಮಣೋ ನಿಲಯಂ ಯಾತು ದೇವೀಯಂ ಮೋಹಿನೀ ಸುತ ।**
**ಭೂಯೋ ಭೂಯೋ ವದತಿ ಮಾಂ ದುರ್ಮೇಧಾಶ್ಚ ಸುಬಾಲಿಶಾ ॥ ೨ ॥**

**ನಾಪರಂ ಕಾಮಯೇದ್ರಾಜ್ಯಂ ವಸುಧಾಂ ವಸು ಕಿಂಚನ ।**
**ಮುಕ್ತ್ವೈಕಂ ವಾಸರೇ ವಿಷ್ಣೋರ್ಭೋಜನಂ ಪಾಪನಾಶನೇ ॥ ೩ ॥**

---

## ಇಪ್ಪತ್ತಾರನೆಯ ಅಧ್ಯಾಯವು

೧. ರಾಜನು ಹೇಳಿದನು :—ಕುಮಾರಾ! ನನ್ನ ಕೀರ್ತಿಯು ಹೋಗಲಿ, ನಾನು ಸುಳ್ಳುಗಾರನಾದರೂ ಆಗುವೆನು, ಘೋರವಾದ ನರಕಕ್ಕಾದರೂ ಹೋಗುವೆನು, ಏಕಾದಶಿಯ ದಿನವಲ್ಲಿ ಹೇಗೆ ಊಟಮಾಡಲಿ?

೨-೩. ಪುತ್ರ! ಈ ಮೋಹಿನೀ ದೇವಿಯು ಬ್ರಹ್ಮಸದನಕ್ಕೆ ಹೋಗಲಿ, ಅತ್ಯಂತ ಮೂರ್ಖಳೂ ದುರ್ಬುದ್ಧಿಯೂ ಆದ "ಇವಳು ರಾಜ್ಯ, ಭೂಮಿ, ದ್ರವ್ಯ ಇದಾವುದನ್ನೂ ನಾನು ಬಯಸುವುದಿಲ್ಲ, ಪಾಪನಾಶಕವಾದ ಹರಿದಿನದಲ್ಲಿ ಊಟ ಮಾಡುವುದೊಂದನ್ನು ಬಿಟ್ಟು ಬೇರಾವುದನ್ನೂ ಅಪೇಕ್ಷಿಸುವುದಿಲ್ಲ" ಎಂದು ಬಾರಿಬಾರಿಗೂ ನನಗೆ ಹೇಳುತ್ತಿರುವಳು.

ಯದ್ಯಹಂ ಕುತ್ಸಿತಾಂ ಯೋನಿಂ ವ್ರಜೇಯಂ ಕ್ರಿಮಿಸಂಜ್ಞಿತಾಂ ।
ತಥಾಪಿ ನೈವ ಕರ್ತಾಹಂ ಭೋಜನಂ ಹರಿವಾಸರೇ ॥ ೪ ॥

ಏಷಾಂ ಗುರುತರಾ ಭೂತ್ವಾ ಲೋಕಾನಾಂ ಶಿಕ್ಷಯಾನ್ವಿತಾ ।
ದುಂದುಭೀ ಕುರ್ವತೀ ನಾದಂ ಸಾ ಕಥಂ ವಿತಥೀಭವೇತ್ ॥ ೫ ॥

ಅಭಕ್ಷ್ಯಭಕ್ಷಣಂ ಕೃತ್ವಾ ಅಗಮ್ಯಾಗಮನಂ ತಥಾ ।
ಅಪೇಯಂ ಚೈವ ಪೀತ್ವಾ ತು ಕಿಂ ಜೀವೇಚ್ಛರದಃ ಶತಂ ॥ ೬ ॥

ಅಸತ್ಯೋ ವಾಪಿ ಕೃತ್ವಾಹಂ ತ್ಯಕ್ತರಾಜ್ಯನಯಃ ಕ್ಷಿತೌ ।
ಧಿಕ್ಕೃತೋಪಿ ಜನೈಃ ಸರ್ವೈರ್ನ ಭೋಕ್ಷ್ಯೇ ಹರಿವಾಸರೇ ॥ ೭ ॥

ವಿಯೋಗೋ ಚಪಲಾಪಾಂಗ್ಯಾ ಯದಿ ಚೇನ್ಮರಣಂ ಮಮ ।
ತಚ್ಚಾಪಿ ವರಮೇವಾತ್ರ ನ ಭೋಕ್ಷ್ಯೇ ಹರಿವಾಸರೇ ॥ ೮ ॥

---

೪. ನಾನು ಕ್ರಿಮಿಯೆಂಬ ಕುತ್ಸಿತ ಜನ್ಮವನ್ನು ತಾಳಿದರೂ ಸಹ ಹರಿದಿನದಲ್ಲಿ ಭೋಜನಮಾಡಲಾರೆನು.

೫. ಉತ್ತಮ ಗುರುವಾಗಿ ಈ ಲೋಕವನ್ನೆಲ್ಲಾ ಶಿಕ್ಷಿಸುತ್ತಿರುವ ನಗಾರಿಯು ಸಾರುತ್ತಿರುವಾಗ ಅದು ಹೇಗೆ ಸುಳ್ಳಾದೀತು ?

೬. ತಿನ್ನಬಾರದುದನ್ನು ತಿಂದು ಅಗಮ್ಯಾಗಮನ ಮಾಡಿ ಅಪೇಯವಾದುದನ್ನು ಪಾನಮಾಡಿಯಾದರೂ ನೂರು ವರ್ಷಗಳು ಬದುಕಬೇಕೇ ಏನು ?

೭. ನಾನು ಸುಳ್ಳುಗಾರನಾದರೂ ಸರಿ, ಭೂಮಿಯಲ್ಲಿ ರಾಜನೀತಿಯನ್ನು ಬಿಟ್ಟು ಸಕಲ ಜನಗಳಿಂದಲೂ ಧಿಕ್ಕರಿಸಲ್ಪಟ್ಟರೂ ಸರಿ. ಏನೇ ಆಗಲಿ ಹರಿದಿನದಲ್ಲಿ ಊಟಮಾಡಲಾರೆನು.

೮. ಈ ಚಪಲಾಕ್ಷಿಯ ವಿಯೋಗದಿಂದ ನಾನು ಸತ್ತರೂ ಸಹ ಒಳ್ಳೆಯದೇ ಆಯಿತು. ಈ ಹರಿದಿನದಲ್ಲಿ ಮಾತ್ರ ಊಟಮಾಡಲಾರೆನು.

ಕಥಂ ಹರ್ಷಮಹಂ ಕರ್ತಾ ಮಾರ್ತಾಂಡತನಯಸ್ಯ ವೈ ।
ವ್ರಜದ್ಭಿರ್ಮನುಜೈರ್ಮಾರ್ಗೇ ನಿರಯಸ್ಯಾತಿದುಃಖಿತೈಃ ॥ ೯ ॥

ಯಾಸ್ತು ಶೂನ್ಯಾಃ ಕೃತಾಸ್ತಾತ ಮಯಾ ನರಕಪಂಕ್ತಯಃ ।
ಜನೈಃ ಪೂರ್ಣಾ ಭವಿಷ್ಯಂತಿ ಮಯಿ ಭುಕ್ತೇ ತು ತಾಃ ಸುತಃ ॥ ೧೦ ॥

ಮಾಸ್ಮ ಸೀಮಂತಿನೀ ಪುತ್ರ ಕುಕ್ಷೌ ಸಂಧಾರಯೇತ್ಸುತಂ ।
ಸಮರ್ಥೋ ಯಸ್ತು ಶತ್ರೂಣಾಂ ಹರ್ಷಂ ಸಂಜನಯೇದ್ಭುವಿ ॥ ೧೧ ॥

ಭೋಜನಂ ವಾಸರೇ ವಿಷ್ಣೋರೇತದೇವ ಹಿ ಯಾಚತೇ ।
ತನ್ನ ದಾಸ್ಯಾಮಿ ಮೋಹಿನ್ಯಾ ಯಾಚಿತೋಽಪಿ ಸುರಾಸುರೈಃ ॥ ೧೨ ॥

ಪಿಬೇದ್ವಿಷಂ ವಿಶೇದ್ವಹ್ನಿಂ ನಿಪತೇತ್ ಪರ್ವತಾಗ್ರತಃ ।
ಆಕಾಶಭಾಸಾ ಸ್ವಶಿರಶ್ಛಿಂದ್ಯಾದೇವ ವರಾಸಿನಾ ॥ ೧೩ ॥

---

೯. ನಾನು ಮನುಷ್ಯರನ್ನು ಅತ್ಯಂತ ದುಃಖದಿಂದ ನರಕಮಾರ್ಗದಲ್ಲಿ ಹೋಗುವಂತೆಮಾಡಿ ಯಮನಿಗೆ ಸಂತೋಷವನ್ನು ಹೇಗೆ ಉಂಟುಮಾಡಲಿ?

೧೦. ವತ್ಸ! ಯಾವ ನರಕಮಾರ್ಗಗಳು ನನ್ನಿಂದ ಶೂನ್ಯವಾಗಿ ಮಾಡಲ್ಪಟ್ಟವೋ, ಅವೆಲ್ಲವೂ ನಾನು ಹರಿದಿನದಲ್ಲಿ ಭೋಜನಮಾಡಿದರೆ ತುಂಬುವುವು.

೧೧. ಪುತ್ರ! ಯಾವನು ಸಮರ್ಥನಾಗಿದ್ದರೂ ಶತ್ರುಗಳಿಗೆ ಸಂತೋಷವನ್ನುಂಟುಮಾಡುವನೋ ಅಂತಹ ಮಗನನ್ನು ಭೂಲೋಕದಲ್ಲಿ ಮುತ್ತೈದೆಯು ಗರ್ಭದಲ್ಲಿ ಧರಿಸಬಾರದು.

೧೨. ಇವಳು ಹರಿದಿನದಲ್ಲಿ ಭೋಜನ ಮಾಡಬೇಕೆಂಬುದನ್ನೇ ಯಾಚಿಸುತ್ತಿರವಳು. ದೇವಾಸುರರು ಬಂದು ಹೇಳಿದರೂ ಅದನ್ನು ಮೋಹಿನಿಗೆ ನಾನು ಕೊಡುವುದಿಲ್ಲ.

೧೩-೧೫. ವಿಷವನ್ನಾದರೂ ಕುಡಿದಾನು! ಅಗ್ನಿಪ್ರವೇಶವನ್ನಾದರೂ ಮಾಡಿಯಾನು! ಪರ್ವತಶಿಖರದಿಂದಲಾದರೂ ಬಿದ್ದಾನು! ಆಕಾಶದಲ್ಲಿ ವಿರಾ

ನ ಭೋಕ್ಷ್ಯತೇ ಹರಿದಿನೇ ರಾಜಾ ರುಕ್ಮಾಂಗದಃ ಕ್ಷಿತೌ ।
ರುಕ್ಮಾಂಗದೇತಿ ಮನ್ನಾಮ ಪ್ರಸಿದ್ಧಂ ಭುವನತ್ರಯೇ ॥ ೧೪ ॥

ಏಕಾದಶ್ಯುಪವಾಸೇನ ತನ್ಮಯಾ ಸಂಚಿತಂ ಯಶಃ ।
ಸ ಕಥಂ ಭೋಜನಂ ಕೃತ್ವಾ ನಾಶಯೇ ಸ್ವಕೃತಂ ಯಶಃ ॥ ೧೫ ॥

ಮ್ರಿಯತೇ ಯದಿ ವಾ ಗಚ್ಛತಿ
ನಿಪತತಿ ನಶ್ಯೇಚ್ಚ ಖಂಡಶೋ ವಾಪಿ ।
ವಿರಮತಿ ತದಾಪಿ ನ ಚೇತೋ
ಮಾಮಕಮಿತಿ ಮೋಹಿನೀಹೇತೋಃ ॥ ೧೬ ॥

ಪರಿತ್ಯಜಾಮ್ಯೇಷ ನಿಜಂ ಹಿ ಜೀವಿತಂ
ಲೋಕೈಃ ಸಮೇತಃ ಸಹ ದಾರಭೃತ್ಯೈಃ ।

---

ಜಿಸುತ್ತಿರುವ ಉತ್ತಮ ಖಡ್ಗದಿಂದ ತನ್ನ ತಲೆಯನ್ನಾದರೂ ಕತ್ತರಿಸಿಕೊಂಡಾನು! ಈ ರುಕ್ಮಾಂಗದರಾಜನು ಹರಿದಿನದಲ್ಲಿ ಊಟಮಾಡುವುದಿಲ್ಲ.

ರುಕ್ಮಾಂಗದನೆಂಬ ನನ್ನ ಹೆಸರು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿರುವುದಕ್ಕೆ ಕಾರಣವಾದ ಯಶಸ್ಸು ಏಕಾದಶಿಯ ಉಪವಾಸದಿಂದಲೇ ನನಗೆ ಬಂದಿರುವುದು. ಹಾಗೆ ನಾನು ಸಂಪಾದಿಸಿದ ಅಂತಹ ಕೀರ್ತಿಯನ್ನು ಹರಿದಿನದಲ್ಲಿ ಊಟಮಾಡಿ ಹೇಗೆ ನಾಶಮಾಡಿಕೊಳ್ಳಲಿ?

೧೬. ಸತ್ತರೂ, ಹೋದರೂ, ಬಿದ್ದರೂ, ಚೂರುಚೂರಾಗಿ ಹಾಳಾದರೂ ಸಹ ನನ್ನ ಮನಸ್ಸು ಮೋಹಿನಿಗಾಗಿ ದುರ್ವಿಷಯದಲ್ಲಿ ಪ್ರವರ್ತಿಸುವುದಿಲ್ಲ.

೧೭. ಈ ರುಕ್ಮಾಂಗದನಾದ ನಾನು ಪ್ರಜೆಗಳು, ದಾರ, ಭೃತ್ಯರೊಡನೆ

ನ ತ್ವೇವ ಕುರ್ಯಾಂ ಮಧುಸೂದನಸ್ಯ
ದಿನೇ ಸುಪುಣ್ಯೇಽನ್ನನಿಷೇವಣಂ ಹಿ ॥ ೧೭ ॥

ಇತಿ ಶ್ರೀನಾರದೀಯಪುರಾಣೋತ್ತರಭಾಗೇ ಮೋಹಿನೀಚರಿತೇ
ಷಡ್ವಿಂಶೋಽಧ್ಯಾಯಃ

---

ಪ್ರಾಣವನ್ನಾದರೂ ಬಿಡುವೆನು. ಅತ್ಯಂತ ಪುಣ್ಯಕರವಾದ ಹರಿದಿನದಲ್ಲಿ ಅನ್ನವನ್ನು ತಿನ್ನುವುದೇ ಇಲ್ಲ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯ
ವರ್ಣನೆಯೆಂಬ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಧರ್ಮಾಂಗದ ಕುಮಾರನ ಮಾತನ್ನು ಕೇಳಿ ರುಕ್ಮಾಂಗದರಾಜನು ಅವನಿಗೆ ಮೋಹಿನಿಯು ಬೇಡಿದ ವರಸ್ವರೂಪವನ್ನು ವಿವರಿಸಿ ಅದು ಕರ್ತವ್ಯವಲ್ಲ, ಇಂತಹ ವಿಷಯದಲ್ಲಿ ಸುಳ್ಳುಹೇಳಿ ಅದರಿಂದಾಗುವ ಅನರ್ಥವನ್ನು ಅನುಭವಿಸಿದರೂ ಚಿಂತೆಯಿಲ್ಲ. ವರದಂತೆ ಏಕಾದಶಿಯ ದಿನದಲ್ಲಿ ಊಟಮಾಡುವುದು ಯುಕ್ತವಲ್ಲವೆಂಬ ಅಂಶವನ್ನು ವಿಸ್ತಾರವಾಗಿ ಹೇಳಿದನು.

# ಸಪ್ತವಿಂಶೋಽಧ್ಯಾಯಃ

—

### ವಸಿಷ್ಠ ಉವಾಚ

ತತ್ಪಿತುರ್ವಚನಂ ಶ್ರುತ್ವಾ ಪುತ್ರೋ ಧರ್ಮಾಂಗದಸ್ತದಾ ।
ಆಹೂಯ ಜನನೀಂ ಶೀಘ್ರಂ ನಾಮ್ನಾ ಸಂಧ್ಯಾವಲೀಂ ಶುಭಾಂ ॥ ೧ ॥

ಸೂರ್ಯಾಯುತಸಮುಪ್ರಖ್ಯಾಂ ತೇಜಸಾ ರುಚಿರಸ್ತನಾಂ ।
ಪಾಲಯಂತೀಂ ಧರಾಂ ಸರ್ವಾಂ ಪಾದವಿನ್ಯಾಸವಿಕ್ರಮೈಃ ॥ ೨ ॥

ಪುತ್ರಸ್ಯ ವಚನಾತ್ಪ್ರಾಪ್ತಾ ತತ್‌ಕ್ಷಣಂ ನೃಪಸನ್ನಿಧೌ ।
ಶ್ರಾವಿತಾ ಮೋಹಿನೀ ವಾಕ್ಯಂ ಪಿತುರ್ವಾಕ್ಯಂ ತಥೈವ ಚ ॥ ೩ ॥

ಉಭಯೋಃ ಸಂವಿದಂ ಕೃತ್ವಾ ಪರಿಸಾಂತ್ವಯ್ಯ ಮೋಹಿನೀಂ ।
ಭೋಜನಾಯ ಸ್ಥಿತಾಮೇನಾಂ ನೃಪಸ್ಯ ಹರಿವಾಸರೇ ॥ ೪ ॥

---

### ಇಪ್ಪತ್ತೇಳನೆಯ ಅಧ್ಯಾಯವು

೧-೩. ವಸಿಷ್ಠನು ಹೇಳಿದನು:—ತಂದೆಯ ಆ ಮಾತನ್ನು ಕೇಳಿ ಧರ್ಮಾಂಗದಕುಮಾರನು ಕೂಡಲೇ ಶುಭಳಾದ, ಹತ್ತುಸಾವಿರ ಸೂರ್ಯರಂತೆ ತೇಜಸ್ಸನ್ನು ಹೊಂದಿರುವ, ಮನೋಹರ ಸ್ತನಗಳುಳ್ಳ, ಸಕಲ ಭೂಮಿಯನ್ನೂ ಪಾಲಿಸುತ್ತಿರುವ ಸಂಧ್ಯಾವಳಿಯೆಂಬ ತನ್ನ ಜನನಿಯನ್ನು ಕರೆದನು.

ಆ ದೇವಿಯು ಕ್ರಮವಾಗಿ ಹೆಜ್ಜೆಯಿಟ್ಟುಕೊಂಡು ಮಗನ ಮಾತಿನಂತೆ ತಕ್ಷಣದಲ್ಲಿಯೇ ರಾಜನ ಸನ್ನಿಧಿಗೆ ಬಂದಳು. ಈಕೆಗೆ ಮೋಹಿನಿಯು ಹೇಳಿದುದನ್ನೂ, ತಂದೆಯು ವಚನವನ್ನೂ ಸಹ ತಿಳಿಸಿದನು.

೪-೫. ಜನನಿಯೇ! ನೀನು ಇವರಿಬ್ಬರಿಗೂ, ತಿಳಿವಳಿಕೆಯನ್ನು ಹೇಳಿ ರಾಜನು ಹರಿವಾಸರದಲ್ಲಿ ಊಟಮಾಡಬೇಕೆಂದು ನಿರ್ಬಂಧಿಸುತ್ತಿರುವ ಈ ಮೋಹಿ

**ಯಥಾ ನೋ ಚ್ಯವತೇ ಸತ್ಯಾದ್ಯಥಾ ಭುಂಕ್ತೇ ನ ಮೇ ಪಿತಾ ।**
**ತಥಾ ವಿಧೀಯತಾಮೇವ ಕುಶಲಂ ಚೋಭಯೋರ್ಭವೇತ್ ॥ ೫ ॥**

**ತತ್ಪುತ್ರವಚನಂ ಶ್ರುತ್ವಾ ದೇವೀ ಸಂಧ್ಯಾವಲೀ ನೃಪ ।**
**ಮೋಹಿನೀಂ ಶ್ಲಕ್ಷ್ಣಯಾ ವಾಚಾ ಪ್ರಾಹ ಬ್ರಹ್ಮಸುತಾಂ ತದಾ ॥ ೬ ॥**

**ಮಾಗ್ರಹಂ ಕುರು ವಾಮೋರು ಕಥಂಚಿದಪಿ ಭೂಪತಿಃ ।**
**ನಾಸ್ವಾದಯತಿ ಪಾಪಾನ್ನಂ ಸಂಪ್ರಾಪ್ತೇ ಹರಿವಾಸರೇ ॥ ೭ ॥**

**ಅನುವರ್ತಯ ರಾಜಾನಂ ಗುರುರೇಷ ಸನಾತನಃ ।**
**ಸದಾ ಭವತಿ ಯಾ ನಾರೀ ಭರ್ತುರ್ವಚನಕಾರಿಣೀ ॥ ೮ ॥**

**ತಸ್ಯಾಃ ಸ್ಯುರಕ್ಷಯಾ ಲೋಕಾಸ್ಸಾವಿತ್ರ್ಯಾ ಯಸ್ತು ಯಥಾಮಲಾಃ ।**
**ಯದ್ಯನೇನ ಪುರಾ ದೇವಿ ತವ ದತ್ತಃ ಕರೋ ಗಿರೌ ॥ ೯ ॥**

---

ನಿಯನ್ನು ಸಮಾಧಾನಪಡಿಸಿ, ನನ್ನ ತಂದೆಯ ಸತ್ಯಕ್ಕೆ ಹಾನಿಯಾಗದಂತೆಯೂ, ಏಕಾದಶಿಯಲ್ಲಿ ಅವನು ಭೋಜನಮಾಡದಂತೆಯೂ ಇಬ್ಬರಿಗೂ ಅನುಕೂಲವಾಗುವಂತೆ ಉಪಾಯವನ್ನು ಕಲ್ಪಿಸಿ ಸಂಧಾನಮಾಡಬೇಕು ಎಂಬುದಾಗಿ ಮಗನು ಹೇಳಿದನು.

೬. ದೊರೆಯೇ! ಮಗನ ಆ ಮಾತನ್ನು ಕೇಳಿ ಸಂಧ್ಯಾವಳೀ ದೇವಿಯು ಆಗ ಬ್ರಹ್ಮಪುತ್ರಿಯಾದ ಮೋಹಿನಿಗೆ ವಿಶ್ವಾಸಯುಕ್ತ ನುಡಿಗಳಿಂದ ಈರೀತಿ ಹೇಳಿದಳು.

೭. ಸುಂದರಾಂಗಿಯೇ! ಆಗ್ರಹವನ್ನು ಮಾಡಬೇಡ, ಭೂಪಾಲನು ಹರಿವಾಸರದಲ್ಲಿ ಪಾಪಭೂಯಿಷ್ಠವಾದ ಅನ್ನವನ್ನು ಎಂತಹ ಸಂದರ್ಭದಲ್ಲಿಯೂ ಆಸ್ವಾದನೆ ಮಾಡುವುದಿಲ್ಲ.

೮-೧೦. ಇವನು ಪುರಾತನ ಗುರುವು. ಆದಕಾರಣ ಈ ರಾಜನನ್ನು ನೀನು ಅನುಸರಿಸು. ಯಾವಾಗಲೂ ಪತಿಯ ಮಾತಿನಂತೆ ನಡೆಯುವ ಸ್ತ್ರೀಯು ಸಾವಿತ್ರೀದೇವಿಯಂತೆ ಪರಿಶುದ್ಧವಾದ ಶಾಶ್ವತ ಲೋಕಗಳನ್ನು ಪಡೆಯುವಳು.

ಕಾಮಾರ್ತೇನ ವಿಮೂಢೇನ ತನ್ನ ಯೋಗ್ಯಂ ವಿಚಿಂತಿತಂ ।
ಯದ್ದೇವಂ ತದ್ದದಾತ್ಯೇಷ ಅದೇಯಂ ಪ್ರಾರ್ಥಯಸ್ವ ಮಾ ॥ ೧೦ ॥

ವಿಪತ್ತಿರಪಿ ಭದ್ರೈವ ಸನ್ಮಾರ್ಗೇ ಸಂಸ್ಥಿತಸ್ಯ ತು ।
ನ ಭುಕ್ತಂ ಯೇನ ಸುಭಗೇ ಶೈಶವೇಪಿ ಹರೇರ್ದಿನೇ ॥ ೧೧ ॥

ಸ ಕಥಂ ಭೋಕ್ಷ್ಯತೇ ಪುಣ್ಯೇ ಮಾಧವಸ್ಯ ದಿನೇಧುನಾ ।
ಕಾಮಂ ವರಯ ವಾಮೋರು ವರಮನ್ಯಂ ಸುದುರ್ಲಭಂ ॥ ೧೨ ॥

ತಂ ದದಾತ್ಯೇವ ಭೂಪಾಲೋ ನಿವೃತ್ತಾ ಭವ ಭೋಜನೇ ।
ಮನ್ಯಸೇ ಯದಿ ಮಾಂ ದೇವಿ ಧರ್ಮಾಂಗದವಿರೋಹಿಣೀಂ ॥ ೧೩ ॥

ಅಸ್ಮಜ್ಜೀವಿತಸಂಯುಕ್ತಂ ರಾಜ್ಯಂ ವರಯ ಸುವ್ರತೇ ।
ಸಪ್ತದ್ವೀಪಸಮೇತಂ ಹಿ ಸಸರಿಪ್ಪನಪರ್ವತಂ ॥ ೧೪ ॥

---

ದೇವಿಯೇ! ಇವನು ಕಾಮಾತುರನಾಗಿ ಮೋಹದಿಂದ ಮಂದರಾಚಲದಲ್ಲಿ ನಿನಗೆ ಭಾಷೆಕೊಟ್ಟಿರಬಹುದು, ಅಷ್ಟುಮಾತ್ರದಿಂದ ನೀನು ಈ ವರವನ್ನು ಕೇಳುವುದು ಯೋಗ್ಯವೆಂದು ತಿಳಿಯಬಾರದು. ಯೋಗ್ಯವಾದುದನ್ನು ಅವನು ಕೊಡುವನು. ಅದೇಯುವನ್ನು ಕೇಳಬೇಡ.

೧೧-೧೨. ಸನ್ಮಾರ್ಗದಲ್ಲಿರುವವನಿಗೆ ಆಪತ್ತು ಬರುವುದೂ ಸಹ ಒಳ್ಳೆಯದಕ್ಕಾಗಿಯೇ ಸರಿ. ಸುಭಗೆ! ಬಾಲ್ಯದಲ್ಲಿಯೂ ಸಹ ಹರಿದಿನದಲ್ಲಿ ಭೋಜನಮಾಡದಿರುವ ಆ ರಾಜನು ಈಗ ಹೇಗೆ ಪುಣ್ಯಕರವಾದ ಆ ದಿನದಲ್ಲಿ ಊಟಮಾಡಿಯಾನು? ಸುಂದರಾಂಗಿಯೇ! ನಿನ್ನ ಇಷ್ಟಾನುಸಾರ ಅತ್ಯಂತ ದುರ್ಲಭವಾದ ಬೇರೆ ವರವನ್ನು ಕೇಳು.

೧೩. ಅದನ್ನು ಭೂಪಾಲನು ಕೊಟ್ಟೇಕೊಡುವನು. ದೇವಿಯೇ! ನೀನು ನನ್ನನ್ನು ಧರ್ಮಾಂಗದನ ಜನನಿಯೆಂದು ತಿಳಿದಿರುವುದಾದರೆ ಏಕಾದಶಿಯಲ್ಲಿ ಭೋಜನಮಾಡಬೇಕೆಂಬ ವರವನ್ನು ಬಿಟ್ಟುಬಿಡು.

೧೪. ಸಪ್ತದ್ವೀಪಗಳಿಂದ ಸಹಿತವಾದ, ನದೀ ಪರ್ವತ ವನಗರ್ಭಿತವಾದ ಈ ರಾಜ್ಯವನ್ನು ನಮ್ಮ ಜೀವಸಹಿತವಾಗಿ ಕೊಡಬೇಕೆಂದು ಕೇಳು.

ಕನಿಷ್ಠಾಯಾ ವರಿಷ್ಠಾಹಂ ಕರಿಷ್ಯೇ ಪಾದವಂದನಂ ।
ಭರ್ತುರರ್ಥೇ ವಿಶಾಲಾಕ್ಷಿ ಪ್ರಸೀದ ತನುಮಧ್ಯಮೇ ॥ ೧೫ ॥

ವಾಚಾ ಶಪಥದೋಷೈಸ್ತು ಸಂನಿರುಧ್ಯ ಪತಿಂ ಹಿ ಯಾ ।
ಅಕಾರ್ಯಂ ಕಾರಯೇತ್ಪಾಪಾ ಸಾ ನಾರೀ ನಿರಯೇ ವಸೇತ್ ॥ ೧೬ ॥

ಸಾ ಚ್ಯುತಾ ನರಕಾದ್ಘೋರಾತ್ ಸಪ್ತಜನ್ಮಾನಿ ಪಂಚ ಚ ।
ಸೂಕರೀಂ ಯೋನಿಮಾಪ್ನೋತಿ ಚಾಂಡಾಲೀಂ ಚ ತತಃ ಪರಂ ॥ ೧೭ ॥

ಏವಂ ಜ್ಞಾತ್ವಾ ಮಯಾ ದೇವಿ ವಿಕ್ರಿಯಾಂ ಪಾಪಸಂಭವಾಂ ।
ನಿವಾರಿತಾಸಿ ವಾಮೋರು ಸಖೀಭಾವೇನ ಸುಂದರೀ ॥ ೧೮ ॥

ವಿಪಕ್ಷಸ್ಯಾಪಿ ಸದ್ಬುದ್ಧಿರ್ದಾತವ್ಯಾ ಧರ್ಮಮಿಚ್ಛತಾ ।
ಕಿಂ ಪುನಃ ಸಖಿ ಸಂಸ್ಥಾಯಾಸ್ತವ ಪದ್ಮನಿಭಾನನೇ ॥ ೧೯ ॥

---

೧೫. ನೀನು ಕಿರಿಯಳಾದರೂ ಗಂಡನಿಗಾಗಿ ಜ್ಯೇಷ್ಠಳಾದ ನಾನು ನಿನ್ನ ಕಾಲಿಗೆ ನಮಸ್ಕಾರಮಾಡುವೆನು. ಕೃಶಮಧ್ಯಮಳಾದ ವಿಶಾಲಾಕ್ಷಿಯೇ! ಪ್ರಸನ್ನಳಾಗು !

೧೬. ವಚನರೂಪವಾದ ಶಪಥದೋಷಗಳಿಂದ ಪತಿಯನ್ನು ತಡೆದು ನಿಷಿದ್ಧಕಾರ್ಯವನ್ನು ಮಾಡಿಸುವಂತಹ, ಪಾಪಿಯಾದ ನಾರಿಯು ನರಕದಲ್ಲಿ ವಾಸಿಸಬೇಕಾಗುವುದು.

೧೭. ಅಂತಹವಳು ಘೋರನರಕವನ್ನು ಅನುಭವಿಸಿದ ಬಳಿಕ ಹನ್ನೆರಡು ಹಂದಿಯಜನ್ಮವನ್ನೂ ಅನಂತರ ಚಂಡಾಲಜನ್ಮವನ್ನೂ ಹೊಂದುವಳು.

೧೮. ಸುಂದರಾಂಗಿಯಾದ ದೇವಿಯೇ! ಧರ್ಮಸೂಕ್ಷ್ಮವನ್ನರಿತು ನಾನು ಪಾಪಜನಕವಾದ ವ್ಯಾಪಾರವನ್ನು ನಿನ್ನಿಂದ ಮಾಡಿಸಬಾರದೆಂದು ಸ್ನೇಹಭಾವದಿಂದ ನಿನ್ನನ್ನು ತಡೆದಿರುವೆನು.

೧೯. ಕಮಲಸದೃಶವಾದ ಮುಖವುಳ್ಳ ಸಖಿಯೇ! ಧರ್ಮವನ್ನು ಬಯಸುವವನು ಶತ್ರುವಿಗೂ ಸಹ ಸದ್ಬುದ್ಧಿಯನ್ನು ಪ್ರೇರಿಸಬೇಕು. ಹೀಗಿರುವಾಗ ಸಖಿಯಾದ ನಿನಗೆ ನಾನು ಹೇಳುವುದಾವಶ್ಯಕವೆಂದು ಹೇಳತಕ್ಕುದೇನು?

ಸಂಧ್ಯಾವಲೀವಚಃ ಶ್ರುತ್ವಾ ಮೋಹಿನೀ ಮೋಹಕಾರಿಣೀ ।
ಉವಾಚ ಕನಕಾಭಾಂ ತಾಂ ಭರ್ತುರ್ಜ್ಯೇಷ್ಠಾಂ ಪ್ರಿಯಾಂ ತಥಾ ॥ ೨೦ ॥

ಮಾನನೀಯಾಸಿ ಮೇ ಸುಭ್ರು ಕರೋಮಿ ವಚನಂ ತವ ।
ವಿದ್ವದ್ಭಿರ್ಮುನಿಭಿರ್ಯತ್ತು ಗೀಯತೇ ನಾರದಾದಿಭಿಃ ॥ ೨೧ ॥

ಯದಿ ತನ್ನಾಚರೇದ್ರಾಜಾ ಭೋಜನಂ ಹರಿವಾಸರೇ ।
ಕ್ರಿಯತಾಮಪರಂ ದೇವಿ ಮರಣಾದಧಿಕಂ ತವ ॥ ೨೨ ॥

ಮಮಾಪಿ ದುಃಖದಂ ಹ್ಯೇತದ್ದೈವಾಜ್ಜಲ್ಪಾಮ್ಯಹಂ ಶುಭೇ ।
ಕಸ್ಯೇಷ್ಟಮಾತ್ಮಹನನಂ ಕಸ್ಯೇಷ್ಟಂ ವಿಷಭಕ್ಷಣಂ ॥ ೨೩ ॥

ಪತನಂ ವಾ ಗಿರೇರ್ಮೂರ್ಧ್ನಃ ಕ್ರೀಡಾ ವಾಪಿ ಬಿಲೇಶಯೈಃ ।
ವ್ಯಾಘ್ರಸಿಂಹಾಭಿಗಮನಂ ಸಮುದ್ರತರಣಂ ತಥಾ ॥ ೨೪ ॥

---

೨೦. ಸಂಧ್ಯಾವಳಿಯ ಮಾತನ್ನು ಕೇಳಿ ಮೋಹಜನಕಳಾದ ಮೋಹಿನಿಯು ಸುವರ್ಣದಂತೆ ಹೊಳೆಯುತ್ತಿರುವ, ಗಂಡನ ಹಿರಿಯ ಹೆಂಡತಿಯಾದ, ಆಕೆಯನ್ನು ಕುರಿತು ಮಾತನಾಡಿದಳು.

೨೧. ಸುಭ್ರೂ! ನೀನು ನನಗೆ ಪೂಜ್ಯಳಾಗಿರುವೆ. ಜ್ಞಾನಿಗಳಾದ ನಾರದಾದಿಮುನಿಗಳಿಂದ ಹೇಳಲ್ಪಟ್ಟಿರುವ ನಿನ್ನ ಮಾತನ್ನು ನಡೆಯಿಸುವೆನು.

೨೨. ರಾಜನು ನಾನು ಕೇಳಿದ ಹರಿವಾಸರ ಭೋಜನವನ್ನು ಮಾಡದಿರುವ ಪಕ್ಷದಲ್ಲಿ ದೇವಿಯೇ! ನಿನ್ನ ಮರಣಕ್ಕಿಂತಲೂ ಹೆಚ್ಚಾದ ಇನ್ನೊಂದು ಕಾರ್ಯವನ್ನು ಮಾಡಲಿ.

೨೩. ಶೋಭನೆಯೇ! ಇದು ನನಗೂ ಸಹ ದುಃಖಪ್ರದವು. ಆದರೂ ದೈವ ಪ್ರೇರಣೆಯಿಂದ ನಾನು ಹೇಳುತ್ತಿರುವೆನು. ಯಾವನಿಗೆ ಆತ್ಮಸಂಹಾರವು ಇಷ್ಟವಾದೀತು? ಯಾವನು ವಿಷಭಕ್ಷಣವನ್ನು ಬಯಸಿಯಾನು?

೨೪. ವರಾರೋಹೇ! ಪರ್ವತಶಿಖರದಿಂದ ಕೆಳಗೆಬೀಳುವುದು, ಹಾವುಗಳೊಡನೆ ವಿಹಾರ, ಹುಲಿ ಸಿಂಹಗಳಿಗೆ ಎದಿರುಬೀಳುವುದು, ಸಮುದ್ರವನ್ನು ದಾಟುವುದು.

ದುರುಕ್ತಾನೃತವಾಕ್ಯಂ ವಾ ಪರದಾರಾಭಿಮರ್ಶನಂ ।
ಅಪಥ್ಯಭಕ್ಷಣಂ ಲೋಕೇ ತಥಾಭಕ್ಷ್ಯಸ್ಯ ಭಕ್ಷಣಂ ॥ ೨೫ ॥

ಮೃಗಾಟನಮಥಾಕ್ಷೈರ್ವಾ ಕ್ರೀಡನಂ ಸಾಹಸಂ ತಥಾ ।
ಛೇದನಂ ತೃಣಕಾಷ್ಠಾನಾಂ ಲೋಷ್ಠಾನಾಮುವಮರ್ದ್ದನಂ ॥ ೨೬ ॥

ಹಿಂಸನಂ ಸೂಕ್ಷ್ಮದೇವಾನಾಂ ಜಲಪಾವಕಖೇಲನಂ ।
ದೈವಾವಿಷ್ಟೋ ವರಾರೋಹೇ ನರಃ ಸರ್ವಂ ಕರೋತಿ ವೈ ॥ ೨೭ ॥

ತ್ರಿವರ್ಗವಿಚ್ಯುತಂ ಘೋರಂ ಯಶೋದೇಹಹರಂ ಕ್ಷಿತೌ ।
ನರಕಾರ್ಹೋ ನರೋ ದೇವಿ ಕರೋತ್ಯಶುಭಕರ್ಮ ತತ್ ॥ ೨೮ ॥

ಸಾಹಂ ಪಾಪಾ ದುರಾಚಾರಾ ವಕ್ತುಕಾಮಾ ಸುನಿರ್ಘೃಣಂ ।
ಯಾದೃಶೇನ ಹಿ ಭಾವೇನ ಯೋನೌ ಶುಕ್ರಂ ಸಮುತ್ಸೃಜೇತ್ ॥ ೨೯ ॥

---

೨೫-೨೭. ಕೆಟ್ಟಮಾತು, ಸುಳ್ಳುಮಾತು, ಪರಸ್ತ್ರೀಗಮನ, ಅಪಥ್ಯಭಕ್ಷಣೆ, ಅಭಕ್ಷ್ಯಭಕ್ಷಣೆ, ಬೇಟೆಯಾಡುವುದು, ಪಗಡೆಯಾಟ, ಸಾಹಸ, ತೃಣಕಾಷ್ಠಗಳನ್ನು ಕತ್ತರಿಸುವುದು, ಕಟ್ಟೆಗೆಗಳ ಅವಮರ್ದನೆ, ಸೂಕ್ಷ್ಮದೇವತೆಗಳ ಹಿಂಸೆ, ನೀರು ಬೆಂಕಿಗಳಲ್ಲಾಡುವುದು ಇವೆಲ್ಲವನ್ನೂ ದೈವಾವಿಷ್ಟನಾದ ಮನುಷ್ಯನು ಮಾಡುವನು.

೨೮. ದೇವಿಯೇ ! ನರಕ ಯೋಗ್ಯನಾದ ಮನುಷ್ಯನು ಭೂಮಿಯಲ್ಲಿ ತ್ರಿವರ್ಗನಾಶಕವಾದ, ಭಯಂಕರವಾದ, ಯಶಸ್ಸೆಂಬ ದೇಹವನ್ನು ಹಾಳುಮಾಡುವ ಅಮಂಗಳಕರ್ಮವನ್ನು ಮಾಡುತ್ತಾನೆ.

೨೯-೩೧. ಅಂತಹ ಪಾಪಿಯೂ, ದುರಾಚಾರಿಯೂ ಆದ ನಾನು ನಿರ್ದಯತೆಯಿಂದ ಹೇಳಬಯಸುವೆನು. ಜನಕನು ಎಂತಹ ಭಾವನೆಯಿಂದ ಯೋನಿಯಲ್ಲಿ ವೀರ್ಯವನ್ನು ವಿಸರ್ಜಿಸುವನೋ ಅಂತಹ ಭಾವನೆಯುಳ್ಳ ಸಂತಾನವೇ ಆಗುವುದೆಂದು ನಿರ್ಣಯ.

ತಾದೃಶೇನ ಹಿ ಭಾವೇನ ಸಂತಾನಂ ಸಂಭವೇದಿತಿ ।
ಸಾಹಂ ವಿವಾದಭಾವೇನ ರಾಜ್ಞೋ ರುಕ್ಮಾಂಗದಸ್ಯ ಹಿ ॥ ೩೦ ॥

ಜಾತಾ ಜಲಜಜಾ ತೇನ ಸ್ತ್ರೀರೂಪಾ ವರವರ್ಣಿನೀ ।
ದುಷ್ಟಭಾವಾ ತಥಾ ಜಾತಾ ಕರ್ತ್ರೀ ದುಷ್ಟಂ ನೃಪಸ್ಯ ತು ॥ ೩೧ ॥

ನ ಲಗ್ನಂ ನ ಗ್ರಹಾ ದೇವಿ ನ ಹೋರಾ ಪುಣ್ಯದರ್ಶಿನೀ ।
ತತ್ಕಾಲಭಾವನಾ ಗ್ರಾಹ್ಯಾ ತದ್ಭಾವೋ ಜಾಯತೇ ಸುತಃ ॥ ೩೨ ॥

ತೇನ ಭಾವೇನ ಜಾತಸ್ಯ ದಾಕ್ಷಿಣ್ಯಂ ನೋಪಪದ್ಯತೇ ।
ನ ಚ ವ್ರೀಡಾ ನ ಚ ಸ್ನೇಹೋ ನ ಧರ್ಮೋ ದೇವಿ ವಿದ್ಯತೇ ॥ ೩೩ ॥
ಜಾನನ್ನಪಿ ಯಥಾಯುಕ್ತಸ್ತಂ ಭಾವಮನುವರ್ತತೇ ॥ ೩೪ ॥

---

ನಾನು ರುಕ್ಮಾಂಗದರಾಜನ ವಿವಾದಭಾವನೆಯಿಂದ ಸ್ತ್ರೀರೂಪಳಾದ ವರವರ್ಣಿನಿಯಾಗಿ ಚತುರ್ಮುಖನಿಂದ ಹುಟ್ಟಿರುವೆನು. ಅದರಿಂದಲೇ ದುಷ್ಟಭಾವನೆಯುಳ್ಳವಳಾಗಿ ರಾಜನಿಂದ ದುಷ್ಕೃತ್ಯವನ್ನು ಮಾಡಿಸುತ್ತಿರುವೆನು.

೩೨. ಜನನಕಾಲದ ಲಗ್ನ, ಗ್ರಹಗಳು, ಪುಣ್ಯಕರಹೋರೆ ಇವುಗಳಾವುವೂ ಕಾರಣವಲ್ಲ. ಜನನಕಾಲದ ಭಾವನೆಯೇ ಗ್ರಾಹ್ಯವು. ಆ ಭಾವನೆಯುಳ್ಳ ಪುತ್ರನೇ ಹುಟ್ಟುವನು.

೩೩. ದೇವಿಯೇ! ಅಂತಹ ಭಾವನೆಯಲ್ಲಿ ಹುಟ್ಟಿದವನಿಗೆ ದಾಕ್ಷಿಣ್ಯ, ಲಜ್ಜೆ, ಸ್ನೇಹ, ಧರ್ಮ ಇವಾವುದೂ ಇರುವುದಿಲ್ಲ.

೩೪. ಯುಕ್ತವಾದುದನ್ನು ತಿಳಿದವನಾದರೂ ಆ ಭಾವನೆಯನ್ನೇ ಅನುಸರಿಸುವನು.

ವಕ್ಷ್ಯೇ ವಚಃ ಪ್ರಾಣಹರಂ ತವಾಧುನಾ
ಭರ್ತುಃ ಸಲೋಕಸ್ಯ ವಧೂಜನಸ್ಯ ।
ಧರ್ಮಾಪಹಂ ವಾಚ್ಯಕರಂ ಮಮಾಪಿ
ಕರ್ತುಂ ನ ಶಕ್ಯಂ ಮನಸಾಪಿ ಭೀರು ॥ ೩೫ ॥

ಕರೋಷಿ ವಾಕ್ಯಂ ಯದಿ ಮಾಮಕಂ ಹಿ
ಭವೇಚ್ಚ ಕೀರ್ತಿರ್ಮಹತೀಹ ಲೋಕೇ ।
ಭರ್ತುರ್ಯಶಃ ಸ್ಯಾತ್ತ್ರಿದಿವೇ ಗತಿಸ್ತೇ
ಪುತ್ರೇ ಪ್ರಶಂಸಾ ಮಮ ಧಿಗ್ವಿವಾದಃ ॥ ೩೬ ॥

ವಸಿಷ್ಠ ಉವಾಚ

ಮೋಹಿನೀವಚನಂ ಶ್ರುತ್ವಾ ದೇವೀ ಸಂಧ್ಯಾವಲೀ ವಿಭೋ ।
ಧೈರ್ಯಮಾಲಂಬ್ಯ ತಾಂ ತನ್ವೀಂ ಬ್ರೂಹಿ ಬ್ರೂಹೀತ್ಯಚೋದಯತ್ ॥

---

೩೫. ಈಗ ನಿನಗೂ ಪ್ರಜೆಗಳು ಮತ್ತು ವಧೂಜನಗಳಿಂದ ಸಹಿತನಾದ ಪತಿಗೂ ಸಹ ಪ್ರಾಣವನ್ನು ಕಳೆಯುವಂತಹ, ಧಾರ್ಮಿಕವಲ್ಲದ, ನಿಂದಾಕರವಾದ, ನನಗೂ ಸಹ ಮಾಡಲಶಕ್ಯವಾದ, ಮನಸ್ಸಿನಲ್ಲಿ ನೆನೆಯುವುದರಿಂದಲೇ ಭಯವನ್ನುಂಟುಮಾಡುವಂತಹ ಮಾತನ್ನು ಹೇಳುವೆನು.

೩೬. ನನ್ನ ಮಾತನ್ನು ನೀನು ನಡೆಯಿಸಿದರೆ ಈ ಲೋಕದಲ್ಲಿ ಮಹತ್ತಾದ ಕೀರ್ತಿಯುಂಟಾಗುವುದು. ಪತಿಗೂ ಯಶಸ್ಸು ಬರುವುದು. ನಿನ್ನ ಮಗನಿಗೆ ಸ್ವರ್ಗಪ್ರಾಪ್ತಿಯೂ, ಪ್ರಶಂಸೆಯೂ, ನನಗೆ ಧಿಕ್ಕಾರವೂ ಲಭಿಸುವುದು.

೩೭. ವಸಿಷ್ಠನು ಹೇಳಿದನು :— ದೊರೆಯೇ ! ಮೋಹಿನಿಯ ಮಾತನ್ನು ಕೇಳಿ ಸಂಧ್ಯಾವಳೀದೇವಿಯು ಧೈರ್ಯವನ್ನುತಾಳಿ ಆ ಸುಂದರಿಯನ್ನು ಹೇಳು, ಹೇಳು ಎಂಬುದಾಗಿ ಪ್ರೇರಿಸಿದಳು.

ಕೀದೃಶಂ ವದಸೇ ವಾಕ್ಯಂ ಯೇನ ದುಃಖಂ ಭವೇನ್ಮಮ
ಭರ್ತುರ್ಮೇ ಸತ್ಯಕರಣೇ ನ ದುಃಖಂ ಜಾಯತೇ ಕ್ವಚಿತ್ ।
ಆತ್ಮನೋ ನಿಧನೇ ವಾಪಿ ಪುತ್ರಸ್ಯ ನಿಧನೇಪಿ ವಾ
ಭರ್ತುರರ್ಥೇ ಪ್ರಕುರ್ವಂತ್ಯಾ ರಾಜ್ಯನಾಶೇ ನ ಮೇ ವ್ಯಥಾ ॥ ೩೮ ॥

ಯಸ್ಯಾ ದುಃಖೀ ಭವೇದ್ಭರ್ತಾ ಭಾರ್ಯಾ ಯಾ ವರವರ್ಣಿನೀ ।
ಸಮೃದ್ಧಾಯಾಃ ಸಪಾಪಾಯಾಸ್ತಸ್ಯಾಃ ಪ್ರೋಕ್ತಾ ಹ್ಯಧೋಗತಿಃ ॥ ೩೯ ॥

ಸಾ ಯಾತಿ ನರಕಂ ಪಾಪಾ ಪೂಯಾಖ್ಯಂ ಯುಗಸಪ್ತತಿಂ ।
ತತಶ್ಛುಛುಂಧರೀ ಸ್ಯಾಚ್ಛ ಸಪ್ತಜನ್ಮಾನಿ ಭಾರತೇ ॥ ೪೦ ॥

ತತಃ ಕಾಕೀ ತತಃ ಶ್ಯಾಲೀ ಗೋಧಾ ಗೋತ್ವೇನ ಶುಧ್ಯತಿ ।
ಭರ್ತುರರ್ಥೇ ತು ಯಾ ವಿತ್ತಂ ವಿದ್ಯಮಾನಂ ನ ಯಚ್ಛತಿ ॥ ೪೧ ॥

---

೩೮. ನನಗೆ ದುಃಖವಾಗುವ ಎಂತಹ ಮಾತನ್ನು ನೀನು ಹೇಳುವೆ ? ಎಂತಹ ಸಂದರ್ಭದಲ್ಲಿಯೂ ನನ್ನ ಗಂಡನು ಸತ್ಯಮಾಡಿದರೆ ನನಗೆ ದುಃಖವಾಗುವುದಿಲ್ಲ. ಗಂಡನಿಗಾಗಿ ನಾನೇ ಹಾಳಾದರೂ, ಮಗನು ನಾಶವಾದರೂ ಅಥವಾ ರಾಜ್ಯಹೋದರೂ ಪತಿಹಿತವನ್ನು ಮಾಡಬೇಕೆಂದಿರುವ ನನಗೆ ದುಃಖವಾಗುವುದೇ ಇಲ್ಲ.

೩೯. ಯಾವ ವರವರ್ಣಿನಿಯಾದ ಭಾರ್ಯೆಯಿಂದ ಪತಿಯು ದುಃಖಪಡುವನೋ ಪಾಪಿಯೂ, ಸಮೃದ್ಧಳೂ ಆದ ಅಂತಹ ಭಾರ್ಯೆಗೆ ಅಧೋಗತಿಯಾಗುವುದೆಂದು ಹೇಳಿದೆ.

೪೦-೪೨. ಆ ಪಾಪಿಯು ಎಪ್ಪತ್ತು ಯುಗಗಳ ಕಾಲ ಪೂಯವೆಂಬ ನರಕವನ್ನು ಹೊಂದುವಳು. ಅನಂತರ ಭಾರತದಲ್ಲಿ ಏಳು ಜನ್ಮಗಳು ಚುಂಡಿಲಿಯಾಗುವಳು. ತರುವಾಯ ಕಾಗೆಯೂ ಬಳಿಕ ಒಂದು ತರಹ ಮಿಾನೂ ಆಮೇಲೆ ನೀರುಡುವೂ ಆಗಿ ಜನಿಸಿ ಗೋಜನ್ಮ ಬಂದು ಶುದ್ಧಳಾಗುವಳು.

ಜೀವಿತಂ ವಾ ವರಾರೋಹೇ ವಿಷ್ಠಾಯಾಂ ಸಾ ಭವೇತ್ ಕ್ರಿಮಿಃ ।
ಕ್ರಿಮಿಯೋನಿವಿನಿರ್ಮುಕ್ತಾ ಕಾಷ್ಠೀಲಾ ಜಾಯತೇ ಶುಭೇ ॥ ೪೨ ॥

ಮಮ ಕೌಮಾರಭಾವೇ ತು ಮತ್ಪಿತುಃ ಕಾಷ್ಠಪಾಟಕಃ ।
ಅಗ್ನಿಪ್ರಜ್ವಾಲನಾರ್ಥಂ ಹಿ ಕಾಷ್ಠಂ ಪಾಟಯತೇ ಚಿರಂ ॥ ೪೩ ॥

ಸಖೀಭಿಃ ಸಹಿತಾ ಚಾಹಂ ಕ್ರೀಡಾಸಂಸಕ್ತಮಾನಸಾ ।
ಕಾಷ್ಠಂ ಪಾಟಯತಸ್ತಸ್ಯ ಸಮೀಪಮಗಮಂ ಹ್ಯಹಂ ॥ ೪೪ ॥

ತತ್ರ ದೃಷ್ಟ್ವಾ ಮಯಾ ಸುಭ್ರು ಕಾಷ್ಠೀಲಾ ದಾರುನಿರ್ಗತಾ ।
ನವನೀತನಿಭಂ ದೇಹಂ ಬಿಭ್ರಾಣಾ ಚಾಂಜನತ್ವಿಷಂ ॥ ೪೫ ॥

ಕನಿಷ್ಠಿಕಾಂಗುಲಿಸಮಾ ಸ್ಥೌಲ್ಯೇ ಹ್ಯಂಗುಲಿಮಾಣಿಕಾ ।
ತಾಂ ದೃಷ್ಟ್ವಾ ಪತಿತಾಂ ಭೂಮೌ ಹಂತುಂ ಧ್ವಾಂಕ್ಷಃ ಸಮಾಗತಃ ॥೪೬॥

---

ವರಾರೋಹೇ ! ಗಂಡನಿಗಾಗಿ ಇರುವ ಹಣ ಅಥವಾ ಪ್ರಾಣವನ್ನು ಕೊಡದಿರುವ ಪತ್ನಿಯು ಅಮೇಧ್ಯದಲ್ಲಿ ಕ್ರಿಮಿಯಾಗಿ ಹುಟ್ಟುವಳು. ಕ್ರಿಮಿಜನ್ಮದಿಂದ ಮುಕ್ತಳಾದಮೇಲೆ ಕಟ್ಟಿಗೆಯಲ್ಲಿನ ಹುಳುವಾಗಿ ಹುಟ್ಟುವಳು.

೪೩. ನನ್ನ ಬಾಲ್ಯದಲ್ಲಿ ನನ್ನ ತಂದೆಯ ಹತ್ತಿರ ಒಬ್ಬ ಕಟ್ಟಿಗೆಕಡಿಯುವವನಿದ್ದನು. ಅವನು ಒಲೆಯನ್ನು ಉರಿಸುವುದಕ್ಕೋಸ್ಕರ ಬಹುಕಾಲದವರೆಗೂ ಕಟ್ಟಿಗೆಯನ್ನು ಕಡಿಯುತ್ತಿದ್ದನು.

೪೪. ಒಂದು ದಿನ ನಾನು ಸಖಿಗಳೊಡನೆ ಆಟದಲ್ಲಿ ಆಸಕ್ತಚಿತ್ತಳಾಗಿ ಸೌದೆಯನ್ನು ಸೀಳುತ್ತಿದ್ದ ಅವನ ಬಳಿಗೆ ಹೋದೆನು.

೪೫-೪೬. ಸುಭ್ರೂ ! ಅಲ್ಲಿ ಬೆಣ್ಣೆಯಂತೆ ಶರೀರವನ್ನು ಧರಿಸಿದ್ದ, ಅಂಜನದಂತೆ ಪ್ರಕಾಶಮಾನವಾದ ಕಿಬ್ಬೆಟ್ಟಿನಷ್ಟು ಉದ್ದ ಮತ್ತು ದಪ್ಪವಾಗಿದ್ದ ಕಾಷ್ಠೀಲವೆಂಬ ಹುಳುವು ಕಟ್ಟಿಗೆಯಿಂದ ಹೊರಗೆ ಬಂದುದನ್ನು ಕಂಡೆನು. ಭೂಮಿಯಲ್ಲಿ ಬಿದ್ದ ಆ ಹುಳುವನ್ನು ನೋಡಿ ಅದನ್ನು ಕೊಲ್ಲಲು ಕಾಗೆಯು ಬಂದಿತು.

ಯಾವದ್ಗೃಹ್ಣಾತಿ ವಕ್ತ್ರೇಣ ಕಾಷ್ಠೀಲಾಂ ಕ್ಷುಧಿತಃ ಸ ತು ।
ತಾವನ್ನಿವಾರಿತಃ ಸದ್ಯೋ ಮಯಾ ಲೋಷ್ಟೇನ ತತ್ಕ್ಷಣಾತ್ ॥ ೪೭ ॥

ಸಾ ಮುಕ್ತಾ ತಾಡಿತೇನೇತ್ಥಂ ವಾಯಸೇನ ವರಾನನೇ ।
ಸಕ್ಷತಾ ತುಂಡಸಂಸ್ಪೃಷ್ಟಾ ನ ಚ ಶಕ್ತಾ ಪಲಾಯಿತುಂ ॥ ೪೮ ॥

ತತಃ ಸಾ ವೇಪಮಾನಾ ತು ಪ್ರಾಣತ್ಯಾಗಮುಪಾಗಮತ್ ।
ಸಿಕ್ತಾ ಕಿಂಚಿಜ್ಜಲೇನೈವ ತತಃ ಸ್ವಾಸ್ಥ್ಯಮುಪಾಗತಾ ॥ ೪೯ ॥

ತತಃ ಸಾ ಮಾನುಷೀವಾಚಾ ಮಾಮಾಹ ವರವರ್ಣಿನೀ ।
ಸಂಧ್ಯಾವಲೀತಿ ಸಂಬೋಧ್ಯ ಸಖೀಮಧ್ಯಸಮಾಸ್ಥಿತಂ ॥ ೫೦ ॥

ಸುಮಂತುನಾಮ್ನೋ ಹಿ ಮುನೇಃ ಸರ್ವಜ್ಞಸ್ಯ ಸುತಾಭವಂ ।
ಪೂರ್ವಜನ್ಮನಿ ಪತ್ನೀ ಚ ಕೌಂಡಿನ್ಯಸ್ಯ ಶುಭಾನನೇ ॥ ೫೧ ॥

---

೪೭. ಹಸಿವೆಯಿಂದ ಬಳಲಿದ್ದ ಆ ಕಾಗೆಯು ಬಾಯಿಯಿಂದ ಕಾಷ್ಠೀಲವನ್ನು ಹಿಡಿದುಕೊಳ್ಳುವಷ್ಟರಲ್ಲಿ ತಕ್ಷಣವೇ ನಾನು ಕಟ್ಟಿಗೆಯಿಂದ ಅದನ್ನು ತಡೆದೆನು.

೪೮. ವರಾನನೇ ! ಈ ರೀತಿಯಾಗಿ ನಾನು ಹೊಡೆದುದರಿಂದ ಕಾಷ್ಠೀಲವು ಕಾಗೆಯಿಂದ ಬಿಡುಗಡೆಯನ್ನು ಹೊಂದಿತು. ಆದರೆ ಅದು ಕೊಕ್ಕಿನ ಘಾತದಿಂದ ಗಾಯಹೊಂದಿದುದರಿಂದ ಹೋಗಲು ಸಮರ್ಥವಾಗಿರಲಿಲ್ಲ.

೪೯ ಬಳಿಕ ಆ ಕಾಷ್ಠೀಲವು ನಡುಗುತ್ತಾ ಪ್ರಾಣಬಿಡುವಹಾಗಾಯಿತು. ಅನಂತರ ನೀರೆರದುದರಿಂದ ಸ್ವಲ್ಪಮಟ್ಟಿಗೆ ಸ್ವಾಸ್ಥ್ಯವನ್ನು ಹೊಂದಿತು.

೫೦. ತರುವಾಯ ಅದು ಸಖಿಗಳ ಮಧ್ಯದಲ್ಲಿದ್ದ ನನ್ನನ್ನು ಮನುಷ್ಯಭಾಷೆಯಿಂದ ಸಂಧ್ಯಾವಳೀ ! ಎಂಬುದಾಗಿ ಸಂಬೋಧಿಸಿ ಈರೀತಿ ಹೇಳಿತು.

೫೧. ಶುಭಾನನೇ ! ನಾನು ಹಿಂದಿನ ಜನ್ಮದಲ್ಲಿ ಸರ್ವಜ್ಞನಾದ ಸುಮಂತು ಎಂಬ ಮುನಿಯ ಮಗಳಾಗಿಯೂ, ಕೌಂಡಿಣ್ಯಮುನಿಯ ಪತ್ನಿಯಾಗಿಯೂ ಇದ್ದೆನು.

,ನ್ಯವಸಂ ಕಾನ್ಯಕುಬ್ಜೇ ತು ಸಸಮೃದ್ಧಾ ಸುದರ್ಶಿತಾ |
ಜನನ್ಯಾ ಬಂಧುವರ್ಗಸ್ಯ ಪಿತುರಿಷ್ಟತಮಾ ಹ್ಯಹಂ ॥ ೫೨ ॥

ಪಿತ್ರಾ ದತ್ತಾ ತತಶ್ಚಾಹಂ ಕೌಂಡಿನ್ಯಾಯ ಮಹಾತ್ಮನೇ |
ಕುಲೀನಾಯ ಸರೂಪಾಯ ಸ್ತ್ರೀಸಂಗರಹಿತಾಯ ಚ ॥ ೫೩ ॥

ಶಯನೀಯಾದಿಕಂ ದತ್ತಂ ಯೌತುಕಂ ಜನಕೇನ ಮೇ |
ಶ್ವಶುರೇಣಾಪಿ ಮೇ ದತ್ತಂ ಸುವರ್ಣಸ್ಯಾಯುತಂ ಪುರಾ ॥ ೫೪ ॥

ಪಿತೃಶ್ವಶುರವಿತ್ತಾಭ್ಯಾಂ ಪರಿಪೂರ್ಣಾಭವಂ ತದಾ |
ಗೋಮಹಿಷ್ಯಾದಿಸಂಯುಕ್ತಾ ಧನಧಾನ್ಯಸಮನ್ವಿತಾ ॥ ೫೫ ॥

ಇಷ್ಟಾ ಶ್ವಶುರಯೋಶ್ಚಾಹಂ ಸೌಶೀಲ್ಯೇನ ಜನಸ್ಯ ಚ |
ಕಾಲೇನ ಪಂಚತಾಂ ಪ್ರಾಪ್ತಃ ಶ್ವಶುರೋ ವೇದತತ್ವವಿತ್ ॥ ೫೬ ॥

---

೫೨. ಆಗ ನಾನು ಪೂರ್ಣೈಶ್ವರ್ಯಸಂಪನ್ನಳು, ಬಹು ಗರ್ವಿತಳೂ ಆಗಿ ತಾಯಿ, ಬಂಧುವರ್ಗ, ತಂದೆ ಇವರಿಗೆ ಅತಿಪ್ರಿಯಳಾಗಿ ಕಾನ್ಯಕುಬ್ಜದೇಶದಲ್ಲಿ ವಾಸಿಸುತ್ತಿದ್ದೆನು.

೫೩. ತರುವಾಯ ತಂದೆಯು ನನ್ನನ್ನು ಮಹಾತ್ಮನೂ, ಕುಲೀನನೂ, ಸುಂದರನೂ, ಸ್ತ್ರೀಸಂಗರಹಿತನೂ ಆದ ಕೌಂಡಿನ್ಯನಿಗೆ ಕೊಟ್ಟನು.

೫೪. ತಂದೆಯು ನನಗೆ ಮಂಚ, ಹಾಸಿಗೆ ಮುಂತಾದುವನ್ನೂ ಸ್ತ್ರೀಧನವನ್ನೂ ಸಹ ಕೊಟ್ಟನು. ಮಾವನೂ ಸಹ ನನಗೆ ಹತ್ತುಸಾವಿರ ಸುವರ್ಣಗಳನ್ನು ಕೊಟ್ಟನು.

೫೫. ಆಗ ನಾನು ತಂದೆ ಮತ್ತು ಮಾವನವರ ಧನಗಳಿಂದ ಪರಿಪೂರ್ಣಳಾಗಿ ಗೋವು, ಎಮ್ಮೆ, ಧನ, ಧಾನ್ಯ ಮುಂತಾದುವುಗಳ ಸಹಿತಳಾಗಿದ್ದೆನು.

೫೬. ನಾನು ಒಳ್ಳೆಯನಡತೆಯಿಂದ ಅತ್ತೆಮಾವಂದಿರಿಗೂ, ಇತರ ಜನರಿಗೂ ಸಹ ಬೇಕಾದವಳಾಗಿದ್ದೆನು. ಕೆಲವುಕಾಲವಾದಮೇಲೆ ವೇದತತ್ವಜ್ಞಾನಿಯಾದ ಮಾವನು ಸತ್ತನು.

ತಂ ಮೃತಂ ಪತಿಮಾದಾಯ ಶ್ವಶ್ರೂರಗ್ನಿಂ ವಿವೇಶ ಸಾ |
ತತೋ ಭರ್ತಾಂಜಲಿಂ ದತ್ವಾ ಪಿತ್ರೋಃ ಶ್ರಾದ್ಧಮಥಾಕರೋತ್ || ೫೭ ||

ಗತೇ ಮಾಸದ್ವಯೇ ದೇವಿ ಭರ್ತಾ ಮೇ ರಾಜಮಂದಿರಂ |
ಗತಃ ಕೌತುಕಭಾವೇನ ಹೃಚ್ಛಯೇನ ಪ್ರಪೀಡಿತಃ || ೫೮ ||

ತತ್ರ ವೇಶ್ಯಾಃ ಸುರೂಪಾಢ್ಯಾ ಯೌವನೇನ ಸಮನ್ವಿತಾಃ |
ಪ್ರವಿಶಂತ್ಯೋ ನೃಪಗೃಹೇ ದೃಷ್ಟಾಸ್ತೇನ ದ್ವಿಜನ್ಮನಾ || ೫೯ ||

ತಾಸಾಂ ಮಧ್ಯಾತ್ತು ದ್ವೇ ಗೃಹ್ಯ ವಿತ್ತದಾನೇನ ಭೂರಿಣಾ |
ಸ್ವಗೃಹೇ ಧಾರಯಾಮಾಸ ಕ್ರೀಡಾರ್ಥಂ ದುರ್ಮತಿಃ ಪತಿಃ || ೬೦ ||

ತಾಭ್ಯಾಂ ವಿತ್ತಮಶೇಷಂ ತು ಕ್ಷಯಂ ನೀತಂ ನಿಷೇವಣಾತ್ |
ವರ್ಷತ್ರಯೇ ಗತೇ ದೇವಿ ನಿಸ್ವೋ ಜಾತಃ ಪತಿರ್ಮಮ || ೬೧ ||

---

೫೭. ಅತ್ತೆಯು ಮೃತನಾದ ತನ್ನ ಗಂಡನೊಡನೆ ಅಗ್ನಿಪ್ರವೇಶಮಾಡಿದಳು. ಅನಂತರ ನನ್ನ ಗಂಡನು ತಂದೆತಾಯಿಗಳಿಗೆ ತರ್ಪಣಕೊಟ್ಟು ಶ್ರಾದ್ಧ ಮಾಡಿದನು.

೫೮. ದೇವಿಯೇ! ಎರಡು ತಿಂಗಳಾದಮೇಲೆ ನನ್ನ ಗಂಡನು ರಾಜ ಮಂದಿರಕ್ಕೆ ಹೋಗಿ ಕೌತುಕಭಾವದಿಂದ ಕಾಮಪೀಡಿತನಾದನು.

೫೯. ಅಲ್ಲಿ ಆ ಬ್ರಾಹ್ಮಣನು ಅರಮನೆಯಲ್ಲಿ ಓಡಾಡುತ್ತಿದ್ದ ರೂಪವತಿಯರಾದ, ಯೌವನದಿಂದ ಕೂಡಿದ ಸೂಳೆಯರನ್ನು ನೋಡಿದನು.

೬೦. ದುರ್ಬುದ್ಧಿಯಾದ ನನ್ನ ಪತಿಯು ಬಹು ಹಣವನ್ನು ಕೊಟ್ಟು ಆ ವೇಶ್ಯೆಯರ ಪೈಕಿ ಇಬ್ಬರನ್ನು ಕರೆದುಕೊಂಡು ಬಂದು ವಿಹಾರಕ್ಕಾಗಿ ಮನೆಯಲ್ಲಿ ಇಟ್ಟುಕೊಂಡನು.

೬೧. ಅವರಿಬ್ಬರಿಗೆ ಉಪಚರಿಸಿದುದರಿಂದ ಹಣವೆಲ್ಲವೂ ಖರ್ಚಾಯಿತು. ದೇವಿಯೇ! ಹಾಗೆ ಮೂರು ವರ್ಷಗಳು ಕಳೆದಮೇಲೆ ನನ್ನ ಪತಿಯು ಬಡವನಾದನು.

ತತೋ ಮಾಂ ಪ್ರಾರ್ಥಯಾಮಾಸ ದೇಹಿ ಮೇಽಂಗವಿಭೂಷಣಂ ।
ತನ್ಮಯಾ ನ ಹಿ ದತ್ತಂ ತು ಭರ್ತ್ರೇ ವ್ಯಸನಿನೇ ತದಾ ॥ ೬೨ ॥

ಸ್ವಭೋಗೇ ಸರ್ವಮಾದಾಯ ಗತಾಹಂ ಮಂದಿರಂ ಪಿತುಃ ।
ತತಃ ಪಿತೃಗೃಹೇ ವಿತ್ತಂ ಭೃತ್ಯಾದಿಕಮಶೇಷತಃ ॥ ೬೩ ॥

ವಿಕ್ರೀಯ ದತ್ತಂ ವೇಶ್ಯಾಭ್ಯಾಂ ತಚ್ಚಾಪಿ ಕ್ಷಯಮಾಗತಂ ।
ಕ್ಷೇತ್ರಧಾನ್ಯಾದಿಕಂ ಯಚ್ಚ ಸಭಾಂಡಂ ಸಪರಿಚ್ಛದಂ ॥ ೬೪ ॥

ಸ್ವಲ್ಪಮೂಲ್ಯೇನ ವಿಕ್ರೀಯ ಗತೋ ನದನದೀಪತಿಂ ।
ನಾವಮಾರುಹ್ಯ ಮೇ ಭರ್ತಾ ವಿವೇಶಾಂತರ್ಮಹೋದಧೇಃ ॥ ೬೫ ॥

ಸ ಗತೋ ದೂರಮಧ್ವಾನಂ ಪಶ್ಯಮಾನೋಽದ್ಭುತಾನಿ ಚ ।
ಶುಭೇ ಸಮುದ್ರಜಾತಾನಿ ಜೀವಚೇಷ್ಟಾಂಕಿತಾನಿ ಚ ॥ ೬೬ ॥

ಪ್ರಭಂಜನವಶಂ ಪ್ರಾಪ್ತಾ ಸಾ ನೌಕಾ ಶತಯೋಜನಂ ।
ಗತಾ ವಿಶೀರ್ಣತಾಂ ತತ್ರ ಮೃತಾಸ್ತೇ ನಾವಮಾಶ್ರಿತಾಃ ॥ ೬೭ ॥

---

೬೨. ಅನಂತರ ಅವನು ಆಭರಣಗಳನ್ನು ಕೊಡಬೇಕೆಂದು ನನ್ನನ್ನು ಬೇಡಿದನು. ಆಗ ದುಃಖಪಡುತ್ತಿದ್ದ ಗಂಡನಿಗೆ ನಾನು ಅದನ್ನು ಕೊಡಲಿಲ್ಲ.

೬೩-೬೫. ನನ್ನ ಭೋಗಕ್ಕಾಗಿಯೇ ಸಕಲವನ್ನೂ ತೆಗೆದುಕೊಂಡು ತಂದೆಯ ಮನೆಗೆ ನಾನು ಹೋದೆನು. ಬಳಿಕ ನನ್ನಪತಿಯು ತಂದೆಯ ಮನೆಯಲ್ಲಿನ ಭೃತ್ಯ ಮುಂತಾದುವುಗಳೆಲ್ಲವನ್ನೂ ಮಾರಿ ಅದರಿಂದ ಬಂದ ಹಣವನ್ನು ವೇಶ್ಯೆಯರಿಗೆ ಕೊಟ್ಟನು. ಅದೂ ಮುಗಿಯಿತು.

ಅನಂತರ ಅವನು ಭೂಮಿ, ಧಾನ್ಯ, ಪಾತ್ರೆ, ವಸ್ತ್ರ ಮುಂತಾದುವನ್ನು ಸ್ವಲ್ಪಬೆಲೆಗೆ ಮಾರಿ ಸಮುದ್ರದ ಬಳಿಗೆ ಹೋಗಿ ನೌಕೆಯಲ್ಲಿ ಕುಳಿತು ಸಮುದ್ರದಲ್ಲಿ ಪ್ರಯಾಣ ಮಾಡಿದನು.

೬೬. ಅವನು ದಾರಿಯಲ್ಲಿ ಸಮುದ್ರದಲ್ಲಿ ಹುಟ್ಟಿದ ಚೇಷ್ಟೆಮಾಡುತ್ತಿರುವ ಅದ್ಭುತಪ್ರಾಣಿಗಳನ್ನು ನೋಡುತ್ತ ದೂರ ಸಾಗಿದನು.

೬೭. ನೂರುಗಾವುದ ಹೋದಮೇಲೆ ಆ ನೌಕೆಯು ಗಾಳಿಯ ಹೊಡೆತದಿಂದ ಒಡೆಯಿತು. ಅಲ್ಲಿದ್ದವರೆಲ್ಲರೂ ಸತ್ತರು.

ಮತ್ಪತಿರ್ದೈವಯೋಗೇನ ದೀರ್ಘಂ ಕಾಷ್ಠಂ ಸಮಾಶ್ರಿತಃ ।
ವಾಯುನಾ ನೀಯಮಾನೋಽಸೌ ಪ್ರಾಚೀನೇನ ಸ್ವಕರ್ಮಣಾ ॥ ೬೮ ॥

ಆಸಸಾದಾಚಲಂ ದೇವಿ ರತ್ನಶೃಂಗವಿಭೂಷಿತಂ ।
ಬಹುನಿರ್ಝರಣೋಪೇತಂ ಬಹುಪಕ್ಷಿಸಮನ್ವಿತಂ ॥ ೬೯ ॥

ಬಹುವೃಕ್ಷೈಃ ಸಮಾಕೀರ್ಣಂ ನಾನಾಪುಷ್ಪಫಲೋಪಗೈಃ ।
ಉಲ್ಲಿಖಂತಂ ಹಿ ಶಿಖರೈಃ ಸ್ವಮಧ್ಯಂ ಸ್ವಾತ್ಮನಸ್ತ್ರಿಭಿಃ ॥ ೭೦ ॥

ತಂ ದೃಷ್ಟ್ವಾ ಪರ್ವತಂ ದಿವ್ಯಂ ತ್ಯಕ್ತ್ವಾ ನೌಕಾಷ್ಠಮದ್ಭುತಂ ।
ಆರುರೋಹ ಮುದಾ ಯುಕ್ತೋ ವಿತ್ತಾಕಾಂಕ್ಷೀ ಸುಲೋಚನೇ ॥ ೭೧ ॥

ವಿಶಶ್ರಾಮ ಮುಹೂರ್ತಂ ತು ಕ್ಷುತ್ಪಿಪಾಸಾಸಮನ್ವಿತಃ ।
ತತ ಉತ್ಥಾಯ ಭಕ್ಷ್ಯಾರ್ಥಂ ವೃಕ್ಷಾಂಸ್ತತ್ರ ವ್ಯಲೋಕಯತ್ ॥ ೭೨ ॥

---

೬೮-೭೦. ನನ್ನ ಗಂಡನು ಮಾತ್ರ ಅದೃಷ್ಟದಿಂದ ಉದ್ದವಾದ ಕಟ್ಟಿಗೆ ಯನ್ನಾಶ್ರಯಿಸಿ ತನ್ನ ಪ್ರಾಚೀನ ಕರ್ಮದಿಂದ ಗಾಳಿಯು ಅನುಕೂಲವಾಗಿ ಬೀಸಿದ್ದರಿಂದ ಹೊಡೆದುಕೊಂಡು ಬಂದು ರತ್ನಖಚಿತ ಶೃಂಗಗಳಿಂದ ಅಲಂಕೃತವಾದ, ಬಹಳ ಝರಿಗಳಿಂದ ಕೂಡಿದ, ಬಹುಪಕ್ಷಿಗಳಿಗೆ ಆಶ್ರಯವಾದ, ನಾನಾವಿಧ ಪುಷ್ಪ ಫಲಗಳಿಂದ ಕೂಡಿದ ಬಹು ವೃಕ್ಷಗಳಿಂದ ತುಂಬಿದ ತನ್ನಮೂರು ಶಿಖರ ಗಳಿಂದ ಮಧ್ಯಭಾಗವನ್ನುಲ್ಲೇಖಿಸುತ್ತಿರುವ ಪರ್ವತವನ್ನು ಸೇರಿದನು.

೭೧. ಸುಲೋಚನೇ! ಧನಾಕಾಂಕ್ಷಿಯಾದ ಅವನು ಆ ದಿವ್ಯಪರ್ವತ ವನ್ನು ನೋಡಿ ತಾನಾಶ್ರಯಿಸಿದ್ದ ಅದ್ಭುತವಾದ ನೌಕೆಯ ಕಟ್ಟಿಗೆಯನ್ನು ಬಿಟ್ಟು ಸಂತೋಷದಿಂದ ಅದರ ಮೇಲಕ್ಕೆ ಹತ್ತಿದನು.

೭೨. ಅಲ್ಲಿ ಒಂದು ಮುಹೂರ್ತ ವಿಶ್ರಾಂತಿಯನ್ನು ಹೊಂದಿದನು. ಬಳಿಕ ಎದ್ದು ಹಸಿವು ಬಾಯಾರಿಕೆಗಳಿಂದ ಯುಕ್ತನಾಗಿ ಆಹಾರಕೋಸ್ಕರ ಅಲ್ಲಿದ್ದ ವೃಕ್ಷಗಳನ್ನು ನೋಡಿದನು.

**ಸುಪಕ್ವಾಸ್ತತ್ರ ಮೃದ್ವೀಕಾ ದೃಷ್ಟ್ವಾ ಭುಕ್ತ್ವಾ ಮುದಾನ್ವಿತಃ |**
**ತಾಂತಿಂ ಪ್ರಾಪ್ತಸ್ತತೋಽಪಶ್ಯತ್ತಾಲಮೇಕಂ ಸುನಿರ್ಮಲಂ || ೭೩ ||**

**ಘನಚ್ಛಾಯಂ ಮೇಘನಿಭಂ ಪಂಚಾಶತ್ಪುರುಷೋಚ್ಛ್ರಯಂ |**
**ತಸ್ಯಾಧಸ್ತಾತ್ಸ ಸುಷ್ವಾಪ ಸ್ವೋತ್ತರೀಯಂ ಪ್ರಸಾರ್ಯ ಚ || ೭೪ ||**

**ಮೋಹಿನ್ಯಾ ನಿದ್ರಯಾ ಚೈವ ಸಂಪ್ರಘೂರ್ಣಿತಲೋಚನಃ |**
**ತಾವತ್ಸುಷ್ವಾಪ ಖಿನ್ನೋಽಸೌ ಯಾವತ್ಸೂರ್ಯೋಽಸ್ತತಾಂ ಗತಃ || ೭೫ ||**

**ಸೂರ್ಯೇಽಸ್ತಂ ಸಮನುಪ್ರಾಪ್ತೇ ಸಮಾಯಾತೇ ನಿಶಾಮುಖೇ |**
**ಅಭ್ಯಗಾದ್ರಾಕ್ಷಸೋ ಘೋರೋ ಗರ್ಜಮಾನೋ ಯಥಾ ಘನಃ || ೭೬ ||**

**ಅಂಕೇನಾದಾಯ ತನ್ವಂಗೀಂ ಸೀತಾಮಿವ ದಶಾನನಃ |**
**ಶುಭಾಂ ಕಾಶೀಪತೇಃ ಪುತ್ರೀಂ ನಾಮ್ನಾ ರತ್ನಾವಲೀಂ ಶುಭಾಂ || ೭೭ ||**

---

೭೩. ಅಲ್ಲಿ ಚೆನ್ನಾಗಿ ಹಣ್ಣಾಗಿದ್ದ ದ್ರಾಕ್ಷಿಗಳನ್ನು ನೋಡಿ ಸಂತೋಷ ಯುಕ್ತನಾಗಿ ಅದನ್ನು ತಿಂದು ತೃಪ್ತನಾಗಿ ಅನಂತರ ಅತ್ಯಂತ ನಿರ್ಮಲವಾದ ಒಂದು ತಾಲವೃಕ್ಷವನ್ನು ನೋಡಿದನು.

೭೪. ಅದು ಐವತ್ತು ಪುರುಷಪ್ರಮಾಣ ಎತ್ತರವಾಗಿಯೂ ಮೇಘಕ್ಕೆ ಸಮಾನವಾಗಿಯೂ, ನಿಬಿಡ ಛಾಯೆಯುಳ್ಳದಾಗಿಯೂ ಇದ್ದಿತು. ಅದರ ಕೆಳಗೆ ತಾನು ಹೊದ್ದಿದ್ದ ಬಟ್ಟೆಯನ್ನು ಹಾಸಿಕೊಂಡು ಅವನು ಮಲಗಿ ನಿದ್ರಿಸಿದನು.

೭೫. ಬಹು ಕಷ್ಟಪಟ್ಟಿದ್ದ ಅವನು ಮೋಹಕವಾದ ನಿದ್ರೆಯಿಂದ ಕಣ್ಣು ಗಳನ್ನು ಚೆನ್ನಾಗಿ ಮುಚ್ಚಿಕೊಂಡು ಸೂರ್ಯನು ಮುಳುಗುವವರೆಗೂ ನಿದ್ರೆಮಾಡುತ್ತ ಮಲಗಿದ್ದನು.

೭೬-೭೮. ಸೂರ್ಯಾಸ್ತಮಯವಾಗಿ ಪ್ರದೋಷಕಾಲವು ಪ್ರಾಪ್ತವಾಗಲು ಭಯಂಕರನಾದ ಒಬ್ಬ ರಾಕ್ಷಸನು ಕಾಲುತೊಳೆಯದಿರುವ, ಒಳ್ಳೆಯ ಕಟಿಭಾಗವುಳ್ಳ, ದಕ್ಷಿಣದಿಕ್ಕಿಗೆ ತಲೆಮಾಡಿ ಮಲಗಿದ್ದ ಕಾಶೀಪತಿಯ ಕುಮಾರಿಯಾದ ರತ್ನಾವಳಿಯೆಂಬ ಸುಂದರಾಂಗಿಯನ್ನು, ರಾವಣನು ಸೀತೆಯನ್ನು ಎತ್ತಿಕೊಂಡಂತೆ

ಅಧೌತಪಾದಾಂ ಸುಶ್ರೋಣೀಂ ಸೌಮ್ಯದಿಕ್ಛೀರ್ಷಶಾಯಿನೀಂ ।
ಪತಿಕಾಮಾ ಕುಮಾರೀ ಸಾ ನಾವಿಂದತ್ ಸದೃಶಂ ಪತಿಂ ॥ ೭೮ ॥

ಸರ್ವಯೋಷಿದ್ವರಾ ಬಾಲಾ ರುದತೀ ನಿದ್ರಯಾಕುಲಾ ।
ಪಿತಾ ತಸ್ಯಾಃ ಪ್ರದಾನೇ ತು ಚಿಂತಾವಿಷ್ಟೋ ಹ್ಯಹರ್ನಿಶಂ ॥ ೭೯ ॥

ದೀಪಚ್ಛಾಯಾಶ್ರಿತೇ ತಸ್ಮಿ ಶಯನೇ ಸಾ ವ್ಯವಸ್ಥಿತಾ ।
ಅಟಮಾನೇನ ಪಾಪೇನ ದೃಷ್ಟ್ವಾ ಸಾ ರೂಪಶಾಲಿನೀ ॥ ೮೦ ॥

ದೀಪರತ್ನೈಃ ಸುಖಚಿತೇ ಧಾರಯಂತೀ ಚ ಕಂಕಣೇ ।
ಉಭಯೋರ್ದಶ ರತ್ನಾನಿ ನಿಷ್ಕೇ ಚ ದಶ ಪಂಚ ಚ ॥ ೮೧ ॥

ಸೀಮಂತೇ ಸಪ್ತ ರತ್ನಾನಿ ಕೇಯೂರೇಷ್ವಾ ಚ ಪಂಚ ಚ ।
ಏವಂ ರತ್ನಾಂಚಿತಾಂ ಬಾಲಾಂ ಶಾತಕುಂಭಸಮಪ್ರಭಾಂ ॥ ೮೨ ॥

---

ತೊಡೆಯಮೇಲೆ ಎತ್ತಿಕೊಂಡು ಮೇಘದಂತೆ ಘರ್ಜನೆ ಮಾಡುತ್ತ ಅಲ್ಲಿಗೆ ಓಡಿ ಬಂದನು. ಆ ಕುಮಾರಿಯು ಪತಿಕಾಮಳಾಗಿದ್ದರೂ ತನಗೆ ಯೋಗ್ಯನಾದ ಪತಿಯನ್ನು ಹೊಂದಿರಲಿಲ್ಲ.

೭೯. ಅದರಿಂದ ಸಕಲಸ್ತ್ರೀವರೇಣ್ಯಳಾಗ ಆ ಬಾಲೆಯು ಅಳುತ್ತಾ ಮಲಗಿದ್ದಳು. ಆವಳ ತಂದೆಯು ಹಗಲೂ, ರಾತ್ರಿಯೂ ವಿವಾಹಮಾಡುವ ಯೋಚನೆಯಲ್ಲಿದ್ದನು.

೮೦. ದೀಪದ ನೆರಳಿನಲ್ಲಿ ಹಾಸಿಗೆಯಮೇಲೆ ಮಲಗಿದ್ದ ಸೌಂದರ್ಯಶಾಲಿನಿಯಾದ ಆ ತನ್ವಿಯು, ತಿರುಗುತ್ತಿದ್ದ ಪಾಪಿಯಾದ ಈ ರಾಕ್ಷಸನ ದೃಷ್ಟಿಗೆ ಗೋಚರಳಾದಳು.

೮೧. ಅವಳು ದೀಪದಂತೆ ಹೊಳೆಯುತ್ತಿದ್ದ, ರತ್ನಖಚಿತವಾದ, ಎರಡು ಕಡಗಗಳನ್ನು ಕೈಯಲ್ಲಿ ಧರಿಸಿದ್ದಳು. ಅವೆರಡರಲ್ಲಿಯೂ ಹತ್ತು ರತ್ನಗಳು, ಹದಿನೈದು ನಿಷ್ಕಗಳೂ ಇದ್ದುವು.

೮೨-೮೭. ಹೆರಳಿನ ಆಭರಣದಲ್ಲಿ ಏಳು ರತ್ನಗಳು, ಬಾಹ್ವಾಭರಣದಲ್ಲಿ ಹದಿಮೂರು ರತ್ನಗಳೂ ಇದ್ದುವು. ಈರೀತಿಯಾಗಿ ರತ್ನಗಳನ್ನು ಧರಿಸಿದ್ದ,

ಜಹಾರ ರಾಜಭವನಾತ್ತಾಂ ತದಾ ಚಾರುಹಾಸಿನೀಂ ।
ವಾಯುಮಾರ್ಗಂ ಸಮಾಶ್ರಿತ್ಯ ಕ್ಷಣಾತ್ಪ್ರಾಪ್ತಃ ಸ್ವಮಾಲಯಂ ॥ ೮೩ ॥

ತಂ ಪರ್ವತಂ ಸ ಯತ್ರಾಸ್ತೇ ಪತಿರ್ಮೇ ಶಾಲಮಾಶ್ರಿತಃ ।
ತತ್ರ ತಸ್ಯ ಗುಹಾಂ ದೃಷ್ಟ್ವಾ ಸುವರ್ಣಸದೃಶಪ್ರಭಾ ॥ ೮೪ ॥

ತದ್ಭಯಸ್ಯಾಸಹಾ ತತ್ರ ಪ್ರವಿವೇಶಾಸ್ಯ ಪಶ್ಯತಃ ।
ಅನೇಕೈರ್ಮಣಿವಿನ್ಯಾಸೈಃ ಸಂಯುಕ್ತಾಂ ಚಿತ್ರಮಂದಿರಾಂ ॥ ೮೫ ॥

ನಾನಾದ್ರವ್ಯಸಮಾಕೀರ್ಣಾಂ ಶಯನಾಸನಸಂಯುತಾಂ ।
ಭೋಜನೈಃ ಪಾನಪಾತ್ರೈಶ್ಚ ಭಕ್ಷ್ಯಭೋಜ್ಯೈರನೇಕಧಾ ॥ ೮೬ ॥

ಪ್ರವಿಶ್ಯ ತತ್ರ ಶಯ್ಯಾಯಾಂ ಮನೋಜೋತ್ಪಲಲೋಚನಾಂ ।
ರುದತೀಮತಿಸಂತ್ರಸ್ತಾಂ ಪೀನಶ್ರೋಣಿಪಯೋಧರಾಂ ॥ ೮೭ ॥

---

ಸುವರ್ಣದಂತೆ ಹೊಳೆಯುತ್ತಿದ್ದ, ಮನೋಹರಹಾಸಯುಕ್ತಳಾದ ಆ ಬಾಲಕಿಯನ್ನು ರಾಜಮಂದಿರದಿಂದ ರಾಕ್ಷಸನು ಅಪಹರಿಸಿಕೊಂಡು ವಾಯುವೇಗದಿಂದ ಕ್ಷಣಮಾತ್ರದಲ್ಲಿ ನನ್ನ ಪತಿಯು ಮಲಗಿದ್ದ ಸಾಲವೃಕ್ಷವುಳ್ಳ ಆ ಪರ್ವತ ಪ್ರದೇಶರೂಪವಾದ ತನ್ನ ಸ್ಥಾನಕ್ಕೆ ಬಂದನು.

ಅಲ್ಲಿ ಅವನ ಗುಹೆಯನ್ನು ನೋಡಿ ಬಂಗಾರಕ್ಕೆ ಸಮಾನವಾದ ಕಾಂತಿಯುಳ್ಳ ಬಾಲೆಯು ಅವನ ಭಯವನ್ನು ಸಹಿಸಲಾರದೆ ಅವನು ನೋಡುತ್ತಿರುವಾಗಲೇ ಅಲ್ಲಿ ಪ್ರವೇಶಿಸಿದಳು.

ಅನೇಕ ಮಣಿ ವಿನ್ಯಾಸಗಳಿಂದ ಕೂಡಿದ, ಭೋಜನ, ಪಾನಪಾತ್ರೆ, ಭಕ್ಷ್ಯ, ಭೋಜ್ಯ ಮುಂತಾಗಿ ಅನೇಕವಿಧ ಬಹುವಸ್ತುಗಳಿಂದ ತುಂಬಿದ, ಶಯನ, ಆಸನಗಳಿಂದ ಯುಕ್ತವಾದ ಚಿತ್ರಮಂದಿರವನ್ನು ಪ್ರವೇಶಮಾಡಿ ಅಲ್ಲಿದ್ದ ಕಮಲನಯನಳಾದ, ಅಳುತ್ತಿರುವ, ಬಹು ಭೀತಳಾದ, ಪುಷ್ಟವಾದ ಕಟಿಪಶ್ಚಾದ್ಭಾಗ ಮತ್ತು ಸ್ತನಗಳುಳ್ಳ ಬಾಲೆಯನ್ನು ಕೂಡಿಸಿದನು-

ತಸ್ಯಾಸ್ತು ರುದಿತಂ ಶ್ರುತ್ವಾ ತಸ್ಯ ಭಾರ್ಯಾ ಹಿ ರಾಕ್ಷಸೀ |
ಆಜಗಾಮ ತ್ವರಾಯುಕ್ತಾ ಯತ್ರಾಸೌ ರಾಕ್ಷಸಃ ಸ್ಥಿತಃ || ೮೮ ||

ತಾಂ ದೃಷ್ಟ್ವಾ ಚಾರುಸರ್ವಾಂಗೀಂ ತಪ್ತಕಾಂಚನಸಪ್ರಭಾಂ |
ಪಪ್ರಚ್ಛ ನಿಜಭರ್ತಾರಂ ಕ್ರುದ್ಧಾ ನಿರ್ಭರ್ತ್ಸತೀ ಸತೀ || ೮೯ ||

ಕಿಮರ್ಥಮಾಹೃತಾ ಚೇಯಂ ಜೀವಂತ್ಯಾಂ ಮಯಿ ನಿರ್ಘೃಣ |
ಅನ್ಯಾಂ ಸಮೀಹಸೇ ಭಾರ್ಯಾಂ ನಾಹಂ ಭಾರ್ಯಾ ಭವಾಮಿ ತೇ ||೯೦||

ಏವಂ ಬ್ರುವಾಣಾಂ ತಾಂ ಭರ್ತಾ ರಾಕ್ಷಸೀಮಸಿತೇಕ್ಷಣಾಂ |
ಉವಾಚ ರಾಕ್ಷಸೋ ಹರ್ಷಾತ್ ಸ್ವಾಂ ಪ್ರಿಯಾಂ ಚಾರುಲೋಚನಾಂ ||

ತ್ವದರ್ಥಮಾಹೃತಂ ಭಕ್ಷ್ಯಂ ಮಯಾ ಕಾಶ್ಯಾ ಶುಭಾನನೇ |
ದೈವೋಪಪಾದಿತಂ ದ್ವಾರಿ ದ್ವಿತೀಯಂ ಮಮ ತಿಷ್ಠತಿ || ೯೨ ||

---

೮೮. ಅವಳ ರೋದನವನ್ನು ಕೇಳಿ ಅವನ ಹೆಂಡತಿಯಾದ ರಾಕ್ಷಸಿಯು ರಾಕ್ಷಸನಿದ್ದಲ್ಲಿಗೆ ವೇಗವಾಗಿ ಬಂದಳು.

೮೯. ಅವಳು ಮನೋಹರ ಸಕಲಾವಯವವುಳ್ಳ ಕರಗಿಸಿದ ಬಂಗಾರದಂತೆ ಹೊಳೆಯುತ್ತಿರುವ ಆ ಬಾಲೆಯನ್ನು ನೋಡಿ ಕೋಪಗೊಂಡು ಗದರಿಸುತ್ತಾ ತನ್ನ ಗಂಡನನ್ನು ಕೇಳಿದಳು.

೯೦. ನಿರ್ದಯನೇ! ನಾನು ಬದುಕಿರುವಾಗ ಇವಳನ್ನು ಏತಕ್ಕಾಗಿ ಕರೆದುಕೊಂಡು ಬಂದಿರುವೆ? ಬೇರೆ ಹೆಂಡತಿಯನ್ನು ಅಪೇಕ್ಷಿಸುತ್ತಿರುವೆಯಾ? ನಾನು ನಿನಗೆ ಹೆಂಡತಿಯಾಗಿರುವುದಿಲ್ಲ.

೯೧. ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ಈರೀತಿ ಹೇಳುತ್ತಿರುವ ಸುಂದರನೇತ್ರಗಳುಳ್ಳ ತನ್ನ ಭಾರ್ಯೆಯಾದ ಆ ರಾಕ್ಷಸಿಯನ್ನು ಕುರಿತು ಸಂತೋಷದಿಂದ ಹೀಗೆ ಹೇಳಿದನು.

೯೨. ಶುಭಾನನೇ! ನಿನಗೆ ತಿನ್ನುವುದಕ್ಕಾಗಿ ಕಾಶಿಯಿಂದ ಇವಳನ್ನು ನಾನು ತಂದಿರುವೆನು. ಅದೃಷ್ಟದಿಂದ ಲಭಿಸಿರುವ ಇನ್ನೊಂದು ನನಗಾಗಿ ಬಾಗಿಲಲ್ಲಿದೆ?

**ಶಾಲವೃಕ್ಷಾಶ್ರಿತಃ ಶೇತೇ ವಿಪ್ರಶ್ಚೈಕೋ ವರಾನನೇ ।**
**ತಮಾನಯ ತ್ವರಾಯುಕ್ತಾ ಯೇನಾಹಂ ಭಕ್ಷ್ಯಮಾಚರೇ ॥ ೯೩ ॥**

**ರಾಕ್ಷಸಸ್ಯ ವಚಃ ಶ್ರುತ್ವಾ ಕುಮಾರೀ ಸಾಬ್ರವೀದಿದಂ ।**
**ಮಿಥ್ಯಾ ರಾಕ್ಷಸಿ ಭರ್ತಾ ತೇ ಭಾಷತೇ ತ್ವದ್ಭಯಾದಯಂ ॥ ೯೪ ॥**

**ಜ್ಞಾತ್ವಾ ತ್ವಾಂ ಜರಯೋಪೇತಾಂ ವಿರೂಪಾಮತಿಜಿಹ್ವಗಾಂ ।**
**ಸುಪ್ತಾಂ ಪಿತೃಗೃಹೇ ರಾತ್ರೌ ಮಾಂ ಸಮಾಸಾದ್ಯ ಕಾಮತಃ ॥ ೯೫ ॥**

**ಅನೂಢಾಂ ರುದತೀಂ ಭದ್ರೇ ಭಾರ್ಯಾರ್ಥಂ ಸಮುಪಾನಯತ್ ।**
**ಇತೀರಿತಮುಪಾಕರ್ಣ್ಯ ವಚನಂ ರಾಜಕನ್ಯಯಾ ॥ ೯೬ ॥**

**ಕ್ರೋಧಯುಕ್ತಾ ನಿಮೇಷಂ ವೈ ಬಭೂವ ಕ್ಷಪತೀ ವಚಃ ।**
**ತಸ್ಯಾಶ್ಚ ರೂಪಮಾಲೋಕ್ಯ ಸತ್ಯಮೇವಾವಧಾರಯತ್ ॥ ೯೭ ॥**

---

೯೩. ವರಾನನೇ! ಹೊರಗಿರುವ ಮತ್ತಿಮರದ ಕೆಳಗಡೆ ಒಬ್ಬ ಬ್ರಾಹ್ಮಣನು ಮಲಗಿರುವನು. ಬೇಗ ಅವನನ್ನು ಕರೆದುಕೊಂಡು ಬಾ. ಅವನನ್ನು ನಾನು ಆಹಾರವನ್ನಾಗಿ ಮಾಡಿಕೊಳ್ಳುವೆನು.

೯೪-೯೭. ರಾಕ್ಷಸನ ಮಾತನ್ನು ಕೇಳಿ ಆ ಕುಮಾರಿಯು "ರಾಕ್ಷಸಿಯೇ! ನಿನ್ನ ಗಂಡನು ನಿನ್ನ ಭಯದಿಂದ ಸುಳ್ಳು ಹೇಳುತ್ತಿರುವನು. ಇವನು ಕುರೂಪಿಣಿಯೂ, ಅತಿಮಂದಗಾಮಿನಿಯೂ ಆದ ನೀನು ಮುದುಕಿಯಾದೆಂದು ತಿಳಿದು ತಂದೆಯ ಮನೆಯಲ್ಲಿ ಮಲಗಿದ್ದ ವಿವಾಹವಿಲ್ಲದ, ಅಳುತ್ತಿರುವ ನನ್ನ ಬಳಿಗೆ ರಾತ್ರಿಕಾಲದಲ್ಲಿ ಬಂದು ಕಾಮಪೀಡಿತನಾಗಿ ಹೆಂಡತಿಯನ್ನು ಮಾಡಿಕೊಳ್ಳಬೇಕೆಂದು ನನ್ನನ್ನು ಕರೆತಂದಿರುವನು" ಎಂಬುದಾಗಿ ಹೇಳಿದಳು.

ಹೀಗೆ ರಾಜಕನ್ಯೆಯು ಹೇಳಿದ ಮಾತನ್ನು ಕೇಳಿ ರಕ್ಕಸಿಯು ಕ್ರೋಧಯುಕ್ತಳಾಗಿ ಒಂದು ನಿಮಿಷ ಮಾತನಾಡದೆ ನಿಂತಳು. ಬಳಿಕ ಆ ಕನ್ಯೆಯ ಸೌಂದರ್ಯವನ್ನು ನೋಡಿ ಅವಳು ಹೇಳುವುದು ನಿಜವೆಂದೇ ನಿರ್ಣಯಿಸಿದಳು.

ಚಿಂತಯಾಮಾಸ ಚಾಪ್ಯೇವಂ ಭಾರ್ಯಾರ್ಥೇ ಹ್ಯಾಹೃತೇತಿ ಚ ।
ಅವಶ್ಯಂ ಮೂರ್ಧ್ನಿ ಕೀಲಂ ಮೇ ರೋಪಯಿಷ್ಯತಿ ರಾಕ್ಷಸಃ ॥ ೯೮ ॥

ಮಾಸ್ಮ ಸೀಮಂತಿನೀ ಕಾಚಿತ್ ಭವೇತ್ಸಾ ಭುವನತ್ರಯೇ ।
ಯಾ ಸಾಪತ್ನ್ಯೇನ ದುಃಖೇನ ಪೀಡ್ಯಮಾನಾ ಹಿ ಜೀವತಿ ॥ ೯೯ ॥

ಸರ್ವೇಷಾಮೇವ ದುಃಖಾನಾಂ ಮಹಚ್ಛೇದಂ ನ ಸಂಶಯಃ ।
ಸಾಮಾನ್ಯದ್ರವ್ಯಭೋಗಾದಿ ನಷ್ಟಂ ಚೈವಾಪರಂ ಭವೇತ್ ॥ ೧೦೦ ॥

ಏವಂ ಸಾ ಬಹು ಸಂಚಿಂತ್ಯ ಭರ್ತಾರಂ ವಾಕ್ಯಮಬ್ರವೀತ್ ।
ಮಾ ಭಯ ಮಮ ಭಕ್ಷ್ಯಾರ್ಥಂ ತ್ವಯಾನೀತಾ ಸುಲೋಚನಾ ॥ ೧೦೧ ॥

ತಂ ವಿಪ್ರಮಾನಯಿಷ್ಯಾಮಿ ಭಕ್ಷ್ಯಾರ್ಥಂ ತವ ಸುವ್ರತ ।
ತತಃ ಸ ರಾಕ್ಷಸಃ ಪ್ರಾಹ ಗಚ್ಛಗಚ್ಛೇತಿ ಸತ್ವರಂ ॥ ೧೦೨ ॥

---

೯೮. ಪತಿಯು ಈ ಕನ್ಯೆಯನ್ನು ಮದುವೆಯಾಗಲು ತಂದಿರುವನು ಎಂದು ನಿಶ್ಚಯಿಸಿದಳು. ರಾಕ್ಷಸನು ಖಂಡಿತವಾಗಿಯೂ ನನ್ನ ತಲೆಗೆ ಗೂಟ ವನ್ನು ಪೆಟ್ಟುವನು.

೯೯. ಯಾವ ಹೆಂಗಸೂ ಮೂರು ಲೋಕಗಳಲ್ಲಿಯೂ, ಸೌತಿಯ ದುಃಖದಿಂದ ಹಿಂಸೆಪಡುತ್ತ ಜೀವಿಸಬಾರದು.

೧೦೦. ಸಕಲ ದುಃಖಗಳಿಗಿಂತಲೂ, ಸೌತಿಯ ದುಃಖವು ಬಹು ದೊಡ್ಡದು. ಸಂದೇಹವಿಲ್ಲ. ಜೊತೆಗೆ ಸಾಮಾನ್ಯವಾದ ದ್ರವ್ಯಭೋಗಾದಿಗಳ ನಾಶವೂ ಆಗುವುದು.

೧೦೧.-೧೦೪. ಆ ರಾಕ್ಷಸಿಯು ಈರೀತಿಯಾಗಿ ಬಹು ಯೋಚಿಸಿ ಗಂಡ ನನ್ನು ಕುರಿತು ಹೀಗೆ ಮಾತನಾಡಿದಳು. ಸುವ್ರತನೇ! ಭಯಪಡಬೇಡ ನಾನು ತಿನ್ನುವುದಕ್ಕಾಗಿ ಈ ಸುಲೋಚನೆಯು ನಿನ್ನಿಂದ ತರಲ್ಪಟ್ಟಿರುವಳು, ನೀನು ತಿನ್ನುವುದಕ್ಕಾಗಿ ಆ ಬ್ರಾಹ್ಮಣನನ್ನು ನಾನು ಕರೆದುಕೊಂಡು ಬರುವೆನು ಎಂಬುದಾಗಿ ಗಂಡನಿಗೆ ಹೇಳಿದಳು.

ಸೃಕ್ಕಿಣೀ ಸ್ರವತೇತ್ಯರ್ಥಂ ತಸ್ಯ ಭಕ್ಷಣಕಾಮ್ಯಯಾ ।
ತತಃ ಸಾ ರಾಕ್ಷಸೀ ಘೋರಾ ಶ್ರುತ್ವಾ ಪತಿಸಮೀರಿತಂ ॥ ೧೦೩ ॥

ನಿರ್ಜಗಾಮ ದುರಂತಾಶಾ ದದರ್ಶ ದ್ವಿಜಸತ್ತಮಂ ।
ರೂಪಯೌವನಸಂಯುಕ್ತಂ ವಿದ್ಯಾರತ್ನವಿಭೂಷಿತಂ ॥ ೧೦೪ ॥

ತಂ ದೃಷ್ಟ್ವಾ ಮಾಯಯಾ ಭೂತ್ವಾ ಸುಂದರೀ ಷೋಡಶಾಬ್ದಿಕಾ ।
ಹೃಚ್ಛಯೇನ ಸಮಾವಿಷ್ಟಾ ತದಂತಿಕಮುಪಾಗಮತ್ ॥ ೧೦೫ ॥

ಅಬ್ರವೀತ್ಸಾ ಪೃಥುಶ್ರೋಣೀ ತಂ ವಿಪ್ರಂ ಪ್ರೀತಿಸಂಯುತಾ ।
ಕಸ್ತ್ವಂ ಕಸ್ಮಾದಿಹಾಯಾತಃ ಕಿಮರ್ಥಮಿಹ ತಿಷ್ಠಸಿ ॥ ೧೦೬ ॥

---

ತರುವಾಯ ಆ ರಾಕ್ಷಸನು ಶೀಘ್ರವಾಗಿ ಹೋಗು ಅವನನ್ನು ತಿನ್ನಬೇಕೆಂದು ಬಹಳ ಆಶೆಯಿಂದ ಕೊನೆತುಟಿಗಳಲ್ಲಿ ನೀರು ಸುರಿಯುತ್ತಿದೆ ಎಂದು ಹೇಳಿದನು.

ಬಳಿಕ ಭಯಂಕರಳಾದ ಆ ರಾಕ್ಷಸಿಯು ಗಂಡನು ಹೇಳಿದುದನ್ನು ಕೇಳಿ ದುರಂತವಾದ ಆಶೆಯಿಂದ ಹೊರಟಳು. ಅಲ್ಲಿದ್ದ ಸುಂದರನು, ಯುವಕನು, ವಿದ್ಯಾವಂತನು, ರತ್ನಗಳಿಂದಲಂಕೃತನೂ ಆಗಿರುವ ದ್ವಿಜಶ್ರೇಷ್ಠನನ್ನು ನೋಡಿದಳು.

೧೦೫. ಅವನನ್ನು ನೋಡಿ, ಕಾಮಾತುರಳಾಗಿ ಅವಳು ತನ್ನ ಮಾಯಾಶಕ್ತಿಯಿಂದ ಹದಿನಾರು ವರ್ಷದ ಸುಂದರಿಯ ರೂಪವನ್ನು ಧರಿಸಿ ಅವನ ಹತ್ತಿರಕ್ಕೆ ಹೋದಳು.

೧೦೬. ದಪ್ಪವಾದ ಕಟಿಪಶ್ಚಾದ್ಭಾಗವುಳ್ಳ ಅವಳು ಪ್ರೀತಿಯಿಂದ ಆ ಬ್ರಾಹ್ಮಣನನ್ನು ಕುರಿತು ವಿಪ್ರನೇ! ನೀನು ಯಾರು? ಏತಕ್ಕೋಸ್ಕರ ಇಲ್ಲಿಗೆ ಬಂದಿರುವೆ? ಇಲ್ಲಿರಲು ಕಾರಣವೇನು?

ಪೃಚ್ಛಾಮಿ ಪತಿಕಾಮಾಹಂ ರಾಕ್ಷಸೀ ಹೃಚ್ಛಯಾತುರಾ ।
ಸ್ವಭರ್ತಾರಮಹಂ ಪರಿತ್ಯಕ್ತ್ವಾ ತ್ವಾಂ ಪತಿಂ ಕರ್ತುಮಾಗತಾ ॥ ೧೦೭ ॥

ತಚ್ಛ್ರುತ್ವಾ ಭವನಂ ತಸ್ಯಾ ಭರ್ತಾ ಮೇ ಭಯಸಂಯುತಃ ।
ಉವಾಚ ವಚನಂ ಪ್ರಾಜ್ಞೋ ಧೈರ್ಯಮಾಲಂಬ್ಯ ತಾಂ ಶುಭೇ ॥೧೦೮॥

ರಕ್ಷೋಮಾನುಷಸಂಯೋಗಃ ಕಥಂ ರಾಕ್ಷಸಿ ಸಂಭವೇತ್ ।
ಮಾನುಷಾಸ್ತು ಸ್ಮೃತಾ ಭಕ್ಷ್ಯಾ ರಾಕ್ಷಸಾನಾಂ ನ ಸಂಶಯಃ ॥ ೧೦೯ ॥

ತಚ್ಛ್ರುತ್ವಾ ವಚನಂ ಸಾ ತು ಪುನಸ್ತಂ ಪ್ರಾಹ ಸಾದರಂ ।
ಅಸಂಭಾವ್ಯಂ ಚ ಜಗತಿ ಸಂಭವೇದ್ದೈವಯೋಗತಃ ॥ ೧೧೦ ॥

ಪುರಾಣೇ ಶ್ರೂಯತೇ ಹ್ಯೇತದ್ಭವಿಷ್ಯಂ ಭಾರತೇ ಸ್ಥಿತಂ ।
ಹಿಡಿಂಬಾ ರಾಕ್ಷಸೀ ವಿಪ್ರ ಭೀಮಭಾರ್ಯಾ ಭವಿಷ್ಯತಿ ॥ ೧೧೧ ॥

---

೧೦೭. ರಾಕ್ಷಸಿಯಾದ ನಾನು ಕಾಮಾತುರಳಾಗಿ ಪತಿಕಾಮನೆಯಿಂದ ನಿನ್ನನ್ನು ಕೇಳುತ್ತಿರುವೆನು. ಗಂಡನು ನನ್ನನ್ನು ಬಿಟ್ಟಿರುವನು, ನಿನ್ನನ್ನೇ ಪತಿಯನ್ನಾಗಿ ವರಿಸಲು ಬಂದಿರುವೆನು ಎಂಬುದಾಗಿ ಹೇಳಿದಳು.

೧೦೮-೧೦೯. ಅವಳ ವರ್ತನೆಯನ್ನು ಕೇಳಿ ಪ್ರಾಜ್ಞನಾದ ನನ್ನ ಗಂಡನು ಭಯಪಟ್ಟು ರಾಕ್ಷಸಿಯೇ! ಚಾಪಲ್ಯವನ್ನು ಬಿಟ್ಟು ಸ್ಥಿರಚಿತ್ತಳಾಗು. ಮನುಷ್ಯರು ರಾಕ್ಷಸರಿಗೆ ತಿನ್ನುವ ಆಹಾರವು ಸಂದೇಹವಿಲ್ಲ. ಆದಕಾರಣ ರಾಕ್ಷಸಿಯಾದ ನಿನಗೂ ಮನುಷ್ಯನಾದ ನನಗೂ ಘಟನೆಯು ಹೇಗೆ ಸಂಭವಿಸೀತು? ಎಂಬುದಾಗಿ ಹೇಳಿದನು.

೧೧೦. ಆ ಮಾತನ್ನು ಕೇಳಿ ಪುನಃ ವಿಶ್ವಾಸಪೂರ್ವಕವಾಗಿ ಆ ರಾಕ್ಷಸಿಯು ಆ ಬ್ರಾಹ್ಮಣನಿಗೆ ಹೀಗೆ ಹೇಳಿದಳು :—ಅಸಂಭಾವಿತವಾದುದೂ ಲೋಕದಲ್ಲಿ ದೈವಯೋಗದಿಂದ ಆಗುವುದುಂಟು.

೧೧೧. ಭಾರತದಲ್ಲಿರುವ ಈ ಭವಿಷ್ಯವು ಪುರಾಣದಲ್ಲಿ ಶ್ರುತವಾಗಿದೆ. ಬ್ರಾಹ್ಮಣನೇ! ಹಿಡಿಂಬಿಯೆಂಬ ರಾಕ್ಷಸಿಯು ಭೀಮಸೇನನೆಂಬ ಮಾನವನ ಪತ್ನಿಯಾಗುವಳು.

ಮಾನುಷೋತ್ಪಾದಿತಃ ಪುತ್ರೋ ಭವಿಷ್ಯತಿ ಘಟೋತ್ಕಚಃ ।
ಅವಧ್ಯಃ ಸರ್ವಶಸ್ತ್ರಾಣಾಂ ಶಕ್ತ್ಯಾ ಮೃತ್ಯುಮವಾಪ್ಸ್ಯತಿ ॥ ೧೧೨ ॥

ತಸ್ಮಾದ್ವಿಷಾದಂ ಮಾ ವಿಪ್ರ ಕುರು ತ್ವಂ ದೈವಯೋಗತಃ ।
ಭಾರ್ಯಾ ತವಾಹಂ ಸಂಜಾತಾ ದೈವಂ ಹಿ ಬಲವತ್ತರಂ ॥ ೧೧೩ ॥

ಮರ್ತ್ಯಲೋಕಂ ಗತೇ ಶಕ್ರೇ ವೈರೋಚನನಿರೀಕ್ಷಣೇ ।
ಶದಂತರಂ ಸಮಾಸಾದ್ಯ ಭರ್ತಾ ಮೇ ಘೋರರಾಕ್ಷಸಃ ॥ ೧೧೪ ॥

ತದ್ಗೃಹಾಚ್ಛಕ್ತಿಮಹರದ್ದೀಪ್ತಾಮಗ್ನಿಶಿಖಾಮಿವ ।
ಸೇಯಂ ಸಮಾಶ್ರಿತಾ ಚಾತ್ರ ಶಾಲವೃಕ್ಷೇ ತು ವಾಸವೀ ॥ ೧೧೫ ॥

ಅಹತ್ವೈತಂ ದ್ವಿಜಶ್ರೇಷ್ಠ ನ ಗಚ್ಛತಿ ಪುರಂದರಂ ।
ಯದ್ವಧಾಯ ಪ್ರಕ್ಷಿಪೇತ್ತಾಂ ಸೋಽಮರೋಪಿ ವಿನಶ್ಯತಿ ॥ ೧೧೬ ॥

---

೧೧೨. ಮನುಷ್ಯನಿಂದ ರಾಕ್ಷಸಿಯಲ್ಲಿ ಘಟೋತ್ಕಚನೆಂಬ ಮಗನು ಹುಟ್ಟುವನು. ಸಕಲಶಸ್ತ್ರಗಳಿಂದಲೂ ಅವಧ್ಯನಾದ ಅವನು ಶಕ್ತಿಯಿಂದ ಮರಣ ಹೊಂದುವನು.

೧೧೩. ಆದಕಾರಣ ನೀನು ವಿಷಾದಪಡಬೇಡ. ದೈವವು ಬಲವತ್ತರ ವಾದುದು. ದೈವಯೋಗದಿಂದಲೇ ನಾನು ನಿನಗೆ ಭಾರ್ಯೆಯಾಗುವೆನು.

೧೧೪-೧೧೫. ಇಂದ್ರನು ಬಲಿಚಕ್ರವರ್ತಿಯ ನಿರೀಕ್ಷಣೆಗಾಗಿ ಮನುಷ್ಯಲೋಕಕ್ಕೆ ಹೋದ ಸಮಯದಲ್ಲಿ ನನ್ನ ಗಂಡನಾದ ಕ್ರೂರ ರಾಕ್ಷಸನು ಇಂದ್ರಲೋಕಕ್ಕೆ ಹೋಗಿ ಅವನ ಮನೆಯಿಂದ ಅಗ್ನಿಜ್ವಾಲೆಯಂತೆ ಹೊಳೆಯುತ್ತಿರುವ ಶಕ್ತಿಯನ್ನು ಅಪಹರಿಸಿ ತಂದಿರುವನು. ಆ ಇಂದ್ರಶಕ್ತಿಯು ಈ ಮತ್ತಿಯ ಮರದ ಮೇಲಿದೆ.

೧೧೬. ಅದು ಇವನನ್ನು ಕೊಲ್ಲದೇ ಇಂದ್ರನ ಬಳಿಗೆ ಹಿಂತಿರುಗಿ ಹೋಗುವುದಿಲ್ಲ. ಅದನ್ನು ಪ್ರಯೋಗಿಸಿದರೆ ದೇವತೆಯಾದರೂ ಸಹ ನಾಶವಾಗುವನು,

ಶಾಕ್ತಮಾರುಹ್ಯ ಶಾಲಾಗ್ರಂ ಶಕ್ತಿಮಾನೀಯ ಭಾಸ್ವರಾಂ |
ತ್ವತ್ಕರೇ ಸಂಪ್ರದಾಸ್ಯಾಮಿ ಭರ್ತುರ್ನಿಧನಕಾಮ್ಯಯಾ || ೧೧೭ ||

ಯದಿ ತ್ವಮನಯಾ ಶಕ್ತ್ಯಾ ನ ಹಿಂಸಸಿ ನಿಶಾಚರಂ |
ಖಾದಯಿಷ್ಯತಿ ದುರ್ಮೇಧಾಸ್ತ್ವಾಂ ಚ ಮಾಂ ಚ ನ ಸಂಶಯಃ ||೧೧೮||

ತವ ಶತ್ರುರ್ಮಹಾನೇಷ ಮಮಾಪಿ ಚ ಪರಂತಪ |
ಯೇನಾಹೃತಾ ಕುಮಾರೀಹ ಭಾರ್ಯಾರ್ಥಂ ಮಂದಬುದ್ಧಿನಾ || ೧೧೯ ||

ಸ ಯತ್ರ ಭಾವೋ ಜನಿತೋ ಮಮ ಭರ್ತ್ರಾ ದುರಾತ್ಮನಾ |
ವ್ಯಾಪಾದಿತೇಽಸ್ಮಿನ್ನುಭಯೋಃ ಕ್ರೀಡನಂ ಸಂಭವಿಷ್ಯತಿ || ೧೨೦ ||

ಯದ್ಯನ್ಯಥಾ ವದೇರ್ವಾಕ್ಯಂ ತ್ವಾಮಹಂ ರತಿವರ್ಧನ |
ತದಾತ್ಮಕೃತಪುಣ್ಯಸ್ಯ ನ ಭವೇಯಂ ಹಿ ಭಾಗಿನೀ || ೧೨೧ ||

---

೧೧೭. ನಾನು ಗಂಡನನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ಈ ಮತ್ತಿಯ ಮರದ ಕೊನೆಯ ಭಾಗಕ್ಕೆ ಹತ್ತಿ ಅಲ್ಲಿ ಹೊಳೆಯುತ್ತಿರುವ ಇಂದ್ರಶಕ್ತಿಯನ್ನು ತಂದು ನಿನ್ನ ಕೈಗೆ ಕೊಡುವೆನು.

೧೧೮. ನೀನು ಈ ಶಕ್ತಿಯಿಂದ ರಾಕ್ಷಸನನ್ನು ಕೊಲ್ಲದಿದ್ದರೆ ಆ ದುರ್ಬುದ್ಧಿಯು ನಿನ್ನನ್ನೂ ನನ್ನನ್ನೂ ಸಹ ತಿಂದು ಬಿಡುವನು, ಸಂದೇಹವಿಲ್ಲ.

೧೧೯. ಶತ್ರುಹಂತನೇ! ಇವನು ನಿನಗೆ ಮತ್ತು ನನಗೂ ಸಹ ದೊಡ್ಡ ಶತ್ರುವು. ಈ ಮೂಢನು ಒಬ್ಬ ರಾಜಕುಮಾರಿಯನ್ನು ಮದುವೆಮಾಡಕೊಳ್ಳಬೇಕೆಂದು ತಂದಿರುವನು.

೧೨೦. ನನ್ನ ಗಂಡನನ್ನು ಕೊಂದರೆ ದುರಾತ್ಮನಾದ ಅವನು ಯಾವ ಕುಮಾರಿಯಲ್ಲಿ ಕ್ರೀಡಿಸಬೇಕೆಂದು ಭಾವಿಸಿರುವನೋ ಅವಳ ಸಹಿತವಾಗಿ ನಮ್ಮಿಬ್ಬರೊಡನೆ ನೀನು ಕ್ರೀಡಿಸಲವಕಾಶವಾಗುತ್ತದೆ.

೧೨೧. ರತಿವರ್ಧಕನೇ! ನಿನಗೆ ನಾನು ಸುಳ್ಳು ಹೇಳಿದ್ದರೆ ನಾನು ಮಾಡಿದ ಪುಣ್ಯವೆಲ್ಲವೂ ಹೋಗಲಿ.

ಯಾ ಗತಿರ್ಬ್ರಹ್ಮಹತ್ಯಾಯಾಂ ಕುತ್ಸಿತಾ ಪ್ರಾಪ್ಯತೇ ನರೈಃ ।
ತಾಂ ಗತಿಂ ವಿಪ್ರ ಯಾಸ್ಯೇಹಂ ಯದ್ಯೇತದನೃತಂ ಭವೇತ್ ॥ ೧೨೨ ॥

ಮದ್ಯಂ ಹಿ ಪಿಬತೋ ಬ್ರಹ್ಮನ್ ಬ್ರಾಹ್ಮಣಸ್ಯ ದುರಾತ್ಮನಃ ।
ಯಾಗತಿರ್ವಿಹಿತಾ ಘೋರಾ ತಾಂ ಗತಿಂ ಪ್ರಾಪ್ನುಯಾಮ್ಯಹಂ ॥ ೧೨೩ ॥

ಗುರುದಾರಪ್ರಸಕ್ತಸ್ಯ ಜಂತೋಃ ಪಾಪನಿಷೇವಿಣಃ ।
ಯಾ ಗತಿಸ್ತಾಂ ದ್ವಿಜಶ್ರೇಷ್ಠ ಮಿಥ್ಯಾ ಪ್ರೋಚ್ಯ ಸಮಾಪ್ನುಯಾಂ ॥೧೨೪॥

ಸ್ವರ್ಣನ್ಯಾಸಾಪಹರಣೇ ಮೇದಿನೀಹರಣೇ ಚ ಯಾ ।
ಆತ್ಮನೋ ಹನನೇ ಯಾ ಹಿ ವಿಹಿತಾ ಮುನಿಭಿರ್ದ್ವಿಜ ॥ ೧೨೫ ॥

ಗತಿಸ್ತಾಮನುಗಚ್ಛಾಮಿ ಯದ್ಯೇತದನೃತಂ ವದೇ ।
ಪಂಚಮ್ಯಾಂ ಚ ತಥಾಷ್ಟಮ್ಯಾಂ ಯತ್ಪಾಪಂ ಮಾಂಸಭಕ್ಷಣೇ ॥ ೧೨೬ ॥

---

೧೨೨. ಬ್ರಾಹ್ಮಣನೇ! ನಾನು ಹೇಳಿರುವುದು ಸುಳ್ಳಾದರೆ ಬ್ರಹ್ಮಹತ್ಯೆ ಮಾಡಿದರೆ ಮನುಷ್ಯರು ಹೊಂದುವಂತಹ ದುರ್ಗತಿಯು ನನಗೆ ಬರಲಿ.

೧೨೩. ಮದ್ಯಪಾನಮಾಡಿದ ದುರಾತ್ಮನಾದ, ಬ್ರಾಹ್ಮಣನಿಗೆ ಶಾಸ್ತ್ರದಲ್ಲಿ ವಿಹಿತವಾಗಿರುವ ಘೋರ ಶಿಕ್ಷೆಯನ್ನು ನಾನು ಅನುಭವಿಸುವೆನು.

೧೨೪. ದ್ವಿಜಶ್ರೇಷ್ಠನೇ! ನಾನು ಸುಳ್ಳು ಹೇಳಿದ್ದರೆ ಗುರುಪತ್ನೀಗವನಮಾಡಿದ ಪಾಪಿಷ್ಠನಿಗೆ ಸಂಭವಿಸುವ ಗತಿಗೆ ನಾನು ಗುರಿಯಾಗುವೆನು.

೧೨೫-೧೩೩. ನಾನು ಹೇಳಿರುವುದು ಸುಳ್ಳಾದರೆ ಬಂಗಾರವನ್ನು ಕದಿಯುವುದು, ಭೂಮಿಯನ್ನ ಪಹರಿಸುವುದು, ಆತ್ಮಹತ್ಯೆ ಇವುಗಳನ್ನು ಮಾಡಿದವರಿಗಾಗುವ ಗತಿಯನ್ನು ಹೊಂದಲು ಸಿದ್ಧಳಿರುವೆನು.

ನಾನು ನಿನಗೆ ಸುಳ್ಳು ಹೇಳಿದ್ದರೆ ಪಂಚಮೀ ಮತ್ತು ಅಷ್ಟಮೀದಿನಗಳಲ್ಲಿ ಮಾಂಸ ತಿನ್ನುವುದರಿಂದ ಬರುವ ಪಾಪ, ಅಮಾವಾಸ್ಯೆಯ ದಿನದಲ್ಲಿ ಸ್ತ್ರೀಸಂಭೋಗ ಮತ್ತು ವೃಕ್ಷಚ್ಛೇದನೆಗಳನ್ನುಮಾಡುವುದರಿಂದ ಬರುವ ಪಾಪ, ಉಚ್ಛಿಷ್ಟದಲ್ಲಿನ ಘೃತವನ್ನು ತಿನ್ನುವವನು, ಹಗಲು ಸ್ತ್ರೀಸಂಭೋಗಮಾಡುವವನು, ವೈಶ್ವ

ಸ್ತ್ರೀಸಂಗಮೋ ತೆರುಚ್ಛೇದೇ ಯತ್ಪಾಪಂ ಶಶಿನಃ ಕ್ಷಯೇ ।
ಯದುಚ್ಛಿಷ್ಟೇ ಘೃತಂ ಭೋಕ್ತುರ್ಮ್ರ್ಯಘುನೇನ ದಿವಾ ಚ ಯತ್ ॥೧೨೭॥

ವೈಶ್ವದೇವಮಕರ್ತುಶ್ಚ ಗೃಹಿಣೋ ಹಿ ದ್ವಿಜಸ್ಯ ಯತ್ ।
ಭಿಕ್ಷಾಮದಾತುರ್ಭಿಕ್ಷುಭ್ಯೋ ವಿಧವಾಯಾ ದ್ವಿಭೋಜನಾತ್ ॥ ೧೨೮ ॥

ತೈಲಂ ಭೋಕ್ತುಶ್ಚ ಸಂಕ್ರಾಂತೋ ಗೋಭಿಸ್ತೀರ್ಥಂ ಚ ಗಚ್ಛತಃ ।
ತಥಾ ಮೃದಮನುದ್ಧೃತ್ಯ ಸ್ನಾತುಃ ಪರಜಲಾಶಯೇ ॥ ೧೨೯ ॥

ನಿಷಿದ್ಧವೃಕ್ಷಜನಿತಂ ದಂತಕಾಷ್ಠಂ ಚ ಖಾದತಃ ।
ಗಾಮಸೇವಯತೋ ಬದ್ಧ್ವಾ ಪಾಖಂಡಪಥಗಾಮಿನಃ ॥ ೧೩೦ ॥

ಪಿತೃದೇವಾರ್ಚನಂ ಕರ್ತುಃ ಕಾಷ್ಠಗ್ರಾವಸ್ಥಿತಸ್ಯ ಯತ್ ।
ಮೋಹಿನೀಂ ಮಹಿಷೀಂ ಧರ್ತುಃ ಭಿನ್ನಕಾಂಸ್ಯೇ ಚ ಭುಂಜತಃ ॥ ೧೩೧ ॥

ಅಧೌತಭಿನ್ನಪಾರಕ್ಯವಸ್ತ್ರಸಂವೀತಕರ್ಮಿಣಃ ।
ನಗ್ನಸ್ತ್ರೀಪ್ರೇಕ್ಷಣಂ ಕರ್ತುರಭಕ್ಷ್ಯಸ್ಯ ಚ ಭೋಜಿನಃ ॥ ೧೩೨ ॥

---

ದೇವಮಾಡದಿರುವ ಬ್ರಾಹ್ಮಣ ಗೃಹಸ್ಥನು, ಸನ್ಯಾಸಿಗಳಿಗೆ ಭಿಕ್ಷೆಯನ್ನು ನೀಡದವನು, ಎರಡುಹೊತ್ತು ಊಟಮಾಡುವ ವಿಧವೆಯು, ಸಂಕ್ರಮಣ ಪರ್ವಕಾಲದಲ್ಲಿ ತೈಲಾಭ್ಯಂಗನ ಮಾಡಿಕೊಂಡವನು, ಗೋವಿನಮೇಲೆ ಕುಳಿತುಕೊಂಡು ತೀರ್ಥ ಯಾತ್ರೆಗೆ ಹೋದವನು, ಇತರರು ಕಟ್ಟಿಸಿದ ಕೊಳ ಮುಂತಾದವುಗಳಲ್ಲಿ ಮಣ್ಣನ್ನು ಎತ್ತಿಹಾಕದೆ ಸ್ನಾನಮಾಡಿದವನು, ನಿಷಿದ್ಧ ವೃಕ್ಷಗಳಕಡ್ಡಿಯಿಂದ ಹಲ್ಲನ್ನುಜ್ಜುವವನು, ಗೋವನ್ನುಕಟ್ಟಿ ಸೇವಿಸದಿರುವವನು, ಪಾಷಂಡಿಗಳ ಮಾರ್ಗವನ್ನನುಸರಿಸುವವನು, ಕಟ್ಟಿಗೆ ಅಥವಾ ಶಿಲೆಯಮೇಲೆ ಕುಳಿತು ಪಿತೃ ಮತ್ತು ದೇವತೆಗಳ ಪೂಜೆ ಮಾಡುವವನು, ಮೋಹಿನಿಯನ್ನು ಮಹಿಷಿಯನ್ನಾಗಿ ಮಾಡಿಕೊಂಡಿರುವವನು, ಒಡೆದು ಹೋದ ಕಂಚಿನ ಪಾತ್ರೆಯಲ್ಲಿ ಭೋಜನಮಾಡುವವನು, ಒಗೆಯದಿದ್ದ, ಹರಿದಿರುವ, ಪರಕೀಯವಾದ ಬಟ್ಟೆಗಳನ್ನುಟ್ಟು ವಿಹಿತಕರ್ಮವನ್ನಾಚರಿಸುವವನು, ಬರಿಮೈಯಲ್ಲಿದ್ದ ಹೆಂಗಸನ್ನುನೋಡಿದವನು, ತಿನ್ನಬಾರದುದನ್ನು

ಕಥಾಯಾಂ ಶ್ರೀಹರೇರ್ವಿಘ್ನಂ ಕರ್ತುರ್ಯತ್ ಪಾತಕಂ ದ್ವಿಜ |
ತೇನ ಪಾಪೇನ ಲಿಪ್ಯೇಹಂ ಯದಿ ವಚ್ಮಿ ತವಾನೃತಂ || ೧೩೩ ||

ಉಕ್ತಾನ್ಯೇತಾನಿ ಪಾಪಾನಿ ಯಾನ್ಯಯುಕ್ತಾನ್ಯಪಿ ದ್ವಿಜ |
ಸರ್ವೇಷಾಂ ಭಾಗಿನೀ ಚಾಹಂ ಯದ್ಯೇತದನೃತಂ ವದೇ || ೧೩೪ ||

ಏವಂ ಸಂಬೋಧಿತೋ ದೇವಿ ಭರ್ತಾ ಮೇ ಪಾಪಯಾ ತಯಾ |
ತಥೇತಿ ನಿಶ್ಚಯಂ ಚಕ್ರೇ ಭವಿತವ್ಯೇನ ಮೋಹಿತಃ || ೧೩೫ ||

ನಿದ್ರವ್ಯೋ ವ್ಯಸನಾಸಕ್ತೋ ಮದ್ವಾಕ್ಯಕಲುಷೀಕೃತಃ |
ಉವಾಚ ರಾಕ್ಷಸೀಂ ವಾಕ್ಯಂ ಸರ್ವಸಿದ್ಧಿಪ್ರದಾಯಕಂ || ೧೩೬ ||

ಶ್ರೀಘ್ರಮಾನಯ ತಾಂ ಶಕ್ತಿಂ ಕರೋಮಿ ವಚನಂ ತವ |
ಸರ್ವಮೇತತ್ ಪ್ರದೇಯಂ ಹಿ ತ್ವಯಾ ಮೇ ರಾಕ್ಷಸೇ ಹತೇ || ೧೩೭ ||

---

ತಿಂದವನು ಮತ್ತು ಶ್ರೀಹರಿಕಥೆಯನ್ನು ಹೇಳುತ್ತಿರುವ ಸಂದರ್ಭದಲ್ಲಿ ವಿಘ್ನವಾಡಿದವನು ಇವರುಗಳಿಗೆ ಬರುವ ಪಾಪ ಇವನ್ನೆಲ್ಲಾ ಅನುಭವಿಸುವೆನು.

೧೩೪. ದ್ವಿಜನೇ! ನಾನು ಸುಳ್ಳು ಹೇಳಿದ್ದರೆ ಇಲ್ಲಿ ಹೇಳಿರುವ ಮತ್ತು ಹೇಳದಿರುವ ಎಲ್ಲಾ ಪಾಪಗಳಿಗೂ ಭಾಗಿಯಾಗುವೆನು.

೧೩೫. ದೇವಿಯೇ! ಪಾಪಿಯಾದ ಆ ರಾಕ್ಷಸಿಯಿಂದ ಈ ರೀತಿಯಾಗಿ ಬೋಧಿಸಲ್ಪಟ್ಟ ನನ್ನ ಗಂಡನು ಭವಿಷ್ಯದಿಂದ ಮೋಹಿತನಾಗಿ ಹಾಗೆಯೇ ಮಾಡಬೇಕೆಂದು ನಿಶ್ಚಯಿಸಿದನು.

೧೩೬. ನಿರ್ಧನನು ವ್ಯಸನಾಕ್ರಾಂತನು, ನನ್ನ ಮಾತಿನಿಂದ ಮನಃ ಕಷಾಯಹೊಂದಿದ್ದವನೂ ಆದ ಪತಿಯು ರಾಕ್ಷಸಿಯನ್ನು ಕುರಿತು ಸಕಲಸಿದ್ಧಿ ಪ್ರದಾಯಕವಾದ ಮಾತುಗಳನ್ನಾಡಿದನು.

೧೩೭-೧೪೦. ರಾಕ್ಷಸಿಯೇ! ಆ ಶಕ್ತಿಯನ್ನು ಬೇಗ ತೆಗೆದುಕೊಂಡು ಬಾ. ನಿನ್ನ ಮಾತಿನಂತೆ ಮಾಡುವೆನು. ನಾನು ರಾಕ್ಷಸನನ್ನು ಸಂಹರಿಸಿದ

ದ್ರವ್ಯಾಶಯಾ ಪ್ರವಿಷ್ಟೋಽಹಂ ಸಾಗರಂ ತಿಮಿಸಂಕುಲಂ ।
ತಚ್ಛ್ರುತ್ವಾ ರಾಕ್ಷಸೀ ಶಕ್ತಿಂ ಸಮಾನೀಯ ನಗಸ್ಥಿತಾಂ ॥ ೧೩೮ ॥

ದದೌ ಮದ್ಭರ್ತೃಸಿದ್ಧ್ಯರ್ಥಂ ವಿಮುಂಚಂತೀಂ ಮಹಾರ್ಚಿಷಂ ।
ಏತಸ್ಮಿನ್ನೇವ ಕಾಲೇ ತು ರಾಕ್ಷಸಃ ಕಾಮಮೋಹಿತಃ ॥ ೧೩೯ ॥

ಗಮನಾಯೋದ್ಯತಃ ಕನ್ಯಾಂ ಸಾ ಭೀತಾ ವಾಕ್ಯಮಬ್ರವೀತ್ ।
ಕುಮಾರೀಸೇವನೇ ರಕ್ಷೋ ಮಹಾಪಾಪಂ ವಿಧೀಯತೇ ॥ ೧೪೦ ॥

ಛಲೇನಾಹಂ ಹೃತಾ ಕಾಶ್ಯಾಃ ಸುಪ್ತಾ ಪಿತೃಗೃಹಾತ್ತ್ವಯಾ ।
ತವ ದೋಷೋ ನ ಚೇಹಾಸ್ತಿ ಭವಿತವ್ಯಂ ಮಮೇದೃಶಂ ॥ ೧೪೧ ॥

---

ಮೇಲೆ ಇದೆಲ್ಲವನ್ನೂ ನನಗೆ ಕೊಡಬೇಕು. ದ್ರವ್ಯಾಶೆಯಿಂದ ನಾನು ತಿಮಿಗಳಿಂದ ವ್ಯಾಪ್ತವಾದ ಸಮುದ್ರದಲ್ಲಿ ಪ್ರವೇಶಿಸಿರುವೆನು ಎಂದು ಹೇಳಿದನು.

ಅದನ್ನು ಕೇಳಿ ರಾಕ್ಷಸಿಯು ಗಿಡದ ಮೇಲಿದ್ದ, ಮಹಾಜ್ವಾಲೆಯನ್ನು ಬೀರುತ್ತಿರುವ ಶಕ್ತಿಯನ್ನು ತಂದು ನನ್ನ ಗಂಡನನ್ನು ಸಿದ್ಧಿಪಡಿಸಿಕೊಳ್ಳಲು ಅವನಿಗೆ ಕೊಟ್ಟಳು.

ಈ ಸಮಯದಲ್ಲಿ ರಾಕ್ಷಸನು ಕಾಮದಿಂದ ಮೋಹಿತನಾಗಿ ತಾನು ತಂದಿದ್ದ ಕನ್ಯೆಯ ಸಂಭೋಗಮಾಡಲುದ್ಯುಕ್ತನಾದನು.

ಆಗ ಕನ್ಯೆಯು ಭಯಪಟ್ಟು ಈ ರೀತಿಯಾಗಿ ಮಾತನಾಡಿದಳು. ರಾಕ್ಷಸನೇ! ವಿವಾಹವಿಲ್ಲದ ಕುಮಾರಿಯನ್ನು ಸಂಭೋಗಿಸಿದರೆ ಶಾಸ್ತ್ರದಲ್ಲಿ ಮಹಾಪಾಪವು ಬರುತ್ತದೆಂದು ಹೇಳಿದೆ.

೧೪೧. ತಂದೆಯ ಮನೆಯಲ್ಲಿ ಮಲಗಿದ್ದ ನನ್ನನ್ನು ಛಲದಿಂದ ಅಪಹರಿಸಿ ಕಾಶಿಯಿಂದ ಕರೆದುಕೊಂಡು ಬಂದಿರುವೆ. ಈ ವಿಷಯದಲ್ಲಿ ನಿನ್ನ ತಪ್ಪೇನೂ ಇಲ್ಲ. ನನ್ನ ಅದೃಷ್ಟವೇ ಇಂತಹುದಾಗಿದೆ.

ಗುಹಾಮಧ್ಯಗತಾಯೋಸ್ತು ಕೋ ಮೇ ತ್ರಾತಾ ಭವಿಷ್ಯತಿ ।
ವಿಧಿಯೋಗಾದ್ಭವೇದ್ಭರ್ತಾ ವಿಧಿಯೋಗಾದ್ಭವೇತ್ಪ್ರಿಯಾ ॥ ೧೪೨ ॥

ಭವೇದ್ವಿಧಿವಶಾದ್ವಿದ್ಯಾ ಗೃಹಂ ಸೌಖ್ಯಂ ಧನಂ ಕುಲಂ ।
ವಿಧಿನಾ ಪ್ರೇರ್ಯಮಾಣಸ್ತು ಜನಃ ಸರ್ವತ್ರ ಗಚ್ಛತಿ ॥ ೧೪೩ ॥

ಅವಶ್ಯಂ ಭಾವಿ ಭವಿತಾ್ಯಲಮೇವ ರಜನೀಚರ ।
ವಿಧಿನಾ ವಿಹಿತೇ ಮಾರ್ಗೇ ಕಿಂ ಕರಿಷ್ಯತಿ ಪಂಡಿತಃ ॥ ೧೪೪ ॥

ತಸ್ಮಾದಾನಯ ತಂ ವಿಪ್ರಂ ಸಾಲವೃಕ್ಷಾಶ್ರಿತಂ ತ್ವಿಹ ।
ಘೃತಂ ಜಲಂ ಕುಶಾನಗ್ನಿಂ ವಿವಾಹ ವಿಧಿನಾ ಕುರು ॥ ೧೪೫ ॥

ವಿನಾಪಿ ದರ್ಭತೋಯಾಗ್ನೀನ್ಯಥೋಕ್ತವಿಧಿಮಂತರಾ ।
ಬ್ರಾಹ್ಮಣಸ್ಯೈವ ವಾಕ್ಯೇನ ವಿವಾಹಃ ಸಫಲೋ ಭವೇತ್ ॥ ೧೪೬ ॥

---

೧೪೨-೧೪೩. ಈ ಗುಹೆಯ ಮಧ್ಯದಲ್ಲಿರುವ ನನಗೆ ಯಾವನು ರಕ್ಷಕನಾದಾನು? ಪತಿ, ಪತ್ನಿ, ವಿದ್ಯೆ, ಮನೆ, ಸೌಖ್ಯ, ಧನ ಮತ್ತು ಕುಲ ಇವೆಲ್ಲವೂ ದೈವಯೋಗದಿಂದಲೇ ಲಭಿಸುವುವು. ದೈವಪ್ರೇರಣೆಯಿಂದಲೇ ಜನರು ಎಲ್ಲಿಗಾದರೂ ಹೋಗುವರು.

೧೪೪. ರಾಕ್ಷಸನೇ! ಆಗಬೇಕೆಂದು ದೈವಪ್ರೇರಿತವಾದುದು. ಖಂಡಿತವಾಗಿಯೂ ಆಗುತ್ತದೆ. ಆದರೆ ವಿವೇಕಿಯಾದವನು ವಿಧಾನೋಕ್ತರೀತಿಯಲ್ಲಿ ಮಾಡುವನು.

೧೪೫. ಆದಕಾರಣ ಇಲ್ಲಿ ಮತ್ತಿಯ ಮರದ ಕೆಳಗಿರುವ ಆ ಬ್ರಾಹ್ಮಣನನ್ನು ಮತ್ತು ತುಪ್ಪ, ನೀರು, ದರ್ಭೆ, ಅಗ್ನಿಗಳನ್ನೂ ಸಹ ತೆಗೆದುಕೊಂಡು ಬಂದು ವಿಧಾನೋಕ್ತಪ್ರಕಾರ ವಿವಾಹವನ್ನು ಮಾಡಿಕೊಳ್ಳುವ.

೧೪೬. ದರ್ಭೆ, ನೀರು, ಅಗ್ನಿಗಳಿಲ್ಲದೆ ಶಾಸ್ತ್ರೋಕ್ತವಿಧಾನವನ್ನಾಚರಿಸದೆಯೂ ಬ್ರಾಹ್ಮಣವಚನದಿಂದಲೇ ವಿವಾಹವು ಸಫಲವಾಗುವುದು.

ನ ಹತೋ ಯದಿ ವಿಪ್ರಸ್ತು ಭಾರ್ಯಯಾ ತವ ರಾಕ್ಷಸ ।
ವೃತ್ತೇ ಹೋಮಸ್ಯ ಕಾರ್ಯೇ ತು ತಂ ಭವಾಞ್ ಭಕ್ಷಯಿಷ್ಯತಿ ॥ ೧೪೭ ॥

ಏವಮುಕ್ತೋ ತು ವಚನೇ ತಯಾ ವೈ ರಾಜಕನ್ಯಯಾ ।
ವಿಶ್ವಸ್ತಮಾನಸೋ ದರ್ಪಾನ್ನಿರ್ಜಗಾಮ ಸ ರಾಕ್ಷಸಃ ॥ ೧೪೮ ॥

ಸತ್ವರಂ ಹೃಚ್ಛಯಾವಿಷ್ಟಸ್ತಮಾನೇತುಂ ಬಹಿಃ ಸ್ಥಿತಂ । ॥ ೧೪೯ ॥

ತಸ್ಯ ನಿರ್ಗಚ್ಛತೋ ದೇವಿ ಕ್ಷುತಮಾಸೀತ್ ಸ್ವಯಂ ಕಿಲ ।
ಸವ್ಯಂ ಚಾಪ್ಯಸ್ಫುರನ್ನೇತ್ರಂ ಸ್ವವಸ್ತ್ರಸ್ಖಲಿತಂ ತಥಾ ॥ ೧೫೦ ॥

ಅನಾದೃತ್ಯ ತು ತತ್ಸರ್ವಂ ನಿರ್ಗತೋಽಸೌ ದರೀಮುಖಾತ್ ।
ಬಿಭ್ರಾಣಾ ಮಾನುಷಂ ರೂಪಂ ಸ್ವಮುಪಾಸ್ಯ ನಿತಂಬಿನೀ ॥ ೧೫೧ ॥

ಘಟಯಂತೀ ತು ಸಂಬಂಧಂ ಭಾರ್ಯಾಭರ್ತೃಸಮುದ್ಭವಂ ।
ಪರಿತ್ಯಜಾಮಿ ತಂ ಪಾಪಂ ರಾಕ್ಷಸಂ ಕ್ರೂರಕರ್ಮಿಣಂ ॥ ೧೫೨ ॥

---

೧೪೭. ರಾಕ್ಷಸನೇ! ಇದುವರೆಗೆ ನಿನ್ನ ಹೆಂಡತಿಯು ಬ್ರಾಹ್ಮಣನನ್ನು ಕೊಲ್ಲದಿದ್ದರೆ ವಿವಾಹಹೋಮವಾದಮೇಲೆ ಅವನನ್ನು ನೀನು ತಿನ್ನಬಹುದು.

೧೪೮-೧೪೯. ಎಂಬುದಾಗಿ ರಾಜಕನ್ಯೆಯು ಹೇಳಲು ಅದನ್ನು ನಂಬಿ ಕಾಮಾರ್ತನಾದ ಆ ರಾಕ್ಷಸನು ಹೊರಗಿದ್ದ ಆ ಬ್ರಾಹ್ಮಣನನ್ನು ಕರೆತರಲು ವೇಗವಾಗಿ ದರ್ಪದಿಂದ ಹೊರಕ್ಕೆ ಹೊರಟನು.

೧೫೦-೧೫೩. ದೇವಿಯೇ! ಹಾಗೆ ಹೊರಡುತ್ತಿದ್ದ ಅವನಿಗೆ ಸೀನು ಬಂದಿತು. ಎಡಗಣ್ಣು ನಡುಗಿತು. ತನ್ನ ವಸ್ತ್ರವು ಜಾರಿಬಿದ್ದಿತು. ಹೀಗೆ ಸಂಭವಿಸಿದ ಅಪಶಕುನಗಳೆಲ್ಲವನ್ನೂ ಲಕ್ಷ್ಯೀಕರಿಸದೆ ಇವನು ಗುಹೆಯ ಬಾಗಿಲಿನಿಂದ ಹೊರಕ್ಕೆ ಬಂದನು.

ಅಲ್ಲಿ ಪತ್ನಿಯು ತನ್ನ ರಾಕ್ಷಸರೂಪವನ್ನು ಬಿಟ್ಟು ಮನುಷ್ಯ ಸ್ತ್ರೀವೇಷವನ್ನು ಧರಿಸಿ, ದಾಂಪತ್ಯಸಂಬಂಧವನ್ನು ಘಟನೆಮಾಡುವವಳಾಗಿ

ಮಾನುಷೀಪ್ರಮದಾಸಕ್ತಂ ಮುಚ್ಛರೀರಸ್ಯ ದೂಷಕಂ ।
ತಚ್ಛ್ರುತ್ವಾ ದಾರುಣಂ ವಾಕ್ಯಂ ಭಾರ್ಯಯಾ ಸಮುದೀರಿತಂ ।
ಈರ್ಷ್ಯಾಕೋಪಸಮಾಯುಕ್ತಸ್ತ್ವಭ್ಯಧಾವನ್ನಿಶಾಚರಃ ॥ ೧೫೩ ॥

ಉತ್ಕ್ಷಿಪ್ಯ ಬಾಹೂ ಪ್ರವಿದಾರ್ಯ ವಕ್ತ್ರಂ
ಸಂಪ್ರಸ್ಥಿತೋ ಭಕ್ಷಯಿತುಂ ಸಚೋಭೌ ।
ಕಾಲೇನ ವೇಗಾತ್ ಪವನೋ ಯಥೈವ
ಸಮುಚ್ಚರದ್ವಾಕ್ಯಮನರ್ಥಯುಕ್ತಂ ॥ ೧೫೪ ॥

ಇತಿ ಶ್ರೀನಾರದೀಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಕಾಷ್ಠೀಲೋಪಾಖ್ಯಾನಂ ನಾಮ
ಸಪ್ತವಿಂಶೋಽಧ್ಯಾಯಃ

---

" ನನ್ನ ರೂಪವನ್ನು ದೂಷಿಸುವ ಮನುಷ್ಯನಾರಿಯಲ್ಲಾಸಕ್ತನಾದ, ಕ್ರೂರಕೃತ್ಯವನ್ನು ಮಾಡುತ್ತಿರುವ, ಪಾಪಿಯಾದ ಆ ರಾಕ್ಷಸನನ್ನು ಬಿಟ್ಟುಬಿಡುವೆನು " ಎಂಬುದಾಗಿ ಹೇಳುತ್ತಿದ್ದ ತನ್ನ ಹೆಂಡತಿಯ ಕಠಿನವಚನಗಳನ್ನು ಕೇಳಿ ರಾಕ್ಷಸನು ಹೊಟ್ಟೆಕಿಚ್ಚು, ಕೋಪಗಳಿಂದ ಯುಕ್ತನಾಗಿ ಓಡಿದನು.

೧೫೪. ಕೈಗಳನ್ನು ಎತ್ತಿ ಬಾಯನ್ನು ತೆಗೆದುಕೊಂಡು ಆ ರಾಕ್ಷಸನು ಅವರಿಬ್ಬರನ್ನೂ ತಿನ್ನಲು ಅನರ್ಥಕವಾದ ಮಾತುಗಳನ್ನಾಡುತ್ತಾ ವಾಯುವಿನಂತೆ ವೇಗವಾಗಿ ಹೊರಟನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತೆಯೊಳು
ಕಾಷ್ಠೀಲೋಪಾಖ್ಯಾನವೆಂಬ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ತಂದೆಯ ಮಾತನ್ನು ಕೇಳಿ ಧರ್ಮಾಂಗದನು ತನ್ನ ಜನನಿಯಾದ ಸಂಧ್ಯಾವಳಿಯನ್ನು ಕರೆದು ತಂದೆಯು ಹೇಳಿದುದನ್ನೆಲ್ಲಾ ವಿವರಿಸಿ ಮಾತೆಯೇ! ತಂದೆಗೂ ಮೋಹಿನಿಗೂ ಸಹ ಅನುಕೂಲವಾಗುವಂತಹ ಉಪಾಯವನ್ನು ಕಲ್ಪಿಸಿ ಸಮಾಧಾನ ಮಾಡಬೇಕೆಂದು ಪ್ರಾರ್ಥಿಸಿದನು. ಆಗ ಸಂಧ್ಯಾವಳಿಯು ಮೋಹಿನಿಗೆ ಧರ್ಮಗರ್ಭಿತವಾದ ಹಿತೋಪದೇಶ ಮಾಡಿ ಬೇರೆ ವರವನ್ನು ಕೇಳೆಂದು ಪ್ರಾರ್ಥಿಸಲು ಮೋಹಿನಿಯು ತನ್ನ ದುರ್ಭಾವನೆ, ಮತ್ತು ಅದರ ಕಾರಣಗಳನ್ನು ವಿವರಿಸಿದಳು. ಆದರೂ ಸಂಧ್ಯಾವಳಿಯು ಧೈರ್ಯದಿಂದ ಆಕೆಗೆ ಉಪದೇಶಮಾಡ ತೊಡಗಿ ಪತಿಗನುಕೂಲಳಾಗದಿದ್ದರೆ ಅಂತಹ ಭಾರ್ಯೆಯು ಬಹು ಅನರ್ಥಗಳಿಗೀಡಾಗಬೇಕಾಗುವುದೆಂದು ನಿರೂಪಿಸಿ, ತನ್ನ ಬಾಲ್ಯದಲ್ಲಿ ಕಂಡಿದ್ದ ಕಟ್ಟೆಗೇಹುಳುವಿನ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿರುವಳು.

---

## ಅಷ್ಟವಿಂಶೋಽಧ್ಯಾಯಃ

**ಕಾಷ್ಠೀಲೋವಾಚ**

**ರಾಕ್ಷಸಂ ಧಾವಮಾನಂ ತು ಕಾಲಾಂತಕಯಮೋಪಮಂ ।**
**ದೃಷ್ಟ್ವಾ ಸಾ ರಾಕ್ಷಸೀ ಪ್ರಾಹ ಭರ್ತಾರಂ ಮಮ ಶಂಕಿತಾ ॥ ೧ ॥**

**ಪ್ರಕ್ಷಿಪಸ್ವಾನಲಪ್ರಖ್ಯಾಂ ಶಕ್ತಿಂ ಹೇಮವಿಭೂಷಿತಾಂ ।**
**ಮಮಾಯಂ ಪಂಚತಾಂ ಯಾತು ದಿಗಂಬರರಿಪುಃ ಪ್ರಿಯಃ ॥ ೨ ॥**

**ತಸ್ಯಾ ವಾಕ್ಯಾನ್ಮಮ ಪತಿಃ ಪೌರುಷೇ ತು ವ್ಯವಸ್ಥಿತಃ ।**
**ಮುಮೋಚ ವಿಪುಲಾಂ ಶಕ್ತಿಂ ರಕ್ಷೋವಕ್ಷಸ್ಥಲಂ ಪ್ರತಿ ॥ ೩ ॥**

**ಜ್ವಲಂತೀ ಜ್ವಲನಪ್ರಖ್ಯಾ ದ್ಯೋತಯಂತೀ ದಿಶೋ ದಶ ।**
**ದಿವ್ಯಾಂಶುತೀಕ್ಷ್ಣವಕ್ತ್ರಾಂತಾ ಕಿಂಕಿಣೀಶತನಾದಿತಾ ॥ ೪ ॥**

---

### ಇಪ್ಪತ್ತೆಂಟನೆಯ ಅಧ್ಯಾಯವು

೧-೨. ಕಟ್ಟಿಗೇ ಹುಳುವು ಹೇಳಿತು :—ಆ ರಾಕ್ಷಸಿಯು ಓಡಿಬರುತ್ತಿರುವ, ಕಾಲಾಂತಕನಾದ ಯಮನಿಗೆ ಸಮಾನನಾಗಿರುವ ರಾಕ್ಷಸನನ್ನು ನೋಡಿ, ಸಂದೇಹಪಟ್ಟು, ನನ್ನ ಗಂಡನನ್ನು ಕುರಿತು " ಬ್ರಾಹ್ಮಣನೇ! ಸುವರ್ಣದಿಂದ ಅಲಂಕೃತವಾದ ಅಗ್ನಿಯಂತಿರುವ ಶಕ್ತಿಯನ್ನು ಪ್ರಯೋಗಿಸು! ದಿಗಂಬರಶತ್ರುವಾದ ಈ ನನ್ನ ಪ್ರಿಯನು ಸಾಯಲಿ " ಎಂದು ಹೇಳಿದಳು.

೩. ಆ ರಾಕ್ಷಸಿಯ ಮಾತಿನಿಂದ ನನ್ನ ಪತಿಯು ಪೌರುಷವನ್ನು ತಾಳಿ ರಾಕ್ಷಸನ ವಕ್ಷಸ್ಥಳಕ್ಕೆ ಸರಿಯಾಗಿ ಗುರಿಯಿಟ್ಟು ವಿಪುಲಶಕ್ತಿಯನ್ನು ಬಿಟ್ಟನು.

೪-೮. ಅಗ್ನಿಜ್ವಾಲೆಯಂತೆ ಉರಿಯುತ್ತಿರುವ, ದಶದಿಕ್ಕುಗಳನ್ನೂ ಬೆಳಗುವಂತಹ, ದಿವ್ಯವಾದ ದಾರದ ಎಳೆಯಂತೆ ತೀಕ್ಷ್ಣವಾದ ಅಂತ್ಯಭಾಗವುಳ್ಳ,

ರಕ್ತಚಂದನಲಿಪ್ತಾಂಗೀ ರಕ್ತವಸ್ತ್ರೋಪಶೋಭಿತಾ |
ಹೃದಿ ತಸ್ಯ ನಿಪತ್ಯಾಸೌ ಶಕ್ತಿರ್ವಿಪ್ರಕರಚ್ಯುತಾ || ೫ ||

ಕೃತ್ವಾ ಭಸ್ಮಾವಶೇಷಂ ತು ರಾಕ್ಷಸಂ ಗಗನಂ ಯಯೌ |
ಪಾತಯಿತ್ವಾ ಸ್ವಭರ್ತಾರಂ ವಿಪ್ರಹಸ್ತೇನ ರಾಕ್ಷಸೀ || ೬ ||

ಕೃತಕೃತ್ಯಮಿವಾತ್ಮಾನಂ ಮೇನೇ ಹೃಷ್ಟತನೂರುಹಾ |
ಅಥೋವಾಚ ದ್ವಿಜಂ ಹೃಷ್ಟ್ವಾ ರಾಕ್ಷಸೀ ಶುಭಲೋಚನಂ || ೭ ||

ಏಹಿ ಕಾಂತೆ ಗುಹಾಂ ರಮ್ಯಾಂ ಪ್ರವಿಶ ತ್ವಂ ಯದೃಚ್ಛಯಾ |
ಭುಂಕ್ಷ್ವ ಭೋಗಾನ್ ಮಯಾ ಸಾರ್ಧಂ ಯೇ ದಿವ್ಯಾ ಯೇಚ ಮಾನುಷಾಃ||

ತಥೇತಿ ಪ್ರಾಣನಾಥೋ ಮೇ ಪ್ರಾಹ ಹೃಷ್ಟವಪುಸ್ತದಾ |
ತತಃ ಸಾದಾಯ ಮೇ ಕಾಂತಂ ಸ್ವಾಂ ಪ್ರವಿಷ್ಟಾ ಗುಹಾಂ ಮುದಾ || ೯ ||

---

ನೂರಾರುಗೆಜ್ಜೆಗಳ ನಾದವುಳ್ಳ, ದೇಹಕ್ಕೆ ಕೆಂಪುಗಂಧವನ್ನು ಹಚ್ಚಿಕೊಂಡಿರುವ, ಕೆಂಪುಬಟ್ಟೆಯನ್ನು ಧರಿಸಿರುವ, ಈ ಶಕ್ತಿಯು ಬ್ರಾಹ್ಮಣಹಸ್ತದಿಂದ ಬಿಡಲ್ಪಟ್ಟು ಆ ರಾಕ್ಷಸನ ಹೃದಯದಲ್ಲಿ ಬಿದ್ದು, ಅವನನ್ನು ಸುಟ್ಟು ಬೂದಿಮಾಡಿ, ಅಂತರಿಕ್ಷಕ್ಕೆ ಹೋಯಿತು.

ರಾಕ್ಷಸಿಯು ತನ್ನ ಪತಿಯನ್ನು ಬ್ರಾಹ್ಮಣನ ಕೈಯಿಂದ ಕೊಲ್ಲಿಸಿ ಹರ್ಷಪುಲಕಿತಳಾಗಿ ಕೃತಕೃತ್ಯಳಾದಂತೆ ಭಾವಿಸಿದಳು.

ತರುವಾಯ ಸಂತುಷ್ಟಳಾದ ರಾಕ್ಷಸಿಯು ಶುಭನಯನನಾದ ಬ್ರಾಹ್ಮಣನನ್ನು ಕುರಿತು ಕಾಂತನೇ! ಬಾ ನೀನು ಮನೋಹರವಾದ ಈ ಗುಹೆಯನ್ನು ಪ್ರವೇಶಿಸಿ, ದೇವಯೋಗ್ಯ ಮತ್ತು ಮಾನುಷಗಳಾದ ಭೋಗಗಳನ್ನು ಭಗವದಿಚ್ಛಾನುಸಾರವಾಗಿ ನನ್ನೊಡನೆ ಭೋಗಿಸು.

೯-೧೦. ಆಗ ನನ್ನ ಪ್ರಾಣಕಾಂತನು ಸಂತುಷ್ಟನಾಗಿ ಹಾಗೆಯೇ ಆಗಲೆಂದು ಹೇಳಿದನು. ತರುವಾಯ ಆ ರಾಕ್ಷಸಿಯು ಪತಿದೇಹದ ಬೂದಿಯನ್ನೂ

ಅಸಂವೀಕ್ಷ್ಯೈವ ತದ್ಭಸ್ಮ ಭರ್ತೃದೇಹಸಮುದ್ಭವಂ ।
ಕುಚಾಭ್ಯಾಮುನ್ನತಾಭ್ಯಾಂ ಸಾ ಮುಗ್ಧಾಕಾರಮಪೀಡಯತ್ ॥ ೧೦ ॥
ದರ್ಶಯಾಮಾಸ ತಾಂ ತಸ್ಮೈ ಕುಮಾರೀಂ ಶಯನೇ ಸ್ಥಿತಾಂ ।
ಇಯಂ ತೇನಾಸಿತಾಪಾಂಗೀ ಬಿಂಬೋಷ್ಠೀ ಕಾಂಚನಪ್ರಭಾ ॥ ೧೧ ॥
ಭಾರ್ಯಾರ್ಥೇ ಸಮುಪಾನೀತಾ ವಾರಾಣಸ್ಯಾ ದ್ವಿಜೋತ್ತಮ ।
ಯಸ್ಯಾಃ ಸೀಮಾಂ ನ ಲಂಘಂತಿ ಪಾತಕಾನಿ ಹ್ಯಶೇಷತಃ ॥ ೧೨ ॥
ಶಕ್ತಿಕ್ಷೇತ್ರಂ ಚ ತಾಂ ಪ್ರಾಹುಃ ಪುಣ್ಯಂ ಪಾಪಕ್ಷಯಂಕರಂ ।
ಯಾ ಗೃಹಂ ತ್ರಿಪುರಾರೇಶ್ಚ ಪಂಚಗವ್ಯೂತಿಸಂಸ್ಥಿತಾ ॥ ೧೩ ॥
ಯಸ್ಯಾಂ ಮೃತಾಃ ಪುನರ್ಮರ್ತ್ಯಾ ಗರ್ಭವಾಸಂ ವಿಶಂತಿ ನ ।
ಸ ತ್ವಮಸ್ಯಾ ಗೃಹಂ ಪಿತ್ರ್ಯಂ ಪುನರ್ನಯ ಸುಲೋಚನಾಂ ॥ ೧೪ ॥

---

ನೋಡದೇ ಸಂತೋಷದಿಂದ ನನ್ನ ಗಂಡನನ್ನು ಕರೆದುಕೊಂಡು ಗುಹೆಗೆ ಪ್ರವೇಶಿಸಿದಳು. ಅಲ್ಲಿ ಅವಳು ನನ್ನ ಗಂಡನನ್ನು ಉನ್ನತಸ್ತನಗಳಿಂದ ಪೀಡಿಸಿದಳು.

೧೧-೧೨. ಬಳಿಕ ರಾಕ್ಷಸಿಯು ಹಾಸಿಗೆಯಮೇಲಿದ್ದ ಆ ಸುಂದರಿಯಾದ ಕುಮಾರಿಯನ್ನು ಅವನಿಗೆ ತೋರಿಸಿ ದ್ವಿಜೋತ್ತಮನೇ! ಸಮಸ್ತಪಾಪಗಳೂ ಸಹ ಯಾವಕ್ಷೇತ್ರದ ಎಲ್ಲೆಯನ್ನು ದಾಟಲಾರವೋ ಅಂತಹ ಕಾಶೀಕ್ಷೇತ್ರದಿಂದ ಕುಂಕುಮತಿಲಕವನ್ನು ಧರಿಸಿರುವ, ಚಂದ್ರಬಿಂಬದಂತೆ ಹೊಳೆಯುತ್ತಿರುವ ತುಟಿಗಳುಳ್ಳ, ಸುವರ್ಣಪ್ರಭೆಯುಳ್ಳ ಈ ಕುಮಾರಿಯನ್ನು ನನ್ನ ಗಂಡನು ಮದುವೆ ಮಾಡಿಕೊಳ್ಳಬೇಕೆಂದು ಕರೆತಂದಿರುವನು.

ಹತ್ತುಹರಿದಾರಿ ವಿಸ್ತೀರ್ಣವುಳ್ಳ ತ್ರಿಪುರಾರಿಯಾದ ಈಶ್ವರನ ಆವಾಸಸ್ಥಾನವಾದ, ಪಾಪವನ್ನು ನಾಶಪಡಿಸುವಂತಹ, ಪುಣ್ಯಕರವಾದ ಆ ಕಾಶಿಯನ್ನು ಶಕ್ತಿಕ್ಷೇತ್ರವೆಂದು ಪ್ರಾಜ್ಞರು ಹೇಳುತ್ತಾರೆ.

೧೪. ಆ ಕಾಶಿಯಲ್ಲಿ ಮೃತರಾದ ಮನುಷ್ಯರು ಪುನಃ ಗರ್ಭವಾಸಕ್ಕೀಡಾಗದೆ ಮುಕ್ತಿಯನ್ನು ಪಡೆಯುವರು. ಆದಕಾರಣ ನೀನು ಈ ಸುಲೋಚನೆಯಾದ ಕುಮಾರಿಯನ್ನು ಇವಳ ತಂದೆಯಮನೆಗೆ ಕರೆದುಕೊಂಡು ಹೋಗಿಬಿಟ್ಟುಬಿಡು.

ಇಮಾನಿ ತವ ರತ್ನಾನಿ ಶಯನಾನ್ಯಾಸನಾನಿ ಚ |
ಮಯಾ ಸಹ ಸಮಸ್ತಾನಿ ವಿಕ್ರೀಡಸ್ವ ನಿಜೇಚ್ಛಯಾ || ೧೫ ||

ತ್ವದರ್ಥೇ ರಾಕ್ಷಸೋ ಘೋರೋ ಮಯಾ ಬ್ರಹ್ಮನ್ನಿಷೂದಿತಃ |
ಮುಗ್ಧಯಾ ತವ ರೂಪೇಣ ಪ್ರೇಷಿತೋ ಯಮಸಾದನಂ || ೧೬ ||

ತಸ್ಮಾನ್ಮಯ್ಯುಪರಿ ವಿಭೋ ಕೃತ್ವಾ ವಿಶ್ವಾಸಮಾತ್ಮನಾ |
ಭಜಸ್ವ ಮಾಂ ವಿಶಾಲಾಕ್ಷ ಭಕ್ತ್ಯಾ ವೈ ಕಾಮರೂಪಿಣೀ || ೧೭ ||

ಏತಚ್ಛ್ರುತ್ವಾ ತು ವಚನಂ ಭರ್ತಾ ಮೇ ಚಾರುಲೋಚನೇ |
ರಾಕ್ಷಸ್ಯಾಃ ಕಾಮತಪ್ತಾಯಾಃ ಕುಮಾರ್ಯಾಃ ಸನ್ನಿಧೌ ಶುಭೇ || ೧೮ ||

ಉವಾಚ ರಾಕ್ಷಸೀಂ ತಾಂ ತು ಸುಶಂಕೋ ಮಧುರಂ ವಚಃ |
ಸುಭಗೇ ನೀತಿಶಾಸ್ತ್ರೇಷು ವಿಶ್ವಸ್ತವ್ಯಾ ನ ಯೋಷಿತಃ || ೧೯ ||

---

೧೫. ಈ ರತ್ನ ಶಯನ, ಆಸನಗಳನ್ನು ನಿನಗೆ ಒಪ್ಪಿಸಿರುವೆನು. ಇವೆಲ್ಲವನ್ನೂ ನನ್ನೊಡನೆ ನಿನ್ನ ಇಚ್ಛಾನುಸಾರವಾಗಿ ಅನುಭವಿಸಬಹುದು.

೧೬. ಬ್ರಾಹ್ಮಣನೇ! ನಿನ್ನ ಸೌಂದರ್ಯವನ್ನು ನೋಡಿ ಮೋಹಿತಳಾದ ನಾನು ನಿನ್ನೊಡನೆ ಭೋಗಿಸಬೇಕೆಂದು ಘೋರರಾಕ್ಷಸನನ್ನು ನಾಶಪಡಿಸಿ ಅವನನ್ನು ಯಮಪಟ್ಟಣಕ್ಕೆ ಕಳುಹಿಸಿರುವೆನು.

೧೭. ಆದಕಾರಣ ವಿಸ್ತಾರವಾದ ನೇತ್ರಗಳುಳ್ಳ ಸ್ವಾಮಿಯೇ! ಕಾಮರೂಪಿಯಾದ ನಾನು ನಿನ್ನ ಭಕ್ತಳಾಗಿರುವೆನು. ನನ್ನ ಮೇಲೆ ಮನಃಪೂರ್ವಕವಾದ ವಿಶ್ವಾಸವನ್ನಿಟ್ಟು ನನ್ನನ್ನು ಭೋಗಿಸು.

೧೮-೧೯. ಮನೋಹರನೇತ್ರಳೇ! ಆ ಮಾತನ್ನು ಕೇಳಿ ನನ್ನ ಗಂಡನು ಕಾಮಾರ್ತಳಾದ ಆ ರಾಕ್ಷಸಿಯ ಮತ್ತು ಕುಮಾರಿಯ ಸನ್ನಿಧಿಯಲ್ಲಿ ರಾಕ್ಷಸಿಯನ್ನು ಕುರಿತು ಬಹುವಾಗಿ ಶಂಕೆಗೊಂಡವನಾಗಿ ಒಳ್ಳೆಯ ಮಾತುಗಳನ್ನಾಡಿದನು. ಸುಂದರಿಯೇ! ನೀತಿಶಾಸ್ತ್ರಗಳಲ್ಲಿ ಸ್ತ್ರೀಯರು ನಂಬಿಕೆಗರ್ಹರಲ್ಲವೆಂದು ಹೇಳಿದೆ.

ಕೌಮಾರಂ ಯಾ ಪತಿಂ ಹಂತಿ ಸಾ ಕಥಂ ಮಾಂ ನ ಹಿಂಸಸೇ |
ಮತ್ತೋ ರೂಪಾಧಿಕಂ ಮತ್ವಾ ಪರಂ ಪುರುಷಲಂಪಟಾ || ೨೦ ||

ಸೋಽಹಂ ವಿಶ್ವಾಸಭಾವೇನ ವಿಶ್ವಸ್ತಸ್ತೇ ವರಾನನೇ || ೨೧ ||

ಅದ್ಯ ವಾಥ ಪರೇದ್ಯುರ್ವಾ ಪಕ್ಷೇ ಮಾಸೇಽಥ ವತ್ಸರೇ |
ವ್ಯಾಪಾದಯ ಯಥೇಚ್ಛಂ ವಾ ತ್ವಾಂ ಪ್ರಪನ್ನೋಽಸ್ಮಿ ಭಾಮಿನಿ || ೨೨ ||

ಏವಮೇವ ತ್ವಯಾ ಕಾರ್ಯಂ ನಾದ್ಯ ಚೋಪಕೃತಂ ತವ |
ಆತ್ಮಾ ತೇ ಸರ್ವಥಾ ದೇಯಃ ಪ್ರತೀಕಾರಸ್ಯ ಹೇತವೇ || ೨೩ ||

ಮದರ್ಥೇ ನಿಹತೋ ಭರ್ತಾ ತ್ವಯಾ ನಿಃಶಂಕಯಾ ತತಃ |
ತತೋಽಹಂ ನೋತ್ತರಂ ವಚ್ಮಿ ಪರಂ ಕಿಂಚಿತ್ ಸುಲೋಚನೇ || ೨೪ ||

---

೨೦. ಯುವಕನಾದ ತನ್ನ ಗಂಡನನ್ನು ಕೊಂದ ಪುರುಷಲಂಪಟಳಾದ ಸ್ತ್ರೀಯು ನನಗಿಂತಲೂ ಹೆಚ್ಚು ಸುಂದರನಾದ ಇನ್ನೊಬ್ಬ ಪುರುಷನನ್ನು ನೋಡಿದರೆ ಆಗ ನನ್ನನ್ನು ಕೊಲ್ಲುವುದಿಲ್ಲವೆಂದು ಹೇಗೆ ನಂಬುವುದು?

೨೧. ವರಾನನೇ! ಆದರೂ ನಾನು ಪ್ರಾಮಾಣ್ಯಭಾವನೆಯಿಂದ ನಿನ್ನನ್ನು ನಂಬಿರುವೆನು-

೨೨. ಭಾಮಿನೀ! ನಿನಗೆ ಶರಣಾಗತನಾಗಿರುವೆನು ಇಂದು ಅಥವಾ ನಾಳೆ ಇಲ್ಲವೇ ಒಂದು ಪಕ್ಷ ಅಥವಾ ತಿಂಗಳು ಅಥವಾ ವರ್ಷವಾದ ಮೇಲೆ ನನ್ನನ್ನು ಸಂಹರಿಸಿದರೂ ಸರಿ.

೨೩. ಈಗ ನಿನ್ನಿಂದ ನಾನು ಉಪಕಾರವನ್ನು ಹೊಂದಲಿಲ್ಲವೇ? ಆದುದರಿಂದ ನೀನು ಈರೀತಿಯಾಗಿಯೇ ಮಾಡಬೇಕು. ನಿನ್ನ ಉಪಕಾರಕ್ಕೆ ಪ್ರತಿಯಾಗಿ ನನ್ನದೇಹವನ್ನು ನಿನಗೆ ಕೊಡಲೇಬೇಕು.

೨೪. ಸುಲೋಚನೇ! ನನಗೋಸ್ಕರವಾಗಿಯೇ ನಿನ್ನ ಗಂಡನನ್ನು ಶಂಕೆಯಿಲ್ಲದೆ ಸಂಹರಿಸಿರುವೆ. ಆದಕಾರಣ ನಿನಗೆ ಬೇರೆ ಯಾವ ಉತ್ತರವನ್ನೂ ಹೇಳಲಾರೆನು.

ತಚ್ಛ್ರುತ್ವಾ ವಚನಂ ತಸ್ಯ ಮದ್ಭರ್ತುಃ ಸಾಬ್ರವೀದಿದಂ ।
ವಿಶ್ವಸ್ತಹಿಂಸನಂ ಬ್ರಹ್ಮನ್ ಬ್ರಹ್ಮಹತ್ಯಾಸಮಂ ಭವೇತ್ ॥ ೨೫ ॥

ಯದ್ಯೇವಂ ರಾಕ್ಷಸೀಂ ಕ್ರೂರಾಂ ಮನ್ಯಸೇ ಪರಿಘಾತಿನೀಂ ।
ಪತಿಂ ತಥಾಪಿ ಗರ್ಹೇಯಂ ವಿಶ್ವಸ್ತಂ ಘಾತಯೇ ಕಥಂ ॥ ೨೬ ॥

ಸೂಕ್ಷ್ಮಾ ಹಿ ಧರ್ಮಸ್ಯ ಗತಿರ್ನ ಜ್ಞಾಯೇತ ಕಥಂಚನ ।
ಕೇನಾಪಿ ಕುತ್ರಚಿದ್ದೇವದೈತ್ಯರಾಕ್ಷಸಕಾದಿನಾ ।
ಕಿಂಚಿನ್ಮನುಷ್ಯಾಃ ಪಟವೋ ಧರ್ಮಸೂಕ್ಷ್ಮತ್ವಚಿಂತನೇ ॥ ೨೭ ॥

ಯೋಽನಿತ್ಯೇನ ಶರೀರೇಣ ನೈಷ್ಕರ್ಮ್ಯಂ ಸಾಧಯಂತ್ಯುತ ।
ಶ್ರೂಯತೇ ಚ ಪುರಾಣೇಷು ಕಿಂಚಿದತ್ರ ನಿಗದ್ಯತೇ ॥ ೨೮ ॥

---

೨೫. ನನ್ನ ಗಂಡನ ಆ ಮಾತನ್ನು ಕೇಳಿ ರಾಕ್ಷಸಿಯು ಈರೀತಿ ಹೇಳಿದಳು. ಬ್ರಾಹ್ಮಣನೇ! ನಂಬಿದವರನ್ನು ಕೊಲ್ಲುವುದು ಬ್ರಹ್ಮಹತ್ಯೆಗೆ ಸಮಾನವಾಗುವುದು.

೨೬. ಈರೀತಿಯಾಗಿ ಪತಿಘಾತಕಳಾದ ರಾಕ್ಷಸಿಯನ್ನು ಕ್ರೂರಳೆಂದು ನೀನು ತಿಳಿದರೂ ಪತಿಯನ್ನಾದರೂ ಕೊಂದೇನು ನಂಬಿದವನನ್ನು ಹೇಗೆ ಕೊಲ್ಲಲಿ?

೨೭. ಧರ್ಮಗತಿಯು ಬಹುಸೂಕ್ಷ್ಮವಾದುದು. ದೇವತೆಗಳು, ದೈತ್ಯರು, ರಾಕ್ಷಸರೇ ಮುಂತಾಗಿ ಯಾರೇ ಆಗಲಿ ಯಾವ ಸಂದರ್ಭದಲ್ಲಿಯೇ ಆಗಲಿ ಅದನ್ನು ಸರಿಯಾಗಿ ತಿಳಿಯಲಾರರು. ಮನುಷ್ಯರು ಸ್ವಲ್ಪಮಟ್ಟಿಗೆ ಧರ್ಮಸೂಕ್ಷ್ಮವನ್ನು ತಿಳಿಯಲು ಸಮರ್ಥರು.

೨೮. ಮನುಷ್ಯರು ಅನಿತ್ಯವಾದ ಶರೀರವನ್ನು ಹೊಂದಿ ತಕ್ಕ ಸಾಧನಾನುಷ್ಠಾನದಿಂದ ಮೋಕ್ಷವನ್ನು ಸಾಧಿಸುವರು. ಎಂಬುದಾಗಿ ಪುರಾಣಗಳಲ್ಲಿ ಉಕ್ತವಾಗಿದೆ. ಈ ವಿಷಯದಲ್ಲಿ ಸ್ವಲ್ಪ ವಿವರಣೆಯನ್ನು ಹೇಳುವೆನು.

ಧರ್ಮಸ್ಯೈವಾನುಕೂಲ್ಯೇನ ವಿಷ್ಣುನಾ ಪ್ರಭವಿಷ್ಣುನಾ ।
ದಶಾವತಾರಗ್ರಹಣೇ ದುಃಖಂ ಪ್ರಾಪ್ತಮನೇಕಧಾ ॥ ೨೯ ॥

ಕ್ವ ಸೀತಾರ್ಥಂ ಶ್ರೀನಿವಾಸೋ ರಾಮೋ ಲಕ್ಷ್ಮಣಸಂಯುತಃ ।
ವಿಲಾಪಂ ಕುರುತೇ ನಾಗಪಾಶಬಂಧಾದಿಕರ್ಮಸು ॥ ೩೦ ॥

ಕ್ವ ದೇವದೇವೋ ವಸುದೇವಸೂನು
ರ್ವಿಜ್ಞಾನರೂಪೋ ನಿಖಿಲಪ್ರಪಂಚೀ ।
ಹಾ ಕಷ್ಟಮಿತ್ಯಸ್ರದೃಗಾದಿಚೇಷ್ಟಃ
ಪಾರ್ಥೋಗ್ರಸೇನಾದಿಕಭೃತ್ಯಕೃತ್ಯಃ ॥ ೩೧ ॥

ಈಶಸ್ಯ ಕೃತ್ಯಂ ದ್ವಿಜ ದುರ್ವಿಭಾವ್ಯಂ
ಧರ್ಮಾನುಕೂಲ್ಯೇನ ಸಮಾಸ್ಥಿತಸ್ಯ ।
ವ್ಯಾಸಃ ಸ್ವಯಂ ವೇದವಿಭಾಗಕರ್ತಾ
ಪಾರಾಶರಿಸ್ತತ್ತ್ವದೃಗಿಜ್ಯಮೂರ್ತಿಃ ।
ಕನ್ಯಾತ್ವವಿಧ್ವಂಸಕವೀರ್ಯಜನ್ಮಾ
ಕಾನೀನಸಂಜ್ಞೋನುಜದಾರಗಾಮೀ ॥ ೩೨ ॥

---

೨೯. ಅತ್ಯಂತ ಸಮರ್ಥನಾದ ವಿಷ್ಣುವು ಧರ್ಮಕ್ಕನುಸಾರವಾಗಿ ದಶಾವತಾರಗಳನ್ನೆತ್ತುವಾಗ ಅನೇಕವಿಧ ದುಃಖಗಳು ಪ್ರಾಪ್ತವಾದವು.

೩೦. ಶ್ರೀನಿವಾಸನಾದ ರಾಮನು ಲಕ್ಷ್ಮಣಸಹಿತನಾಗಿ ಸೀತೆಗಾಗಿ ನಾಗಪಾಶಬಂಧಾದಿ ಕರ್ಮಗಳಲ್ಲಿ ಸಿಲುಕಿ ಅಳಲಿಲ್ಲವೇ ?

೩೧. ವಿಜ್ಞಾನರೂಪನೂ, ಸಕಲಪ್ರಪಂಚರಕ್ಷಕನೂ, ದೇವದೇವನೂ ಆದ ವಾಸುದೇವಪುತ್ರನೂ ಸಹ ಪಾರ್ಥ, ಉಗ್ರಸೇನ ಮುಂತಾದವರ ಸೇವಕನಾಗಿ ಅಯ್ಯೋ ! ಕಷ್ಟ ಎನ್ನುತ್ತಾ, ಕಣ್ಣೀರು ಸುರಿಸುತ್ತಾ ಕೆಲಸಮಾಡಲಿಲ್ಲವೇ ?

೩೨. ದ್ವಿಜನೇ ! ಧರ್ಮಾನುಕೂಲವಾಗಿರುವ ಈಶ್ವರನ ವ್ಯಾಪಾರವನ್ನು ವಿಭಾವನೆಮಾಡಲು ಶಕ್ಯವಲ್ಲ. ಸ್ವತಃ ವೇದವಿಭಾಗಮಾಡಿದ, ಪರಾಶರಪುತ್ರನು ತತ್ವಜ್ಞಾನಿಯು, ಪೂಜ್ಯಮೂರ್ತಿಯೂ ಆದ ವೇದವ್ಯಾಸನು ಕನ್ಯಾತ್ವನಾಶಕವಾದ ವೀರ್ಯದಿಂದ ಜನ್ಮವನ್ನು ತಾಳಿದವನಾಗಿ ಮದುವೆಯಾಗದಿರುವವಳಲ್ಲಿ ಹುಟ್ಟಿದುದರಿಂದ ಕಾನೀನನೆಂದೆನಿಸಿ ಅನುಜಪತ್ನೀಗಮನ ಮಾಡಿದವನಾದನು.

ಪರಿವೇತ್ತಾ ಚ ದಿಧಿಷೂಃ ಶಂತನುಃ ಸ್ವಃ ಪರಿತ್ಯೈತಿಃ |
ದಿಧಿಷೂತನಯಃ ಸಾಕ್ಷಾದ್ವಸುಃ ಸ್ತ್ರೀವಾದಮೃತ್ಯುಭಾಕ್ || ೩೩ ||

ಯೇ ಗೋಲಕಸುತಾಃ ಕುಂಡಾಃ ಪಾಂಡವಾಃ ಸಮಯೋನಿಗಾಃ |
ತೇಷಾಂ ಸಂಕೀರ್ತನಂ ಪುಣ್ಯಂ ಪವಿತ್ರಂ ಪಾಪನಾಶನಂ || ೩೪ ||

ಯಂ ಧ್ಯಾಯಂತಿ ಸ್ಮರಂತ್ಯದ್ಧಾ ಯೋಗಮೂರ್ತಿಃ ಸನಾತನಃ || ೩೫ ||

ವಿಷ್ಣುರ್ವೇಶ್ಯಾಸಮಾಸಕ್ತಃ ಪ್ರಹ್ಲಾದಾದ್ಯುಪದೇಶಕೃತ್ |
ಶ್ರೀನೃಸಿಂಹೋಸುರಧ್ವಂಸೀ ದೇವದೇವಾಧಿದೈವತಂ || ೩೬ ||

ಸಂಸಾರವಾಸನಾಧ್ವಂಸೀ ದೇವದೇವಾಧಿದೈವತಂ |
ಸಂಸಾರವಾಸನಾಧ್ವಂಸೀ ಸ್ವರ್ಣಾಕ್ಷಭವನಸ್ಥಿತಿಃ || ೩೭ ||

---

೩೩. ಗಂಗೆಯ ಪತಿಯಾದ ಶಂತನುವಾದರೋ ಅಣ್ಣನಿಗಿಂತಲೂ ಮುಂಚಿತವಾಗಿ ಮದುವೆಮಾಡಿಕೊಂಡವನು ಮತ್ತು ವಿವಾಹಿತ ಸ್ತ್ರೀಯನ್ನು ಪುನಃ ವಿವಾಹಮಾಡಿಕೊಂಡಿರುವನು. ಅಂತಹವನ ಮಗನಾದ ಸಾಕ್ಷಾದ್ವಸುವಿನ ಅವತಾರನಾದ ಭೀಷ್ಮನು ಸ್ತ್ರೀಕಲಹದಿಂದ ಸಾವಿಗೆ ತುತ್ತಾದನು.

೩೪. ಪಾಂಡವರು ವಿಧವೆಯಮಕ್ಕಳು, ಕುರುಡರು, ಒಬ್ಬ ಸ್ತ್ರೀಯನ್ನೇ ಭೋಗಿಸಿದವರು. ಇವರುಗಳ ನಾಮಸಂಕೀರ್ತನೆಯು ಪುಣ್ಯಕರವೂ, ಪವಿತ್ರವೂ, ಪಾಪನಾಶಕವೂ ಆಗಿದೆ.

೩೫-೩೬. ಜ್ಞಾನಿಗಳು ಧ್ಯಾನಿಸುವಂತಹ ಯೋಗಮೂರ್ತಿಯು, ಪುರಾತನನೂ ಆದ ವಿಷ್ಣುವು ವೇಶ್ಯಾಸಕ್ತನು. ಪ್ರಹ್ಲಾದಾದಿಗಳಿಗೆ ಉಪದೇಶಮಾಡಿದ ಶ್ರೀನರಸಿಂಹನು ಅಸುರರನ್ನು ನಾಶಪಡಿಸಿದ ದೇವಾಧಿದೇವತೆಯು.

೩೭. ಆ ನರಸಿಂಹನು ಸಂಸಾರಕ್ಕೆ ನಿಮಿತ್ತವಾದ ಅವಿದ್ಯೆಯನ್ನು ಹಾಳುಮಾಡುವವನು, ದೇವದೇವಾಧಿದೇವತೆಯು (ಸರ್ವೋತ್ತಮ) ಸಂಸಾರವಾಸನೆಯನ್ನು ನಾಶಮಾಡಿಸುವವನು ಮತ್ತು ಸುವರ್ಣಮಯವಾದ ಮಂದಿರದಲ್ಲಿರುವವನೂ ಆಗಿರುವನು.

ಜಾಮದಗ್ನ್ಯಃ ಸ್ವಯಂ ಸಿದ್ಧಸ್ತಪಸಾ ದಗ್ಧಕಿಲ್ಬಿಷಃ ।
ಈಶ್ವರಃ ಕ್ಷತ್ರಸಂಹಾರಭ್ರೂಣಹತ್ಯಾದಿಕರ್ಮಕೃತ್ ॥ ೩೮ ॥

ಸ್ವಯಮೇವರ್ಷಭೋ ಯೋಗೀ ಲೋಕಶಿಕ್ಷಾಪರೋ ದ್ವಿಜಃ ।
ಲೋಕಗ್ಲಾನಿಕರೋ ಜಾತಃ ಕುರ್ವನ್ಸ್ವರ್ಮಾನುರೋಧತಃ ॥ ೩೯ ॥

ನಾರದೋ ನಾರದೋ ಭೂಯೋ ಭೂಯೋ ಭೂಯೋಽಪಿ ನಾರದಃ ।
ನಾರಾಯಣಪರೋ ನಾರೋ ನಾರೋ ನರಹಿತೋಽಮರಃ ॥ ೪೦ ॥

ಗೌತಮೋ ಗೌತಮೋ ವಿಪ್ರ ಗೋಪಚೇಷ್ಟಾಪರಾಯಣಃ ।
ವೇದಬಾಹ್ಯಾರ್ಥಸಂಯುಕ್ತಶಾಸ್ತ್ರೀ ವೇದೋಪಕಾರಕೃತ್ ॥ ೪೧ ॥

ವಸಿಷ್ಠಶ್ಚೋರ್ವಶೀಜಾತೋಽಗಸ್ತ್ಯೋಽಪಿ ಸ್ವಯಮೀಶ್ವರೌ ।
ಯೇನ ಲೋಕೋಪಕಾರಾರ್ಥಂ ವಾಸಿಷ್ಠಂ ಶಾಸ್ತ್ರಮುತ್ತಮಂ ॥ ೪೨ ॥

---

೩೮. ಜಮದಗ್ನಿ ಪುತ್ರನಾದ ಪರಶುರಾಮನು ಸ್ವಯಂಸಿದ್ಧನು, ತಪಸ್ಸಿನಿಂದ ಪಾಪಗಳನ್ನೆಲ್ಲಾ ಕಳೆದುಕೊಂಡಿರುವವನು, ಮಹಾಸಮರ್ಥನು. ಇಂತಹವನು ಕ್ಷತ್ರಿಯಸಂಹಾರ, ಭ್ರೂಣಹತ್ಯೆ ಮುಂತಾದ ಕೃತ್ಯಗಳನ್ನು ಮಾಡಿರುವನು.

೩೯. ಋಷಭನು ಸ್ವತಃ ಯೋಗೀಶ್ವರನು, ಲೋಕಶಿಕ್ಷಕನೂ ಆದ ದ್ವಿಜನು. ಆದರೆ ಧರ್ಮಾನುಸಾರವಾಗಿ ಲೋಕಗ್ಲಾನಿಕರನಾದನು.

೪೦. ನಾರದನು ಬಾರಿಬಾರಿಗೂ ಭಗವಂತನ ಗುಣಗಾನಮಾಡುತ್ತಾ ನಾರಾಯಣಧ್ಯಾನಪರನಾದ ದೇವತೆಯು. ಆದರೆ ಅವನು ನರನಾಗಿ ಮನುಷ್ಯ ಹಿತಕಾರಿಯಾದನು.

೪೧. ಬ್ರಾಹ್ಮಣನೇ! ವೇದಕ್ಕೆ ಉಪಕಾರಮಾಡಿದ ಗೌತಮನು ಗೋರಕ್ಷಣನಿರತನು, ಅವೈದಿಕಾರ್ಥಗಳನ್ನು ನಿರೂಪಿಸುವ ಶಾಸ್ತ್ರಕರ್ತನು.

೪೨-೪೩. ಊರ್ವಶಿಯಲ್ಲಿ ಹುಟ್ಟಿದ ವಸಿಷ್ಠನು ಮತ್ತು ಅಗಸ್ತ್ಯನು ಇವರಿಬ್ಬರು ಸ್ವತಃ ಈಶ್ವರರು. ವಸಿಷ್ಠನು ಲೋಕೋಪಕಾರಾರ್ಥವಾಗಿ

ಕೃತಂ ಯಸ್ಮಿನ್ ಪುರಾಣಾನಿ ವೇದಾಃ ಸಾಮ್ಯತ್ವಮಾಗತಾಃ ।
ಯಃ ಸ್ವಯಂ ರಾಮಚಂದ್ರಸ್ಯ ಗುರುಃ ಸರ್ವೇಶ್ವರಸ್ಯ ಚ ॥ ೪೩ ॥

ಸ ಕಥಂ ಗಾಧಿನಾ ಶಪ್ತಸ್ತಿರ್ಯಗ್ಯೋನಿಮುಪಾಗಮತ್ ।
ಯೋ ದಮಿತ್ವಾ ವಿಭುರ್ವಿಂಧ್ಯಂ ವಾತಾಪಿಂ ಸಾಗರಂ ಸ್ಥಿತಃ ॥ ೪೪ ॥

ಸ ಕಥಂ ಮೃತಕಾದಾತಾ ದುಷ್ಕರಂ ಸಮುಪಾಸತೇ ।
ಯೋ ವಿಧಿಃ ಕರ್ಮಸಾಕ್ಷ್ಯಾದಿವಂದ್ಯೋ ಮಾನ್ಯಃ ಪಿತಾಮಹಃ ॥ ೪೫ ॥

ಮೋಹಿನೀಮೋಹಿತೋ ದೇಹಮುತ್ಸಸರ್ಜ ಕಥಂ ಚ ನ ।
ಯಃ ಶಿವಃ ಶಿವದಃ ಸಾಕ್ಷಾತ್ ಪ್ರಕೃತೀಶಃ ಪರಾತ್ಪರಃ ॥ ೪೬ ॥

ಸ ಕಥಂ ದೇವಪತ್ನೀಗಃ ಶ್ಮಶಾನಾಶುಭಚೇಷ್ಟಿತಃ ।
ತಸ್ಮಾದ್ದ್ವಿಜ ಸದಾಚಾರೋ ನಿಷೇವ್ಯೋ ವಿಧಿನಾ ವಿಧಿಃ ॥ ೪೭ ॥

---

ಪುರಾಣ ಮತ್ತು ವೇದಗಳಿಗೆ ಸಾಮ್ಯವನ್ನು ವ್ಯಕ್ತಪಡಿಸುವಂತಹ ಉತ್ತಮ ಶಾಸ್ತ್ರವನ್ನು ಮಾಡಿದನು. ಅವನೇ ಸರ್ವೇಶ್ವರನಾದ ರಾಮಚಂದ್ರನಿಗೆ ಗುರುವು.

೪೪-೪೭. ಅಂತಹವನು ವಿಶ್ವಾಮಿತ್ರನಿಂದ ಶಪಿಸಲ್ಪಟ್ಟು ಹೇಗೆ ತಿರ್ಯಗ್ಜಂತುವಾದನು? ಯಾವ ಅಗಸ್ತ್ಯನು ಸಮರ್ಥನಾಗಿ ಬಚ್ಚಿಟ್ಟುಕೊಂಡಿದ್ದ ವಾತಾಪಿಯನ್ನು ಸಂಹರಿಸಿ ಬೆಳೆಯುತ್ತಿದ್ದ ವಿಂಧ್ಯಪರ್ವತವನ್ನು ತಡೆದು ಸಮುದ್ರವನ್ನು ಏಕಾಪೋಶನೆ ಮಾಡಿದನೋ? ಅಂತಹವನು-ಹೇಗೆ ಮೃತಕಾದಾತ್ಯವಾಗಿ ದುಷ್ಕೃತ್ಯವನ್ನು ಮಾಡಿದನು?

ಸೂರ್ಯಾದಿದೇವವಂದ್ಯನು, ಪೂಜ್ಯನೂ, ಪಿತಾಮಹನೂ ಆದ ಬ್ರಹ್ಮನು ಮೋಹಿನಿಯಿಂದ ಮೋಹಿತನಾದರೂ ದೇಹವನ್ನು ಬಿಡದೇ ಇರುವುದು ಹೇಗೆ?

ಯಾವ ಶಿವನು ಮಂಗಳಪ್ರದನು, ಸಾಕ್ಷಾತ್ಪ್ರಕೃತೀಶನು, ಪರಾತ್ಪರನೂ ಆಗಿರುವನೋ ಅಂತಹವನು ಹೇಗೆ ದೇವಪತ್ನೀಗಾಮಿಯಾಗಿ ಸ್ಮಶಾನದಲ್ಲಿ ಅಮಂಗಳ ವ್ಯಾಪಾರ ಮಾಡಿದನು? ಆದಕಾರಣ ದ್ವಿಜನೇ! ವಿಧಾನೋಕ್ತ ಪ್ರಕಾರ ಸದಾಚಾರವನ್ನಾಚರಿಸುವುದೇ ವಿಹಿತ ಮಾರ್ಗವು.

ತಮಹಂ ಭಾವನಾಯುಕ್ತೋ ನೋಪಾಂ ಹೇ ಘೋ ವಿದಾಂ ವರಃ ।
ಸ ಶಾಂತಿಮಾಪ್ನುಯಾದಗ್ನ್ಯೈರ ಧರ್ಮ್ಯಾಮುಭಯಸಂಸ್ಥಿತಾಂ ॥ ೪೮ ॥

ಅಪವರ್ಗ್ಯಃ ಸ್ಮೃತೋ ಧರ್ಮೋ ಧನಂ ಧರ್ಮೈಕಸಾಧನಂ ।
ತನ್ಮಯಾ ಸಾಧಿತೋ ಧರ್ಮಃ ಸರ್ವೋತ್ತಮಧನಾತ್ಮನಾ ॥ ೪೯ ॥

ಶೃಣು ವಿಪ್ರಾತ್ರ ಧರ್ಮಸ್ಯ ಗತಿಂ ಸೂಕ್ಷ್ಮಾಂ ವದಾಮ್ಯಹಂ ।
ಯದಾ ಸಮಾಗತೋ ಭರ್ತಾ ಮಮ ಕನ್ಯಾಂ ಸಮಾಹರನ್ ॥ ೫೦ ॥

ತ್ವಂ ಪಶ್ಯ ನಿಜಕರ್ಮಸ್ಥಃ ಕೋಽಪಿ ದೋಷೋ ನ ತಸ್ಯ ವೈ ।
ಮಯಾ ಪೃಷ್ಟಃ ಕಥಂ ನಾಥ ಕನ್ಯೇಯಂ ಸಮುಪಾಹೃತಾ ॥ ೫೧ ॥

ತದಾ ತೇನ ಮೃಷಾ ವಾಕ್ಯಮುಕ್ತಂ ಮದ್ಭಕ್ಷಣಾರ್ಥಕಂ ।
ತನ್ನಿಶಮ್ಯಾಹಮದ್ವದ್ಧಾ ಸ್ವಯಂ ಚಾಸ್ಥಾನಿದರ್ಶನಾತ್ ॥ ೫೨ ॥

---

೪೮. ವಿವೇಚನೆಶೀಲೆಯಾದ ನಾನು ಆ ವಿಧಿಯನ್ನು ಬಿಟ್ಟಿಲ್ಲ. ಪಾಪಿಷ್ಠನಾದ ರಾಕ್ಷಸನು ಅಗ್ನಿಸಾಕ್ಷಿಕವಾದ ಉಭಯಸಂಸ್ಥಿತರೂಪವಾದ ಶಾಂತಿಯನ್ನು ಹೊಂದಲಿ.

೪೯. ಧರ್ಮವು ಮೋಕ್ಷಸಾಧನವು, ಧನವು ಧರ್ಮಕ್ಕೆ ಸಾಧನ ಎಂದು ಉಕ್ತವಾಗಿದೆ. ಆದಕಾರಣ ಸರ್ವೋತ್ತಮಧನರೂಪವಾದ ಧರ್ಮವನ್ನು ನಾನು ಸಾಧಿಸಿರುವೆನು.

೫೦-೫೨. ಬ್ರಾಹ್ಮಣನೇ! ಕೇಳು; ಈ ವಿಷಯದಲ್ಲಿ ಸೂಕ್ಷ್ಮವಾದ ಧರ್ಮಗತಿಯನ್ನು ಹೇಳುವೆನು. ನನ್ನ ಪತಿಗೆ ಅವನ ಕರ್ತವ್ಯದಲ್ಲಿ ಯಾವ ದೋಷವೂ ಇರಲಿಲ್ಲ. ನೀನು ನೋಡು, ಅವನು ಕನ್ಯೆಯನ್ನಪಹರಿಸಿ ತಂದಾಗ ನಾಥನೇ! ಈ ಕನ್ಯೆಯನ್ನು ಏತಕ್ಕಾಗಿ ತಂದಿರುವೆ? ಎಂದು ನಾನು ಅವನನ್ನು ಕೇಳಿದೆನು. ಆಗ ಅವನು ನೀನು ತಿನ್ನುವುದಕ್ಕಾಗಿ ಈ ಕನ್ಯೆಯನ್ನು ಕರೆತಂದಿರುವೆನೆಂದು ಸುಳ್ಳುಹೇಳಿದನು. ಅದನ್ನು ಕೇಳಿ ನಾನು ಆಶೆಯಿಂದ ನಂಬಿದೆನು.

ಯೇ ವದಂತಿ ಚ ದಾಂಪತ್ಯೇ ಭಾರ್ಯಾ ಮೋಕ್ಷವಿರೋಧಿನೀ ।
ನ ತೇ ತತ್ವದೃಶೋ ಜ್ಞೇಯಾ ನ ಸಾ ಭಾರ್ಯಾ ವಿರೋಧಿನೀ ॥ ೫೩ ॥

ಭಾರ್ಯಾ ಸಮುದ್ಧರೇತ್ಪಾಪಾತ್ ಪತಂತಂ ನಿರಯೇ ಪತಿಂ ।
ಸಾ ಭಾರ್ಯಾನ್ಯಾ ಕರ್ಮವಲ್ಲೀರೂಪಾ ಸಂಸಾರದಾಯಿನೀ ॥ ೫೪ ॥

ಪಾಪಂ ಕಿಮತ್ರ ತನ್ಮತ್ತಃ ಸಮ್ಯಕ್ಛೃಣು ಸ್ವಯಂವರ ।
ಅಲೀಕಂ ನೈವ ವಕ್ತವ್ಯಂ ಪ್ರಾಣೈಃ ಕಂಠಗತೈರಪಿ ॥ ೫೫ ॥

ಸತ್ಯಮೇವಾಚರೇತ್ ಸತ್ಯೇ ಸಾಕ್ಷಾದ್ಧರ್ಮೇ ವ್ಯವಸ್ಥಿತಃ ।
ಸತ್ಯೇ ಸಮಾಸ್ಥಿತೋ ಬ್ರಹ್ಮಾ ಸತ್ಯೇ ಸಂತಃ ಸಮಾಸ್ಥಿತಾಃ ॥ ೫೬ ॥

ಸತ್ಯೇ ಸಮಾಸ್ಥಿತಂ ವಿಶ್ವಂ ಸರ್ವದಾ ಸಚರಾಚರಂ ।
ಸತ್ಯಂ ಬ್ರೂಯಾದಿತಿ ವಚೋ ವೇದಾಂತೇಷು ಪ್ರಗೀಯತೇ ॥ ೫೭ ॥

---

೫೩. ದಾಂಪತ್ಯಜೀವನದಲ್ಲಿ ಪತ್ನಿಯು ಮೋಕ್ಷವಿರೋಧಿನಿಯೆಂದು ಹೇಳುವವರು ತತ್ವಜ್ಞಾನಿಗಳಲ್ಲ. ಭಾರ್ಯೆಯು ವಿರೋಧಿನಿಯಲ್ಲವೆಂದು ತಿಳಿಯಬೇಕು.

೫೪. ಹೆಂಡತಿಯು ನರಕದಲ್ಲಿ ಬೀಳುತ್ತಿರುವ ಗಂಡನನ್ನು ಪಾಪದಿಂದ ಉದ್ಧರಿಸುವಳು. ಕರ್ಮದ ಬಳ್ಳಿಯಂತೆ ಸಂಸಾರದಾಯಕಳಾಗುವ ಭಾರ್ಯೆಯು ಬೇರೆ.

೫೫. ಸ್ವಯಂವರನೇ! ಇಲ್ಲಿ ಪಾಪಕರವಾವುದೆಂಬುದನ್ನು ಹೇಳುವೆನು; ಕೇಳು. ಪ್ರಾಣಗಳು ಕಂಠಗತವಾಗಿ ಸಾಯುವ ಸಂದರ್ಭದಲ್ಲಿಯೂ ಸಹ ಸುಳ್ಳನ್ನು ಹೇಳಬಾರದು.

೫೬. ಸತ್ಯಧರ್ಮದಲ್ಲಿಯೇ ವ್ಯವಸ್ಥಿತನಾಗಿ ಸಾಕ್ಷಾತ್ತಾಗಿ ಸತ್ಯವನ್ನೇ ಆಚರಿಸಬೇಕು ಬ್ರಹ್ಮನು ಸತ್ಯನಿಷ್ಠನಾಗಿರುವನು, ಸಜ್ಜನರು ಸತ್ಯದಲ್ಲಿಯೇ ನಿರತರಾಗಿರುವರು.

೫೭. ಚರಾಚರಾತ್ಮಕವಾದ ಪ್ರಪಂಚವು ಯಾವಾಗಲೂ ಸತ್ಯದಲ್ಲಿಯೇ ನಿಂತಿರುವುದು. "ಸತ್ಯಂ ಬ್ರೂಯಾತ್" "ಸತ್ಯವನ್ನೇ ಹೇಳಬೇಕು" ಎಂಬುದಾಗಿ ಉಪನಿಷತ್ತುಗಳಲ್ಲಿ ಹೇಳಿದೆ.

ಸತ್ಯಂ ಬ್ರಹ್ಮ ಸ್ವರೂಪಂ ಹಿ ತತ್ಸತ್ಯಮಭಿದೀಮಹಿ ।
ಸತ್ಯಂ ತು ಸರ್ವದಾ ವಿಪ್ರ ಮಂಗಲಂ ಮಂಗಲಪ್ರದಂ ॥ ೫೮ ॥

ಅಸತ್ಯಮಾತ್ಮಕ್ಷಯದಂ ಸದ್ಯಃ ಪ್ರತ್ಯಯಕಾರಕಂ ।
ಸ್ತ್ರೀಷು ಸತ್ಯಂ ನ ವಕ್ತವ್ಯಂ ತತ್ರಾಪಿ ಶೃಣು ಕಾರಣಂ ॥ ೫೯ ॥

ನಿಧಿಂ ಸ್ತ್ರಿಯೈ ನ ಕಥಯೇದಿತ್ಯಾದೌ ದೋಷವಾರಣಂ ।
ಉಕ್ತಂ ತದ್ಧರ್ಮಜನಕಂ ಧರ್ಮಸೂಕ್ಷ್ಮತ್ವದರ್ಶಕಂ ॥ ೬೦ ॥

ಕುಶಾ ದ್ವಿಜಾ ಜಲಂ ವಹ್ನಿರ್ವೇದಾ ಭೂಕಾಲದಿಕ್ಸುರಾಃ ।
ಸಾಕ್ಷ್ಯೇ ಯತ್ರ ವಿವಾಹೇಷು ದಾಂಪತ್ಯಂ ತದುದೀರಿತಂ ॥ ೬೧ ॥

---

೫೮. ಸತ್ಯವು ಬ್ರಹ್ಮಸ್ವರೂಪವು, ಸತ್ಯನಾದ ಆ ಬ್ರಹ್ಮನನ್ನೇ ಧ್ಯಾನಿಸುವೆವು. ಬ್ರಾಹ್ಮಣನೇ ! ಯಾವಾಗಲೂ ಸತ್ಯವು ಶುಭ ಮತ್ತು ಶ್ರೇಯಸ್ಕರವೂ ಆಗಿದೆ.

೫೯. ಅಸತ್ಯವು ಆತ್ಮಹಾನಿಕರವು, ತತ್ಕಾಲದಲ್ಲಿ ನಂಬಿಕೆಯನ್ನು ಹುಟ್ಟಿಸುವುದು ಆದರೆ ಸ್ತ್ರೀಯರಲ್ಲಿ ನಿಜ ಹೇಳಬಾರದೆಂಬುದಕ್ಕೆ ಕಾರಣವನ್ನು ಹೇಳುವೆನು ಕೇಳು.

೬೦. ಹೆಂಗಸಿಗೆ ನಿಧಿಯನ್ನು ಹೇಳಬಾರದು ಮುಂತಾದ ನಿಷೇಧವಿರುವುದರಿಂದ ಅಂತಹ ವಿಷಯಗಳಲ್ಲಿ ಸುಳ್ಳು ಹೇಳಿದರೆ ದೋಷ ಬರುವುದಿಲ್ಲ. ಧರ್ಮನಿಮಿತ್ತ ಮತ್ತು ಅದರ ಸೂಕ್ಷ್ಮತ್ವವನ್ನು ತಿಳಿಸುವ ಉಪಾಯಗಳು ಉಕ್ತವಾದುವು.

೬೧. ದರ್ಭೆ, ಬ್ರಾಹ್ಮಣ, ನೀರು, ಅಗ್ನಿ, ವೇದ, ಭೂಮಿ, ವಿಹಿತಕಾಲ ದಿಕ್ಕು, ದೇವತೆ ಇವರುಗಳ ಸಾಕ್ಷಿಯಾಗಿ ಮಾಡಿಕೊಂಡ ವಿವಾಹವೇ ದಾಂಪತ್ಯ ದಾಯಕವೆಂದು ಉಕ್ತವಾಗಿದೆ.

೬೨. ವಿವಾಹದಲ್ಲಿ ಸ್ವೀಕಾರವೆಂಬ ಕರ್ಮವು ವಿಹಿತವಾಗಿದೆ. ದ್ವಿಜ ಸಂಸ್ಕಾರ ಎಂದರೆ ವಿವಾಹದಲ್ಲಿ ಗುರುಶಿಷ್ಯರ ಸ್ಥಾನದಲ್ಲಿ ಸ್ತ್ರೀ ಪುರುಷರನ್ನು ನಿರ್ದೇಶಿಸಿರುವರು.

ಸಮಂಗೀಕರಣಂ ಕರ್ಮ ವಿವಾಹೇ ತು ವಿಧೀಯತೇ ।
ಸ್ತ್ರೀಪುಂಸೌ ದ್ವಿಜಸಂಸ್ಕಾರೇ ನಿರ್ದಿಷ್ಟಂ ಗುರುಶಿಷ್ಯಯೋಃ ॥ ೬೨ ॥

ತಸ್ಮಾತ್ಪರಸ್ಪರಂ ಜ್ಞೇಯೌ ಗುರುಶಿಷ್ಯೌ ಸತೀವರೌ ।
ನಾನಯೋರಣುಮಾತ್ರೇಽಪಿ ಭೇದೋ ಬೋಧ್ಯೋ ವಿಜಾನತಾ ॥ ೬೩ ॥

ತತ್ರತ್ಕರ್ಮಾನುರೂಪತ್ವಾತ್ಪ್ರಾಧಾನ್ಯಂ ಸ್ತ್ರೀನಿಯೋಜ್ಯಯೋಃ ।
ಕ್ವಚಿತ್ ಪತ್ಯಪದೇಷೋಽಕ್ಷ ದೈವಮೇವಾತ್ರ ಕಾರಣಂ ॥ ೬೪ ॥

ದೈವಾಧೀನಂ ಜಗತ್ಸರ್ವಂ ಸದೇವಾಸುರಮಾನುಷಂ ।
ದೈವಂ ತತ್ಪೂರ್ವಜನ್ಮಾನಿ ಸಂಚಿತಾಃ ಕರ್ಮವಾಸನಾಃ ॥ ೬೫ ॥

ಪ್ರಾಪ್ತಾ ಪ್ರಾಪ್ತನಿಷೇವಿನ್ಯೋ ವರ್ತಂತೇ ಕಾಮುಕಾರಕಂ ।
ಶುಭಂ ವಾಪ್ಯಶುಭಂ ವಿಪ್ರ ತಂ ತು ಶಾಂತಂ ವಿದುರ್ಬುಧಾಃ ॥ ೬೬ ॥

---

೬೩. ಆದಕಾರಣ ಗಂಡಹೆಂಡಂದಿರು ಅನ್ಯೋನ್ಯವಾಗಿ ಗುರುಶಿಷ್ಯರೆಂದು ತಿಳಿಯಬೇಕು. ಜ್ಞಾನಿಯಾದವನು ಇವರಿಬ್ಬರಿಗೂ ಸ್ವಲ್ಪವೂ ವ್ಯತ್ಯಾಸವನ್ನು ತಿಳಿಯಬಾರದು.

೬೪. ಪತಿಪತ್ನಿಯರು ಮಾಡುವ ವಿಹಿತಕರ್ಮಗಳಿಗನುಸಾರವಾಗಿ ಆವರವರನ್ನು ಪ್ರಧಾನರೆಂದು ತಿಳಿಯಬೇಕು. ಕೆಲವು ಕರ್ಮಗಳಲ್ಲಿ ಪತ್ಯಾದಿಗಳಿಗವಕಾಶವಿಲ್ಲದಿರುವುದಕ್ಕೆ ದೈವವೇ ಕಾರಣವು.

೬೫-೬೬. ದೇವತೆಗಳು, ಅಸುರರು ಮತ್ತು ಮನುಷ್ಯರಿಂದ ಸಹಿತವಾದ ಸಕಲಜಗತ್ತೂ ದೈವಾಧೀನವು. ಪ್ರಾಪ್ತಾಪ್ರಾಪ್ತಫಲಕಗಳಾದ ಸಂಚಿತಕರ್ಮವಾಸನೆಗಳು, ಪೂರ್ವಜನ್ಮಗಳೂ ಸಹ ದೈವಾಧೀನವಾಗಿಯೇ ಇವೆ.

ಬ್ರಾಹ್ಮಣನೇ! ಒಳ್ಳೆಯದಾಗಲಿ ಅಥವಾ ಕೆಟ್ಟದಾಗಲಿ ಸ್ವೇಚ್ಛಾನುಸಾರವಾಗಿ ಕರ್ಮಮಾಡುವವನನ್ನು ಜ್ಞಾನಿಗಳು ಮೃತನೆಂದು ತಿಳಿದಿರುವರು.

ಶಾಂತಃ ಸತ್ಯಸಮಾಚಾರೋ ಜಂತುರ್ಲೋಕಪ್ರತಾರಕಃ ।
ಏವಮಾದಿ ವಿದಿತ್ವಾ ತು ನಾಯಂ ಭರ್ತಾ ನಿಪಾತಿತಃ || ೬೭ ||

ಕನ್ಯಾತ್ವಧ್ವಂಸಕಾತ್ ಪಾಪಾತ್ಪ್ರತೋ ಮುಮುಪಕಾರತಃ ।
ಗತಿಂ ಪ್ರಯಾತಃ ಕೃತಿನಾಂ ತ್ವದ್ಧಸ್ತೇನ ನಿಪಾತಿತಃ || ೬೮ ||

ಮಯಾತೋಪಕೃತಂ ಪತ್ಯೇ ಜಾನಂತ್ಯಾ ಧರ್ಮ ಸೂಕ್ಷ್ಮತಾಂ ।
ತ್ವತ್ಪ್ರಾಣರಕ್ಷಣೇ ಧರ್ಮೋ ಮಮಾಭೂದ್ದ್ವಿಜಸತ್ತಮ || ೬೯ ||

ತೇನ ಧರ್ಮೇಣ ಕಿಂ ಪ್ರಾಪ್ತಮಿತಿ ಸಮ್ಯಙ್ನಿಬೋಧ ಮೇ ।
ರಾಕ್ಷಸೀಯೋನಿಮಾಪನ್ನಾ ರಾಕ್ಷಸಸ್ಯ ಪ್ರಿಯಾ ಹ್ಯಹಂ || ೭೦ ||

---

೬೭. ಹೀಗೆ ತನ್ನ ಕರ್ಮದಿಂದಲೇ ಶಾಂತನಾದವನು, ಸುಳ್ಳುಗಾರನೂ ಆದ ಪ್ರಾಣಿಯು ಲೋಕವಂಚಕನು. ಇತ್ಯಾದಿ ಧರ್ಮಸೂಕ್ಷ್ಮವನ್ನು ತಿಳಿದಿರುವುದರಿಂದ ನಾನು ಪತಿಯನ್ನು ಕೊಲ್ಲಿಸಲಿಲ್ಲ.

೬೮. ನಾನು ಅವನನ್ನು ಕೊಲ್ಲಿಸಿದುದು ಉಪಕಾರವೇ ಸರಿ. ಅವನು ಬದುಕಿದ್ದರೆ ಈ ರಾಜಕನ್ಯೆಯ ಸಂಭೋಗಮಾಡಿ ಕನ್ಯಾತ್ವವನ್ನು ಹಾಳುಮಾಡಿದ ಪಾಪಕ್ಕೆ ಗುರಿಯಾಗುತ್ತಿದ್ದನು. ನನ್ನ ಸಾಹಸದಿಂದ ಅದು ತಪ್ಪಿ ಅವನು ಪರಿಶುದ್ಧನಾದನು. ಆದುದರಿಂದ ನಾನು ಅವನಿಗೆ ಉಪಕಾರವನ್ನೇ ಮಾಡಿರುವೆನು. ನಿನ್ನ ಕೈಯಿಂದ ಕೊಲ್ಲಿಸಲ್ಪಟ್ಟ ಅವನು ಜ್ಞಾನಿಗಳಿಗಾಗುವ ಗತಿಯನ್ನು ಹೊಂದಿರುವನು.

೬೯. ಈರೀತಿಯಾಗಿ ಧರ್ಮಸೂಕ್ಷ್ಮವನ್ನು ತಿಳಿದಿರುವ ನಾನು ಪತಿಗೆ ಉಪಕಾರವನ್ನೇ ಮಾಡಿರುವೆನು. ದ್ವಿಜಶ್ರೇಷ್ಠನೇ! ನಿನ್ನ ಪ್ರಾಣಸಂರಕ್ಷಣೆಯನ್ನು ಮಾಡಿದುದರಿಂದ ನನಗೆ ಪುಣ್ಯವೂ ಬಂದಿತು.

೭೦-೭೧. ಆ ಪುಣ್ಯದಿಂದ ನನಗಾದ ಫಲವನ್ನು ಹೇಳುವೆನು ಕೇಳು. ರಾಕ್ಷಸಜಾತಿಯಲ್ಲಿ ಹುಟ್ಟಿದ ರಾಕ್ಷಸನ ಪತ್ನಿಯಾದ ಕಾಮರೂಪಿಯಾದ ನಾನು

ಕಾಮರೂಪಾ ಬ್ರಾಹ್ಮಣೀ ತು ಸಂಜಾತಾ ಧರ್ಮಕಾರಣಾತ್ |
ಧರ್ಮಕಾಮದುಘಾ ಧೇನುಃ ಸಂತೋಷೋ ನಂದನಂ ವನಂ || ೨೧ ||

ವಿದ್ಯಾ ಮೋಕ್ಷಕರೀ ಪ್ರೋಕ್ತಾ ತೃಷ್ಣಾ ವೈತರಣೀ ನದೀ |
ವೈತರಣ್ಯಾಂ ಪತನ್ ಭರ್ತಾ ಮಯೋದ್ಧೃತ ಇಹಾಭವತ್ || ೨೨ ||

ಅಸ್ಯಾಶ್ಚೋಪಕೃತಂ ವಿಪ್ರ ವರ್ಣೋತ್ತಮನಿವೇಶನಾತ್ |
ಇಯಂ ತ್ವತ್ಸಂಗಿನೀ ಭಾರ್ಯಾ ಭವಿಷ್ಯತಿ ಪಿತುರ್ಗೃಹೇ || ೨೩ ||

ಅಹಂ ತವಾಸ್ಯಾಶ್ಚ ಸದಾ ರಕ್ಷಿಕಾ ಧರ್ಮಬೋಧಿನೀ |
ಮತ್ಸಂಗಮಾತ್ ಪೂರ್ವಮೇವ ಯಾ ಭಾರ್ಯಾ ವಿಪ್ರ ತೇಽಭವತ್ ||

ಇಯಂ ತ್ವತ್ಸಂಗಿನೀ ಭಾರ್ಯಾ ಭವಿಷ್ಯತಿ ವರಾನನಾ |
ಸಾಪಿ ತಿರ್ಯಗ್ಗತಿಂ ಪ್ರಾಪ್ಯ ಮುಚ್ಯತೇ ಮದನುಗ್ರಹಾತ್ || ೨೫ ||

---

ಈ ಧರ್ಮಮಾಡಿದ್ದರಿಂದ ಬ್ರಾಹ್ಮಣಸ್ತ್ರೀಯಾದೆನು. ಧರ್ಮವೆಂಬ ಇಷ್ಟವನ್ನು ಕೊಡುವುದೇ ಧೇನುವು. ನಂದನವನವೇ ಸಂತೋಷಪ್ರದವು.

೨೨. ಮೋಕ್ಷಕೊಡುವುದೇ ವಿದ್ಯೆಯು, ವೈತರಣೀ ನದಿಯಲ್ಲಿ ಬೀಳಿಸುವುದೇ ತೃಷ್ಣೆಯು. ಅಂತಹ ವೈತರಣಿಯಲ್ಲಿ ಬೀಳುತ್ತಿದ್ದ ನನ್ನ ಪತಿಯನ್ನು ನಾನು ಉದ್ಧರಿಸಿರುವೆನು.

೨೩. ಬ್ರಾಹ್ಮಣನೇ! ಈ ಕನ್ಯೆಗೆ ಉತ್ತಮವರ್ಣದ ಪತಿಯು ಲಭಿಸುವುದಕ್ಕವಕಾಶವಾದುದರಿಂದ ಇವಳಿಗೂ ಉಪಕಾರವಾಯಿತು. ಇವಳು ತಂದೆಯ ಮನೆಗೆ ಹೋದಮೇಲೆ ಅಲ್ಲಿ ನಿನಗೆ ವಿಧಿವತ್ತಾಗಿ ಪತ್ನಿಯಾಗುವಳು.

೨೪–೨೫. ನಾನು ನಿನಗೂ ಈ ಕನ್ಯೆಗೂ ಸಹ ಯಾವಾಗಲೂ ಧರ್ಮಬೋಧಕಳಾಗಿ ರಕ್ಷಕಳಾಗಿರುವೆನು. ಬ್ರಾಹ್ಮಣನೇ! ನನ್ನ ಸಂಗಮಕ್ಕಿಂತ ಮುಂಚೆ ನಿನಗೆ ಯಾವಳು ಹೆಂಡತಿಯಾಗಿದ್ದಳೋ ಅವಳೂ ಸಹ ತಿರ್ಯಗ್ಜನ್ಮವನ್ನು ಹೊಂದಿ ನನ್ನ ಅನುಗ್ರಹದಿಂದ ಮುಕ್ತಳಾಗುವಳು. ಈ ವರಾನನೆಯು ನಿನ್ನ ಸಂಗವನ್ನು ಪಡೆದು ಭಾರ್ಯೆಯಾಗುವಳು.

**ಅಹಂ ಪುರಾಭವೇಽಭೂವಂ ರಮಣೀ ಲೋಕಸುಂದರೀ |**
**ಕಂದಲೀತಿ ಚ ವಿಖ್ಯಾತಾ ತನಯೌರ್ವಮುನೇರ್ದ್ವಿಜ || ೭೬ ||**

**ತಪಃಪ್ರಭಾವಾತ್ಸಂಜಾತಾ ಯಮಲಾ ಮಿಥುನಂಧರಾ |**
**ಪುರುಷೋ ಮೇ ಸಹಭವೋ ದಮಿತೋ ಧರ್ಮಕಾರಣಾತ್ || ೭೭ ||**

**ತೇನೈವೌರ್ವೇಣ ಶಿಷ್ಯಾಹಂ ದತ್ತಾ ದುರ್ವಾಸಸೇಭವಂ |**
**ತಂ ಪತಿಂ ಪ್ರಾಪ್ಯ ವಿಪ್ರೇಂದ್ರ ಪ್ರಾಕ್ಕರ್ಮವಶಗಾ ಹ್ಯಹಂ || ೭೮ ||**

**ಕಲಹಾಭಿರತಾ ಪತ್ಯಾ ಶಪ್ತಾ ಭಸ್ಮತ್ವಮಾಗತಾ |**
**ಕಿಂಚಿತ್ ಪಾಪಾವಶೇಷೇಣ ರಾಕ್ಷಸೀಂ ಯೋನಿಮಾಗತಾ || ೭೯ ||**

**ತತ್ರ ಯೋನೌ ಮಯಾ ಲಬ್ಧೋ ಭರ್ತಾಯಂ ರಾಕ್ಷಸಾಧಿಪಃ |**
**ಗೋಮಿಲೋ ನಾಮ ತೇಜಸ್ವೀ ಸ ತ್ವಯಾ ವಿನಿಪಾತಿತಃ || ೮೦ ||**

---

೭೬. ದ್ವಿಜನೇ! ನಾನು ಪೂರ್ವಜನ್ಮದಲ್ಲಿ ಲೋಕಸುಂದರಿಯು, ಔರ್ವಮುನಿಯಪುತ್ರಿಯು, ಕಂದಳೀ ಎಂದು ವಿಖ್ಯಾತಳೂ ಆದ ರಮಣಿಯಾಗಿದ್ದೆನು.

೭೭. ತಪಸ್ಸಿನ ಪ್ರಭಾವದಿಂದ ಸ್ತ್ರೀಪುರುಷರ ಅವಳಿಜವಳಿಯಾಗಿ ಹುಟ್ಟಿದೆನು. ನನ್ನ ಜೊತೆಯಲ್ಲಿ ಹುಟ್ಟಿದ ಪುರುಷನು ಧರ್ಮಕ್ಕಾಗಿ ನಾಶ ಮಾಡಲ್ಪಟ್ಟನು.

೭೮-೭೯. ಉಳಿದ ನನ್ನನ್ನು ಆ ಔರ್ವಮುನಿಯು ದುರ್ವಾಸಮುನಿಗೆ ಕೊಟ್ಟನು. ಆ ಗಂಡನ ಬಳಿಯಲ್ಲಿದ್ದು ನಾನು ಪ್ರಾಚೀನಕರ್ಮದಿಂದ ಕಲಹ ಮಾಡುತ್ತಿರಲು, ಅವನಿಂದ ಶಪಿಸಲ್ಪಟ್ಟು ಬೂದಿಯಾದೆನು. ಉಳಿದ ಸ್ವಲ್ಪ ಪಾಪದಿಂದ ರಾಕ್ಷಸಜಾತಿಯಲ್ಲಿ ಹುಟ್ಟಿದೆನು.

೮೦. ಈ ಜನ್ಮದಲ್ಲಿ ತೇಜಸ್ವಿಯಾದ, ಗೋಮಿಲನೆಂಬ ಈ ರಾಕ್ಷಸಾಧಿಪನು ನನಗೆ ಗಂಡನಾಗಿ ಲಭಿಸಿದನು. ಅವನು ನಿನ್ನಿಂದ ಸಂಹರಿಸಲ್ಪಟ್ಟನು.

ಶಾಪೋಽಸ್ಯ ಪೂರ್ವವಯಸಿ ಬಭೂವ ದ್ವಿಜಸತ್ತಮ |
ಕಸ್ಯಾಶ್ಚಿದ್ರಾಜಕನ್ಯಾಯಾಃ ಸ್ತ್ರಿಯೊರಬ್ಧಾ ಮೃತಿಸ್ತವ || ೮೧ ||

ಅಹಂ ತು ರಾಕ್ಷಸೀಭಾವರಹಿತಾ ಪೂರ್ವಕರ್ಮಣಃ |
ಶುಭಸ್ಯ ಬಲಮಾಪನ್ನಾ ಜಾತಾ ತವ ಸಹಾಯಿನೀ || ೮೨ ||

ದುಃಖಿತಾಹಂ ಕೃತಾ ಭರ್ತಾ ಕುಮಾರ್ಯಾಹರಣಾತ್ಪುರಾ |
ಭಾರ್ಯಾರ್ಥಂ ಪಾಪಿನಾ ಬ್ರಹ್ಮಂಸ್ತೇನ ವ್ಯಾಪಾದಿತೋ ಮಯಾ || ೮೩ ||

ವಿಶ್ವಸ್ತೋ ಹಿ ಯತಸ್ತ್ವಂ ವೈ ಮಮ ಸರ್ವೇಣ ಚೇತಸಾ |
ತತಸ್ತ್ವಾಂ ಗೋಪಯಿಷ್ಯಾಮಿ ಸರ್ವಭಾವೇನ ಕಾಮುಕ || ೮೪ ||

ಏಷ ತೇ ಶಪಥಃ ಸತ್ಯಃ ಪಂಚಭೂತೋಪಸಾಕ್ಷಿಕಃ |
ಕೃತ್ಸ್ನಸ್ಯ ಪುರುಷಸ್ಯೇಹ ಸನ್ನಿಧೌ ವ್ಯಾಹೃತೋ ಮಯಾ || ೮೫ ||

---

೮೧. ದ್ವಿಜಶ್ರೇಷ್ಠನೇ! ಈ ನನ್ನ ಪತಿಗೆ ಪೂರ್ವವಯಸ್ಸಿನಲ್ಲಿಯೇ “ಒಬ್ಬಾನೊಬ್ಬ ರಾಜಕನ್ಯೆಯ ದೆಶೆಯಿಂದ ನಿನಗೆ ನಿನ್ನ ಭಾರ್ಯೆಯಮೂಲಕವಾಗಿ ಮರಣವು ಸಂಭವಿಸುವುದು” ಎಂಬುದಾಗಿ ಶಾಪವು ಬಂದಿತ್ತು.

೮೨. ನಾನಾದರೋ ಪೂರ್ವಜನ್ಮದ ಶುಭಕರ್ಮಬಲದಿಂದ ರಾಕ್ಷಸೀಭಾವರಹಿತಳಾಗಿ ನಿನಗೆ ಸಹಾಯಕಳಾದೆನು.

೮೩. ಬ್ರಾಹ್ಮಣನೇ! ಹಿಂದೆ ಪಾಪಿಯಾದ ನನ್ನ ಪತಿಯು ಈ ಕುಮಾರಿಯನ್ನಪಹರಿಸಿ ಹೆಂಡತಿಯನ್ನು ಮಾಡಿಕೊಳ್ಳಬೇಕೆಂದು ತಂದದ್ದರಿಂದ ನನಗೆ ದುಃಖವನ್ನುಂಟು ಮಾಡಿದ್ದನು. ಆದಕಾರಣ ಇವನು ನನ್ನಿಂದ ಕೊಲ್ಲಿಸಲ್ಪಟ್ಟನು.

೮೪. ಕಾಮುಕನೇ! ನೀನು ಸಂಪೂರ್ಣ ಮನಸ್ಸಿನಿಂದ ನನ್ನ ವಿಶ್ವಾಸಕ್ಕೆ ಪಾತ್ರನಾಗಿರುವೆಯಾದಕಾರಣ ನಿನ್ನನ್ನು ನಾನು ಸರ್ವವಿಧದಿಂದಲೂ ಕಾಪಾಡುವೆನು.

೮೫. ಈ ಶಪಥವು ಪಂಚಭೂತ ಸಾಕ್ಷಿಯಾಗಿ ಪೂರ್ಣಪುರುಷನಾದ ಪರಮೇಶ್ವರನ ಸನ್ನಿಧಾನದಲ್ಲಿ ನಿನಗೆ ನನ್ನಿಂದ ಉಕ್ತವಾಗಿದೆ.

ನ ಕರೋಷಿ ದ್ವಿಜಶ್ರೇಷ್ಠ ಸಂವಿದಂ ಹ್ಯನ್ಯಥಾ ಕ್ವಚಿತ್ ।
ಮದ್ವಾಕ್ಯೇ ಭವತಾ ಸ್ಥೇಯಂ ಸರ್ವಕೃತ್ಯೇಷು ಮಾನದ ॥ ೮೬ ॥

ಏತಚ್ಛ್ರುತ್ವಾ ತು ವಚನಂ ರಾಕ್ಷಸ್ಯಾ ಪರಿಭಾಷಿತಂ ।
ಪ್ರತಿಪೇದೇ ವಚಃ ಸರ್ವಂ ಯತ್ಕೃತಂ ಹಿ ತಯಾ ತದಾ ॥ ೮೭ ॥

ತತಃ ಸಾ ರಾಕ್ಷಸೀ ಸರ್ವಂ ಸಂಪ್ರಗೃಹ್ಯ ಗುಹಾಧನಂ ।
ಕರೇಣುರೂಪಿಣೀ ಭೂತ್ವಾ ಪೃಷ್ಠೇ ಕೃತ್ವಾ ಪತಿಂ ಮಮ ॥ ೮೮ ॥

ತಯಾ ಸಹ ವಿಶಾಲಾಕ್ಷ್ಯಾ ರತ್ನಾವಲ್ಯಾ ಮುದಾನ್ವಿತಾ ।
ಯಥಾ ಚಾಕಾಶಮಾರ್ಗೇಣ ಕಾಶೀಮಭಿ ಸುಲೋಚನೇ ॥ ೮೯ ॥

ಇತಿ ಶ್ರೀನಾರದೀಯಪುರಾಣೋತ್ತರಭಾಗೇ ಮೋಹಿನೀ
ಚರಿತೇ ಕಾಷ್ಠೀಲೋಪಾಖ್ಯಾನಂ ನಾಮ
ಅಷ್ಟಾವಿಂಶೋಽಧ್ಯಾಯಃ

---

೮೬. ದ್ವಿಜಶ್ರೇಷ್ಠನೇ! ಯಾವ ವಿಷಯದಲ್ಲಿಯೂ ನೀನು ಬೇರೆ ವಿಧವಾಗಿ ತಿಳಿಯಬೇಡ, ಮಾನದಾಯಕನೇ! ಸಕಲ ಕಾರ್ಯಗಳಲ್ಲಿಯೂ ನಾನು ಹೇಳಿದಂತೆ ನೀನು ಕೇಳಬೇಕು.

೮೭. ರಾಕ್ಷಸಿಯು ಹೇಳಿದ ಈ ಸಕಲ ಮಾತನ್ನೂ ಕೇಳಿ ವಿಪ್ರನು ಆಗ ಅವಳು ಮಾಡಿದುದೆಲ್ಲವನ್ನೂ ತಿಳಿದುಕೊಂಡನು.

೮೮-೮೯. ತರುವಾಯ ಆ ರಾಕ್ಷಸಿಯು ಗುಹೆಯಲ್ಲಿದ್ದ ಧನವನ್ನೆಲ್ಲಾ ತೆಗೆದುಕೊಂಡು ಹೆಣ್ಣಾನೆಯ ರೂಪವನ್ನು ತಾಳಿ ತನ್ನ ಗಂಡನನ್ನು ಹಿಂದಿಟ್ಟುಕೊಂಡು, ವಿಶಾಲಾಕ್ಷಿಯಾದ ಆ ರತ್ನಾವಳಿಯೊಡನೆ ಸಂತೋಷವಾಗಿ ಆಕಾಶಮಾರ್ಗದಿಂದ ಕಾಶೀಕ್ಷೇತ್ರಕ್ಕಭಿಮುಖವಾಗಿ ಹೊರಟಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಕಾಷ್ಠೀಲೋಪಾಖ್ಯಾನವೆಂಬ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಓಡಿಬರುತ್ತಿದ್ದ ರಾಕ್ಷಸನನ್ನು ನೋಡಿ ರಾಕ್ಷಸಿಯು ಶಂಕಿತಳಾಗಿ ನನ್ನ ಗಂಡನಿಗೆ ಇದೋ ರಾಕ್ಷಸನು ಬರುತ್ತಿರುವನು. ಇವನನ್ನು ಕೊಲ್ಲದೇ ಬಿಟ್ಟರೆ ಅವನು ನಮ್ಮಿಬ್ಬರನ್ನೂ ತಿಂದುಬಿಡುವನು ಈ ಶಕ್ತಿಯನ್ನು ಬೇಗ ಪ್ರಯೋಗಿಸು ಎಂಬುದಾಗಿ ನನ್ನ ಗಂಡನಿಗೆ ಹೇಳಿದಳು. ಅವನು ತಕ್ಷಣ ಶಕ್ತಿಯನ್ನು ಪ್ರಯೋಗಿಸಲು ರಾಕ್ಷಸನು ಸುಟ್ಟು ಬೂದಿಯಾದನು. ಅನಂತರ ರಾಕ್ಷಸಿಯು ನನ್ನ ಗಂಡನನ್ನು ಗುಹೆಯೊಳಕ್ಕೆ ಕರೆದುಕೊಂಡು ಹೋಗಿ ತನ್ನ ಪತಿಯು ಕರೆತಂದಿದ್ದ ಕಾಶಿರಾಜನ ಪುತ್ರಿಯನ್ನು ತೋರಿಸಿ ಆಕೆಯನ್ನು ನೀನು ಅವಳ ತಂದೆಯ ಮನೆಗೆ ಕರೆದುಕೊಂಡು ಹೋಗಿಬಿಡಬೇಕು. ಇಲ್ಲಿರುವ ನನ್ನ ಸಂಪತ್ತೆಲ್ಲವೂ ನಿನ್ನದೇ ಆಗಿದೆ. ಇವುಗಳನ್ನೂ ನನ್ನನ್ನೂ ಸಹ ನೀನು ಭೋಗಿಸು ಎಂತಾಗಿ ಹೇಳಿದಳು. ಅವನು ಹೆಂಗಸರ ಮಾತನ್ನು ನಂಬಬಾರದೆಂದು ನೀತಿಶಾಸ್ತ್ರದಲ್ಲಿ ಹೇಳಿದೆ. ಅದರಲ್ಲಿಯೂ ಯುವಕನಾದ ಗಂಡನನ್ನೇ ಸಂಹರಿಸಿದ ನಿನ್ನ ಮಾತನ್ನು ನಂಬುವುದು ಹೇಗೆ? ಹೇಗಾದರೂ ಆಗಲಿ ನಾನು ನಿನ್ನ ಮಾತನ್ನು ನಂಬಿ ನಿನ್ನ ಇಷ್ಟದಂತೆ ನಡೆಯುವೆನು ಎಂದನು. ಆಗ ರಾಕ್ಷಸಿಯು ಧರ್ಮತತ್ವವನ್ನು, ತಾನು ಪತಿಯನ್ನು ಕೊಲ್ಲಿಸಿದ ಕಾರಣವನ್ನೂ ಚೆನ್ನಾಗಿ ವಿವರಿಸಿ ಹೇಳಿದಳು. ಅನಂತರ ಆ ಕನ್ಯೆಯನ್ನು ಕಾಶಿಗೆ ಕರೆದು ಕೊಂಡು ಹೋದರು.

# ಏಕೋನತ್ರಿಂಶೋऽಧ್ಯಾಯಃ

---

ಕಾಷ್ಠೀಲೋವಾಚ

ಏವಂ ಸಾ ರಾಕ್ಷಸೀ ಸುಭ್ರೂ ಹಸ್ತಿನೀರೂಪಧಾರಿಣೀ ।
ತ್ರಿಭಿರ್ಮುಹೂರ್ತೈಃ ಸಂಪ್ರಾಪ್ತಾ ಕಾಶೀಂ ವಿಶ್ವೇಶಮಂದಿರಂ ॥ ೧ ॥

ಉವಾಚ ತಾಂ ಪುರೀಂ ಪ್ರಾಪ್ಯ ಭರ್ತಾರಮಸಿತೇಕ್ಷಣಾ ।
ಇಯಂ ಪಾಪತರೋಃ ಕಾಂತೆ ಕುಠಾರಾ ಪರಿಕೀರ್ತಿತಾ ॥ ೨ ॥

ಷಡೂರ್ಮಿಕಾಂಚನಸ್ಯೈಷಾ ಕಾಂತ ಪ್ರೋಕ್ತಾ ಡುರೋದರೀ ।
ಕರ್ಮಬೀಜೋಪಶಮನೀ ಸರ್ವೇಷಾಂ ಗತಿದಾಯಿಕಾ ॥ ೩ ॥

---

## ಇಪ್ಪತ್ತೊಂಬತ್ತನೆಯ ಅಧ್ಯಾಯ

೧. ಕಾಷ್ಠೀಲೆಯು ಹೇಳಿತು :—ಈರೀತಿಯಾಗಿ ಹೆಣ್ಣಾನೆಯ ರೂಪವನ್ನು ಧರಿಸಿದ ಆ ರಾಕ್ಷಸಿಯು ವಿಶ್ವೇಶ್ವರನಿಗಾವಾಸಕ್ಷೇತ್ರವಾದ ಕಾಶಿಯನ್ನು ಮೂರು ಮುಹೂರ್ತಗಳಲ್ಲಿ ಸೇರಿದಳು.

೨. ಕಪ್ಪು ಕಣ್ಣುಗಳುಳ್ಳ ರಾಕ್ಷಸಿಯು ಆ ಕಾಶೀಪಟ್ಟಣಕ್ಕೆ ಬಂದು ನನ್ನಗಂಡನನ್ನುಕುರಿತು ಹೀಗೆ ಮಾತನಾಡಿದಳು:—ಕಾಂತನೇ! ಈ ಕಾಶಿಯು ಪಾಪವೆಂಬ ವೃಕ್ಷಕ್ಕೆ ಕೊಡಲಿ ಎಂದು ಉಕ್ತವಾಗಿದೆ.

೩. ಕಾಂತನೇ! ಇದು ಪ್ರಕಾಶಮಾನವಾದ ಬಂಗಾರವನ್ನು ಸ್ಪರ್ಧಿಸುವಂತಿದೆ. ಇದು ಕರ್ಮಮೂಲವನ್ನೇ ಕಿತ್ತುಹಾಕುವುದು ಮತ್ತು ಎಲ್ಲರಿಗೂ ಸದ್ಗತಿದಾಯಕವೂ ಆಗಿರುವುದು.

ಆದ್ಯಂ ಹಿ ವೈಷ್ಣವಂ ಸ್ಥಾನಂ ಪುರಾಣಾಃ ಸಂಪ್ರಚಕ್ಷತೇ ।
ನಾವೈಷ್ಣವೇ ಸ್ಥಲೇ ಮುಕ್ತಿಃ ಸರ್ವಸ್ಯ ತು ಕದಾಚನ ॥ ೪ ॥

ಮಾಧವಸ್ಯ ಪುರೀ ಚೇಯಂ ಪೂರ್ವಮಾಸೀದ್ದ್ವಿಜೋತ್ತಮ ।
ಮುಕ್ತಿದಾ ಸರ್ವಜಂತೂನಾಂ ಸರ್ವಪಾಪಪ್ರಣಾಶಿನೀ ॥ ೫ ॥

ಏಕದಾ ಶಂಕರೋ ದೇವೋ ದ್ರಷ್ಟುಂ ಪ್ರಾಗಾತ್ ಪಿತಾಮಹಂ ।
ಸರ್ವಲೋಕೈಕಕರ್ತಾರಂ ಭ್ರಾಜಮಾನಂ ಸ್ವತೇಜಸಾ ॥ ೬ ॥

ಗತ್ವಾ ತತ್ರ ಮಹಾದೇವೋ ಬ್ರಹ್ಮಾಣಂ ಜಗತಾಂ ಗುರುಂ ।
ನಮಸ್ಕೃತ್ಯ ಸ್ಥಿತೋಽಹ್ಯಗ್ರೇ ವೇದಪಾಠಂ ನಿಶಾಮಯತ್ ॥ ೭ ॥

ಚತುರ್ಭಿರದ್ಭುತೈರ್ವಕ್ತ್ರೈಶ್ಚತುರೋ ನಿಗಮಾನ್ ಮುದಾ ।
ಉದ್ಗಿರಂತಂ ಜಗನ್ನಾಥಂ ದೃಷ್ಟ್ವಾ ಪ್ರೀತೋಽಭವತ್ತದಾ ॥ ೮ ॥

---

೪. ಮೊದಲು ಇದು ವೈಷ್ಣವಕ್ಷೇತ್ರವಾಗಿತ್ತೆಂದು ಪುರಾಣಗಳು ಹೇಳುತ್ತವೆ. ಅವೈಷ್ಣವಸ್ಥಳದಲ್ಲಿ ಯಾವಾಗಲೂ ಯಾರಿಗೂ ಮುಕ್ತಿಯಾಗುವುದಿಲ್ಲ,

೫. ದ್ವಿಜಶ್ರೇಷ್ಠನೇ! ಇದು ಪೂರ್ವದಲ್ಲಿ ಲಕ್ಷ್ಮೀಪತಿಯ ಪಟ್ಟಣವಾಗಿ ಸಕಲಪ್ರಾಣಿಗಳ ಪಾಪಗಳನ್ನೆಲ್ಲಾ ನಾಶಪಡಿಸುತ್ತಿದ್ದಿತು.

೬. ಒಂದು ದಿನ ಶಂಕರದೇವನು ಸಕಲ ಲೋಕಗಳನ್ನೂ ಸೃಷ್ಟಿಮಾಡಿದ, ತನ್ನ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಪಿತಾಮಹನನ್ನು ನೋಡಲು ಬಂದನು.

೭. ಮಹಾದೇವನು ಅಲ್ಲಿಗೆ ಹೋಗಿ ಜಗದ್ಗುರುವಾದ ಬ್ರಹ್ಮನಿಗೆ ನಮಸ್ಕಾರಮಾಡಿ ಮುಂದೆ ನಿಂತು ವೇದಪಾಠವನ್ನು ಕೇಳಿದನು.

೮. ಆಗ ಅದ್ಭುತವಾದ ನಾಲ್ಕು ಮುಖಗಳಿಂದ ನಾಲ್ಕು ವೇದಗಳನ್ನು ಸಂತೋಷವಾಗಿ ಹೇಳುತ್ತಿದ್ದ ಜಗದೊಡೆಯನನ್ನು ನೋಡಿ ಸಂತೋಷಪಟ್ಟನು.

ಅಥ ತತ್ಪಂಚಮಂ ವಕ್ತ್ರಂ ಬ್ರಹ್ಮಣೋ ಭೂತನಾಯಕಃ ।
ಪ್ರಗಲ್ಭಂ ತಮುಪಾಲಕ್ಷ್ಯ ಕ್ಷಣಾಜ್ಜಾತಃ ಸಮತ್ಸರಃ ॥ ೯ ॥

ಸಕ್ರೋಧಜನ್ಮಾ ವಿಪ್ರೇಂದ್ರ ತಸ್ಯ ಪ್ರಾಗಲ್ಭ್ಯಮಕ್ಷಮಃ ।
ಚಕರ್ತ ತನ್ನಖಾಗ್ರೇಣ ಖಸ್ಥಂ ವಕ್ತ್ರಂ ತ್ರಿಲೋಚನಃ ॥ ೧೦ ॥

ತಚ್ಛಿನ್ನಂ ಬ್ರಹ್ಮಣಃ ಶೀರ್ಷಂ ಸಂಲಗ್ನಂ ಕರಪಲ್ಲವೇ ।
ವಾಮೇ ನಿರ್ಧೂತಮನಿಶಂ ನ ನಿವೃತ್ತಂ ದ್ವಿಜೋತ್ತಮ ॥ ೧೧ ॥

ಬ್ರಹ್ಮಾ ತು ದುಃಖಿತೋ ಭೂತ್ವಾ ತಸ್ಥೌ ಸ್ಥಾಣುಂ ವ್ಯಲೋಕಯನ್ ।
ರುದ್ರೋಽಪಿ ಲಜ್ಜಿತೋ ಭೂತ್ವಾ ನಿರ್ಜಗಾಮ ತ್ವರಾನ್ವಿತಃ ॥ ೧೨ ॥

ಬಹುಧಾ ಯತಮಾನೋಽಪಿ ತಚ್ಛಿರಃ ಕ್ಷೇಪ್ತುಮಾತುರಃ ।
ನ ಶಶಾಕ ಪರಿತ್ಯಕ್ತುಂ ತದದ್ಭುತಮಭೂನ್ಮಹತ್ ॥ ೧೩ ॥

---

೯. ಅನಂತರ ಭೂತಪತಿಯಾದ ಈಶ್ವರನು ಬ್ರಹ್ಮನ ಐದನೆಯ ಮುಖವನ್ನೂ, ಪ್ರತಿಭಾಶಾಲಿಯಾದ ಬ್ರಹ್ಮನನ್ನೂ ನೋಡಿ ಕ್ಷಣಮಾತ್ರದಲ್ಲಿ ಮಾತ್ಸರ್ಯಯುಕ್ತನಾದನು.

೧೦. ಬ್ರಾಹ್ಮಣಶ್ರೇಷ್ಠನೇ! ಆ ಮಹಾದೇವನು ಬ್ರಹ್ಮನ ಪ್ರಾಜ್ಞತೆಯನ್ನು ನೋಡಿ ಸಹಿಸಲಾರದೆ ಕ್ರೋಧಾವಿಷ್ಟನಾಗಿ ತನ್ನ ನಖಾಗ್ರದಿಂದ ಮೇಲಿದ್ದ ಪಂಚಮ ಮುಖವನ್ನು ಕತ್ತರಿಸಿದನು.

೧೧. ದ್ವಿಜೋತ್ತಮನೇ! ಕತ್ತರಿಸಲ್ಪಟ್ಟ ಬ್ರಹ್ಮಶಿರಸ್ಸು ಕಮಲದಂತಿರುವ ಮಹಾದೇವನ ಎಡಗೈಯಲ್ಲಿ ಚೆನ್ನಾಗಿ ಅಂಟಿಕೊಂಡಿತು. ಎಷ್ಟು ಕೊಡವಿದರೂ ಅದು ಕೈಬಿಡಲಿಲ್ಲ.

೧೨. ಬ್ರಹ್ಮನಾದರೋ ವ್ಯಸನಾಕ್ರಾಂತನಾಗಿ ರುದ್ರನನ್ನು ನೋಡುತ್ತ ನಿಂತನು. ರುದ್ರನೂ ಸಹ ನಾಚಿಕೆಗೊಂಡು ಬೇಗ ಹಿಂಜರಿದನು.

೧೩. ಈಶ್ವರನು ಆ ಶಿರಸ್ಸನ್ನು ಕೈಯಿಂದ ಬೀಳಿಸಲು ಆತುರನಾಗಿ ಬಹು ಪ್ರಯತ್ನಮಾಡಿದರೂ ಬಿಡಿಸಿಕೊಳ್ಳಲು ಸಮರ್ಥನಾಗಲಿಲ್ಲ. ಅದು ಮಹತ್ತಾಗಿ ಆಶ್ಚರ್ಯಕರವಾಯಿತು.

ಚಿಂತಯಾ ವ್ಯಾಕುಲೋ ಭೂತ್ವಾ ಸಸ್ಮಾರ ಗರುಡಧ್ವಜಂ |
ತೇನ ಸಂಸ್ಮೃತಮಾತ್ರಸ್ತು ಶೀಘ್ರಮಾವಿರಭೂಚ್ಚ ಸಃ || ೧೪ ||
ತಂ ದೃಷ್ಟ್ವಾ ದೇವದೇವೇಶಂ ವಿಷ್ಣುಂ ಸರ್ವಗತಂ ದ್ವಿಜ |
ನನಾಮ ಶಿರಸಾ ನಗ್ನೋ ನಿಷ್ಪ್ರಭೋ ವೃಷಭಧ್ವಜಃ || ೧೫ ||
ತಂ ತಥಾತುರಮಾಲಕ್ಷ್ಯ ಭೀತಂ ಬ್ರಹ್ಮದ್ರುಹಂ ಹರಿಃ |
ಸಮಾಶ್ವಾಸ್ಯಾಬ್ರವೀದ್ವಾಕ್ಯಂ ತತ್ತೋಷಪರಿಕಾರಕಂ || ೧೬ ||
ಶಂಭೋ ತ್ವಯಾ ಕೃತಂ ಪಾಪಂ ಯಚ್ಛಿನ್ನಂ ಬ್ರಹ್ಮಣಃ ಶಿರಃ |
ತತ್ಫಲಂ ಭುಂಕ್ಷ್ವ ಸರ್ವಜ್ಞ ಕಿಯತ್ಕಾಲಂ ಕೃತಂ ಸ್ವಯಂ || ೧೭ ||
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ |
ನಾಭುಕ್ತಂ ಕ್ಷೀಯತೇ ಕರ್ಮ ಹ್ಯಪಿ ಜನ್ಮಶತೈಃ ಪ್ರಿಯ || ೧೮ ||

---

೧೪. ಅವನು ಚಿಂತಾಕ್ರಾಂತನಾಗಿ ಗರುಡಧ್ವಜನಾದ ಹರಿಯನ್ನು ಸ್ಮರಿಸಿದನು. ಸ್ಮರಣೆಮಾಡಿದ ಕೂಡಲೇ ಹರಿಯು ಬೇಗ ಅಲ್ಲಿ ಆವಿರ್ಭವಿಸಿದನು.

೧೫. ದ್ವಿಜನೇ! ದೇವದೇವೋತ್ತಮನು, ಸರ್ವಗತನೂ ಆದ ಆ ವಿಷ್ಣುವನ್ನು ನೋಡಿ ನಗ್ನನು, ತೇಜೋಹೀನನು, ವೃಷಭಧ್ವಜನೂ ಆದ ಈಶ್ವರನು ನಮಸ್ಕಾರಮಾಡಿದನು.

೧೬. ಹರಿಯು ಆತುರನು, ಬ್ರಹ್ಮದ್ರೋಹಿಯು, ಭೀತನೂ ಆದ ಅವನನ್ನು ನೋಡಿ ಸಮಾಧಾನಪಡಿಸಿ ಅವನಿಗೆ ಸಂತೋಷವನ್ನುಂಟುಮಾಡುವಂತಹ ಮಾತನ್ನಾಡಿದನು.

೧೭. ಶಂಭುವೇ! ನೀನು ಬ್ರಹ್ಮಶಿರಸ್ಸನ್ನು ಛೇದಿಸಿ ಪಾಪಮಾಡಿರುವೆಯಾದಕಾರಣ ಸರ್ವಜ್ಞನಾದ ನೀನು ಸ್ವತಃ ಮಾಡಿದ ಆದರ ಫಲವನ್ನು ಅಷ್ಟುಕಾಲ ಅನುಭವಿಸಲೇಬೇಕು.

೧೮. ಮಾಡಿದ ಕರ್ಮವು ಶುಭವಾಗಲಿ ಅಥವಾ ಅಶುಭವಾಗಲಿ ಅದರ ಫಲವನ್ನು ಅವಶ್ಯವಾಗಿ ಅನುಭವಿಸಬೇಕು. ಪ್ರಿಯನೇ! ನೂರಾರು ಜನ್ಮಗಳು ಕಳೆದರೂ ಅನುಭವಿಸದಿದ್ದರೆ ಕರ್ಮವು ಸವೆಯುವುದಿಲ್ಲ

ಕಿಂ ಕರೋಮಿ ಕ್ವ ಗಚ್ಛಾಮಿ ತ್ವಾಂ ದೃಷ್ಟ್ವಾ ದುಃಖಿತಂ ಹರ ।
ಪ್ರಾಣಾ ವಿಕಲತಾಂ ಯಾಂತಿ ಮಮ ತ್ವದ್ದುಃಖದರ್ಶನಾತ್ ॥ ೧೯ ॥

ಯಾನಿ ಕಾನಿ ಚ ಪಾಪಾನಿ ಮಹಾಂತಿ ಮಹತಾಂ ಮತೇ ।
ನ ತಾನಿ ಬ್ರಹ್ಮಹತ್ಯಾಯಾಃ ಸಮಾನೀತಿ ಮತಿರ್ಮಮ ॥ ೨೦ ॥

ಯಸ್ತ್ವಂ ಸರ್ವಸ್ಯ ಲೋಕಸ್ಯ ಗುರುರ್ಧರ್ಮೋಪದೇಶಕಃ ।
ಬ್ರಹ್ಮಹತ್ಯಾಭಿಭೂತಸ್ತು ಕ್ಷಣಂ ಸ್ಥಾತುಂ ನ ಚ ಕ್ಷಮಃ ॥ ೨೧ ॥

ಏಷಾ ಘೋರತರಾ ಹತ್ಯಾ ಮೀನಗಂಧ್ಯಾ ಜರಾತುರಾ ।
ಲೇಲಿಹಾನಾ ಸುರೇಶಾನ ಗ್ರಹೀತುಂ ತ್ವಾನುಧಾವತಿ ॥ ೨೨ ॥

---

೧೯. ರುದ್ರನೇ! ವ್ಯಸನಾಕ್ರಾಂತನಾದ ನಿನ್ನನ್ನು ನೋಡಿ ಏನು ಮಾಡಲಿ? ಎಲ್ಲಿ ಹೋಗಲಿ? ನಿನ್ನ ದುಃಖವನ್ನು ನೋಡಿದಮಾತ್ರದಿಂದಲೇ ನನಗೆ ಪ್ರಾಣಗಳು ಹೋದಂತಾಗಿವೆ.

೨೦. ಮಹಾತ್ಮರ ಮತದಲ್ಲಿ ಯಾವ ಯಾವದು ದೊಡ್ಡ ಪಾಪಗಳೆಂದು ಪ್ರಸಿದ್ಧವಾಗಿವೆಯೋ ಅವೆಲ್ಲವೂ ಬ್ರಹ್ಮಹತ್ಯೆಗೆ ಸಮಾನವಲ್ಲವೆಂದು ನನ್ನ ಅಭಿಪ್ರಾಯ.

೨೧. ಸಮಸ್ತಲೋಕಕ್ಕೂ ಧರ್ಮವನ್ನುಪದೇಶಿಸುವಂತಹ ಗುರುವಾದ ನೀನು ಬ್ರಹ್ಮಹತ್ಯೆಯಿಂದ ಅಭಿಭೂತನಾಗಿ ಕ್ಷಣಮಾತ್ರವೂ ನೆಮ್ಮದಿಯಿಂದಿರಲು ಸಮರ್ಥನಾಗಿಲ್ಲ.

೨೨. ದೇವೇಶನೇ! ಅತ್ಯಂತ ಭಯಂಕರವಾದ, ಮೀನಿನ ಗಂಧವುಳ್ಳ ಮುಪ್ಪನ್ನು ತಂದುಕೊಡಬೇಕೆಂದು ಆತುರಪಡುತ್ತಿರುವ, ಕಟಬಾಯಿಗಳನ್ನು ನೆಕ್ಕುತ್ತಿರುವ ಈ ಬ್ರಹ್ಮಹತ್ಯೆಯು ಹಿಡಿದುಕೊಳ್ಳಲು ನಿನ್ನನ್ನು ಅಟ್ಟಿಸಿಕೊಂಡು ಓಡಿಬರುತ್ತಿದೆ.

ತಸ್ಮಾನ್ನೈಕತ್ರ ಭವತಾ ಸ್ಥೇಯಂ ದ್ವಾದಶವತ್ಸರಂ ।
ಅಟನೀಯಂ ಹಿತಾರ್ಥಾಯ ಪಾಪನಾಶಾಭಿಕಾಮ್ಯಯಾ ॥ ೨೩ ॥

ಅಟಿತ್ವಾ ದ್ವಾದಶಾಬ್ದಾನಿ ತೀರ್ಥೇಷು ಸಕಲೇಷು ಚ ।
ಪ್ರಕ್ಷಾಲಯನ್ ಕರಂ ವಾಮಂ ಭಿಕ್ಷಾಂ ಗೃಹ್ಣನ್ ಕಪಾಲಕೇ ॥ ೨೪ ॥

ಶುದ್ಧಿಂ ಯಾಸ್ಯಸಿ ದೇವೇಶ ಪಾಪಾದಸ್ಮಾತ್ಸುದಾರುಣಾತ್ ।
ಇತ್ಯುಕ್ತೋ ವಿಷ್ಣುನಾ ವಿಪ್ರ ಸ್ಥಾಣುಃ ಸರ್ವಗತೋಽಭವತ್ ॥ ೨೫ ॥

ಕಪಾಲಮೋಚನಾರ್ಥಂ ಹಿ ಪಾಣಿಂ ಪ್ರಕ್ಷಾಲಯನ್ಜಲೇ ।
ವರ್ಷತ್ರಯಂ ಭ್ರಮಿತ್ವಾ ತು ಪ್ರಾಪ್ತೋ ಬದರಿಕಾಶ್ರಮಂ ॥ ೨೬ ॥

ಭಿಕ್ಷಾರ್ಥಂ ದೇವದೇವಸ್ಯ ಧರ್ಮಪುತ್ರಸ್ಯ ಮಾನದ ।
ದ್ವಾರಸ್ಥೋ ದೇಹಿ ಭಿಕ್ಷಾಂ ಮೇ ವಿಷ್ಣೋ ಇತ್ಯವದನ್ಮುಹುಃ ॥ ೨೭ ॥

---

೨೩. ಆದಕಾರಣ ನೀನು ಹನ್ನೆರಡು ವರ್ಷಗಳ ಕಾಲ ಒಂದು ಸ್ಥಳದಲ್ಲಿರಬಾರದು. ಪಾಪನಾಶವಾಗಿ ಹಿತವಾಗುವುದಕ್ಕೋಸ್ಕರ ಸಂಚರಿಸುತ್ತಿರಬೇಕು.

೨೪-೨೫. ದೇವೇಶನೇ! ಎಡಗೈಯನ್ನು ತೊಳಸಿಕೊಳ್ಳುವವನಾಗಿ ಕಪಾಲದಲ್ಲಿ ಭಿಕ್ಷೆಯನ್ನು ಸ್ವೀಕರಿಸುತ್ತಾ ನೀನು ಹನ್ನೆರಡು ವರ್ಷಗಳ ಕಾಲ ಸಕಲತೀರ್ಥಗಳಲ್ಲಿಯೂ ಸಂಚಾರಮಾಡಿದರೆ ಅತ್ಯಂತ ಕ್ರೂರವಾದ ಈ ಪಾಪದಿಂದ ಶುದ್ಧನಾಗುವೆ ಎಂಬುದಾಗಿ ವಿಷ್ಣುವು ಹೇಳಿದುದನ್ನು ಕೇಳಿ ರುದ್ರನು ಸರ್ವತ್ರ ಸಂಚಾರಮಾಡತೊಡಗಿದನು.

೨೬. ಕಪಾಲವನ್ನು ಬಿಡಿಸಿಕೊಳ್ಳುವುದಕ್ಕಾಗಿ ನೀರಿನಲ್ಲಿ ಕೈಯನ್ನು ತೊಳೆದುಕೊಳ್ಳುತ್ತಾ ಮೂರು ವರ್ಷಗಳು ಸಂಚರಿಸಿ ಬದರಿಕಾಶ್ರಮಕ್ಕೆ ಬಂದನು.

೨೭. ಅಲ್ಲಿ ಭಿಕ್ಷೆಗಾಗಿ ದೇವದೇವನಾದ ಧರ್ಮಪುತ್ರನ ಆಲಯದ ಬಾಗಿಲಿಗೆ ಬಂದು ವಿಷ್ಣುವೇ! ಭಿಕ್ಷೆಯನ್ನು ಕೊಡು ಎಂಬುದಾಗಿ ಅನೇಕಬಾರಿ ಕೂಗಿದನು.

ತತೋ ನಾರಾಯಣೋ ದೇವೋ ದೃಷ್ಟ್ವಾ ದ್ವಾರಿ ಸ್ಥಿತಂ ಹರಂ ।
ಗೃಹಾಣ ಭಿಕ್ಷಾಮಿತ್ಯುಕ್ತ್ವಾ ಪ್ರದದೌ ದಕ್ಷಿಣಂ ಕರಂ ॥ ೨೮ ॥

ತತೋ ಹರೋ ಹರಿಂ ದೃಷ್ಟ್ವಾ ಭಿಕ್ಷಾಂ ದಾತುಂ ಸಮುದ್ಯತಂ ।
ಪ್ರಾಹರದ್ದಕ್ಷಿಣಂ ಪಾಣಿಂ ತ್ರಿಶೂಲೇನ ದ್ವಿಜೋತ್ತಮ ॥ ೨೯ ॥

ತತ್ರಿಶೂಲಕ್ಷತಾದ್ಧಾರಾಸ್ತಿಸ್ರೋ ಲೋಕಭಯಂಕರಾಃ ।
ಪ್ರಸ್ಥದ್ವಾದಶಹಸ್ತಾಶ್ಚ ನಿರ್ಗತಾಶ್ಚಿತ್ರವರ್ಣಕಾಃ ॥ ೩೦ ॥

ಏಕಾ ಕ್ಷತಜಧಾರಾ ತು ಕಪಾಲೇ ನ್ಯಪತತ್ತದಾ ।
ದ್ವಿತೀಯಾ ತನ್ಮುಖೇ ಪ್ರಾಪ್ತಾ ಪಯಸ್ಯಥ ತೃತೀಯಕಾ ॥ ೩೧ ॥

ಜಲಧಾರಾ ಶಿರಃಪ್ರಾಪ್ತಾ ಹರಸ್ಯ ಹೇತುರಗ್ರಜಃ ।
ತಾಂ ಧಾರಾಂ ತ್ರೀಣಿ ವರ್ಷಾಣಿ ಸಂಸೇವ್ಯ ವಿಧಿವದ್ಧರಃ ॥ ೩೨ ॥

---

೨೮. ತರುವಾಯ ನಾರಾಯಣದೇವನು ಹರನು ಬಾಗಿಲಿನಲ್ಲಿ ನಿಂತಿದ್ದುದನ್ನು ನೋಡಿ ಭಿಕ್ಷೆಯನ್ನು ತೆಗೆದುಕೋ ಎಂದು ಹೇಳಿ ಬಲಗೈಯನ್ನು ನೀಡಿದನು.

೨೯. ದ್ವಿಜೋತ್ತಮನೇ! ಆಗ ಹರನು ಭಿಕ್ಷೆಯನ್ನು ಕೊಡಲುದ್ಯುಕ್ತನಾದ ಹರಿಯನ್ನು ನೋಡಿ ತ್ರಿಶೂಲದಿಂದ ಬಲಗೈಯನ್ನು ಚುಚ್ಚಿದನು.

೩೦. ಆದರಿಂದ ಲೋಕಭಯಂಕರಳಾದ, ಪ್ರಸ್ಥದ್ವಾದಶಹಸ್ತಪರಿಮಿತಗಳಾದ, ನಾನಾ ವರ್ಣಗಳುಳ್ಳ ಮೂರು ಧಾರೆಗಳು ಹೊರಟವು.

೩೧-೩೨. ಅವುಗಳಲ್ಲಿ ಒಂದು ರಕ್ತ ಧಾರೆಯು. ಅದು ಈಶ್ವರನ ಹಸ್ತದಲ್ಲಿದ್ದ ಕಪಾಲದಲ್ಲಿ ಬಿದ್ದಿತು. ಎರಡನೆಯದಾದ ಕ್ಷೀರಧಾರೆಯು ಅವನ ಮುಖದಲ್ಲಿ ಬಿದ್ದಿತು. ಬಳಿಕ ಮೂರನೆಯದಾದ ಜಲಧಾರೆಯು ಹರನ ಶಿರಸ್ಸಿನಮೇಲೆ ಬಿದ್ದಿತು.

ಕಿಂಚಿತ್ತ್ರೀತೋ ಯಯೌ ಕ್ಷೇತ್ರಂ ಕುರೋಃ ಪುಣ್ಯಕರಂ ದ್ವಿಜ |
ತತ್ರ ಗತ್ವಾ ಹರಃ ಸ್ಥಾಣುರ್ಭೂತಸ್ತತ್ರ ಪಪಾತ ಚ || ೩೩ ||

ಬ್ರಹ್ಮಹ್ರದೇ ತ್ರಿವರ್ಷಾಣಿ ಮಗ್ನೋ ಬ್ರಹ್ಮಹ್ರದಾಂಬುನಿ |
ವರ್ಷತ್ರಯೇ ಗತೇ ತತ್ರ ಕ್ಷತಾರ್ಧಾಂಗೋ ವಿನಿಃಸೃತಃ || ೩೪ ||

ಚಿರಂ ತುಷ್ಟಾವ ದೇವೇಶಂ ವಿಷ್ಣುಂ ಸರ್ವಗುಹಾಶಯಂ |
ತತಸ್ತುಷ್ಟೋ ಜಗನ್ನಾಥೋ ವರಂ ತಸ್ಮೈ ದದೌ ತು ಸಃ || ೩೫ ||

ಗಚ್ಛ ಕಾಶೀಮಿತೋ ಭ್ರಾಂತ್ವಾ ತೀರ್ಥಾನಿ ಬಹುಶೋ ಹರ |
ತತೋ ಹರಿಂ ನಮಸ್ಕೃತ್ಯ ಪರೀತ್ಯ ಬಹುಧಾ ತಥಾ || ೩೬ ||

ಕ್ರಮಾತ್ತೀರ್ಥಾಟನಂ ಕುರ್ವನ್ನವಿಮುಕ್ತಪುರೀಂ ಗತಃ |
ಅವಿಮುಕ್ತಸ್ಯ ಸೀಮಾಯಾಂ ಪ್ರವಿಶದ್ವೀಕ್ಷ್ಯ ಧೂರ್ಜಟಿಃ || ೩೭ ||

---

ಹರನು ಆ ಧಾರೆಯನ್ನು ಮೂರುವರ್ಷಗಳು ವಿಧಿವತ್ತಾಗಿ ಸೇವಿಸಿ ಸ್ವಲ್ಪತೃಪ್ತಿಯನ್ನು ಹೊಂದಿ ಪುಣ್ಯಕರವಾದ ಕುರುಕ್ಷೇತ್ರಕ್ಕೆ ಹೊರಟನು.

ಅಲ್ಲಿಗೆ ಹೋಗಿ ಹರನು ಸ್ಥಾಣುವಾಗಿ ಬ್ರಹ್ಮಹ್ರದದಲ್ಲಿ ಮೂರುವರ್ಷಗಳ ಕಾಲ ಆ ಹ್ರದೋದಕದಲ್ಲಿ ಮುಳುಗಿಕೊಂಡಿದ್ದನು. ಅನಂತರ ಕ್ಷತಾರ್ಧಾಂಗನಾಗಿ ಹೊರಗೆ ಬಂದನು.

೩೫-೩೭. ಬಳಿಕ ಅವನು ಬಹುಕಾಲದವರೆಗೆ ದೇವೇಶ್ವರನು, ಸಕಲರ ಹೃದಯಗುಹಾಸ್ಥಿತನೂ ಆದ ವಿಷ್ಣುವನ್ನು ಸ್ತೋತ್ರಮಾಡಿದನು. ಅದರಿಂದ ಸಂತುಷ್ಟನಾದ ಜಗನ್ನಾಥನು ಅವನಿಗೆ ಈಶ್ವರನೇ! "ನೀನು ಬಹು ತೀರ್ಥಗಳನ್ನು ಸುತ್ತಿಕೊಂಡು ಇಲ್ಲಿಂದ ಕಾಶಿಗೆ ಹೋಗು" ಎಂಬುದಾಗಿ ವರವನ್ನು ಕೊಟ್ಟನು.

ಅನಂತರ ಈಶ್ವರನು ಹರಿಗೆ ನಮಸ್ಕಾರಮಾಡಿ ಕ್ರಮವಾಗಿ ತೀರ್ಥಾಟನೆ ಮಾಡುತ್ತಾ ಬಹು ಸಂಚಾರಮಾಡಿಕೊಂಡು ಕಾಶೀ ಪಟ್ಟಣಕ್ಕೆ ಬಂದನು. ಧೂರ್ಜಟಿಯು ಹಿಂದಿರುಗಿ ನೋಡುತ್ತಾ ಕಾಶೀಕ್ಷೇತ್ರದ ಎಲ್ಲೆಯ ಒಳಕ್ಕೆ ಪ್ರವೇಶಿಸಿದನು.

ನಾಪಶ್ಯತ್ತಾಮನುಪ್ರಾಪ್ತಾಂ ಬ್ರಹ್ಮಹತ್ಯಾಂ ಬಹಿಃಸ್ಥಿತಾಂ ।
ತತೋಽಸೌ ವೈಷ್ಣವಂ ಜ್ಞಾತ್ವಾ ಕ್ಷೇತ್ರಂ ದುರಿತನಾಶಕಂ ।
ತುಷ್ಟಾವ ಪ್ರಯತೋ ಭೂತ್ವಾ ಮಾಧವಂ ವಂದ್ಯಮೀಶ್ವರಂ ॥ ೩೮ ॥

ಜಯಜಯ ಜಗದೀಶ ನಾಥ ವಿಷ್ಣೋ
ಜಗದಾನಂದನಿಧಾನ ವೇದವೇದ್ಯ ।
ಮಧುಮಥನ ನೃಸಿಂಹ ಪೀತವಾಸೋ
ಗರುಡಾಧಿಷ್ಠಿತ ಮಾಧವಾದಿದೇವ ॥ ೩೯ ॥

ವ್ರಜರಮಣ ರಮೇಶ ರಾಧಿಕೇಶ
ತ್ರಿದಶೇಶಾಖಿಲಕಾಮಪೂರ ಕೃಷ್ಣ ।
ಸುರವರ ಕರುಣಾರ್ಣವಾರ್ತಿನಾಶಿ
ನ್ನಲಿನಾಕ್ಷಾಧಿಪತೇ ವಿಭೋ ಪರೇಶ ॥ ೪೦ ॥

---

೩೮. ಆಗ ತನ್ನನ್ನನುಸರಿಸಿ ಬಂದಿದ್ದ ಬ್ರಹ್ಮಹತ್ಯೆಯು ಹೊರಗೇ ನಿಂತಿತು. ಒಳಕ್ಕೆ ಹೋದಮೇಲೆ ಅದನ್ನು ಕಾಣಲಿಲ್ಲ. ಆದಕಾರಣ ಇವನು ಇದು ಪಾಪನಾಶಕವಾದ ವೈಷ್ಣವಕ್ಷೇತ್ರವೆಂದು ತಿಳಿದು ವಂದ್ಯನು, ಈಶ್ವರನೂ ಆದ ಲಕ್ಷ್ಮೀರಮಣನನ್ನು ನಿಯಮದಿಂದ ಸ್ತೋತ್ರಮಾಡಿದನು.

೩೯. ಜಗದೊಡೆಯ! ಸ್ವಾಮಿ! ಜಗತ್ತಿಗಾನಂದವನೀಯುವವನು, ವೇದವೇದ್ಯನು, ಮಧುವೆಂಬ ದೈತ್ಯಸಂಹಾರಕನು, ನರಸಿಂಹನು, ಪೀತಾಂಬರ ಧಾರಿಯು, ಗರುಡವಾಹನನು, ಲಕ್ಷ್ಮೀಪತಿಯು, ಆದಿದೇವನು.

೪೦. ಗೋಕುಲರಮಣನು, ಲಕ್ಷ್ಮೀಶನು, ರಾಧಾಪತಿಯು, ದೇವೇಶ ರಿಗಖಿಲೇಷ್ಟಾರ್ಥದಾತನು, ಕೃಷ್ಣನು, ದೇವವರ್ಯರಲ್ಲಿ ದಯಾಳುವು, ಮಾನಸಿಕ ದುಃಖನಾಶಕನು, ಕಮಲಾಕ್ಷಾಧಿಪತಿಯು, ಪ್ರಭುವು, ಪರೇಶನು.

ಯದುಕುಲತಿಲಕಾಬ್ಧಿವಾಸ ಶೌರೇ
ಕುಧರೋದ್ಧಾರವಿಧಾನದಕ್ಷಧನ್ವಿನ್ ।
ಕಲಿಕಲುಷಹರಾಂಘ್ರಿಪದ್ಮಪಾದ
ಗೃಣದಾತ್ಮಪ್ರದ ಕೂರ್ಮ ಕಶ್ಯಪೋತ್ಥ ॥ ೪೧ ॥

ಕುಕುಪತಿವನಪಾವಕಾಖಿಲೇಜ್ಯಾ
ಸ್ರಪ ಕಾಲಾಸಿತವಸ್ತ್ರ ಬುದ್ಧ ಕಲ್ಕಿನ್ ।
ಭವಭಯಹರ ಭಕ್ತವಶ್ಯ ಗೋಪ
ಪ್ರಣತೋದ್ಧಾರಕ ಪುಣ್ಯಕೀರ್ತಿನಾಮ ॥ ೪೨ ॥

ಧರಣಿಭರಹರಾಸುರಾರಿಪೂಜ್ಯ
ಪ್ರಕೃತೀಶ ಪ್ರಜಗನ್ನಿವಾಸ ರಾಮ ।
ಗುಣಗಣವಿಲಸಚ್ಚರಾಚರೇಶ
ತ್ರಿಗುಣಾತೀತ ಸನಾತನಾಗ್ರಪೂಜ್ಯ ॥
ನಿಜಜನಪರಿರಕ್ಷಿತಾಂತಕಾರೇ
ಕಮಲಾಂಘ್ರೇ ಕಮನೀಯ ಪದ್ಮನಾಭ ।
ಕಮಲಕರ ಕುಶೇಶಯಾಧಿವಾಸ
ಪ್ರಿಯಕಾಮೋನ್ಮಥನ ತ್ರ್ಯಧೀಶವಂದ್ಯ ॥ ೪೩ ॥

---

೪೧. ಯದುವಂಶತಿಲಕನು, ಸಮುದ್ರದಲ್ಲಿ ವಾಸಿಸುವವನು, ಶೌರಿಯು, ಗೋವರ್ಧನೋದ್ಧಾರನು, ವಿಧಾನಸಮರ್ಥನು, ಧನುರ್ಧಾರಿಯು, ಕಲಿ ಕಲ್ಮಷವನ್ನು ನಾಶಪಡಿಸುವಂತಹ ಪಾದಕಮಲಗಳುಳ್ಳವನು, ತನ್ನನ್ನು ಸ್ತುತಿಸುವ ಭಕ್ತರಿಗೆ ವಶ್ಯನು, ಕೂರ್ಮರೂಪವನ್ನು ತಾಳಿದವನು, ಕಶ್ಯಪಜಾತನು.

೪೨. ದುಷ್ಟ ಭೂಪಾಲರೆಂಬ ಅರಣ್ಯಕ್ಕೆ ಅಗ್ನಿಯಂತಿರುವವನು, ಸರ್ವರಿಗೂ ಪೂಜ್ಯನು, ರಕ್ತಪಾನಮಾಡಿದವನು, ಕಾಲರೂಪಿಯು, ಅಸಿತವಸ್ತ್ರಧಾರಿಯು, ಬುದ್ಧನು, ಕಲ್ಕಿಯು, ಸಂಸಾರ ಭಯನಾಶಕನು, ಭಕ್ತಪರಾಧೀನನು, ಗೋಪಾಲಕನು, ಪ್ರಣತೋದ್ಧಾರಕನು, ಪುಣ್ಯತೀರ್ಥಕರ ನಾಮಧೇಯವುಳ್ಳವನು.

೪೩. ಭೂಭಾರನಾಶಕನು, ಅಸುರಶತ್ರುಗಳಾದ ದೇವತೆಗಳಿಗೆ ಪೂಜ್ಯನು, ಪ್ರಕೃತಿನಿಯಾಮಕನು, ಜಗದಂತರ್ಯಾಮಿಯು, ರಾಮನು ಗುಣಸಮೂಹಗಳಿಂದ

ಅಘಹರ ರಘುನಾಥ ಯಾದವೇಶ
ಪ್ರಿಯಭೂದೇವ ಪರಾತ್ಪರಾಮರೇಜ್ಯ ।
ಹಲಧರ ದುರಿತಾಪಹ ಪ್ರಣಮ್ಯ
ತ್ರಿಗುಣವ್ಯಾಪ್ತ ಜಗತ್ತ್ರಿಕಾಲದಕ್ಷ ॥ ೪೪ ॥

ದನುಜಕುಲವಿನಾಶನೈಕಕರ್ಮ
ನ್ನನಘಾರೂಢಫಣೀಶ ಕಂಸಕಾಲ ।
ರವಿಶಶಿನಯನ ಪ್ರಗಲ್ಭಚೇಷ್ಟ
ಪ್ರಥುತಧ್ವಾಂತ ನವಾಂಬುದಾಭ ಮೇಶ ॥ ೪೫ ॥

---

ವಿರಾಜಮಾನವಾದ ಚರಾಚರ ಪ್ರಪಂಚಾಧಿಪತಿಯು, ಗುಣತ್ರಯಾತೀತನು, ಪುರಾತನನು, ಅಗ್ರಪೂಜ್ಯನು, ಭಕ್ತಜನಪರಿರಕ್ಷಕನು, ಅಂತಕವೈರಿಯು, ಪದ್ಮದಂತಿರುವ ಪಾದವುಳ್ಳವನು, ಸುಂದರನು, ಪದ್ಮನಾಭನು, ಪದ್ಮಹಸ್ತನು, ಪದ್ಮಾಧಿವಾಸನು, ಪ್ರಿಯನಾದ ಕಾಮನನ್ನು ಮಥಿಸಿದವನು, ತ್ರಿಲೋಕಾಧಿಪತಿವಂದ್ಯನು.

೪೪. ಪಾಪನಾಶಕನು, ರಘುನಾಥನು, ಯಾದವೇಶಪ್ರಿಯನು, ಭೂದೇವನು, ಉತ್ತಮೋತ್ತಮನು, ದೇವಪೂಜ್ಯನು, ಹಲಧರನ ದುರಿತಗಳನ್ನು ನಾಶಪಡಿಸಿದವನು, ವಂದ್ಯನು, ಗುಣತ್ರಯವ್ಯಾಪಕನು, ಕಾಲತ್ರಯದಲ್ಲಿಯೂ ಪ್ರಪಂಚನಿಯಾಮಕನು.

೪೫. ದಾನವಕುಲನಾಶ ಮುಖ್ಯಕರ್ತನು, ನಿರ್ಮಲನು, ಉನ್ನತನು, ಶೇಷಸ್ವಾಮಿಯು, ಕಂಸಸಂಹಾರಕನು, ಸೂರ್ಯಚಂದ್ರರೇ ನೇತ್ರವಾಗಿ ಉಳ್ಳವನು, ಉತ್ಕೃಷ್ಟಚೇಷ್ಟನು, ಅಜ್ಞಾನಾಂಧಕಾರ ನಾಶಕನು, ನವಮೇಘದೋಪಾದಿಯಲ್ಲಿ ಕಾಂತಿಯುಳ್ಳವನು, ರಮಾಪತಿಯು.

ಮಖ ಮಖಧರ ಮಾತೃಬದ್ಧಧಾಮ್ನ
ನವನೀತಪ್ರಿಯ ವಲ್ಲವೀಗಣೇಶ ।
ಅಘಬಕವೃಷಕೇಶಿಪೂತನಾಂತ
ತ್ರಿಶಿರೋವಾಲಿದಶಾಸ್ಯಭೇದಕಾರಿನ್ || ೪೬ ||

ನರಕಮುರವಿನಾಶ ಬಾಣದೋಃಕೃತ್
ತ್ರಿಪುರಾರೀಜ್ಯ ಸುದಾಮಮಿತ್ರ ಸೇವ್ಯ ।
ಭವತರಣಿವಹಿತ್ರಪಾದಪದ್ಮ
ಪ್ರಕಟೈಶ್ವರ್ಯ ಪುರಾಣ ಪೂರ್ಣಬಾಹೋ || ೪೭ ||

ಬಹುಜನಿಸುಕೃತಾಪ್ಯ ಮಂಗಲಾರ್ಹ
ಶ್ರುತಿವೇದ್ಯ ಶ್ರುತಿಧಾಮ ಶಾಂತ ಶುದ್ಧ ।
ತವಶ್ರೀವರದವರೇಣ್ಯಮಂಘ್ರಿಯುಗ್ಮಂ
ಶರಣಂ ಪ್ರಾಪ್ತಮಘಾದಿತ ಪ್ರಪಾಹಿ || ೪೮ ||

---

೪೬. ಯಜ್ಞರೂಪಿಯು, ಮಖಧಾರಿಯು, ತಾಯಿಯಿಂದ ಹಗ್ಗದಲ್ಲಿ ಕಟ್ಟಿಸಿಕೊಂಡವನು, ಬೆಣ್ಣೆಯನ್ನು ಪ್ರೀತಿಸುವವನು, ಸ್ತ್ರೀಸಮೂಹದೊಡೆಯನು, ಪಾಪಿಗಳಾದ ಬಕ, ವೃಷ, ಕೇಶಿ, ಪೂತನಿ ಇವರನ್ನು ಸಂಹರಿಸಿದವನು, ತ್ರಿಶಿರಸ್ಸು ವಾಲಿ ದಶಮುಖ (ರಾವಣ) ಇವರನ್ನು ಸೀಳಿದವನು.

೪೭. ನರಕ ಮತ್ತು ಮುರರ ಸಂಹಾರಕನು, ಬಾಣನನ್ನು ಖಂಡಿಸಿದವನು, ರುದ್ರಪೂಜ್ಯನು, ಸುದಾಮಸಖನು, ಸರ್ವಸೇವ್ಯನು, ಸಂಸಾರವೆಂಬ ಸಮುದ್ರವನ್ನು ದಾಟುವುದಕ್ಕೆ ನೌಕೆಯಂತಿರುವ ಸ್ವರ್ಣಮಯ ಪಾದಕಮಲಗಳುಳ್ಳವನು, ಪ್ರಕಟಿತವಾದ ಐಶ್ವರ್ಯವುಳ್ಳವನು, ಪುರಾತನನು, ಪೂರ್ಣಬಾಹುವು.

೪೮. ಬಹುಜನ್ಮಸುಕೃತಗಳಿಂದ ಪ್ರಾಪ್ಯನು, ಮಂಗಳಾರ್ಹನು, ವೇದವೇದ್ಯನು, ವೇದನಿಧಿಯು, ಶಾಂತನು ಮತ್ತು ಶುದ್ಧನೂ ಆಗಿರುವ ವಿಷ್ಣುವೇ! ನಿನಗೆ ಜಯ! ಜಯ!! ನಿನ್ನ ವರದಾಯಕವಾದ ಶ್ರೇಷ್ಠ ಪಾದಯುಗಳವನ್ನು ಶರಣುಹೊಂದಿರುವೆನು. ದೋಷರಹಿತನಾದ ಸ್ವಾಮಿಯೇ! ಸಂರಕ್ಷಿಸು.

ನ ಮಮ ಗದಿತಂ ಪುರಾಣಪುಂಸೋಽ
ನ್ಯದಿತಿ ಪ್ರಾರ್ಥನಯಾ ಪ್ರಸೀದ ಮೇದ್ಯ || ೪೯ ||

ಇತಿ ಸ್ತುತೋ ಜಗನ್ನಾಥೋ ಭಕ್ತ್ಯಾ ದೇವೇನ ಶಂಭುನಾ |
ಆವಿರ್ಬಭೂವ ಸಹಸಾ ಮಾಧವೋ ಭಕ್ತವತ್ಸಲಃ || ೫೦ ||

ತಂ ದೃಷ್ಟ್ವಾ ದಂಡವದ್ಭೂಮೌ ನಿಪಪಾತ ಹರೋ ಹರಿಂ |
ಪುನರುತ್ಥಾಯ ವಿಪ್ರೇಂದ್ರ ನನಾಮ ವಿಧೃತಾಂಜಲಿಃ || ೫೧ ||

ತಮುವಾಚ ಹೃಷೀಕೇಶಃ ಪ್ರಣತಂ ಭೂತನಾಯಕಂ |
ವರಂ ವೃಣು ಪ್ರದಾಸ್ಯೇಽಹಂ ಸಂತುಷ್ಟಸ್ತ್ಸ್ತೋತ್ರತಸ್ತವ || ೫೨ ||

ತಚ್ಛ್ರುತ್ವಾ ಭಗವದ್ವಾಕ್ಯಂ ಭೂತೇಶೋ ಬ್ರಹ್ಮವಧ್ಯಯಾ |
ಪೀಡಿತಾತ್ಮಾ ಜಗಾದೇದಂ ಭುಕ್ತಿಮುಕ್ತಿಪ್ರದಂ ಹರಿಂ || ೫೩ ||

---

೪೯. ಪುರಾಣಪುರುಷನಾದ ನಿನ್ನನ್ನು ಬಿಟ್ಟು ನನಗೆ ಬೇರೆ ಗತಿದಾಯಕವಾದುದಾವುದೂ ಇಲ್ಲ. ಆದಕಾರಣ ನಿನ್ನನ್ನು ಪ್ರಾರ್ಥಿಸುವೆನು. ಅದರಿಂದ ನೀನು ನನಗೆ ಪ್ರಸನ್ನನಾಗು.

೫೦. ಈ ರೀತಿಯಾಗಿ ಶಂಭುದೇವನಿಂದ ಭಕ್ತಿಪೂರ್ವಕವಾಗಿ ಸ್ತುತಿಸಲ್ಪಟ್ಟ, ಭಕ್ತವತ್ಸಲನಾದ ಮಾಧವನು ಕೂಡಲೇ ಆವಿರ್ಭವಿಸಿದನು.

೫೧. ಅವನನ್ನು ನೋಡಿ ಹರನು ಭೂಮಿಯಲ್ಲಿ ಸಾಷ್ಟಾಂಗನಮಸ್ಕಾರ ಮಾಡಿದನು. ಎದ್ದು ಕೈಮುಗಿದು ನಿಂತು ಪುನಃ ಹರಿಗೆ ನಮಸ್ಕರಿಸಿದನು.

೫೨. ಭೂತಪತಿಯಾದ, ನಮಸ್ಕಾರಮಾಡಿದ ಆ ಹರನನ್ನು ಕುರಿತು ಹೃಷೀಕೇಶನು "ನಿನ್ನ ಸ್ತೋತ್ರದಿಂದ ಪ್ರಸನ್ನನಾಗಿರುವೆನು, ನಿನಗೆ ಇಷ್ಟವಾದ ವರವನ್ನು ಕೇಳು ಕೊಡುವೆನು'' ಎಂದು ಹೇಳಿದನು.

೫೩. ಬ್ರಹ್ಮಹತ್ಯದಿಂದ ಪೀಡಿತನಾದ ಭೂತೇಶ್ವರನು ಭಗವಂತನ ಆ ಮಾತನ್ನು ಕೇಳಿ ಭುಕ್ತಿಮುಕ್ತಿಪ್ರದಾಯಕನಾದ ಹರಿಯನ್ನು ಕುರಿತು ಹೀಗೆ ಮಾತನಾಡಿದನು.

ಇಚ್ಛಾಮಿ ವಸಿತುಂ ಕ್ಷೇತ್ರೇ ತವ ಚಕ್ರಗದಾಧರ ।
ತ್ವತ್ ಕ್ಷೇತ್ರಸೀಮಾಬಾಹ್ಯಸ್ಥಾ ಬ್ರಹ್ಮಹತ್ಯಾ ಯದೀಕ್ಷ್ಯತೇ ॥ ೫೪ ॥

ಕ್ಷೇತ್ರದಾನೇನ ಕಾರುಣ್ಯಂ ಕುರು ಮೇ ಗರುಡಧ್ವಜ ।
ಮಮ ನಿರ್ಗಮನೇ ಬ್ರಹ್ಮವಧ್ಯಾ ಮಾಂ ಪುನರೇಷ್ಯತಿ ॥ ೫೫ ॥

ತ್ವತ್ ಕ್ಷೇತ್ರೇ ಸಂಸ್ಥಿತೋಽಹಂ ತು ಪೂಜಾಂ ಪ್ರಾಪ್ಸ್ಯೇ ಜಗತ್ರಯೇ ।
ಇತ್ಯುಕ್ತ್ವಾ ಹ್ಯಭವತ್ತೂಷ್ಣೀಂ ದೇವದೇವಂ ವೃಷಧ್ವಜಃ ॥ ೫೬ ॥

ಪ್ರತಿಪೇದೇ ಚ ತಥೇತಿ ಕ್ಷೀರಸಾಗರಜಾಪ್ರಿಯಃ ।
ತತಃ ಪ್ರಭೃತಿ ವಿಪ್ರೇಂದ್ರ ಶೈವಂ ಕ್ಷೇತ್ರಂ ನಿಗದ್ಯತೇ ॥ ೫೭ ॥

ಕ್ಷೇತ್ರಂ ತು ಕೇಶವಸ್ಯೇದಂ ಪುರಾಣಂ ಕವಯೋ ವಿದುಃ ।
ಕೃಪಯಾ ಸಂಪರೀತಸ್ಯ ಮಾಧವಸ್ಯ ದ್ವಿಜೋತ್ತಮ ॥ ೫೮ ॥

---

೫೪. ಚಕ್ರಗದೆಗಳನ್ನು ಧರಿಸಿರುವ ಮಾಧವನೇ! ನಿನ್ನ ಕ್ಷೇತ್ರದ ಎಲ್ಲೆಯ ಹೊರಗೆ ಬ್ರಹ್ಮಹತ್ಯೆಯು ನನನ್ನು ಕಾಯುತ್ತಿದೆಯಾದಕಾರಣ ನಾನು ಈ ಕ್ಷೇತ್ರದಲ್ಲಿಯೇ ಇರಬೇಕೆಂದು ಬಯಸುವೆನು.

೫೫. ಗರುಡಧ್ವಜನೇ! ಈ ಕ್ಷೇತ್ರದಲ್ಲಿ ನನಗೆ ಸ್ಥಾನಕೊಟ್ಟು ದಯೆ ಮಾಡು. ನಾನು ಇಲ್ಲಿಂದ ಹೊರಗೆ ಹೊರಟರೆ ಬ್ರಹ್ಮಹತ್ಯೆಯು ಪುನಃ ನನ್ನನ್ನು ಬಾಧಿಸುತ್ತದೆ.

೫೬. ನಾನು ನಿನ್ನ ಕ್ಷೇತ್ರದಲ್ಲಿದ್ದು ಮೂರು ಲೋಕಗಳಲ್ಲಿಯೂ ಪೂಜೆಯನ್ನು ಹೊಂದುವೆನು. ಎಂಬುದಾಗಿ ದೇವದೇವನಾದ ಮಾಧವನನ್ನು ಕುರಿತು ವೃಷಧ್ವಜನು ಹೇಳಿ ಸುಮ್ಮನಾದನು.

೫೭. ಲಕ್ಷ್ಮೀಪತಿಯಾದ ಭಗವಂತನು ಹಾಗೆಯೇ ಆಗಲೆಂದು ಹೇಳಿದನು. ವಿಪ್ರೇಂದ್ರನೇ! ಆಗಿನಿಂದಲೂ ಈ ಕಾಶಿಯು ಶೈವಕ್ಷೇತ್ರವೆಂದು ಪ್ರಸಿದ್ಧವಾಗಿದೆ.

೫೮-೫೯. ಪೂರ್ವದಲ್ಲಿ ಈ ಕ್ಷೇತ್ರವು ಕೇಶವಕ್ಷೇತ್ರವಾಗಿತ್ತೆಂದು ಜ್ಞಾನಿಗಳು ಹೇಳಿರುವರು. ದ್ವಿಜೋತ್ತಮನೇ! ಕೃಪಾಪೂರ್ಣನಾದ ಮಾಧವನ ಕಣ್ಣು

ನೇತ್ರಾಭ್ಯಾಂ ನಿರ್ಗತಂ ವಾರಿ ತೇನ ಬಿಂದುಸರೋಽಭವತ್ ।
ಮಾಧವಸ್ಯಾಜ್ಞಯಾ ತತ್ರ ಸಸ್ನೌ ದೇವೋ ವೃಷಧ್ವಜಃ ॥ ೫೯ ॥

ಸ್ನಾತಮಾತ್ರೇ ಹರೇ ತತ್ತು ಕಪಾಲಂ ಪಾಣಿತೋಽಪತತ್ ।
ಕಪಾಲಮೋಚನಂ ನಾಮ ತತ್ತೀರ್ಥಂ ಖ್ಯಾತಿಮಾಗತಂ ॥ ೬೦ ॥

ಬಿಂದುಮಾಧವನಾಮಾಸೌ ದತ್ವಾ ಸ್ವಂ ಧಾಮ ಶೂಲಿನೇ ।
ಭಕ್ತಿಭಾವೇನ ಶಂಭುಸ್ತಂ ನಿಬದ್ಧಸ್ತತ್ರ ಸಂಸ್ಥಿತಂ ॥ ೬೧ ॥

ಯಂ ತು ಬ್ರಹ್ಮಾದಯೋ ದೇವಾಃ ಸ್ವಸ್ಥಾಃ ಪಶ್ಯಂತಿ ಸರ್ವದಾ ।
ಸೂರ್ಯಾಯುತಸಮಪ್ರಖ್ಯಂ ದಿಗಂಬರನಿಷೇವಿತಂ ॥ ೬೨ ॥

ವಿಘ್ನಾನಿ ಶೂಲಿನಾ ಕಾಂತ ಕೃತಾನ್ಯಸ್ಯ ನಿಷೇವಣೇ ।
ಯೈರ್ವಿಘ್ನೈರಥ ಮುಕ್ತಾಸ್ತು ಸ್ತುತ್ವಾ ವಿಷ್ಣುಂ ಶಿವಾರ್ಚಕಾಃ ॥ ೬೩ ॥

---

ಗಳಿಂದ ನೀರು ಸುರಿಯಿತು. ಆದರಿಂದ ಬಿಂದುಸರೋವರವು ಹುಟ್ಟಿತು. ಮಾಧವನ ಅಪ್ಪಣೆಯುಪ್ರಕಾರ ವೃಷಧ್ವಜದೇವನು ಅಲ್ಲಿ ಸ್ನಾನಮಾಡಿದನು.

೬೦. ಅವನು ಅಲ್ಲಿ ಸ್ನಾನಮಾಡಿದ ಕೂಡಲೇ ಅವನ ಕೈಗೆ ಅಂಟಿಕೊಂಡಿದ್ದ ಕಪಾಲವು ಕೈಯಿಂದ ಕೆಳಗೆ ಬಿದ್ದಿತು. ಆದಕಾರಣ ಆ ತೀರ್ಥವು ಕಪಾಲಮೋಚನತೀರ್ಥವೆಂದು ಪ್ರಸಿದ್ಧವಾಯಿತು.

೬೧-೬೩. ಬಿಂದುಮಾಧವನೆಂಬ ಈ ಕ್ಷೇತ್ರದೇವನು ತನ್ನ ಸ್ಥಾನವನ್ನು ಈಶ್ವರನಿಗೆ ಕೊಟ್ಟನು. ಶಂಭುವು ಅಲ್ಲಿದ್ದ ಅವನನ್ನು ಭಕ್ತಿಪಾಶದಿಂದ ಬಂಧಿಸಿದನು.

ಕಾಂತನೇ ! ಹತ್ತುಸಾವಿರ ಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ, ದಿಗಂಬರನಿಂದ ಸೇವಿಸಲ್ಪಟ್ಟ ಯಾವದೇವನನ್ನು ಬ್ರಹ್ಮಾದಿದೇವತೆಗಳು ಸ್ವಸ್ಥರಾಗಿ ಯಾವಾಗಲೂ ನೋಡುತ್ತಿರುವರೋ, ಯಾವದೇವನ ಸೇವೆಮಾಡಿದರೆ ಶೂಲಿಯಿಂದ ಕೃತವಾದ ವಿಘ್ನಗಳು ನಾಶವಾಗುವುವೋ ಅಂತಹ ವಿಷ್ಣುವನ್ನು ಸ್ತೋತ್ರಮಾಡಿ ಶಿವಾರ್ಚಕರು ಆ ವಿಘ್ನಗಳಿಂದ ಪಾರಾಗುವರು.

ಸರ್ವೇ ಲೋಕಾಃ ಸ್ಥಿತಾ ಹ್ಯತ್ರ ಶಿವಃ ಕಾಶೀತಿ ಚಿಂತಕಾಃ ।
ಶಿವಸ್ಯ ಚಿಂತನಾದ್ವಿಪ್ರ ಶೈವಾಃ ಸರ್ವೇ ನಿರಾಕುಲಾಃ ॥ ೬೪ ॥

ಪ್ರಯಾಂತಿ ಶಿವಲೋಕಂ ವೈ ಜರಾಮೃತ್ಯುವಿವರ್ಜಿತಂ ।
ಬಹುಪುಣ್ಯಯುತಾಃ ಸಂತೋ ನಿವಸಂತ್ಯತ್ರ ನೀರುಜಃ ॥ ೬೫ ॥

ಯಜ್ಞಶಿಷ್ಟಾಶಿನಃ ಕಾಶ್ಯಾಂ ಕಾಂತ ಬುದ್ಧಿಸಮನ್ವಿತಾಃ ।
ನಾತ್ರ ಸ್ನಾನಂ ಪ್ರಶಂಸಂತಿ ನ ಜಪಂ ನ ಸುರಾರ್ಚನಂ ॥ ೬೬ ॥

ನಾಪಿ ದಾನಂ ದ್ವಿಜಶ್ರೇಷ್ಠ ಮುಕ್ತ್ಯೈಕಂ ದೇಹಪಾತನಂ ।
ಮೃತ್ಯುಂ ಪ್ರಾಪ್ಯ ನರಃ ಕಾಮಂ ಕೃತಕೃತ್ಯೋ ಭವೇದ್ಧ್ರುವಂ ॥ ೬೭ ॥

ಸೇಯಮಾಸಾದಿತಾ ವಿಪ್ರ ಪುರೀ ಪ್ರಾಸಾದಸಂಕುಲಾ ।
ಭೋಗಿನಾಮಪಿ ಮೋಕ್ಷಾಯ ಕಿಂ ಪುನರ್ವ್ರತಧಾರಿಣಾಂ ॥ ೬೮ ॥

---

೬೪-೬೭. ಇಲ್ಲಿ ಎಲ್ಲಾ ಲೋಕಗಳೂ ಸನ್ನಿಹಿತವಾಗಿವೆ. "ಶಿವ, ಕಾಶೀ" ಎಂಬುದಾಗಿ ಧ್ಯಾನಿಸುವ ಸಕಲ ಶಿವಭಕ್ತರೂ, ಶಿವನ ಧ್ಯಾನಮಾಡಿ ದುದರಿಂದ ವ್ಯಸನರಹಿತರಾಗಿ ಜರಾಮರಣಗಳಿಲ್ಲದ ಶಿವಲೋಕಕ್ಕೆ ಹೋಗುವರು.

ಈ ಕಾಶಿಯಲ್ಲಿ ಬಹುಪುಣ್ಯಮಾಡಿದ, ಯಜ್ಞಶೇಷಭೋಕ್ತೃಗಳಾದ, ಸಮೃದ್ಧಿಯಿಂದ ಕೂಡಿದ ಸಜ್ಜನರು ರೋಗವಿಲ್ಲದೇ ವಾಸಿಸುತ್ತಾರೆ.

ದ್ವಿಜಶ್ರೇಷ್ಠನೇ! ಇಲ್ಲಿ ಮಾಡುವ ಸ್ನಾನ, ಜಪ, ದೇವತಾರ್ಚನೆ, ದಾನ ಇವುಗಳನ್ನು ಜ್ಞಾನಿಗಳು ಉತ್ತಮವೆಂದು ಹೊಗಳುವುದಿಲ್ಲ. ಮತ್ತೇನೆಂದರೆ ಈ ಕ್ಷೇತ್ರದಲ್ಲಿ ಮರಣವು ಸಂಭವಿಸಿದರೆ ಅದು ಅತ್ಯುತ್ತಮವು. ಇಲ್ಲಿ ಮನುಷ್ಯನು ಮರಣ ಹೊಂದಿದರೆ ಖಂಡಿತವಾಗಿಯೂ ಅವನು ಕೃತಾರ್ಥನಾಗುವನು.

೬೮. ಬ್ರಾಹ್ಮಣನೇ! ಉಪ್ಪರಿಗೆಮನೆಗಳಿಂದ ತುಂಬಿದ ಅಂತಹ ಈ ಕಾಶೀಕ್ಷೇತ್ರವು ಅಲ್ಲಿ ವಾಸಿಸುವ ಭೋಗಿಗಳಿಗೂ ಸಹ ಮೋಕ್ಷಸಾಧಕವಾಗಿರುವಾಗ ಅಲ್ಲಿ ವ್ರತವನ್ನಾಚರಿಸುವವರಿಗೆ ಮೋಕ್ಷವಾಗುತ್ತದೆಯೆಂದು ಹೇಳಬೇಕಾದುದೇನು?

ನಿಕ್ಷಿಪ್ಯತಾಮಿಯಂ ಬಾಲಾ ಕಾಶೀಶಸ್ಯೇಹ ಮಂದಿರೇ ।
ವಿಯೋಜಿತಾ ತು ಯಾ ಪೂರ್ವಂ ತೇನ ದುಷ್ಟೇನ ರಕ್ಷಸಾ ॥ ೭೯ ॥

ಆತ್ಮನಃ ಸುರತಾರ್ಥಾಯ ಕುಮಾರೀ ನಿಯಮಾನ್ವಿತಾ ।
ಏಷ ಪ್ರಭಾವೋಽಭಿಹಿತಃ ಕ್ಷೇತ್ರಸ್ಯಾಸ್ಯ ದ್ವಿಜೋತ್ತಮ ॥ ೭೦ ॥
ವಿನಶ್ಯಂತೀಹ ಕರ್ಮಾಣಿ ಶುಭಾನ್ಯಪ್ಯಶುಭಾನಿ ಚ ।
ಭೂತಭವ್ಯಭವಿಷ್ಯಾಣಿ ಜ್ಞಾನಾಜ್ಞಾನಕೃತಾನಿ ಚ ॥ ೭೧ ॥

ಏಷಾ ಪುರೀ ಕರ್ಮವಿನಾಶನಾಯ
ಕೃಷ್ಣೇನ ಪೂರ್ವಂ ಹಿ ವಿನಿರ್ಮಿತಾಭೂತ್ ।
ಯಸ್ಯಾಂ ಮೃತಾ ದುಃಖಮನಂತಮುಗ್ರಂ
ಭುಂಜಂತಿ ಮರ್ತ್ಯಾ ಯಮಯಾತನಾಂ ನ ಹಿ ॥ ೭೨ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಕಾಷ್ಠೀಲೋಪಾಖ್ಯಾನೇ ರಾಕ್ಷಸೀಚರಿತೇ ಕಾಶೀ
ವರ್ಣನಂ ನಾಮ ಏಕೋನತ್ರಿಂಶೋಽಧ್ಯಾಯಃ

---

೬೯-೭೦. ದ್ವಿಜೋತ್ತಮನೇ! ಈ ರೀತಿಯಾಗಿ ಈ ಕ್ಷೇತ್ರ ಮಹಿಮೆಯು ಉಕ್ತವಾಗಿದೆ. ಪೂರ್ವದಲ್ಲಿ ದುಷ್ಟನಾದ ಆ ರಾಕ್ಷಸನು ತನ್ನ ಸಂಭೋಗಕ್ಕೋಸ್ಕರವಾಗಿ ನಿಯಮ ಯುಕ್ತಳಾದ ಈ ಬಾಲಿಕೆಯನ್ನು ಯಾವ ಸ್ಥಾನದಿಂದ ಅಗಲಿಸಿದ್ದನೋ ಅಂತಹ ಕಾಶಿರಾಜನ ಈ ಮಂದಿರದಲ್ಲಿ ಇವಳನ್ನು ಬಿಡು.

೭೧. ಈ ಕ್ಷೇತ್ರದಲ್ಲಿ ತಿಳಿದು ಅಥವಾ ತಿಳಿಯದೆಯಾದರೂ ಮಾಡಿದ, ಹಿಂದೆಮಾಡಿದ, ಮುಂದೆಮಾಡುವ, ಈಗ ಮಾಡುತ್ತಿರುವ ಶುಭಾಶುಭಕರ್ಮಗಳೆಲ್ಲವೂ ನಾಶವಾಗುತ್ತವೆ.

೭೨. ಈ ಪಟ್ಟಣವು ಕರ್ಮನಾಶಕ್ಕೋಸ್ಕರವಾಗಿ ಪೂರ್ವದಲ್ಲಿ ಕೃಷ್ಣನಿಂದ ರಚಿಸಲ್ಪಟ್ಟಿದೆ. ಇದರಲ್ಲಿ ಸತ್ತ ಮನುಷ್ಯರು ಭಯಂಕರವು, ಅನಂತವೂ ಆದ ದುಃಖವನ್ನೂ, ಯಮಯಾತನೆಯನ್ನೂ ಸಹ ಅನುಭವಿಸುವುದಿಲ್ಲ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಕಾಷ್ಠೀಲೋಪಾಖ್ಯಾನಕ್ಕೆ ಸೇರಿದ ರಾಕ್ಷಸೀಚರಿತ್ರೆಯಲ್ಲಿ ಕಾಶೀ
ವರ್ಣನೆಯೆಂಬ ಇಪ್ಪತ್ತೊಂಬತ್ತನೆಯ ಅಧ್ಯಾಯವು
ಮುಗಿದುದು.

## ವಿಷಯಸಂಗ್ರಹ

ರಾಕ್ಷಸಿಯು ಆನೆಯ ರೂಪವನ್ನುತಾಳಿ ಬ್ರಾಹ್ಮಣ ಮತ್ತು ಕನ್ಯೆಯನ್ನು ಹೊತ್ತುಕೊಂಡು ಮೂರು ಮುಹೂರ್ತಗಳಲ್ಲಿ ಕಾಶಿಗೆ ಬಂದು ಅಲ್ಲಿ ತನ್ನ ಗಂಡ ನಿಗೆ ಕಾಶೀಮಾಹಾತ್ಮ್ಯೆಯನ್ನು ವಿಸ್ತಾರವಾಗಿ ಹೇಳಿದಳು. ಈ ಕಾಶೀಕ್ಷೇತ್ರವು ಪೂರ್ವದಲ್ಲಿ ವೈಷ್ಣವಕ್ಷೇತ್ರವಾಗಿದ್ದಿತು. ಒಂದಾನೊಂದು ದಿನದಲ್ಲಿ ಈಶ್ವರನು ಬ್ರಹ್ಮನನ್ನು ನೋಡಬೇಕೆಂದು ಅವನ ಬಳಿಗೆ ಹೋಗಲು ಆಗ ಅವನು ನಾಲ್ಕು ಮುಖಗಳಿಂದ ವೇದಪಾಠಮಾಡುತ್ತಿದ್ದುದನ್ನು ಕಂಡು, ಐದು ಮುಖಗಳುಳ್ಳ ಅವನ ವಿಭವವನ್ನು ಸಹಿಸಲಾರದೆ ಅವನ ಐದನೆಯ ಮುಖವನ್ನು ಕತ್ತರಿಸಿ ದನು ಆ ಕಪಾಲವು ಇವನ ಕೈಯಲ್ಲಿ ಬಿದ್ದು ಅಂಟಿಕೊಂಡಿತು. ಅದನ್ನು ಬಿಡಿಸಿಕೊಳ್ಳಬೇಕೆಂದು ಎಷ್ಟು ಪ್ರಯಾಸಪಟ್ಟರೂ ಸಾಧ್ಯವಾಗದಿರಲು ಈಶ್ವರನು ವಿಷ್ಣುವನ್ನು ಸ್ತೋತ್ರಮಾಡಿ ತನ್ನ ಸ್ಥಿತಿಯನ್ನು ಹೇಳಿಕೊಂಡನು. ವಿಷ್ಣುವು ಪ್ರಸನ್ನನಾಗಿ ಬ್ರಹ್ಮಹತ್ಯೆಯು ಮಹಾಪಾತಕವು, ಅದನ್ನು ಅನುಭವಿಸಿಯೇ ತೀರಬೇಕು. ನೀನು ಹನ್ನೆರಡು ವರ್ಷಗಳ ಕಾಲ ತೀರ್ಥಕ್ಷೇತ್ರಯಾತ್ರೆ ಮಾಡ ಬೇಕು. ಸಕಲ ತೀರ್ಥಗಳಲ್ಲಿಯೂ ಎಡಗೈಯನ್ನು ತೊಳೆದುಕೊಂಡು ಈ ಕಪಾ ಲದಲ್ಲಿ ಭಿಕ್ಷೆಯನ್ನು ಸ್ವೀಕರಿಸುತ್ತಾ ಒಂದೇಸ್ಥಳದಲ್ಲಿ ನಿಲ್ಲದೇ ಸಂಚಾರಮಾಡು ಎಂಬದಾಗಿ ಹೇಳಿದನು. ಅನಂತರ ಈಶ್ವರನು ಹರಿಗೆ ನಮಸ್ಕಾರಮಾಡಿ ತೀರ್ಥ ಗಳ ಯಾತ್ರೆಗೆ ಹೊರಟು ಕ್ರಮವಾಗಿ ಕಾಶಿಗೆ ಬಂದನು. ಆ ಕ್ಷೇತ್ರದ ಎಲ್ಲೆ ಯೊಳಕ್ಕೆ ಪ್ರವೇಶಮಾಡುವಾಗ ಅದರ ಹೊರಭಾಗದಲ್ಲಿಯೇ ತನ್ನನ್ನು ಬೆನ್ನು ಹತ್ತಿದ್ದ ಬ್ರಹ್ಮಹತ್ಯೆಯು ನಿಂತಿತು. ಅವನು ಒಳಕ್ಕೆ ಬಂದು ಮಾಧವ ಸರೋ ವರದಲ್ಲಿ ಸ್ನಾನಮಾಡಿದ ಕೂಡಲೇ ಕಪಾಲವು ಕೈಯಿಂದ ಕೆಳಕ್ಕೆ ಬಿದ್ದಿತು. ತರುವಾಯು, ಶಂಭುವು ಕ್ಷೇತ್ರಮೂರ್ತಿಯಾದ ಬಿಂದುಮಾಧವನನ್ನು ತನಗೆ ಅಲ್ಲಿ ಸ್ಥಳವನ್ನು ಕೊಡಬೇಕೆಂದು ಪ್ರಾರ್ಥಿಸಲು ಅವನು ಸ್ಥಾನವನ್ನು ಅವನಿಗೆ ಕೊಟ್ಟನು. ಅಂದಿನಿಂದ ಕಾಶಿಯು ಶೈವಕ್ಷೇತ್ರವೆಂದು ಪ್ರಸಿದ್ಧವಾಯಿತು. ಅಲ್ಲಿ ಮೃತರಾದವರು ಯಮಯಾತನೆಗೆ ಸಿಲುಕದೆ ಮುಕ್ತರಾಗುವರು-ಮುಂತಾಗಿ ಕಾಶಿಯ ಮಹಾತ್ಮ್ಯೆಯು ವರ್ಣಿಸಲ್ಪಟ್ಟಿದೆ.

# ತ್ರಿಂಶೋಽಧ್ಯಾಯಃ

—

**ಕಾಷ್ಠೀಲೋವಾಚ**

**ಭಾರ್ಯಾಯಾಸ್ತದ್ವಚಃ ಶ್ರುತ್ವಾ ರಾಕ್ಷಸ್ಯಾ ಧರ್ಮಸಂಹಿತಂ ।**
**ಪೃಷ್ಠಾತ್ಕರೇಣುರೂಪಿಣ್ಯಾಃ ಸಕನ್ಯೋಽವಾತರದ್ದ್ವಿಜಃ ॥ ೧ ॥**

**ಅವತೀರ್ಣೇ ದ್ವಿಜೇ ಸಾಭೂತ್ ಸುರೂಪಾ ಪ್ರಮದಾ ಪುನಃ ।**
**ಕ್ಷಪಾಚರೀ ಕ್ಷಪಾನಾಥವಕ್ತ್ರಾ ಪೀನೋನ್ನತಸ್ತನೀ ॥ ೨ ॥**

**ಸಾ ಕುಮಾರೀ ತತಃ ಪ್ರಾಪ್ಯ ನಗರಂ ಸ್ವಪಿತುಃ ಶುಭಂ ।**
**ಬಾಹ್ಯರಕ್ಷಾಸ್ಥಿತಂ ಪ್ರಾಪ್ತಂ ಪುರಪಾಲಮುವಾಚ ಹ ॥ ೩ ॥**

---

## ಮೂವತ್ತನೆಯ ಅಧ್ಯಾಯವು.

೧. ಕಾಷ್ಠೀಲೆಯು ಹೇಳಿತು :—ದ್ವಿಜನು ಪತ್ನಿಯಾದ ರಾಕ್ಷಸಿಯು ಹೇಳಿದ ಧರ್ಮಯುಕ್ತವಾದ ಆ ಮಾತನ್ನು ಕೇಳಿ ಆನೆಯ ರೂಪವನ್ನು ಧರಿಸಿದ ಆಕೆಯಮೇಲಿಂದ ಕನ್ಯೆಯ ಸಹಿತನಾಗಿ ಇಳಿದನು.

೨. ದ್ವಿಜನು ಆನೆಯ ಮೇಲಿಂದ ಇಳಿದ ಕೂಡಲೇ ಆ ರಾಕ್ಷಸಿಯು ಪುನಃ ಚಂದ್ರವದನೆಯು, ಪುಷ್ಟ ಮತ್ತು ಉನ್ನತವಾದ ಸ್ತನಗಳುಳ್ಳವಳೂ ಆದ ಸುಂದರಸ್ತ್ರೀರೂಪವನ್ನು ತಾಳಿದಳು.

೩. ತರುವಾಯ ಆ ರಾಜಕುಮಾರಿಯು ತನ್ನ ತಂದೆಯ ಶುಭನಗರಕ್ಕೆ ಬಂದು ಪಟ್ಟಣದ ಹೊರಗೆ ಪುರರಕ್ಷಣೆಗಾಗಿ ನಿಯಮಿತನಾದ ಪುರಪಾಲನನ್ನು ಕುರಿತು ಈ ರೀತಿ ಹೇಳಿದಳು.

ಗಚ್ಛ ತ್ವಂ ನೃಪತೇಃ ಪಾರ್ಶ್ವಂ ಪಿತುರ್ಮಮ ಪುರಾಧಿಪ ।
ಬ್ರೂಹಿ ಮಾಂ ಸಮನುಪ್ರಾಪ್ತಾಂ ರತ್ನಶಾಲಾಂ ಪುರಾ ಹೃತಾಂ ॥ ೪ ॥

ರತ್ನಾವಲೀಂ ರತ್ನಭೂತಾಂ ಸುದ್ಯುಮ್ನಸ್ಯ ಮಹೀಕ್ಷಿತುಃ ।
ತಲ್ಪಸ್ಥಾ ರಕ್ಷಸಾ ರಾತ್ರೌ ಸ್ವಪುರಸ್ಯಾಹೃತಾ ದ್ವಿಜ ॥ ೫ ॥

ಪುನಃ ಸಾ ಸಮನುಪ್ರಾಪ್ತಾ ಜೀವಮಾನಾಽಕ್ಷತಾ ಪಿತಃ ।
ಸಮಾಶ್ವಸಿಹಿ ಶೋಕಂ ತ್ವಂ ಮಾ ಕೃಥಾ ಮತ್ಕೃತೇ ಕ್ವಚಿತ್ ॥ ೬ ॥

ಅವಿಪ್ಲುತಾಸ್ಮಿ ರಾಜೇಂದ್ರ ಗಾಂಗಾ ಆಪ ಇವಾಮಲಾಃ ।
ತವ ಕೀರ್ತಿಕರೀ ತದ್ವನ್ಮಾತುಃ ಸೌಶೀಲ್ಯಸೂಚಿಕಾ ॥ ೭ ॥

ತತ್ಕುಮಾರೀವಚಃ ಶ್ರುತ್ವಾ ಪುರಪಾಲಸ್ತ್ವರಾನ್ವಿತಃ ।
ಸುಬಾಹುರಿತಿ ವಿಖ್ಯಾತಃ ಪ್ರಾಪ್ತಃ ಸುದ್ಯುಮ್ನಸನ್ನಿಧೌ ॥ ೮ ॥

---

೪-೭. ಪುರಪಾಲನೇ! ನೀನು ತಂದೆಯಾದ ದೊರೆಯ ಬಳಿಗೆ ಹೋಗಿ ಹೀಗೆ ಹೇಳು:—ಪೂರ್ವದಲ್ಲಿ ರತ್ನಶಾಲೆಯಲ್ಲಿ ರಾಕ್ಷಸನಿಂದ ಅಪಹರಿಸಲ್ಪಟ್ಟಿದ್ದ, ರತ್ನಪ್ರಾಯಳಾದ, ರತ್ನಾವಳಿಯೆಂಬ ನಾನು ಬಂದಿರುವೆನು. ರಾತ್ರಿ ಕಾಲದಲ್ಲಿ ನನ್ನ ಅಂತಃಪುರದಲ್ಲಿ ಹಾಸಿಗೆಯ ಮೇಲೆ ಮಲಗಿದ್ದಾಗ ನಾನು ರಾಕ್ಷಸನಿಂದ ಒಯ್ಯಲ್ಪಟ್ಟಿದ್ದೆನು. ಅಂತಹ ನಾನು ಅವನಿಂದ ಭೋಗಿಸಲ್ಪಡದೆ ಬದುಕಿ ಪುನಃ ಬಂದಿರುವೆನು ತಂದೆಯೇ! ಸಮಾಧಾನವಾಗು, ನನಗಾಗಿ ದುಃಖಪಡಬೇಡ; ರಾಜೇಂದ್ರನೇ! ಗಂಗೋದಕವು ಪರಿಶುದ್ಧವಾಗಿರುವಂತೆ ನಾನು ಪರಿಶುದ್ಧಳಾಗಿರುವೆನು, ನಿನಗೂ ತಾಯಿಗೂ ಸೌಶೀಲ್ಯಸೂಚಕವಾದ ಯಶಸ್ಸನ್ನುಂಟುಮಾಡಿರುವೆನು, ಎಂದು ಹೇಳಿದಳು.

೮-೧೦. ಕುಮಾರಿಯ ಆ ಮಾತನ್ನು ಕೇಳಿ ಸುಬಾಹುವೆಂದು ಪ್ರಸಿದ್ಧನಾದ ಪುರಪಾಲನು ಬೇಗ ಸುದ್ಯುಮ್ನರಾಜನ ಸನ್ನಿಧಿಗೆ ಬಂದು ನಮಸ್ಕಾರಮಾಡಲು ರಾಜನು ಅವನನ್ನು ಪ್ರಶ್ನಿಸಿದನು.

ಕೃತಃ ಪ್ರಣಾಮಃ ಸಂಪೃಷ್ಟಃ ಪ್ರಾಹ ರಾಜಾನಮಾದರಾತ್ ।
ರಾಜನ್ನುಪಾಗತಾ ನಷ್ಟಾ ದುಹಿತಾ ತವ ಮಾನದ ॥ ೯ ॥

ರತ್ನಾವಲೀತಿ ವಿಖ್ಯಾತಾ ಸಸ್ತ್ರೀಕಾ ದ್ವಿಜಸಂಯುತಾ ।
ಪುರಬಾಹ್ಯೇ ಸ್ಥಿತಾ ದೃಷ್ಟ್ವಾ ಮಯಾ ಜ್ಞಾತಾ ನ ಚಾಭವತ್ ॥ ೧೦ ॥

ತಯಾಹಂ ಪ್ರೇರಿತಃ ಪ್ರಾಗಾಂ ತ್ವಾಂ ವಿಜ್ಞಾಪಯಿತುಂ ಪ್ರಭೋ ।
ಅವಿಪ್ಲುತಾಹಂ ವದತಿ ಮಾಂ ಜಾನಾತು ಸಮಾಗತಾಂ ॥ ೧೧ ॥

ಪಿತರಂ ಮಮ ಸತ್ಕೃತ್ಯೈ ನಾತ್ರ ಕಾರ್ಯಾ ವಿಚಾರಣಾ ।
ತದದ್ಭುತಂ ವಚಃ ಶ್ರುತ್ವಾ ಪುಣ್ಯಂ ಲಾಲಪ್ಯ ತತ್ಕ್ಷಣಾತ್ ॥ ೧೨ ॥

ಸಾಮಾತ್ಯಃ ಸಕಲತ್ರಸ್ತು ಸದ್ವಿಜೋ ನಿರ್ಯಯೌ ನೃಪಃ ।
ಸ ತು ಗತ್ವಾ ಪುರಾದ್ಬಾಹ್ಯೇ ಗಂಗಾತೀರೇ ವ್ಯವಸ್ಥಿತಾಂ ॥ ೧೩ ॥

---

ಆಗ ಪುರಪಾಲನು ದೊರೆಯೇ! ಕೈತಪ್ಪಿಹೋಗಿದ್ದ ರತ್ನಾವಳಿಯೆಂದು ವಿಖ್ಯಾತಳಾದ ನಿನ್ನ ಮಗಳು ದ್ವಿಜದಂಪತಿಗಳ ಸಹಿತಳಾಗಿ ಬಂದಿರುವಳು- ಪಟ್ಟಣದ ಹೊರಗೆ ಇದ್ದ ಆಕೆಯನ್ನು ನೋಡಿ ಮೊದಲು ನಾನು ಗುರ್ತಿಸಲಿಲ್ಲ.

೧೧-೧೩. ಪ್ರಭುವೇ! ಆ ರತ್ನಾವಳಿಯಿಂದ ಪ್ರೇರಿಸಲ್ಪಟ್ಟ ನಾನು ನಿನಗೆ ಈ ಸಮಾಚಾರವನ್ನು ವಿಜ್ಞಾಪಿಸಲು ಬಂದಿರುವೆನು.

ಅವಳು, ನಾನು ಪರಿಶುದ್ಧಳಾಗಿರುವೆನು, ನನ್ನ ತಂದೆಯನ್ನು ಸತ್ಕರಿಸಲು ಬಂದಿರುವೆನು ಈ ವಿಷಯದಲ್ಲಿ ಸಂಶಯಪಡಬೇಕಾದುದಿಲ್ಲ ಎಂಬುದಾಗಿ ಸ್ವಾಮಿಗೆ ತಿಳಿಸಬೇಕು ಎಂದು ಹೇಳಿರುವಳು. ಎಂದು ಅರಿಕೆಮಾಡಿದನು.

ಆಶ್ಚರ್ಯಕರವಾದ ಆ ಮಾತನ್ನು ಕೇಳಿ ಪುಣ್ಯವನ್ನು ಕೊಂಡಾಡಿ ಕೂಡಲೇ ದೊರೆಯು ಮಂತ್ರಿ, ತನ್ನ ಪತ್ನೀ ಮತ್ತು ದ್ವಿಜರ ಸಹಿತನಾಗಿ ಹೊರಟನು. ಅವನು ಪಟ್ಟಣದ ಹೊರಕ್ಕೆ ಬಂದು ಗಂಗಾತೀರದಲ್ಲಿದ್ದ, ಸೂರ್ಯನಂತೆ ಹೊಳೆ

ಅಪಶ್ಯದ್ಭಾಸ್ಕರಾಕಾರಾಂ ಸಸ್ತ್ರೀಕದ್ವಿಜಸಂಯುತಾಂ ।
ಸಹಜೇನೈವ ವೇಷೇಣ ಭೂಷಿತಾಂ ಭೂಷಣಪ್ರಿಯಾಂ ॥ ೧೪ ॥

ಅಮ್ಲಾನಕುಸುಮಪ್ರಖ್ಯಾಂ ತಪ್ತಕಾಂಚನಸುಪ್ರಭಾಂ ।
ದೂರಾದ್ದೃಷ್ಟ್ವಾಂತಿಕಂ ಗತ್ವಾ ಪರ್ಯಷ್ವಜತ ಭೂಪತಿಃ ॥ ೧೫ ॥

ಪಿತರಂ ಸಾಪಿ ಸಂಹೃಷ್ಟಾ ಸಮಾಶ್ಲಿಷ್ಯ ನನಾಮ ಹ ।
ತತಶ್ಚ ಮಾತ್ರಾ ಸಂಗಮ್ಯ ಹೃಷ್ಟಯಾ ಹರ್ಷಿತಾಂತರಾ ॥ ೧೬ ॥

ಪ್ರಾಹ ವಾಕ್ಯಂ ವಿಶಾಲಾಕ್ಷೀ ಸಂಬೋಧ್ಯ ಪಿತರಂ ನೃಪಂ ।
ಸುಪ್ತಾಹಂ ರತ್ನಶಾಲಾಯಾಂ ಸಖೀಭಿಃ ಪರಿವಾರಿತಾ ॥ ೧೭ ॥

ಉದಕ್ಕೃತ್ವಾ ಶಿರಸ್ತಾತ ಧೌತಾಂಘ್ರೀರ್ಮಂಚಕೋಪರಿ ।
ಚಿಂತಯಂತೀ ಭರ್ತೃಯೋಗಂ ನಿಶೀಥೇ ರಕ್ಷಸಾ ಹೃತಾ ॥ ೧೮ ॥

---

ಯುತ್ತಿರುವ ದ್ವಿಜದಂಪತಿಗಳಿಂದ ಯುಕ್ತಳಾದ, ಸ್ವಾಭಾವಿಕವೇಷದಿಂದಲೇ ಅಲಂಕೃತಳಾಗಿದ್ದು, ಆಭರಣಪ್ರಿಯಳಾದ, ಬಾಡದಿರುವ ಪುಷ್ಪಕ್ಕೆ ಸಮಾನಳಾದ, ಕರಗಿಸಿದ ಬಂಗಾರದಂತೆ ಸಮಿಾಚೀನಕಾಂತಿಯುಳ್ಳ ಕುಮಾರಿಯನ್ನು ದೂರದಿಂದ ನೋಡಿ ಸಮಿಾಪಕ್ಕೆ ಹೋಗಿ ಆಲಂಗಿಸಿಕೊಂಡನು.

೧೬-೧೮. ಆ ಕುಮಾರಿಯೂ ಸಹ ಸಂತೋಷಪಟ್ಟು ತಂದೆಯನ್ನಾಲಂಗಿಸಿ ನಮಸ್ಕರಿಸಿದಳು. ಅನಂತರ ಸಂತುಷ್ಟಳಾದ ತಾಯಿಯೊಡನೆ ಕಲೆತು ಹರ್ಷಚಿತ್ತಳಾಗಿ ವಿಶಾಲನೇತ್ರಳಾದ ಕುಮಾರಿಯು ತಂದೆಯಾದ ದೊರೆಯನ್ನು ಸಂಬೋಧಿಸಿ ಹೀಗೆ ಹೇಳಿದಳು.

ಅಪ್ಪಾ ! ನಾನು ರತ್ನಶಾಲೆಯಲ್ಲಿ ಮಂಚದ ಮೇಲೆ ಉತ್ತರದಿಕ್ಕಿಗೆ ತಲೆಯನ್ನಿಟ್ಟು ಪತಿಯ ಸಮಾವೇಶವನ್ನು ಚಿಂತಿಸುತ್ತಾ ಸಖಿಗಳಿಂದ ಪರಿವೃತಳಾಗಿ ಮಲಗಿದ್ದಾಗ ಅರ್ಧರಾತ್ರಿಯ ಸಮಯದಲ್ಲಿ ರಾಕ್ಷಸನಿಂದ ಅಪಹರಿಸಲ್ಪಟ್ಟೆನು.

ಸ ಮಾಂ ಗೃಹೀತ್ವಾ ಸ್ವಪುರಂ ಪ್ರಾಗಾದರ್ಣವಗೇ ಗಿರೌ |
ನಾನಾರತ್ನಮಯೇ ತತ್ರ ಗುಹಾಯಾಂ ಸ್ಥಾಪಿತಾ ಹ್ಯಹಂ || ೧೯ ||

ಸ ತತ್ರೋದ್ವಹನೋಪಾಯಚಿಂತಯಾಂತರ್ವ್ಯವಸ್ಥಿತಃ |
ತಸ್ಯ ಭಾರ್ಯಾ ಸ್ತ್ರಿಯಂ ಸುಭ್ರೂರ್ಯಾ ತಿಷ್ಠತಿ ಸುಮಧ್ಯಮಾ || ೨೦ ||

ಬಿಭ್ರತೀ ಮಾನುಷಂ ರೂಪಂ ರಾಕ್ಷಸೀ ರಾಕ್ಷಸಪ್ರಿಯಾ |
ಅನಯಾ ಬುದ್ಧಿಯೋಗೇನ ಶಕ್ತ್ಯಾ ಶಕ್ರಸ್ಯ ಭೂಪತೇ || ೨೧ ||

ಘಾತಿತೋ ವಿಪ್ರಹಸ್ತೇನ ಕ್ರೂರಕರ್ಮಾ ಪತಿಃ ಸ್ವಕಃ |
ಪುರೈವ ಮಮ ತಂ ಶೈಲಂ ಪ್ರಾಪ್ತೋ ದೇವೇನ ಭೂಸುರಃ || ೨೨ ||

ಇಯಂ ತು ರಾಕ್ಷಸೀ ದೃಷ್ಟ್ವಾ ಪತಿಂ ಸ್ವಂ ಧರ್ಮದೂಷಕಂ |
ವಿಪ್ರೇಣ ಸಂವಿದಂ ಕೃತ್ವಾ ದಾಂಪತ್ಯೇ ನಿಜಕರ್ಮಣಾ || ೨೩ ||

---

೧೯. ಆ ರಾಕ್ಷಸನು ನನ್ನನ್ನು ಎತ್ತಿಕೊಂಡು ಸಮುದ್ರದಲ್ಲಿನ ಪರ್ವತದ ಮೇಲಿರುವ ತನ್ನ ಪಟ್ಟಣಕ್ಕೆ ಹೋದನು. ಅಲ್ಲಿ ನಾನಾ ರತ್ನಪರಿಪೂರ್ಣವಾದ ಗುಹೆಯಲ್ಲಿ ನನ್ನನ್ನಿರಿಸಿದನು.

೨೦-೨೨. ಅವನು ನನ್ನನ್ನು ಮದುವೆಮಾಡಿಕೊಳ್ಳಬೇಕೆಂಬ ಚಿಂತೆಯಲ್ಲಿ ಮುಳುಗಿ ಆ ಗುಹೆಯ ಒಳಗಿದ್ದನು. ಇಲ್ಲಿ ಬಂದಿರುವ, ಸೂಕ್ಷ್ಮಮಧ್ಯಪ್ರದೇಶ ಮತ್ತು ಸಮೀಚೀನವಾದ ಹುಬ್ಬುಗಳು ಇವುಗಳುಳ್ಳ, ಆ ರಾಕ್ಷಸನ ಪತ್ನಿಯಾದ ಇವಳು ಮನುಷ್ಯರೂಪವನ್ನು ಧರಿಸ ತನ್ನ ಬುದ್ಧಿವಂತಿಕೆಯಿಂದ ಇಂದ್ರಶಕ್ತಿಯನ್ನು ಗುಹೆಯ ಹೊರಭಾಗದಲ್ಲಿದ್ದ ಬ್ರಾಹ್ಮಣನಿಗೆ ತಂದುಕೊಟ್ಟು ಅವನಿಂದ ಕ್ರೂರಕೃತ್ಯಮಾಡುತ್ತಿದ್ದ ತನ್ನ ಪತಿಯನ್ನು ಕೊಲ್ಲಿಸಿದಳು. ನಾನು ಅಲ್ಲಿಗೆ ಹೋಗುವುದಕ್ಕಿಂತ ಮುಂಚೆಯೇ ಈ ಬ್ರಾಹ್ಮಣನು ದೈವಯೋಗದಿಂದ ಆ ಬೆಟ್ಟಕ್ಕೆ ಬಂದು ಗುಹೆಯ ಹೊರಗಿನ ಗಿಡದ ಕೆಳಗೆ ಮಲಗಿದ್ದನು.

೨೩-೨೫. ಈ ರಾಕ್ಷಸಿಯು ಧರ್ಮದೂಷಕನಾಗಿ ಅಮಾರ್ಗದಲ್ಲಿ ಪ್ರವರ್ತಿಸುತ್ತಿದ್ದ ತನ್ನ ಪತಿಯನ್ನು ನೋಡಿ, ಈ ಬ್ರಾಹ್ಮಣನೊಡನೆ ದಾಂಪತ್ಯವಿಷ

ರೂಪೇಣಾಪ್ಯಸ್ಯ ಸಂಮುಗ್ಧಾ ಘಾತಯಾಮಾಸ ರಾಕ್ಷಸಂ ।
ಏವಂ ಕೃತ್ವಾ ಪತಿಂ ವಿಪ್ರಂ ಹಸ್ತಿನೀರೂಪಧಾರಿಣೀ　　॥ ೨೪ ॥

ಗೃಹೀತ್ವಾ ವಾಸ್ತುಕಂ ವಿತ್ತಂ ಪೃಷ್ಠಮಾರೋಪ್ಯ ಮಾಮಪಿ ।
ಸಮಾಯಾತಾತ್ರ ಭೂಪಾಲ ಮಾಂ ದತ್ತುಂ ತವ ಮಂದಿರಂ　　॥ ೨೫ ॥

ಅನಯಾ ರಕ್ಷಿತಾ ರಾಜನ್ ರಾಕ್ಷಸ್ಯಾ ರಾಕ್ಷಸಾತ್ತತಃ ।
ತಸ್ಮಾದಿಮಾಂ ಪೂಜಯಸ್ವ ಸತ್ಕೃತ್ಯಾಗ್ರಜಸಂಯುತಃ　　॥ ೨೬ ॥

ಅಸ್ಯಾ ಏವಾನುಮತ್ಯಾ ಮಾಂ ದೇಹ್ಯಸ್ಮೈ ಬ್ರಾಹ್ಮಣಾಯ ಹಿ ।
ಅನೇನೈಕಾಸನಗತಾ ಜಾತಾ ಭರ್ತಾ ಸ ಮೇಽಭವತ್　　॥ ೨೭ ॥

---

ಯುದಲ್ಲಿ ಸಂಧಾನನಡೆಸಿ, ಇವನ ಸೌಂದರ್ಯಕ್ಕೆ ಮೋಹಪಟ್ಟು ರಾಕ್ಷಸನನ್ನು ಕೊಲ್ಲಿಸಿದಳು.

ಈಕೆಯು ಈ ರೀತಿಯಾಗಿ ಈ ಬ್ರಾಹ್ಮಣನನ್ನು ಪತಿಯನ್ನಾಗಿ ಮಾಡಿಕೊಂಡು ಹೆಣ್ಣಾನೆಯ ರೂಪವನ್ನುತಾಳಿ ಮನೆಯಲ್ಲಿದ್ದ ಹಣ ಮತ್ತು ನನ್ನನ್ನೂ ಸಹ ತನ್ನಮೇಲೆ ಇರಿಸಿಕೊಂಡು ನನ್ನನ್ನು ನಿನಗೆ ಒಪ್ಪಿಸುವುದಕ್ಕಾಗಿ ನಿನ್ನ ಮನೆಗೆ ಬಂದಿರುವಳು.

೨೬. ರಾಜನೇ! ಆ ರಾಕ್ಷಸನ ದೆಸೆಯಿಂದ ನನ್ನನ್ನು ಈ ರಾಕ್ಷಸಿಯು ಕಾಪಾಡಿರುವಳಾದಕಾರಣ ನನ್ನ ಅಣ್ಣನೊಡನೆ ನೀನು ಈಕೆಯನ್ನು ಸತ್ಕರಿಸಿ ಪೂಜಿಸು.

೨೭-೨೮. ಇವಳ ಅಪ್ಪಣೆಯನ್ನು ಪಡೆದು ನನ್ನನ್ನು ಈ ಬ್ರಾಹ್ಮಣನಿಗೇ ಕೊಡು ನಾವಿಬ್ಬರೂ ಒಂದೇ ಆಸನದಲ್ಲಿ ಕುಳಿತಿದ್ದೆವಾದಕಾರಣ ಇವನೇ ನನಗೆ ಗಂಡನಾದನು.

ಯೇನೈಕಾಸನಗಾ ನಾರೀ ಭವೇದ್ಭರ್ತಾ ಸ ಏವ ಹಿ ।
ನಾನ್ಯ ಇತ್ಥಂ ಪುರಾಣೇಷು ಶ್ರೂಯತೇ ಹ್ಯಾಗಮೇಷ್ವಪಿ ॥ ೨೮ ॥

ಅಸ್ಯಾಃ ಪೃಷ್ಠೇ ನಿವಿಷ್ಟಾಹಂ ಪ್ರೀತ್ಯಾ ಸಹ ದ್ವಿಜನ್ಮನಾ ।
ಧರ್ಮತಸ್ಸ ಚ ಮದ್ಭರ್ತಾ ಭವೇದೇಷಾ ಮತಿರ್ಮಮ ॥ ೨೯ ॥

ತಸ್ಮಾದಿಮಾಂ ಸಾಂತ್ವಯಿತ್ವಾ ಶಾಸ್ತ್ರಾಗಮವಿಧಾನತಃ ।
ದೇಹಿ ವಿಪ್ರಾಯ ಮಾಂ ತಾತ ಪತಿಮನ್ಯಂ ವೃಣೇ ನ ಚ ॥ ೩೦ ॥

ತಚ್ಛ್ರುತ್ವಾ ದುಹಿತುರ್ವಾಕ್ಯಂ ಸುದ್ಯುಮ್ನೋ ಭೂಪತಿಸ್ತದಾ ।
ಸಾಂತ್ವಯಾಮಾಸ ತನ್ವಂಗೀಂ ರಾಕ್ಷಸೀಂ ಪ್ರಶ್ರಯಾನತಃ ॥ ೩೧ ॥

---

ನಾರಿಯು ಯಾವನೊಡನೆ ಒಂದೇ ಆಸನದಲ್ಲಿ ಕೂಡುವಳೋ ಅವನೇ ಅವಳಿಗೆ ಗಂಡನು, ಇನ್ನಾರೂ ಗಂಡನಾಗುವುದಿಲ್ಲ ಎಂಬುದಾಗಿ ಪುರಾಣ ಮತ್ತು ಆಗಮಗಳಲ್ಲಿ ಹೇಳಿದೆ.

೨೯. ಆನೆಯಾಗಿದ್ದ ಈ ರಾಕ್ಷಸಿಯು ಬೆನ್ನಿನಮೇಲೆ ಈ ಬ್ರಾಹ್ಮಣನೊಡನೆ ನನ್ನನ್ನು ವಿಶ್ವಾಸಪೂರ್ವಕವಾಗಿ ಕೂಡಿಸಿಕೊಂಡಿದ್ದಳು. ಆದಕಾರಣ ಧರ್ಮಶಾಸ್ತ್ರಾನುಸಾರವಾಗಿ ಅವನೇ ನನಗೆ ಪತಿಯಾಗಬೇಕೆಂಬುದೇ ನನ್ನ ಅಭಿಮತವು.

೩೦. ಆದುದರಿಂದ ಅಪ್ಪಾ! ಇವಳಿಗೆ ಶಾಸ್ತ್ರಾಗಮವಿಧಾನಗಳನ್ನು ನಿರೂಪಿಸಿ ಸಮಾಧಾನಮಾಡಿ ನನ್ನನ್ನು ಈ ಬ್ರಾಹ್ಮಣನಿಗೆ ಕೊಡು. ಬೇರೆ ಯಾರನ್ನೂ ನಾನು ಪತಿಯಾಗಿ ವರಿಸುವುದಿಲ್ಲ. ಎಂದು ತಂದೆಗೆ ಹೇಳಿದಳು.

೩೧. ಮಗಳ ಆ ಮಾತನ್ನು ಕೇಳಿ ಆಗ ಸುದ್ಯುಮ್ನಭೂಪಾಲನು ಸುಂದರಾಂಗಿಯಾದ ರಾಕ್ಷಸಿಯನ್ನು ಆದರದಿಂದ ನಮಸ್ಕರಿಸಿ ಈ ರೀತಿಯಾಗಿ ಸಮಾಧಾನಮಾಡಿದನು.

ಸುತ್ಯೈಷಾ ಧರ್ಮಭೀತಾ ಮೇ ತ್ವಾಮೇವ ಶರಣಂ ಗತಾ |
ಯದರ್ಥಂ ನಿಹತಃ ಕಾಂತಸ್ತ್ವಯಾ ಪೂರ್ವತರಃ ಸತಿ || ೩೨ ||

ತ್ವದಧೀನಾ ತತೋ ಭದ್ರೇ ಜಾತೇಯಂ ಮತ್ಸುತಾ ಕಿಲ |
ಇಮಮಿಚ್ಛತಿ ಭರ್ತಾರಂ ಯೋಽಯಂ ಭರ್ತಾ ಕೃತಸ್ತ್ವಯಾ || ೩೩ ||

ಮಯಾ ಪ್ರಣಾಮದಾನಾಭ್ಯಾಂ ಯಾಚಿತಾ ತ್ವಂ ನಿಶಾಚರಿ |
ಅನುಮೋದಯ ಸಾಹಾಯ್ಯೇ ಸುತಾಂ ಮಮ ಸುಲೋಚನೇ || ೩೪ ||

ತ್ವದ್ವಾಕ್ಯಾದ್ಭವತು ಪ್ರೇಷ್ಯಾ ಮತ್ಸುತಾ ಬ್ರಾಹ್ಮಣಸ್ಯ ತು |
ಸಾಪತ್ನ್ಯಭಾವಂ ತ್ಯಕ್ತ್ವಾ ತು ಸುತಾಂ ಮೇ ಪರಿಪಾಲಯ || ೩೫ ||

ಸುತಾಯಾ ಮಮ ಭಾರ್ಯಾಯಾ ಮದ್ಬಲಸ್ಯ ಜನಸ್ಯ ಚ |
ಪುರಸ್ಯ ವಿಷಯಸ್ಯಾಪಿ ಸ್ವಾಮಿನೀ ತ್ವಂ ನ ಸಂಶಯಃ || ೩೬ ||

---

೩೨-೩೩. ಸಾಧ್ವೀ! ಈ ನನ್ನ ಕುಮಾರಿಯು ಧರ್ಮಭೀತಳಾಗಿ ನಿನ್ನನ್ನೇ ಶರಣುಹೊಂದಿರುವಳು. ಇವಳಿಗೋಸ್ಕರವಾಗಿಯೇ ನಿನ್ನ ಹಿಂದಿನ ಪತಿಯನ್ನು ಕೊಲ್ಲಿಸಿರುವೆಯಾದಕಾರಣ ಈ ನನ್ನ ಮಗಳು ನಿನ್ನ ವಶಳಾಗಿರುವಳು. ನೀನು ಈಗಾಗಲೇ ಗಂಡನನ್ನಾಗಿ ವರಿಸಿರುವ ಈ ನಿನ್ನ ಪತಿಯನ್ನೇ ವಿವಾಹಮಾಡಿಕೊಳ್ಳಬೇಕೆಂದಪೇಕ್ಷಿಸುವಳು.

೩೪. ರಾಕ್ಷಸಿಯೇ! ನಮಸ್ಕಾರಮಾಡಿ ನಿನ್ನನ್ನು ಬೇಡಿಕೊಳ್ಳುತ್ತೇನೆ. ಸುಲೋಚನೆಯೇ! ನನ್ನ ಮಗಳಿಗೆ ಅನುಕೂಲಮಾಡುತ್ತೇನೆಂದು ಸಮ್ಮತಿಯನ್ನು ಕೊಡು.

೩೫. ನಿನ್ನ ಮಾತಿನ ಪ್ರಕಾರ ನನ್ನ ಮಗಳನ್ನು ಬ್ರಾಹ್ಮಣನಿಗೆ ಕೊಡುತ್ತೇನೆ. ಸೌತಿಭಾವನೆಯನ್ನು ಬಿಟ್ಟು ನನ್ನ ಕುಮಾರಿಯನ್ನು ರಕ್ಷಿಸು.

೩೬. ನನ್ನ ಮಗಳು, ಹೆಂಡತಿ, ಸೈನ್ಯ, ಜನ, ಪಟ್ಟಣ ಮತ್ತು ದೇಶ ಇವುಗಳಿಗೆಲ್ಲಾ ನೀನೇ ಒಡೆಯಳಾಗಿರಬೇಕು. ಸಂಶಯಪಡಬಾರದು.

ತವ ವಾಕ್ಯೇ ಸ್ಥಿತಾ ಹ್ಯೇಷಾ ಸದೈವಾಪಿ ಭವಿಷ್ಯತಿ ।
ಏತಚ್ಛ್ರುತ್ವಾ ತು ವಚನಂ ಸುದ್ಯುಮ್ನಸ್ಯ ನಿಶಾಚರೀ ॥ ೩೭ ॥
ಅನ್ವಮೋದತ ಶುದ್ಧೇನ ಚೇತಸಾ ಸಹಚಾರಿಣೀಂ ।
ಉವಾಚ ಚ ಧರಾಪಾಲಂ ಪ್ರದಾನಾಯ ಕೃತೋದ್ಯಮಂ ॥ ೩೮ ॥
ಯದರ್ಥಂ ಪ್ರಣತಸ್ತ್ವಂ ಮಾಂ ಸದ್ಭಾವೇನ ನೃಪೋತ್ತಮ ।
ತಸ್ಮಾದ್ದ್ವಿತೀಯಾ ಭಾರ್ಯೇಯಂ ಭವತ್ವಸ್ಯ ದ್ವಿಜನ್ಮನಃ ॥ ೩೯ ॥
ಅಹಂ ಚ ಭವತಾ ಪೂಜ್ಯಾ ಕೃತ್ವಾರ್ಚಾಂ ದೇವಮಂದಿರೇ ।
ಸರ್ವೈಶ್ಚ ನಾಗರೈಃ ಸಾರ್ಧಂ ಫಲಾನ್ನೈರ್ಧವಲೈರ್ದಲೈಃ ॥ ೪೦ ॥
ಸಪ್ತಾಹಮುತ್ಸವಃ ಕಾರ್ಯೋ ಹ್ಯಷ್ಟಮ್ಯಾ ಆಚತುರ್ದಶೀಂ ।
ನಟನರ್ತಕಯುಕ್ತೇನ ಗೀತವಾದ್ಯೇನ ಭೂರಿಣಾ ॥ ೪೧ ॥

---

೩೭-೩೮. ಇವಳೂ ಸಹ ಯಾವಾಗಲೂ ನಿನ್ನ ಮಾತಿನಂತೆ ನಡೆಯುವಳು. ಎಂದು ಹೇಳಿ ಸುದ್ಯುಮ್ನನ ಮಾತನ್ನು ಕೇಳಿ ರಾಕ್ಷಸಿಯು ನಿರ್ಮಲಚಿತ್ತದಿಂದ ಆ ಕನ್ಯೆಯನ್ನು ಸಹಚಾರಿಣಿಯನ್ನಾಗಿ ಮಾಡಿಕೊಳ್ಳಲು ಅನುಮೋದಿಸಿ ವಿವಾಹಕ್ಕಾಗಿ ಪ್ರಯತ್ನಮಾಡಿಕೊಂಡಿದ್ದ ರಾಜನನ್ನು ಕುರಿತು ಈ ರೀತಿ ಹೇಳಿದಳು.

೩೯. ರಾಜೋತ್ತಮನೇ! ನೀನು ಸದ್ಭಾವದಿಂದ ನನ್ನನ್ನು ಆಶ್ರಯಿಸಿರುವೆಯಾದಕಾರಣ ನಿನ್ನ ಉದ್ದೇಶಾನುಸಾರವಾಗಿ ಈ ನಿನ್ನ ಕುಮಾರಿಯು ಬ್ರಾಹ್ಮಣನಿಗೆ ಎರಡನೆಯ ಹೆಂಡತಿಯಾಗಲಿ.

೪೦-೪೫. ನಾನು ನಿನ್ನಿಂದ ಪೂಜಿಸಲ್ಪಡುವೆನು. ಸಕಲ ಪೌರಜನ ಸಹಿತವಾಗಿ ಫಲ, ಅನ್ನ ಮತ್ತು ಧವಳದಳಗಳಿಂದಲೂ, ಮಾಂಸ, ರಕ್ತ ಮುಂತಾದ ಬಲಿಗಳಿಂದಲೂ, ಬಹು ವಾದ್ಯ, ಗೀತಗಳಿಂದಲೂ, ನಟನರ್ತಕಿಯರ ನರ್ತನದಿಂದಲೂ ಅಷ್ಟಮಿಯಿಂದ ಚತುರ್ದಶಿಯ ವರೆಗೆ ಏಳು ದಿನಗಳು ದೇವ ಮಂದಿರದಲ್ಲಿ ಪೂಜೆಮಾಡಿ ನನ್ನ ಉತ್ಸವಮಾಡಬೇಕು. ಈ ರೀತಿಯಾಗಿ ಮಾಡುತ್ತಿದ್ದರೆ ನಿಮಗೆ ನಾನು ಯಾವಾಗಲೂ ಕ್ಷೇಮಕಾರಕಳಾಗಿರುವೆನು. ನೃಪ ಶ್ರೇಷ್ಠನೇ! ನಿನ್ನ ಮಾತನ್ನು ಪಾಲಿಸು ಎಂದು ಹೇಳಿದಳು.

ಮೈರೇಯಮಾಂಸರಕ್ತಾದಿಬಲಿಭಿಶ್ಚಾಪಿ ಪೂಜಯಾ ।
ಏವಂ ಪ್ರಕುರ್ವತಸ್ತುಭ್ಯಂ ಸದಾ ಕ್ಷೇಮಕರೀ ಹ್ಯಹಂ　　॥ ೪೨ ॥

ಭವೇಯಂ ನೃಪಶಾರ್ದೂಲ ತ್ವಂ ವಚಃ ಪರಿಪಾಲಯ ।
ತಚ್ಛ್ರುತ್ವಾ ವಚನಂ ತಸ್ಯಾಃ ಸುದ್ಯುಮ್ನೋ ನೃಪತಿಸ್ತದಾ　　॥ ೪೩ ॥

ಅಂಗೀಚಕಾರ ತತ್ಸರ್ವಂ ಯದುಕ್ತಂ ಪ್ರೀತಯಾ ತಯಾ ।
ಪ್ರತಿಪನ್ನೇ ತು ವಚಸಿ ರಾಜ್ಞಾ ತುಷ್ಟಾ ತು ರಾಕ್ಷಸೀ　　॥ ೪೪ ॥

ಉವಾಚ ಬ್ರಾಹ್ಮಣಂ ಪ್ರೇಮ್ಣಾ ಕುರು ಭಾರ್ಯಾಮಿಮಾಮಪಿ ।
ರಾಜಕನ್ಯಾಂ ದ್ವಿಜಶ್ರೇಷ್ಠ ಗೃಹ್ಯೋಕ್ತವಿಧಿನಾ ಶುಭಾಂ　　॥ ೪೫ ॥

ಈಷ್ಯಾಂ ತ್ಯಕ್ತ್ವಾ ವಿಶಾಲಾಕ್ಷ್ಯಾ ಭವಾಮ್ಯೇಷಾ ಸಹೋದರೀ ।
ರಾಕ್ಷಸ್ಯಾ ವಚಸೇನೇಯ ಪರಿಣೀಯ ನೃಪಾತ್ಮಜಾಂ　　॥ ೪೬ ॥

ಬಹುವಿತ್ತಯುತಾಂ ವಿಪ್ರೋ ಮಹೋದಯಪುರಂ ಯಯೌ ।
ಆರುಹ್ಯ ಕರಿಣೀರೂಪಾಂ ರಾಕ್ಷಸೀಂ ಕ್ಷಣಮಾತ್ರತಃ　　॥ ೪೭ ॥

---

ಅವಳ ಆ ಮಾತನ್ನು ಕೇಳಿ ಸುದ್ಯುಮ್ನರಾಜನು ಸಂತುಷ್ಟನಾಗಿ ಆಕೆ ಹೇಳಿದುದೆಲ್ಲವನ್ನೂ ಒಪ್ಪಿದನು. ರಾಜನು ಮಾತುಕೊಟ್ಟಮೇಲೆ ರಾಕ್ಷಸಿಯು ಸಂತುಷ್ಟಳಾಗಿ ಬ್ರಾಹ್ಮಣನನ್ನು ಕುರಿತು ಹೀಗೆ ಹೇಳಿದಳು.

ಬ್ರಾಹ್ಮಣಶ್ರೇಷ್ಠನೇ! ಶೋಭನೆಯಾದ ಈ ರಾಜಕನ್ಯೆಯನ್ನೂ ಸಹ ಗೃಹ್ಯೋಕ್ತವಿಧಾನಾನುಸಾರವಾಗಿ ವಿವಾಹದಿಂದ ಮದುವೆಮಾಡಿಕೊ!

೪೬-೪೭. ಹೊಟ್ಟೆಕಿಚ್ಚನ್ನು ಬಿಟ್ಟು ಈ ವಿಶಾಲಾಕ್ಷಿಗೆ ನಾನು ಸಹೋದರಿಯಾಗಿರುವೆನು. ಎಂದು ಹೇಳಿದಳು.

ಬ್ರಾಹ್ಮಣನು ರಾಕ್ಷಸಿಯ ಮಾತಿನಂತೆ ಬಹು ಧನಗಳ ಸಹಿತಳಾದ ರಾಜಕುಮಾರಿಯನ್ನು ಮದುವೆಮಾಡಿಕೊಂಡು ಹೆಣ್ಣಾನೆಯ ರೂಪವನ್ನು ತಾಳಿದ ರಾಕ್ಷಸಿಯ ಮೇಲೆ ಕುಳಿತು ಕ್ಷಣಮಾತ್ರದಲ್ಲಿ ಮಹೋದಯಪುರಕ್ಕೆ ಬಂದನು.

ತತೋ ಮಯಾ ಶ್ರುತಂ ದೇವಿ ಭರ್ತಾ ತೇ ಸಮುಪಾಗತಃ ।
ಧನರತ್ನಸಮಾಯುಕ್ತೋ ಭಾರ್ಯಾದ್ವಯಸಮನ್ವಿತಃ ॥ ೪೮ ॥

ತತೋಽಹಂ ಬಂಧುವರ್ಗೇಣ ಪಿತೃಭ್ಯಾಂ ಚ ಸಖೀಗಣೈಃ ।
ಬಹುಶೋ ಭರ್ತ್ಸಿತೋ ರೂಕ್ಷೈರ್ವಚನೈರ್ಮರ್ಮಭೇದಿಭಿಃ ॥ ೪೯ ॥

ಕಥಂ ಯಾಸ್ಯಸಿ ಭರ್ತಾರಂ ಧನಲುಬ್ಧೇ ಶ್ರಿಯಾ ವೃತಂ ।
ಯಸ್ತ್ವಯಾ ನಿರ್ಧನಃ ಪೂರ್ವಂ ಪರಿತ್ಯಕ್ತಃ ಸುದೀನವತ್ ॥ ೫೦ ॥

ಚಂಚಲಾನೀಹ ಚಿತ್ತಾನಿ ಪಿತ್ರ್ಯಾಣಿ ಕಿಲ ಯೋಷಿತಾಂ ।
ಕಾಂತಾರ್ಜಿತಾನಿ ಸುಭಗೇ ಸ್ಥಿರಾಣೀತಿ ನಿಗದ್ಯತೇ ॥ ೫೧ ॥

ಪರುಷೈರ್ವಚನೈರ್ಯಸ್ತು ಕ್ಷಿಪ್ರಸ್ತ್ವದ್ಭಾಷಣಂ ಕಥಂ ।
ಭವಿಷ್ಯತಿ ಪ್ರವೇಶೋಽಪಿ ದುಷ್ಕರಸ್ತಸ್ಯ ವೇಶ್ಮನಿ ॥ ೫೨ ॥

---

೪೮. ದೇವಿಯೇ! ಬಳಿಕ ನಾನು ನಿನ್ನ ಗಂಡನು ಇಬ್ಬರು ಹೆಂಡಂದಿರೊಡನೆ ಧನರತ್ನಗಳ ಸಹಿತವಾಗಿ ಬಂದಿರುವನು, ಎಂದು ಜನರು ಹೇಳಿದುದನ್ನು ಕೇಳಿದೆನು.

೪೯. ಆಗ ನನ್ನ ನಂಟರು, ತಾಯಿ, ತಂದೆ, ಸಖೀವೃಂದ ಇವರು ಮರ್ಮಭೇದಕವಾದ ಕಠಿನವಾಕ್ಯಗಳಿಂದ ಹೀಗೆ ನನ್ನನ್ನು ಗದರಿಸಿದರು.

೫೦. ಧನಾಶೆಯುಳ್ಳವಳೇ! ಹಣವಿಲ್ಲದವನೆಂದು ಗಂಡನನ್ನು ಹಿಂದೆ ಬಿಟ್ಟಿರುವ ನೀನು ಈಗ ಶ್ರೀಮಂತನಾಗಿ ಬಂದಿರುವ ಆ ಗಂಡನ ಬಳಿಗೆ ಹೇಗೆ ಹೋಗುವೆ?

೫೧. ಸ್ತ್ರೀಯರ ಮನಸ್ಸು ಮತ್ತು ಪಿತ್ರಾರ್ಜಿತಧನಗಳು ಚಂಚಲಗಳು. ಸುಭಗೇ! ಪತಿಯು ಸಂಪಾದಿಸಿದ ಧನವೇ ಸ್ಥಿರವೆಂದು ಉಕ್ತವಾಗಿದೆ.

೫೨. ಕಠಿನವಾಕ್ಯಗಳಿಂದ ಯಾವ ಪತಿಯನ್ನು ನೀನು ಉದ್ವೇಗಪಡಿಸಿ ಓಡಿಸಿದೆಯೋ ಅಂತಹವನೊಡನೆ ಈಗ ಹೇಗೆ ಮಾತನಾಡುವೆ? ನಿನಗೆ ಅವನ ಮನೆಯಲ್ಲಿ ಪ್ರವೇಶವೂ ಸಾಧ್ಯವಾಗಲಾರದು.

ಗತಾಯೂ ಅಪಿ ತೇ ತತ್ರ ಶಯನಂ ಪತಿನಾ ಸಹ |
ಭವಿಷ್ಯತಿ ದುರಾಚಾರೇ ಸುಖದಂ ನ ಕದಾಚನ || ೫೩ ||

ಲೋಕಾಪವಾದಾದ್ಯದಿ ಚೇದ್ಗ್ರಹೀಷ್ಯತಿ ಪತಿಸ್ತವ |
ತ್ವಾಂ ಸ್ನೇಹಹೀನಚಿತ್ತಸ್ತು ನ ಕದಾಚಿನ್ಮಿಲಿಷ್ಯತಿ || ೫೪ ||

ನೇದೃಶಂ ದುಃಖದಂ ಕಿಂ ಸ್ಯಾತ್ ಸದೃಶಂ ದೂರಚಿತ್ತಯೋಃ |
ದಂಪತ್ಯೋರ್ಮಿಲನಂ ಲೋಕೇ ವೈಕಲ್ಯಕರಣಂ ಮಹತ್ || ೫೫ ||

ಏವಂ ಬಹುವಿಧಾ ವಾಚಃ ಶ್ರುತ್ವಾ ನಾ ಬಂಧುಭಾಷಿತಾಃ |
ಅಧೋಮುಖ್ಯಶ್ರುಪೂರ್ಣಾಕ್ಷೀ ಬಭೂವಾಹಂ ಸುದುಃಖಿತಾ || ೫೬ ||

ಚೇತಸಾಚಿಂತಯಂ ಚಾಹಂ ಪೂರ್ವಲೋಭೇನ ಮುಹ್ಯತೀ |
ನ ದತ್ತಂ ಕಂಕಣಂ ಪಾಣೇರ್ನ ದತ್ತಂ ಕಟಿಸೂತ್ರಕಂ || ೫೭ ||

---

೫೩. ದುರ್ವೃತ್ತಳೇ! ಒಂದು ವೇಳೆ ನೀನು ಅಲ್ಲಿಗೆ ಹೋದರೂ ಅಲ್ಲಿ ನಿನ್ನ ಪತಿಯೊಡನೆ ಶಯನವು ಎಂದಿಗೂ ನಿನಗೆ ಸುಖದಾಯಕವಾಗುವುದಿಲ್ಲ.

೫೪. ಲೋಕಾಪವಾದಕ್ಕೆ ಭಯಪಟ್ಟು ನಿನ್ನ ಗಂಡನು ನಿನ್ನನ್ನು ಸ್ವೀಕಾರಮಾಡಿದರೂ ಮನಃಪೂರ್ವಕ ಪ್ರೀತಿಮಾಡಲಾರನು ಮತ್ತು ಪ್ರೀತಿಯಿಂದ ನಿನ್ನೊಡನೆ ಎಂದಿಗೂ ಬೆರೆಯಲಾರನು.

೫೫. ಲೋಕದಲ್ಲಿ ಅನ್ಯೋನ್ಯವಾಗಿ ಮನಸ್ಸು ಕಲೆಯದೆ ದೂರವಾಗಿರುವ ದಂಪತಿಗಳ ಸೇರುವಿಕೆಯು ಬಹು ದುಃಖಕರವು. ಬೇರಾವುದೂ ಅದಕ್ಕೆ ಸಮಾನವಾದ ದುಃಖವನ್ನುಂಟುಮಾಡಲಾರದು. ಅದು ಮಹಾ ವೈಕಲ್ಯವನ್ನುಂಟುಮಾಡುವುದು.

೫೬. ಈ ರೀತಿ ನಾನಾವಿಧವಾಗಿ ಬಂಧುಗಳು ಹೇಳಿದ ಮಾತುಗಳನ್ನು ಕೇಳುತ್ತಾ ನಾನು ತಲೆಯನ್ನು ಬಗ್ಗಿಸಿಕೊಂಡು ಕಣ್ಣುಗಳಲ್ಲಿ ನೀರು ತುಂಬಿದವಳಾಗಿ ಅತ್ಯಂತ ದುಃಖಯುಕ್ತಳಾದೆನು.

೫೭-೫೮. ಹಿಂದಿನಿಂದಲೂ ಲೋಭದಿಂದಲೇ ಮುಗ್ಧಳಾಗಿದ್ದ ನಾನು ಗಂಡನಿಗೆ ಹಸ್ತಕಂಕಣ, ಕಟಿಸೂತ್ರ ಮತ್ತು ಪಾದಾಭರಣಗಳನ್ನು ಕೊಡಲಿಲ್ಲ

ನ ಚಾಪಿ ನೂಪುರೇ ದತ್ತೇ ಯೇನ ತುಷ್ಟಿಂ ವ್ರಜೇತ್ಪತಿಃ ।
ಧನಜೀವಿತಯೋಃ ಸ್ವಾಮೀ ಭರ್ತಾ ಲೋಕೇಷು ಗೀಯತೇ ॥ ೫೮ ॥

ತನ್ಮಯಾಪಹೃತಂ ಸರ್ವಂ ಭವಿತ್ರೀಕಾ ಗತಿರ್ಮಮ ।
ಕಥಂ ಯಾಸ್ಯಾಮಿ ತದ್ವೇಶ್ಮ ಕಥಂ ಸಂಭಾಷಯೇ ಪುನಃ ॥ ೫೯ ॥

ಯೋ ಮಯಾ ದುಷ್ಟಯಾ ತ್ಯಕ್ತಃ ಸ ಪ್ರತ್ಯೇತಿ ಕಥಂ ಹಿ ಮಾಂ ।
ಏವಂ ವಿಚಿಂತಯೇ ಯಾವದ್ಧೃದಯೇನ ವಿದೂಯತಾ ॥ ೬೦ ॥

ಸ್ನೇಷ್ಟತಾ ಬಂಧುವರ್ಗೇಣ ತಾವದ್ದೋಲಾಸಮಾಗತಾ ।
ಛತ್ರೇಣ ಶಶಿವರ್ಣೇನ ಶೋಭಮಾನಾ ಸುಕೋಮಲಾ ॥ ೬೧ ॥

ಆಸ್ತೃತಾ ರಾಂಕವೈಃ ಪೀನೈಃ ಪುರುಷೈರ್ವಿಧೃತಾಂಸಕೈಃ ।
ತೇ ಸಮಾಗತ್ಯ ಪುರುಷಾಃ ಪ್ರೋಚುರ್ಮಾಮುಸಕೃಚ್ಛುಭೇ ॥ ೬೨ ॥

---

ವಾಗಿ ಅವನು ಹೇಗೆ ಸಂತುಷ್ಟನಾದಾನು ಎಂಬುದಾಗಿ ಮನಸ್ಸಿನಲ್ಲಿಯೇ ಯೋಚಿಸಿದೆನು.

ಲೋಕದಲ್ಲಿ ಧನಜೀವಿತಗಳಿಗೆ ಪತಿಯೇ ಸ್ವಾಮಿಯೆಂದು ಉಕ್ತವಾಗಿದೆ. ಅಂತಹ ಸರ್ವಸ್ವನಾದ ಸ್ವಾಮಿಯನ್ನು ಕಳೆದುಕೊಂಡೆನು. ನನಗೆ ಮುಂದೆ ಯಾವ ಗತಿಯಾಗುವುದೋ? ಅವನ ಮನೆಗೆ ಹೇಗೆ ಹೋಗಲಿ? ಅವನೊಡನೆ ಹೇಗೆ ಮಾತನಾಡಲಿ?

೬೦-೬೩. ದುಷ್ಟಳಾದ ನನ್ನಿಂದ ಬಿಡಲ್ಪಟ್ಟ ಅವನು ಹೇಗೆ ನನ್ನ ಬಳಿಗೆ ಬಂದಾನು? ಮುಂತಾಗಿ ದುಃಖಸಹಿತ ಮನಸ್ಸಿನಿಂದ ಆಲೋಚಿಸುತ್ತಿರುವಷ್ಟರಲ್ಲಿಯೇ ಚಂದ್ರವರ್ಣದ ಛತ್ರಿಯಿಂದಲಂಕೃತವು, ಅತ್ಯಂತಮನೋಹರವು, ಉಣ್ಣೆ ಬಟ್ಟೆಗಳನ್ನು ಹಾಸಿರುವುದೂ ಆದ ಪಲ್ಲಕ್ಕಿಯನ್ನು ಪುಷ್ಟರಾದ ಮನುಷ್ಯರು ಭುಜಗಳ ಮೇಲೆ ಹೊತ್ತುಕೊಂಡು ಬಂದರು. ಆ ಮನುಷ್ಯರು ಬಂದು ಪಲ್ಲಕ್ಕಿಯನ್ನಿಳಿಸಿ ಅನೇಕಾವರ್ತಿ ನನ್ನನ್ನು ಮಾತನಾಡಿಸಿದರು.

ಆಕಾರಿತಾಸಿ ಪತ್ಯಾ ತೇ ವ್ರಜ ಶೀಘ್ರಂ ಮುದಾನ್ವಿತಾ ।
ಧನರತ್ನಯುತೋ ಭರ್ತಾ ಸದ್ವಿಭಾರ್ಯೈಃ ಸಮಾಗತಃ ॥ ೬೩ ॥

ಪ್ರವಿಷ್ಟಮಾತ್ರೇಣ ಗೃಹೇ ತ್ವಾಮಾನೇತುಂ ವರಾನನೇ ।
ಪ್ರೇಷಿತಾಃ ಸತ್ವರಂ ಪತ್ಯಾ ಸಂಸ್ಥಿತಾಂ ಪಿತೃವೇಶ್ಮನಿ ॥ ೬೪ ॥

ತತೋಽಹಂ ವ್ರೀಡಿತಾ ದೇವಿ ಭರ್ತುಸ್ತದ್ವೀಕ್ಷ್ಯ ಚೇಷ್ಟಿತಂ ।
ನೈವೋತ್ತರಮದಾಂ ತೇಭ್ಯಃ ಕಿಂಚಿನ್ಮೌನಂ ಸಮಾಸ್ಥಿತಾ ॥ ೬೫ ॥

ತತೋಽಹಂ ಬಂಧುವರ್ಗೇಣ ಭೂಯೋ ಭೂಯೋ ಪ್ರಬೋಧಿತಾ ।
ಆಹೂತಾ ಸ್ವಾಮಿನಾ ಗಚ್ಛ ಸನ್ಮಾನೇನ ತದಂತಿಕಂ ॥ ೬೬ ॥

ಸ್ವಾಮಿನಾಕಾರಿತಾ ಪತ್ನೀ ಯಾ ನ ಯಾತಿ ತದಂತಿಕಂ ।
ಸಾ ತು ಧ್ವಾಂಕ್ಷೀ ಭವೇತ್ಪುತ್ರಿ ಜನ್ಮಾನಿ ದಶಪಂಚ ಚ ॥ ೬೭ ॥

---

ಶೋಭನೆಯೇ! ನಿನ್ನ ಗಂಡನು ನಿನ್ನನ್ನು ಕರೆತರಬೇಕೆಂದು ಹೇಳಿರುವನು! ಸಂತೋಷವಾಗಿ ಬೇಗ ಹೊರಡು! ನಿನ್ನ ಪತಿಯು ಧನರತ್ನಗಳಿಂದ ಸಮೃದ್ಧನಾಗಿ ಇಬ್ಬರು ಪತ್ನಿಯರೊಡನೆ ಬಂದಿರುವನು.

೬೪. ಅವನು ಮನೆಯೊಳಕ್ಕೆ ಕಾಲಿಟ್ಟ ತಕ್ಷಣವೇ ತಂದೆಯ ಮನೆಯಲ್ಲಿರುವ ನಿನ್ನನ್ನು ಬೇಗ ಕರೆದುಕೊಂಡು ಬರಲು ನಮ್ಮನ್ನು ಕಳುಹಿಸಿರುವನು.

೬೫. ದೇವಿಯೇ! ನಾನು ಅದರಿಂದ ನಾಚಿಕೆಗೊಂಡು ಗಂಡನು ಮಾಡಿದ ಕೆಲಸವನ್ನು ನೋಡಿ, ಅವರಿಗೆ ಉತ್ತರವನ್ನು ಕೊಡಲಾಗಲಿಲ್ಲ. ಸ್ವಲ್ಪ ಹೊತ್ತು ಮಾತನಾಡದೇ ಮೌನದಿಂದಿದ್ದೆನು.

೬೬-೬೭. ತರುವಾಯ ಬಂಧುಜನರು ಪುನಃ ಪುನಃ ನನಗೆ ಬೋಧಿಸಿದರು. ಕುಮಾರಿಯೇ! ನಿನ್ನ ಪತಿಯು ಕರೆಕಳಿಸಿರುವನಾದಕಾರಣ ಗೌರವದಿಂದ ಅವನ ಬಳಿಗೆ ಹೋಗು ಸ್ವಾಮಿಯು ಕರೆಕಳಿಸಿದರೂ ಅವನ ಬಳಿಗೆ ಹೋಗದಿರುವ ಪತ್ನಿಯು ಹದಿನೈದು ಜನ್ಮಗಳು ಕಾಗೆಯಾಗಿ ಹುಟ್ಟುವಳು.

ಏವಮುಕ್ತ್ವಾ ಸಮಾಶ್ವಸ್ಯ ಮಾ ಗೃಹೀತ್ವಾ ತ್ವರಾನ್ವಿತಾಃ |
ದೋಲಾಮಾರೋಪ್ಯ ಗಚ್ಛೇತಿ ಪ್ರೋಚುಃ ಸ್ನಿಗ್ಧಾ ಮುಹುರ್ಮುಹುಃ ||

ತತಸ್ತೇ ಪುರುಷಾ ದೋಲಾಂ ನಿಧಾಯಾಂಸೇಷು ಸತ್ವರಂ |
ಜಗ್ಮುರ್ಮಹೋದಯಪುರಂ ಯತ್ರ ತಿಷ್ಠತಿ ಮೇ ಪತಿಃ || ೧೯ ||

ದೃಷ್ಟಂ ಮಯಾ ಗೃಹಂ ತಸ್ಯ ಸರ್ವತಃ ಕಾಂಚನಾವೃತಂ |
ಆಸನೀಯೈಶ್ಚ ಭೋಜ್ಯೈಶ್ಚ ಧನೈರ್ವಸ್ತ್ರೈರ್ಯುತಂ ತತಃ || ೨೦ ||

ಸಾ ರಾಕ್ಷಸೀ ಮಹಾದೇವೀ ಸಾ ಚಾಪಿ ನೃಪನಂದಿನೀ |
ಪ್ರೀತ್ಯಾ ಚ ಭಕ್ತ್ಯಾ ಕುರುತಾಂ ಪ್ರಣತಿಂ ಮಮ ಸುಂದರಿ || ೨೧ ||

ತತಸ್ತಾಭ್ಯಾಮಹಂ ಪ್ರೇಮ್ಣಾ ಯಥಾರ್ಹಮಭಿಪೂಜಿತಾ |
ಭರ್ತೃವಾಕ್ಯೇನ ಸಂಪ್ರೀತಾ ಸ್ನಾತ್ವಾಭುಂಜಂ ತಥಾಹತಾ || ೨೨ ||

---

ಎಂಬುದಾಗಿ ಹೇಳಿ ಸಮಾಧಾನಪಡಿಸಿ, ನನ್ನನ್ನು ಪಲ್ಲಕ್ಕಿಯಲ್ಲಿ ಹತ್ತಿಸಿ ಹೊರಡು ಎಂದು ಅಭಿಮಾನಪೂರ್ವಕವಾಗಿ ಪುನಃಪುನಃ ಹೇಳಿದರು.

೧೯. ಅನಂತರ ಆ ಮನುಷ್ಯರು ಭುಜಗಳ ಮೇಲೆ ಪಲ್ಲಕ್ಕಿಯನ್ನೆತ್ತಿಕೊಂಡು ಮಹೋದಯಪುರದಲ್ಲಿ ನನ್ನ ಗಂಡನಿರುವ ಮನೆಗೆ ಹೋದರು.

೨೦-೨೧. ಎಲ್ಲಾ ಕಡೆಯಲ್ಲಿಯೂ ಬಂಗಾರದಿಂದ ಆವರಿಸಲ್ಪಟ್ಟಿದ್ದ ಪೀಠಗಳು, ಭೋಜ್ಯವಸ್ತುಗಳು, ಧನ, ವಸ್ತ್ರಗಳಿಂದ ತುಂಬಿದ್ದ ಅವನ ಮನೆಯನ್ನು ನೋಡಿದೆನು.

ಸುಂದರಿಯೇ! ಆ ರಾಕ್ಷಸಿಯು ಮತ್ತು ರಾಜಪುತ್ರಿಯಾದ ಆ ಮಹಾದೇವಿಯೂ ಸಹ ಪ್ರೀತಿಭಕ್ತಿಗಳಿಂದ ನನಗೆ ನಮಸ್ಕಾರಮಾಡಿದರು.

೨೨. ಅನಂತರ ನಾನು ಅವರಿಬ್ಬರಿಂದಲೂ ಯಥೋಚಿತವಾದ ಸತ್ಕಾರ ಹೊಂದಿ, ಪತಿಯ ಸವಿನುಡಿಗಳಿಂದ ಸಂತುಷ್ಟಳಾಗಿ ಸ್ನಾನಮಾಡಿ ಭೋಜನ ಮಾಡಿದೆನು.

ತತೋಽಸ್ತಸಮಯೋತ್ ಪಶ್ಚಾದ್ಭರ್ತಾ ಚಾಹೂಯ ಸತ್ವರಂ |
ಪರಿಷ್ವಜ್ಯ ಚಿರಂ ದೋರ್ಭ್ಯಾಂ ಪರ್ಯಂಕೇ ಸಂನ್ಯವೇಶಯತ್ || ೭೩ ||
ತತೋ ನಿಶಾಚರೀಂ ರಾಜಪುತ್ರೀಂ ಚಾಹೂಯ ಸೋಽಬ್ರವೀತ್ |
ಭಕ್ತ್ಯಾ ಯುವಾಭ್ಯಾಂ ಕರ್ತವ್ಯಮಸ್ಯಾಶ್ಚರಣಸೇವನಂ || ೭೪ ||
ಇಯಂ ಪ್ರಾಕ್ಕಾಲಿಕೀ ಭಾರ್ಯಾ ಜ್ಯೇಷ್ಠಾ ಚ ಯುವಯೋರ್ಧ್ರುವಂ |
ಪತ್ಯುರ್ವಾಕ್ಯಾತ್ತತಸ್ತಾಭ್ಯಾಂ ಗೃಹೀತೌ ಚರಣೌ ಮಮ || ೭೫ ||
ಸಾಪತ್ನ್ಯಭಾವಜಾಮೀರ್ಷ್ಯಾಂ ಪರಿತ್ಯಜ್ಯ ಸುಲೋಚನೇ |
ತತಃ ಪ್ರೇಷ್ಯಾನ್ ಸಮಾಹೂಯ ಭರ್ತಾ ಮೇ ವಾಕ್ಯಮಬ್ರವೀತ್ || ೭೬ ||
ಯತ್ಕಿಂಚಿದ್ರಕ್ಷಸಃ ಪಾರ್ಶ್ವಾನ್ಮಯಾ ಪ್ರಾಪ್ತಂ ಪುರಾ ವಸು |
ಸುತಾಮುದ್ವಹತೋ ರಾಜ್ಞೋ ಯಚ್ಚ ಲಬ್ಧಂ ಮಯಾಖಿಲಂ || ೭೭ ||
ತತ್ಸರ್ವಂ ಭಕ್ತಿಭಾವೇನ ಸಮಾನಯತ ಮಾಚಿರಂ |
ಇಯಂ ಹಿ ಸ್ವಾಮಿನೀ ಪ್ರಾಪ್ತಾ ತಸ್ಯ ವಿತ್ತಸ್ಯ ಕಿಂಕರಾಃ || ೭೮ ||

---

೭೩. ಬಳಿಕ ಸೂರ್ಯಾಸ್ತಮಯವಾದನಂತರ ಪತಿಯು ನನ್ನನ್ನು ಕರೆದು ತ್ವರೆಯಿಂದ ಬಹಳವಾಗಿ ಆಲಿಂಗನೆಮಾಡಿಕೊಂಡು ಮಂಚದ ಮೇಲೆ ಕೂಡಿಸಿದನು.

೭೪-೭೮, ಅನಂತರ ರಾಕ್ಷಸಿ ಮತ್ತು ರಾಜಪುತ್ರಿಯರನ್ನು ಕರೆದು ಪತಿಯು " ನೀವಿಬ್ಬರೂ ಇವಳ ಪಾದಸೇವೆಯನ್ನು ಭಕ್ತಿಯಿಂದ ಮಾಡಬೇಕು. ಇವಳು ನನಗೆ ಮೊದಲನೆಯ ಪತ್ನಿಯು, ನಿಮಗಿಂತಲೂ ಹಿರಿಯಳು" ಎಂದು ಹೇಳಲು ಅದರಂತೆ ಅವರಿಬ್ಬರೂ ಸೌತಿಯ ಮಾತ್ಸರ್ಯವನ್ನು ಬಿಟ್ಟು ನನ್ನ ಪಾದಸೇವೆಮಾಡಿದರು.

ಸುಲೋಚನೆಯೇ! ಅನಂತರ ಆಳುಗಳನ್ನು ಕರೆದು ನನ್ನ ಗಂಡನು ಹೀಗೆ ಹೇಳಿದನು.

ಭೃತ್ಯರೇ! ನಾನು ಪೂರ್ವದಲ್ಲಿ ರಾಕ್ಷಸನಕಡೆಯಿಂದ ತೆಗೆದುಕೊಂಡು ಬಂದಿದ್ದ ದ್ರವ್ಯ ಮತ್ತು ಮಗಳನ್ನು ಕೊಟ್ಟು ಮದುವೆಮಾಡುವಾಗ ರಾಜನಿಂದ ಲಭಿಸಿದ ದ್ರವ್ಯ ಅವುಗಳನ್ನೆಲ್ಲಾ ಆದರದಿಂದ ತಡಮಾಡದೆ ತೆಗೆದುಕೊಂಡು ಬನ್ನಿರಿ! ಆ ದ್ರವ್ಯಕ್ಕೆಲ್ಲಾ ಇವಳೇ ಯಜಮಾನಿಯಾಗಿರುವಳು.

ತದ್ವಾಕ್ಯಾತ್ಸಹಸಾ ಪ್ರೇಷ್ಯೈಃ ಸಮಾನೀತಂ ಧನಂ ಶುಭೇ ।
ಭರ್ತಾ ಸಮರ್ಪಯಾಮಾಸ ಪ್ರೀತ್ಯಾ ಯುಕ್ತೋಽಖಿಲಂ ತದಾ ॥ ೭೯ ॥

ಸತ್ಕೃತ್ಯ ಭೂಷಣೈರ್ವಸ್ತ್ರೈರವ್ಯಲೀಕೇನ ಚೇತಸಾ ।
ಉಭಯೋಸ್ತತ್ರ ಪಶ್ಯಂತೋ ರಾಕ್ಷಸೀರಾಜಕನ್ಯಯೋಃ ॥ ೮೦ ॥

ಪರ್ಯಂಕಸ್ಥಾಂ ಪರಿಷ್ವಜ್ಯ ಮಾಂ ಚುಚುಂಬಾಧರೇ ಶುಭೇ ।
ತದ್ದೃಷ್ಟ್ವಾ ಚಾದ್ಭುತಂ ಭರ್ತುರ್ದೇಹವಿತ್ತಸಮರ್ಪಣಂ ॥ ೮೧ ॥

ಉಲ್ಲಾಸಕರಣಂ ವಾಕ್ಯಂ ಕರೇಣ ಕುಚಪೀಡನಂ ।
ಛಿನ್ನಾ ಗೌರಿವ ಖಡ್ಗೇನ ಗತಾಃ ಪ್ರಾಣಾ ಮಮಾಭವನ್ ॥ ೮೨ ॥

ತತೋಹಂ ಯಮನಿರ್ದಿಷ್ಟಾಂ ಪ್ರಾಪ್ತಾ ನರಕಯಾತನಾಂ ।
ತಾಮತೀತ್ಯ ಸುದುಃಖಾರ್ತಾ ಕಾಷ್ಠೀಲಾ ಚಾಭವಂ ಶುಭೇ ॥ ೮೩ ॥

ಯಾಸ್ಯಾಮಿ ಪುನರೇವಾಹಂ ತಿರ್ಯಗ್ಯೋನಿಂ ಸಹಸ್ರಶಃ ।
ಯಾ ಭರ್ತುರ್ಗೋಪಯೇದ್ವಿತ್ತಂ ಜೀವಿತಂ ಚ ಶುಭಾನನೇ ॥ ೮೪ ॥

---

೭೯-೮೦. ದೂತರು ಅವನ ಮಾತಿನಂತೆ ಬೇಗ ಧನವನ್ನು ತಂದರು. ಪತಿಯು ಸಂತೋಷಚಿತ್ತದಿಂದ ನನಗೆ ವಸ್ತ್ರಾಭರಣಗಳನ್ನು ಕೊಟ್ಟು ಸತ್ಕರಿಸಿ ಆ ಧನವನ್ನೆಲ್ಲವನ್ನೂ ರಾಕ್ಷಸಿ ಮತ್ತು ರಾಜಕನ್ಯೆಯರ ಇದಿರಿಗೆ ಪ್ರೀತಿಯಿಂದ ನನಗೆ ಕೊಟ್ಟನು.

೮೧-೮೨. ಆಗ ಮಂಚದ ಮೇಲೆ ಕುಳಿತಿದ್ದ ನನ್ನನ್ನು ಆಲಿಂಗಿಸಿ ಅಧರಗಳನ್ನು ಮುತ್ತಿಟ್ಟನು. ಈ ರೀತಿಯಾಗಿ ಗಂಡನು ಮಾಡಿದ ದೇಹಧನಸಮರ್ಪಣೆ, ಉಲ್ಲಾಸವನ್ನುಂಟುಮಾಡುವ ಮಾತು, ಕೈಯಿಂದ ಕುಚಮರ್ದನ ಇವುಗಳನ್ನು ನೋಡಿ ಕತ್ತಿಯಿಂದ ಕತ್ತರಿಸಿದ ಗೋವಿನಂತೆ ನನಗೆ ಪ್ರಾಣಗಳೇ ಹೋಯಿತು.

೮೩. ಅನಂತರ ನಾನು ಯಮನ ಅಪ್ಪಣೆಯಂತೆ ನರಕಯಾತನೆಯನ್ನು ಹೊಂದಿದೆನು. ಶೋಭನೆಯೇ! ಅದನ್ನು ಅನುಭವಿಸಿದ ಬಳಿಕ ಅತ್ಯಂತ ದುಃಖದಿಂದ ಯುಕ್ತಳಾಗಿ ಕಟ್ಟಿಗೆಯ ಹುಳುವಾಗಿ ಹುಟ್ಟಿದೆನು.

೮೪. ಶೋಭನಾಂಗಿಯೇ! ನಾನು ಧನಜೀವಿತಗಳನ್ನು ಗಂಡನಿಗೆ ಕೊಡದೆ ಮುಚ್ಚಿಟ್ಟಿದ್ದರಿಂದ ಇನ್ನೂ ಸಾವಿರ ತಿರ್ಯಗ್ಜಂತುಜನ್ಮವನ್ನು ಹೊಂದ ಬೇಕಾಗಿರುವುದು.

ಸಾಪೀದೃಶೀಮವಸ್ಥಾಂ ವೈ ಯಾಸ್ಯತ್ಯೇವ ನ ಸಂಶಯಃ ।
ಏವಂ ಜ್ಞಾತ್ವಾನಿಶಂ ರಕ್ಷೇತ್ಪತ್ಯುರ್ವಿತ್ತಂ ಚ ಜೀವಿತಂ ॥ ೮೫ ॥
ಪತಿರ್ಮಾತಾ ಪಿತಾ ವಿತ್ತಂ ಜೀವಿತಂ ಚ ಗುರುರ್ಗತಿಃ ॥ ೮೬ ॥

ಪ್ರಯಾತಿ ನಾರೀ ಬಹುಭಿಃ ಸುಪುಣ್ಯೈಃ
ಸಹೈವ ಭರ್ತ್ರಾ ಸ್ವಶರೀರದಾಹಾತ್ ।
ವಿಷ್ಣೋಃ ಪದಂ ವಿತ್ತಶರೀರಲುಬ್ಧಾ
ಪ್ರಯಾತಿ ಯಾಮೀಂ ಚ ಕುಯೋನಿಪೀಡಾಂ ॥ ೮೭ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಕಾಷ್ಠೀಲಾಚರಿತಂ ನಾಮ
ತ್ರಿಂಶತ್ತಮೋಽಧ್ಯಾಯಃ

---

೮೫. ನನ್ನಂತೆ ಗಂಡನಿಗೆ ಧನಜೀವಿತಗಳನ್ನು ಕೊಡದೆ ದ್ರೋಹ ಮಾಡಿದವಳೂ ಸಹ ಇಂತಹ ಅವಸ್ಥೆಯನ್ನೇ ಖಂಡಿತವಾಗಿ ಹೊಂದುವಳು. ಸಂದೇಹವಿಲ್ಲ. ಇದನ್ನು ತಿಳಿದು ಯಾವಾಗಲೂ ಪತಿಗೆ ವಿತ್ತಜೀವಿತಗಳನ್ನು ರಕ್ಷಿಸಿಕೊಡಬೇಕು.

೮೬. ಸ್ತ್ರೀಯರಿಗೆ ಪತಿಯೇ ಮಾತೆಯು, ತಂದೆಯು, ಅವನೇ ಧನ, ಜೀವಿತ, ಗುರು, ಅವನೇ ಗತಿಯು!

೮೭. ನಾರಿಯು ಗಂಡನೊಡನೆ ಸಹಗಮನಮಾಡಿದರೆ ಅವಳು ಬಹು ಸುಪುಣ್ಯಗಳಿಂದ ವಿಷ್ಣುಲೋಕಕ್ಕೆ ಹೋಗುವಳು. ಧನ ಮತ್ತು ಶರೀರಗಳ ಆಶೆಯಿಂದ ಪತಿಗೆ ವಂಚನಮಾಡಿದವಳು ಯಮಯಾತನೆ ಮತ್ತು ದುಷ್ಟ ಹೀನ ಜನ್ಮಗಳಿಗೆ ಗುರಿಯಾಗುವಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀಚರಿತ್ರೆಯ
ಪ್ರಸಂಗದೊಳು ಕಾಷ್ಠೀಲಚರಿತ್ರೆಯೆಂಬ ಮೂವತ್ತನೆಯ
ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಬ್ರಾಹ್ಮಣನು ರಾಕ್ಷಸಿಯ ಧರ್ಮವಚನದಂತೆ ಆನೆಯ ರೂಪವನ್ನು ತಾಳಿದ ಆಕೆಯ ಮೇಲೆ ಕನ್ಯೆಯ ಸಹಿತವಾಗಿ ಕುಳಿತು ಕಾಶೀಕ್ಷೇತ್ರಕ್ಕೆ ಬಂದಿಳಿದನು. ಕೂಡಲೇ ಆ ರಾಕ್ಷಸಿಯು ಹಿಂದಿನಂತೆ ಸುಂದರಿಯ ರೂಪವನ್ನು ತಾಳಿದಳು. ರಾಜಕನ್ಯೆಯು ಊರಿನ ಹೊರಗಿದ್ದ ಪುರಪಾಲಕನ ಮೂಲಕವಾಗಿ ತಾನು ಬಂದಿರುವ ಸಮಾಚಾರವನ್ನು ತಂದೆಗೆ ಹೇಳಿಕಳುಹಿಸಲು ತಂದೆಯು ಸಪರಿವಾರನಾಗಿ ಬಂದು ಮಗಳನ್ನು ನೋಡಿ ಆನಂದಪಟ್ಟು ನಡೆದ ವೃತ್ತಾಂತವನ್ನೆಲ್ಲಾ ಕೇಳಿ ಅವಳ ಇಷ್ಟದಂತೆ ರಾಕ್ಷಸಿಯುನ್ನು ಸಮ್ಮತಿಪಡಿಸಿ ಆ ಬ್ರಾಹ್ಮಣನಿಗೆ ಅವಳನ್ನು ಕೊಟ್ಟು ವಿವಾಹಮಾಡಿಸಿ ಬಹು ರತ್ನಾಭರಣಗಳನ್ನು ಕೊಟ್ಟನು. ವಿಪ್ರನು ಐಶ್ವರ್ಯ ಮತ್ತು ಇಬ್ಬರು ಭಾರ್ಯೆಯರೊಂದಿಗೆ ತನ್ನ ಸ್ವಂತ ಸ್ಥಳವಾದ ಮಹೋದಯ ಪುರಕ್ಕೆ ಬಂದು ದಿವ್ಯಗೃಹದಲ್ಲಿ ನೆಲಸಿ ತನ್ನ ಮೊದಲನೆಯ ಹೆಂಡತಿಯನ್ನು ಕರೆಯಿಸಿಕೊಂಡು ಬಹುವಾಗಿ ಸತ್ಕರಿಸಿದನು. ಅವಳಾದರೋ ತಾನು ಅಪರಾಧಿನಿಯಾಗಿದ್ದರೂ ಅನಿರೀಕ್ಷಿತವಾಗಿ ಇಂತಹ ಪತಿಪ್ರೇಮ ಸತ್ಕಾರಗಳನ್ನು ಕಂಡು ತನ್ನ ದುರ್ವರ್ತನೆಗೆ ಕೊರಗಿ ಸತ್ತಳು. ಆಮೇಲೆ ಯಮಲೋಕದಲ್ಲಿ ನಾನಾವಿಧವಾದ ಯಾತನೆಯನ್ನನುಭವಿಸಿ ಕಟ್ಟಿಗೆಯ ಹುಳುವಾಗಿ ಈಗ ಹುಟ್ಟಿರುವೆನು. ನಾನು ಪತಿಗೆ ವಂಚನೆಮಾಡಿದ್ದರಿಂದ ಇನ್ನೂ ಸಾವಿರಾರು ಇಂತಹ ಜನ್ಮವನ್ನು ಅನುಭವಿಸಬೇಕು. ಆದುದರಿಂದ ಸ್ತ್ರೀಯರು ಪತಿಗೆ ಯಾವ ವಿಷಯದಲ್ಲಿಯೂ ವಂಚನೆಮಾಡಬಾರದು ಎಂಬುದಾಗಿ ಕಟ್ಟಿಗೆಹುಳುವು ತನ್ನ ಪೂರ್ವವೃತ್ತಾಂತವನ್ನು ಮನುಷ್ಯಭಾಷೆಯಿಂದ ಸಂಧ್ಯಾವಳಿಗೆ ತಿಳಿಸಿದ ವಿಷಯವು ವಿಸ್ತಾರವಾಗಿ ಈ ಅಧ್ಯಾಯದಲ್ಲಿ ನಿರೂಪಿಸಲ್ಪಟ್ಟಿದೆ.

# ಏಕತ್ರಿಂಶೋಽಧ್ಯಾಯಃ

## ವಸಿಷ್ಠ ಉವಾಚ

ತಚ್ಛ್ರುತ್ವಾ ವಚನಂ ತಸ್ಯಾಃ ಕಾಷ್ಠೀಲಾಯಾಃ ಶುಚಿಸ್ಮಿತಾ ।
ಸಂಧ್ಯಾವಲೀ ನಾಮ ಭೃಶಂ ತಾಮುವಾಚ ಹ ಸಾದರಂ ॥ ೧ ॥

ತ್ವದ್ವಾಕ್ಯಾದ್ವಿಸ್ಮಯೋ ಜಾತಃ ಕಾಷ್ಠೀಲೇ ಸಾಂಪ್ರತಂ ಮಮ ।
ಕಥಂ ದೃಷ್ಟ್ವಾ ಮಯಾ ತ್ವಂ ಚ ಯಾಸ್ಯಂತೀ ಕುತ್ಸಿತಾಂ ಗತಿಂ ॥ ೨ ॥

ಕರ್ಮಣಾ ಕೇನ ತೇ ಮುಕ್ತಿರ್ಭವೇತ್ಕುತ್ಸಿತಯೋನಿತಃ ।
ತನ್ಮೇ ವದ ವಿಶಾಲಾಂಗೇ ತಾಂ ದೃಷ್ಟ್ವಾ ದುಃಖಿತಾ ಹ್ಯಹಂ ॥ ೩ ॥

---

## ಮುವತ್ತೊಂದನೆಯ ಅಧ್ಯಾಯವು

೧. ವಸಿಷ್ಠನು ಹೇಳಿದನು :—ಕಾಷ್ಠೀಲೆಯ ಆ ವಚನವನ್ನು ಕೇಳಿ ಕಿರುನಗೆಯಿಂದ ಶೃಂಗಾರವನ್ನು ಬೀರುತ್ತಿರುವ ಸಂಧ್ಯಾವಳಿಯು ಪ್ರೀತಿಯಿಂದ ಕಾಷ್ಠೀಲೆಗೆ ಹೇಳಿದಳು.

೨. ಕಾಷ್ಠೀಲೇ ! ನಿನ್ನ ಪೂರ್ವವೃತ್ತಾಂತವನ್ನು ಕೇಳಿದುದರಿಂದ ನೀನು ಈ ಕೀಳುಜನ್ಮವನ್ನು ಹೇಗೆ ಹೊಂದಿದೆಯೆಂಬುದನ್ನು ತಿಳಿದು ಈಗ ನನಗೆ ಆಶ್ಚರ್ಯವುಂಟಾಗಿದೆ.

೩. ವಿಶಾಲಾಂಗಿಯೇ ! ನಿನ್ನ ಅವಸ್ಥೆಯನ್ನು ನೋಡಿ ನಾನು ಬಹಳ ದುಃಖಿಸುತ್ತಿರುವೆನು. ಈ ಕೀಳು ಜನ್ಮದಿಂದ ನಿನಗೆ ಮುಕ್ತಿಯಾಗಬೇಕಾದರೆ ಏನುಮಾಡಬೇಕು ? ಎಂಬುದ್ನು ನನಗೆ ಹೇಳು.

ಮಾಂಸಪಿಂಡೋಪಮಂ ಶ್ಲಕ್ಷ್ಣಂ ನವನೀತೋಪಮಂ ಶುಭೇ ।
ಶರೀರಂ ತವ ಸಂವೀಕ್ಷ್ಯ ದಯಾ ಮೇ ಜಾಯತೇ ಹೃದಿ ॥ ೪ ॥

ಕಾಷ್ಠೀಲೋವಾಚ

ಪೃಥಿವೀಂ ದಾಸ್ಯಸೇ ಸುಭ್ರು ಸಕಲಾಮಪಿ ಮತ್ಕೃತೇ ।
ತಥಾಪಿ ನೈವ ಮುಚ್ಯೇಯಂ ಸದ್ಯಃ ಕುತ್ಸಿತಯೋನಿತಃ ॥ ೫ ॥

ಯೇನ ಪುಣ್ಯೇನ ಸುಭಗೇ ಮುಚ್ಯೇಯಂ ಕರ್ಮಬಂಧನಾತ್ ।
ತನ್ನಿರ್ದಿಶಾಮಿ ಸುಮುಹದ್ಗತಿದಂ ತ್ವಂ ನಿಶಾಮಯ ॥ ೬ ॥

ಯಶ್ಚಾಯಂ ಮಾಘಮಾಸಸ್ತು ಸರ್ವಮಾಸೋತ್ತಮಃ ಸ್ಮೃತಃ ।
ಯಸ್ಮಿನ್ ಕ್ಷೀಯಂತಿ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ॥ ೭ ॥

ದುರ್ಲಭೋ ಮಾಘಮಾಸೋ ವೈ ದುರ್ಲಭಂ ಜನ್ಮ ಮಾನುಷಂ ।
ದುರ್ಲಭಂ ಚೋಷಸಿ ಸ್ನಾನಂ ದುರ್ಲಭಂ ಕೃಷ್ಣಸೇವನಂ ॥ ೮ ॥

---

೪. ಶೋಭನೆಯೇ ! ಮಾಂಸದ ಮುದ್ದೆಯಂತಿರುವ, ಜಿಡ್ಡಾಗಿರುವ ಬೆಣ್ಣೆಗೆ ಸಮಾನವಾದ ನಿನ್ನ ದೇಹವನ್ನು ನೋಡಿ ನನಗೆ ಮನಸ್ಸಿನಲ್ಲಿ ದಯೆ ಯುಂಟಾಗಿದೆ.

೫. ಕಾಷ್ಠೀಲೆಯು ಹೇಳಿದಳು :—ಸುಂದರಹುಬ್ಬುಗಳುಳ್ಳ ಸಂಧ್ಯಾವಳಿಯೇ ? ಈ ಭೂಮಂಡಲವನ್ನೆಲ್ಲಾ ನನಗಾಗಿ ನೀನು ಕೊಟ್ಟರೂ ನಾನು ಈಗಲೇ ಕೀಳುಜನ್ಮದಿಂದ ಪಾರಾಗಲಾರೆನು.

೬. ಸುಭಗೇ ! ಯಾವ ಪುಣ್ಯಕರ್ಮದಿಂದ ನಾನು ಕರ್ಮಬಂಧದಿಂದ ಬಿಡುಗಡೆಯಾದೇನೆಂಬುದನ್ನು ಹೇಳುವೆನು ಕೇಳು.

೭. ಮಾಘಮಾಸವು ಸಕಲಮಾಸಗಳಲ್ಲಿಯೂ ಉತ್ತಮವೆಂದು ವಿಹಿತವಾಗಿದೆ. ಆ ಮಾಸದಲ್ಲಿ ಬ್ರಹ್ಮಹತ್ಯಾದಿಪಾಪಗಳೆಲ್ಲವೂ ದೂರಹೋಗುತ್ತವೆ.

೮-೯. ಮಾಘಮಾಸವು ಲಭಿಸುವುದು ಕಷ್ಟ ! ಮನುಷ್ಯಜನ್ಮವು ದುರ್ಲಭವು ! ಮಾಘಮಾಸದಲ್ಲಿ ಉಷಃಕಾಲದ ಸ್ನಾನವು ದುರ್ಲಭವು ! ಕೃಷ್ಣಸೇವೆಯು

ದುರ್ಲಭಂ ವಾಸರಂ ವಿಷ್ಣೋರ್ವಿಧಿನಾ ಸಮುಪೋಷಿತಂ |
ದೇವೈಸ್ತೇಜಃ ಪರಿಕ್ಷಿಪ್ತಂ ಮಾಘಮಾಸೇ ಸ್ವಕಂ ಜಲೇ || ೯ ||

ತಸ್ಮಾಜ್ಜಲಂ ಮಾಘಮಾಸೇ ಪಾವನಂ ಹಿ ವಿಶೇಷತಃ |
ನೇದೃಶೀ ಸಂಗರೇ ಶೂರೈರ್ಗತಿಃ ಪ್ರಾಪ್ಯೇತ ಸೌಖ್ಯದಾ || ೧೦ ||

ಯಾದೃಶೀ ಪ್ಲವನೇ ಪ್ರಾತಃ ಪ್ರಾಪ್ಯತೇ ನಿಯಮಸ್ಥಿತೈಃ |
ಸರಿತ್ತಡಾಗವಾಪೀಷು ಸ್ನಾನೇ ಸತ್ತಮಮೀರಿತಂ || ೧೧ ||

ಕೂಪಭಾಂಡಜಲೈರ್ಮಧ್ಯಂ ಜಘನ್ಯಂ ವಹ್ನಿತಾಪಿತೈಃ |
ನ ಸೌಖ್ಯೈರ್ಲಭ್ಯತೇ ಪುಣ್ಯಂ ದುಃಖೈರೇವಾಪ್ಯತೇ ತು ತತ್ || ೧೨ ||

ಧರ್ಮಸೇವಾರ್ಥಕಂ ಸ್ನಾನಂ ನಾಂಗನೈರ್ಮಲ್ಯಹೇತುಕಂ |
ಹೋಮಾರ್ಥಂ ಸೇವನಂ ವಹ್ನೇರ್ನ ಚ ಶೀತಾದಿಹಾನಯೇ || ೧೩ ||

---

ದುರ್ಲಭವು! ಅಂತೆಯೇ ವಿಧಿವತ್ತಾಗಿ ಉಪವಾಸಮಾಡಿದಂತಹ ಹರಿವಾಸರವೂ ದುರ್ಲಭವು! ಮಾಘಮಾಸದಲ್ಲಿ ದೇವತೆಗಳು ತಮ್ಮ ತೇಜಸ್ಸನ್ನು ನೀರಿನಲ್ಲಿ ಟ್ಟಿರುವರು.

೧೦-೧೧. ಆದಕಾರಣ ಮಾಘಮಾಸದಲ್ಲಿ ನೀರು ಅತ್ಯಂತ ಪವಿತ್ರವಾಗಿ ರುತ್ತದೆ. ಮಾಘಮಾಸದಲ್ಲಿ ನಿಯಮಸ್ಥರಾಗಿ ಪ್ರಾತಃಸ್ನಾನಮಾಡುವುದರಿಂದ ಲಭಿಸುವಂತಹ ಸೌಖ್ಯದಾಯಕವಾದ ಗತಿಯು ಯುದ್ಧದಲ್ಲಿ ಜಯಿಸುವ ಪರಾಕ್ರಮಿಗಳಿಗೂ ಸಹ ಲಭಿಸಲಾರದು. ನದೀ, ಕೆರೆ, ಸರೋವರಗಳಲ್ಲಿ ಸ್ನಾನಮಾಡುವುದುತ್ತಮವೆಂದು ವಿಹಿತವಾಗಿದೆ.

೧೨. ಬಾವಿಯ ನೀರು ಅಥವಾ ಪಾತ್ರೆಯಲ್ಲಿ ತುಂಬಿಟ್ಟ ನೀರಿನಿಂದ ಸ್ನಾನಮಾಡುವುದು ಮಧ್ಯಮವೆಂದೂ, ಉಷ್ಣೋದಕಸ್ನಾನಮಾಡುವುದು ಅಧಮವೆಂದೂ ಹೇಳಿದೆ. ಸೌಖ್ಯದಿಂದ ಪುಣ್ಯವು ಲಭಿಸುವುದಿಲ್ಲ. ಕಷ್ಟದಿಂದಲೇ ಲಭಿಸತಕ್ಕದು.

೧೩. ಧರ್ಮಸೇವನೆಯೇ ಸ್ನಾನಕ್ಕೆ ಫಲವು. ದೇಹದಲ್ಲಿನ ಕೊಳೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಸ್ನಾನವು ವಿಹಿತವಲ್ಲ. ಹೋಮಮಾಡುವುದ

ಯಾವನ್ನೋದಯತೇ ಸೂರ್ಯಸ್ತಾವತ್ಸ್ನಾನಂ ವಿಧೀಯತೇ |
ಆಚ್ಛಾದಿತೇ ಘನೈರ್ವ್ಯೋಮ್ನಿ ಹ್ಯುದ್ಗಮಿಷ್ಯಂತಮರ್ಥಯೇತ್ || ೧೪ ||

ಅಭಾವೇ ಸರಿದಾದೀನಾಂ ನವಕುಂಭಸ್ಥಿತಂ ಜಲಂ |
ವಾಯುನಾ ತಾಡಿತಂ ರಾತ್ರೌ ಸ್ನಾನೇ ಗಂಗಾಸಮಂ ವಿದುಃ || ೧೫ ||

ಮಾಘಸ್ನಾಯೀ ವರಾರೋಹೇ ದುರ್ಗತಿಂ ನೈವ ಪಶ್ಯತಿ |
ತನ್ನಾಸ್ತಿ ಪಾತಕಂ ಯಸ್ತು ಮಾಘಸ್ನಾನಂ ನ ಶೋಧಯೇತ್ || ೧೬ ||

ಅಗ್ನಿಪ್ರವೇಶಾದಧಿಕಂ ಮಾಘೋಷಸ್ಯೇವ ಮಜ್ಜನಂ |
ಜೀವತಾ ಭುಜ್ಯತೇ ದುಃಖಂ ಮೃತೇನ ಬಹುಲಂ ಸುಖಂ || ೧೭ ||

---

ಕ್ಕಾಗಿಯೇ ಅಗ್ನಿಯನ್ನು ಸೇವಿಸಬೇಕೇ ವಿನಾ ಶೈತ್ಯವನ್ನು ಹೋಗಲಾಡಿಸಿ ಕೊಳ್ಳುವುದಕ್ಕಲ್ಲ.

೧೪. ಸೂರ್ಯೋದಯವಾಗುವುದಕ್ಕಿಂತ ಮುಂಚೆಯೇ ಸ್ನಾನವು ವಿಹಿತ ವಾಗಿದೆ. ಮೋಡಗಳಿಂದ ಆಕಾಶವು ಆವರಿಸಲ್ಪಟ್ಟಿರುವಾಗ ಅಲ್ಲಿಂದ ಮೇಲಕ್ಕೆ ಬರುತ್ತಿರುವ ಸೂರ್ಯನನ್ನು ಪ್ರಾರ್ಥಿಸಬೇಕು.

೧೫. ನದೀ ಮುಂತಾದುವುಗಳಿಲ್ಲದಿದ್ದರೆ ನೂತನವಾದ ಬಿಂದಿಗೆಯಲ್ಲಿ ನೀರುತುಂಬಿ ರಾತ್ರಿ ಗಾಳಿಯಲ್ಲಿಟ್ಟಿದ್ದು, ಅದರಲ್ಲಿ ಸ್ನಾನಮಾಡಿದರೆ ಗಂಗಾಸ್ನಾನಕ್ಕೆ ಸಮವಾದ ಪುಣ್ಯಬರುತ್ತದೆಂದು ಜ್ಞಾನಿಗಳು ಹೇಳುವರು.

೧೬. ವರಾರೋಹೇ! ಮಾಘಸ್ನಾನಮಾಡಿದವನು ದುರ್ಗತಿಯನ್ನು ಹೊಂದುವುದೇ ಇಲ್ಲ. ಮಾಘಸ್ನಾನದಿಂದ ಪರಿಹಾರವಾಗದಂತಹ ಪಾಪವೇ ಇಲ್ಲ.

೧೭. ಉಷಃಕಾಲದಲ್ಲಿ ಮಾಡುವ ಮಾಘಸ್ನಾನವು ಅಗ್ನಿಪ್ರವೇಶಕ್ಕಿಂತಲೂ ಹೆಚ್ಚಾದುದು. ಬದುಕಿರುವಾಗ ಕಷ್ಟಪಟ್ಟರೆ ಸತ್ತಮೇಲೆ ಬಹು ಸುಖವಾಗುವುದು.

ಏತಸ್ಮಾತ್ ಕಾರಣಾದ್ಭದ್ರೇ ಮಾಘಸ್ನಾನಂ ವಿಶಿಷ್ಯತೇ ।
ಅಹನ್ಯಹನಿ ದಾತವ್ಯಾಸ್ತಿಲಾಃ ಶರ್ಕರಯಾನ್ವಿತಾಃ ॥ ೧೮ ॥

ಮೇಘಪುಷ್ಪೋಪಪನ್ನೇನ ಸಹಾನ್ನೇನ ಸುಮಧ್ಯಮೇ ।
ಯಾವಕೈಶ್ಚೈವ ಹೋತವ್ಯಾ ಗವ್ಯಸರ್ಪಿಃಸಮನ್ವಿತೈಃ ॥ ೧೯ ॥

ಮಾಘ್ಯಾಂ ಸ್ನಾನಸಮಾಪ್ತೌ ತು ದದ್ಯಾದ್ವಿಪ್ರಾಯ ಷಡ್ರಸಂ ।
ಸೂರ್ಯೋ ಮೇ ಪ್ರಿಯತಾಂ ದೇವೋ ವಿಷ್ಣುಮೂರ್ತಿರ್ನಿರಂಜನಃ ॥

ವಾಸಾಂಸಿ ದ್ವಿಜಯುಗ್ಮಾಯ ಸಸಪ್ತಾನ್ನಾನಿ ಚಾರ್ಪಯೇತ್ ।
ತ್ರಿಂಶಚ್ಚ ಮೋದಕಾ ದೇಯಾಸ್ತಿಲಾನ್ನಾಃ ಶರ್ಕರಾಮಯಾಃ ॥ ೨೧ ॥

ಭಾಗಾಸ್ತ್ರಯಸ್ತಿಲಾನಾಂ ತು ಚತುರ್ಥಃ ಶರ್ಕರಾಂಶಕಃ ।
ತಾಂಬೂಲಾದೀನಿ ಭೋಗ್ಯಾನಿ ಭಕ್ತ್ಯಾ ದದ್ಯಾದ್ವಿಧಾನವಿತ್ ॥ ೨೨ ॥

---

೧೮-೧೯. ಭದ್ರೇ! ಈ ಕಾರಣದಿಂದ ಮಾಘಸ್ನಾನವು ಉತ್ತಮವಾದುದು. ಸುಮಧ್ಯಮೇ! ಪ್ರತಿದಿನವೂ ಅನ್ನ ಸಕ್ಕರೆಗಳೊಡನೆ ನೀರಿನ ಸಹಿತವಾಗಿ ಎಳ್ಳನ್ನು ದಾನಮಾಡಬೇಕು. ಮತ್ತು ಗೋಘೃತಸಹಿತವಾಗಿ ಯವಧಾನ್ಯದಿಂದ ಹೋಮಮಾಡಬೇಕು.

೨೦. ಮಾಘಮಾಸದಲ್ಲಿ ಸ್ನಾನಮುಗಿಸಿದ ನಂತರ ನಿರ್ದೋಷನಾದ, ಸೂರ್ಯಾಂತರ್ಗತ ವಿಷ್ಣುಮೂರ್ತಿದೇವನು ಪ್ರೀತನಾಗಲೆಂದು ಸಂಕಲ್ಪಿಸಿ ಬ್ರಾಹ್ಮಣನಿಗೆ ಷಡ್ರಸಯುಕ್ತವಾದ ಅನ್ನವನ್ನು ದಾನಮಾಡಬೇಕು.

೨೧. ಏಳು ಅನ್ನಗಳ ಸಹಿತವಾಗಿ ಇಬ್ಬರು ಬ್ರಾಹ್ಮಣರಿಗೆ ವಸ್ತ್ರಗಳನ್ನು ಸಮರ್ಪಿಸಬೇಕು. ಮೂವತ್ತು ಕಡಬುಗಳು, ಸಕ್ಕರೆಯಿಂದ ನಿರ್ಮಿತವಾದ ತಿಲಾನ್ನ ಇವುಗಳನ್ನೂ ದಾನಮಾಡಬೇಕು.

೨೨. ಮೂರುಭಾಗ ಎಳ್ಳು, ಒಂದು ಭಾಗ ಸಕ್ಕರೆ ಇವುಗಳನ್ನು ಸೇರಿಸಿ ತಿಲಾನ್ನವನ್ನು ರಚಿಸಬೇಕು. ವಿಧಾನಜ್ಞನು ತಾಂಬೂಲ ಮುಂತಾದ ಭೋಗ್ಯವಸ್ತುಗಳನ್ನು ಭಕ್ತಿಯಿಂದ ಪಾತ್ರದಲ್ಲಿ ದಾನಮಾಡಬೇಕು.

ಸ್ರೋತೋಮುಖಶ್ಚ ಸರಿತಿ ಚಾನ್ಯತ್ರ ಭಾಸ್ಕರಸಂಮುಖಃ ।
ಸ್ನಾಯಾದಾವಾಹ್ಯ ತೀರ್ಥಾನಿ ಗಂಗಾದೀನ್ಯರ್ಕಮಂಡಲಾತ್ ॥ ೨೩ ॥

ಯದನೇಕಜನುರ್ಜನ್ಯಂ ಯಜ್ಞಾನಾಜ್ಞಾನತಃ ಕೃತಂ ।
ತ್ವತ್ತೇಜಸಾ ಹತಂ ಚಾಸ್ತು ತತ್ತು ಪಾಪಂ ಸಹಸ್ರಧಾ ॥ ೨೪ ॥

ದಿವಾಕರ ಜಗನ್ನಾಥ ಪ್ರಭಾಕರ ನಮೋಸ್ತು ತೇ ।
ಪರಿಪೂರ್ಣಂ ಕುರುಷ್ವೇದಂ ಮಾಘಸ್ನಾನಂ ಮಮಾಚ್ಯುತ ॥ ೨೫ ॥

ತೀರ್ಥಸ್ನಾಯೀ ವರಾರೋಹೇ ಮಾಘಸ್ನಾಯೀ ಫಲಾಲ್ಪಕಃ ।
ತೀರ್ಥಸ್ನಾನಾದಿಯಾತ್ಸ್ವರ್ಗಂ ಮಾಘಸ್ನಾನಾತ್ಪರಂ ಪದಂ ॥ ೨೬ ॥

ಮಾಘಸ್ಯ ಧವಲೇ ಪಕ್ಷೇ ಭವೇದೇಕಾದಶೀ ತು ಯಾ ।
ರವಿವಾರೇಣ ಸಂಯುಕ್ತಾ ಮಹಾಪಾತಕನಾಶಿನೀ ॥ ೨೭ ॥

---

೨೩. ನದಿಯಲ್ಲಿ ಪ್ರವಾಹಾಭಿಮುಖವಾಗಿಯೂ, ಇತರ ಜಲಾಶಯಾದಿಗಳಲ್ಲಿ ಸೂರ್ಯನಿಗಭಿಮುಖವಾಗಿ ಎಂದರೆ ಪೂರ್ವಾಭಿಮುಖವಾಗಿಯೂ, ನಿಂತು ಸೂರ್ಯಮಂಡಲದಿಂದ ಗಂಗಾತೀರ್ಥಗಳನ್ನಾವಾಹನೆಮಾಡಿ ಸ್ನಾನಮಾಡಬೇಕು.

೨೪. ಸ್ನಾನಮಾಡುವಾಗ ತಿಳಿದು ಅಥವಾ ತಿಳಿಯದೆಯೂ ಅನೇಕ ಜನ್ಮಗಳಲ್ಲಿ ನಾನು ಮಾಡಿದ ಸಾವಿರಾರು ಪಾಪಗಳು ನಿನ್ನ ತೇಜಸ್ಸಿನಿಂದ ಹೋಗಲಿ ಎಂದು ಸೂರ್ಯದೇವನನ್ನು ಪ್ರಾರ್ಥಿಸಬೇಕು.

೨೫. ಸೂರ್ಯಬಿಂಬಾಂತರ್ಗತನಾಗಿ ಜಗತ್ತನ್ನೇ ಬೆಳಗುತ್ತಿರುವ ಲೋಕನಾಥನೇ! ನಿನಗೆ ನಮಸ್ಕಾರ! ಅಚ್ಯುತನೇ! ನಾನು ಮಾಡಿರುವ ಈ ಮಾಘಸ್ನಾನವು ಪರಿಪೂರ್ಣವಾಗುವಂತೆ ಅನುಗ್ರಹಿಸು ಎಂಬುದಾಗಿ ಪ್ರಾರ್ಥಿಸಬೇಕು.

೨೬. ವರಾರೋಹೇ! ಪುಣ್ಯತೀರ್ಥಸ್ನಾನಮಾಡಿದವನು ಮಾಘಸ್ನಾಯಿಗಿಂತಲೂ ಅಲ್ಪಫಲವನ್ನು ಹೊಂದುವನು. ತೀರ್ಥಸ್ನಾನದಿಂದ ಸ್ವರ್ಗಕ್ಕೆ ಹೋಗುವನು, ಮಾಘಸ್ನಾನಮಾಡಿದರೆ ಮುಕ್ತಿಗೆ ಹೋಗುವನು.

೨೭. ಮಾಘಮಾಸದ ಶುಕ್ಲಪಕ್ಷದಲ್ಲಿನ ಏಕಾದಶಿಯು ಭಾನುವಾರಯುಕ್ತವಾದರೆ ಅದು ಮಹಾಪಾತಕನಾಶಕವಾಗುವುದು.

ವಿನಾಪಿ ಋಕ್ಷಸಂಯೋಗಂ ಸಾ ಶುಕ್ಲೈಕಾದಶೀ ನೃಣಾಂ ।
ವಿನಿರ್ದಹತಿ ಪಾಪಾನಿ ಕುತಪೋ ವಿಷಯಂ ಯಥಾ ॥ ೨೮ ॥

ಕುಪುತ್ರಸ್ತು ಕುಲಂ ಯದ್ವತ್ಕುಭಾರ್ಯಾ ಚ ಪತಿಂ ಯಥಾ ।
ಅಧರ್ಮಸ್ತು ಯಥಾ ಧರ್ಮಂ ಕುಮಂತ್ರೀ ನೃಪತಿಂ ಯಥಾ ॥ ೨೯ ॥

ಅಜ್ಞಾನಂ ಚ ಯಥಾ ಜ್ಞಾನಂ ಕುಶೌಚಂ ಶುಚಿತಾಂ ಯಥಾ ।
ಯಥಾಹಂತ್ಯನೃತಂ ಸತ್ಯಂ ವಾದಃ ಸಂವಾದಮೇವ ಚ ॥ ೩೦ ॥

ಉಷ್ಣಂ ಹಿಮಮನರ್ಥೋಽರ್ಥಂ ಪಾಪಂ ಕೀರ್ತಿಂ ಸ್ಮಯಸ್ತಪಃ ।
ಯಥಾ ರಸಾ ಮಹಾರೋಗಾನ್ ಶ್ರಾದ್ಧಂ ಸಂಕೇತ ಏವ ಚ ॥ ೩೧ ॥

ಯಥಾ ದುರಿತಸಂಘಂ ತು ದ್ವಾದಶೀ ಹಂತಿ ಸಾಧಿತಾ ।
ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ॥ ೩೨ ॥

---

೨೮. ಕುತಪವೆಂಬ ಅಹಸ್ಸಿನ ಎಂಟನೆಯ ಒಂದು ಭಾಗದ ಮಧ್ಯಾಹ್ನ ಕಾಲವು ವಿಷಯವನ್ನು ದಹಿಸುವಂತೆ ಮಾಘಶುಕ್ಲೈಕಾದಶಿಯು ನಕ್ಷತ್ರಯೋಗವಿಲ್ಲದೆಯೇ ಮನುಷ್ಯರಪಾಪಗಳೆಲ್ಲವನ್ನೂ ದಹಿಸುತ್ತದೆ.

೨೯-೩೬. ದುಷ್ಟಮಗನು ವಂಶವನ್ನೂ, ದುಷ್ಟಪತ್ನಿಯು ಪತಿಯನ್ನೂ, ಅಧರ್ಮವು ಧರ್ಮವನ್ನೂ, ದುರ್ಮಂತ್ರಿಯು ರಾಜನನ್ನೂ, ಅಜ್ಞಾನವು ಜ್ಞಾನವನ್ನೂ ಅಶುದ್ಧಿಯು ಶುದ್ಧಿಯನ್ನೂ, ಸುಳ್ಳು ನಿಜವನ್ನೂ, ವಾದವು ಸಂವಾದವನ್ನೂ, ಉಷ್ಣವು ಶೈತ್ಯವನ್ನೂ, ಅನರ್ಥವು ಅರ್ಥವನ್ನೂ, ಪಾಪವು ಕೀರ್ತಿಯನ್ನೂ, ಗರ್ವವು ತಪಸ್ಸನ್ನೂ, ರಸೌಷಧಿಗಳು ಮಹಾರೋಗವನ್ನೂ, ಸಂಕೇತವು ಶ್ರಾದ್ಧವನ್ನೂ ಹಾಳುಮಾಡುವಂತೆ ವಿಧಿವತ್ತಾಗಿ ಸಾಧಿಸಲ್ಪಟ್ಟ ದ್ವಾದಶೀವ್ರತವು ಪಾಪಸಮೂಹವನ್ನು ನಾಶಮಾಡುತ್ತದೆ.

ಬ್ರಹ್ಮಹತ್ಯೆ, ಮದ್ಯಪಾನ, ಸ್ವರ್ಣಸ್ತೇಯ, ಗುರುಪತ್ನೀಗಮನ ಮುಂತಾದ ಮಹಾಪಾತಕಗಳೆಲ್ಲವೂ ಮಿಳಿತವಾಗಿದ್ದರೂ ಇವೆಲ್ಲವನ್ನೂ ಹರಿದಿನವ್ರತಾಚರಣೆಯು ಬೇಗ ಪರಿಹಾರಮಾಡುತ್ತದೆ.

**ಮಹಾಂತಿ ಪಾತಕಾನ್ಯೇತಾನ್ಯಾಶು ಹಂತಿ ಹರೇರ್ದಿನಂ |**
**ಸಮವೇತಾನಿ ಚೈತಾನಿ ನ ಶಾಮಯತಿ ಪುಷ್ಕರಂ || ೩೩ ||**

**ನ ಚಾಪಿ ನೈಮಿಷಾರಣ್ಯಂ ನ ಕ್ಷೇತ್ರಂ ಕುರುಸಂಜ್ಞಿತಂ |**
**ಪ್ರಭಾಸೋ ನ ಗಯಾ ದೇವಿ ನ ರೇವಾ ನ ಸರಸ್ವತೀ || ೩೪ ||**

**ನ ಗಂಗಾ ಯಮುನಾ ಚೈವ ಪ್ರಯಾಗೋ ನ ಚ ದೇವಿಕಾ |**
**ನ ಸರಾಂಸಿ ನದಾಶ್ಚಾನ್ಯೇ ಹೋಮದಾನತಪಾಂಸಿ ಚ || ೩೫ ||**

**ನ ಚಾನ್ಯತ್ ಸುಕೃತಂ ಸುಭ್ರು ಪುರಾಣೇ ಪಠ್ಯತೇ ಸ್ಫುಟಂ |**
**ಪಾಪಸಂಘವಿನಾಶಾಯ ಮುಕ್ತ್ವೈಕಂ ಹರಿವಾಸರಂ || ೩೬ ||**

**ಉಪೋಷಣಾತ್ ಸಕೃದ್ದೇವಿ ವಿನಶ್ಯಂತ್ಯಘರಾಶಯಃ |**
**ಏಕತಃ ಪೃಥಿವೀದಾನಮೇಕತೋ ಹರಿವಾಸರಂ || ೩೭ ||**

---

ಪುಷ್ಕರಕ್ಷೇತ್ರ, ನೈಮಿಷಾರಣ್ಯ, ಕುರುಕ್ಷೇತ್ರ, ಪ್ರಭಾಸಕ್ಷೇತ್ರ, ಗಯೆ, ನರ್ಮದಾನದಿ, ಸರಸ್ವತೀ, ಗಂಗಾ, ಯಮುನಾನದಿಗಳು, ಪ್ರಯಾಗಕ್ಷೇತ್ರ, ದೇವಿಕೆಯು, ಪುಣ್ಯಸರೋವರಗಳು, ಇತರ ನದಗಳು, ಹೋಮದಾನ ತಪಸ್ಸುಗಳು ಮತ್ತು ಪುರಾಣದಲ್ಲಿ ಸ್ಪಷ್ಟವಾಗಿ ಹೇಳಿರುವ ಬೇರಾವ ಸುಕೃತವೂ ಸಹ ಹರಿದಿನವ್ರತವೊಂದನ್ನು ಬಿಟ್ಟರೆ ಪಾಪಸಮೂಹಗಳನ್ನು ನಾಶಮಾಡಲಾರವು. ಎಂದರೆ ಇತರ ಪುಣ್ಯತೀರ್ಥಕ್ಷೇತ್ರಾದಿಗಳಾವುವೂ ನಾಶಮಾಡದಿರುವ ಪಾಪಗಳನ್ನೂ ಸಹ ಹರಿವಾಸರವು ನಾಶಪಡಿಸುತ್ತದೆ, ಇದು ಎಲ್ಲಕ್ಕಿಂತಲೂ ಉತ್ತಮವು, ಬಿಡದೆ ಆಚರಿಸತಕ್ಕುದು ಎಂದು ಅಭಿಪ್ರಾಯ.

೩೭-೪೦. ದೇವಿಯೇ ! ಒಂದಾವರ್ತಿ ಏಕಾದಶೀ ಉಪವಾಸಮಾಡಿದರೆ ಪಾಪರಾಶಿಗಳು ಹೋಗುತ್ತವೆ. ಒಂದೆಡೆಯಲ್ಲಿ ಪೃಥುವಿಯ ದಾನ, ಇನ್ನೊಂದೆಡೆಯಲ್ಲಿ ಹರಿವಾಸರವ್ರತವನ್ನಿಟ್ಟು ತುಲನಮಾಡಿದರೆ ಪೃಥುವಿಯ ದಾನವು ಹರಿವಾಸರಕ್ಕೆ ಸಮವಾಗಲಾರದು. ಹರಿವಾಸರವೇ ಹೆಚ್ಚಿನದಾಗುವುದೆಂದು ಬ್ರಹ್ಮನಿಂದ ಉಕ್ತವಾಗಿದೆ.

ನ ಸಮಂ ಬ್ರಹ್ಮಣಾ ಪ್ರೋಕ್ತಮಧಿಕಂ ಹರಿವಾಸರಂ ।
ತಸ್ಮಿನ್ ವರಾಹವಪುಷಂ ಕೃತ್ವಾ ದೇವಂ ತು ಹಾಟಕಂ ॥ ೩೮ ॥

ಘಟೋಪರಿ ನವೇ ಪಾತ್ರೇ ಧೃತ್ವಾ ತಾಮ್ರಮಯೇ ಶುಭೇ ।
ಸರ್ವಬೀಜಾನ್ವಿತೇ ಚೈವ ಸಿತವಸ್ತ್ರಾವಗುಂಠಿತೇ ॥ ೩೯ ॥

ಸಹಿರಣ್ಯೇ ಸುದೀಪಾಢ್ಯೇ ಕೃತಪುಷ್ಪಾವತಂಸಕೇ ।
ವಿಧಿನಾ ಪೂಜಯಿತ್ವಾ ಚ ಕುರ್ಯಾಜ್ಜಾಗರಣಂ ವ್ರತೀ ॥ ೪೦ ॥

ಪ್ರಾತರ್ವಿಪ್ರಾಯ ದದ್ಯಾಚ್ಚ ವೈಷ್ಣವಾಯ ಕುಟುಂಬಿನೇ ।
ತತ್ಕುಂಭಂ ಕ್ರೋಡಸಂಯುಕ್ತಂ ಸನೈವೇದ್ಯಪರಿಚ್ಛದಂ ॥ ೪೧ ॥

ಪಶ್ಚಾಚ್ಚ ಪಾರಣಂ ಕುರ್ಯಾದ್ದ್ವಿಜಾನ್ ಭೋಜ್ಯ ಸುಹೃದ್ವೃತಃ ।
ಏವಂ ಕೃತೇ ವರಾರೋಹೇ ನ ಭೂಯೋ ಜಾಯತೇ ಕ್ವಚಿತ್ ॥ ೪೨ ॥

---

ಆ ಏಕಾದಶಿಯ ದಿನದಲ್ಲಿ ವ್ರತಕರ್ತನು ಕಲಶವನ್ನು ಸ್ಥಾಪಿಸಿ ಅದರ ಮೇಲೆ ಸರ್ವಬೀಜಯುಕ್ತವಾದ ತಾಮ್ರದ ಹೊಸಪಾತ್ರೆಯನ್ನಿಟ್ಟು, ಅದರಲ್ಲಿ ಬಂಗಾರದಿಂದ ಮಾಡಿದ ವರಾಹದೇವವಿಗ್ರಹವನ್ನು ಸ್ಥಾಪಿಸಿ, ಬಿಳಿಯ ವಸ್ತ್ರವನ್ನು ಹೊದಿಸಿ, ದೀಪಹಚ್ಚಿ, ಪುಷ್ಪಾಭರಣಗಳನ್ನರ್ಪಿಸಿ, ಸುವರ್ಣವನ್ನು ಕಲಶದಲ್ಲಿ ಹಾಕಿ, ಆ ವರಾಹದೇವನನ್ನು ವಿಧ್ಯುಕ್ತಪ್ರಕಾರವಾಗಿ ಪೂಜಿಸಿ ಬಳಿಕ ಏಕಾದಶಿಯ ರಾತ್ರಿ ಜಾಗರಣೆಯನ್ನು ಮಾಡಬೇಕು.

೪೧ ಬೆಳಗಾದಮೇಲೆ ದ್ವಾದಶಿಯ ದಿನದಲ್ಲಿ ನೈವೇದ್ಯಮಾಡಿದ ಸಾಮಾನುಗಳ ಸಹಿತವಾಗಿ ವರಾಹವಿಗ್ರಹಸಹಿತವಾದ ಆ ಕಲಶವನ್ನು ಕುಟುಂಬಿಯಾದ ವೈಷ್ಣವನಿಗೆ ದಾನಮಾಡಬೇಕು.

೪೨. ತರುವಾಯ ಬ್ರಾಹ್ಮಣರು ಮತ್ತು ಇಷ್ಟಮಿತ್ರರಿಗೆ ಭೋಜನ ಮಾಡಿಸಿ ಪಾರಣೆಮಾಡಬೇಕು. ವರಾರೋಹೇ! ಈ ರೀತಿಯಾಗಿ ವ್ರತಾನುಷ್ಠಾನಮಾಡಿದರೆ ಪುನಃ ಇಲ್ಲಿ ಜನ್ಮವನ್ನು ಹೊಂದುವುದಿಲ್ಲ. ಮುಕ್ತನೇ ಆಗುವನು.

ಬಹುಜನ್ಮಾರ್ಜಿತಂ ಪಾಪಂ ಜ್ಞಾನಾಜ್ಞಾನಕೃತಂ ಚ ಯತ್ |
ತತ್ಸರ್ವಂ ನಾಶಮಾಯಾತಿ ತಮಃ ಸೂರ್ಯೋದಯೇ ಯಥಾ ॥ ೪೩ ॥

ಯಥಾಶಾಸ್ತ್ರಂ ಮಯಾ ತುಭ್ಯಂ ವರ್ಣಿತಾ ದ್ವಾದಶೀ ಶುಭೇ |
ಯಾ ಸಾ ಕೃತಾ ತ್ವಯಾ ಪೂರ್ವಮಾಸೀದ್ದೇವ್ಯನ್ಯಜನ್ಮನಿ ॥ ೪೪ ॥

ಯಸ್ಯಾಸ್ತ್ವಾತುಲಾ ವ್ಯುಷ್ಟಿರ್ವರ್ತತೇ ವರ್ತಯಿಷ್ಯತಿ |
ಭರ್ತುಸ್ತವ ಚ ಪುತ್ರಸ್ಯ ಸರ್ವದಾ ಸುಖದಾಯಿನೀ ॥ ೪೫ ॥

ತಸ್ಯಾಸ್ತ್ವಯಾ ತುರೀಯಾಂಶೋ ದೇಯಶ್ಚೇನ್ಮಹ್ಯಮಾದರಾತ್ |
ತದಾ ಪ್ರೀತಾ ಗಮಿಷ್ಯಾಮಿ ತದ್ವಿಷ್ಣೋಃ ಪರಮಂ ಪದಂ ॥ ೪೬ ॥

---

೪೩. ಸೂರ್ಯೋದಯವಾದರೆ ಕತ್ತಲು ಹೋಗುವಂತೆ ಉಕ್ತವಿಧಾನದಿಂದ ವ್ರತವನ್ನಾಚರಿಸಿದರೆ ಬಹು ಜನ್ಮಗಳಲ್ಲಿ ತಿಳಿದೂ, ತಿಳಿಯದೆಯೂ ಮಾಡಿದ ಪಾಪಗಳೆಲ್ಲವೂ ಹೋಗುವುದು.

೪೪-೪೫. ಶೋಭನೇ ! ನಿನಗೆ ಶಾಸ್ತ್ರೋಕ್ತಪ್ರಕಾರವಾಗಿ ದ್ವಾದಶಿಯ ಮಾಹಾತ್ಮ್ಯೆಯನ್ನು ವರ್ಣಿಸಿ ಹೇಳಿರುವೆನು. ಅಂತಹ ದ್ವಾದಶಿಯು ಈ ಜನ್ಮ ಮತ್ತು ಹಿಂದಿನ ಜನ್ಮಗಳಲ್ಲಿಯೂ, ಸಹ ನಿನ್ನಿಂದ ಆಚರಿಸಲ್ಪಟ್ಟಿದೆ. ಆದರಿಂದ ನಿನಗೆ ಸಂಪೂರ್ಣಫಲವು ಅಸದೃಶವಾಗಿ ಬಂದಿದೆ. ಮುಂದೆಯೂ ಬರುವುದಾಗಿದೆ. ನೀನು ಪತಿಪುತ್ರರಿಗೆ ಸರ್ವದಾ ಸುಖದಾಯಕಳಾಗಿರುವೆ.

೪೬. ನೀನು ಗಳಿಸಿರುವ ಏಕಾದಶೀವ್ರತದಫಲದಲ್ಲಿ ನಾಲ್ಕನೆಯ ಒಂದು ಭಾಗವನ್ನು ಪ್ರೀತಿಯಿಂದ ನನಗೆ ಕೊಟ್ಟರೆ ಆದರಿಂದ ನಾನು ಪಾಪವನ್ನು ಕಳೆದುಕೊಂಡು ಸಂತೋಷದಿಂದ ವಿಷ್ಣುವಿನ ಪರಮಪದ ಎಂದರೆ ವೈಕುಂಠಲೋಕವನ್ನು ಸೇರಿ ಕೃತಾರ್ಥಳಾಗುವೆನು.

ವಿತ್ತಾಪಹ್ನುತಿಜಂ ಪಾಪಂ ಯದ್ಭೂತಂ ಮಮ ಸುಂದರಿ ।
ತಸ್ಯ ಪಾವನಹೇತುಂ ಚ ತುರೀಯಾಂಶಂ ಪ್ರಯಚ್ಛ ಮೇ ॥ ೪೭ ॥

ಜೀವಿತೇನಾಪಿ ವಿತ್ತೇನ ಭರ್ತಾರಂ ವಂಚಯೇತ್ತು ಯಾ ।
ಕೃಮಿಯೋನಿಶತಂ ಗತ್ವಾ ಪುಲ್ಕಸೀ ಜಾಯತೇ ತು ಸಾ ॥ ೪೮ ॥

ಸುರತಂ ಯಾಚಮಾನಾಯ ಪತ್ಯೇ ವಿತ್ತಂ ಚ ಮಾನಿನಿ ।
ಯಾ ನ ಯಚ್ಛತಿ ದುರ್ಬುದ್ಧಿಃ ಕಾಷ್ಠೀಲಾ ಜಾಯತೇ ಧ್ರುವಂ ॥ ೪೯ ॥

ತತ್ಪಾತಕವಿಶುದ್ಧ್ಯರ್ಥಂ ದೇಹಿ ಮೇ ದ್ವಾದಶೀಭವಂ ।
ತುರೀಯಾಂಶಮಿತಂ ಪುಣ್ಯಂ ಯದ್ಯಸ್ತಿ ಮಯಿ ತೇ ಘೃಣಾ ॥ ೫೦ ॥

ಏತಚ್ಛ್ರುತ್ವಾ ವಚಸ್ತಸ್ಯಾಃ ಕಾಷ್ಠೀಲಾಯಾಃ ಸುಲೋಚನಾ ।
ಪುಣ್ಯಂ ದತ್ತವತೀ ತಸ್ಯೈ ಪಾಣೌ ವಾರಿ ಪ್ರಗೃಹ್ಯ ಚ ॥ ೫೧ ॥

---

೪೭. ಸುಂದರೀ ! ಗಂಡನಿಗೆ ಧನವನ್ನು ವಂಚಿಸಿದುದರಿಂದ ಉಂಟಾದ ಪಾಪದಿಂದ ಪಾರು ಮಾಡಿ ಪರಿಶುದ್ಧಳನ್ನಾಗಿ ಮಾಡಿಕೊಳ್ಳಲು ಸಾಧಕವಾದ ನಿನ್ನ ಪುಣ್ಯದ ನಾಲ್ಕನೆಯ ಒಂದು ಭಾಗವನ್ನು ನನಗೆ ಕೊಡು.

೪೮. ಜೀವಿತ ಮತ್ತು ವಿತ್ತಗಳಿಂದ ಗಂಡನನ್ನು ವಂಚಿಸುವವಳು ನೂರು ಕ್ರಿಮಿಜನ್ಮವನ್ನನುಭವಿಸಿ ಪುಲ್ಕಸಜಾತಿಯಲ್ಲಿ ಹುಟ್ಟುವಳು.

೪೯. ಸಂಭೋಗ ಮತ್ತು ಧನಗಳನ್ನು ಬೇಡಿದ ಪತಿಗೆ ಅವನ್ನು ಕೊಡ ದಿರುವ, ದುರ್ಬುದ್ಧಿಯಾದ ಸ್ತ್ರೀಯು ಖಂಡಿತವಾಗಿ ಕಟ್ಟಿಗೆಯ ಹುಳುವಾಗಿ ಹುಟ್ಟುವಳು.

೫೦. ನಿನಗೆ ನನ್ನಲ್ಲಿ ದಯೆ ಹುಟ್ಟಿದ್ದರೆ ಆ ಪಾಪವನ್ನು ಕಳೆದುಕೊಳ್ಳು ವುದಕ್ಕಾಗಿ ದ್ವಾದಶೀವ್ರತಾಚರಣೆಯಿಂದ ನೀನು ಸಂಪಾದಿಸಿರುವ ಪುಣ್ಯದಲ್ಲಿ ನಾಲ್ಕನೆಯ ಒಂದುಭಾಗವನ್ನು ನನಗೆ ದಯಪಾಲಿಸು.

೫೧-೫೫. ಮೋಹಿನಿಯೇ ! ಕಾಷ್ಠೀಲೆಯ ಈ ಮಾತನ್ನು ಕೇಳಿ ಕೈಯಲ್ಲಿ ನೀರನ್ನು ಹಾಕಿಕೊಂಡು " ನಾನು ಪೂರ್ವದಲ್ಲಿ ಮಾಡಿರುವ ಏಕಾದಶೀ

ಯತ್ಕೃತಂ ಹಿ ಮಯಾ ಪೂರ್ವಮೇಕಾದಶ್ಯಾಮುಪೋಷಣಂ |
ತತ್ತುರೀಯಾಂಶಪುಣ್ಯೇನ ಕಾಷ್ಠೀಲೇಯಂ ವಿಮುಚ್ಯತಾಂ || ೫೨ ||

ಪೂರ್ವಜನ್ಮಕೃತಾತ್ಪಾಪಾತ್ಸತ್ಯಂ ಸತ್ಯಂ ಮಯೋದಿತಂ |
ಏವಮುಕ್ತೇ ತು ವಚನೇ ಮಯಾ ವಿದ್ಯುತ್ಸಮಪ್ರಭಾ || ೫೩ ||

ದೃಷ್ಟ್ವಾ ದಿವ್ಯವಿಮಾನಸ್ಥಾ ಗಚ್ಛಂತೀ ವೈಷ್ಣವಂ ಪದಂ |
ಪತಿರ್ಹಿ ದೈವತಂ ಲೋಕೇ ವಂಚನೀಯೋ ನ ಭಾರ್ಯಯಾ || ೫೪ ||

ದೇಹೇನ ಚಾಪಿ ವಿತ್ತೇನ ಯದೀಚ್ಛೇಚ್ಛೋಭನಾಂ ಗತಿಂ |
ಸಾ ತ್ವಂ ಬ್ರೂಹಿ ಪ್ರದಾಸ್ಯಾಮಿ ಭರ್ತುರರ್ಥೇ ತವೇಪ್ಸಿತಂ || ೫೫ ||

ವಿತ್ತಂ ದೇಹಂ ತಥಾ ಪುತ್ರಂ ಯಚ್ಚಾನ್ಯದ್ವಾ ವರಾನನೇ |
ಕೋನ್ಯೋ ಹಿ ದೈವತಂ ಲೋಕೇ ಸ್ತ್ರೀಣಾಮೇಕಂ ಪತಿಂ ವಿನಾ || ೫೬ ||

---

ಉಪವಾಸದಿಂದ ಬಂದಿರುವ ಪುಣ್ಯದಲ್ಲಿ ನಾಲ್ಕನೆಯ ಒಂದು ಭಾಗ ಪುಣ್ಯವನ್ನು ಕೊಟ್ಟಿರುವೆನು. ಅದರಿಂದ ಈ ಕಾಷ್ಠೀಲೆಯು ಹಿಂದಿನ ಜನ್ಮದಲ್ಲಿ ಮಾಡಿದ ಪಾಪವನ್ನು ನೀಗಿಕೊಂಡು ಮುಕ್ತಳಾಗಲಿ, ನಾನು ನುಡಿದಿರುವುದು ಸತ್ಯವು, ಸತ್ಯವು'' ಎಂಬುದಾಗಿ ಹೇಳಿ ಏಕಾದಶಿಯ ಪುಣ್ಯದ ಚತುರ್ಥಾಂಶವನ್ನು ಕೊಟ್ಟೆನು. ನಾನು ಹೀಗೆ ಹೇಳಿದ ಕೂಡಲೇ ಆ ಕಾಷ್ಠೀಲೆಯು ಮಿಂಚಿನಂತೆ ಹೊಳೆಯುವ ದೇಹವನ್ನು ಧರಿಸಿ ದಿವ್ಯವಿಮಾನದಲ್ಲಿ ಕುಳಿತು ವೈಷ್ಣವಸ್ಥಾನಕ್ಕೆ ಹೋಗುತ್ತಿರುವುದನ್ನು ನೋಡಿದೆನು.

ನಾರಿಯು ಸದ್ಗತಿಯನ್ನು ಅಪೇಕ್ಷಿಸುವುದಾದರೆ ದೇಹ ಮತ್ತು ಧನಗಳಿಂದ ಪತಿಗೆ ವಂಚನೆಮಾಡಬಾರದು, ಸ್ತ್ರೀಯರಿಗೆ ಪತಿಯೇ ದೇವತೆಯು. ಆದಕಾರಣ ನಿನಗೆ ಇಷ್ಟವಾದುದನ್ನು ನೀನು ತಿಳಿಸು. ಗಂಡನಿಗಾಗಿ ಅದನ್ನು ನಿನಗೆ ಕೊಡುವೆನು.

೫೬. ವರಾನನೇ! ಧನ, ದೇಹ, ಪುತ್ರ, ಅಥವಾ ಬೇರಾವುದಾದರೂ ಸರಿ ನಿನಗೆ ಇಷ್ಟವಾದುದನ್ನು ತಿಳಿಸು, ಖಂಡಿತ ಕೊಡುವೆನು. ಸ್ತ್ರೀಯರಿಗೆ ಲೋಕದಲ್ಲಿ ಪತಿಯೊಬ್ಬನ ವಿನಹ ಬೇರೆ ದೇವನಾರು?

ತಸ್ಯಾರ್ಥೇ ವಾ ತ್ಯಜೇದ್ವಿತ್ತಂ ಜೀವಿತಂ ವಾ ಸುಲೋಚನೇ ।
ಕಲ್ಪಕೋಟಿಶತಂ ಸಾಗ್ರಂ ವಿಷ್ಣುಲೋಕೇ ಮಹೀಯತೇ ॥ ೫೭ ॥

ಪುಣ್ಯಾದಿಸಾಕ್ಷೀ ಕೃತಮೀಕ್ಷ್ಯ ನಿಷ್ಠುರಾ
ಯುಕ್ತಂ ಸುಘೋರೈರ್ವ್ಯಸನೈರ್ದ್ವಿಜನ್ಮನಾ ।
ಪತಿಂ ದದೌ ನೈವ ಚ ಯಾಚಿತಾ ಧನಂ
ತೇನೈವ ಪಾಪೇನ ಬಭೂವ ಕೀಟಾ ॥ ೫೮ ॥

ಏತನ್ಮಯಾ ದೃಷ್ಟಮನಂಗಯಷ್ಟಿ
ಕೌಮಾರಭಾವೇ ಪಿತೃವೇಶ್ಮವಾಸೇ ।
ಜ್ಞಾತ್ವಾ ಹಿತಂ ತಥ್ಯಮಿದಂ ಸ್ವಭರ್ತುಃ
ದದಾಮಿ ಸರ್ವಂ ಚ ಗೃಹಾಣ ಸುಭ್ರು ॥ ೫೯ ॥

ಇತಿ ಶ್ರೀನಾರದೀಯಪುರಾಣೋತ್ತರಭಾಗೇ ಮೋಹಿನೀ
ಚರಿತೇ ಕಾಷ್ಠೀಲೋಪಾಖ್ಯಾನೇ ಮಾಘಮಾಹತ್ಮ್ಯಂ
ನಾಮ ಏಕತ್ರಿಂಶೋಽಧ್ಯಾಯಃ

---

೫೭. ಸುಲೋಚನೇ! ಪತಿಗಾಗಿ ಧನಜೀವಿತಗಳನ್ನು ಬಿಡುವ ನಾರಿಯು ವಿಷ್ಣುಲೋಕದಲ್ಲಿ ನೂರು ಕೋಟಿ ಕಲ್ಪಗಳ ಕಾಲ ಸತ್ಕರಿಸಲ್ಪಡುವಳು.

೫೮. ಬಹು ಘೋರವ್ಯಸನಗಳಿಂದ ಕೂಡಿದ ಪತಿಯ ವಿಷಯದಲ್ಲಿ ಕಠಿನವಾಗಿ ವರ್ತಿಸಿ, ಅವನು ಬೇಡಿದ ಧನವನ್ನು ಕೊಡದಿದ್ದ ಕಾರಣ ಬಂದ ಪಾಪದಿಂದಲೇ ಆ ನಾರಿಯು ಕಟ್ಟಿಗೆಯ ಹುಳುವಾಗಿ ಹುಟ್ಟಿದಳು.

೫೯. ಇದನ್ನು ನಾನು ಬಾಲ್ಯದಲ್ಲಿ ತಂದೆಯ ಮನೆಯಲ್ಲಿರುವಾಗ ನೋಡಿದೆನು. ಆದಕಾರಣ ಕಾಮಿನಿಯೇ! ನನ್ನ ಗಂಡನಿಗೆ ಹಿತವಾಗುವ ಸರ್ವಸ್ವವನ್ನೂ ಕೊಡುವೆನು ತೆಗೆದುಕೋ! ಇದು ಸತ್ಯವು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಕಾಷ್ಠೀಲೋಪಾಖ್ಯಾನಪ್ರಸಂಗದಲ್ಲಿ ಮಾಘಮಾಹಾತ್ಮ್ಯೆಯ
ಕಥನೆಯೆಂಬ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಸಂಧ್ಯಾವಳಿಯು ಕಾಷ್ಠೀಲೆಯ ಮಾತನ್ನು ಕೇಳಿ ಆಶ್ಚರ್ಯಪಟ್ಟು, ದಯಾರ್ದ್ರಹೃದಯಳಾಗಿ ನಿನಗುಂಟಾಗಿರುವ ಈ ಕೀಳುಜನ್ಮವು ಹೋಗಿ ಉತ್ತಮಗತಿಯು ಲಭಿಸುವ ಬಗೆ ಹೇಗೆಂದು ಕೇಳಲು, ಕಾಷ್ಠೀಲೆಯು ಮಾಘಮಾಸಮಹಿಮೆಯನ್ನೂ, ಅದರಲ್ಲಿ ಶುಕ್ಲೈಕಾದಶಿಯ ಮಾಹಾತ್ಮ್ಯೆಯನ್ನೂ ಸಹ ವಿವರಿಸಿ, ನೀನು ಅಂತಹ ಏಕಾದಶೀವ್ರತವನ್ನಾಚರಿಸಿ ಗಳಿಸಿರುವ ಪುಣ್ಯದಲ್ಲಿ ನಾಲ್ಕನೆಯ ಒಂದು ಭಾಗವನ್ನು ನನಗೆ ಕೊಟ್ಟರೆ, ನಾನು ಅದರಿಂದ ಪಾಪವನ್ನು ನೀಗಿಕೊಂಡು ಸದ್ಗತಿಯನ್ನು ಹೊಂದುವೆನೆಂದು ಸಂಧ್ಯಾವಳಿಗೆ ಹೇಳಿದಳು. ಕೂಡಲೇ ಸಂಧ್ಯಾವಳಿಯು ಏಕಾದಶೀಪುಣ್ಯವನ್ನು ಕಾಷ್ಠೀಲೆಗೆ ಧಾರೆಯೆರೆದು ಕೊಡಲಾಗಿ ಅವಳು ಪರಿಶುದ್ಧಳಾಗಿ ದಿವ್ಯರೂಪವನ್ನು ಧರಿಸಿ ವೈಕುಂಠಕ್ಕೆ ವಿಮಾನದಲ್ಲಿ ಪ್ರಯಾಣಬೆಳೆಸಿದಳು. ಇವೆಲ್ಲವನ್ನೂ ನನ್ನ ಬಾಲ್ಯದಲ್ಲಿ ನಾನು ನೋಡಿರುವೆನಾದಕಾರಣ ಪರದೇವತೆಯಾದ ಪತಿಗೆ ಹಿತವಾಗುವ ಯಾವುದನ್ನು ನೀನು ಬಯಸಿದರೂ ಕೊಡುವೆನು ಎಂಬುದಾಗಿ ಮೋಹಿನಿಗೆ ಹೇಳಿದಳು.

# ದ್ವಾತ್ರಿಂಶೋಽಧ್ಯಾಯಃ

ವಸಿಷ್ಠ ಉವಾಚ

ಸಂಧ್ಯಾವಲೀವಚಃ ಶ್ರುತ್ವಾ ಮೋಹಿನೀ ದುಹಿತಾ ವಿಧೇಃ ।
ಉವಾಚ ತತ್ಪರಾ ಸ್ವೀಯೇ ಕಾರ್ಯೇ ಮೋಹಕರಂಡಿಕಾ ॥ ೧ ॥

ಯದ್ಯೇವಂ ತ್ವಂ ವಿಜಾನಾಸಿ ಧರ್ಮಾಧರ್ಮಗತಿಂ ಶುಭೇ ।
ಭರ್ತುರರ್ಥೇ ಪ್ರದಾತ್ರೀ ಚ ಧನಜೀವಿತಯೋರಪಿ ॥ ೨ ॥

ತದಾಹಂ ಯಾಚಯೇ ವಿತ್ತಂ ಜೀವಿತಾದಧಿಕಂ ಶುಭೇ ।
ದೇಹಿ ಪುತ್ರಶಿರೋ ಮಹ್ಯಂ ಯದೀಷ್ಟಂ ಹೃದಯಾಧಿಕಂ ॥ ೩ ॥

ಯದಿ ನೋ ಭೋಜನಂ ಕುರ್ಯಾತ್ ಸಂಪ್ರಾಪ್ತೇ ಹರಿವಾಸರೇ ।
ತದಾ ಸ್ವಹಸ್ತೇ ಸಂಗೃಹ್ಯ ಖಡ್ಗಂ ರಾಜಾ ಪತಿಸ್ತವ ॥ ೪ ॥

---

## ಮೂವತ್ತೆರಡನೆಯ ಅಧ್ಯಾಯ

೧. ವಸಿಷ್ಠನು ಹೇಳಿದನು—ಸಂಧ್ಯಾವಳಿಯ ಮಾತನ್ನು ಕೇಳಿ ಬ್ರಹ್ಮಪುತ್ರಿಯು, ಸ್ವಕಾರ್ಯತತ್ಪರಳು, ಮೋಹನಿಧಿಯೂ ಆದ ಮೋಹಿನಿಯು ಹೀಗೆ ಹೇಳಿದಳು.

೨-೩. ಶೋಭನೆಯೇ ! ನೀನು ಈ ವಿಧವಾಗಿ ಧರ್ಮಾಧರ್ಮ ಮಾರ್ಗವನ್ನು ತಿಳಿದು ಗಂಡನಿಗೋಸ್ಕರವಾಗಿ ಧನ ಜೀವಿತಗಳನ್ನೂ ಸಹ ಕೊಡುವವಳಾದರೆ ಜೀವಿತಕ್ಕಿಂತಲೂ ಹೆಚ್ಚಾದ ವಿತ್ತವನ್ನು ಬೇಡುವೆನು. ಹೃದಯಕ್ಕಿಂತಲೂ ಹೆಚ್ಚಿನ ಇಷ್ಟವಸ್ತುವಾದ ನಿನ್ನ ಮಗನ ಶಿರಸ್ಸನ್ನು ನನಗೆ ಕೊಡು.

೪-೧೩. ದೊರೆಯು ಹರಿದಿನದಲ್ಲಿ ಭೋಜನಮಾಡದಿದ್ದರೆ ನಿನ್ನ ಗಂಡನಾದ ಅವನು ತನ್ನ ಕೈಯಲ್ಲಿ ಕತ್ತಿಯನ್ನು ತೆಗೆದುಕೊಂಡು ಚಂದ್ರಬಿಂಬ

ಧರ್ಮಾಂಗದಶಿರಶ್ಚಾರು ಚಂದ್ರಬಿಂಬೋಪಮಂ ಶುಭಂ ।
ಅಜಾತಶ್ಮಶ್ರುಕಂ ಚೈವ ಕುಂಡಲಾಭ್ಯಾಂ ವಿಭೂಷಿತಂ ॥ ೫ ॥

ಛಿತ್ವಾ ಶೀಘ್ರಂ ಪಾತಯತು ಮಮೋತ್ಸಂಗೇ ಸುಲೋಚನೇ ।
ಏತದ್ವಾ ಕುರು ತದ್ಭದ್ರೇ ಯದಾನ್ನಂ ನ ಭುನಕ್ತಿ ಚೇ ॥ ೬ ॥

ದಿನೇ ಮಾಧವದೇವಸ್ಯ ಪಾಪಸಂಘವಿನಾಶನೇ ।
ತಚ್ಛ್ರುತ್ವಾ ವಚನಂ ತಸ್ಯಾ ಮೋಹಿನ್ಯಾಃ ಕಟುಕಾಕ್ಷರಂ ॥ ೭ ॥

ಪ್ರಚಕಂಪೇ ಕ್ಷಣಂ ದೇವೀ ಶೀತಾರ್ತಾ ಕದಲೀ ಯಥಾ ।
ಸಂಧ್ಯಾವಲೀ ತತೋ ಧೈರ್ಯಮಾಸ್ಥಾಯ ವರವರ್ಣಿನೀ ॥ ೮ ॥

ಉವಾಚ ಮೋಹಿನೀಂ ವಾಕ್ಯಂ ಸುಮುಖೀ ಪ್ರಹಸಂತ್ಯಪಿ ।
ಶ್ರೂಯಂತೇ ಹಿ ಪುರಾಣೇಷು ಗಾಥಾಃ ಸುಭ್ರು ಸಮೀರಿತಾಃ ॥ ೯ ॥

ದ್ವಾದಶೀಂ ಪ್ರತಿ ಸಂಬದ್ಧಾಃ ಸ್ವರ್ಗಮೋಕ್ಷಪ್ರದಾಯಿಕಾಃ ।
ಧನಂ ತ್ಯಜೇತ್ತ್ಯಜೇದ್ದಾರಾನ್ ಜೀವಿತಂ ಚ ಗೃಹಂ ತ್ಯಜೇತ್ ॥ ೧೦ ॥

---

ಸದೃಶವು, ಮಂಗಳಕರವು, ಮೀಸೆಯು ಬೆಳೆಯದೆ ಎಳೆಯದಾಗಿರುವುದು, ಕುಂಡಲಗಳಿಂದ ಅಲಂಕರಿಸಲ್ಪಟ್ಟದೂ ಆಗಿರುವ, ಮನೋಹರವಾದ ಧರ್ಮಾಂಗದನ ಶಿರಸ್ಸನ್ನು ಬೇಗ ಕತ್ತರಿಸಿ ನನ್ನ ತೊಡೆಯಮೇಲೆ ಹಾಕಲಿ. ಪಾಪರಾಶಿ ನಾಶಕವಾದ ಮಾಧವದೇವನ ದಿನದಲ್ಲಿ ಅನ್ನವನ್ನು ತಿನ್ನದಿರುವ ಪಕ್ಷದಲ್ಲಿ ರಾಜನು ಇದನ್ನಾದರೂ ಮಾಡಲಿ.

ಹೀಗೆ ಕಠಿನಶಬ್ದಗಳಿಂದ ಕೂಡಿದ ಆ ಮೋಹಿನಿಯ ಮಾತನ್ನು ಕೇಳಿ ಸಂಧ್ಯಾವಳೀದೇವಿಯು ಶೀತಪೀಡಿತವಾದ ಬಾಳೆಯಗಿಡದಂತೆ ಒಂದುಕ್ಷಣ ನಡುಗಿದಳು.

ಅನಂತರ ಉತ್ತಮಚರಿತಳಾದ ದೇವಿಯು ಧೈರ್ಯ ತಂದುಕೊಂಡು ಸುಮುಖಳಾಗಿ ನಗುತ್ತಾ ಮೋಹಿನಿಗೆ ಹೇಳಿದಳು. ಸುಭ್ರೂ! ದ್ವಾದಶಿಗೆ

ತ್ಯಜೇದ್ದೇಶಂ ತಥಾ ಭೂಪಂ ಸ್ವರ್ಗಂ ಮಿತ್ರಂ ಗುರುಂ ತ್ಯಜೇತ್ ।
ತ್ಯಜೇತ್ತೀರ್ಥಂ ತ್ಯಜೇದ್ಧರ್ಮಂ ತ್ಯಜೇದತ್ಯಂತಸುಪ್ರಿಯಂ ॥ ೧೧ ॥

ತ್ಯಜೇದ್ಯೋಗಂ ತ್ಯಜೇದ್ದಾನಂ ಜ್ಞಾನಂ ಪುಣ್ಯಕ್ರಿಯಾಂ ತ್ಯಜೇತ್ ।
ತಪಸ್ತ್ಯಜೇತ್ತ್ಯಜೇದ್ವಿದ್ಯಾಂ ಸಿದ್ಧಿಂ ಮೋಕ್ಷಂ ತ್ಯಜೇಚ್ಛುಭೇ ॥ ೧೨ ॥

ನ ತ್ಯಜೇದ್ದ್ವಾದಶೀಂ ಪುಣ್ಯಾಂ ಪಕ್ಷಯೋರುಭಯೋರಪಿ ।
ಇಹ ಸಂಬಂಧಿನಃ ಸರ್ವೇ ಪುತ್ರಭ್ರಾತೃಸುಹೃತ್ಸ್ತ್ರಿಯಃ ॥ ೧೩ ॥

ಐಹಿಕಾಮುಷ್ಮಿಕೇ ದೇವಿ ಸಾಧನೀ ದ್ವಾದಶೀ ಸ್ಮೃತಾ ।
ದ್ವಾದಶ್ಯಾಸ್ತು ಪ್ರಭಾವೇಣ ಸರ್ವಂ ಕ್ಷೇಮಂ ಭವಿಷ್ಯತಿ ॥ ೧೪ ॥

ದಾಪಯೇ ತವ ತುಷ್ಟ್ಯರ್ಥಂ ಧರ್ಮಾಂಗದಶಿರಃ ಶುಭೇ ।
ವಿಶ್ವಾಸಂ ಕುರು ಮೇ ವಾಕ್ಯೇ ಸುಖಿನೀ ಭವ ಶೋಭನೇ ॥ ೧೫ ॥

---

ಸಂಬಂಧಿಸಿದ ಸ್ವರ್ಗ ಮೋಕ್ಷಪ್ರದಾಯಕಗಳಾದ ಗಾದೆಗಳು ಪುರಾಣಗಳಲ್ಲಿ ಈರೀತಿ ಉಕ್ತವಾಗಿವೆ.

ಧನ, ಪತ್ನೀ, ಜೀವಿತ, ಮನೆ, ದೇಶ, ದೊರೆ, ಸ್ವರ್ಗ, ಸ್ನೇಹಿತ, ಗುರು, ತೀರ್ಥ, ಧರ್ಮ, ಇಷ್ಟತಮವಾದ ವಸ್ತು, ಯೋಗ, ದಾನ, ಪುಣ್ಯಕರ್ಮ, ತಪಸ್ಸು, ವಿದ್ಯೆ, ಸಿದ್ಧಿ, ಮೋಕ್ಷ ಇವುಗಳನ್ನಾದರೂ ಬಿಡಬಹುದು. ಪುಣ್ಯಕರವಾದ ಶುಕ್ಲ ಕೃಷ್ಣ ದ್ವಾದಶಿಗಳನ್ನು ಮಾತ್ರ ಬಿಡಲೇಬಾರದು. ಮಗ, ಸಹೋದರ, ಸ್ನೇಹಿತ, ಪತ್ನೀ ಮುಂತಾದವರೆಲ್ಲರೂ ಈ ಲೋಕದ ಸಂಬಂಧಿಗಳು.

೧೪. ದ್ವಾದಶಿಯಾದರೋ ಐಹಿಕಾಮುಷ್ಮಿಕಸಾಧನವು. ದೇವಿಯೇ! ದ್ವಾದಶಿಯ ಪ್ರಭಾವದಿಂದ ಸಕಲ ಕ್ಷೇಮವೂ ಆಗುವುದು.

೧೫. ಭದ್ರೇ! ನಿನಗೆ ಸಂತೋಷವನ್ನುಂಟುಮಾಡಲು ಧರ್ಮಾಂಗದನ ತಲೆಯನ್ನು ಕೊಡಿಸುವೆನು. ನನ್ನ ಮಾತಿನಲ್ಲಿ ನಂಬಿಕೆಯಿಟ್ಟು ಸುಖವಾಗಿರು.

ಇಹಾರ್ಥೇ ಶ್ರೂಯತೇ ಭದ್ರೇ ಇತಿಹಾಸಃ ಪುರಾತನಃ |
ಕಥಯಿಷ್ಯಾಮಿ ತೇ ಭದ್ರೇ ಸಾವಧಾನಾ ಶೃಣುಷ್ವ ಮೇ || ೧೬ ||

ಆಸೀದ್ವಿರೋಚನಃ ಪೂರ್ವಂ ದೈತ್ಯೋ ಧರ್ಮಪರಾಯಣಃ |
ತಸ್ಯ ಭಾರ್ಯಾ ವಿಶಾಲಾಕ್ಷೀ ದ್ವಿಜಪೂಜನತತ್ಪರಾ || ೧೭ ||

ನಿತ್ಯಮೇಕಮೃಷಿಂ ಪ್ರಾತಃ ಪೂಜಯಿತ್ವಾ ಯಥಾವಿಧಿ |
ಪಾದೋದಕಂ ತಸ್ಯ ಸುಭ್ರು ಭಕ್ತ್ಯಾ ಪಿಬತಿ ಹೃಷ್ಟಧೀಃ || ೧೮ ||

ಪ್ರಾಹ್ಲಾದಿಶಂಕಿತಾ ದೇವಾ ಆಸನ್ಪೂರ್ವಂ ಮೃತೇ ಸತಿ |
ಹಿರಣ್ಯಕಶಿಪೌ ರಾಜ್ಯಂ ಶಾಸತಿ ಹ್ಯುಗ್ರತೇಜಸಿ || ೧೯ ||

ಪ್ರಾಹ್ಲಾದೌ ಹ್ಲಾದಸಂಯುಕ್ತೇ ಚೇರುರ್ವ್ಯಗ್ರಾ ಮಹೀತಲೇ |
ವಿಕಥಾ ಶಕ್ರಮುಖ್ಯಾಸ್ತೇ ದೇವಾಃ ಸಂಮಂತ್ರ್ಯ ವಾಕ್ಪತಿಂ || ೨೦ ||

---

೧೬. ಶೋಭನೆಯೇ! ಈ ವಿಷಯದಲ್ಲಿ ಪುರಾತನೇತಿಹಾಸವೊಂದಿದೆ. ಅದನ್ನು ನಿನಗೆ ಹೇಳುವೆನು. ಸಾವಧಾನವಾಗಿ ಕೇಳು.

೧೭. ಪೂರ್ವದಲ್ಲಿ ಧರ್ಮನಿರತನಾದ ವಿರೋಚನನೆಂಬ ದೈತ್ಯನಿದ್ದನು. ಅವನಿಗೆ ದ್ವಿಜಸತ್ಕಾರದಲ್ಲಾಸಕ್ತಳಾದ, ವಿಸ್ತಾರವಾದ ಕಣ್ಣುಗಳುಳ್ಳವಳಾದ ಕಾರಣ ವಿಶಾಲಾಕ್ಷಿ ಎನಿಸಿದ ಹೆಂಡತಿಯಿದ್ದಳು.

೧೮. ಅವಳು ಪ್ರತಿದಿನವೂ ಪ್ರಾತಃಕಾಲದಲ್ಲಿ ವಿಧಾನೋಕ್ತಪ್ರಕಾರವಾಗಿ ಒಬ್ಬ ಋಷಿಯನ್ನು ಪೂಜಿಸಿ ಅವನ ಪಾದೋದಕವನ್ನು ಸಂತೋಷದಿಂದ ಕುಡಿಯುತ್ತಿದ್ದಳು.

೧೯-೨೩. ಪೂರ್ವಕಾಲದಲ್ಲಿ ಹಿರಣ್ಯಕಶಿಪುವು ಸತ್ತಮೇಲೆ ಪ್ರಹ್ಲಾದ ಪುತ್ರನು, ಭಯಂಕರ ತೇಜಸ್ವಿಯು, ಸಂತೋಷಚಿತ್ತನೂ ಆದ ವಿರೋಚನನು ರಾಜ್ಯವಾಳುತ್ತಿರುವಾಗ ಅವನಿಂದ ಭಯಪಟ್ಟ ದೇವತೆಗಳು ವ್ಯಾಕುಲಚಿತ್ತರಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದರು.

ಪ್ರೋಚುಃ ಕಿಂ ಕಾರ್ಯಮಧುನಾಸ್ಮಾಭಿಃ ಶತ್ರುಪ್ರತಾಪಿತೈಃ ।
ತಚ್ಛ್ರುತ್ವಾ ವಚನಂ ತೇಷಾಂ ದೇವಾನಾಂ ಗುರುರಬ್ರವೀತ್ ॥ ೨೧ ॥

ವಿಷ್ಣುರ್ವಿಜ್ಞಾಪನೀಯೋದ್ಯ ದುಃಖಂ ಪ್ರಾಪ್ತೈಃ ಸುರವ್ರಜೈಃ ।
ತಚ್ಛ್ರುತ್ವಾ ಭಾಷಿತಂ ತಸ್ಯ ಗುರೋರಮಿತತೇಜಸಃ ॥ ೨೨ ॥

ವಿರೋಚನಪ್ರಾಣಹತ್ಯೈ ಜಗ್ಮುರ್ವೈಕುಂಠಮಂತಿಕೇ ।
ತತ್ರ ಗತ್ವಾ ಸುರಶ್ರೇಷ್ಠಂ ವೈಕುಂಠಂ ತುಷ್ಟುವುಃ ಸ್ತವೈಃ ॥ ೨೩ ॥

ದೇವಾ ಊಚುಃ

ನಮೋ ದೇವಾಧಿದೇವಾಯ ವಿಷ್ಣವೇಽಮಿತತೇಜಸೇ ।
ಭಕ್ತವಿಘ್ನವಿನಾಶಾಯ ವೈಕುಂಠಾಯ ನಮೋನಮಃ ॥ ೨೪ ॥

---

ಒಂದುದಿನ ಆ ಇಂದ್ರಾದಿ ದೇವತೆಗಳು ಆಲೋಚಿಸಿ, ಬೃಹಸ್ಪತಿಯ ಬಳಿಗೆ ಹೋಗಿ ಶತ್ರುವಿನಿಂದ ದಹಿಸಲ್ಪಡುತ್ತಿರುವ ನಾವು ಈಗೇನು ಮಾಡಬೇಕು? ಎಂದು ಕೇಳಿದರು.

ದೇವತೆಗಳ ಆ ಮಾತನ್ನು ಕೇಳಿ ದೇವಗುರುವಾದ ಬೃಹಸ್ಪತಿಯು ದುಃಖಕ್ಕೀಡಾಗಿರುವ ದೇವವೃಂದವು, ವಿಷ್ಣುವಿನ ಸನ್ನಿಧಿಗೆ ಹೋಗಿ ತಮಗೆ ಸಂಭವಿಸಿರುವ ದುರವಸ್ಥೆಯನ್ನು ವಿಜ್ಞಾಪಿಸಿಕೊಳ್ಳಬೇಕೆಂದನು.

ಅಪರಿಮಿತ ತೇಜಸ್ಸುಳ್ಳ ಗುರುಗಳು ಹೇಳಿದ ಮಾತನ್ನು ಕೇಳಿ, ವಿರೋಚನನನ್ನು ಸಂಹಾರಮಾಡಿಸುವುದಕ್ಕಾಗಿ ದೇವತೆಗಳು ವೈಕುಂಠದ ಹತ್ತಿರಕ್ಕೆ ಹೋದರು. ಅಲ್ಲಿಗೆ ಹೋಗಿ ದೇವೋತ್ತಮನಾದ ವೈಕುಂಠನನ್ನು ಸ್ತೋತ್ರಗಳಿಂದ ಪ್ರಶಂಸಿಸಿದರು.

೨೪. ದೇವತೆಗಳು ಹೇಳಿದರು—ಅಪರಿಮಿತ ತೇಜಸ್ಸುಳ್ಳ, ದೇವಾಧಿದೇವನಾದ, ವಿಷ್ಣುವಿಗೆ ನಮಸ್ಕಾರ! ಭಕ್ತರ ವಿಘ್ನಗಳನ್ನು ಪರಿಹರಿಸುವಂತಹ ವೈಕುಂಠದೇವನಿಗೆ ನಮಸ್ಕಾರ! ನಮಸ್ಕಾರ!

ಹರಯೇऽದ್ಭುತಸಿಂಹಾಯ ವಾಮನಾಯ ಮಹಾತ್ಮನೇ ।
ಕ್ರೋಡರೂಪಾಯ ಮತ್ಸ್ಯಾಯ ಪ್ರಲಯಾಬ್ಧಿನಿವಾಸಿನೇ ॥ ೨೫ ॥

ಕೂರ್ಮಾಯ ಮಂದರಧೃತೇ ಭಾರ್ಗವಾಯಾಬ್ಧಿಶಾಯಿನೇ ।
ರಾಮಾಯಾಖಿಲನಾಥಾಯ ವಿಶ್ವೇಶಾಯ ಚ ಸಾಕ್ಷಿಣೇ ॥ ೨೬ ॥

ದತ್ತಾತ್ರೇಯಾಯ ಶುದ್ಧಾಯ ಕಪಿಲಾಯಾರ್ತಿಹಾರಿಣೇ ।
ಯಜ್ಞಾಯ ಧೃತಧರ್ಮಾಯ ಸನಕಾದಿಸ್ವರೂಪಿಣೇ ॥ ೨೭ ॥

ಧ್ರುವಸ್ಯ ವರದಾತ್ರೇ ಚ ಪೃಥವೇ ಭೂರಿಕರ್ಮಣೇ ।
ಋಷಭಾಯ ವಿಶುದ್ಧಾಯ ಹಯಶೀರ್ಷಭೃತಾತ್ಮನೇ ॥ ೨೮ ॥

ಹಂಸಾಯಾಗಮರೂಪಾಯಾಮೃತಕುಂಭನಿಧಾರಿಣೇ ।
ಕೃಷ್ಣಾಯ ವಾಸುದೇವಾಯ ಸಂಕರ್ಷಣವಪುರ್ಧೃತೇ ॥ ೨೯ ॥

---

೨೫. ಆಶ್ಚರ್ಯಕರ ಸಿಂಹರೂಪಿಯು, ವಾಮನನು, ಮಹಾತ್ಮನು, ವರಾಹರೂಪಿಯು, ಮತ್ಸ್ಯಾವತಾರಿಯು, ಪ್ರಳಯಸಮುದ್ರದಲ್ಲಿ ವಾಸಿಸುವವನು.

೨೬. ಕೂರ್ಮರೂಪನು, ಮಂದರೋದ್ಧಾರಿಯು, ಪರಶುರಾಮನಾಗಿ ಭೃಗುವಂಶದಲ್ಲಿ ಅವತರಿಸಿದವನು, ಕ್ಷೀರಸಾಗರಶಾಯಿಯೂ, ಅಖಿಲಸ್ವಾಮಿಯಾದ ರಾಮನು, ವಿಶ್ವೇಶ್ವರನು, ಸರ್ವಸಾಕ್ಷಿಯು.

೨೭-೨೮. ದತ್ತಾತ್ರೇಯನು, ನಿರ್ದೋಷನು, ಕಪಿಲನು, ಆರ್ತಿನಾಶಕನು, ಯಜ್ಞನಾಮಕನು, ಧರ್ಮಧಾರಕನು, ಸನಕಾದಿ ಧ್ಯೇಯನು, ಧ್ರುವನಿಗೆ ವರದಾತನು, ಮಹತ್ವ ಉಳ್ಳವನು, ಬಹು ಕರ್ಮಕಾರಿಯು, ಋಷಭನು, ವಿಶುದ್ಧನು, ಹಯಗ್ರೀವರೂಪಧಾರಿಯು.

೨೯. ಹಂಸನಾಮಕನು, ಆಗಮಪ್ರತಿಪಾದ್ಯನು, ಅಮೃತಕಲಶಧಾರಿಯು, ವಸುದೇವ ಪುತ್ರನಾಗಿ ಅವತರಿಸಿದ ಕೃಷ್ಣನು, ಸಂಕರ್ಷಣ ಶರೀರಧಾರಿಯು.

ಪ್ರದ್ಯುಮ್ನಾಯಾನಿರುದ್ಧಾಯ ಬ್ರಹ್ಮಣೇ ಶಂಕರಾಯ ಚ ।
ಕುಮಾರಾಯ ಗಣೇಶಾಯ ನಂದಿನೇ ಭೃಂಗಿಣೇ ನಮಃ ॥ ೩೦ ॥

ಗಂಧಮಾದನವಾಸಾಯ ನರನಾರಾಯಣಾಯ ಚ ।
ಜಗನ್ನಾಥಾಯ ನಾಥಾಯ ನಮೋ ರಾಮೇಶ್ವರಾಯ ಚ ॥ ೩೧ ॥

ದ್ವಾರಕಾವಾಸಿನೇ ಚೈವ ತುಲಸೀವನವಾಸಿನೇ ।
ನಮಃ ಕಮಲನಾಭಾಯ ನಮಸ್ತೇ ಪಂಕಜಾಂಘ್ರಯೇ ॥ ೩೨ ॥

ನಮಃ ಕಮಲಹಸ್ತಾಯ ಕಮಲಾಕ್ಷಾಯ ತೇ ನಮಃ ।
ಕಮಲಾಪ್ರತಿಪಾಲಾಯ ಕೇಶವಾಯ ನಮೋನಮಃ ॥ ೩೩ ॥

ನಮೋ ಭಾಸ್ಕರರೂಪಾಯ ಶಶಿರೂಪಧರಾಯ ಚ ।
ಲೋಕಪಾಲಸ್ವರೂಪಾಯ ಪ್ರಜಾಪತಿವಪುರ್ಧೃತೇ ॥ ೩೪ ॥

---

೩೦. ಪ್ರದ್ಯುಮ್ನ, ಅನಿರುದ್ಧ, ಬ್ರಹ್ಮ, ಶಂಕರ, ಕುಮಾರ, ಗಣೇಶ, ನಂದಿ ಮತ್ತು ಭೃಂಗಿ ಪದಗಳಿಂದ ಕರೆಯಿಸಿಕೊಳ್ಳಲ್ಪಡುವವನೂ ಆದ ಹರಿಗೆ ನಮಸ್ಕಾರ !

೩೧. ಗಂಧಮಾದನವಾಸಿಯು, ನರನಾರಾಯಣನು, ಜಗದೊಡೆಯನು, ಸ್ವಾಮಿಯೂ ಆದ ರಾಮೇಶ್ವರನಿಗೆ ನಮಸ್ಕಾರ !

೩೨. ದ್ವಾರಕಾವಾಸಿಯು, ತುಲಸೀವನವಾಸಿಯೂ ಆದ ಕಮಲನಾಭನಿಗೆ ನಮಸ್ಕಾರ ! ಪದ್ಮದಂತೆ ಪಾದವುಳ್ಳ ದೇವನಿಗೆ ನಮಸ್ಕಾರ !

೩೩. ಪದ್ಮದಂತೆ ಹಸ್ತ ಉಳ್ಳ ಸ್ವಾಮಿಗೆ ನಮಸ್ಕಾರ! ದೇವ! ಕಮಲನೇತ್ರನಾದ ನಿನಗೆ ನಮಸ್ಕಾರ! ಕಮಲಾದೇವಿಗೆ ಪತಿಯಾದ ಕೇಶವನಿಗೆ ನಮಸ್ಕಾರ ! ನಮಸ್ಕಾರ !

೩೪-೪೦. ಭಾಸ್ಕರನಲ್ಲಿದ್ದು ಭಾಸ್ಕರರೂಪನೆನಿಸಿರುವನು, ಚಂದ್ರರೂಪಧಾರಿಯು, ಲೋಕಪಾಲರಲ್ಲಿ ನಿಂತು ಪಾಲನಕರ್ತನು, ಪ್ರಜೇಶ್ವರಶರೀರಧಾರಿಯು, ಭೂತಸಂಘನಿಯಾಮಕನು, ಜೀವನಾಮಕನು, ತೇಜೋರೂಪಿಯು,

ಭೂತಗ್ರಾಮಸ್ವರೂಪಾಯ ಜೀವರೂಪಾಯ ತೇಜಸೇ ।
ಜಯಾಯ ಜಯಿನೇ ನೇತ್ರೇ ನಿಯಮಾಯ ಕ್ರಿಯಾತ್ಮನೇ ॥ ೩೫ ॥

ನಿರ್ಗುಣಾಯ ನಿರೀಹಾಯ ನೀತಿಜ್ಞಾಯ ಕ್ರಿಯಾತ್ಮನೇ ।
ಬುದ್ಧಾಯ ಕಲ್ಕಿರೂಪಾಯ ಕ್ಷೇತ್ರಜ್ಞಾಯಾಕ್ಷರಾಯ ಚ ॥ ೩೬ ॥

ಗೋವಿಂದಾಯ ಜಗದ್ಭರ್ತ್ರೇಽನಂತಾಯಾದ್ಯಾಯ ಶಾರ್ಙ್ಗಿಣೇ ।
ಶಂಖಿನೇ ಗದಿನೇ ಚೈವ ನಮಶ್ಚಕ್ರಧರಾಯ ಚ ॥ ೩೭ ॥

ಖಡ್ಗಿನೇ ಶೂಲಿನೇ ಚೈವ ಸರ್ವಶಸ್ತ್ರಾಸ್ತ್ರಘಾತಿನೇ ।
ಶರಣ್ಯಾಯ ವರೇಣ್ಯಾಯ ಪರಾಯ ಪರಮಾತ್ಮನೇ ॥ ೩೮ ॥

ಹೃಷೀಕೇಶಾಯ ವಿಶ್ವಾಯ ವಿಶ್ವರೂಪಾಯ ತೇ ನಮಃ ।
ಕಾಲನಾಥಾಯ ಕಾಲಾಯ ಶಶಿಸೂರ್ಯದೃಶೇ ನಮಃ ।
ಪೂರ್ಣಾಯ ಪರಿಸೇವ್ಯಾಯ ಪರಾತ್ಪರತರಾಯ ಚ ॥ ೩೯ ॥

---

ಜಯನಾಮಕನು, ಜಯಸ್ವಾಮಿಯು, ಸರ್ವನಿಯಾಮಕನು, ಕ್ರಿಯಾಸ್ವಾಮಿಯು ಪ್ರಾಕೃತಗುಣರಹಿತನು, ನಿಸ್ಪೃಹನು, ನೀತಿಜ್ಞನು, ಬುದ್ಧ ಕಲ್ಕಿಸ್ವರೂಪಿಯು, ಕ್ಷೇತ್ರಜ್ಞನು, ನಾಶರಹಿತನು, ಗೋವಿಂದನು, ಜಗತ್ಪತಿಯು, ಅನಂತನು ಮತ್ತು ಜಗದಾದಿಕಾರಣನು ಆದ ವೈಕುಂಠಸ್ವಾಮಿಗೆ ನಮಸ್ಕಾರ !

ಶಾರ್ಙ್ಗ, ಶಂಖ, ಗದೆ, ಚಕ್ರ, ಖಡ್ಗ, ಶೂಲ ಮುಂತಾದ ಸರ್ವ ಶಸ್ತ್ರಗಳನ್ನೂ ಧರಿಸಿರುವ ಸ್ವಾಮಿಗೆ ನಮಸ್ಕಾರ !

ಶರಣ್ಯನು, ವರೇಣ್ಯನು, ಉತ್ತಮನು, ಪರಮಾತ್ಮನು, ಇಂದ್ರಿಯಸ್ವಾಮಿಯು, ಜಗದಂತರ್ಗತನು, ವಿಶ್ವರೂಪಿಯೂ ಆದ ನಿನಗೆ ನಮಸ್ಕಾರ !

ಕಾಲನಾಥನು, ಸಂಹಾರಕನು, ಚಂದ್ರಸೂರ್ಯರೇ ಕಣ್ಣುಗಳಾಗಿ ಉಳ್ಳವನೂ ಆಗಿರುವ ನಿನಗೆ ನಮಸ್ಕಾರ !

ಪರಿಪೂರ್ಣನು, ಪರಿಸೇವ್ಯನು, ಪರಾತ್ಪರತರನು, ಜಗತ್ಕರ್ತನು,

ಜಗತ್ಕರ್ತ್ರೇ ಜಗದ್ಭರ್ತ್ರೇ ಜಗದ್ಧರ್ತ್ರೇಽಂತಕಾಯ ಚ ।
ಮೋಹಿನೇ ಕ್ಷೋಭಿಣೇ ಕಾಮರೂಪಿಣೇಽಜಾಯ ಸೂರಿಣೇ || ೪೦ ||

ಭಗವಂಸ್ತ್ವ ಸಂಪ್ರಾಪ್ತಾಃ ಶರಣಂ ದೈತ್ಯತಾಪಿತಾಃ ।
ತದ್ವಿಧತ್ಸ್ವಾಖಿಲಾಧಾರ ಯಥಾ ಹಿ ಸುಖಿನೋ ವಯಂ || ೪೧ ||

ಪುತ್ರಮಿತ್ರಕಲತ್ರಾದಿಸಂಯುತಾ ವಿಹರಾಮಹೇ ।
ತಚ್ಛ್ರುತ್ವಾ ಸ್ತವನಂ ತೇಷಾಂ ವೈಕುಂಠಃ ಪ್ರೀತಮಾನಸಃ || ೪೨ ||

ಪ್ರದದೌ ದರ್ಶನಂ ತೇಷಾಂ ದೈತ್ಯಸಂತಾಪಿತಾತ್ಮನಾಂ ।
ತೇ ದೃಷ್ಟ್ವಾ ದೇವದೇವೇಶಂ ವೈಕುಂಠಂ ಸ್ನಿಗ್ಧಮಾನಸಂ || ೪೩ ||

ವಿರೋಚನವಧಾಯಾಶು ಪ್ರಾರ್ಥಯಾಮಾಸ ಚಾದರಾತ್ ।
ತಚ್ಛ್ರುತ್ವಾ ಶಕ್ರಮುಖ್ಯಾನಾಂ ಕಾರ್ಯಾಕಾರ್ಯವಿದಾಂ ವರಃ || ೪೪ ||

---

ಜಗದ್ಧಾರಕನು, ಜಗದಂತಕನು, ಮೋಹಕನು, ಕ್ಷೋಭಕನು, ಕಾಮರೂಪಿಯು, ಉತ್ಪತ್ತಿರಹಿತನು ಮತ್ತು ಜ್ಞಾನಿಯೂ ಆದ ವೈಕುಂಠಸ್ವಾಮಿಗೆ ನಮಸ್ಕಾರ !

೪೧-೪೭. ಸರ್ವಾಧಾರನಾದ ಭಗವಂತನೇ! ದೈತ್ಯನ ಹಿಂಸೆಯಿಂದ ತಪ್ತರಾದ ನಾವು ನಿನ್ನನ್ನು ಶರಣುಹೊಂದಿರುವೆವು. ನಾವು ಸುಖವಾಗಿರುವಂತೆಯೂ ಪುತ್ರ ಮಿತ್ರ ಕಲತ್ರ ಸಹಿತರಾಗಿ ವಿಹರಿಸುವಂತೆಯೂ ಅನುಕೂಲ ಮಾಡು ಎಂಬುದಾಗಿ ಪ್ರಾರ್ಥಿಸಿದರು.

ದೇವತೆಗಳ ಆ ಸ್ತೋತ್ರವನ್ನು ಕೇಳಿ ಸಂತುಷ್ಟನಾದ ವೈಕುಂಠದೇವನು ದೈತ್ಯ ಸಂತಾಪಿತರಾದ ಅವರಿಗೆ ದರ್ಶನಕೊಟ್ಟನು. ಅವರು ದೇವದೇವೋತ್ತಮನನ್ನು, ಸ್ನೇಹಯುಕ್ತಚಿತ್ತನೂ ಆದ ವೈಕುಂಠನನ್ನು ನೋಡಿ ಆದರದಿಂದ ವಿರೋಚನನನ್ನು ಬೇಗ ಕೊಲ್ಲಬೇಕೆಂದು ಪ್ರಾರ್ಥಿಸಿದರು.

ಇಂದ್ರ ಮುಂತಾದ ದೇವತೆಗಳ ಆ ಪ್ರಾರ್ಥನೆಯನ್ನು ಲಾಲಿಸಿ ಕಾರ್ಯಾಕಾರ್ಯಜ್ಞಾನಿಗಳಲ್ಲುತ್ತಮನಾದ ಸ್ವಾಮಿಯು ಪ್ರೀತಿಯಿಂದ ದೇವತೆಗಳನ್ನು ಸಮಾಧಾನಗೊಳಿಸಿ ಸಂತೋಷವನ್ನುಂಟುಮಾಡಿ ಕಳುಹಿಸಿದನು.

**ಸಮಾಶ್ವಾಸ್ಯ ಸುರಾನ್ ಪ್ರೀತ್ಯಾ ವಿಸಸರ್ಜ ಮುದಾನ್ವಿತಾನ್ |**
**ಗತೇಷು ದೇವವರ್ಗೇಷು ಸರ್ವೋಪಾಯವಿದಾಂ ವರಃ ॥ ೪೫ ॥**

**ವೃದ್ಧಬ್ರಾಹ್ಮಣರೂಪೇಣ ವಿರೋಚನಗೃಹಂ ಯಯೌ |**
**ದ್ವಿಜಪೂಜನಕಾಲೇ ತು ಸಂಪ್ರಾಪ್ತಃ ಕಾರ್ಯಸಾಧಕಃ ॥ ೪೬ ॥**

**ತಂ ತು ದೃಷ್ಟ್ವಾ ವಿಶಾಲಾಕ್ಷೀ ಬ್ರಾಹ್ಮಣಂ ಹೃಷ್ಟಮಾನಸಾ |**
**ಅಪೂರ್ವಂ ಭಕ್ತಿಭಾವೇನ ದದೌ ಸತ್ಕೃತ್ಯ ಚಾಸನಂ ॥ ೪೭ ॥**

**ಸೋನಂಗೀಕೃತ್ಯ ತದ್ದತ್ತಮಾಸನಂ ಪ್ರಾಹ ತಾಂ ಶುಭೇ |**
**ನಾಹಂ ಸಮಾದದೇ ದೇವಿ ತ್ವದ್ದತ್ತಂ ಪರಮಾಸನಂ ॥ ೪೮ ॥**

**ಶೃಣು ಮೇ ಕಾರ್ಯಮತುಲಂ ಯದರ್ಥಮಹಮಾಗತಃ |**
**ಯನ್ಮೇ ಮನೋಗತಂ ಕಾರ್ಯಂ ತದ್ವಿಜ್ಞಾಯ ಚ ಮಾನಿನಿ ॥ ೪೯ ॥**

---

ದೇವಸಮೂಹಗಳು ಹೋದನಂತರ ಉಪಾಯಜ್ಞ ಶಿಖಾಮಣಿಯಾದ ವೈಕುಂಠನು ವೃದ್ಧಬ್ರಾಹ್ಮಣ ವೇಷವನ್ನುತಾಳಿ ವಿರೋಚನನ ಮನೆಗೆ ಬಂದನು. ಕಾರ್ಯಸಾಧಕನಾದ ಅವನು ಬ್ರಾಹ್ಮಣ ಪೂಜೆಮಾಡುವ ಕಾಲಕ್ಕೆ ಸರಿಯಾಗಿ ಮನೆಯೊಳಕ್ಕೆ ಬಂದನು.

೪೭. ಆ ವೃದ್ಧಬ್ರಾಹ್ಮಣನನ್ನು ನೋಡಿ ವಿಶಾಲಾಕ್ಷಿಯು, ಮನಸ್ಸಿನಲ್ಲಿ ಸಂತೋಷಪಟ್ಟು ಭಕ್ತಿಭಾವದಿಂದ ಅವನನ್ನು ಸತ್ಕರಿಸಿ ಅಪೂರ್ವವಾದ ಆಸನವನ್ನು ಕೊಟ್ಟಳು.

೪೮. ಅವನು ಅವಳು ಕೊಟ್ಟ ಆಸನವನ್ನಂಗೀಕರಿಸದೆ ಅವಳನ್ನು ಕುರಿತು ಭದ್ರೇ! ನೀನು ಕೊಟ್ಟ ಉತ್ತಮಾಸನವನ್ನು ನಾನು ಸ್ವೀಕರಿಸುವುದಿಲ್ಲ.

೪೯-೫೬. ಮಾನಿನೀ! ನಾನು ಏತಕ್ಕೋಸ್ಕರವಾಗಿ ಇಲ್ಲಿಗೆ ಬಂದಿರುವೆನು? ನನ್ನ ಅತುಲವಾದ ಉದ್ದೇಶವನ್ನು ಹೇಳುವೆನು ಕೇಳು. ನನ್ನ ಮನಸ್ಸಿನಲ್ಲಿರುವ ಕಾರ್ಯವನ್ನು ತಿಳಿದು ಅದನ್ನು ನಡೆಯಿಸಿಕೊಡುವೆನೆಂದು ಒಪ್ಪುವವನ ಪೂಜೆಯನ್ನು ನಾನು ಸ್ವೀಕರಿಸುವೆನು ಎಂದು ಹೇಳಿದನು.

ಯೋಽಂಗೀಕರೋತಿ ತತ್ಪೂಜಾಂ ಗ್ರಹೀಷ್ಯಾಮಿ ವರಾನನೇ ।
ತಚ್ಛ್ರುತ್ವಾ ವೃದ್ಧವಿಪ್ರಸ್ಯ ವಾಕ್ಯಂ ವಾಕ್ಯವಿಶಾರದಾ ॥ ೫೦ ॥

ಮಾಯಯಾ ಮೋಹಿತಾ ವಿಷ್ಣೋಃ ಸ್ತ್ರೀತ್ವಾಚ್ಚಾಹಾತಿಹರ್ಷಿತಾ ।

ವಿಶಾಲಾಕ್ಷ್ಯುವಾಚ

ಯತ್ತೇ ಮನೋಗತಂ ವಿಪ್ರ ತದ್ದಾಸ್ಯಾಮಿ ಗೃಹಾಣ ಮೇ ॥ ೫೧ ॥

ಆಸನಂ ಪಾದಸಲಿಲಂ ದೇಹಿ ಮೇ ವಾಂಛಿತಾರ್ಥದಂ ।
ಇತ್ಯುಕ್ತಃ ಸ ದ್ವಿಜಃ ಪ್ರಾಹ ನ ಪ್ರತ್ಯೇಮಿ ಸ್ತ್ರಿಯಾ ವಚಃ ॥ ೫೨ ॥

ತವ ಭರ್ತಾ ಯದಿ ವದೇತ್ತದಾ ಮೇ ಪ್ರತ್ಯಯೋ ಭವೇತ್ ।
ತದಾಕರ್ಣ್ಯ ದ್ವಿಜೇನೋಕ್ತಂ ವಿರೋಚನಗೃಹೇಶ್ವರೀ ॥ ೫೩ ॥

ಪತಿಮಾಕಾರಯಾಮಾಸ ತತ್ರೈವ ದ್ವಿಜಸನ್ನಿಧೌ ।
ಸ ಪ್ರಾಪ್ತೋ ದೂತವಾಕ್ಯೇನ ಪ್ರಾಹ್ಲಾದಿರ್ಹೃಷ್ಟಮಾನಸಃ ॥ ೫೪ ॥

---

ವೃದ್ಧಬ್ರಾಹ್ಮಣನ ಆ ಮಾತನ್ನು ಕೇಳಿ ಕಾರ್ಯವಿಶಾರದಳಾದ ಅವಳು ಸ್ತ್ರೀಯಾದ್ದರಿಂದ ವಿಷ್ಣುಮಾಯೆಗೆ ಮೋಹಗೊಂಡು ಅತ್ಯಂತ ಸಂತೋಷಪಟ್ಟು ಹೀಗೆ ಹೇಳಿದಳು.

ವಿಶಾಲಾಕ್ಷಿಯು ಹೇಳಿದಳು :—ಬ್ರಾಹ್ಮಣನೇ ! ನಿನ್ನ ಮನಸ್ಸಿನಲ್ಲಿ ಬಯಸಿರುವುದನ್ನು ಕೊಡುವೆನು. ನಾನು ಕೊಟ್ಟಿರುವ ಆಸನ ಪಾದೋದಕಗಳನ್ನು ಸ್ವೀಕರಿಸಿ ನನಗೆ ಇಷ್ಟಾರ್ಥವನ್ನು ಕೊಡು ಎಂದು ಅವಳು ಹೇಳಿದ ಮಾತನ್ನು ಕೇಳಿ ವೃದ್ಧಬ್ರಾಹ್ಮಣನು ಹೆಂಗಸಿನ ಮಾತನ್ನು ನಂಬಲಾರೆನು. ನಿನ್ನ ಗಂಡನು ಹೇಳಿದರೆ ನನಗೆ ನಂಬಿಕೆಯುಂಟಾಗುವುದು ಎಂದು ಹೇಳಿದನು.

ಅದನ್ನು ಕೇಳಿ ವಿರೋಚನ ಪತ್ನಿಯು ಆ ಬ್ರಾಹ್ಮಣನ ಸನ್ನಿಧಿಗೇ ತನ್ನ ಪತಿಯನ್ನು ಬರುವಂತೆ ಹೇಳಿಕಳುಹಿಸಿದಳು. ದೂತನ ಮಾತಿನಿಂದ ಪ್ರಹ್ಲಾದ ಪುತ್ರನಾದ ವಿರೋಚನನು ಸಂತೋಷದಿಂದ ತನ್ನ ಭಾರ್ಯೆಯಾದ ವಿಶಾಲಾಕ್ಷಿಯು

**ಅಂತಃಪುರಂ ಯತ್ರ ಭಾರ್ಯಾ ವಿಶಾಲಾಕ್ಷೀ ಸಮಾಸ್ಥಿತಾ ।**
**ತಮಾಗತಂ ಸಮಾಲೋಕ್ಯ ಪತಿಂ ಧರ್ಮಪರಾಯಣಾ ॥ ೫೫ ॥**

**ಉತ್ಥಾಯ ನತ್ವಾ ವಿಪ್ರಾರ್ಥಮಾಸನಂ ಪುನರರ್ಪಯತ್ ।**
**ಯದಾ ತು ಜಗೃಹೇ ನೈವ ದತ್ತಮಾಸನಮಾದರಾತ್ ॥ ೫೬ ॥**

**ರಾಜಾನಂ ಕಥಯಾಮಾಸ ದೈತ್ಯಾನಾಂ ಪತಿಮಾತ್ಮನಃ ।**
**ತದ್ವೃತ್ತಾಂತಮುಪಾಜ್ಞಾಯ ದೈತ್ಯರಾಟ್ ಸ ವಿರೋಚನಃ ॥ ೫೭ ॥**

**ಭಾರ್ಯಾಸ್ನೇಹೇನ ಮುಗ್ಧಾತ್ಮಾ ತತ್ತ್ವದಾಂಗೀಚಕಾರ ಹ ।**
**ಅಂಗೀಕೃತಂ ತು ದೈತ್ಯೇನ ತದ್ವಿಜ್ಞಾಯ ಚ ಮಾನಸಂ ॥ ೫೮ ॥**

**ಉವಾಚ ಬ್ರಾಹ್ಮಣೋ ಹೃಷ್ಟಃ ಸ್ವಮಾಯುರ್ಮನು ಕಲ್ಪಯ ।**
**ತತಸ್ತು ದಂಪತೀ ತತ್ರ ಮುಗ್ಧೌ ಸ್ವಕೃತಯಾ ಶುಚಾ ॥ ೫೯ ॥**

**ಮುಹೂರ್ತಂ ಧ್ಯಾನಮಾಸ್ಥಾಯ ಕರೌ ಬದ್ಧ್ವೋಚತುರ್ದ್ವಿಜಂ ।**
**ಗೃಹಾಣ ಜೀವಿತಂ ವಿಪ್ರ ದೇಹಿ ಪಾದೋದಕಂ ಮಮ ॥ ೬೦ ॥**

---

ಇದ್ದ ಅಂತಃಪುರಕ್ಕೆ ಬಂದನು. ಧರ್ಮಿಷ್ಠಳಾದ ವಿಶಾಲಾಕ್ಷಿಯು ಅಲ್ಲಿಗೆ ಬಂದ ಪತಿಯನ್ನು ನೋಡಿ ಎದ್ದು ನಮಸ್ಕರಿಸಿ ಅವನೆದುರಿಗೆ ಪುನಃ ಬ್ರಾಹ್ಮಣನಿಗೆ ಆಸನವನ್ನು ಅರ್ಪಿಸಿದಳು. ಆಗಲೂ ಬ್ರಾಹ್ಮಣನು ಆದರದಿಂದ ಕೊಡಲ್ಪಟ್ಟ ಆಸನವನ್ನು ಸ್ವೀಕರಿಸಲಿಲ್ಲ.

೫೭-೬೫. ಆಗ ದೈತ್ಯರಾಜನಾದ ತನ್ನ ಗಂಡನಿಗೆ ನಡೆದ ವೃತ್ತಾಂತವನ್ನು ಹೇಳಿದಳು. ದೈತ್ಯರಾಜನಾದ ಆ ವಿರೋಚನನು ಹೆಂಡತಿಯಲ್ಲಿರುವ ಪ್ರೀತಿಯಿಂದ ಮೋಹಿತನಾಗಿ ಬ್ರಾಹ್ಮಣನ ಮನೋಗತವನ್ನು ನಡೆಸಿಕೊಡುವೆನೆಂದು ಒಪ್ಪಿಕೊಂಡನು.

ದೈತ್ಯನು ಮನಃಪೂರ್ವಕವಾಗಿ ಒಪ್ಪಿಕೊಂಡುದನ್ನು ತಿಳಿದು ಬ್ರಾಹ್ಮಣನು ಸಂತುಷ್ಟನಾಗಿ ನಿನ್ನ ಆಯುಸ್ಸನ್ನು ನನಗೆ ಕೊಡು ಎಂಬುದಾಗಿ ರಾಜನನ್ನು ಕೇಳಿದನು. ತರುವಾಯ ಮುಗ್ಧರಾದ ದಂಪತಿಗಳು ತಾವು ಮಾಡಿಕೊಂಡ

ತ್ವಯೋಕ್ತಂ ವಚನಂ ಸತ್ಯಂ ಕುರ್ವಃ ಪ್ರೀತಿಮವಾಪ್ನುಹಿ |
ತತಸ್ತು ವಿಪ್ರಃ ಪ್ರೀತಾತ್ಮಾ ತದಂಗೀಕೃತ್ಯ ಚಾಸನಂ || ೬೧ ||
ಪಾದೋದಕಂ ದದೌ ತಸ್ಯೈ ಭಕ್ತ್ಯಾ ಪ್ರೀತೋ ಜನಾರ್ದನಃ |
ಪ್ರಕ್ಷಾಲ್ಯ ಪಾದೌ ವಿಪ್ರಸ್ಯ ವಿಶಾಲಾಕ್ಷೀ ಮುದಾನ್ವಿತಾ || ೬೨ ||
ಪತ್ಯಾ ಸಹ ದಧೌ ಮೂರ್ಧ್ನಿ ಅಪಃ ಪಾದಾವನೇಜನೀಃ |
ತತಸ್ತು ಸಹಸಾ ಸುಭ್ರು ದಂಪತೀ ದಿವ್ಯರೂಪಿಣೌ || ೬೩ ||
ವಿಮಾನವರಮಾರುಹ್ಯ ಜಗ್ಮತುರ್ವೈಷ್ಣವಂ ಪದಂ |
ತತಃ ಪ್ರಸನ್ನೋ ಭಗವಾನ್ ದೇವಶಲ್ಯಂ ವಿಮೋಚ್ಯ ಸಃ || ೬೪ ||
ಯಯೌ ವೈಕುಂಠಭವನಂ ಸರ್ವೈರ್ದೇವಗಣೈಃ ಸ್ತುತಂ |
ಏವಂ ಮಯಾಪಿ ದಾತವ್ಯಂ ತವ ದೇವಿ ಪ್ರತಿಶ್ರುತಂ || ೬೫ ||

---

ಶೋಕಪ್ರಸಂಗದಿಂದ ಒಂದು ಮುಹೂರ್ತಕಾಲ ಚಿಂತಿಸಿ ಕೈಜೋಡಿಸಿಕೊಂಡು "ಬ್ರಾಹ್ಮಣನೇ! ನನ್ನ ಜೀವಿತವನ್ನು ತೆಗೆದುಕೋ. ನನಗೆ ಪಾದೋದಕವನ್ನು ಕೊಡು! ನೀನು ಹೇಳಿದ ಮಾತನ್ನು ಸತ್ಯಮಾಡುವೆವು. ಸಂತೋಷವನ್ನು ಹೊಂದು!'' ಎಂಬುದಾಗಿ ಹೇಳಿದರು.

ಅನಂತರ ಬ್ರಾಹ್ಮಣನು ಸಂತೋಷಪಟ್ಟು ಆ ಆಸನವನ್ನು ಸ್ವೀಕರಿಸಿ ವಿಶಾಲಾಕ್ಷಿದೇವಿಗೆ ಪಾದೋದಕವನ್ನು ಕೊಟ್ಟು ಅವಳ ಭಕ್ತಿಗೆ ಮೆಚ್ಚಿ ಪ್ರಸನ್ನನಾದನು.

ವಿಶಾಲಾಕ್ಷಿಯು ಪತಿಯೊಡನೆ ಸಂತೋಷವಾಗಿ ಬ್ರಾಹ್ಮಣನ ಪಾದಗಳನ್ನು ತೊಳೆದು ಪಾದದಿಂದಕೆಳಕ್ಕೆ ಬಿದ್ದ ನೀರನ್ನು ಶಿರಸ್ಸಿನಲ್ಲಿ ಧರಿಸಿದಳು.

ಸುಭ್ರೂ! ಆ ಕೂಡಲೇ ದೈತ್ಯದಂಪತಿಗಳು ದೇಹವನ್ನು ಬಿಟ್ಟು ದಿವ್ಯರೂಪವನ್ನುಧರಿಸಿದವರಾಗಿ ಉತ್ತಮವಾದ ವಿಮಾನವನ್ನು ಹತ್ತಿ ವೈಷ್ಣವಸ್ಥಾನ ಎಂದರೆ ವೈಕುಂಠಕ್ಕೆ ಹೋಗಿ ಸೇರಿದರು.

ಅನಂತರ ಪ್ರಸನ್ನನಾದ ಭಗವಂತನು ದೇವತೆಗಳ ಕಂಟಕವನ್ನು ಬಿಡಿಸಿ ಸಕಲ ದೇವತೆಗಳಿಂದಲೂ ಸ್ತುತಿಸಲ್ಪಟ್ಟು ವೈಕುಂಠಭವನಕ್ಕೆ ಹಿಂತಿರುಗಿದನು.

ಇದೇರೀತಿಯಾಗಿ ದೇವಿಯೇ! ನಾನೂ ಸಹ ಪ್ರತಿಜ್ಞೆ ಮಾಡಿರುವುದನ್ನು ಕೊಡುವೆನು.

ನ ಸತ್ಯಾಚ್ಚಾಲಯೇ ದೇವಿ ಪತಿಂ ರುಕ್ಮಾಂಗದಾಭಿದಂ |
ಸತ್ಯಮೇವಮನುಷ್ಯಾಣಾಂ ಗತಿದಂ ಪರಿಕೀರ್ತಿತಂ || ೬೬ ||

ಸತ್ಯಾಚ್ಯುತಂ ಮನುಷ್ಯಂ ಹಿ ಶ್ವಪಾಕಾದಧಿಕಂ ವಿದುಃ || ೬೭ ||

ಇತ್ಯೇವ ಮುಕ್ತ್ವಾ ಕನಕಾವದಾತಾ
ಸಾ ಮೋಹಿನೀಂ ಪಂಕಜಜನ್ಮಜಾತಾಂ |
ಜಗ್ರಾಹ ಭರ್ತುಶ್ಚರಣೌ ಸುತಾಮ್ರೌ
ರಕ್ತಾಂಗುಲೀ ಪಾಣಿಯುಗೇನ ಸುಭ್ರೂಃ || ೬೮ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಸಂಧ್ಯಾವಲೀಕಥನಂ ನಾಮ
ದ್ವಾತ್ರಿಂಶತ್ತಮೋಽಧ್ಯಾಯಃ

---

೬೬. ದೇವಿಯೇ! ರುಕ್ಮಾಂಗದನಾಮಕನಾದ ಪತಿಯನ್ನು ಸತ್ಯಬಿಡುವಂತೆ ಮಾಡುವುದಿಲ್ಲ. ಮನುಷ್ಯರಿಗೆ ಸತ್ಯವೇ ಗತಿದಾಯಕವೆಂದು ಹೇಳಿದೆ.

೬೭. ಸತ್ಯವನ್ನು ಬಿಟ್ಟು ಮನುಷ್ಯನನ್ನು ಶ್ವಪಚನಾದ ಚಂಡಾಲನಿಗಿಂತಲೂ ಕೀಳೆಂದು ಜ್ಞಾನಿಗಳು ತಿಳಿದಿರುವರು.

೬೮. ರುಕ್ಮಾಂಗದಪತ್ನಿಯಾದ ಸಂಧ್ಯಾವಳಿಯು ಈ ರೀತಿಯಾಗಿ ಬ್ರಹ್ಮಪುತ್ರಿಯಾದ ಮೋಹಿನಿಗೆ ಹೇಳಿ ಒಳ್ಳೆಯ ತಾಮ್ರವರ್ಣದ ಕೆಂಪು ಬೆಟ್ಟುಗಳುಳ್ಳ ಗಂಡನ ಕಾಲುಗಳೆರಡನ್ನೂ ತನ್ನ ಕೈಗಳಿಂದ ಹಿಡಿದುಕೊಂಡಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಸಂಧ್ಯಾವಳೀಹೇಳಿಕೆಯೆಂಬ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ

ಸಂಧ್ಯಾವಳಿಯ ಮಾತನ್ನು ಕೇಳಿ ಮೋಹಿನಿಯು ರಾಜನು ಏಕಾದಶೀ ಭೋಜನ ಮಾಡದಿದ್ದರೆ ನಿನ್ನ ಪ್ರಿಯಕುಮಾರನಾದ ಧರ್ಮಾಂಗದನ ತಲೆಯನ್ನು ಕತ್ತರಿಸಿ ನನ್ನ ತೊಡೆಯಮೇಲೆ ತಂದಿಡಲಿ ಎಂಬುದಾಗಿ ಅತ್ಯಂತ ಕಠಿನವಾದ ಬೇರೆ ವರವನ್ನು ಕೇಳಿದಳು. ಆಗ ಸಂಧ್ಯಾವಳಿಯು ಹಾಗೆಯೇ ಆಗಲೆಂದು ಒಪ್ಪಿ ವಿರೋಚನನ ಕಥೆಯನ್ನು ವಿಸ್ತಾರವಾಗಿ ತಿಳಿಸಿ ರುಕ್ಮಾಂಗದನಿಂದ ಅದರಂತೆ ಮಾಡಿಸುವೆನು. ಅವನು ಸತ್ಯಸಂಧನು ಎಂದಿಗೂ ಸತ್ಯವನ್ನು ಬಿಡಲಾರನು. ಎಂದು ಭರವಸೆಕೊಟ್ಟು ರಾಜನ ಪಾದಾಕ್ರಾಂತಳಾದಳು ಎಂಬಲ್ಲಿ ಈ ಅಧ್ಯಾಯವು ಮುಗಿದಿದೆ.

# ತ್ರಯಸ್ತ್ರಿಂಶೋಽಧ್ಯಾಯಃ

## ವಸಿಷ್ಠ ಉವಾಚ

ಸಂಧ್ಯಾವಲೀ ತತಃ ಪಾದೌ ಭರ್ತುಃ ಸಂಗೃಹ್ಯ ಭೂಪತೇ ।
ಉವಾಚ ವಚನಂ ದೇವೀ ಧರ್ಮಾಂಗದವಿನಾಶನಂ ॥ ೧ ॥

ಬಹುಧಾಪ್ಯನುಶಿಷ್ಟೇಯಂ ಮಯಾ ಭೂಪ ಯಥಾ ತ್ವಯಾ ।
ಮೋಹಿನ್ಯಾ ಮೋಹರೂಪಾಯಾ ನಾನ್ಯತ್ಸಂರೋಚತೇಽಧುನಾ ॥ ೨ ॥

ಭೋಜನಂ ವಾಸರೇ ವಿಷ್ಣೋರ್ವಧಂ ವಾ ತನಯಸ್ಯ ವೈ ।
ಧರ್ಮತ್ಯಾಗಾದ್ವರಂ ನಾಥ ಪುತ್ರಸ್ಯ ವಿನಿಪಾತನಂ ॥ ೩ ॥

ಯಾದೃಶೀ ಹಿ ಜನನ್ಯಾಸ್ತು ಪೀಡಾ ಭವತಿ ಭೂಪತೇ ।
ಪುತ್ರಸ್ಯೋತ್ಪಾದನೇ ತೀವ್ರಾ ತಾದೃಶೀ ನ ಭವೇತ್ಪಿತುಃ ॥ ೪ ॥

---

## ಮೂವತ್ತುಮೂರನೆಯ ಅಧ್ಯಾಯವು

೧-೩. ವಸಿಷ್ಠನು ಹೇಳಿದನು :—ಅನಂತರ ಸಂಧ್ಯಾವಳಿಯು ಗಂಡನ ಪಾದಗಳನ್ನು ಹಿಡಿದುಕೊಂಡು ರಾಜನೇ! ನಾನು ಬಹುವಿಧವಾಗಿ ಮೋಹಿನಿಗೆ ಹೇಳಿದೆನು. ಆದರೂ ಮೋಹರೂಪಿಣಿಯಾದ ಮೋಹಿನಿಯು ಈಗ ಬೇರಾವು ದನ್ನೂ ಅಪೇಕ್ಷಿಸುವುದಿಲ್ಲ.

ಏಕಾದಶೀದಿನದಲ್ಲಿ ಊಟಮಾಡಬೇಕು ಅಥವಾ ಮಗನನ್ನು ಕೊಲ್ಲ ಬೇಕು ಎಂಬುದಾಗಿ ಹಠಹಿಡಿದಿರುವಳು ಎಂಬ ಧರ್ಮಾಂಗದನ ನಾಶಕವಾದ ಮಾತನ್ನು ಹೇಳಿ ನಾಥಾ ? ಧರ್ಮಬಿಡುವುದಕ್ಕಿಂತ ಮಗನನ್ನು ಕೊಲ್ಲುವುದೇ ಲೇಸು ಎಂದಳು.

೪. ಭೂಪಾಲನೇ! ಮಗನು ಹುಟ್ಟಬೇಕಾದರೆ ತಾಯಿಗೆ ಎಂತಹ ಕಠಿಣವಾದ ದುಃಖವಾಗುವುದೋ ಅಂತಹ ಕಷ್ಟವು ತಂದೆಗಾಗುವುದಿಲ್ಲ.

ಗರ್ಭಸಂಧಾರಣೇ ರಾಜನ್ ಖೇದಃ ಸ್ನೇಹೋಧಿಕೋ ಯಥಾ ।
ಮಾತುರ್ಭವತಿ ಭೂಪಾಲ ತಥಾ ನ ಹಿ ಭವೇತ್ಪಿತುಃ ॥ ೫ ॥

ಬೀಜನಿರ್ವಾಪಕಃ ಪ್ರೋಕ್ತಃ ಪಿತಾ ರಾಜೇಂದ್ರ ಭೂತಲೇ ।
ಜನನೀ ಧಾರಿಣೀ ಕ್ಲಿಷ್ಟಾ ವರ್ಧನೇ ಪಾಲನೇಧಿಕಾ ॥ ೬ ॥

ಪಿತುಃ ಶತಗುಣಃ ಸ್ನೇಹೋ ಮಾತುಃ ಪುತ್ರೇ ಪ್ರವರ್ತತೇ ।
ಸ್ನೇಹಾಧಿಕ್ಯಂ ತು ಸಂಪ್ರೇಕ್ಷ್ಯ ಮಾತರಂ ಕವಯೋ ವಿದುಃ ॥ ೭ ॥

ಸಾಹಂ ಜಾತಾ ಗತಸ್ನೇಹಾ ಪರಲೋಕಜಿಗೀಷಯಾ ।
ಪುತ್ರಸ್ಯ ನೃಪಶಾರ್ದೂಲ ಸತ್ಯವಾಕ್ಯಸ್ಯ ಪಾಲನಾತ್ ॥ ೮ ॥

---

೫. ರಾಜನೇ! ಗರ್ಭವನ್ನು ಧರಿಸಿರುವಾಗ ತಾಯಿಗೆ ಹೆಚ್ಚು ಕ್ಲೇಶವಾಗುವುದು. ಆದರೆ ಮಕ್ಕಳಲ್ಲಿ ಅದಕ್ಕಿಂತಲೂ ಅಧಿಕವಾದ ಪ್ರೀತಿಯಿರುವುದರಿಂದ ತಾಯಿಯು ಅದನ್ನು ಸಹಿಸುವಳು. ಭೂಪಾಲ! ತಂದೆಗೆ ಅಂತಹ ದುಃಖ ಪ್ರಸಂಗವಿಲ್ಲ.

೬. ರಾಜೇಂದ್ರನೇ! ಭೂಮಿಯಲ್ಲಿ ಬೀಜ ಬಿತ್ತುವವನಂತೆ ತಂದೆಯು ಬೀಜಾವಾಪಮಾಡುವವನು ಎಂದು ಉಕ್ತವಾಗಿದೆ. ಜನನಿಯಾದರೋ ಅದನ್ನು ಧರಿಸುವವಳು. ಅದನ್ನು ಬೆಳೆಸುವುದಕ್ಕೂ ಮತ್ತು ರಕ್ಷಿಸಿಕೊಳ್ಳುವುದಕ್ಕೂ ತಾಯಿಯೇ ಹೆಚ್ಚು ಕಷ್ಟಪಡುವಳು.

೭. ತಂದೆಗಿಂತ ತಾಯಿಗೆ ಮಗನಲ್ಲಿ ಮೂರುಭಾಗ ಹೆಚ್ಚು ಪ್ರೀತಿಯಿರುತ್ತದೆ. ಹೀಗೆ ಅಧಿಕಪ್ರೀತಿ ಇರುವುದನ್ನು ನೋಡಿ ಜ್ಞಾನಿಗಳು ಜನನಿಯನ್ನು ಮಾತೆಯೆಂದು ಹೇಳಿರುವರು.

೮. ರಾಜಶ್ರೇಷ್ಠನೇ! ಅಂತಹ ಮಾತೆಯಾದ ನಾನೇ ಸತ್ಯವಚನವನ್ನು ಪಾಲಿಸಿ ಪರಲೋಕದಲ್ಲಿ ಉತ್ಕರ್ಷವನ್ನು ಹೊಂದಬೇಕೆಂಬ ಆಶೆಯಿಂದ ಮಗನಲ್ಲಿರುವ ಪ್ರೀತಿಯನ್ನು ಬಿಟ್ಟಿರುವೆನು.

ವ್ಯಾಪಾದಯ ಸುತಂ ಭೂಪ ಸ್ನೇಹಂ ತ್ಯಕ್ತ್ವಾ ಸುದೂರತಃ ।
ಮಾ ಸತ್ಯಲಂಘನಂ ಕಾರ್ಷೀಃ ಶಾಪಿತೋಽಸಿ ಮಯಾತ್ಮನಾ ॥ ೯ ॥

ನರಕೇಷು ಹೃಷೀಕೇಶೋ ಭವಿಷ್ಯತಿ ಫಲಪ್ರದಃ ।
ಯಸ್ಮಿಂಶ್ಚೀರ್ಣೇ ರುಜಾ ದೇಹೇ ನಾಲ್ಪಾಪಿ ನೃಪ ಜಾಯತೇ ॥ ೧೦ ॥

ಅಧರ್ಮೋ ಮಾನವದ್ಭಾತಿ ಸ್ವರ್ಗಭ್ರಷ್ಟೋ ನ ಸಂಶಯಃ ।
ಪ್ರಾಣಾನಾದಾಯ ಪುತ್ರಂ ವಾ ಸರ್ವಸ್ವಂ ವಾ ಮಹೀಪತೇ ॥ ೧೧ ॥

ಯಶ್ಚಾನುವರ್ತತೇ ದೈವಂ ಸ ಪುಮಾನ್ ಗೀಯತೇ ಮಹಾನ್ ।
ತಾ ಆಪದೋಽಪಿ ಭೂಪಾಲ ಧನ್ಯಾಯಾಃ ಸತ್ಯಕಾರಿಕಾಃ ॥ ೧೨ ॥

ಸತ್ಯಸಂರಕ್ಷಣಾರ್ಥತ್ವಾನ್ನೃಣಾಂ ಸ್ಯುರ್ಮೋಕ್ಷದಾಯಿಕಾಃ ।
ಕೀರ್ತಿಸಂಸ್ತರಣಾರ್ಥಾಯ ಕರ್ತವ್ಯಂ ಮನುಜೈಃ ಸದಾ ॥ ೧೩ ॥

---

೯-೧೦- ಭೂಪಾಲನೇ! ಅಭಿಮಾನವನ್ನು ದೂರಮಾಡಿ ಮಗನನ್ನು ಸಂಹರಿಸು! ಸತ್ಯವನ್ನುಲ್ಲಂಘಿಸಬೇಡ! ಶಾಪಕ್ಕೀಡಾದೀಯೆ! ಅಸತ್ಯದಲ್ಲಿ ಪ್ರವರ್ತಿಸಿದರೆ, ಹೃಷೀಕೇಶನು ನರಕಗಳಲ್ಲಿ ಅದಕ್ಕೆ ತಕ್ಕ ಫಲವನ್ನು ಕೊಡುವನು.

ದೊರೆಯೇ! ಸತ್ಯಧರ್ಮವನ್ನಾಚರಿಸಿದರೆ ದೇಹದಲ್ಲಿ ಸ್ವಲ್ಪವೂ ರೋಗ ಉಂಟಾಗುವುದಿಲ್ಲ.

೧೧-೧೨. ಅಧರ್ಮವು ಮಾನದಂತೆ ತೋರುತ್ತದೆ. ಅದನ್ನನುಸರಿಸಿದರೆ ಸ್ವರ್ಗಭ್ರಷ್ಟನಾಗುವನು, ಸಂದೇಹವಿಲ್ಲ.

ಮಹೀಪಾಲನೇ! ಪ್ರಾಣಗಳನ್ನು ಅಥವಾ ಪುತ್ರನನ್ನು ಇಲ್ಲವೇ ಸರ್ವಸ್ವವನ್ನು ಸಹ ಕೊಟ್ಟು ದೈವವನ್ನೇ ಅನುಸರಿಸುವ ಮನುಷ್ಯನು ಮಹಾತ್ಮನೆನಿಸುವನು. ಭೂಪಾಲನೇ! ಸತ್ಯಸಂಪಾದಕವಾದ ಆಪತ್ತುಗಳೂ ಸಹ ಶುಭಗಳೇ ಸರಿ.

೧೩-೧೪. ಅವು ಸತ್ಯವನ್ನು ರಕ್ಷಿಸುವುದರಿಂದ ಮನುಷ್ಯರಿಗೆ ಮುಕ್ತಿದಾಯಕಗಳಾಗುವುವು. ಭೂಪಾಲನೇ! ಮನುಜರು ಕೀರ್ತಿಯನ್ನು ಹರಡುವುದ

ಕರ್ಮ ಭೂಪಾಲ ಶಾಸ್ತ್ರೋಕ್ತಂ ಸ್ನೇಹದ್ವೇಷವಿವರ್ಜಿತಂ ।
ತದಲಂ ಪರಿತಾಪೇನ ಸತ್ಯಂ ಪಾಲಯ ಭೂಪತೇ ॥ ೧೪ ॥

ಸತ್ಯಸ್ಯ ಪಾಲನಾದ್ರಾಜನ್ವಿಷ್ಣುದೇಹೇನ ಯುಜ್ಯತೇ ।
ದೇವೈರುತ್ಪಾದಿತಾ ಹ್ಯೇಷಾ ನಿಕಷಾ ತೇ ವಿಮೋಹಿನೀ ॥ ೧೫ ॥

ಮನ್ಯೇ ಭೂಪಾಲ ಸಾಪತ್ನ್ಯಕೃತೇ ತ್ವಂ ನ ಹಿ ಬುಧ್ಯಸೇ ।
ಪುತ್ರವ್ಯಾಪಾದನಾದ್ದೇವಾ ಭವಿಷ್ಯಂತಿ ಪರಾಙ್ಮುಖಾಃ ॥ ೧೬ ॥

ತೇಷಾಂ ದತ್ವಾ ಪದಂ ಮೂರ್ಧ್ನಿ ಯಾಸ್ಯಸೇ ಪರಮಂ ಪದಂ ।
ವಿಷ್ಣೋರುದ್ವಹತಾಂ ಭಕ್ತಿಂ ದೇವತಾಃ ಪರಿಪಂಥಿನಃ ॥ ೧೭ ॥

ಭವಿಷ್ಯತ್ಯಂಧತಾ ಲೋಕೇ ತದೇವ ಪ್ರಕಟೀಕೃತಂ ।
ವಿರುದ್ಧಾ ವಿಬುಧಾ ಭೂಪ ಸೇಶ್ವರಾಸ್ತವ ಚೇಷ್ಟಿತೈಃ ॥ ೧೮ ॥

---

ಕ್ಕಾಗಿ ಅಭಿಮಾನ, ದ್ವೇಷ ಮುಂತಾದುವನ್ನು ಬಿಟ್ಟು ಶಾಸ್ತ್ರವಿಹಿತಕರ್ಮವನ್ನು ಸರ್ವದಾ ಮಾಡಬೇಕು. ಭೂಪತಿಯೇ! ಆದಕಾರಣ ಪರಿತಾಪವು ಸಾಕು! ಸತ್ಯವನ್ನು ಪಾಲಿಸು!

೧೫-೧೬. ರಾಜನೇ! ಸತ್ಯವನ್ನು ಪಾಲಿಸುವುದರಿಂದ ವಿಷ್ಣು ಸಾಯುಜ್ಯವನ್ನು ಹೊಂದುವನು. ಭೂಪಾಲನೇ! ದೇವತೆಗಳು ನಿನ್ನನ್ನು ಪರೀಕ್ಷಿಸಲು ಹುಟ್ಟಿಸಿರುವ ಒರೆಗಲ್ಲೇ ಈ ಮೋಹಿನಿಯು ಎಂದು ನಾನು ತಿಳಿದಿರುವೆನು.

ಭೂಪಾಲನೇ! ಸೌತಿಯರು ಮಾಡುವ ಕೆಲಸಗಳನ್ನು ನೀನು ಅರಿತಿಲ್ಲ. ಪುತ್ರನನ್ನು ಸಂಹರಿಸುವುದರಿಂದ ದೇವತೆಗಳು ಪರಾಙ್ಮುಖರಾಗುವರು.

೧೭. ನೀನು ಅವರ ತಲೆಯಮೇಲೆ ಕಾಲಿಟ್ಟು ಪರಮಪದಕ್ಕೆ ಹೋಗುತ್ತೀಯೆ. ವಿಷ್ಣುದೇವನಲ್ಲಿ ಭಕ್ತಿಮಾಡುವವರಿಗೆ ದೇವತೆಗಳು ವಿಘ್ನಕಾರಿಗಳಾಗುವರು.

೧೮-೧೯. ಆದರಿಂದ ಲೋಕದಲ್ಲಿ ಅಂಧತೆಯುಂಟಾಗುವುದು. ಅದೇ ಈಗ ಸ್ಪಷ್ಟಪಡುತ್ತಿದೆ. ದೊರೆಯೇ! ನೀನು ಮಾಡುತ್ತಿರುವ ಧರ್ಮಕೆಲಸಗ

ಮೋಕ್ಷಮಾರ್ಗಪ್ರಭೇತ್ತಾರಸ್ತವ ನಿಶ್ಚಯಲೋಪಕಾಃ ।
ಸ ತ್ವಂ ಭೂಪ ದೃಢೋ ಭೂತ್ವಾ ಘಾತಯಸ್ವ ಸುತಂ ಪ್ರಿಯಂ ॥ ೧೯ ॥

ಮೋಹಿನ್ಯಾಃ ಕುರು ವಾಕ್ಯಂ ತು ಆತ್ಮನಃ ಸತ್ಯಪಾಲನಾತ್ ॥ ೨೦ ॥

ಲುಪ್ತೇಽಪಿ ವಾಕ್ಯೇ ಭವಿತಾ ನೃಪೇಶ
ಪಾಪಂ ಸಮಂ ಬ್ರಹ್ಮವಧೇನ ಘೋರಂ ।
ಗಂತಾಸಿ ಲೋಕೇ ಶಮನಸ್ಯ ಭೂಪ
ಯಶಃಪ್ರಣಾಶೋ ಭವಿತಾ ಧರಾಯಾಂ ॥ ೨೧ ॥

ವಸಿಷ್ಠ ಉವಾಚ

ಭಾರ್ಯಾಯಾ ವಚನಂ ಶ್ರುತ್ವಾ ರಾಜಾ ರುಕ್ಮಾಂಗದಸ್ತದಾ ।
ಸಂಧ್ಯಾವಲೀಮುವಾಚೇದಂ ಮೋಹಿನ್ಯಾಃ ಸನ್ನಿಧೌ ನೃಪ ॥ ೨೨ ॥

ಪುತ್ರಹತ್ಯಾ ಮಹಾಹತ್ಯಾ ಬ್ರಹ್ಮಹತ್ಯಾಧಿಕಾ ಪ್ರಿಯೇ ।
ಘಾತಯಿತ್ವಾ ಸುತಂ ಲೋಕೇ ಕಾ ಗತಿರ್ಮೇ ಭವಿಷ್ಯತಿ ॥ ೨೩ ॥

---

ಳಿಂದ ಸೇಶ್ವರದೇವತೆಗಳು ನಿನಗೆ ವಿರೋಧಿಗಳಾಗಿರುವರು. ಅವರು ನಿನ್ನ ಧರ್ಮನಿರ್ಣಯಕ್ಕೆ ಲೋಪತಂದು ಮೋಕ್ಷ ಮಾರ್ಗವನ್ನು ಭೇದಿಸುವವರಾಗಿದ್ದಾರೆ. ಆದಕಾರಣ ನೀನು ಧೃಢನಿರ್ಣಯವಮಾಡಿಕೊಂಡು ಪ್ರಿಯಕುಮಾರನನ್ನು ಸಂಹರಿಸು !

೨೦. ರಾಜನೇ ! ನಿನ್ನ ಸತ್ಯನುಡಿಯನ್ನು ಳಿಸಿಕೊಳ್ಳುವುದಕ್ಕಾಗಿ ಮೋಹಿನಿಯ ಮಾತನ್ನು ನಡೆಯಿಸು.

೨೧. ನೃಪೇಶನೇ ! ಮಾತುಹೋದರೆ ಬ್ರಹ್ಮಹತ್ಯೆಗೆ ಸಮಾನವಾದ ಘೋರಪಾಪ ಬರುವುದು. ಅದರಿಂದ ನೀನು ಯಮಲೋಕಕ್ಕೆ ಹೋಗಬೇಕಾಗುತ್ತದೆ. ಭೂಲೋಕದಲ್ಲಿ ಖಂಡಿತವಾಗಿಯೂ ಯಶಸ್ಸು ಹಾಳಾಗುವುದು.

೨೨. ಪತ್ನಿಯ ಮಾತನ್ನು ಕೇಳಿ ರುಕ್ಮಾಂಗದರಾಜನು, ಆ ಮೋಹಿನಿಯ ಇದಿರಿಗೆ ಸಂಧ್ಯಾವಳಿಯನ್ನು ಕುರಿತು ಹೀಗೆ ಹೇಳಿದನು.

೨೩. ಪ್ರಿಯೇ ! ಪುತ್ರಹತ್ಯೆಯು ಮಹಾಪಾಪಕರವು ! ಬ್ರಹ್ಮಹತ್ಯೆಗಿಂತಲೂ ಹೆಚ್ಚಾದುದು ! ಮಗನನ್ನು ಕೊಂದರೆ ನನಗೆ ಯಾವ ಗತಿಯಾಗುವುದು ?

ಕ್ವ ಗತೋ ಮಂದರಂ ಶೈಲಂ ಕ್ವ ಪ್ರಾಪ್ತಾ ಮೋಹಿನೀ ಮಯಾ ।
ಧರ್ಮಾಂಗದವಿನಾಶಾಯ ದೇವಿ ಕಾಲಪ್ರಿಯಾ ಸ್ತ್ರಿಯಂ ॥ ೨೪ ॥

ಧರ್ಮಜ್ಞಂ ವಿನಯೋಪೇತಂ ಪ್ರಜಾರಂಜನಕಾರಕಂ ।
ಅಪ್ರಜಂ ಚ ಸುತಂ ಹತ್ವಾ ಕಾ ಗತಿರ್ಮೇ ಭವಿಷ್ಯತಿ ॥ ೨೫ ॥

ಕುಪುತ್ರಸ್ಯಾಪಿ ಹನನಾದ್ದೇವಿ ದುಃಖಂ ಭವೇತ್ಪಿತುಃ ।
ಕಿಂ ಪುನರ್ಧರ್ಮಶೀಲಸ್ಯ ಗುರುಸೇವಾವಿಧಾಯಿನಃ ॥ ೨೬ ॥

ಜಂಬೂದ್ವೀಪಮಿದಂ ಭುಕ್ತಂ ಮಯಾ ತು ವರವರ್ಣಿನೀ ॥ ೨೭ ॥

ದ್ವೀಪಾನಿ ಸಪ್ತ ಭುಕ್ತಾನಿ ತನಯೇನ ತವಾಧುನಾ ।
ವಿಷ್ಣೋರಂಶೋ ವರಾರೋಹೇ ಪಿತುರಪ್ಯಧಿಕೋ ಭವೇತ್ ॥ ೨೮ ॥

---

೨೪. ದೇವಿಯೇ! ಏತಕ್ಕಾಗಿ ನಾನು ಮಂದರಪರ್ವತಕ್ಕೆ ಹೋದೆನು? ಈ ಮೋಹಿನಿಯು ಧರ್ಮಾಂಗದನ ಸಂಹಾರಕ್ಕಾಗಿ ನನಗೆಲ್ಲಿಗಂಟುಬಿದ್ದಳು? ಹಾ! ಇವಳು ಕಾಲಪ್ರಿಯೆಯೇ ಸರಿ.

೨೫. ಧರ್ಮಜ್ಞನು, ವಿನಯಸಂಪನ್ನನು, ಪ್ರಜೆಗಳನ್ನು ರಂಜಿಸುವವನು, ಮಕ್ಕಳಿಲ್ಲದವನೂ ಆಗಿರುವ ಮಗನನ್ನು ಕೊಂದು ನಾನು ಯಾವಗತಿಗೆ ಹೋಗಲಿ?

೨೬. ದೇವಿಯೇ! ದುಷ್ಟಮಗನನ್ನು ಕೊಂದರೂ ಸಹ ತಂದೆಗೆ ದುಃಖವಾಗುವುದು.

೨೭. ಹೀಗಿರುವಾಗ ಗುರುಸೇವೆಯನ್ನು ಮಾಡಿದ ಧರ್ಮಶೀಲನಾದ ಮಗನನ್ನು ಕೊಂದರೆ ದುಃಖವಾಗುವುದೆಂದು ಹೇಳಬೇಕಾದುದೇನು? ವರವರ್ಣಿನೀ! ನಾನು ಜಂಬೂದ್ವೀಪವನ್ನು ಮಾತ್ರ ಆಳಿದೆನು.

೨೮. ಕುಮಾರನಾದರೋ ಏಳುದ್ವೀಪಗಳನ್ನೂ ಜಯಿಸಿ ಆಳುತ್ತಿರುವನು. ವರಾರೋಹೇ! ತಂದೆಗಿಂತಲೂ ಹೆಚ್ಚಾಗಿ ವಿಷ್ಣುವಿನ ಅಂಶವು ಇವನಲ್ಲಿ ನೆಲೆಸಿದೆ.

ಪುರಾಣೇಷು ವರಾರೋಹೇ ಕವಿಭಿಃ ಪರಿಕೀರ್ತಿತಃ ।
ಯೋಽಯಮತ್ಯಧಿಕಃ ಪುತ್ರೋ ಧರ್ಮಾಂಗದ ಇತಿ ಕ್ಷಿತೌ ॥ ೨೯ ॥

ಮಮ ವಂಶಸ್ಯ ಚಾರ್ವಂಗಿ ಕಿಂ ಪುನರ್ಮಮ ಮಾನದಃ ।
ಅಹೋ ದುಃಖಮನುಪ್ರಾಪ್ತಂ ಪುತ್ರಾದಪ್ಯಧಿಕಂ ಮಯಾ ॥ ೩೦ ॥

ಪುನರೇವ ವರಾರೋಹೇ ಬ್ರೂಹಿ ತ್ವಂ ವಚನೈಃ ಶುಭೈಃ ।
ಮೋಹಿನೀಂ ಮೋಹಸಂಶಪ್ತಾಂ ಮಮ ದುಃಖಪ್ರದಾಯಿನೀಂ ॥ ೩೧ ॥

ಏವಮುಕ್ತ್ವಾ ತು ನೃಪತಿಃ ಪ್ರಿಯಾಂ ಸಂಧ್ಯಾವಲೀಂ ತದಾ ।
ಸಮೀಪಮಾಗತ್ಯ ನೃಪೋ ಮೋಹಿನೀಮಿದಮಬ್ರವೀತ್ ॥ ೩೨ ॥

ನ ಭೋಕ್ಷ್ಯೇ ವಾಸರೇ ವಿಷ್ಣೋರ್ನ ಹಿಂಸ್ಯೇ ತನಯಂ ಶುಭೇ ।
ಆತ್ಮಾನಂ ದಾರಯಿಷ್ಯಾಮಿ ದೇವೀಂ ಸಂಧ್ಯಾವಲೀಂ ತಥಾ ॥ ೩೩ ॥

---

೨೯. ವರಾರೋಹೇ! ಭೂಮಂಡಲದಲ್ಲಿ ಧರ್ಮಾಂಗದನು ಅತ್ಯುತ್ತಮ ಪುತ್ರನೆಂಬುದಾಗಿ ಪುರಾಣಗಳಲ್ಲಿ ಜ್ಞಾನಿಗಳೂ ಸಹ ಪ್ರಶಂಸಿಸಿರುವರು.

೩೦. ಸುಂದರಾಂಗೀ! ಹೆಚ್ಚೇನು ಹೇಳಲಿ? ಅವನು ನಮ್ಮ ವಂಶಕ್ಕೇ ಗೌರವದಾಯಕನು. ಅಯ್ಯೋ! ಮಗನ ವಧೆಗಿಂತಲೂ ನನಗೆ ಹೆಚ್ಚು ದುಃಖ ಕರವಾದುದಾವುದು ?

೩೧. ವರಾರೋಹೇ ! ಮೋಹಸಂಶಪ್ತಳು, ನನಗೆ ದುಃಖದಾಯಕಳೂ ಆಗಿರುವ ಮೋಹಿನಿಗೆ ನೀನು ಪುನಃ ಒಳ್ಳೆಯ ಮಾತುಗಳಿಂದ ಹೇಳಿನೋಡು.

೩೨. ಹೀಗೆ ದೊರೆಯು ಪ್ರಿಯೆಯಾದ ಸಂಧ್ಯಾವಳಿಗೆ ಹೇಳಿ ಮೋಹಿನಿಯ ಹತ್ತಿರಕ್ಕೆ ಬಂದು ಆಕೆಗೆ ಈ ಮಾತನ್ನು ಹೇಳಿದನು.

೩೩. ಭದ್ರೇ! ಹರಿದಿನಗಳಲ್ಲಿ ಭೋಜನಮಾಡಲಾರೆನು! ಮಗನನ್ನೂ ಕೊಲ್ಲಲಾರೆನು! ನನ್ನನ್ನಾಗಲೀ ಅಥವಾ ಸಂಧ್ಯಾವಳೀದೇವಿಯನ್ನಾಗಲೀ ಸಂಹರಿಸುವೆನು.

ಅನ್ಯದ್ವಾ ದಾರುಣಂ ಕರ್ಮ ಕರೋಮಿ ತವ ಶಾಸನಾತ್ ।
ದುಷ್ಟಾಗ್ರಹಮಿಮಂ ಸುಭ್ರು ಪರಿತ್ಯಜ್ಯ ಸುತಂ ಪ್ರತಿ ॥ ೩೪ ॥

ಕಿಂ ಫಲಂ ಭವಿತಾ ತುಭ್ಯಂ ಹತ್ವಾ ಧರ್ಮಾಂಗದಂ ಸುತಂ ।
ಭೋಜಯಿತ್ವಾ ದಿನೇ ವಿಷ್ಣೋಃ ಕೋ ಲಾಭೋ ಭವಿತಾ ವದ ॥ ೩೫ ॥

ದಾಸೋಽಸ್ಮಿ ತವ ಭೃತ್ಯೋಽಸ್ಮಿ ವಶಗೋಽಸ್ಮಿ ವರಾನನೇ ।
ಅನ್ಯಂ ಯಾಚಸ್ವ ಸುಭಗೇ ವರಂ ತ್ವಾಂ ಶರಣಂ ಗತಃ ॥ ೩೬ ॥

ರಕ್ತಾಶೋಕಸಮಾನಾಭ್ಯಾಂ ತವ ಚಾರ್ವಂಗಿ ಸರ್ವಶಃ ।
ಅನ್ಯತ್ಪ್ರಯೋಜನಂ ಕಿಂಚಿತ್ಕರ್ತಾಸ್ಮಿ ವಶಗಸ್ತವ ॥ ೩೭ ॥

ಪ್ರಸಾದಂ ಕುರು ಮೇ ದೇವಿ ಪುತ್ರಭಿಕ್ಷಾಂ ಪ್ರಯಚ್ಛ ಮೇ ।
ದುರ್ಲಭೋ ಗುಣವಾನ್ ಪುತ್ರೋ ದುರ್ಲಭೋ ಹರಿವಾಸರಃ ॥ ೩೮ ॥

---

೩೪. ನಿನ್ನ ಅಪ್ಪಣೆಯ ಪ್ರಕಾರ ಬೇರಾವುದಾದರೂ ಕ್ರೂರಕೃತ್ಯವನ್ನು ಮಾಡೇನು! ಸುಭ್ರೂ! ಮಗನವಿಷಯದಲ್ಲಿ ಕೆಟ್ಟ ಹಠವನ್ನು ಬಿಡು.

೩೫. ಧರ್ಮಾಂಗದಕುಮಾರನನ್ನು ಕೊಲ್ಲುವುದರಿಂದ ನಿನಗೇನು ಫಲ? ಹರಿದಿನದಲ್ಲಿ ಊಟಮಾಡಿಸುವುದರಿಂದ ನಿನಗೆ ಲಾಭವಾದರೂ ಏನು? ಹೇಳು.

೩೬. ವರಾನನೆ! ನಿನಗೆ ನಾನು ದಾಸನು, ಭೃತ್ಯನು, ಹೆಚ್ಚೇನು ನಿನ್ನ ಅಧೀನನೂ ಆಗಿರುವೆನು. ನಿನಗೆ ಶರಣಾಗತನಾಗಿ ಕೇಳಿಕೊಳ್ಳುವೆನು. ಬೇರೆ ವರವನ್ನು ಬೇಡು.

೩೭. ಸುಂದರಾಂಗೀ! ಸರ್ವವಿಧದಿಂದಲೂ ನಿನಗೆ ಅಧೀನನಾಗಿರುವೆನು. ಬೇರಾವಕಾರ್ಯವನ್ನಾದರೂ ನಿನಗಾಗಿ ಮಾಡಲು ಸಿದ್ಧನಾಗಿರುವೆನು.

೩೮. ದೇವಿಯೇ! ನನ್ನಲ್ಲಿ ಅನುಗ್ರಹ ಮಾಡು! ಪುತ್ರಭಿಕ್ಷೆಯನ್ನು ಕೊಡು! ಗುಣವಂತನಾದ ಪುತ್ರನು ದುರ್ಲಭನು. ಹರಿವಾಸರವೂ ದುರ್ಲಭವು.

ದುರ್ಲಭಂ ಜಾಹ್ನವೀತೋಯಂ ದುರ್ಲಭಾ ಜನನೀ ಕ್ಷಿತೌ ।
ದುರ್ಲಭಂ ಹಿ ಕುಲೇ ಜನ್ಮ ದುರ್ಲಭಾ ವಂಶಜಾ ಪ್ರಿಯಾ ॥ ೩೯ ॥

ದುರ್ಲಭಂ ಕಾಂಚನಂ ದಾನಂ ದುರ್ಲಭಂ ಹರಿಪೂಜನಂ ।
ದುರ್ಲಭಾ ವೈಷ್ಣವೀ ದೀಕ್ಷಾ ದುರ್ಲಭಃ ಸ್ಮೃತಿಸಂಗ್ರಹಃ ॥ ೪೦ ॥

ದುರ್ಲಭಃ ಸೌಕರೇ ವಾಸೋ ದುರ್ಲಭಂ ಹರಿಚಿಂತನಂ ।
ದುರ್ಲಭೋ ಜಾಗರೋ ವಿಷ್ಣೋರ್ದುರ್ಲಭಾ ಹ್ಯಾತ್ಮಸತ್ಕ್ರಿಯಾ ॥೪೧॥

ದುರ್ಲಭಾ ಪುತ್ರಸಂಪ್ರಾಪ್ತಿರ್ದುರ್ಲಭಂ ಪೌಷ್ಕರಂ ಜಲಂ ।
ದುರ್ಲಭಃ ಶಿಷ್ಟಸಂಸರ್ಗೋ ದುರ್ಲಭಾ ಭಕ್ತಿರುಚ್ಯತೇ ॥ ೪೨ ॥

ದುರ್ಲಭಂ ಕಪಿಲಾದಾನಂ ದುರ್ಲಭಂ ನೀಲಮೋಕ್ಷಣಂ ।
ಕೃತಂ ಶ್ರಾದ್ಧಂ ತ್ರಯೋದಶ್ಯಾಂ ದುರ್ಲಭಂ ವರವರ್ಣಿನಿ ॥ ೪೩ ॥

---

೩೯. ಭೂಮಂಡಲದಲ್ಲಿ ಗಂಗೋದಕವು ದುರ್ಲಭ. ತಾಯಿಯು ದುರ್ಲಭಳು. ಸದ್ವಂಶದಲ್ಲಿ ಜನ್ಮವು ದುರ್ಲಭವು. ಕುಲೀನಳಾದ ಹೆಂಡತಿಯು ಲಭಿಸುವುದು ಕಷ್ಟ !

೪೦ ಸುವರ್ಣದಾನವು ದುರ್ಲಭವು. ಹರಿಪೂಜೆಯು ದುರ್ಲಭವು. ವೈಷ್ಣವದೀಕ್ಷೆಯು ದುರ್ಲಭವು ಸ್ಮೃತಿಸಂಗ್ರಹವು ದುರ್ಲಭವು.

೪೧. ಸೌಕರದಲ್ಲಿ ವಾಸವು ದುರ್ಲಭವು. ಹರಿಧ್ಯಾನವು ದುರ್ಲಭ. ವಿಷ್ಣುಜಾಗರಣೆಯು ದುರ್ಲಭ. ಆತ್ಮಸತ್ಕಾರವೂ ದುರ್ಲಭ.

೪೨. ಪುತ್ರನನ್ನು ಪಡೆಯುವುದು ದುರ್ಲಭವು. ಪುಷ್ಕರೋದಕವು ದುರ್ಲಭವು. ಶಿಷ್ಟರಾದ ಸಜ್ಜನರ ಸಂಗವು ದುರ್ಲಭ. ಭಕ್ತಿಯು ದುರ್ಲಭವೆಂದು ಉಕ್ತವಾಗಿದೆ.

೪೩. ಕಪಿಲ ಗೋದಾನವು ದುರ್ಲಭವು. ಚಿತ್ರಗುಪ್ತನಿಂದ ಬಿಡಿಸಿಕ್ಕೊಳ್ಳುವುದು ಕಷ್ಟಸಾಧ್ಯ. ತ್ರಯೋದಶಿಯಲ್ಲಿ ಶ್ರಾದ್ಧವು ಲಭಿಸುವುದೂ ದುರ್ಲಭ.

ದುರ್ಲಭಾ ವಸುಧಾ ಚೀರ್ಣಂ ವ್ರತಂ ಪಾತಕನಾಶನಂ |
ಧೇನುಸ್ತಿಲಮಯೀ ಸುಭ್ರು ದುರ್ಲಭಾ ವಿಪ್ರಗಾಮಿನೀ || ೪೪ ||

ಧಾತ್ರೀಸ್ನಾನಂ ವರಾರೋಹೇ ದುರ್ಲಭೋ ಹರಿವಾಸರಃ |
ದುರ್ಲಭಂ ಪರ್ವಕಾಲೇ ತು ಸ್ನಾನಂ ಶೀತಲವಾರಿಣಾ || ೪೫ ||

ಮಾಘಮಾಸೇ ವಿಶೇಷೇಣ ಪ್ರತ್ಯೂಷಸಮಯೇ ಶುಭೇ |
ಯಥಾಶಾಸ್ತ್ರೋದಿತಂ ಕರ್ಮ ತದ್ದೇವಿ ಭುವಿ ದುರ್ಲಭಂ || ೪೬ ||

ದುರ್ಲಭಂ ಕುಶಲಂ ಪಥ್ಯಂ ದುರ್ಲಭಂ ಚೌಷಧಂ ತಥಾ |
ವ್ಯಾಧೇರ್ವಿಘಾತಕರಣಂ ದುರ್ಲಭಂ ಶಾಸ್ತ್ರಮಾರ್ಗತಃ || ೪೭ ||

ದುರ್ಲಭಂ ಸ್ಮರಣಂ ವಿಷ್ಣೋರ್ಮರಣೇ ವರವರ್ಣಿನಿ |
ಏವಂ ವಚೋ ವರಾರೋಹೇ ಕುರು ಮೇ ಧರ್ಮರಕ್ಷಕಂ || ೪೮ ||

---

೪೪. ಭೂಮಿಯಲ್ಲಿ ಜನ್ಮ ದೊರೆಯುವುದು ಕಷ್ಟ. ಪಾಪನಾಶಕ ವ್ರತಾಚರಣೆಯು ದುರ್ಲಭ. ಸುಭ್ರೂ! ತಿಲಮಯಗೋವು ಬ್ರಾಹ್ಮಣನಿಗೆ ಸೇರುವುದು ಕಷ್ಟ.

೪೫. ವರಾರೋಹೇ! ಆಮಲಕಸ್ನಾನವು ಲಭಿಸುವುದು ಕಷ್ಟ. ಹರಿವಾಸರವು ದುರ್ಲಭವು. ಪರ್ವಕಾಲದಲ್ಲಿ ತಣ್ಣೀರಿನಿಂದ ಸ್ನಾನಮಾಡುವುದು ದುರ್ಲಭವು.

೪೬. ಅದರಲ್ಲಿಯೂ ಮಾಘಮಾಸದಲ್ಲಿ ಶುಭಕರವಾದ ಅರುಣೋದಯಕಾಲದಲ್ಲಿ ಸ್ನಾನಮಾಡುವುದಂತೂ ಇನ್ನೂ ದುರ್ಲಭ. ದೇವೀ! ಶಾಸ್ತ್ರವಿಹಿತರೀತಿಯಿಂದ ಕರ್ಮ ಮಾಡುವುದು ಭೂಲೋಕದಲ್ಲಿ ಕಷ್ಟಸಾಧ್ಯವು.

೪೭. ಆರೋಗ್ಯಕರವಾದ ಪಥ್ಯವು ದುರ್ಲಭ. ಅಂತೆಯೇ ಶಾಸ್ತ್ರೋಕ್ತಮಾರ್ಗದಿಂದ ರೋಗವನ್ನು ವಾಸಿಮಾಡುವ ಔಷಧವು ದುರ್ಲಭವು.

೪೮. ಉತ್ತಮಚರಿತಳೇ! ಮರಣಕಾಲದಲ್ಲಿ ವಿಷ್ಣುಸ್ಮರಣೆ ಬರುವುದು ದುರ್ಲಭವು. ಆದುದರಿಂದ ನನ್ನ ಧರ್ಮವನ್ನು ರಕ್ಷಿಸಿಕೊಳ್ಳುವಂತಹ ಮಾತನಾಡು.

ಕಿಂ ವರ್ಧೈರ್ಮಮ ಚಾರ್ವಂಗಿ ಪ್ರಸಾದಂ ಕರ್ತುಮರ್ಹಸಿ ।
ಸೇವಿತಾ ವಿಷಯಾಃ ಸಮ್ಯಕ್ಕೃತಂ ರಾಜ್ಯಮಕಂಟಕಂ ॥ ೪೯ ॥

ಮಯಾ ಮೂರ್ಧ್ನಿ ಪದಂ ದತ್ತಂ ದೇವಗೋವಿಪ್ರಲಕ್ಷಣಂ ।
ಅದೃಷ್ಟವಿಷಯಂ ಪುತ್ರಂ ನಾಹಂ ಹಿಂಸ್ಯೇ ಕದಾಚನ ॥ ೫೦ ॥

ಸ್ವಹಸ್ತೇನೇಹ ಚಾರ್ವಂಗಿ ಕಿಂನು ಪಾಪಮತಃ ಪರಂ ।

ಮೋಹಿನ್ಯುವಾಚ

ಧರ್ಮಾಂಗದೋ ನಮೇ ಶತ್ರುರ್ನಾಹಂ ಹನ್ಮಿ ಸುತಂ ತವ ॥ ೫೧ ॥

ಪೂರ್ವಮೇವ ಮಯಾ ಪ್ರೋಕ್ತಂ ಭುಂಕ್ಷ್ವ ತ್ವಂ ಹರಿವಾಸರೇ ।
ವಸುಧಾಂ ಸ್ವೇಚ್ಛಯಾ ರಾಜಂಸ್ತ್ವಂ ಶಾಧಿ ಬಹುವತ್ಸರಂ ॥ ೫೨ ॥

---

೪೯. ಸುಂದರಾಂಗೀ! ನನ್ನನ್ನು ಹಿಂಸಿಸುವುದರಿಂದೇನುಫಲ? ಅನುಗ್ರಹಮಾಡು! ನಾನು ಚೆನ್ನಾಗಿ ವಿಷಯಗಳನ್ನನುಭವಿಸಿದೆನು. ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿದೆನು.

೫೦. ದೇವತೆ, ಗೋವು ಮತ್ತು ಬ್ರಾಹ್ಮಣರಿಗೆ ತಲೆಯಮೇಲೆ ಎಂದರೆ ಉಚ್ಚಸ್ಥಾನವನ್ನು ಕೊಟ್ಟೆನು. ವಿಷಯಸಂಗವನ್ನೇ ಕಾಣದ ಕುಮಾರನನ್ನು ನಾನು ಎಂದಿಗೂ ಹಿಂಸಿಸಲಾರೆನು.

೫೧. ಸುಂದರಾಂಗೀ! ನನ್ನ ಕೈಯಿಂದಲೇ ಮಗನನ್ನು ವಧಿಸುವುದಕ್ಕಿಂತ ಬೇರೆ ಪಾಪವಾವುದು?

ಮೋಹಿನಿಯು ಹೇಳಿದಳು :— ರಾಜನೇ! ಧರ್ಮಾಂಗದನು ನನಗೆ ವೈರಿಯಲ್ಲ. ನಿನ್ನ ಮಗನನ್ನು ನಾನು ಕೊಲ್ಲಿಸಬೇಕೆಂದೂ ಇಲ್ಲ.

೫೨. ನೀನು ಹರಿವಾಸರದಲ್ಲಿ ಭೋಜನಮಾಡೆಂದು ಮೊದಲೇ ನಾನು ಹೇಳಿರುವೆನು. ನಿನ್ನ ಇಷ್ಟಾನುಸಾರವಾಗಿ ಬಹುವರ್ಷಗಳು ಭೂಮಿಯನ್ನಾಳು.

ನಾಹಂ ವ್ಯಾಪಾದಯೇ ಪುತ್ರಮರ್ಥಸಿದ್ಧಿಸ್ತು ಭೋಜನೇ ।
ಮಮ ಭೂಮಿಪತೇ ಕಾರ್ಯಂ ನ ಪುತ್ರನಿಧನೇ ತವ ॥ ೫೩ ॥

ಯದಿ ಪುತ್ರಃ ಪ್ರಿಯೋ ರಾಜನ್ ಭುಜ್ಯತಾಂ ಹರಿವಾಸರೇ ।
ಕಿಂ ವಿಲಾಪೈರ್ಮಹೀಪಾಲ ಏತೈರ್ಧರ್ಮಬಹಿಷ್ಕೃತೈಃ ॥ ೫೪ ॥

ಸತ್ಯಂ ಸಂರಕ್ಷ ಯತ್ನೇನ ಕುರುಷ್ವ ವಚನಂ ಮಮ ।
ಏವಂ ಬ್ರುವಾಣಾಂ ತಾಂ ರಾಜನ್ಮೋಹಿನೀಂ ತನುಮಧ್ಯಮಾಂ ॥ ೫೫ ॥

ಧರ್ಮಾಂಗದಃ ಪ್ರತ್ಯುವಾಚ ದೃಷ್ಟ್ವಾ ನತ್ವಾಗ್ರತಃ ಸ್ಥಿತಃ ।
ಏತದೇವ ಗೃಹಾಣ ತ್ವಂ ಮಾ ಶಂಕಾಂ ಕುರು ಭಾಮಿನಿ ॥ ೫೬ ॥

ಗೃಹೀತ್ವಾ ನಿರ್ಮಲಂ ಖಡ್ಗಂ ವಿನ್ಯಸ್ಯ ನೃಪತೇಃ ಪುರಃ ।
ಆತ್ಮಾನಂ ಚ ಪ್ರತ್ಯುವಾಚ ಸತ್ಯಧರ್ಮವ್ಯವಸ್ಥಿತಃ ॥ ೫೭ ॥

---

೫೩. ನಾನು ಮಗನನ್ನು ಕೊಲ್ಲಿಸುವುದಿಲ್ಲ. ಭೂಪಾಲನೇ! ನೀನು ಭೋಜನಮಾಡುವುದರಿಂದ ನನ್ನ ಕಾರ್ಯಸಿದ್ಧಿಯಾಗುವುದೇ ವಿನಹ ನಿನ್ನ ಮಗನನ್ನು ಕೊಲ್ಲುವುದರಿಂದಾಗುವುದಿಲ್ಲ.

೫೪. ರಾಜನೇ! ನಿನಗೆ ಕುಮಾರನು ಪ್ರಿಯನಾಗಿದ್ದರೆ ಹರಿದಿನದಲ್ಲಿ ಊಟಮಾಡು. ದೊರೆಯೇ! ಧರ್ಮಬಾಹ್ಯವಾದ ಈ ಮಾತುಗಳಿಂದೇನು ಫಲ?

೫೫-೫೬. ಪ್ರಯತ್ನಪೂರ್ವಕವಾಗಿ ಸತ್ಯವನ್ನು ಪಾಲಿಸು! ನನ್ನಮಾತನ್ನು ನಡೆಯಿಸಿಕೊಡು.

ಹೀಗೆ ಹೇಳುತ್ತಿರುವ ಕೃಶವಾದ ಮಧ್ಯಪ್ರದೇಶವುಳ್ಳ ಆ ಮೋಹಿನಿಯನ್ನು ನೋಡಿ ಧರ್ಮಾಂಗದನು ಮುಂದೆ ಬಂದು ನಮಸ್ಕಾರಮಾಡಿ ಪ್ರತ್ಯುತ್ತರವನ್ನು ಹೇಳಿದನು. ಭಾಮಿನೀ! ನೀನು ಇದನ್ನೇ ತೆಗೆದುಕೋ! ಸಂದೇಹಪಡಬೇಡ.

೫೭-೫೮. ದೊರೆಯೇ! ಪರಿಶುದ್ಧವಾದ ಈ ಕತ್ತಿಯನ್ನು ತೆಗೆದುಕೊಂಡು ನನ್ನಮೇಲಿಟ್ಟು ಸತ್ಯಧರ್ಮವನ್ನು ನಡೆಯಿಸಿಕೊಳ್ಳುವವನಾಗು!

ನ ವಿಲಂಬಃ ಪಿತಃ ಕಾರ್ಯಸ್ತ್ವಯಾ ಮಮ ನಿಪಾತನೇ ।
ಮನ್ಮಾತುರ್ವಚನಂ ಸತ್ಯಂ ಕುರು ಭೂಪ ಪ್ರತಿಶ್ರುತಂ ॥ ೫೮ ॥

ಆತ್ಮಾ ರಕ್ಷ್ಯೋ ಧನೈರ್ದಾರೈರಥವಾಪಿ ನಿಜಾತ್ಮಜೈಃ ।
ಅಪತ್ಯಂ ಧರ್ಮಕಾಮಾರ್ಥಂ ಶ್ರೇಯಸ್ಕಾಮಸ್ಯ ಭೂಪತೇಃ ॥ ೫೯ ॥

ತ್ವದರ್ಥೇ ಮರಣಂ ಮಹ್ಯಮಕ್ಷಯ್ಯಗತಿದಾಯಕಂ ।
ತವಾಪಿ ನಿರ್ಮಲಾ ಲೋಕಾಃ ಸ್ವವಾಕ್ಯಪರಿಪಾಲನಾತ್ ॥ ೬೦ ॥

ಪರಿತ್ಯಜ್ಯ ಪರಂ ದುಃಖಂ ಪುತ್ರವ್ಯಾಪಾದನೋದ್ಭವಂ ।
ದೇಹತ್ಯಾಗೇ ಮಮಾರಂಭೋ ನರದೇಹೇ ಭವಿಷ್ಯತಿ ॥ ೬೧ ॥

ಸರ್ವಾಮಯವಿನಿರ್ಮುಕ್ತೇ ಶತಕ್ರತುಸಮೇ ವಿಭೋ ।
ಪಿತುರರ್ಥೇ ಹತಾ ಯೇ ತು ಮಾತುರರ್ಥೇ ಹತಾ ತಥಾ ॥ ೬೨ ॥

---

ತಂದೆಯೇ! ನನ್ನನ್ನು ಕೊಲ್ಲುವುದಕ್ಕೆ ನೀನು ಸಾವಕಾಶಮಾಡಬೇಡ! ನೀನು ಪ್ರತಿಜ್ಞೆಮಾಡಿರುವ ಪ್ರಕಾರ ನನ್ನ ತಾಯಿಯಮಾತನ್ನು ನಡೆಯಿಸಿ ಸತ್ಯಸಂಧನಾಗು.

೫೯. ಶ್ರೇಯಸ್ಸನ್ನು ಬಯಸುವ ರಾಜನು ಧನ, ಪತ್ನೀ ಅಥವಾ ಪುತ್ರರನ್ನು ಬಲಿಕೊಟ್ಟಾದರೂ ತನ್ನನ್ನು ರಕ್ಷಿಸಿಕೊಳ್ಳಬೇಕು. ಧರ್ಮಕಾಮಗಳಿಗಾಗಿ ಮಗನನ್ನು ರಕ್ಷಿಸಬೇಕು.

೬೦. ನಿನಗೋಸ್ಕರವಾಗಿ ನಾನು ಸತ್ತರೆ ನನಗೆ ಶಾಶ್ವತವಾದ ಸದ್ಗತಿಯು ಎಂದರೆ ಮೋಕ್ಷವು ಲಭಿಸುವುದು. ನಿನಗೂ ಸಹ ನಿನ್ನಮಾತನ್ನು ಪಾಲಿಸಿದ್ದರಿಂದ ಪರಿಶುದ್ಧಲೋಕಗಳು ಲಭಿಸುತ್ತವೆ.

೬೧-೬೪. ಮಗನನ್ನು ಕೊಲ್ಲುವುದರಿಂದಾಗುವ ದುಃಖವನ್ನು ಬಿಟ್ಟುಬಿಡು. ನಾನು ಈ ದೇಹವನ್ನು ಬಿಟ್ಟರೆ ಇಂದ್ರನಿಗೆ ಸಮಾನವಾದ, ರೋಗಗಳಿಲ್ಲದ ಇನ್ನೊಂದು ನರದೇಹವು ನನಗೆ ಬರವುದು.

**ಗುರ್ವರ್ಥೇ ಬ್ರಾಹ್ಮಣಾರ್ಥೇ ವಾ ಪ್ರಮದಾರ್ಥೇ ಮಹೀಪತೇ ।**
**ಭೂಮ್ಯರ್ಥೇ ಪಾರ್ಥಿವಾರ್ಥೇ ವಾ ದೇವತಾರ್ಥೇ ತಥೈವ ಚ ॥ ೬೩ ॥**

**ಬಾಲಾರ್ಥೇ ವಿಕಲಾರ್ಥೇ ಚ ಯಾಂತಿ ಲೋಕಾನ್ ಸುಭಾಸ್ವರಾನ್ ।**
**ತದಲಂ ಪರಿತಾಪೇನ ಜಹಿ ಮಾಂ ತ್ವಂ ವರಾಸಿನಾ ॥ ೬೪ ॥**

**ಸತ್ಯಂ ಪಾಲಯ ರಾಜೇಂದ್ರ ಮಾ ಭುಂಕ್ಷ್ವ ಹರಿವಾಸರೇ ।**
**ಧರ್ಮಾರ್ಥೇ ತನಯಂ ಹನ್ಯಾದ್ಭಾರ್ಯಾಂ ವಾಪಿ ಮಹೀಪತೇ ॥ ೬೫ ॥**

**ಶ್ರೂಯತೇ ವೇದವಾಕ್ಯೇಷು ಪುತ್ರಂ ಹನ್ಯಾನ್ಮಖಸ್ಥಿತಃ ।**
**ಅಶ್ವಮೇಧೇ ಮಖವರೇ ನ ದೋಷೋ ಜಾಯತೇ ನೃಪ ॥ ೬೬ ॥**

**ಯದ್ಬ್ರವೀತಿ ಮಹೀಪಾಲ ಮೋಹಿನೀ ಜನನೀ ಮಮ ।**
**ತತ್ತ್ವಯಾ ಹ್ಯವಿಚಾರೇಣ ಕರ್ತವ್ಯಂ ವಚನಂ ಧ್ರುವಂ ॥ ೬೭ ॥**

---

ತಂದೆ, ತಾಯಿ, ಗುರು, ಬ್ರಾಹ್ಮಣ, ಸ್ತ್ರೀ, ಭೂಮಿ, ರಾಜ, ದೇವತೆ, ಬಾಲ ಮತ್ತು ಅಂಗಹೀನ ಇವರುಗಳಿಗಾಗಿ ಹತರಾದವರು ಅತ್ಯಂತ ಪ್ರಕಾಶಮಾನವಾದ ಉತ್ತಮಲೋಕಗಳನ್ನು ಹೊಂದುವರು. ಭೂಪತಿಯೇ! ಸಾಕು! ಇನ್ನು ದುಃಖವನ್ನು ಬಿಡು! ಉತ್ತಮಕತ್ತಿಯನ್ನು ತೆಗೆದುಕೊಂಡು ನನ್ನನ್ನು ನೀನು ಸಂಹರಿಸು!

೬೫. ರಾಜೇಂದ್ರನೇ! ಸತ್ಯವನ್ನು ಪಾಲಿಸು. ಏಕಾದಶಿಯದಿನದಲ್ಲಿ ಊಟಮಾಡಬೇಡ. ಮಹೀಪಾಲನೇ! ಧರ್ಮಕ್ಕಾಗಿ ಹೆಂಡತಿ ಅಥವಾ ಮಗನನ್ನಾದರೂ ಸಂಹಾರ ಮಾಡಬಹುದು.

೬೬. ಉತ್ತಮಯಜ್ಞವಾದ ಅಶ್ವಮೇಧದಲ್ಲಿ ದೀಕ್ಷಿತನಾದವನು ಮಗನನ್ನು ಕೊಲ್ಲಬಹುದೆಂದು ಪುರಾಣಗಳಲ್ಲಿ ಹೇಳಿದೆಯಾದಕಾರಣ ನಿನಗೆ ದೋಷ ಬರುವುದಿಲ್ಲ.

೬೭. ಭೂಪಾಲನೇ! ನನ್ನ ತಾಯಿಯಾದ ಮೋಹಿನಿಯು ಹೇಳುವುದನ್ನು ವಿಚಾರಮಾಡದೇ ಖಂಡಿತವಾಗಿ ನೀನು ನಡೆಯಿಸಬೇಕು.

ಪ್ರಸೀದ ರಾಜೇಂದ್ರ ಕುರುಷ್ವ ವಾಕ್ಯಂ
ಮಯೇರಿತಂ ಚಾತ್ಮವಧಾಯ ಸತ್ಯಂ ।
ವಿಮೋಹಯೇಥಾ ನೃಪತೇ ನ ಘೋರಾ
ದ್ವ್ಯಾಕ್ಯಾನೃತಾನ್ಮೋಹಿನಿಹಸ್ತಯೋಗಾತ್ ॥ ೬೮

ವಧೇನ ತೇ ಭೂಮಿಪತೇ ಸುತಸ್ಯ
ಯಶಃ ಪ್ರಕಾಶಂ ಗಮಯಿಷ್ಯತೇ ಚ ।
ಯಶಃ ಪ್ರಕಾಶಾದ್ಭವಿತಾ ಹಿ ಕೀರ್ತಿಃ
ತಥಾಕ್ಷಯಾ ತಾತ ನ ಸಂಶಯೋತ್ರ ॥ ೬೯ ॥

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಧರ್ಮಾಂಗದೋಕ್ತಿರ್ನಾಮ
ತ್ರಯಸ್ತ್ರಿಂಶೋಽಧ್ಯಾಯಃ

---

೬೮. ರಾಜೇಂದ್ರನೇ! ಪ್ರಸನ್ನನಾಗು! ನಾನು ಹೇಳಿದ ಪ್ರಕಾರ ನನ್ನನ್ನು ಸಂಹರಿಸುವ ಮಾತನ್ನು ಸತ್ಯಮಾಡು! ದೊರೆಯೇ! ಮೋಹಪಡ ಬೇಡ! ಮೋಹಿನಿಯ ಹಸ್ತಸಂಪರ್ಕದಿಂದ ಘೋರವಾದ ಅನೃತವಚನದಿಂದ ಪಾರಾಗು.

೬೯. ಭೂಪಾಲನೇ! ಮಗನನ್ನು ಸಂಹರಿಸುವುದರಿಂದ ನಿನ್ನ ಯಶಸು ಪ್ರಕಾಶಕ್ಕೆ ಬರುವುದು. ತಾತ! ಯಶಸ್ಸಿನ ಪ್ರಕಾಶದಿಂದ ಶಾಶ್ವತವಾದ ಕೀರ್ತಿಯು ಬರುವುದು. ಈ ವಿಷಯದಲ್ಲಿ ಸಂದೇಹವಿಲ್ಲ.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಧರ್ಮಾಂಗದನಮಾತೆಂಬ ಮೂವತ್ತುಮೂರನೆಯ
ಅಧ್ಯಾಯವು ಮುಗಿದುದು

## ವಿಷಯಸಂಗ್ರಹ

ಸಂಧ್ಯಾವಳಿಯು ಗಂಡನ ಪಾದಕ್ಕೆರಗಿ ಮೋಹಿನಿಗೆ ಬಹುವಿಧವಾಗಿ ಹೇಳಿದರೂ ಆವಳು ಬೇರೆ ವರವನ್ನು ಕೇಳಲು ಒಪ್ಪಲಿಲ್ಲ. ಏಕಾದಶಿಯ ಭೋಜನ ಅಥವಾ ಧರ್ಮಾಂಗದನ ಸಂಹಾರ ಇವನ್ನೇ ನಿರ್ಬಂಧಿಸುತ್ತಿರುವಳು. ಏಕಾದಶೀ ಭೋಜನಮಾಡುವುದು ಧರ್ಮವಲ್ಲವಾದಕಾರಣ ಧರ್ಮಾಂಗದನನ್ನು ಸಂಹರಿಸಿ ಸತ್ಯವನ್ನು ಕಾಪಾಡಿಕೊಳ್ಳುವುದೇ ಲೇಸು ! ತಂದೆಗಿಂತಲೂ ತಾಯಿಗೆ ಮಗನಲ್ಲಿ ಹೆಚ್ಚು ಅಭಿಮಾನವಿರುವುದು ಮುಂತಾಗಿ ರಾಜನಿಗೆ ಹೇಳಿದಳು. ಅದನ್ನು ಕೇಳಿ ರಾಜನು ನಾನಾವಿಧವಾಗಿ ಮೋಹಿನಿಗೆ ಧರ್ಮಬೋಧೆ ಮಾಡಿ ಬೇರೆ ವರವನ್ನು ಕೇಳಬೇಕೆಂದು ಬೇಡಿಕೊಂಡರೂ ಅವಳು ಸಮ್ಮತಿಸದಿರಲು ಧರ್ಮಾಂಗದನು ಇದಿರಿಗೆ ಬಂದು ತನ್ನನ್ನು ಸಂಹರಿಸಿ ಸತ್ಯವಚನನಾಗಿ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಪಡೆಯಬೇಕೆಂದು ತಂದೆಯನ್ನು ಪ್ರಾರ್ಥಿಸಿದನು.

## ಚತುಂಸ್ತ್ರಿಶೋಽಧ್ಯಾಯಃ

ವಸಿಷ್ಠ ಉವಾಚ

ತತ್ಪುತ್ರವಚನಂ ಶ್ರುತ್ವಾ ರಾಜಾ ರುಕ್ಮಾಂಗದಸ್ತದಾ ।
ಸಂಧ್ಯಾವಲೀಮುಖಂ ಪ್ರೇಕ್ಷ್ಯ ಪ್ರಹೃಷ್ಟಂ ಕಮಲೋಪಮಂ ॥ ೧ ॥

ಮೋಹಿನೀವಚನಂ ಶೃಣ್ವನ್ ಭುಂಕ್ಷ್ವ ಮಾ ಹನ ದೇಹಜಂ ।
ಮಾ ಭುಂಕ್ಷ್ವ ತನಯಂ ಹಿಂಸ ಚೇತ್ಯಾಗ್ರಹಸಮನ್ವಿತಂ ॥ ೨ ॥

ಏತಸ್ಮಿನ್ನೇವ ಕಾಲೇ ತು ಭಗವಾನ್ ಕಮಲೇಕ್ಷಣಃ ।
ಅಂತರ್ಧಾನಗತಸ್ತಸ್ಥೌ ವ್ಯೋಮ್ನಿ ಧೈರ್ಯಾವಲೋಕಕಃ ॥ ೩ ॥

ತ್ರಯಾಣಾಂ ನೃಪಶಾರ್ದೂಲ ಮೇಘಶ್ಯಾಮೋ ನಿರಂಜನಃ ।
ಧರ್ಮಾಂಗದಸ್ಯ ವೀರಸ್ಯ ತಸ್ಯ ರುಕ್ಮಾಂಗದಸ್ಯ ತು ॥ ೪ ॥

---

## ಮೂವತ್ತುನಾಲ್ಕನೆಯ ಅಧ್ಯಾಯವು

೧-೨. ವಸಿಷ್ಠನು ಹೇಳಿದನು :—ಮಗನ ಆ ಮಾತನ್ನು ಕೇಳಿ ಆಗ ರುಕ್ಮಾಂಗದರಾಜನು ಕಮಲದಂತಿರುವ ಸಂತೋಷಯುಕ್ತವಾದ ಸಂಧ್ಯಾವಳಿಯ ಮುಖವನ್ನು ನೋಡಿ "ಏಕಾದಶಿಯದಿನ ಊಟಮಾಡು! ಮಗನನ್ನು ಕೊಲ್ಲ ಬೇಡ! ಇಲ್ಲವೇ ಏಕಾದಶೀಭೋಜನಮಾಡಬೇಡ! ಪುತ್ರನನ್ನು ಸಂಹರಿಸು" ಎಂಬ ಮೋಹಿನಿಯ ಆಗ್ರಹಯುಕ್ತವಾದ ಮಾತನ್ನು ಕೇಳುತ್ತಿದ್ದನು.

೩-೭. ಇದೇಸಮಯದಲ್ಲಿ ಕಮಲನಯನನು, ಮೇಘಶ್ಯಾಮನು' ನಿರ್ದೋಷನೂ ಆದ ಭಗವಂತನು ಯಾರಿಗೂ ಗೋಚರವಾಗದಂತೆ ಅಂತರಿಕ್ಷ ದಲ್ಲಿ ನಿಂತು ಪರಾಕ್ರಮಿಯಾದ ಧರ್ಮಾಂಗದಸಂಧ್ಯಾವಳೀಸಹಿತನಾದ

ಸಂಧ್ಯಾವಲ್ಯಾ ಸಮೇತಸ್ಯ ವೀಕ್ಷ್ಯ ಸಂಸ್ಥೋ ಜನಾರ್ದನಃ ।
ವಚನೇ ಭುಂಕ್ಷ್ವ ಭುಂಕ್ಷ್ವೇತಿ ಮೋಹಿನ್ಯಾ ವ್ಯಾಹೃತೇ ತದಾ ॥ ೫ ॥

ಜಗ್ರಾಹ ವಿಮಲಂ ಖಡ್ಗಂ ಹಂತುಂ ಧರ್ಮಾಂಗದಂ ಸುತಂ ।
ಸುಪ್ರಹರ್ಷೇಣ ಮನಸಾ ಪ್ರಣಮ್ಯ ಗರುಡಧ್ವಜಂ ॥ ೬ ॥

ತಂ ದೃಷ್ಟ್ವಾ ಖಡ್ಗಹಸ್ತಂ ತು ಪಿತರಂ ಧರ್ಮಭೂಷಣಃ ।
ಪ್ರಣಮ್ಯ ಮಾತಾಪಿತರೌ ದೇವಂ ಚಕ್ರಧರಂ ತಥಾ ।
ವದನಂ ಪ್ರೇಕ್ಷ್ಯ ಚಾದೀನಂ ಜನನ್ಯಾ ನೃಪಪುಂಗವಃ ॥ ೭ ॥

ವೃಷಾಂಗದೇನ ತು ತದಾ ಸ್ವಗ್ರೀವೋರ್ವೀತಲೇ ಕೃತಾ ।
ಕಂಬುಗ್ರೀವಾಂ ಸಮಾನಾಂ ತು ಸುವರ್ಣಾಭಾಂ ಸುಕೋಮಲಾಂ ॥ ೮ ॥

ಬಹುರೇಖಾಮಥ ಸ್ಥೂಲಾಂ ಖಡ್ಗಮಾರ್ಗೇ ನ್ಯದರ್ಶಯುತ್ ।
ಪಿತೃಭಕ್ತ್ಯಾ ಯುತೇನೈವ ಮಾತೃಭಕ್ತ್ಯಾಧಿಕೇನ ವೈ ॥ ೯ ॥

---

ರಕ್ಮಾಂಗದ ಈ ಮೂವರ ಧೈರ್ಯವನ್ನು ಪರಿಶೀಲಿಸುತ್ತಿದ್ದನು. ಆಗ ಮೋಹಿನಿಯು ಊಟಮಾಡು ! ಊಟಮಾಡು ! ಎಂಬದಾಗಿ ಹೇಳುತ್ತಿರಲು, ರುಕ್ಮಾಂಗದನು ಸಂತೋಷಚಿತ್ತದಿಂದ ಗರುಡಧ್ವಜನನ್ನು ನಮಸ್ಕರಿಸಿ, ಧರ್ಮಾಂಗದ ಕುಮಾರನನ್ನು ಸಂಹರಿಸಲು ನಿರ್ಮಲವಾದ ಖಡ್ಗವನ್ನು ತೆಗೆದುಕೊಂಡನು. ಆಗ ಧರ್ಮಾಂಗದನು ಖಡ್ಗಪಾಣಿಯಾದ ತಂದೆಯನ್ನು ನೋಡಿ ಮಾತಾಪಿತೃಗಳನ್ನೂ ಚಕ್ರಪಾಣಿಯಾದ ದೇವನನ್ನೂ ನಮಸ್ಕರಿಸಿ ದೈನ್ಯರಹಿತವಾದ, ಜನನಿಯ ಮುಖವನ್ನು ನೋಡಿದನು.

೮-೯. ಆಗ ಮಾತಾಪಿತೃಗಳ ಭಕ್ತನಾದ ಅವನು ತನ್ನ ಕುತ್ತಿಗೆಯನ್ನು ನೆಲಕ್ಕೆ ಬಗ್ಗಿಸಿ ಬಂಗಾರದಂತೆ ಹೊಳೆಯುತ್ತಿರುವ ಅತ್ಯಂತ ಮನೋಹರವಾದ ಬಹುರೇಖೆಗಳುಳ್ಳ ಸ್ಥೂಲವಾದ ಶಂಖದಂತಿರುವ ಕುತ್ತಿಗೆಯನ್ನು ಕತ್ತಿಯು ಬೀಳುವುದಕ್ಕೆ ಸರಿಯಾಗಿ ಒಡ್ಡಿದನು.

ಗ್ರೀವಾಪ್ರಹಾರೇ ತನಯಸ್ಯ ಭೂಪೆ
ಹರ್ಷಾಕುಲೇ ಚಾರುಸುಧಾಂಶುವಕ್ತ್ರೇ ।
ಗೃಹೀತಖಡ್ಗೇ ಜಗದೀಶನಾಥೇ
ಚಚಾಲ ಪೃಥ್ವೀ ಸನಗಾ ಸಮುಗ್ರಾ ॥ ೧೦ ॥

ಸಿಂಧುಃ ಪ್ರವೃದ್ಧಶ್ಚ ಬಭೂವ ಸದ್ಯೋ
ನಿಮಜ್ಜನಾರ್ಥಂ ಭುವನತ್ರಯಸ್ಯ ।
ನಿಪೇತುರುಲ್ಕಾಃ ಶತಶೋ ಧರಾಯಾಂ
ನಿರ್ಘಾತಯುಕ್ತಾಃ ಸತಡಿತ್ಸಮುಧ್ಯಾತ್ ॥ ೧೧ ॥

ವಿವರ್ಣರೂಪಾ ಚ ಬಭೂವ ಮೋಹಿನೀ
ನ ದೇವಕಾರ್ಯಂ ಹಿ ಕೃತಂ ಮಯೇತಿ ।
ನಿರರ್ಥಕಂ ಜನ್ಮ ಮಮಾಧುನಾಭೂತ್
ಕೃತಂ ತು ದೈವೇನ ಜಗದ್ವಿಧಾಯಿನಾ ॥ ೧೨ ॥

---

೧೦. ಮಗನ ಕುತ್ತಿಗೆಯನ್ನು ಕತ್ತರಿಸುವುದಕ್ಕಾಗಿ ಸಂತೋಷಪೂರ್ಣನು, ಮನೋಹರಚಂದ್ರನಂತೆ ಮುಖ ಉಳ್ಳವನೂ ಆದ ರುಕ್ಮಾಂಗದಸಾರ್ವಭೌಮನು ಕತ್ತಿಯನ್ನು ತೆಗೆದುಕೊಳ್ಳಲು ಬೆಟ್ಟಗಳಿಂದ ಸಹಿತವಾಗಿ ಪೃಥುವಿಯೆಲ್ಲಾ ಚಲಿಸಿತು.

೧೧. ಕೂಡಲೇ ಮೂರುಲೋಕಗಳನ್ನೂ ಮುಳುಗಿಸುವುದಕ್ಕಾಗಿ ಸಮುದ್ರವು ಉಕ್ಕಿತು. ಭೂಮಿಯ ಮೇಲೆ ಆಕಾಶಮಧ್ಯದಿಂದ ಸಿಡಿಲು ಮಿಂಚುಗಳಿಂದ ಸಹಿತವಾಗಿ ನೂರಾರು ಉರಿಯುವ ಕೊಳ್ಳಿಗಳು ಬಿದ್ದುವು.

೧೨. ಮೋಹಿನಿಯು ದೇವತೆಗಳು ತನಗೆ ನಿಯಮಿಸಿದ ಕಾರ್ಯವನ್ನು ಮಾಡಲಿಲ್ಲೆಂಬ ಚಿಂತೆಯಿಂದ ಕಳೆಗುಂದಿದಳು. ಜಗದ್ವಿಧಾತನಾದ ಬ್ರಹ್ಮದೇವನಿಂದ ನಿರ್ಮಾಣಮಾಡಲ್ಪಟ್ಟ ಈ ಜನ್ಮವು ನಿಷ್ಫಲವಾಯಿತು.

ವಿಮೋಹನಂ ರೂಪಮಿದಂ ವಿಡಂಬನಂ
ಯದ್ಭೂಮಿಪಾಲೇನ ನ ಭುಕ್ತಮತ್ರ ।
ಹರೇರ್ದಿನೇ ಪಾಪಭಯಾಪಹೇ ತು
ತೃಣೈಃ ಸಮಾಹಂ ಭವಿತಾ ತ್ರಿವಿಷ್ಟಪೇ ॥ ೧೩ ॥

ಸತ್ವಾಧಿಕೋ ಯಾಸ್ಯತಿ ಮೋಕ್ಷಮಾರ್ಗಂ
ಗಂತಾಸ್ಮಿ ಪಾಪಾ ನರಕಂ ಸುದಾರುಣಂ ॥ ೧೪ ॥

ಸಮುದ್ಯತೇ ತದಾ ಖಡ್ಗೇ ನೃಪೇಣ ನೃಪಪುಂಗವ ।
ಮೋಹಿನೀ ಮೋಹಸಂಯುಕ್ತಾ ಪಪಾತ ಧರಣೀತಲೇ ॥ ೧೫ ॥

ರಾಜಾಪಿ ತೇನ ಖಡ್ಗೇನ ಭ್ರಾಜಮಾನಃ ಸಮುದ್ಯತಃ ।
ಗ್ರೀವಾಯಾಶ್ಛೇದನಾರ್ಥಾಯ ವೃಷಾಂಗದಸುತಸ್ಯ ತು ॥ ೧೬ ॥

---

೧೩. ವಿಮೋಹಕವಾದ ಈ ರೂಪವು, ಸಕಲಭಯ ಪರಿಹಾರಕವಾದ ಹರಿದಿನದಲ್ಲಿ ರಾಜನನ್ನು ಭೋಜನಮಾಡಿಸಲಿಲ್ಲವಾಗಿ ಕೇವಲ ವಿಡಂಬನೆಯಾಯಿತು. ದೇವಲೋಕದಲ್ಲಿ ನಾನು ಹುಲ್ಲುಕಡ್ಡಿಗೆ ಸಮಾನಳಾದೆನು.

೧೪. ಸತ್ವಪ್ರಚುರನಾದವನು ಮೋಕ್ಷಮಾರ್ಗಕ್ಕೆ ಹೋಗುವನು. ಪಾಪಿಯಾದ ನಾನು ಅತಿಭಯಂಕರ ನರಕಕ್ಕೆ ಹೋಗುವೆನು, ಎಂದು ಕೊರಗಿದಳು.

೧೫. ದೊರೆಯು ಕತ್ತಿಯನ್ನು ಎತ್ತಲಾಗಿ ಮೋಹಿನಿಯು ಮೂರ್ಛಾಕ್ರಾಂತಳಾಗಿ ನೆಲದಮೇಲೆ ಬಿದ್ದಳು.

೧೬. ರಾಜನೂ ಸಹ ಆ ಖಡ್ಗದಿಂದ ಪ್ರಕಾಶಿಸುವನಾಗಿ ಧರ್ಮಾಂಗದ ಕುಮಾರನ ಕುತ್ತಿಗೆಯನ್ನು ಕತ್ತರಿಸಲು ಉದ್ಯುಕ್ತನಾದನು.

ಸಕುಂಡಲಂ ಚಾರು ಶಶಿಪ್ರಕಾಶಂ
ಭ್ರಾಜಿಷ್ಣು ವಕ್ತ್ರಂ ತನಯಸ್ಯ ಭೂಪಃ ।
ಪ್ರಚಿಚ್ಛಿದೇ ಯಾವದತೀವ ಹರ್ಷಾ-
ದ್ಧೈರ್ಯಾನ್ವಿತೋ ರುಕ್ಮವಿಭೂಷಣೋಽಸೌ ॥ ೧೭ ॥

ತಾವದ್ಗೃಹೀತಃ ಸ್ವಕರೇಣ ಭೂಪಃ
ಕ್ಷೀರಾಬ್ಧಿಕನ್ಯಾ ಪತಿನಾ ಮಹೀಪಃ ।
ತುಷ್ಟೋಽಸ್ಮಿ ತುಷ್ಟೋಽಸ್ಮಿ ನ ಸಂಶಯೋಽತ್ರ
ಗಚ್ಛಸ್ವ ಲೋಕಂ ಮಮ ಲೋಕನಾಥ ॥ ೧೮ ॥

ಪ್ರಿಯಾನ್ವಿತಶ್ಚಾತ್ಮಜಸಂಯುತಶ್ಚ
ಕೀರ್ತಿಂ ಸಮಾಧಾಯ ಮಹೀತಲೇ ತು ।
ತ್ರೈಲೋಕ್ಯಪೂಜ್ಯಾಂ ವಿಮಲಾಂ ಚ ಶುಕ್ಲಾಂ
ಕೃತ್ವಾ ಪದಂ ಮೂರ್ಧ್ನಿ ಯಮಸ್ಯ ಭೂಪ ॥ ೧೯ ॥

---

೧೭-೧೮. ಧೀರನಾದ ಈ ರುಕ್ಮಾಂಗದ ಭೂಪಾಲನು ಕುಂಡಲವನ್ನು ಧರಿಸಿರುವ, ಸುಂದರವಾದ, ಚಂದ್ರನಂತೆ ಹೊಳೆಯುತ್ತಿರುವ, ತೇಜಸ್ವಿಯಾದ ಮಗನ ಮುಖವನ್ನು ಅತ್ಯಂತ ಸಂತೋಷದಿಂದ ಕತ್ತರಿಸುವಷ್ಟರಲ್ಲಿಯೇ ಲಕ್ಷ್ಮೀ ಪತಿಯಾದ ನಾರಾಯಣನು ಪ್ರತ್ಯಕ್ಷವಾಗಿ ಬಂದು ತನ್ನ ಕೈಯಿಂದ ರುಕ್ಮಾಂಗದನ ಕೈಯನ್ನು ಹಿಡಿದುಕೊಂಡು ದೊರೆಯೇ ! ನಾನು ಸಂತುಷ್ಟನಾಗಿರುವೆನು! ಪ್ರಸನ್ನನಾಗಿರುವೆನು! ಸಂದೇಹಪಡಬೇಡ ನನ್ನಲೋಕಕ್ಕೆ ಹೊರಡು!

೧೯-೨೦. ರಾಜನೇ ! ಪತ್ನೀಪುತ್ರ ಸಹಿತನಾಗಿ ಮೂರುಲೋಕಗಳಲ್ಲಿಯೂ, ಸ್ತುತ್ಯವಾದ ನಿರ್ಮಲವಾದ ಧವಳಕೀರ್ತಿಯನ್ನು ಭೂಮಂಡಲದಲ್ಲಿ ಸ್ಥಿರಗೊಳಿಸಿ ಯಮನತಲೆಯನ್ನು ಮೆಟ್ಟಿ ಚಕ್ರಪಾಣಿಯಾದ ನನ್ನ ದೇಹನಾಮ

ಪ್ರಯಾಹಿ ವಾಸಂ ಮಮ ದೇಹಸಂಜ್ಞಂ
ಸಚಕ್ರಿಣೋ ಭೂಮಿಪತಿಃ ಕರೇಣ
ಸಂಸ್ಪೃಷ್ಟಮಾತ್ರೋ ವಿರಜೋ ಬಭೂವ
ಪ್ರಿಯಾಸಮೇತಸ್ತನಯೇನ ಯುಕ್ತಃ ॥ ೨೦ ॥

ಉಪೇತ್ಯ ವೇಶೇನ ಜಗಾಮ ದೇಹಂ
ದೇವಸ್ಯ ದಿವ್ಯಂ ಸ ನೃಪೋ ಮಹಾತ್ಮಾ ।
ವಿಹಾಯ ಲಕ್ಷ್ಮೀಮವನೀಪ್ರಸೂತಾಂ
ವಿಹಾಯ ದಾಸೀಂ ಸಧನಂ ಸಕೋಶಂ ॥ ೨೧ ॥

ವಿಹಾಯ ನಾಗಾಂಸ್ತುರಗಾನ್ರಥಾಂಶ್ಚ
ಸ್ವದಾರವರ್ಗಸ್ವಜನಾದಿಕಾಂಶ್ಚ ।
ಜಗಾಮ ದೇಹಂ ಮಧುಸೂದನಸ್ಯ
ತತೋಂಬರಾತ್ಪುಷ್ಪಚಯಃ ಪಪಾತ ॥ ೨೨ ॥

ಸಂಹೃಷ್ಟಸಿದ್ಧೈಃ ಸುರಲೋಕಪಾಲೈಃ
ಸಂತಾಡಿತಾ ದುಂದುಭಯೋ ವಿನೇದುಃ ।
ರಾಜರ್ಷ ಜಗುರ್ಗೀತಮತೀವ ರಮ್ಯಂ
ದೇವಾಂಗನಾಃ ಸಂನನೃತುರ್ಮುದಾನ್ವಿತಾಃ ॥ ೨೩ ॥

---

ಕಸ್ಥಾನವನ್ನು ಹೊಂದು ಎಂದು ಹೇಳಿ ಚಕ್ರಪಾಣಿಯು ತನ್ನ ಕೈಯಿಂದ ಸ್ಪರ್ಶ ಮಾಡಿದ ಮಾತ್ರದಿಂದ ಪತ್ನೀಪುತ್ರ ಸಹಿತನಾಗಿ ರಾಜನು ದೋಷರಹಿತನಾದನು.

೨೧-೨೨. ಮಹಾತ್ಮನಾದ ಆ ದೊರೆಯು ಅರಮನೆಯಿಂದ ಹೊರಟು ಖನಿಜಸಂಪತ್ತು, ದಾಸಿಯರು, ಧನ, ಕೋಶ, ಆನೆ, ಕುದುರೆ, ರಥ, ಪತ್ನೀ ವರ್ಗ ಮತ್ತು ಬಂಧುವರ್ಗ ಇವನ್ನೆಲ್ಲಾ ಬಿಟ್ಟು ದೇವನ ದಿವ್ಯದೇಹವನ್ನು ಪ್ರವೇಶಿಸಿದನು. ಮಧುಸೂಧನನ ಶರೀರವನ್ನು ಪ್ರವೇಶಿಸದಕೂಡಲೇ ಆಕಾಶ ದಿಂದ ಪುಷ್ಪವೃಷ್ಟಿಯಾಯಿತು.

೨೩-೨೫. ಸಂತೋಷಪಟ್ಟ ಸಿದ್ಧರು ಮತ್ತು ದೇವಲೋಕಪಾಲಕರಿಂದ ಹೊಡೆಯಲ್ಪಟ್ಟ ನಗಾರಿಗಳು ಶಬ್ದಮಾಡಿದುವು. ದೇವಾಂಗನೆಯರು ಅತ್ಯಂತ

ಗಂಧರ್ವಕನ್ಯಾ ನೃಪಕರ್ಮತುಷ್ಟಾ
ಸ್ತದದ್ಭುತಂ ಪ್ರೇಕ್ಷ್ಯ ದಿನೇಶಸೂನುಃ ।
ಹರೇಸ್ತನೌ ಭೂಮಿಪತಿಂ ಪ್ರವಿಷ್ಟಂ
ಸದಾರಪುತ್ರಂ ಸ್ವಲಿಪಿಂ ಪ್ರಮಾರ್ಜ್ಯ || ೨೪ ||

ಲೋಕಾಂಶ್ಚ ಸರ್ವಾನ್ನೃಪದಿಷ್ಟಮಾರ್ಗೇ
ಕೃತ್ವಾ ಕೃತಜ್ಞಾನ್ಹರಿಲೋಕಮಾರ್ಗಾ ।
ಭೀತಃ ಪುನಃ ಪ್ರಾಪ್ಯ ಪಿತಾಮಹಾಂತಿಕಂ
ಪ್ರೋವಾಚ ದೇವಂ ಚತುರಾನನಂ ರುದನ್ || ೨೫ ||

ನಾಹಂ ನಿಯೋಗೀ ಭವಿತಾ ಹಿ ದೇವ
ಆಜ್ಞಾವಿಹೀನಃ ಸುರಲೋಕನಾಥ ।

---

ಮನೋಹರವಾಗಿ ಹಾಡಿದರು. ದೊರೆಯ ಆಚರಣೆಯಿಂದ ಸಂತುಷ್ಟರಾದ ಗಂಧರ್ವಕನ್ಯೆಯರು ಸಂತೋಷದಿಂದ ಚೆನ್ನಾಗಿ ನರ್ತನಮಾಡಿದರು.

ಯಮರಾಜನು ತನ್ನ ಲಿಪಿಯನ್ನು ಅಳಿಸಿ ದೊರೆಯು ಪತ್ನೀಪುತ್ರ ಸಹಿತನಾಗಿ ಹರಿಯ ಶರೀರದಲ್ಲಿ ಪ್ರವೇಶಮಾಡಿದ ಅದ್ಭುತಪ್ರಸಂಗವನ್ನು ನೋಡಿ ಮತ್ತು ಪ್ರಜೆಗಳೆಲ್ಲರೂ ರಾಜೋಪದಿಷ್ಟಮಾರ್ಗವನ್ನೇ ಅನುಸರಿಸುತ್ತಾ ಹರಿಲೋಕಮಾರ್ಗವನ್ನೇ ಅವಲಂಬಿಸುತ್ತಿರುವುದನ್ನೂ ನೋಡಿ ಭಯಪಟ್ಟು ಪುನಃ ಬ್ರಹ್ಮನಬಳಿಗೆ ಬಂದು ಅಳುತ್ತಾ ಚತುರ್ಮುಖದೇವನನ್ನು ಕುರಿತು ಹೀಗೆ ಹೇಳಿದನು.

೨೬. ಸುರಲೋಕದೊಡೆಯನಾದ ದೇವನೇ ! ನಾನು ಅಧಿಕಾರದಲ್ಲಿರು

**ವಿಧೇಹಿ ಚಾನ್ಯತ್ ಪ್ರಕರೋಮಿ ತಾತ**
**ನಿದೇಶನಂ ಮಾಸ್ತು ಮದೀಯದಂಡಂ || ೨೬ ||**

**ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ ಚರಿತೇ ಸುತವಧೋದ್ಯತಸ್ಯ ರುಕ್ಮಾಂಗದಸ್ಯ ಭಗವದ್ದರ್ಶನಂ ನಾಮ ಚತುಸ್ತ್ರಿಂಶತ್ತಮೋಽಧ್ಯಾಯಃ**

---

ವುದಿಲ್ಲ. ನನ್ನ ಅಧಿಕಾರವನ್ನು ವಿನಿಯೋಗಿಸಲು ವಿಷಯವೇ ಇಲ್ಲ. ತಾತ! ಬೇರೆ ಯಾವಕೆಲಸವನ್ನಾದರೂ ಕೊಡು, ಮಾಡುವೆನು. ನನಗೆ ದಂಡವು ಬೇಡ.

ಇಂತು ಶ್ರೀ ನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತೆಯೊಳು ಮಗನನ್ನು ಸಂಹರಿಸಲುದ್ಯುಕ್ತನಾದ ರುಕ್ಮಾಂಗದರಾಜನಿಗೆ ಭಗವಂತನು ದರ್ಶನಕೊಟ್ಟ ವಿಷಯವನ್ನು ಹೇಳುವ ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

# ಪಂಚತ್ರಿಂಶೋಽಧ್ಯಾಯಃ

---

## ಯಮ ಉವಾಚ

ವಿಬುಧೇಶ ಜಗನ್ನಾಥ ಚರಾಚರಗುರೋ ಪ್ರಭೋ ।
ಮೋಹಿನೀ ನಿಷ್ಫಲಾ ಜಾತಾ ವಂಧ್ಯಾ ಸ್ತ್ರೀ ಜನನೇ ಯಥಾ ॥ ೧ ॥

ರುಕ್ಮಾಂಗದಪ್ರಣೀತೇನ ಮಾರ್ಗೇಣ ಕುಶಲಾಂಛನ ।
ಲೋಕಃ ಪ್ರಯಾತಿ ವೈಕುಂಠಂ ನ ಮಾಂ ಕಶ್ಚಿತ್ಪ್ರಪದ್ಯತೇ ॥ ೨ ॥

ಗತೇಽಪಿ ಭೂಮಿನಾಥೇಶೇ ದೇಹಂ ದೇವಸ್ಯ ಚಕ್ರಿಣಃ ।
ತಥಾಪಿ ಸರ್ವಭೂತಾನಾಂ ನ ಬುದ್ಧಿಃ ಪರಿವರ್ತತೇ ॥ ೩ ॥

---

## ಮೂವತ್ತೈದನೆಯ ಅಧ್ಯಾಯವು

೧. ಯಮನು ಹೇಳಿದನು :—ಜ್ಞಾನಿಗಳೊಡೆಯನು, ಜಗನ್ನಾಥನು, ಚರಾಚರ ಗುರುವೂ ಆದ ಸ್ವಾಮಿಯೇ ! ಬಂಜೆಯು ಮಕ್ಕಳನ್ನು ಹೆರುವ ವಿಷಯದಲ್ಲಿ ನಿಷ್ಫಲಳಾದಂತೆ ಮೋಹಿನಿಯು ನಿಯಮಿತಕಾರ್ಯವನ್ನು ಮಾಡಲಾರದೇ ವಿಫಲಳಾದಳು.

೨. ಬ್ರಹ್ಮನೇ ! ರುಕ್ಮಾಂಗದನು ರಚಿಸಿರುವ ಮಾರ್ಗದಿಂದ ಲೋಕವು ವೈಕುಂಠಕ್ಕೇ ನೇರವಾಗಿ ಹೋಗುತ್ತದೆ. ನನ್ನಲ್ಲಿಗೆ ಯಾರೂ ಬರುವುದಿಲ್ಲ.

೩. ರುಕ್ಮಾಂಗದ ಭೂಪಾಲನು ಚಕ್ರಪಾಣಿಯಾದ ಮಧುಸೂದನ ದೇವನ ದೇಹವನ್ನು ಪ್ರವೇಶಿಸಿದರೂ ಸಕಲಪ್ರಾಣಿಗಳ ಬುದ್ಧಿಯು ಬದಲಾಯಿಸಿಲ್ಲ.

ಉಪೋಷ್ಯ ವಾಸರಂ ವಿಷ್ಣೋರಾಕುಮಾರಾಸ್ತು ಮಾಧವಾಃ ।
ಪ್ರಯಾಂತಿ ಪರಮಂ ಲೋಕಂ ಲುಪ್ತಪಾಪಾಃ ಪಿತಾಮಹ ॥ ೪ ॥

ಪುತ್ರೀ ತೇ ವ್ರೀಡಿತಾ ದೇವೀ ಮೋಹಿನೀ ಮೋಹಮಾಗತಾ ।
ನಾಯಾತಿ ತವ ಸಾಮೀಪ್ಯಂ ನ ಭುಂಕ್ತೇ ಲೋಕಗರ್ಹಿತಾ ॥ ೫ ॥

ನಿರ್ವ್ಯಾಪಾರಸ್ತ್ವಹಂ ಜಾತಃ ಕಿಂ ಕರೋಮಿ ಪ್ರಶಾಧಿ ಮಾಂ ।
ರವಿಪುತ್ರವಚಃ ಶ್ರುತ್ವಾ ಪ್ರೋವಾಚ ಕಮಲಾಸನಃ ॥ ೬ ॥

ಗಚ್ಛಾಮಃ ಸಹಿತಾಃ ಸರ್ವೇ ಮೋಹಿನೀಂ ಪ್ರತಿಬೋಧಿತುಂ ।
ಮೋಹಿನ್ಯಾಂ ಪ್ರತಿಬುದ್ಧಾಯಾಂ ಕರಿಷ್ಯಾಮೋ ದಿವಾಕರೇ ॥ ೭ ॥

ತವ ಕಾರ್ಯಂ ನ ಸಂದೇಹಃ ಸಂಭ್ರಮಸ್ತ್ಯಜ್ಯತಾಮಯಂ ।
ತತೋ ದೇವಗಣಾಃ ಸರ್ವೇ ಶತಕ್ರತುಪುರೋಗಮಾಃ ॥ ೮ ॥

---

೪. ಬಾಲಕರು ಮೊದಲುಗೊಂಡು ಆ ದೇಶದ ಪ್ರಜೆಗಳೆಲ್ಲರೂ ಹರಿವಾಸರದಲ್ಲಿ ಉಪವಾಸಮಾಡಿ ತಮ್ಮ ಪಾಪಗಳನ್ನು ಕಳೆದುಕೊಂಡು ಉತ್ತಮ ಲೋಕಕ್ಕೆ ಹೋಗುತ್ತಿರುವರು.

೫. ಪಿತಾಮಹನೇ ! ನಿನ್ನ ಮಗಳಾದ ಮೋಹಿನಿಯು ಲಜ್ಜಿತಳಾದಳು ಮತ್ತು ಮೂರ್ಛಾಕ್ರಾಂತಳಾದಳು. ಅವಳು ನಿನ್ನಹತ್ತಿರಕ್ಕೆ ಬರುವುದಿಲ್ಲ. ಊಟವನ್ನೂ ಸಹ ಮಾಡುವುದಿಲ್ಲ. ಲೋಕನಿಂದೆಗೆ ಗುರಿಯಾಗಿರುವಳು.

೬. ನಾನಾದರೋ ಕೆಲಸವಿಲ್ಲದವನಾಗಿದ್ದೇನೆ. ಏನುಮಾಡಲಿ ? ಆಜ್ಞಾಪಿಸು ಎಂಬುದಾಗಿ ಹೇಳಿದ ಸೂರ್ಯಪುತ್ರನಾದ ಯಮರಾಜನ ಮಾತನ್ನು ಕೇಳಿ ಕಮಲಾಸನನು ಮಾತನಾಡಿದನು.

೭-೮. ಸೂರ್ಯನಂದನನೇ ! ನಾವೆಲ್ಲರೂ ಒಟ್ಟಿಗೆಸೇರಿ ಮೋಹಿನಿಯನ್ನೆಬ್ಬಿಸಲು ಹೋಗೋಣ. ಮೋಹಿನಿಯು ಮೂರ್ಛೆಯಿಂದೆಚ್ಚತ್ತಮೇಲೆ ನಿನ್ನ ಕಾರ್ಯವನ್ನು ಮಾಡಿಸುವೆನು. ಈ ಸಂಭ್ರಮವನ್ನು ಬಿಡು ಎಂಬುದಾಗಿ ಹೇಳಿದನು-

ಬ್ರಹ್ಮಣಾ ಸಹಿತಾಃ ಪೃಥ್ವೀಂ ವಿಮಾನೈಃ ಸೂರ್ಯಸಪ್ರಭೈಃ ।
ಸಮಾಯಾತಾ ಮಹೀಪಾಲ ನಾರೀಂ ತಾಂ ಪ್ರತಿಬೋಧಿತುಂ ॥ ೯ ॥

ತೇ ವಿಮಾನೈಃ ಸಮಂತಾತ್ತು ಪರಿವಾರ್ಯ ಶುಭಾನನಾಂ ।
ತೇಜೋಹೀನಾಂ ನಿರಾನಂದಾಂ ಶುಷ್ಕತೋಯಾಂ ನದೀಮಿವ ॥ ೧೦ ॥

ಶಶಿಹೀನಾಂ ನಿಶಾಂ ಭೂಪ ಋತ್ವಿಗ್ಘೀನಾಂ ಕ್ರಿಯಾಮಿವ ।
ಪರಾಜಿತೋ ಯಥಾ ಮರ್ತ್ಯಃ ಪ್ರಮ್ಲಾನಕುಸುಮಂ ಯಥಾ ॥ ೧೧ ॥

ನಿವೃತ್ತೋತ್ಸವವೇದೀವ ವಿದ್ರುಮಂ ಧವಲಂ ಯಥಾ ।
ಗತಶಾಲಿಸ್ತು ಕೇದಾರೋ ನಿಃಪ್ರಭಶ್ಚಂದ್ರಮಾ ಯಥಾ ॥ ೧೨ ॥

ಮಂಡಪೋ ವಾ ಗತೋದ್ವಾಹಃ ಪೀತಮಂಭೋ ಯಥಾ ಸರಃ ।
ಮಂಥಾನಂ ನವನೀತೇ ತು ಉದ್ಧೃತೇ ಇವ ಭೂಪತೇ ॥ ೧೩ ॥

ಅಸಂಸ್ಕೃತಾಂ ಯಥಾ ವಾಣೀಂ ಮರ್ದಿತಾಂ ಚ ಯಥಾ ಚಮೂಂ ।
ಹತನಾಥಾಂ ತು ಯುವತೀಂ ಧಾನ್ಯಹೀನಾಂ ಪ್ರಜಾಂ ಯಥಾ ॥ ೧೪ ॥

---

ತರುವಾಯ ಇಂದ್ರ ಮುಂತಾದ ಸಕಲ ದೇವಗಣಗಳು ಬ್ರಹ್ಮಸಹಿತರಾಗಿ ಸೂರ್ಯನಂತೆ ಹೊಳೆಯುತ್ತಿರುವ ವಿಮಾನಗಳಲ್ಲಿ ಕುಳಿತು ಆ ನಾರಿಯನ್ನು ಎಚ್ಚರಗೊಳಿಸಲು ಭೂಲೋಕಕ್ಕೆ ಬಂದರು.

೧೦-೨೫. ಅವರು ವಿಮಾನಗಳ ಸಹಿತರಾಗಿ ಸುತ್ತಲೂ ಆವರಿಸಿಕೊಂಡು ನೀರುಬತ್ತಿರುವ ನದಿ, ಚಂದ್ರನಿಲ್ಲದ ರಾತ್ರಿ, ಋತ್ವಿಕ್ಕುಗಳಿಲ್ಲದ ಯಾಗ, ಸೋತ ಮನುಷ್ಯ, ಬಾಡಿದ ಹೂವು, ಉತ್ಸವವು ಮುಗಿದನಂತರ ಅದರ ವೇದಿಕೆಯು, ಬಿಳಿಯ ಹವಳ, ಬತ್ತದ ಪೈರಿಲ್ಲದಗದ್ದೆ, ಪ್ರಕಾಶವಿಲ್ಲದ ಚಂದ್ರ, ವಿವಾಹವು ಬೆಳೆದನಂತರ ಅದರಮಂಟಪ, ಹಳದಿಯ ನೀರಿರುವ ಸರೋವರ, ಕಡೆದು ಬೆಣೆಯನ್ನು ತೆಗೆದಮೇಲೆ ನಿಲ್ಲಿಸಿರುವ ಕಡಗೋಲು, ಅಸಂಸ್ಕೃತವಾದ ವಾಣಿ, ಶತ್ರುವಿನಿಂದ ಮರ್ದನಮಾಡಿಸಿಕೊಳ್ಳಲ್ಪಟ್ಟ ಸೈನ್ಯ, ಗಂಡನನ್ನು ಕಳೆದುಕೊಂಡ ಯುವತಿ, ಧಾನ್ಯವಿಲ್ಲದ ಕ್ಷಾಮಗಾಲದಲ್ಲಿನ ಪ್ರಜೆಗಳು, ಮಂತ್ರವಿಲ್ಲದ ವಿಧಾನ,

ಮಂತ್ರಹೀನವಿಧಿಂ ಯುದ್ಧಂ ಧರ್ಮಂ ಚ ದಯಯಾ ವಿನಾ ।
ಪೃಥ್ವೀ ಭೂಪಾಲ ಹೀನಾ ವಾ ಮಂತ್ರಿಹೀನೋ ಯಥಾ ನೃಪಃ ॥ ೧೫ ॥

ಧನಧಾನ್ಯವಿಹೀನಂ ವಾ ಗೃಹಂ ನೃಪವರೋತ್ತಮ ।
ಜಲಹೀನಂ ಯಥಾ ಕುಂಭಂ ಪಂಕಸ್ಥಂ ಗೋಪತಿಂ ಯಥಾ ॥ ೧೬ ॥

ಗೃಹಸ್ಥಂ ಭಾರ್ಯಯಾ ಹೀನಂ ರಾಷ್ಟ್ರಭ್ರಷ್ಟಂ ಚ ಭೂಪತಿಂ ।
ಭಗ್ನಕ್ರಿಯಂ ಯಥಾ ವೈದ್ಯಂ ಭಗ್ನಶಾಖಂ ಯಥಾವೃಕ್ಷಂ ॥ ೧೭ ॥

ತೇಜೋಹೀನಂ ಯಥಾಗಾರಂ ನಿರ್ಜಲಂ ವಾ ಘನಂ ಯಥಾ ।
ವಿಧೂಮ ಇವ ಸಪ್ತಾರ್ಚಿರ್ವಿರಶ್ಮಿರಿವ ಭಾಸ್ಕರಃ ॥ ೧೮ ॥

ಮತಿಭ್ರಷ್ಟೋ ಯಥಾ ಮರ್ತ್ಯಃ ಪರ್ವಸಂಗೀ ಯಥಾ ನರಃ ।
ಅತೃಪ್ತಃ ಕಾಂತಯಾ ಕಾಂತಃ ಪನ್ನಗಶ್ಚ ವಿಷೋಜ್ಝಿತಃ ॥ ೧೯ ॥

ಲೂನಪಕ್ಷೋ ಯಥಾ ಪಕ್ಷೀ ವೃತ್ತಿಹೀನೋ ಯಥಾ ದ್ವಿಜಃ ।
ಶಿರೋಭ್ರಷ್ಟಾ ಯಥಾ ಮಾಲಾ ಪರ್ವತೋ ಧಾತುವರ್ಜಿತಃ ॥ ೨೦ ॥

---

ಧರ್ಮ ದಯೆಗಳಿಲ್ಲದ ಯುದ್ಧ, ರಾಜನಿಲ್ಲದ ರಾಜ್ಯ, ಮಂತ್ರಿಯಿಲ್ಲದ ದೊರೆ, ಧನ ಧಾನ್ಯಗಳಿಲ್ಲದ ಮನೆ, ನೀರಿಲ್ಲದ ಪಾತ್ರೆ, ಕೆಸರಿನಲ್ಲಿ ಸಿಕ್ಕಿಬಿದ್ದ ಎತ್ತು, ಹೆಂಡತಿ ಯಿಲ್ಲದ ಗೃಹಸ್ಥ, ರಾಜ್ಯವನ್ನು ಕಳೆದುಕೊಂಡ ದೊರೆ, ಕೊಟ್ಟ ಔಷಧವು ಫಲಿಸ ದಿರುವ ವೈದ್ಯ, ಕೊಂಬೆಗಳನ್ನು ಕತ್ತರಿಸಿದ ವೃಕ್ಷ, ಬೆಳಕಿಲ್ಲದ ಮನೆ, ನೀರಿಲ್ಲದ ಮೋಡ, ಹೊಗೆಯಿಲ್ಲದ ಬೆಂಕಿ, ಕಿರಣಗಳಿಲ್ಲದ ಸೂರ್ಯ, ಬುದ್ಧಿಕೆಟ್ಟ ಮನುಷ್ಯ, ಪರ್ವಕಾಲದಲ್ಲಿ ಸಂಭೋಗಮಾಡುವ ಮನುಷ್ಯ, ಹೆಂಡತಿಯ ವಿಷಯದಲ್ಲಿ ತೃಪ್ತಿ ಯಿಲ್ಲದ ಗಂಡ, ವಿಷವಿಲ್ಲದ ಹಾವು, ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿ, ವೃತ್ತಿಯಿ ಲ್ಲದ ದ್ವಿಜ, ಶಿರಸ್ಸಿನಿಂದ ಬಿದ್ದ ಮಾಲಿಕೆ, ಧಾತುಗಳಿಲ್ಲದ ಪರ್ವತ, ಚೆನ್ನಾಗಿ

ಪ್ರಭ್ರಷ್ಟಲಿಪಿಶಾಸ್ತ್ರಂ ವಾ ವಿಸ್ವರಂ ಋಗ್ಯಜುರ್ಯಥಾ ।
ಸ್ವರಹೀನಂ ಯಥಾ ಸಾಮ ಪದ್ಮಹೀನಂ ಯಥಾ ಸರಃ ॥ ೨೦ ॥

ಯಥಾ ಮಾರ್ಗಸ್ತೃಣೈರುದ್ಧಃ ಪದ್ಮಂ ಪತ್ರವಿವರ್ಜಿತಂ ।
ಜ್ಞಾನಂ ಮಮತ್ವಸಂಯುಕ್ತಂ ಪುಮಾನ್ಪ್ರಕೃತಿಂ ವಿನಾ ॥ ೨೨ ॥

ಸಾಂಖ್ಯಾನಿ ತತ್ವಹೀನಾನಿ ಧರ್ಮೋ ದಂಭಾನ್ವಿತೋ ಯಥಾ ।
ತೇಜೋಹೀನಾ ತಥಾ ದೃಷ್ಟ್ವಾ ಮೋಹಿನೀ ತೇ ದಿವೌಕಸಃ ॥ ೨೩ ॥

ಧ್ಯಾಯಮಾನಾ ನಿರುತ್ಸಾಹಾ ದೃಶ್ಯಮಾನಾ ಜನೈಃ ಪ್ರಭೋ ।
ಆಕ್ರೋಶವಚನೈಃ ಕ್ರೂರೈಃ ಪುತ್ರಹತ್ಯಾಸಮನ್ವಿತಾಂ ॥ ೨೪ ॥

ದುಃಶೀಲಾಂ ಧರ್ಮಸಂತ್ಯಕ್ತಾಂ ತದ್ವಾಕ್ಯಪರಿಮೋಷಿತಾಂ ।
ಸ್ವವಾಕ್ಯಪಾಲನಾಂ ಚಂಡಾಮೂಚುರ್ದೇವಾಃ ಸಮಾಗತಾಃ ॥ ೨೫ ॥

---

ಅಳಿಸಲ್ಪಟ್ಟ ಲಿಪಿಶಾಸ್ತ್ರ, ಸ್ವರವಿಲ್ಲದ ಋಗ್ಯಜುರ್ಮಂತ್ರಗಳು, ಸ್ವರವಿಲ್ಲದ ಸಾಮ ಗಾನ, ಪದ್ಮವಿಲ್ಲದ ಸರೋವರ, ಹುಲ್ಲು ಪೊದೆಗಳಿಂದ ಮುಚ್ಚಲ್ಪಟ್ಟ ದಾರಿ, ದಳ ಗಳಿಲ್ಲದ ಪದ್ಮ, ಮಮತೆಯಿಂದ ಯುಕ್ತವಾದ ಜ್ಞಾನ, ಹೆಂಡತಿಯಿಲ್ಲದ ಪುರು ಷನು, ತತ್ವಗಳಿಲ್ಲದ ಸಾಂಖ್ಯೋಪದೇಶ ಮತ್ತು ಜಂಭಸಹಿತ ಧರ್ಮ ಇವುಗ ಳಂತೆ ಕಳೆಗುಂದಿ ಉತ್ಸಾಹವಿಲ್ಲದೇ ಸುಖರಹಿತಳಾಗಿದ್ದ, ಕಠಿನವಾದ ಆಕ್ರೋಶ ವಚನಗಳನ್ನಾಡಿ ಜನಗಳಿಂದ ಬೈಯಿಸಿಕೊಳ್ಳಲ್ಪಡುತ್ತಿದ್ದ ಮೋಹಿನಿಯನ್ನು ನೋಡಿದರು.

ಅನಂತರ ಅಲ್ಲಿಗೆಬಂದ ದೇವತೆಗಳು, ಪುತ್ರನನ್ನು ಕೊಲ್ಲಿಸಿದ ಕೆಟ್ಟನಡತೆ ಯುಳ್ಳ, ಧರ್ಮವನ್ನು ಬಿಟ್ಟಿದ್ದ, ತನ್ನಮಾತನ್ನೇ ಪಾಲಿಸಬೇಕೆಂದು ಹಟಹಿಡಿ ದಿದ್ದ, ಚಂಡಿಯಾದ ಮೋಹಿನಿಯನ್ನು ಕುರಿತು ಮಾತನಾಡಿದರು.

**ಮಾ ಶೋಕಂ ಕುರು ವಾಮೋರು** ಪೌರುಷಂ ಹಿ ತ್ವಯಾ ಕೃತಂ ।
**ನ ಹಿ ಮಾಧವ ಭಕ್ತಾನಾಂ ವಿದ್ಯತೇ** ಮಾನಖಂಡನಂ ॥ ೨೬ ॥

**ಸಾ ತ್ವಂ ಹರಿಣಶಾವಾಕ್ಷಿ ದೇವಕಾರ್ಯಾರ್ಥ**ಮಾಗತಾ ।
**ತನ್ನ ಸಿದ್ಧಂ ವರಾರೋಹೇ ಸ ಪ್ರಯಾತೋ** ಹ್ಯನಾಮಯಂ ॥ ೨೭ ॥

**ವಿಘ್ನವಿಧ್ವಂಸಿನೀ ಪೂರ್ವಂ ಕೃತಾ** ರುಕ್ಮಾಂಗದೇನ ಹಿ ।
**ಏಕಾದಶೀ ಮಹಾಪುಣ್ಯಾ ಮೋಹಿನೀ** ಮಾಧವೇ ಸಿತೇ ॥ ೨೮ ॥

**ಸಂವತ್ಸರಂ ವಿಶಾಲಾಕ್ಷಿ ಕೃಚ್ಛ್ರ**ಪಾದಪ್ರಪೂಜಿತಾ ।
**ತಸ್ಯೈವಾಧ್ಯುಷ್ಟಿರತುಲಾ ಯತ್ಸತ್ಯಾಚ್ಚಾ**ಲಿತೋ ನ ಹಿ ॥ ೨೯ ॥

**ವಿಘ್ನರಾಜ್ಞೀ ತು ವೈ ನಾರೀ ಲೋಕೇಷು ಪರಿಗೀಯತೇ** ।
**ಕರ್ಮಣಾ ಮನಸಾ ವಾಚಾ ಪುತ್ರವ್ಯಾಪಾದನೇ ಮತಿಂ** ॥ ೩೦ ॥

---

೨೬. ಸುಂದರಾಂಗಿಯೇ ! ದುಃಖಪಡಬೇಡ. ನೀನು ಪರಾಕ್ರಮವನ್ನು ತೋರಿಸಿರುವೆ. ವಿಷ್ಣುಭಕ್ತರಿಗೆ ಅವಮಾನವಾಗುವ ಸಂಭವವೇ ಇಲ್ಲ.

೨೭. ಜಿಂಕೆಯಮರಿಯಂತೆ ಕಣ್ಣುಗಳುಳ್ಳ ಮೋಹಿನಿಯೇ ! ನೀನು ದೇವತೆಗಳಕೆಲಸಕ್ಕಾಗಿ ಇಲ್ಲಿಗೆ ಬಂದಿರುವೆ. ವರಾರೋಹೆಯೇ ? ಅದು ಸಿದ್ಧಿಸಲಿಲ್ಲ. ಆ ರುಕ್ಮಾಂಗದನು ದುಃಖವಿಲ್ಲದೆಡೆಗೆ ಹೊರಟುಹೋದನು.

೨೮-೨೯. ಪೂರ್ವದಲ್ಲಿ ರುಕ್ಮಾಂಗದನು ವಿಘ್ನನಾಶಕವು, ಮಹಾಪುಣ್ಯಪ್ರದವೂ ಆದ ವೈಶಾಖ ಶುಕ್ಲೈಕಾದಶೀವ್ರತವನ್ನಾಚರಿಸಿ ಸಂವತ್ಸರಪರ್ಯಂತವಾಗಿ ಕೃಷ್ಣಪಾದವನ್ನು ಪೂಜಿಸಿರುವನು. ಅದರ ಮಹಿಮೆಯಿಂದಲೇ ಅವನು ಸತ್ಯವನ್ನು ಬಿಡಲಿಲ್ಲ.

೩೦-೩೩. ಲೋಕದಲ್ಲಿ ನಾರಿಯು ವಿಘ್ನರಾಣಿಯೆಂದು ಉಕ್ತವಾಗಿದೆ. ಅವನು ಅಭಿಮಾನವನ್ನು ಸಂಪೂರ್ಣವಾಗಿ ಬಿಟ್ಟು ಮನೋವಾಕ್ಕಾಯ ಕರ್ಮಗಳಿಂದ ಮಗನನ್ನು ಸಂಹರಿಸಬೇಕೆಂದು ನಿಶ್ಚೈಸಿ ಕತ್ತಿಯನ್ನು ಎತ್ತಲು ಅಂತಹ

ಕೃತ್ವಾ ಚೋದ್ಧೃತ್ಯ ಖಡ್ಗಂ ಚ ತ್ಯಕ್ತ್ವಾ ಸ್ನೇಹಂ ಸುದೂರತಃ ।
ತಾದೃಶಂ ನಿಕಷಂ ಪ್ರೇಕ್ಷ್ಯ ಭಗವಾನ್ಮಧುಸೂದನಃ ॥ ೩೧ ॥

ಹನಿಷ್ಯತಿ ಪ್ರಿಯಂ ಪುತ್ರಂ ನ ಭುಂಕ್ತೇ ಹರಿವಾಸರೇ ।
ಪುತ್ರಸ್ಯ ಚ ಪ್ರಿಯಾಯಾಶ್ಚ ಭಾವಂ ಪ್ರೇಕ್ಷ್ಯ ನೃಪಸ್ಯ ಚ ॥ ೩೨ ॥

ವಿಷ್ಣುನಾ ಪರಿತುಷ್ಟೇನ ನೀತಾಃ ಸ್ವಭವನೇ ತ್ರಯಃ ।
ಸದೇಹಾಃ ಕ್ಷೀಣಕರ್ಮಾಣಮಂಗಾರೋಽಗ್ನಿರಿವಾಹಿತಃ ॥ ೩೩ ॥

ಫಲಂ ಕರ್ಮಣಿ ಚಾರಬ್ಧೇ ಯದಿ ದೇವಿ ನ ಸಿಧ್ಯತಿ ।
ಸರ್ವಯತ್ನೇನ ಸುಭಗೇ ದೋಷಃ ಕೋಽತ್ರ ತವಾಧುನಾ ॥ ೩೪ ॥

ಏತಸ್ಮಾದ್ವರದಾಃ ಸರ್ವೇ ಸಂಪ್ರಾಪ್ತಾ ವಿಬುಧಾಃ ಶುಭೇ ।
ಸಿದ್ಧ್ಯಾ ವಾಪ್ಯಥವಾಽಸಿದ್ಧ್ಯಾ ಕರ್ಮಕೃತ್ಸ್ಯೈರ್ವೃಥಾ ನ ಹಿ ॥ ೩೫ ॥

---

ಕಠಿಣಪ್ರಸಂಗವನ್ನು ನೋಡಿ ಮಧುಸೂದನನು ರಾಜನು ಪ್ರಿಯಕುಮಾರನನ್ನಾದರೂ ಸಂಹರಿಸುವನು ಹರಿದಿನದಲ್ಲಿ ಊಟಮಾಡುವುದಿಲ್ಲ ಎಂಬ ಅವನ ಮತ್ತು ಸಂಧ್ಯಾವಳೀ ಧರ್ಮಾಂಗದರ ಮನೋಭಾವವನ್ನರಿತು, ಸಂತುಷ್ಟನಾಗಿ ಕಾಷ್ಠಾರೋಪಿತಾಗ್ನಿಯು ಕ್ಷೀಣಕರ್ಮನಾದ ಮನುಷ್ಯನನ್ನು ಒಯ್ಯುವಂತೆ ಆ ಮೂವರನ್ನೂ ತನ್ನಲೋಕಕ್ಕೆ ಕರದುಕೊಂಡು ಹೋದನು.

೩೪. ಮನೋಹರದೇವಿಯೇ! ಸರ್ವವಿಧದಿಂದ ಪ್ರಯತ್ನಮಾಡಿದರೂ ಫಲವು ಸಿದ್ಧಿಸದಿದ್ದರೆ ಅದರಲ್ಲಿ ಈಗ ನಿನ್ನ ಅಪರಾಧವೇನಿದೆ?

೩೫. ಈ ಕಾರಣದಿಂದ ಶೋಭನಾಂಗಿಯೇ! ನಿನಗೆ ವರಕೊಡುವುದಕ್ಕಾಗಿ ದೇವತೆಗಳಾದ ನಾವೆಲ್ಲರೂ ಬಂದಿರುವೆವು. ಪ್ರಯತ್ನಮಾಡಿದ ಮೇಲೆ ಅದು ಸಿದ್ಧಿಸಲಿ ಸಿದ್ಧಿಯಾಗದಿರಲಿ ಭೃತ್ಯಸೇವೆಯು ವ್ಯರ್ಥವಾಗಬಾರದು,

ಭರ್ತವ್ಯೋ ಭೃತ್ಯವರ್ಗಶ್ಚ ಭೂಭುಜಾ ಧರ್ಮಮಿಚ್ಛತಾ ।
ಸದ್ಭಾವೇ ಘಟಮಾನಸ್ಯ ಯದಿ ಕರ್ಮ ನ ಸಿದ್ಧ್ಯತಿ ॥ ೩೬ ॥

ದೇಯಂ ವೇತನಮಾತ್ರಂ ತು ನ ಚ ತುಷ್ಟಿಫಲಂ ಭವೇತ್ ।
ಯೋ ನ ತಸ್ಮೈ ಪ್ರಯಚ್ಛೇತ ಜೀವನಂ ಜೀವನಾಯ ವೈ ॥ ೩೭ ॥

ಗೋವಧಂ ಸಮವಾಪ್ನೋತಿ ಸ ನರೋ ನಾತ್ರ ಸಂಶಯಃ ।
ತಸ್ಮಾದ್ದೇಯಂ ವರಾರೋಹೇ ಅಭೀಷ್ಟಂ ವರಸುಂದರಿ ॥ ೩೮ ॥

ಸದ್ಭಾವೇನ ಕೃತೇ ಸಮ್ಯಗ್ವಿಘ್ನಂ ಕಾರ್ಯಂ ದಿವೌಕಸಾಂ ।
ಕಿನ್ನ ಕುರ್ವಂತಿ ವಿಬುಧಾಸ್ತ್ವಯಾ ಸಹ ವರಾನನೇ ॥ ೩೯ ॥

ದ್ವಾದಶ್ಯಾಸ್ತೇಜಸಾ ಭಗ್ನಾ ಯಾಮಾಹುರ್ವಿಘ್ನನಾಶಿನೀಂ ।
ವಿಬುಧೈರೇವಮುಕ್ತಾ ತು ಮೋಹಿನೀ ಲೋಕಮೋಹಿನೀ ॥ ೪೦ ॥

---

೩೬. ಸೇವಕರು ಸ್ವಾಮಿಯ ಅಪ್ಪಣೆಯಂತೆ ಕೆಲಸಮಾಡಿದರೂ ಕಾರ್ಯ ಸಿದ್ಧಿಯಾಗದಿದ್ದರೆ ಧಾರ್ಮಿಕನಾದ ರಾಜನು ಅಂತಹ ಭೃತ್ಯರಿಗೆ ವೇತನಾದಿಗಳನ್ನು ಕೊಟ್ಟು ಜೀವನ ನಡೆಯಿಸಬೇಕು.

೩೭-೩೮. ವೇತನವನ್ನು ಮಾತ್ರ ಕೊಡಬೇಕು. ಸಂತೋಷಫಲ ಎಂದರೆ ಬಹುಮಾನವು ಲಭಿಸುವುದಿಲ್ಲ.

ಯಾವ ಮನುಷ್ಯನು ಅಂತಹವನಿಗೆ ಜೀವನಕ್ಕೆ ಅನುಕೂಲಿಸುವಷ್ಟು ವೇತನವನ್ನು ಕೊಡುವುದಿಲ್ಲವೋ ಅವನು ಗೋಹತ್ಯೆಯ ಪಾಪಕ್ಕೆ ಗುರಿಯಾಗುವನು. ಸಂದೇಹವಿಲ್ಲ. ಆದಕಾರಣ ವರಾರೋಹೆಯೇ! ನಿನಗೆ ವರಕೊಡಲೇಬೇಕು. ಸುಂದರಿಯೇ! ನಿನಗೆ ಇಷ್ಟವಾದುದನ್ನು ಕೇಳು.

೩೯. ಒಳ್ಳೆಯ ಭಾವನೆಯಿಂದ ಪ್ರಯತ್ನಮಾಡಿದರೂ ದೇವತೆಗಳ ಕಾರ್ಯಕ್ಕೆ ವಿಘ್ನವಾಯಿತು. ವರಾನನೇ! ನಿನ್ನ ಸಹಕಾರದಿಂದ ದೇವತೆಗಳು ಏನನ್ನುತಾನೇ ಮಾಡಲಾರರು.

೪೦-೪೧. ನಿನ್ನ ಪ್ರಯತ್ನವು ವಿಘ್ನನಾಶಕವೇ ಸರಿ. ಜ್ಞಾನಿಸಮ್ಮತವಾದ ದ್ವಾದಶೀವ್ರತದ ಪ್ರಭಾವದಿಂದ ಅದು ಪ್ರಯೋಜನಕಾರಿಯಾಗಲಿಲ್ಲ ಎಂಬುದಾಗಿ

ಉವಾಚ ಸಾ ನಿರಾನಂದಾ ಪತಿಹೀನಾತಿದುಃಖಿತಾ ।
ಧಿಗಿದಂ ಜೀವಿತಂ ಮಹ್ಯಂ ಯೇನ ಕಾರ್ಯಂ ನ ಸಾಧಿತಂ ॥ ೪೧ ॥

ನ ಕೃತೋ ಜನಸಂಬಾಧೋ ಯಮಮಾರ್ಗೇಮರಾಧಿಪಾಃ ।
ನ ತು ಲುಪ್ತಂ ಹರಿದಿನಂ ನ ಭುಕ್ತಂ ಹರಿವಾಸರೇ ॥ ೪೨ ॥

ಭೂಭುಜಾ ತೇನ ವೀರೇಣ ಕೃತಃ ಪುತ್ರವಧೋ ಮುದಾ ।
ಗತೋ ಮೂರ್ಧ್ನಿ ಪದಂ ದತ್ವಾ ಮಮ ರುಕ್ಮಾಂಗದೋ ಹರಿಂ ॥ ೪೩ ॥

ಅಪ್ರಮೇಯಗುಣಂ ವಿಷ್ಣುಂ ನಿರ್ಮಲಂ ನಿರ್ಮಲಾಶ್ರಯಂ ।
ಹಂಸಂ ಶುಚಿಷದಂ ವ್ಯೋಮ ಪ್ರಣವಂ ಬೀಜಮವ್ಯಯಂ ॥ ೪೪ ॥

---

ದೇವತೆಗಳು ಹೇಳಿದುದನ್ನು ಕೇಳಿ ಲೋಕಮೋಹಕಳು, ಸಂತೋಷವಿಲ್ಲದವಳು, ಗಂಡನನ್ನು ಕಳೆದುಕೊಂಡು ಬಹುದುಃಖಪಡುತ್ತಿರುವವಳೂ ಆಗಿದ್ದ ಮೋಹಿನಿಯು ಮಾತನಾಡಿದಳು.

ಅಯ್ಯೋ! ನನಗೆ ಒಪ್ಪಿಸಿದ ಕೆಲಸವನ್ನು ಸಾಧಿಸಲಾರದೇ ಹೋದೆನು! ಇಂತಹ ನನ್ನ ಬಾಳಿಗೆ ಧಿಕ್ಕಾರ!

೪೨-೪೩. ದೇವೇಶ್ವರರೇ! ಜನಗಳನ್ನು ಹಿಂಸಿಸುವಂತಹ ಯಮ ಮಾರ್ಗವನ್ನು ನಿಷ್ಕಂಟಕವಾಗಿ ಮಾಡಲಾರದೇ ಹೋದೆನು! ಹರಿದಿನವ್ರತಾಚರಣೆಯು ನಿಲ್ಲಲಿಲ್ಲ! ರಾಜನು ಹರಿದಿನದಲ್ಲಿ ಊಟಮಾಡಲಿಲ್ಲ! ವೀರನಾದ ಅವನು ಸಂತೋಷದಿಂದ ಮಗನನ್ನು ವಧಿಸಲುದ್ಯುಕ್ತನಾದನು! ಹೀಗೆ ಮಾಡಿ ರುಕ್ಮಾಂಗದನು ನನ್ನ ತಲೆಯನ್ನು ಮೆಟ್ಟಿ ಹರಿಪದವನ್ನು ಸೇರಿದನು.

೪೪-೪೭. ಅಪರಿಮಿತಗುಣವಂತನು, ಪರಿಶುದ್ಧನು, ಪರಿಶುದ್ಧರಿಗಾಶ್ರಯನು, ನಿರ್ದೋಷನು, ಶ್ರೇಷ್ಠನು, ವ್ಯಾಪ್ತನು, ಪ್ರಣವಮಂತ್ರವೇದ್ಯನು, ಜಗತ್ಕಾರಣನು, ನಾಶರಹಿತನು, ಪ್ರಾಕೃತಾಕಾರರಹಿತನು, ಭ್ರಮವಿಲ್ಲದವನು, ಪ್ರಾಪಂಚಿಕ ದುಃಖಶೂನ್ಯನು, ದೋಷರಹಿತನು, ಭಕ್ತರಿಗೆ ಯೋಗ್ಯತಾನುಗುಣವಾದ ಸುಖವನ್ನು ಕೊಡುವವನು, ವಿಯತ್ಸ್ವರೂಪನು, ಧ್ಯಾನಗಮ್ಯನು, ಸ್ನಾತಕ

ನಿರಾಕಾರಂ ನಿರಾಭಾಸಂ ನಿಷ್ಪ್ರಪಂಚಂ ನಿರಂಜನಂ |
ಶೂನ್ಯಂ ವಿಯತ್ಸ್ವರೂಪಂ ಚ ಧ್ಯೇಯಂ ಧ್ಯಾನವಿವರ್ಜಿತಂ || ೪೫ ||

ಅಸ್ತಿ ನಾಸ್ತೀತಿ ಯಂ ಪ್ರಾಹುರ್ನ ದೂರೇ ನಾಪಿ ಚಾಂತಿಕೇ |
ಪರಂಧಾಮ ಮನೋಗ್ರಾಹ್ಯಂ ಪುರುಷಾಖ್ಯಂ ಜಗನ್ಮಯಂ || ೪೬ ||

ಹೃತ್ಪಂಕಜಸಮಾಸೀನಂ ತೇಜೋರೂಪಂ ಸನಾತನಂ |
ತಸ್ಮಿಂಲ್ಲಯಮನುಪ್ರಾಪ್ತೇ ಕಿಂ ನು ಮೇ ಜೀವಿತೇ ಫಲಂ || ೪೭ ||

ಅಸಾಧಿತೇ ತು ಯಃ ಕಾರ್ಯೇ ನರೋ ಗೃಹ್ಣಾತಿ ವೇತನಂ |
ಸ್ವಾಮಿನಾಂ ತು ಪರಿತ್ಯಜ್ಯ ಪ್ರಯಾತಿ ನರಕಂ ಧ್ರುವಂ || ೪೮ ||

ನ ಸಾಧಯಂತಿ ಯೇ ಕಾರ್ಯಂ ಸ್ವಾಮಿನಾಂ ತು ದಿವೌಕಸಃ |
ಭೃತ್ಯಾ ವೇತನಭೋಕ್ತಾರೋ ಜಾಯಂತೇ ಭೂತಲೇ ಹಯಾಃ || ೪೯ ||

ಅಸಾಧಿನೀಯಂ ಕಾರ್ಯಸ್ಯ ಭರ್ತೃಪುತ್ರವಿನಾಶಿನೀ |
ಕಥಂ ವರಂ ತು ಗೃಹ್ಣಾಮಿ ಭವತಾಂ ನಾಕವಾಸಿನಾಂ || ೫೦ ||

---

ಧ್ಯಾನರಹಿತನು, "ಇದ್ದಾನೆ-ಇಲ್ಲ" ಎಂಬುದಾಗಿ ವ್ಯವಹರಿಸಲ್ಪಡುವವನು, ದೂರಸಮಿಾಪಗಳಲ್ಲಿಲ್ಲದಿರುವವನು, ಉತ್ಕೃಷ್ಟನು, ತೇಜೋರೂಪಿಯು, ಮನೋಗ್ರಾಹ್ಯನು, ಪುರುಷನಾಮಕನು, ಜಗದಂತರ್ಗತನು, ಚೇತನರ ಹೃದಯಕಮಲದಲ್ಲಿರುವವನು, ಪ್ರಕಾಶರೂಪನು, ಸನಾತನನೂ ಆದ ವಿಷ್ಣುವಿನಲ್ಲಿ ನನ್ನ ಪತಿಯು ಲೀನನಾದಮೇಲೆ ನಾನು ಬದುಕುವುದರಿಂದೇನು ಫಲ?

೪೮. ಸ್ವಾಮಿಕಾರ್ಯವನ್ನು ಸಾಧಿಸದೇ ಸಂಬಳವನ್ನು ತೆಗೆದುಕೊಳ್ಳುವ ಭೃತ್ಯನು ಈ ಲೋಕವನ್ನು ಬಿಟ್ಟಮೇಲೆ ಖಂಡಿತವಾಗಿ ನರಕಕ್ಕೆ ಹೋಗುವನು.

೪೯. ದೇವತೆಗಳೇ! ಸ್ವಾಮಿಕಾರ್ಯವನ್ನು ಸಾಧಿಸದೇ ಸಂಬಳವನ್ನು ತೆಗೆದುಕೊಳ್ಳುವ ಭೃತ್ಯರು ಭೂಲೋಕನಲ್ಲಿ ಕುದುರೆಗಳಾಗಿ ಹುಟ್ಟುವರು.

೫೦. ಈಗ ನಾನು ಕರ್ತವ್ಯವನ್ನು ಸಾಧಿಸಲಿಲ್ಲ. ಗಂಡ ಮತ್ತು ಮಗನನ್ನು ನಾಶಮಾಡಿರುವೆನು. ಹೀಗಿರುವಾಗ ಸ್ವರ್ಗಲೋಕವಾಸಿಗಳಾದ ನಿಮ್ಮಿಂದ ವರವನ್ನು ಹೇಗೆ ತೆಗೆದುಕೊಳ್ಳಲಿ? ಎಂಬುದಾಗಿ ಮೋಹಿನಿಯು ಹೇಳಿದಳು.

ದೇವಾ ಊಚುಃ

ಬ್ರೂಹಿ ಮೋಹಿನಿ ದಾಸ್ಯಾಮಿ ಯತ್ತೇ ಹೃದಿ ಸಮೀಹಿತಂ ।
ಅನೃಣಾಸ್ತು ಭವಿಷ್ಯಾಮಃ ಕೃತ್ವಾ ಚೋಪಕೃತಿಂ ತವ ॥ ೫೧ ॥

ಪರಿಶ್ರಮಃ ಕೃತೋ ದೇವಿ ತ್ವಯಾ ರಾಜಪ್ರಯೋಜನೇ ।
ತಸ್ಯ ತ್ವಂ ಫಲಭಾಗ್ದೇವಿ ತಾದೃಶಾರ್ಥೇ ಕೃತಸ್ಯ ತು ॥ ೫೨ ॥

ಏವಮುಚ್ಚೈರವಾಣಾನಾಂ ದೇವತಾನಾಂ ಮಹೀಪತೇ ।
ನೃಪತೇರಾಜಗಾಮಾಥ ಪುರೋಧಾಃ ಪಾವಕಪ್ರಭಃ ॥ ೫೩ ॥

ಉಷಿತೋ ಜಲಮಧ್ಯೇ ತು ಪ್ರಾಣಾಯಾಮರತೋ ಮುನಿಃ ।
ದ್ವಾದಶಾಬ್ದೇ ತತಃ ಪೂರ್ಣೇ ನಿರ್ಗತೋ ಜಲಮಧ್ಯತಃ ॥ ೫೪ ॥

ನಿರ್ಗತೇನ ಶ್ರುತಂ ತೇನ ಮೋಹಿನೀಚೇಷ್ಟಿತಂ ನೃಪ ।
ಸಕ್ರೋಧೋ ಮುನಿಶಾರ್ದೂಲೋ ದೇವವೃಂದಮುಪಾಗತಃ ॥ ೫೫ ॥

---

೫೧. ದೇವತೆಗಳು ಹೇಳಿದರು :—ಮೋಹಿನಿಯೇ ? ನಿನ್ನ ಮನಸ್ಸಿನಲ್ಲಿ ಒಯಸಿರುವುದನ್ನು ಹೇಳು, ಅದನ್ನು ಕೊಡುವೆವು. ನಿನಗೆ ಉಪಕಾರ ಮಾಡಿ ನಾವು ಋಣವನ್ನು ಪರಿಹರಿಸಿಕೊಳ್ಳುವೆವು.

೫೨. ದೇವಿಯೇ ! ರಾಜನಿಂದ ಪ್ರಯೋಜನವಾಗಬೇಕೆಂದು ನೀನು ಶ್ರಮಿಸಿರುವೆ. ಅಂತಹ ಪ್ರಯೋಜನಕ್ಕಾಗಿ ಶ್ರಮಿಸಿದ ನೀನು ಫಲಭಾಗಿಯೇ ಸರಿ.

೫೩. ದೊರೆಯೇ ! ಈರೀತಿಯಾಗಿ ದೇವತೆಗಳು ಹೇಳುತ್ತಿರುವಾಗ ಅಗ್ನಿಯಂತೆ ತೇಜಸ್ಸುಳ್ಳ ರುಕ್ಮಾಂಗದನ ಪುರೋಹಿತನು ಬಂದನು.

೫೪. ಆ ಮುನಿಯು ಪ್ರಾಣಾಯಾಮ ನಿರತನಾಗಿ ನೀರಿನೊಳಗೆ ವಾಸ ಮಾಡುತ್ತಾ ಹನ್ನೆರಡು ವರ್ಷಗಳು ಕಳೆದಮೇಲೆ ಜಲಮಧ್ಯದಿಂದ ಎದ್ದು ಬಂದನು.

೫೫-೫೭. ಹೊರಗೆಬಂದಮೇಲೆ ಆ ಮುನಿಶ್ರೇಷ್ಠನು ಮೋಹಿನಿಯು ಮಾಡಿದ ಕೆಲಸವನ್ನು ತಿಳಿದು ಕೋಪಗೊಂಡು ದೇವತೆಗಳ ಹತ್ತಿರಕ್ಕೆಬಂದು

ಉವಾಚ ವಿಬುಧಾನ್ ಸರ್ವಾನ್ ಮೋಹಿನೀವರದಾಯಿನಃ ।
ಧಿಗಿಮಾಂ ಧಿಗ್ದೇವಸಂಘಂ ಕರ್ಮ ಧಿಕ್ಪಾಪಸಂಜ್ಞಿತಂ ॥ ೫೬ ॥

ಭವತಾಂ ಭವನಾಶಾಯ ಪುರುಷಾರ್ಥೇ ಪ್ರರೋಹಕಂ ।
ಭವಂತೋ ಯಚ್ಛ ದಾತಾರೋ ಮೋಹಿನ್ಯಾ ವಾಂಛಿತಂ ವರಂ ॥ ೫೭ ॥

ಹತ್ಯಾಯುತಾ ಭರ್ತೃಸುತೋಪಘಾತಿನೀ
ವಿಹೀನವೃತ್ತಿಶ್ಚ ನರಾಶಿರೂಪಾ ।
ನಾಸ್ಯಾ ಹಿ ಲೋಕೇ ಭವತೀಹ ಶುದ್ಧಿಃ
ಸಮಿದ್ಧವಹ್ನೌ ಪತನೇಽಪಿ ದೇವಾಃ ॥ ೫೮ ॥

ಹತ್ಯಾಯುತಂ ಭರ್ತೃವಧೋ ನಿರರ್ಥಕಂ
ಏತತ್ಸಮಂ ವಿಪ್ರವರೈಃ ಪುರಾಕೃತಂ ।
ನ ಚಾಪಿ ಚಾಸ್ಯಾ ಭವತೀಹ ಶುದ್ಧಿಃ
ಸಮಿದ್ಧವಹ್ನೌ ಪತನೇಽಪಿ ದೇವಾಃ ॥
ವಿಮೋಹಯಿತ್ವಾ ವಚನೈಃ ಸುಧಾಮಯೈಃ
ರುಕ್ಮಾಂಗದಂ ಧರ್ಮವಿಭೂಷಣಂ ಚ ।
ಪ್ರಿಯಾಯುತಂ ಮೋಕ್ಷಪದಂ ನಿಹತ್ಯ
ಚಕಾರ ಭೂಮಿಂ ನೃಪವರ್ಜಿತಾಂ ಚ ॥ ೫೯ ॥

---

ಮೋಹಿನಿಗೆ ವರಕೊಡಬೇಕೆಂದು ಬಂದಿದ್ದ ಸಕಲದೇವತೆಗಳನ್ನೂ ಕುರಿತು ಮಾತನಾಡಿದನು. ಈ ಮೋಹಿನಿಗೆ ಧಿಕ್ಕಾರ! ದೇವಸಂಘಕ್ಕೂ ಧಿಕ್ಕಾರ! ಇಂತಹವಳು ಬಯಸುವ ವರವನ್ನು ಕೊಡಲುದ್ಯುಕ್ತರಾಗಿ ಬಂದಿರುವ ನಿಮ್ಮ ಈ ಪಾಪಕೃತ್ಯಕ್ಕೆ ಧಿಕ್ಕಾರ! ಇವಳು ಸಂಸಾರನಾಶಕವು ಮತ್ತು ಪುರುಷಾರ್ಥವರ್ಧಕವೂ ಆದ ವರವನ್ನು ಪಡೆಯಲು ಅರ್ಹಳಲ್ಲ.

೫೮. ದೇವತೆಗಳೇ ? ಗಂಡುಮಕ್ಕಳನ್ನು ಕೊಂದು ಹತ್ಯೆಗೀಡಾಗಿರುವ, ನೀಚಕೃತ್ಯಮಾಡಿರುವ, ನರಭಕ್ಷಕಳಾದ ಈ ಮೋಹಿನಿಯು ಈ ಲೋಕದಲ್ಲಿ ಪ್ರಜ್ವಲಿಸುತ್ತಿರುವ ಬೆಂಕಿಯಲ್ಲಿಬಿದ್ದರೂ ಶುದ್ಧಳಾಗುವುದಿಲ್ಲ

೫೯. ಇವಳು ಸವಿನುಡಿಗಳಿಂದ ಪತ್ನೀಸಹಿತನಾದ ರುಕ್ಮಾಂಗದ, ಮತ್ತು ಧರ್ಮಾಂಗದರನ್ನು ಮೋಹಗೊಳಿಸಿ ಅವರನ್ನು ಮೋಕ್ಷಕ್ಕೆ ಕಳುಹಿಸಿ, ಈ ಭೂಮಿಯನ್ನು ಅರಾಜಕವನ್ನಾಗಿ ಮಾಡಿರುವಳು.

ನ ಚಾಪಿ ವಾಸೋ ನರಕೇಷು ದೇವಾ
ಅಸ್ಯಾಃ ಸ್ಥಿತಿಃ ಕ್ವ ತ್ರಿದಿವೇಲ್ಪಬುದ್ಧೇಃ ।
ನ ಚಾಪಿ ರಾಜ್ಞೋ ನಿಕಟೇ ಚ ದೇವಾ
ನಾಪ್ಯೇತು ವಿಷ್ಣೋಃ ಪದಮವ್ಯಯಂ ಯತ್ ॥ ೬೦ ॥

ನ ಲೋಕವಾದೇನ ವಿದೂಷಿತಾಯಾ
ಲೋಕೇಷು ಕುತ್ರಾಪಿ ಭವೇಚ್ಚ ವಾಸಃ ।
ಧಿಗ್ಜೀವನಂ ಕರ್ಮವಿಗರ್ಹಿತಾಯಾ
ದೇವಾಸ್ಸದಾ ಪಾಪಸಮಾರತಾಯಾಃ ॥ ೬೧ ॥

ಪತಿಂ ಹತ್ವಾ ಸುತಂ ಹತ್ವಾ ಸಪತ್ನೀಂ ಜನನೀಸಮಾಂ ।
ಹತ್ವಾ ಧರಾಂ ಸಮುಸ್ತಾಂ ವಾ ಕಾಂ ಗತಿಂ ಯಾಸ್ಯತೇ ಸುರಾಃ ॥ ೬೨ ॥

---

೬೦. ದೇವತೆಗಳೇ ! ಅಲ್ಪಬುದ್ಧಿಯಾದ ಇವಳಿಗೆ ನರಕಗಳಲ್ಲಿಯೂ ಸಹ ವಾಸವು ಯೋಗ್ಯವಲ್ಲ. ಅಂದ ಬಳಿಕ ಸ್ವರ್ಗವಾಸವೆಲ್ಲಿಂದ ಲಭಿಸೀತು ? ರಾಜನ ಸನ್ನಿಧಾನದಲ್ಲಿಯೂ ಇವಳು ವಾಸಮಾಡಲರ್ಹಳಲ್ಲ. ಇನ್ನು ಇವಳು ಶಾಶ್ವತವಾದ ವಿಷ್ಣುಲೋಕಕ್ಕೆ ಹೋಗದೇ ಇರಲಿ ಎಂದು ಹೇಳುವುದೇನು?

೬೧. ಲೋಕಾಪವಾದದಿಂದ ದೂಷಿತಳಾದ ಇವಳಿಗೆ ಲೋಕಗಳಲ್ಲಿ ಎಲ್ಲಿಯೂ ವಾಸವು ಯೋಗ್ಯವಲ್ಲ. ದೇವತೆಗಳೇ ! ದುಷ್ಕೃತ್ಯದಿಂದ ನಿಂದಿತಳಾದ, ಪಾಪವನ್ನು ಚೆನ್ನಾಗಿ ಗಳಿಸಿರುವ ಇವಳ ಬಾಳು ಯಾವಾಗಲೂ ಧಿಕ್ಕಾರಕ್ಕೆ ಅರ್ಹವು.

೬೨. ದೇವತೆಗಳೇ ! ಗಂಡ, ಮಗ, ಸೌತಿ ಮತ್ತು ತಾಯಿಗೆ ಸಮಾನವಾದ ಸಮಸ್ತ ಭೂಮಿ ಇವನ್ನೆಲ್ಲಾ ಕೊಂದು ಇವಳು ಯಾವ ಗತಿಯನ್ನು ಹೊಂದಿಯಾಳು ?

ಇಯಂ ಪಾಪತರಾ ದೇವಾ ಧರ್ಮವಿಧ್ವಂಸಿನೀ ಹರೇಃ |
ಸರ್ವದಾಸ್ಯನಯಾ ಪ್ರೋಕ್ತಂ ಭುಜ್ಯತಾಂ ಹರಿವಾಸರೇ || ೬೩ ||

ಪ್ರಾಣಸಂವರ್ಧನಾರ್ಥಾಯ ತೇಷಾಮೇವಾಪ್ಯಧೋಗತಿಃ |
ಭುಜ್ಯತಾಂ ವಾಸರೇ ವಿಷ್ಣೋರ್ಘ್ನ್ಯತಾಂ ಗೌರ್ದ್ವಿಜಾನ್ವಿತಾ || ೬೪ ||

ಅಪೇಯಂ ಪೀಯತಾಮುಕ್ತ್ವಾ ಕಥಂ ವಾಸಂ ಲಭೇದ್ದಿವಿ |
ಏತದಜ್ಞಾನಿನಾಂ ಪ್ರೋಕ್ತಂ ಜ್ಞಾನಿನಾಂ ತು ನ ನಿರ್ಣಯಃ || ೬೫ ||

ಅಜ್ಞಾನಾದ್ವ್ಯಾಹೃತೇ ವಾಕ್ಯೇ ಭುಜ್ಯತಾಂ ಹರಿವಾಸರೇ |
ತಸ್ಯಾಪಿ ಶುದ್ಧಿರ್ಗದಿತಾ ಪ್ರಾಣಾಯಾಮಶತೇನ ಹಿ || ೬೬ ||

---

೬೩-೬೫. ಇವಳು ಬಹುಪಾಪಿಷ್ಠಳು. ಹರಿಸಮ್ಮತವಾದ ಧರ್ಮನಾಶಕಳು. ದೇಹಬೆಳೆಯಿಸಿಕೊಳ್ಳುವುದಕ್ಕಾಗಿ ಯಾವಾಗಲೂ ಹರಿದಿನದಲ್ಲಿ ಭೋಜನಮಾಡಬೇಕೆಂದೇ ಹೇಳುತ್ತಿರುವಳು. ಅಂತಹವರಿಗೆ ಅಧೋಗತಿಯೇ ಆಗುವುದು.

ಹರಿದಿನದಲ್ಲಿ ಭೋಜನಮಾಡಬೇಕು, ದ್ವಿಜಸಹಿತವಾಗಿ ಗೋವನ್ನು ವಧಿಸಬೇಕು, ಕುಡಿಯಬಾರದ ಮದ್ಯಾದಿಗಳನ್ನು ಪಾನಮಾಡಬೇಕು ಎಂಬುದಾಗಿ ಹೇಳಿದಮೇಲೆ ಇವಳಿಗೆ ಸ್ವರ್ಗದಲ್ಲಿ ವಾಸವು ಹೇಗೆ ಲಭಿಸೀತು ?

ಇದು ಅಜ್ಞಾನಿಗಳಿಗೆ ವಿಹಿತವಾದುದು. ಜ್ಞಾನಿಗಳು ಇಂತಹ ಕೃತ್ಯವನ್ನಾಚರಿಸಿದರೆ ಅವರಿಗೆ ಯಾವ ದುರ್ಗತಿಯಾಗುವುದೆಂಬುದನ್ನು ನಿರ್ಣಯಿಸಲಾಗುವುದಿಲ್ಲ.

೬೬. ಹರಿವಾಸರದಲ್ಲಿ ಭೋಜನಮಾಡಬೇಕು ಎಂಬ ಮಾತನ್ನು ಅಜ್ಞಾನದಿಂದ ಹೇಳಿದರೆ ಅಂತಹವನಿಗೆ ನೂರು ಪ್ರಾಣಾಯಾಮ ಮಾಡಿದರೆ ಶುದ್ಧಿಯಾಗುವುದೆಂದು ಹೇಳಲ್ಪಟ್ಟಿದೆ.

ಅಥ ವಾಪ್ಯುಪವಾಸೇನ ಏಕಾದಶ್ಯಾ ದಿವೌಕಸಃ ।
ಋಕ್ಷೇಣ ಸಂಯುತಾಯಾಸ್ತು ಜ್ಯೇಷ್ಠಕುಂಡಾಪ್ಲವೇನ ವಾ ॥ ೬೭ ॥

ಸೌಕರಸ್ಪರ್ಶನಾದ್ವಾಪಿ ನರೋ ದೇವಾರ್ಚನೇನ ವಾ ।
ವ್ಯಾಹೃತೇ ಕಥಿತಂ ವಿಪ್ರೈಃ ಸೇಯಮದ್ಯ ಸುನಿಷ್ಠುರಾ ॥ ೬೮ ॥

ಭೋಜನೇ ಪಾಪನಿರತಾ ದಿನೇ ವಿಷ್ಣೋರ್ದುರಾಸಹೇ ।
ಭರ್ತುರ್ವಾಕ್ಯಂ ವ್ಯಪೋಹ್ಯೇವ ಘಾತಯಿತ್ವಾ ಸುತಂ ಪ್ರಿಯಂ ॥ ೬೯ ॥

ವಾಕ್ಯಜ್ಞಂ ವಾಕ್ಯನಿರತಂ ಮಾತ್ರ್ಯಾಣಾಂ ತು ಹಿತೇ ರತಂ ।
ವಿಷ್ಣುಧರ್ಮಪ್ರಲೋಪ್ತ್ರೀಯಂ ಬಹುಪಾಪಸಮನ್ವಿತಾ ॥ ೭೦ ॥

ನೈಷಾ ಸ್ಪೃಶ್ಯಾಸ್ತಿ ದೇವೇಶಾಃ ಕಥಮಸ್ಯಾ ವರಪ್ರದಾಃ ।
ಭವಂತೋ ನ್ಯಾಯಯುಕ್ತೇಷು ಧರ್ಮಯುಕ್ತೇಷು ತತ್ಪರಾಃ ॥ ೭೧ ॥

ಪಾಲನಂ ಪಾಪಯುಕ್ತಸ್ಯ ನ ಕುರ್ವಂತಿ ದಿವೌಕಸಃ ।
ಧರ್ಮಾಧಾರಾಃ ಸ್ಮೃತಾ ದೇವಾ ಧರ್ಮೋ ವೇದಸಮಾಶ್ರಿತಃ ॥ ೭೨ ॥

---

೬೭-೭೦. ಅಥವಾ ಕ್ಷೇತ್ರಸಹಿತವಾದ ಏಕಾದಶಿಯ ಉಪವಾಸ ಅಥವಾ ಜ್ಯೇಷ್ಠಕುಂಡದಲ್ಲಿ ಸ್ನಾನ ಅಥವಾ ಸೌಕರಸ್ಪರ್ಶನ ಇಲ್ಲವೇ ದೇವಪೂಜೆ ಇವುಗಳಿಂದ ಅಂತಹವನು ಶುದ್ಧನಾಗುವನೆಂದು ಬ್ರಾಹ್ಮಣರಿಂದ ಉಕ್ತವಾಗಿದೆ.

ಈ ಮೋಹಿನಿಯು ಅತ್ಯಂತ ಕಠಿಣವಾದ ಅಂತಹ ಮಾತನ್ನು ಆಡಿ ಪತಿಯ ಮಾತನ್ನು ಕೇಳದೇ ವಿಷ್ಣುವಿಗೆ ಸಹಿಸಲಶಕ್ಯವಾದ ಹರಿದಿನಭೋಜನವನ್ನೂ ಮಾಡುತ್ತಾ ಪಾಪನಿರತಳಾಗಿ ನೀತಿಜ್ಞನು, ತಂದೆಯಮಾತನ್ನು ಪಾಲಿಸುವವನು, ತಾಯಿಯರಿಗೆ ಅನುಕೂಲಮಾಡುವುದರಲ್ಲಾಸಕ್ತನೂ ಆದ ಪ್ರಿಯ ಕುಮಾರನನ್ನು ಕೊಲ್ಲಿಸಿ ವಿಷ್ಣುಧರ್ಮಕ್ಕೆ ಲೋಪತಂದಿರುವ ಬಹುಪಾಪಿಷ್ಠೆಯು.

೭೧- ದೇವೇಶ್ವರರೇ! ಇವಳು ಮುಟ್ಟುವುದಕ್ಕೂ ಅರ್ಹಳಲ್ಲ. ಇಂತಹವಳಿಗೆ ನೀವು ಹೇಗೆ ವರವನ್ನು ಕೊಡುವಿರಿ? ನೀವಾದರೋ ನ್ಯಾಯಧರ್ಮಯುಕ್ತಮಾರ್ಗಗಳಲ್ಲಿಯೇ ಆಸಕ್ತರಾಗಿರುವವರು.

೭೨. ದೇವತೆಗಳು ಪಾಪಿಯ ರಕ್ಷಣೆಯನ್ನು ಮಾಡುವುದಿಲ್ಲ. ದೇವತೆಗಳು ಧರ್ಮಕ್ಕಾಶ್ರಯರು. ಧರ್ಮವು ವೇದದಲ್ಲಿ ಹೇಳಲ್ಪಟ್ಟಿದೆ.

**ವೇದೈಃ ಶುಶ್ರೂಷಣಂ ಭರ್ತುಃ ಸ್ತ್ರೀಣಾಂ ಧರ್ಮಃ ಪ್ರಕೀರ್ತಿತಃ ।**
**ಯದ್ಬ್ರವೀತಿ ಪತಿಃ ಕಿಂಚಿತ್ತತ್ಕಾರ್ಯಮವಿಶಂಕಯಾ ॥ ೭೩ ॥**

**ಶುಕ್ಲಂ ಶುಕ್ಲಮಿತಿ ಬ್ರೂಯಾತ್ ಕೃಷ್ಣಂ ಕೃಷ್ಣೇತಿ ಚಾಮರಾಃ ।**
**ಶುಶ್ರೂಷಾ ಸಾ ಹಿ ವಿಜ್ಞೇಯಾ ನ ಶುಶ್ರೂಷಾ ಹಿ ಸೇವನಂ ॥ ೭೪ ॥**

**ಭರ್ತುರಾಜ್ಞಾ ಹತಾ ದೇವಾ ಆತ್ಮಾಜ್ಞಾಸ್ಥಾಪನೇಚ್ಛಯಾ ।**
**ತಸ್ಮಾತ್ಪಾಪಾ ನ ಸಂದೇಹೋ ಮೋಹಿನೀ ಲೋಕಮೋಹಿನೀ ।**
**ಸತ್ಯಸ್ಯ ಸಾಧನಾರ್ಥಾಯ ಶಪಥೈರ್ಯಂತ್ರಿತೋ ನೃಪಃ ॥ ೭೫ ॥**

**ಉವಾಚ ವಿವಿಧಂ ವಾಕ್ಯಂ ಸಾ ನೈಚ್ಛತ್ಪುತ್ರಘಾತಿನೀ ।**
**ತೇನ ಮೋಕ್ಷಂ ಗತೋ ರಾಜಾ ಪಾಪಮಸ್ಯಾಂ ವಿಸೃಜ್ಯ ಚ ॥ ೭೬ ॥**

---

೭೩. ವೇದಗಳಾದರೋ ಪತಿಯಶುಶ್ರೂಷೆಯೇ ಸ್ತ್ರೀಧರ್ಮವೆಂದು ಸಾರುತ್ತಿದೆ. ಸ್ತ್ರೀಯು ಪತಿಯು ಹೇಳಿದುದನ್ನೆಲ್ಲಾ ನಿಶ್ಶಂಕವಾಗಿ ಮಾಡಬೇಕು.

೭೪. ದೇವತೆಗಳೇ ! ಪತಿಯು ಶುಕ್ಲವೆಂದರೆ ಪತ್ನಿಯೂ ಅದಕ್ಕೆ ವಿರುದ್ಧವಾಗಿ ನುಡಿಯದೇ ಶುಕ್ಲವೆಂತಲೇ ಅನ್ನಬೇಕು. ಅಂತೆಯೇ ಕಪ್ಪು ಎಂದರೆ ಅವಳು ಕಪ್ಪೆನ್ನಬೇಕು. ಅದೇ ಶುಶ್ರೂಷೆಯು. ಗಂಡನಿಗೆ ವಿರುದ್ಧವಾಗಿ ಮಾತನಾಡುತ್ತಾ ಅವನ ಸೇವೆಮಾಡಿದರೆ ಅದು ಶುಶ್ರೂಷೆಯೆನಿಸಲಾರದು.

೭೫. ದೇವತೆಗಳೇ ! ತನ್ನ ಅಪ್ಪಣೆಯನ್ನು ನಡೆಯಿಸಿಕೊಳ್ಳಬೇಕೆಂಬಾಶೆಯಿಂದ ಗಂಡನ ಅಪ್ಪಣೆಯನ್ನು ನಡೆಯದಂತೆ ಮಾಡಿದುದರಿಂದ ಲೋಕಮೋಹಕಳಾದ ಮೋಹಿನಿಯು ಪಾಪಿಯಾಗಿರುವಳು. ಸಂದೇಹವಿಲ್ಲ. ಸತ್ಯವನ್ನು ಸಾಧಿಸುವುದಕ್ಕಾಗಿ ಶಪಥಗಳಿಂದ ದೊರೆಯನ್ನು ಬಂಧಿಸಿದಳು.

೭೬. ಅವಳು ನಾನಾವಿಧವಾದ ಮಾತುಗಳನ್ನಾಡಿದಳು. ಮಗನನ್ನು ಕೊಂದ ಅವಳು ಧರ್ಮವನ್ನು ಬಯಸಲಿಲ್ಲ. ಅದರಿಂದ ರಾಜನು ಇವಳಲ್ಲಿ ಪಾಪವನ್ನು ಬಿಟ್ಟು ಮೋಕ್ಷಕ್ಕೆ ಹೋದನು.

ಸೇಯಂ ಪಾಪಶರೀರಾ ಹಿ ಹತ್ಯಾಯುತಸಮನ್ವಿತಾ || ೭೭ ||

ದಾತಾರಂ ಸರ್ವದಾನಾನಾಂ ಬ್ರಹ್ಮಣ್ಯಂ ಹರಿದೈವತಂ |
ಪ್ರಜಾರಂಜನಶೀಲಂ ಚ ಹರಿವಾಸರಸೇವಿನಂ || ೭೮ ||

ಪರದಾರಸ್ಪೃಹಾತ್ಯಕ್ತಂ ವಿಷಯೇ ವಿಗತಸ್ಪೃಹಂ |
ಪರಾರ್ಥತ್ಯಕ್ತಕಾಮಂ ಚ ಸದಾ ಮಖನಿಷೇವಿಣಂ || ೭೯ ||

ಸದೈವ ದುಷ್ಟದಮನೇ ವರ್ತಮಾನಂ ಧರಾತಲೇ |
ವ್ಯಸನೈಃ ಸಪ್ತಭಿರ್ಘೋರೈರನಾಕ್ರಾಂತಂ ಮಹೀಪತಿಂ || ೮೦ ||

ಸಂನಿರಸ್ಯ ದುರಾಚಾರಾ ವರಯೋಗ್ಯಾ ಕಥಂ ಭವೇತ್ |
ಯೋಽಸ್ಯಾಃ ಪಕ್ಷೇ ತು ವರ್ತೇತ ದೇವೋ ವಾ ದಾನವೋಽಪಿ ವಾ || ೮೧ ||

ತಂ ಚಾಪಿ ಭಸ್ಮಸಾತ್ಕುರ್ಯಾಂ ಕ್ಷಣೇನ ಸುರಸತ್ತಮಾಃ |
ಮೋಹಿನ್ಯಾ ರಕ್ಷಣೇ ಯಸ್ತು ಪ್ರಯತ್ನಂ ಕುರುತೇ ಸುರಾಃ || ೮೨ ||

---

೭೭. ಅಂತಹ ಈ ಮೋಹಿನಿಯು ಹತ್ತುಸಾವಿರ ಹತ್ಯೆಗಳಿಂದ ಕೂಡಿದ ಪಾಪಶರೀರವುಳ್ಳವಳಾಗಿರುವಳು.

೭೮-೮೩. ಸಕಲದಾನಗಳನ್ನು ಕೊಡುತ್ತಿದ್ದ, ಬ್ರಹ್ಮಜ್ಞಾನಿಯಾದ, ಹರಿಯೇ ದೇವನೆಂದು ತಿಳಿದಿದ್ದ, ಪ್ರಜೆಗಳನ್ನು ಸಂತೋಷಪಡಿಸುವ ಸ್ವಭಾವವುಳ್ಳ, ಏಕಾದಶೀವ್ರತವನ್ನು ಸೇವಿಸುತ್ತಿದ್ದ, ಪರಸ್ತ್ರೀಯರ ಆಶೆಯನ್ನೇಬಿಟ್ಟಿದ್ದ, ವಿಷಯಾಶಾರಹಿತನಾದ, ಪರಾರ್ಥವಾಗಿ ತನ್ನ ಆಶೆಯನ್ನು ತ್ಯಜಿಸಿದ್ದ, ಯಾವಾಗಲೂ ಯಜ್ಞವನ್ನು ಮಾಡುತ್ತಿದ್ದ, ದುಷ್ಟಶಿಕ್ಷಣಕಾರ್ಯದಲ್ಲಿ ಸರ್ವದಾ ನಿರತನಾದ, ಭೂಮಿಯಲ್ಲಿ ಸಪ್ತವ್ಯಸನಗಳಿಗೆ ಸಿಲುಕದ ರುಕ್ಮಾಂಗದನನ್ನು ದುರಾಚಾರಳಾದ ಈ ಮೋಹಿನಿಯು ನಾಶಮಾಡಿರುವುದರಿಂದ ಇವಳು ವರವನ್ನು ಪಡೆಯಲು ಯೋಗ್ಯಳಾಗುವ ಬಗೆಹೇಗೆ ?

ಈ ಮೋಹಿನಿಯ ಪಕ್ಷದಲ್ಲಿ ದೇವದಾನವರಾರಾದರೂ ಇದ್ದದ್ದೇ ಆದರೆ ಅವರನ್ನೂ ಸಹ ಕ್ಷಣಮಾತ್ರದಲ್ಲಿ ಸಟ್ಟು ಬೂದಿಮಾಡಬೇಕು !

ತಸ್ಯ ತಜ್ಞಾಯತೇ ಪಾಪಂ ಯನ್ಮೋಹಿನ್ಯಾಂ ವ್ಯವಸ್ಥಿತಂ ।

ಸ ಏವಮುಕ್ತ್ವಾ ನೃಪತೇ ದ್ವಿಜೇಂದ್ರಃ
ಸಂಗೃಹ್ಯ ಪಾಣೌ ಸಲಿಲಂ ಚ ತೀವ್ರಃ ।
ಕ್ರೋಧೇನ ಸಂವೀಕ್ಷ್ಯ ವಿಧಿಪ್ರಸೂತಾಂ
ಚಿಕ್ಷೇಪ ತನ್ಮೂರ್ಧ್ನ್ಯನಲಪ್ರಕಾಶಂ ॥ ೮೪ ॥

ನಿಕ್ಷಿಪ್ತಮಾತ್ರೇ ಸಲಿಲೇ ಮಹೀಪ
ಸದ್ಯಃ ಪ್ರಜಜ್ವಾಲ ಚ ತಚ್ಛರೀರಂ ।
ಸಂಪಶ್ಯತಾಂ ನಾಕನಿವಾಸಿನಾಂ ತು
ತೃಣ್ಯಾ ಯಥಾ ವಹ್ನಿಶಿಖಾವಲೀಢಾ ॥ ೮೫ ॥

ಕೋಪಂ ವಿಭೋ ಸಂಹರ ಸಂಹರೇತಿ
ಯಾವದ್ಗಿರಃ ಖೇ ಮರುತಾಂ ಬಭೂವುಃ ।

---

ದೇವತೆಗಳೇ ! ಮೋಹಿನಿಯನ್ನು ರಕ್ಷಿಸಬೇಕೆಂದು ಪ್ರಯತ್ನಿಸುವವನಿಗೆ ಮೋಹಿನಿಯಲ್ಲಿರುವ ಪಾಪವು ಸುತ್ತಿಕೊಳ್ಳುತ್ತದೆ

೮೪. ರಾಜನೇ ! ಆ ದ್ವಿಜಶ್ರೇಷ್ಠನು ಈ ರೀತಿಯಾಗಿ ಹೇಳಿ ಕೈಯಲ್ಲಿ ನೀರನ್ನು ತೆಗೆದುಕೊಂಡು ಬ್ರಹ್ಮಪುತ್ರಿಯಾದ ಮೋಹಿನಿಯನ್ನು ಕೋಪದಿಂದ ತೀವ್ರವಾಗಿ ನೋಡಿ ಅವಳ ತಲೆಯಮೇಲೆ ಬೆಂಕಿಯ ಪ್ರಕಾಶವನ್ನು ಬೀರಿದನು.

೮೫. ಭೂಪಾಲನೇ ! ನೀರನ್ನು ಚೆಲ್ಲಿದಕೂಡಲೇ ನೋಡುತ್ತಿದ್ದ ಸ್ವರ್ಗವಾಸಿಗಳಾದ ದೇವತೆಗಳೆದುರಿಗೆ, ಬೆಂಕಿಯಜ್ವಾಲೆಗೆ ಸಿಲುಕಿದ ಹುಲ್ಲುಮೆದೆಯಂತೆ ಅವಳ ಶರೀರವು ಪ್ರಜ್ವಲಿಸಿತು.

೮೬. " ಸ್ವಾಮಿಯೇ ! ಕೋಪವನ್ನು ಬಿಡುಬಿಡು " ಎಂಬುದಾಗಿ ಆಕಾ

ತಾವತ್ಸ ವಹ್ನಿರ್ದ್ವಿಜವಾಕ್ಯಸೃಷ್ಟೋ
ಭಸ್ಮಾವಶೇಷಾಂ ಪ್ರಮದಾಂ ಚಕಾರ || ೮೬ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ
ಚರಿತೇ ಶಾಪಪ್ರಾಪ್ತಿರ್ನಾಮ ಪಂಚತ್ರಿಂಶೋಽಧ್ಯಾಯಃ

---

ಶದಲ್ಲಿ ಅಶರೀರವಾಣಿಯಾಗುವಷ್ಟರಲ್ಲಿಯೇ ಬ್ರಾಹ್ಮಣವಚನದಿಂದ ನಿರ್ಮಿತ ವಾದ ಬೆಂಕಿಯು ಆ ಸ್ತ್ರೀಯನ್ನು ಸುಟ್ಟು ಬೂದಿಮಾಡಿತು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಶಾಪಲಾಭವೆಂಬ ಮೂವತ್ತೈದನೆಯ ಅಧ್ಯಾಯವು
ಮುಗಿದುದು.

## ವಿಷಯಸಂಗ್ರಹ

ಯಮರಾಜನು ಪಿತಾಮಹನಬಳಿಗೆ ಹೋಗಿ ಮೋಹಿನಿಯ ಪ್ರಯತ್ನವು ನಿಷ್ಫಲವಾಯಿತು. ಎಲ್ಲರೂ ಹರಿದಿನ ವ್ರತಾಚರಣೆ ಮಾಡಿ ಸಾಕ್ಷಾತ್ತಾಗಿ ವೈಕುಂಠಕ್ಕೆ ಹೋಗುತ್ತಿರುವರು. ನನಗೆ ಕರ್ತವ್ಯವೇ ಇಲ್ಲದಂತಾಗಿದೆ. ಮೋಹಿನಿಯು ಮೂರ್ಛಾಕ್ರಾಂತಳಾಗಿರುವಳು. ಇದೋ ನೀನು ಕೊಟ್ಟಿರುವ ಅಧಿಕಾರವನ್ನು ನಿನಗೇ ವಹಿಸಿರುತ್ತೇನೆ ಎಂಬುದಾಗಿ ಹೇಳಲು ಪಿತಾಮಹನು ಇಂದ್ರಾದಿದೇವತೆಗಳನ್ನು ಕರೆದುಕೊಂಡು ವಿಮಾನಮಾರ್ಗವಾಗಿ ಭೂಲೋಕಕ್ಕೆ ಬಂದು ತೇಜೋಹೀನಳಾಗಿ ಬಿದ್ದಿದ್ದ ಮೋಹಿನಿಯನ್ನು ಎಬ್ಬಿಸಿ ನೀನು ಪ್ರಯತ್ನಮಾಡಿರುವೆ. ಅದು ಫಲಿಸದಿದ್ದರೆ ನಿನ್ನ ಅಪರಾಧವೇನಿದೆ? ನಿನಗೆ ನಾವು ವರಕೊಡಲು ಬಂದಿದ್ದೇವೆ ವರವನ್ನು ಕೇಳೆಂದು ಹೇಳಿದರು. ಆಗ ಮೋಹಿನಿಯು ಕಾರ್ಯವನ್ನು ಸಾಧಿಸದಿದ್ದುದರಿಂದ ವರವನ್ನು ಕೇಳುವುದು ಯುಕ್ತವಲ್ಲವೆಂದು ಹೇಳಲಾಗಿ ದೇವತೆಗಳು ನೀನು ವರಕ್ಕೆ ಅರ್ಹಳು ವರವನ್ನು ಬೇಡೆಂದು ಹೇಳುತ್ತಿರುವಾಗ ಪ್ರಾಣಾಯಾಮನಿರತನಾಗಿ ಹನ್ನೆರಡು ವರ್ಷಗಳಿಂದ ನೀರಿನಲ್ಲಿ ತಪಸ್ಸುಮಾಡುತ್ತಿದ್ದ, ರುಕ್ಮಾಂಗದ ಪುರೋಹಿತನಾದ ಮುನಿವರ್ಯನು ಹೊರಗೆ ಬಂದು ಮೋಹಿನಿಯ ಕೃತ್ಯವನ್ನುಕೇಳಿ ಕುಪಿತನಾಗಿ ದೇವತೆಗಳಬಳಿಗೆ ಬಂದು, ಇವಳು ವರಯೋಗ್ಯಳಲ್ಲ, ನೀವು ವರಕೊಡಲು ಬಂದಿರುವುದು ತಪ್ಪೆಂದು ಖಂಡಿಸಿ ನೀರನ್ನು ಕೈಯಲ್ಲಿ ತೆಗೆದುಕೊಂಡು ಅವಳಮೇಲೆ ಎರಚಿದನು. ಕೂಡಲೇ ಅವಳ ಶರೀರವು ಉರಿದು ಭಸ್ಮವಾಯಿತು.

# ಷಟ್ತ್ರಿಂಶೋಽಧ್ಯಾಯಃ

—

### ವಸಿಷ್ಠ ಉವಾಚ

ಮೋಹಿನೀ ಮೋಹಮುತ್ಸೃಜ್ಯ ಗತಾ ವಿಬುಧಮಂದಿರಂ ।
ಭರ್ತ್ಸಿತಾ ದೇವದೂತೇನ ಸ್ಥಿತಿಸ್ತೇತ್ರ ನ ಪಾಪಿನಿ ॥ ೧ ॥

ಪಾಪಶೀಲೇ ಸುದುರ್ಮೇಧೇ ಭರ್ತೃನಿಂದಾಪರಾಯಣೇ ।
ಹರಿವಾಸರಲೋಪಿನ್ಯಾ ವಾಸಸ್ತೇ ನ ತ್ರಿವಿಷ್ಟಪೇ ॥ ೨ ॥

ಧರ್ಮತೋ ವಿಮುಖಾನಾಂ ಚ ನರಕೇ ವಾಸ ಇಷ್ಯತೇ ।
ಏವಮುಕ್ತ್ವಾ ತು ತಾಂ ವಾಯುಃ ಕ್ರೂರಂ ವಚನಮುದ್ಭುತಂ ॥ ೩ ॥

ತಾಡಯಿತ್ವಾ ಚ ದಂಡೇನ ಪ್ರೇರಯಾಮಾಸ ಯಾತನಾಂ ।
ಏವಂ ಸಂತಾಡಿತಾ ರಾಜನ್ ದೇವದೂತೇನ ಮೋಹಿನೀ ॥ ೪ ॥

---

### ಮೂವತ್ತಾರನೆಯ ಅಧ್ಯಾಯವು.

೧. ವಸಿಷ್ಠನು ಹೇಳಿದನು :—ಮೋಹಿನಿಯು ಮೋಹವನ್ನು ಬಿಟ್ಟು ದೇವಲೋಕಕ್ಕೆ ಹೋದಳು. ಅಲ್ಲಿ ದೇವದೂತನು ಪಾಪಿಯೇ! ನೀನು ಇಲ್ಲಿರಲು ಅರ್ಹಳಲ್ಲವೆಂದು ಹೇಳಿ ಅವಳನ್ನು ಗದರಿಸಿದನು.

೨. ಪಾಪವನ್ನು ಗಳಿಸಿದವಳು, ಅತ್ಯಂತ ದುರ್ಬುದ್ಧಿಯುಳ್ಳವಳು, ಪತಿದೂಷಣೆ ನಿರತಳೂ ಆಗಿ, ಏಕಾದಶೀವ್ರತವನ್ನು ಹಾಳುಮಾಡಿರುವ ನಿನಗೆ ದೇವಲೋಕದಲ್ಲಿ ವಾಸಮಾಡಲು ಅವಕಾಶವಿಲ್ಲ.

೩-೪. ಧರ್ಮವಿಮುಖರಾದವರಿಗೆ ನರಕವಾಸವೇ ಉಚಿತವೆಂದು ಜ್ಞಾನಿಗಳು ಸಮ್ಮತಿಸಿರುವರು ಎಂಬುದಾಗಿ ಅದ್ಭುತವಾದ ಕ್ರೂರವಚನವನ್ನು

ಬ್ರಹ್ಮದಂಡಪರಾಭೂತಾ ಸಂಪ್ರಾಪ್ತಾ ನರಕಂ ನೃಪ ।
ತತ್ರ ಧರ್ಮಾಜ್ಞಯಾ ಸಾ ತು ದೂತೈಃ ಸಂತಾಡಿತಾ ಚಿರಂ ॥ ೫ ॥

ಸರ್ವೇಷು ಕ್ರಮಶೋ ಗತ್ವಾ ನರಕೇಷು ನಿಪಾತಿತಾ ।
ಪಾಪೇ ಧರ್ಮಾಂಗದಃ ಪುತ್ರೋ ಘಾತಿತಃ ಪತಿಪಾಣಿನಾ ॥ ೬ ॥

ತ್ವಯಾ ಯತಸ್ತತೋ ಭುಂಕ್ಷ್ವ ಕೃತಕರ್ಮಫಲಂ ತ್ವಿಹ ।
ಪ್ರಜಾಹಿತಂ ಸ್ಥಿರಪ್ರಜ್ಞಂ ಮಹೇಂದ್ರವರುಣೋಪಮಂ ॥ ೭ ॥

ಸಪ್ತದ್ವೀಪಾಧಿಪಂ ಪುತ್ರಂ ಹತ್ವೇದೃಕ್ಫಲಭೋಗಿನೀ ।
ಪ್ರಾಕೃತಸ್ಯಾಪಿ ಪುತ್ರಸ್ಯ ಹಿಂಸಾಯಾಂ ಬ್ರಹ್ಮಹಾ ಭವೇತ್ ॥ ೮ ॥

ಕಿಂ ಪುನರ್ಧರ್ಮಯುಕ್ತಸ್ಯ ಪಾಪೇ ಧರ್ಮಾಂಗದಸ್ಯ ಚ ।
ಏವಂ ನಿರ್ಭರ್ತ್ಸಿತಾ ದೂತೈರ್ಯಮಸ್ಯ ನೃಪಸತ್ತಮ ॥ ೯ ॥

---

ವಾಯುವು ಮೋಹಿನಿಗೆ ಹೇಳಿ ದಂಡದಿಂದ ಹೊಡೆಸಿ ಯಾತನೆಯನ್ನು ಅನುಭವಿಸೆಂದನು.

ರಾಜನೇ! ಮೋಹಿನಿಯು ಈರೀತಿಯಾಗಿ ದೇವದೂತನಿಂದ ಹೊಡೆಯಿಸಿಕೊಂಡು ಬ್ರಹ್ಮದಂಡದಿಂದ ತಿರಸ್ಕೃತಳಾಗಿ ನರಕಕ್ಕೆ ಹೋದಳು. ಅಲ್ಲಿ ಬಹುಕಾಲ ಧರ್ಮರಾಜನ ಅಪ್ಪಣೆಪ್ರಕಾರ ದೂತರಿಂದ ಚೆನ್ನಾಗಿ ಶಿಕ್ಷಿತಳಾದಳು.

೬-೧೨. ಕ್ರಮವಾಗಿ ಸಕಲನರಕಗಳಿಗೂ ಹೋಗಿ ದುಃಖವನ್ನನುಭವಿಸಿದಳು. "ಪಾಪಿಯೇ! ನೀನು ಗಂಡನಕೈಯಿಂದ ಧರ್ಮಾಂಗದ ಕುಮಾರನನ್ನು ಕೊಲ್ಲಿಸಿರುವೆಯಾದಕಾರಣ ನೀನು ಮಾಡಿರುವ ದುಷ್ಕರ್ಮದ ಫಲವನ್ನು ಅನುಭವಿಸು. ಪ್ರಜೆಗಳಿಗೆ ಹಿತನು, ಸ್ಥಿರಬುದ್ಧಿಯು, ಮಹೇಂದ್ರ ಮತ್ತು ವರುಣನಿಗೆ ಸಮಾನನು, ಸಪ್ತದ್ವೀಪಾಧಿಪತಿಯೂ ಆದ ಮಗನನ್ನು ಕೊಲ್ಲಿಸಿ, ಇಂತಹ ದುಃಖವನ್ನು ಅನುಭವಿಸುವಳಾಗಿರುವೆ. ಧಾರ್ಮಿಕನಲ್ಲದ ಮಗನನ್ನು ಸಂಹರಿಸಿದರೂ ಸಹ ಬ್ರಹ್ಮಹತ್ಯೆಗೆ ಗುರಿಯಾಗುವನು. ಆದಕಾರಣ ಧರ್ಮಿಷ್ಠ

ಬುಭುಜೇ ಯಾತನಾಃ ಸರ್ವಾಃ ಕ್ರಮಶಃ ಶಮನೋದಿತಾಃ ।
ಬ್ರಹ್ಮದಂಡಹತಾಯಾಸ್ತು ದೇಹಸ್ಪರ್ಶೇನ ಯಾತನಾಃ ॥ ೧೦ ॥

ಜ್ವಲಿತಾಂಗಾ ಬಭೂವುಸ್ತಾ ಧಾರಣಾಯ ನ ತು ಕ್ಷಮಾಃ ।
ತತಸ್ತೇ ನರಕಾ ರಾಜನ್ ಧರ್ಮರಾಜಮುಪಾಗತಾಃ ॥ ೧೧ ॥

ಪ್ರೋಚುಃ ಪ್ರಾಂಜಲಯೋ ಭೀತಾಸ್ತದಂಗಸ್ಪರ್ಶಪೀಡಿತಾಃ ।
ದೇವದೇವ ಜಗನ್ನಾಥ ಧರ್ಮರಾಜ ದಯಾಂ ಕುರು ॥ ೧೨ ॥

ಇಮಾಂ ನಿಃಸಾರಯಾಶು ತ್ವಂ ಯಾತನಾಭ್ಯಃ ಸುಖಾಯ ನಃ ।
ಯಸ್ಯಾಃ ಸ್ಪರ್ಶನತೋ ನಾಥ ಭಸ್ಮಭೂತಾಃ ಕ್ಷಣಾದಹೋ ॥ ೧೩ ॥

ಭವಿಷ್ಯಾಮಸ್ತತಸ್ತ್ವೇನಾಂ ನರಕೇಭ್ಯೋ ವಿವಾಸಯ ।
ತಚ್ಛ್ರುತ್ವಾ ವಚನಂ ತೇಷಾಂ ಧರ್ಮರಾಜೋತಿವಿಸ್ಮಿತಃ ॥ ೧೪ ॥

---

ನಾದ ಧರ್ಮಾಂಗದನನ್ನು ಕೊಂದ ನೀನು ಪಾಪಿಯೆಂದು ಹೇಳುವುದೇನು" ಎಂಬುದಾಗಿ ಯಮದೂತರಿಂದ ಗದರಿಸಿಕೊಳ್ಳಲ್ಪಡುತ್ತ ಯಮರಾಜನು ಹೇಳಿದ ಪ್ರಕಾರ ಸಕಲಯಾತನೆಗಳನ್ನೂ ಕ್ರಮವಾಗಿ ಅನುಭವಿಸಿದಳು. ನರಕಗಳಾದರೋ ಬ್ರಹ್ಮದಂಡದಿಂದ ಹತಳಾದ ಮೋಹಿನಿಯ ದೇಹಸ್ಪರ್ಶದಿಂದ ಪ್ರಜ್ವಲಿಸಿದುವು. ಅವು ಅವಳನ್ನು ಧಾರಣೆಮಾಡುವುದಕ್ಕೂ ಯೋಗ್ಯವಾಗಲಿಲ್ಲ. ತರುವಾಯ ಆ ನರಕಾಧಿಪತಿಗಳು ಅಂತಹ ಮೋಹಿನಿಯ ಅಂಗಸ್ಪರ್ಶದಿಂದ ಪೀಡಿತರಾಗಿ ಭಯಪಟ್ಟು ಧರ್ಮರಾಜನಬಳಿಗೆ ಬಂದು ಕೈಮುಗಿದುಕೊಂಡು " ದೇವದೇವನು, ಜಗನ್ನಾಥನೂ ಆದ ಧರ್ಮರಾಜನೇ! ದಯೆಮಾಡು ಸ್ವಾಮಿಯೇ! ನಾವು ಸುಖವಾಗಿರುವುದಕ್ಕಾಗಿ ಇವಳನ್ನು ನರಕಗಳಿಂದ ಹೊರಕ್ಕೆ ಕಳುಹಿಸು. ಏನಾಶ್ಚರ್ಯ! ಇವಳ ಸಂಪರ್ಕದಿಂದ ಕ್ಷಣಮಾತ್ರದಲ್ಲಿ ನಾವು ಸುಟ್ಟು ಬೂದಿಯಾಗುವೆವು. ಆದಕಾರಣ ಇವಳನ್ನು ನರಕಗಳಿಂದ ಹೊರಡಿಸು" ಎಂಬುದಾಗಿ ಪ್ರಾರ್ಥಿಸಿದನು.

ಅವರಮಾತನ್ನು ಕೇಳಿ ಧರ್ಮರಾಜನು ಅತ್ಯಂತ ವಿಸ್ಮಿತನಾಗಿ, ತನ್ನ ದೂತರನ್ನು ಕುರಿತು " ಈ ಮೋಹಿನಿಯನ್ನು ನನ್ನಲೋಕದಿಂದ ಹೊರಕ್ಕೆ ಕಳು

ದೂತಾಃ ಸ್ವಾಃ ಪ್ರತ್ಯುವಾಚೇಯಂ ನಿಃಸಾರ್ಯತಾಂ ಮಮ ಮಂದಿರಾತ್ ।
ಯೋ ಬ್ರಹ್ಮದಂಡನಿರ್ದಗ್ಧಃ ಪುಮಾನ್ ಸ್ತ್ರೀ ವಾ ಚ ತಸ್ಕರಃ ॥ ೧೫ ॥

ತಸ್ಯ ಪಾಪಸ್ಯ ಸಂಸ್ಪರ್ಶಂ ನೇಚ್ಛಂತಿ ಯಾತನಾ ಮಮ ।
ತಸ್ಮಾದಿಮಾಂ ಮಹಾಪಾಪಾಂ ಭರ್ತುರ್ವಂಚನಲೋಪಿನೀಂ ॥ ೧೬ ॥

ಪುತ್ರಘ್ನೀಂ ಧರ್ಮಹಂತ್ರೀಂ ಚ ಬ್ರಹ್ಮದಂಡಹತಾಮಪಿ ।
ನಿಃಸಾರಯತ ಮೇ ನಾಪಿ ದೇಹೋ ಜ್ವಲತಿ ದರ್ಶನಾತ್ ॥ ೧೭ ॥

ಇತ್ಯುಕ್ತಾಸ್ತೇ ತದಾ ದೂತಾ ಧರ್ಮರಾಜೇನ ಭೂಪತೇ ।
ಪ್ರಹರಂತೋಽಸ್ತ್ರಶಸ್ತ್ರೈಶ್ಚ ಬಹಿಶ್ಚಕ್ರುರ್ಯಮಕ್ಷಯಾತ್ ॥ ೧೮ ॥

ತತಃ ಸಾ ದುಃಖಿತಾ ರಾಜನ್ ಮೋಹಿನೀ ಮೋಹಸಂಯುತಾ ।
ಪಾತಾಲಂ ಪ್ರಯಯೌ ತತ್ರ ಪಾತಾಲಸ್ಥೈರ್ನಿವಾರಿತಾ ॥ ೧೯ ॥

---

ಹಿಸಿರಿ! ಬ್ರಹ್ಮದಂಡದಿಂದ ದಹಿಸಲ್ಪಟ್ಟ ಪಾಪಿಯಾದ ತಸ್ಕರ ಪುರುಷ ಅಥವಾ ಸ್ತ್ರೀಯಸಂಪರ್ಕವನ್ನು ನನ್ನ ನರಕಗಳು ಬಯಸುವುದಿಲ್ಲ. ಆದಕಾರಣ ಗಂಡನಿಗೆ ವಂಚನೆಮಾಡಿ ಏಕಾದಶೀವ್ರತವನ್ನು ಹಾಳುಮಾಡಿದ, ಮಗನನ್ನು ಕೊಲ್ಲಿಸಿದ, ಧರ್ಮನಾಶಕಳಾದ, ಬ್ರಹ್ಮದಂಡದಿಂದ ಹತಳೂ ಆಗಿರುವ, ಮಹಾಪಾಪಿಯಾದ ಇವಳನ್ನು ಹೊರಕ್ಕೆ ಕಳುಹಿಸಿರಿ! ಇಂತಹವಳನ್ನು ನೋಡಿದರೆ ನನ್ನ ದೇಹವೂ ಉರಿಯುತ್ತದೆ" ಎಂದು ಹೇಳಿದನು.

೧೮. ಭೂಪಾಲನೇ! ಧರ್ಮರಾಜನು ಹೇಳಿದ ಈ ಮಾತನ್ನು ಕೇಳಿ ಆ ದೂತರು ಶಸ್ತ್ರಾಸ್ತ್ರಗಳಿಂದ ಹೊಡೆಯುತ್ತಾ ಅವಳನ್ನು ಯಮಾಲಯದಿಂದ ಹೊರಕ್ಕೆ ಕಳುಹಿಸಿದರು.

೧೯. ರಾಜನೇ! ತರುವಾಯ ಆ ಮೋಹಿನಿಯು ಮೋಹಯುಕ್ತಳಾಗಿ ಪಾತಾಳಲೋಕಕ್ಕೆ ಹೋದಳು. ಅಲ್ಲಿಯೂ ಸಹ ಆ ಲೋಕಪಾಲಕರು ಅವಳನ್ನು ತಡೆದರು.

ತತಸ್ತು ವ್ರೀಡಿತಾತ್ಯರ್ಥಂ ಮೋಹಿನೀ ಬ್ರಹ್ಮಣಃ ಸುತಾ |
ಜನಕಸ್ಯಾಂತಿಕಂ ಗತ್ವಾ ದುಃಖಂ ಸ್ವಂ ಸಂನ್ಯವೇದಯತ್ || ೨೦ ||

ಜನೇ ತನ್ನಾಸ್ತಿ ಮೇ ಸ್ಥಾನಂ ತ್ರೈಲೋಕ್ಯೇ ಸಚರಾಚರೇ |
ಯತ್ರ ಯತ್ರ ತು ಗಚ್ಛಾಮಿ ತತ್ರ ತತ್ರ ಕ್ಷಿಪಂತಿ ಮಾಂ || ೨೧ ||

ಅಹಂ ನಿರ್ವಾಸಿತಾ ಲೋಕೈರ್ಘಾತಯಿತ್ವಾಯುಧೈರ್ಭೃಶಂ |
ಭವದಾಜ್ಞಾಂ ಸಮಾದಾಯ ಗತಾ ರುಕ್ಮವಿಭೂಷಣಂ || ೨೨ ||

ಮಯಾ ವ್ಯವಸಿತಂ ಚೇದಂ ಸರ್ವಲೋಕವಿಗರ್ಹಿತಂ |
ಕ್ಲೇಶಯಿತ್ವಾ ತು ಭರ್ತಾರಂ ಪುತ್ರಂ ಹತ್ವಾ ವರಾಸಿನಾ || ೨೩ ||

ಸಂಧ್ಯಾವಲೀಂ ಕ್ಷೋಭಯಿತ್ವಾ ಪಿತಃ ಪ್ರಾಪ್ತಾ ದಶಾಮಿಮಾಂ |
ನ ಗತಿರ್ವಿದ್ಯತೇ ದೇವ ಪಾಪಾಯಾ ಮಮ ಸಾಂಪ್ರತಂ || ೨೪ ||

---

೨೦. ಅನಂತರ ಬ್ರಹ್ಮಪುತ್ರಿಯಾದ ಮೋಹಿನಿಯು ಬಹಳವಾಗಿ ನಾಚಿಕೆಗೊಂಡು ತನ್ನ ತಂದೆಯ ಬಳಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಂಡಳು.

೨೧. ಜನಕನೇ! ಸ್ಥಾವರಜಂಗಮಯುಕ್ತವಾದ ಮೂರುಲೋಕಗಳಲ್ಲಿಯೂ ನನಗೆ ಸ್ಥಾನವಿಲ್ಲ. ಎಲ್ಲೆಲ್ಲಿ ಹೋದರೂ ಅಲ್ಲೆಲ್ಲಾ ನನ್ನನ್ನು ಅಟ್ಟುತ್ತಿರುವರು.

೨೨-೨೪. ನಾನು ಆಯಾಯಾ ಲೋಕಪಾಲಕರಿಂದ ಆಯುಧಗಳಿಂದ ಹೊಡಸಿಕೊಳ್ಳಲ್ಪಟ್ಟು ಬಹಿಷ್ಕೃತಳಾಗಿರುವೆನು. ನಿನ್ನ ಅಪ್ಪಣೆಯನ್ನು ತೆಗೆದುಕೊಂಡು ರುಕ್ಮಾಂಗದನ ಬಳಿಗೆ ಹೋದೆನು. ಲೋಕಗಳಲ್ಲೆಲ್ಲಾ ನಿಂದಿತವಾದ ಈ ಕಾರ್ಯವು ನನ್ನಿಂದ ಮಾಡಲ್ಪಟ್ಟಿತು.

ತಂದೆಯೇ! ಗಂಡನನ್ನು ಹಿಂಸಿಸಿ, [illegible]

ವಿಶೇಷಾದ್ದ್ವಿಜಶಾಪೇನ ಜಾತಾಹಂ ದುಃಖಭಾಗಿನೀ ।
ವಿಪ್ರವಾಕ್ಯಹತಾನಾಂ ಚ ದಗ್ಧಾನಾಂ ಚಿತ್ರಭಾನುನಾ ॥ ೨೫ ॥

ದಿವಾಕೀರ್ತಿಹತಾನಾಂ ಚ ಭಕ್ಷಿತಾನಾಂ ಮೃಗಾದಿಭಿಃ ।
ಶತಹ್ರದಾವಿಪನ್ನಾನಾಂ ಮುಕ್ತಿದಾ ಸ್ವರ್ಣದೀ ಪಿತಃ ॥ ೨೬ ॥

ಯದಿ ತ್ವಂ ತ್ರಿದಶೈಃ ಸಾರ್ಧಂ ವಿಪ್ರಂ ತಂ ಶಾಪದಾಯಿನಂ ।
ಪ್ರಸಾದಯಸಿ ಮತ್ಪ್ರೀತ್ಯಾ ತರ್ಹಿ ಮೇ ವಿಹಿತಾ ಗತಿಃ ॥ ೨೭ ॥

ತಾಂ ತಥಾವಾದಿನೀಂ ರಾಜನ್ ಬ್ರಹ್ಮಾ ಲೋಕಪಿತಾಮಹಃ ।
ಶಿವೇಂದ್ರಧರ್ಮಸೂರ್ಯಾಗ್ನಿದೇವೇಶೈರ್ಮುನಿಭಿರ್ಯುತಃ ॥ ೨೮ ॥

ಮೋಹಿನೀಮಗ್ರತಃ ಕೃತ್ವಾ ಜಗಾಮ ದ್ವಿಜಸನ್ನಿಧೌ ।
ತತ್ರ ಗತ್ವಾ ಮಹೀಪಾಲ ಬ್ರಹ್ಮಾ ದೇವಾದಿಭಿರ್ವೃತಃ ॥ ೨೯ ॥

---

೨೫-೨೬. ಬ್ರಾಹ್ಮಣಶಾಪದಿಂದ ವಿಶೇಷವಾಗಿ ದುಃಖಕ್ಕೀಡಾಗಿರುವೆನು. ತಂದೆಯೆ! ಬ್ರಾಹ್ಮಣಶಾಪದಿಂದ ಹತರು, ಸೂರ್ಯನಿಂದ ದಹಿಸಲ್ಪಟ್ಟವರು, ಅಂತ್ಯಜರಿಂದ ಹತರು, ಮೃಗಾದಿಗಳಿಂದ ಭಕ್ಷಿತರು ಮತ್ತು ವಜ್ರಾಯುಧದಿಂದ ವಿಪತ್ತಿಗೀಡಾದವರು ಇವರುಗಳಿಗೆ ದೇವಗಂಗೆಯು ಮುಕ್ತಿದಾಯಕವು.

೨೭. ನೀನು ನನ್ನಲ್ಲಿನ ಅಭಿಮಾನದಿಂದ ದೇವತೆಗಳೊಡನೆ ಬಂದು ನನಗೆ ಶಾಪಕೊಟ್ಟಿರುವ ಬ್ರಾಹ್ಮಣನು ನನ್ನಲ್ಲಿ ಅನುಗ್ರಹಮಾಡುವಂತೆ ಮಾಡಿದರೆ ನನಗೆ ಗತಿಯನ್ನು ಕಲ್ಪಿಸಿದಂತಾಗುತ್ತದೆಂದು ಹೇಳಿಕೊಂಡಳು.

೨೮-೩೩. ರಾಜನೇ! ಕೂಡಲೇ ಲೋಕಪಿತಾಮಹನಾದ ಬ್ರಹ್ಮನು ಹಾಗೆ ಹೇಳಿದ ಮೋಹಿನಿಯನ್ನು ಮುಂದೆಮಾಡಿಕೊಂಡು ರುದ್ರ, ಇಂದ್ರ, ಧರ್ಮ, ಸೂರ್ಯ, ಅಗ್ನಿ ಮುಂತಾದ ದೇವೇಶರು ಮತ್ತು ಮುನಿಗಳಿಂದ ಸಹಿತನಾಗಿ ಬ್ರಾಹ್ಮಣಸನ್ನಿಧಿಗೆ ಹೊರಟನು. ಅಲ್ಲಿಗೆ ಹೋಗಿ ಬ್ರಹ್ಮನು ದೇವಾದಿಗಳಿಂದ ಪರಿವೃತನಾಗಿ ಮಹಾಗೌರವದಿಂದ ತಾನು ಬ್ರಾಹ್ಮಣನಿಗೆ ನಮಸ್ಕಾರ ಮಾಡಿದನು,

ಮಹತಾ ಗೌರವೇಣಾಪಿ ನಮಶ್ಚಕ್ರೇ ಸ್ವಯಂ ವಿಧಿಃ |
ಭೂಪ ರುದ್ರಾದಿದೇವೈಸ್ತು ಪೂಜ್ಯೋ ಮಾನ್ಯಃ ಪಿತಾಮಹಃ || ೩೦ ||

ಮೋಹಿನೀಪ್ರೀತಯೇ ಮುಗ್ಧಃ ಸ್ವಯಂ ಚಕ್ರೇ ನಮಸ್ಕ್ರಿಯಾಂ |
ಕಾರ್ಯೇ ಮಹತಿ ಸಂಪ್ರಾಪ್ತೇ ಹ್ಯಸಾಧ್ಯೇ ಭುವನತ್ರಯೇ || ೩೧ ||

ನ ದೂಷಿತಂ ಭವೇದ್ಭೂಪ ಯವಿಷ್ಠಸ್ಯಾಭಿವಾದನಂ |
ಸ ದ್ವಿಜೋ ವೇದವೇದಾಂಗಪಾರಗಸ್ತಪಸಿ ಸ್ಥಿತಃ || ೩೨ ||

ಸಂಪ್ರೇಕ್ಷ್ಯ ಲೋಕಕರ್ತಾರಂ ದೇವೈಃ ಸಹ ಸಮಾಗತಂ |
ಸಮುತ್ಥಾಯ ನಮಶ್ಚಕ್ರೇ ಬ್ರಹ್ಮಾಣಂ ತಾನ್ಮುನೀನ್ ಸುರಾನ್ || ೩೩ ||

ವಾಸಯಾನಾಸ ಭಕ್ತ್ಯಾ ಚ ಸ್ತುತಿಂ ಚಕ್ರೇಬ್ಜಜನ್ಮನಃ |
ತತಃ ಪ್ರಸನ್ನೋ ಭಗವಾನ್ ಲೋಕಕರ್ತಾ ಜಗದ್ಗುರುಃ || ೩೪ ||

---

ದೊರೆಯೇ ! ರುದ್ರಾದಿದೇವತೆಗಳಿಂದ ಪೂಜ್ಯನು, ಲೋಕಮಾನ್ಯನೂ ಆದ ಪಿತಾಮಹನು ಮೋಹಿನಿಯ ಸಂತೋಷಕ್ಕೋಸ್ಕರವಾಗಿ ಮುಗ್ಧನಾಗಿ ತಾನೇ ನಮಸ್ಕಾರವನ್ನು ಮಾಡಿದನು.

ಮೂರುಲೋಕಗಳಲ್ಲಿಯೂ ಅಸಾಧ್ಯವಾದ ಮಹಾಕಾರ್ಯವನ್ನು ಸಾಧಿಸುವ ಪ್ರಸಂಗವೊದಗಿದಾಗ ಚಿಕ್ಕವನಿಗೆ ನಮಸ್ಕಾರಮಾಡುವುದು ದೂಷ್ಯವಲ್ಲ.

ಆಗ ವೇದವೇದಾಂಗಪಾರಂಗತನಾದ, ತಪಸ್ಸಿನಲ್ಲಿ ತೊಡಗಿದ್ದ ಆ ಬ್ರಾಹ್ಮಣನು ದೇವತೆಗಳೊಡನೆ ಬಂದಿರುವ ಲೋಕಕರ್ತೃವಾದ ಬ್ರಹ್ಮನನ್ನು ನೋಡಿ ಎದ್ದು ಬ್ರಹ್ಮ, ಮುನಿಗಳು ಮತ್ತು ದೇವತೆಗಳಿಗೆ ನಮಸ್ಕಾರ ಮಾಡಿದನು.

೩೪. ಅವರಿಗೆ ಆಸನಕೊಟ್ಟು ಕೂಡಿಸಿ ಭಕ್ತಿಯಿಂದ ಪದ್ಮಭವನನ್ನು ಸ್ತೋತ್ರಮಾಡಿದನು. ಆದರಿಂದ ಲೋಕಕರ್ತನು, ಜಗದ್ಗುರುವೂ ಆದ ಭಗವಂತನು ಪ್ರಸನ್ನನಾದನು.

ತೇ ದ್ವಿಜಂ ಪ್ರಾರ್ಥಯಾಮಾಸುರ್ಮೋಹಿನ್ಯರ್ಥೇ ನೃಪಾರ್ಚಕಂ |
ತಾತ ವಿಪ್ರ ಸದಾಚಾರ ಪರಲೋಕೋಪಕಾರಕ || ೩೫ ||

ಕೃಪಾಂ ಕುರು ಕೃಪಾಸಿಂಧೋ ಮೋಹಿನೀಗತಿದೋ ಭವ |
ಮಯಾ ಸಂಪ್ರೇಷಿತಾ ಬ್ರಹ್ಮನ್ ರುಕ್ಮಾಂಗದವಿಮೋಹನೇ || ೩೬ ||

ಸುತಾ ಮೇ ಯಮಲೋಕಂ ತು ಶೂನ್ಯಂ ದೃಷ್ಟ್ವಾ ಚ ಮಾನದ |
ವೈಕುಂಠಂ ಸಂಕುಲಂ ಪ್ರೇಕ್ಷ್ಯ ಲೋಕೈಃ ಸರ್ವೈರ್ನಿರಾಕುಲೈಃ || ೩೭ ||

ಮನಸೋತ್ಪಾದಿತಾ ದೇವೀ ದೇವಾನಾಂ ಹಿತಕಾರಿಣೀ |
ನಿಶಾಮಯ ಧರಾದೇವ ಯದ್ಬ್ರವೀಮಿ ತವಾಗ್ರತಃ || ೩೮ ||

ಗತಿಂ ಧರ್ಮಸ್ಯಾತಿಸೂಕ್ಷ್ಮಾಂ ಲೋಕಕಲ್ಯಾಣಕಾರಿಣೀಂ |
ಅನಯಾ ನಿಕಷಾಭಾಗ್ಯಾ ಪರೀಕ್ಷ್ಯ ಸ್ವರ್ಣಭೂಷಣಃ || ೩೯ ||

---

೩೫-೩೭. ದೊರೆಯೇ! ಆ ದೇವತೆಗಳು ರಾಜಪುರೋಹಿತನಾದ ಬ್ರಾಹ್ಮಣನನ್ನು ಮೋಹಿನಿಗೋಸ್ಕರವಾಗಿ ಈರೀತಿ ಪ್ರಾರ್ಥಿಸಿದರು.

ಅಪ್ಪಾ! ಸದಾಚಾರಸಂಪನ್ನನು, ಲೋಕೋಪಕಾರಕನೂ ಆದ ಬ್ರಾಹ್ಮಣನೇ! ದಯಾಸಾಗರನೇ! ದಯೆಮಾಡು! ಮೋಹಿನಿಗೆ ಸದ್ಗತಿಯನ್ನು ಕೊಡುವವನಾಗು.

ಬ್ರಾಹ್ಮಣನೇ! ರುಕ್ಮಾಂಗದನ ಹರಿದಿನವ್ರತಾಚರಣೆಯಿಂದ ಯಮಲೋಕವು ಬರಿಯದಾಗಿದ್ದುದನ್ನು ಮತ್ತು ವ್ಯಸನರಹಿತರಾಗಿ ಸಮಸ್ತಜನರೂ ವೈಕುಂಠದಲ್ಲಿ ತುಂಬಿರುವುದನ್ನೂ ನೋಡಿ ನನ್ನ ಪುತ್ರಿಯಾದ ಈ ಮೋಹಿನಿಯನ್ನು ರುಕ್ಮಾಂಗದನನ್ನು ಮೋಹಪಡಿಸಲು ನಾನೇ ಕಳುಹಿಸಿದೆನು.

೩೮-೪೨. ಭೂದೇವನೇ! ಮೋಹಿನೀದೇವಿಯು ನನ್ನ ಮಾನಸಪುತ್ರಿಯು. ದೇವತೆಗಳಿಗೆ ಹಿತವನ್ನಾಚರಿಸಿದವಳು. ನಾನು ಹೇಳುವುದನ್ನು ಕೇಳು.

ಸದಾರಃ ಸಸುತೋ ಬ್ರಹ್ಮನ್ ಪ್ರಾಪಿತೋ ಹರಿಮಂದಿರಂ ।
ರಾಜ್ಞ್ಯಾ ಪ್ರಕೃಷ್ಟಯಾ ಭಕ್ತ್ಯಾ ಹರಿವಾಸರಪಾಲನಾತ್ ॥ ೪೦ ॥

ಕೃತಂ ಶೂನ್ಯಂ ಯಮಸ್ಥಾನಂ ಲಿಪಿಮಾರ್ಜನಕರ್ಮಣಾ ।
ದೇವಾಪಕಾರೋ ವಿಪ್ರರ್ಷೇ ನ ಕ್ಷಮೋ ಬಾಹುಜನ್ಮನಾ ॥ ೪೧ ॥
ಭೂಸುರಾಣಾಂ ವಿಶೇಷೇಣ ಯತಸ್ತೇ ತತ್ಸಹಾಯಕಾಃ ॥ ೪೨ ॥

ನ ಪ್ರಾಪ್ಯತೇ ಸಾಂಖ್ಯವಿದಾ ತು ಯಚ್ಚ
ನಾಷ್ಟಾಂಗಯೋಗೇನ ತು ಭಕ್ತಿಗಮ್ಯಂ ।
ತತ್ಪ್ರಾಪಿತಂ ಭೂಸುರ ಭೂಪಭರ್ತುರ್
ನಿರ್ಜಸ್ಯ ಪುತ್ರಸ್ಯ ತಥಾ ಸಪತ್ನ್ಯಾಃ ॥ ೪೩ ॥

---

ರುಕ್ಮಾಂಗನು ಒರೆಗಲ್ಲಿನಂತಿದ್ದ ಈ ಮೋಹಿನಿಯಿಂದ ಲೋಕಕಲ್ಯಾಣವನ್ನುಂಟುಮಾಡುವ, ಅತ್ಯಂತಸೂಕ್ಷ್ಮವಾದ ಧರ್ಮಗತಿಯನ್ನು ಪರೀಕ್ಷಿಸಿ ಪತ್ನೀ ಪುತ್ರಸಹಿತನಾಗಿ ಹರಿಮಂದಿರವನ್ನು ದೊಂದಿಸಲ್ಪಟ್ಟನು.

ರಾಜನು ಉತ್ಕೃಷ್ಟಭಕ್ತಿಯಿಂದ ಹರಿದಿನವ್ರತವನ್ನು ಪಾಲಿಸಿ ಯಮಲಿಪಿಯನ್ನು ಅಳಿಸಿದುದರಿಂದ ಯಮಾಲಯವು ಬರಿಯದಾಯಿತು.

ವಿಪ್ರರ್ಷಿಯೇ! ದೇವತೆಗಳಿಗೆ ಮತ್ತು ಅವರಿಗೆ ಸಹಾಯಕರಾದ ಭೂಸುರರಿಗೆ ವಿಶೇಷವಾಗಿ ರಾಜನಿಂದ ಅಪಕಾರವಾಗುವುದು ಸಹ್ಯವಲ್ಲ.

೪೩. ಬ್ರಾಹ್ಮಣನೇ! ಸಾಂಖ್ಯಜ್ಞಾನ ಮತ್ತು ಅಷ್ಟಾಂಗಯೋಗಗಳಿಂದ ಹೊಂದಲಶಕ್ಯವಾದ, ಭಕ್ತಿಯಿಂದಲೇ ಪಡೆಯಲರ್ಹವಾದ ಸ್ಥಾನವನ್ನು ಇವಳು ತನ್ನ ಪತಿಯಾದ ರಾಜ, ಪುತ್ರ ಮತ್ತು ಸೌತಿಯರಿಗೂ ಸಹ ಲಭಿಸುವಂತೆ ಮಾಡಿರುವಳು.

ಯತ್ಪುಣ್ಯಶೀಲಸ್ಯ ನೃಪಸ್ಯ ವಿಪ್ರ
ಶಿರೋಮಣೇರಾಚರಿತಂ ಪ್ರತೀಪಂ ।
ತತ್ಪಾಪವೇಗೇನ ಬಭೂವ ವಿದ್ರುತಾ
ಭಸ್ಮಾವಶೇಷಾ ತವ ಶಾಪದಗ್ಧಾ ॥ ೪೪ ॥

ದೇವಾರ್ಥಮೇಷಾ ಭವವರ್ಧನಾರ್ಥಂ
ನೃಪೋಪಕಾರಾಯ ಚ ಸಂಪ್ರವೃತ್ತಾ ।
ನ ಸ್ವಾರ್ಥಕಾಮಾ ಲಭತೇವಮಾನಂ
ಕಥಂ ದ್ವಿಜಾತೋಽಪಕೃತಿಂ ಕ್ಷಮಸ್ವ ॥ ೪೫ ॥

ದಯಾಂ ಕುರುಷ್ವ ಪ್ರಶಮಂ ಭಜಸ್ವ
ಪಿಷ್ಟಸ್ಯ ಪೇಷೋ ನ ಹಿ ನೀತಿಯುಕ್ತಂ ।
ಶಾಪಪ್ರದಾನೇನ ನಿಪಾತಿತೇಯಂ
ಕುರು ಪ್ರಸಾದಂ ಗತಿದೋ ಭವಸ್ವ ।
ಯಸ್ಮಿನ್ ಕೃತೇ ಬ್ರಾಹ್ಮಣ ಮೋಹಿನೀಯಂ
ಬುದ್ಧಿಂ ತ್ಯಜೇತ್ ಕ್ರೂರತರಾಂ ತ್ವಮೀಜ್ಯ ॥ ೪೬ ॥

---

೪೪. ವಿಪ್ರನೇ! ಪುಣ್ಯವಂತನು, ಭಕ್ತಶಿರೋಮಣಿಯೂ ಆದ ರುಕ್ಮಾಂಗದ ರಾಜನಿಗೆ ತಾನು ಮಾಡಿದ ಅಪಕಾರದಿಂದುಂಟಾದ ಪಾಪವೇಗದಿಂದ ಈ ಮೋಹಿನಿಯು ತಪ್ತಳಾಗಿ ನಿನ್ನ ಶಾಪದಿಂದ ದಹಿಸಲ್ಪಟ್ಟು ಬೂದಿಯಾಗಿರುವಳು.

೪೫. ಇವಳು ದೇವತೆಗಳಿಗಾಗಿ ಸಂಸಾರವನ್ನು ವೃದ್ಧಿಗೊಳಿಸಲೋಸುಗ ಮತ್ತು ರಾಜನ ಉಪಕಾರಕ್ಕಾಗಿಯೂ ಪ್ರವರ್ತಿಸಿದಳು. ಸ್ವಾರ್ಥಕಾಮಳಲ್ಲವಾದಕಾರಣ ಇವಳು ಅವಮಾನಕ್ಕೆ ಹೇಗೆ ಭಾಗಿಯಾದಾಳು? ಆದಕಾರಣ ದ್ವಿಜನೇ! ಇವಳು ಮಾಡಿರುವ ಅಪಕಾರವನ್ನು ಕ್ಷಮಿಸು.

೪೬. ದಯಮಾಡು! ಶಾಂತಿಯನ್ನು ತಾಳು! ಹಿಟ್ಟನ್ನೇ ಪುನಃ ಹಿಟ್ಟುಮಾಡುವುದು ನ್ಯಾಯಸಮ್ಮತವಲ್ಲ. ನೀನು ಶಾಪಕೊಟ್ಟುದರಿಂದ ಇವಳು

ಸ ಏವಮುಕ್ತಃ ಕಮಲಾಸನೇನ
ವಿಮೃಶ್ಯ ಬುದ್ಧ್ಯಾ ವಿಸಸರ್ಜ ಕೋಪಂ ।
ಉವಾಚ ದೇವಂ ತ್ರಿದಶಾಧಿನಾಥಂ
ವಿಮೋಹಿನೀದೇಹಕೃತಂ ದ್ವಿಜೇಂದ್ರಃ ॥ ೪೭ ॥

ಬಹುಪಾಪಯುತಾ ದೇವ ಮೋಹಿನೀ ತನಯಾ ತವ ।
ನ ಲೋಕೇಷು ಸ್ಥಿತಿಸ್ತಸ್ಯಾತ್ ಪ್ರಾಣಿಭಿಃ ಸಂಕುಲೇಷು ಚ ॥ ೪೮ ॥

ಮಯಾ ವಿಮೃಶ್ಯ ಸುಚಿರಂ ಮೋಹಿನ್ಯರ್ಥೇ ವಿಚಿಂತಿತಂ ।
ತದ್ವಾಸ್ಯಾಮಿ ತವ ಪ್ರೀತ್ಯಾ ತ್ವಂ ಹಿ ಪೂಜ್ಯತರೋ ಮಮ ॥ ೪೯ ॥

---

ದುರ್ಗತಿಯನ್ನು ಹೊಂದಿರುವಳು. ಇವಳಿಗೆ ಅನುಗ್ರಹಮಾಡು ! ಸದ್ಗತಿಪ್ರದನಾಗು !

ಬ್ರಾಹ್ಮಣನೇ ! ಈ ಮೋಹಿನಿಯು ಏನುಮಾಡಿದರೆ ಅತ್ಯಂತಕ್ರೂರವಾದ ಬುದ್ಧಿಯನ್ನು ಬಿಡುವಳೋ ಅದನ್ನು ನೀನು ಆಜ್ಞಾಪಿಸು ಎಂದು ಹೇಳಿದನು.

೪೭. ಹೀಗೆ ಬ್ರಹ್ಮನು ಹೇಳಿದುದನ್ನು ಕೇಳಿ ಆ ಬ್ರಾಹ್ಮಣನು ಬುದ್ಧಿಯಿಂದ ಯುಕ್ತಾಯುಕ್ತ ವಿಮರ್ಶೆಮಾಡಿ ಕೋಪವನ್ನು ಬಿಟ್ಟನು. ದ್ವಿಜಶ್ರೇಷ್ಠನು ಮೋಹಿನಿಯು ಮಾಡಿದುದನ್ನೆಲ್ಲಾ ದೇವಾಧಿನಾಥನಾದ ಚತುರ್ಮುಖದೇವನಿಗೆ ಹೇಳಿದನು.

೪೮. ದೇವಾ ! ನಿನ್ನಮಗಳಾದ ಮೋಹಿನಿಯು ಬಹುಪಾಪವನ್ನಾಚರಿಸಿರುವಳಾದಕಾರಣ ಇವಳು ಪ್ರಾಣಿಗಳಿಂದ ಆವರಿಸಲ್ಪಟ್ಟಿರುವ ಯಾವಲೋಕಗಳಲ್ಲಿಯೂ ಇರುವುದಕ್ಕರ್ಹಳಲ್ಲ.

೪೯-೫೦. ಸುರೇಶ್ವರನೇ ! ನಾನು ಬಹುಕಾಲ ವಿಚಾರಮಾಡಿ ಮೋಹಿನಿಗೋಸ್ಕರವಾಗಿ ಚಿಂತಿಸಿದೆನು. ನೀನು ನನಗೆ ಪೂಜ್ಯತರನು. ನಿನ್ನನ್ನು ಸಂತೋಷಪಡಿಸುವುದಕ್ಕಾಗಿ ನಿನ್ನ ಮತ್ತು ನನ್ನ ವಚನವೂ ಸಹ ಸತ್ಯವಾಗಿ

ಯಥಾ ತವ ವಚಃ ಸತ್ಯಂ ಮಮ ಚಾಪಿ ಸುರೇಶ್ವರ |
ದೇವಕಾರ್ಯಂ ಚ ಭವಿತಾ ಮೋಹಿನೀಕೃತಮೇವ ಚ || ೫೦ ||

ಯನ್ನಾಕ್ರಾಂತಂ ಹಿ ಭೂತೌಘೈಸ್ತಸ್ಥಾನೇ ಮೋಹಿನೀಸ್ಥಿತಿಃ |
ಜಂಗಮಾಜಂಗಮೈರ್ಭೂಮಿರ್ವ್ಯಾಪ್ತಾ ದ್ವೀಪವತೀ ಸದಾ || ೫೧ ||

ತಲಾನಿ ಚಾಪಿ ದೈತ್ಯಾದ್ಯೈರಾಕಾಶಃ ಪಕ್ಷಿಪೂರ್ವಕೈಃ |
ನಾಕೇ ಸುಕೃತಿಭಿರ್ಜೀವೈರ್ನರಕಾಃ ಪಾಪಕರ್ಮಭಿಃ || ೫೨ ||

ಝುಷಾದ್ಯೈಃ ಸಾಗರಾ ವ್ಯಾಪ್ತಾ ನೈಷ್ವಸ್ಪೃಶ್ಯಾಸ್ಥಿತಿಸ್ತತಃ |
ತತೋ ಬ್ರಹ್ಮಾ ಸುರೈಃ ಸರ್ವೈಃ ಸಂಮಂತ್ರ್ಯ ನೃಪಸತ್ತಮ || ೫೩ ||

ಉವಾಚ ಮೋಹಿನೀಂ ದೇವೀಂ ನಾಸ್ತಿ ಸ್ಥಾನಂ ತವ ಕ್ವಚಿತ್ |
ತಚ್ಛ್ರುತ್ವಾ ಮೋಹಿನೀ ವಾಕ್ಯಂ ಪಿತುರಾಜ್ಞಾವಿಧಾಯಿನೀ || ೫೪ ||

---

ಮೋಹಿನಿಯು ಮಾಡಿದ ದೇವಕಾರ್ಯವೂ ಸಿದ್ಧಿಸುವಂತಹ ರೀತಿಯಲ್ಲಿ ಮೋಹಿನಿಗೆ ಗತಿಯನ್ನು ಕೊಡುವೆನು.

೫೧. ಯಾವಭೂತವೂ ಇಲ್ಲದ ಸ್ಥಳದಲ್ಲಿ ಮೋಹಿನಿಯು ಇರಲಿ! ಆದರೆ ದ್ವೀಪಸಹಿತವಾದ ಭೂಮಿಯು ಯಾವಾಗಲೂ ಚರಾಚರವಸ್ತುಗಳಿಂದ ವ್ಯಾಪಿಸಲ್ಪಟ್ಟದೆ.

೫೨-೫೪. ಕೆಳಗಿನ ಲೋಕಗಳು ದೈತ್ಯಾದಿಗಳಿಂದಲೂ, ಆಕಾಶವು ಪಕ್ಷಿ ಮುಂತಾದುವುಗಳಿಂದಲೂ, ಸ್ವರ್ಗವು ಪುಣ್ಯವಂತರಿಂದಲೂ, ನರಕಗಳು ಪಾಪಕರ್ಮಿಗಳಾದ ಜೀವರಿಂದಲೂ, ಸಮುದ್ರವು ಮೀನು ಮುಂತಾದುವುಗಳಿಂದಲೂ ಆಕ್ರಮಿಸಲ್ಪಟ್ಟಿದೆ. ಆದಕಾರಣ ಈ ಸ್ಥಾನಗಳಲ್ಲಿ ಅಸ್ಪೃಶ್ಯಳಾದ ಇವಳಿಗೆ ವಾಸವುಯುಕ್ತವಲ್ಲವೆಂದು ದ್ವಿಜನು ಹೇಳಲು ಅನಂತರ ಬ್ರಹ್ಮನು ತನ್ನ ಜೊತೆಯಲ್ಲಿದ್ದ ಸಕಲ ದೇವತೆಗಳೊಡನೆ ಆಲೋಚಿಸಿ ಮೋಹಿನೀದೇವಿಯನ್ನು ಕುರಿತು ನಿನಗೆ ಎಲ್ಲಿಯೂ ಸ್ಥಾನವಿಲ್ಲವೆಂದು ಹೇಳಿದನು.

**ಉವಾಚ ಪ್ರಣತಾ ಸರ್ವಾನ್ ಹರಿವಾಸರನಾಶಿನೀ |**
**ಪುರೋಧಸಾ ಸಮೇತಾನಾಂ ದೇವಾನಾಂ ಲೋಕಸಾಕ್ಷಿಣಾಂ || ೫೫ ||**

**ಭವತಾಂ ತ್ರಿದಶಶ್ರೇಷ್ಠಾ ಏಷ ಬದ್ಧೋ ಮಯಾಂಜಲಿಃ |**
**ಪ್ರಣಿಪಾತಶತೇನಾಪಿ ಪ್ರಸನ್ನೇನ ಹೃದಾ ಸುರಾಃ || ೫೬ ||**

**ದಾತವ್ಯಂ ಯೊಚಿತಂ ಮಹ್ಯಂ ಸರ್ವೇಷಾಂ ಪ್ರೀತಿಕಾರಕಂ |**
**ಏಕಾದಶ್ಯಾಃ ಪ್ರಭಾವೇಣ ಸರ್ವೇಷಾಂ ಪಾಪಿನಾಂ ಗತಿಃ || ೫೭ ||**

**ಸಾಧ್ಯತಿ ತಾಂ ಸುರಶ್ರೇಷ್ಠಾ ವರ್ಧಿತುಂ ವೋ ಪ್ರಯೋಜನಂ |**
**ಪತಿಃ ಸಪತ್ನೀ ಪುತ್ರಶ್ಚ ಮಯಾ ವೈಕುಂಠಗಾಃ ಕೃತಾಃ || ೫೮ ||**

---

ಅದನ್ನು ಕೇಳಿ ತಂದೆಯ ಅಪ್ಪಣೆಯನ್ನು ನಡೆಯಿಸಿದ, ಹರಿದಿನನಾಶಕಳಾದ ಮೋಹಿನಿಯು ಮಾತನಾಡಿದಳು.

ದೇವವರ್ಯರೇ! ಪುರೋಹಿತಸಹಿತರಾದ, ಲೋಕಸಾಕ್ಷಿ ದೇವತೆಗಳಾದ ನಿಮಗೆ ಕೈಮುಗಿದುಕೊಂಡು ನೂರಾರು ಸಾಷ್ಟಾಂಗನಮಸ್ಕಾರಗಳನ್ನು ಮಾಡುವೆನು!

ಸುರರೇ! ಅದರಿಂದಲಾದರೂ ಪ್ರಸನ್ನಚಿತ್ತರಾಗಿ ಸರ್ವರಿಗೂ ಪ್ರೀತಿಕಾರಕವಾದ ನನ್ನ ಬೇಡಿಕೆಯನ್ನು ಪೂರ್ತಿಗೊಳಿಸಿರಿ. ಏಕಾದಶಿಯ ಪ್ರಭಾವದಿಂದ ಸಕಲಪಾಪಗಳಿಗೂ ಗತಿಯು ಸಿದ್ಧಿಸುವುದು.

ಸುರವರ್ಯರೇ! ಅದನ್ನು ಹಾಳುಮಾಡಿ ನಿಮ್ಮ ಪ್ರಯೋಜನವನ್ನು ಸಾಧಿಸಲು ನಾನು ನನ್ನ ಪತಿ ಪುತ್ರ ಸೌತಿಯರನ್ನು ವೈಕುಂಠಕ್ಕೆ ಹೋಗುವಂತೆ ಮಾಡಿದೆನು.

ಭೂಲೋ೯ಕೇ ವಿಧವಾದ್ಯಾಹಂ ವರ್ತಾಮಿ ಭವತಾಂ ಕೃತೇ ।
ಯಥಾ ಹರಿದಿನಂ ದುಷ್ಟಂ ಜಾಯತೇ ಮಮ ಮಾನದಾಃ ॥ ೫೯ ॥

ಏತತ್ಪ್ರಯಾಚೇ ದದತ ಸ್ವಾರ್ಥಾರ್ಥಂ ತದ್ಧಿ ನಾನ್ಯಥಾ ॥ ೬೦ ॥

ಇತಿ ಶ್ರೀನಾರದೀಯಪುರಾಣೋತ್ತರಭಾಗೇ ಮೋಹಿನೀ
ಚರಿತೇ ಷಟ್ತ್ರಿಂಶತ್ತಮೋಽಧ್ಯಾಯಃ

---

೫೯-೬೦. ಈಗ ವಿಧವೆಯಾದ ನಾನು ಭೂಲೋಕದಲ್ಲಿದ್ದು ನಿಮಗಾಗಿ ಹರಿದಿನವು ದುಷ್ಟವಾಗುವರೀತಿಯಲ್ಲಿ ವರ್ತಿಸುವೆನು.

ನನಗೆ ಮಾನದಾಯಕರಾದ ಸುರಾದಿಗಳೇ! ನಾನು ಬೇಡುವ ಇದನ್ನು ನಿಮ್ಮ ಪ್ರಯೋಜನಸಿದ್ಧಿಗಾಗಿಯೇ ಕೊಡಿರಿ! ಇದರಿಂದ ನನಗೇನೂ ಪ್ರಯೋಜನವಿಲ್ಲವೆಂದು ಹೇಳಿದಳು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀ ಚರಿತ್ರೆಯೊಳು
ಮೂವತ್ತಾರನೆಯ ಅಧ್ಯಾಯವು ಮುಗಿದುದು.

## ವಿಷಯಸಂಗ್ರಹ.

ಮೋಹಿನಿಯು ದೇವಲೋಕಕ್ಕೆ ಹೋಗಿ ಅಲ್ಲಿ ಪಾಪಿಯಾದ ನಿನಗೆ ಇಲ್ಲಿರಲು ಅವಕಾಶವಿಲ್ಲವೆಂದು ನಿರಾಕರಿಸಲ್ಪಟ್ಟು ಅಲ್ಲಿಂದ ನರಕಗಳಿಗೆ ಹೋಗಿ ಅಲ್ಲಿ ನಾನಾವಿಧವಾದ ದುಃಖಗಳನ್ನನುಭವಿಸಿ ಅಲ್ಲಿಂದಲೂ ತಿರಸ್ಕೃತಳಾಗಿ ಪಾತಾಳಾದಿಲೋಕಗಳಿಗೂ ಹೋದಳು. ಎಲ್ಲಿಯೂ ಅವಳಿಗೆ ಸ್ಥಾನವು ಸಿಕ್ಕಲಿಲ್ಲ. ಎಲ್ಲಾ ಕಡೆಗಳಿಂದಲೂ ಅವಳನ್ನು ಹೊಡೆದಟ್ಟಿದರು. ಕೊನೆಗೆ ಅವಳು ತನ್ನ ತಂದೆಯಾದ ಚತುರ್ಮುಖನ ಬಳಿಗೆ ಬಂದು ತನ್ನ ದುರವಸ್ಥೆಯನ್ನು ಹೇಳಿಕೊಂಡು ದ್ವಿಜಶಾಪಪ್ರಕಾರವನ್ನು ತಿಳಿಸಿ ಅವನಿಂದ ಅನುಗ್ರಹವನ್ನು ಮಾಡಿಸಬೇಕೆಂದು ಪ್ರಾರ್ಥಿಸಿದಳು. ಆಗ ಬ್ರಹ್ಮನು ರುದ್ರಾದಿದೇವೇಶರೊಡನೆ ವಿಮಾನಮಾರ್ಗವಾಗಿ ಭೂಲೋಕದಲ್ಲಿ ದ್ವಿಜನಿದ್ದಲ್ಲಿಗೆ ಬಂದು ಅವನನ್ನು ಮೋಹಿನಿಗೆ ಅನುಗ್ರಹ ಮಾಡಬೇಕೆಂದು ಪ್ರಾರ್ಥಿಸಲು ಆಗ ಅವನು ಭೂತಗಳಿಲ್ಲದೆಡೆಯಲ್ಲಿ ಅವಳಿಗೆ ಸ್ಥಾನವನ್ನು ಕೊಡಬಹುದು. ಆದರೆ ಎಲ್ಲಾಸ್ಥಾನಗಳೂ ಭೂತಗಳಿಂದ ಆಕ್ರಮಿಸಲ್ಪಟ್ಟಿರುವುದರಿಂದ ಇವಳಿಗೆ ಸ್ಥಾನವಿಲ್ಲವೆಂದನು. ಅದನ್ನು ಕೇಳಿ ಬ್ರಹ್ಮನು ಮೋಹಿನಿಗೆ ಹಾಗೆಯೇ ಹೇಳಲು ಆಗ ಮೋಹಿನಿಯು "ದೇವತೆಗಳ ಕಾರ್ಯಕ್ಕಾಗಿಯೇ ನಾನು ಇಷ್ಟು ಶ್ರಮಿಸಿರುವೆನು, ಈಗಲೂ ನಿಮ್ಮ ಕಾರ್ಯವನ್ನು ಸಾಧಿಸುವುದಕ್ಕಾಗಿಯೇ ನೀವೆಲ್ಲರೂ ಭೂಲೋಕದಲ್ಲಿ ನನಗೆ ಸ್ಥಾನವನ್ನು ಕೊಡಿಸಿರಿ, ಅಲ್ಲಿದ್ದು ನಿಮ್ಮ ಕಾರ್ಯವನ್ನು ಸಾಧಿಸುವೆನು" ಎಂದು ಹೇಳಿದಳು.

## ಸಪ್ತತ್ರಿಂಶೋऽಧ್ಯಾಯಃ

### ಮೋಹಿನ್ಯುವಾಚ

ಏಕಾದಶೀಸಮಂ ದೇವಾಃ ಪಾವನಂ ನಾಪರಂ ಭವೇತ್ ।
ಯಯಾ ಪೂತಾ ಮಹಾಪಾಪಾ ಗಚ್ಛಂತಿ ಹರಿಮಂದಿರಂ ॥ ೧ ॥

ತತ್ಸಮೀಪೇ ಮಮ ಸ್ಥಾನಂ ಯುಕ್ತಂ ಭಾತಿ ವಿಚಾರ್ಯತಾಂ ।

### ದೇವಾ ಊಚುಃ

ವೇಧೋ ನಿಶೀಥೇ ದೇವಾನಾಮುಪಕಾರಾಯ ಮೋಹಿನಿ ॥ ೨ ॥

ಸೂರ್ಯೋದಯೇ ಸುರಾಣಾಂ ಚ ಹರಿಣಾ ಪರಿಕಲ್ಪಿತಃ ।
ಪಾರಣಂ ಚ ತ್ರಯೋದಶ್ಯಾಮುಪವಾಸವಿನಾಶನಂ ॥ ೩ ॥

---

### ಮೂವತ್ತೇಳನೆಯ ಅಧ್ಯಾಯವು

೧. ಮೋಹಿನಿಯು ಹೇಳಿದಳು :—ದೇವತೆಗಳೇ! ಏಕಾದಶಿಗೆ ಸಮಾನವಾದ ಪವಿತ್ರವ್ರತವು ಬೇರೆ ಯಾವುದೂ ಇಲ್ಲ. ಏಕಾದಶಿಯನ್ನಾಚರಿಸಿ ಪರಿಶುದ್ಧರಾದವರು ಹರಿಮಂದಿರಕ್ಕೆ ಹೋಗುವರು.

೨-೩. ಅದರ ಹತ್ತಿರದಲ್ಲಿ ನನಗೆ ಸ್ಥಾನಕೊಡುವುದು ಉಚಿತವಾಗಿದೆಯೆಂದು ತೋರುತ್ತದೆ. ವಿಚಾರಮಾಡೋಣವಾಗಲಿ ಎಂದು ಮೋಹಿನಿಯು ಹೇಳಿದಳು.

ದೇವತೆಗಳು ಹೇಳಿದರು :—ಮೋಹಿನೀ! ದೇವತೆಗಳಿಗೆ ಉಪಕಾರಮಾಡುವುದಕ್ಕಾಗಿ ಹರಿಯು ನಿಶೀಥವೇಧೆ ಮತ್ತು ಸೂರ್ಯೋದಯವೇಧೆಗಳನ್ನು ಕಲ್ಪಿಸಿರುವನು. ದ್ವಾದಶಿಯನ್ನುಲ್ಲಂಘಿಸಿ ತ್ರಯೋದಶಿಯಲ್ಲಿ ಪಾರಣೆಮಾಡುವುದು ಉಪವಾಸನಾಶಕವು.

ಮಹಾದ್ವಾದಶಿಕಾ ಹ್ಯಷ್ಟೌ ಯಾಃ ಸ್ಮೃತಾ ವೈಷ್ಣವಾಗಮೇ ।
ತಾಸ್ತು ಹ್ಯೇಕಾದಶೀಭಿನ್ನಾ ಉಪೋಷ್ಯಂತೇ ಚ ವೈಷ್ಣವೈಃ ॥ ೪ ॥

ಏಕಾದಶೀವ್ರತಂ ಭಿನ್ನಂ ವೈಷ್ಣವಾನಾಂ ಮಹಾತ್ಮನಾಂ ।
ನಿತ್ಯಂ ಪಕ್ಷದ್ವಯೋಃ ಪ್ರೋಕ್ತಂ ವಿಧಿನಾ ತ್ರಿದಿನಾತ್ಮಕೇ ॥ ೫ ॥

ಸಾಯಂ ಪ್ರಾತಸ್ತ್ಯಜೇದ್ಭುಕ್ತಿಂ ಕ್ರಮಾತ್ಪೂರ್ವಾಪರಾಹ್ಣಯೋಃ ।
ಏಕಾದಶೀ ಯದಾ ಭಿನ್ನಾ ಉಪೋಷ್ಯಂ ಹಿ ಪರೇಽಹನಿ ।
ದ್ವಾದಶ್ಯಾಂ ಹಿ ವ್ರತಂ ಕಾರ್ಯಂ ನಿರಂಬು ಸಮುಪೋಷಣಂ ॥ ೬ ॥

ಲಂಘನೇ ತ್ವಸಮರ್ಥಾನಾಂ ಜಲಂ ಶಾಕಂ ಫಲಂ ಪಯಃ ।
ನೈವೇದ್ಯಂ ವಾ ಹರೇಃ ಪ್ರೋಕ್ತಂ ಸ್ವಾಹಾರಾತ್ಪಾದಸಂಮಿತಂ ॥ ೭ ॥

---

೪. ವೈಷ್ಣವಾಗಮದಲ್ಲಿ ಎಂಟು ಮಹಾದ್ವಾದಶಿಗಳೆಂದು ವಿಹಿತವಾಗಿವೆ. ಏಕಾದಶೀ ಭಿನ್ನವಾದ ಆ ದ್ವಾದಶಿಗಳಲ್ಲಿ ಮಾತ್ರ ವೈಷ್ಣವರು ಉಪವಾಸಮಾಡುತ್ತಾರೆ.

೫. ಎರಡುಪಕ್ಷಗಳಲ್ಲಿಯೂ ದಿನತ್ರಯಾತ್ಮಕವಾದ ಎಂದರೆ ದಶಮೀ, ಏಕಾದಶೀ ಮತ್ತು ದ್ವಾದಶೀ ಎಂಬ ಮೂರುದಿನಗಳಲ್ಲಿ ಆಚರಿಸಬೇಕಾದ ಏಕಾದಶೀವ್ರತವು ಭಿನ್ನವಾಗಿ ಮಹಾತ್ಮರಾದ ವೈಷ್ಣವರಿಗೆ ನಿತ್ಯವೆಂದು ವಿಧ್ಯುಕ್ತವಾಗಿದೆ.

೬. ಏಕಾದಶಿಯ ದಿನದಲ್ಲಿ ಸಾಯಂಕಾಲ ಪ್ರಾತಃಕಾಲಗಳಲ್ಲಿ ಭೋಜನವನ್ನು ಬಿಡಬೇಕು. ಏಕಾದಶೀ ತಿಥಿಯು ಕ್ರಮವಾಗಿ ಪೂರ್ವಾಪರಾಹ್ಣಗಳಲ್ಲಿ ವಿದ್ಧವಾದಾಗ ಮುಂದಿನದಿನ ಉಪವಾಸಮಾಡಬೇಕು. ಎಂದರೆ ದ್ವಾದಶೀ ದಿನದಲ್ಲಿ ನಿರ್ಜಲೋಪವಾಸ ವ್ರತವನ್ನು ಮಾಡಬೇಕು.

೭. ಸಂಪೂರ್ಣವಾಗಿ ಉಪವಾಸಮಾಡಲಶಕ್ತರಾದವರು ಹರಿಗೆ ನೈವೇದ್ಯಮಾಡಿದ ನೀರು, ಶಾಕ, ಹಣ್ಣು ಮತ್ತು ಹಾಲುಗಳನ್ನು ತನ್ನ ಕ್ಲಪ್ತವಾದ ಆಹಾರದಲ್ಲಿ ನಾಲ್ಕನೆಯ ಒಂದು ಭಾಗದಷ್ಟು ತೆಗೆದುಕೊಳ್ಳಬಹುದು.

ಸ್ಮಾರ್ತಾಃ ಸೂರ್ಯೋದಯೇ ವಿದ್ಧಾಂ ತ್ಯಜಂತ್ಯೇಕಾದಶೀಂ ಸತಿ ।
ನಿಷ್ಕಾಮಾ ಮಧ್ಯರಾತ್ರೇ ಚ ವಿದ್ಧಾಂ ಮುಂಚಂತಿ ಯಾಮ್ಯಯಾ ॥ ೮ ॥

ಸರ್ವೇಷ್ವಪಿ ತು ಲೋಕೇಷು ವಿದಿತಾ ದಶಮೀ ತಿಥಿಃ ।
ಯಮಸ್ಯ ತಸ್ಯಾಃ ಪ್ರಾಂತೇ ತು ಸ್ಥಿತಿಃ ಕಾರ್ಯಾ ತ್ವಯಾನಘೇ ॥ ೯ ॥

ಏತೇನ ದೇವಕಾರ್ಯಂ ಚ ಸಿದ್ಧಂ ಭವತಿ ಶೋಭನೇ ।
ಸೂರ್ಯೇಂದುಚಾರಾ ತಿಥ್ಯಾಸ್ತು ದಶಮ್ಯಾಃ ಪ್ರಾಂತಗಾಮಿನೀ ॥ ೧೦ ॥

ಭವ ತೀರ್ಥಾನಿ ಚೈವ ತ್ವಂ ಸ್ವಾಘನಾಶಾಯ ಸಂಚರ ।
ಅರುಣೋದಯಮಾರಭ್ಯ ಯಾವತ್ ಸೂರ್ಯೋದಯೋ ಭವೇತ್ ॥೧೧॥

ತದಂತಸ್ತ್ವಂ ವ್ರತೇ ಪ್ರಾಪ್ತಾ ಲಭಸ್ವೈಕಾದಶೀಫಲಂ ।
ಯಃ ಕಶ್ಚಿತ್ಕುರುತೇ ವಿದ್ಧಂ ತ್ವಯಾ ಹ್ಯೇಕಾದಶೀವ್ರತಂ ॥ ೧೨ ॥

---

೮. ಸ್ಮೃತ್ಯುಕ್ತಮಾರ್ಗಾವಲಂಬಿಗಳು ಸೂರ್ಯೋದಯಕಾಲದಲ್ಲಿ ವಿದ್ಧವಾದ ಏಕಾದಶಿಯನ್ನು ಬಿಡುವರು. ನಿಷ್ಕಾಮರು ಮಧ್ಯರಾತ್ರಿವಿದ್ಧೈಕಾದಶಿಯನ್ನು ತ್ಯಜಿಸುವರು.

೯. ಸಕಲಲೋಕಗಳಲ್ಲಿಯೂ ದಶಮೀ ತಿಥಿಯು ನರಕದ ಅಂತರಾಳವು. ಪಾಪರಹಿತಳೇ ? ನೀನು ಅದರ ಕೊನೆಯಭಾಗದಲ್ಲಿ ವಾಸಮಾಡಬೇಕು.

೧೦. ಇದರಿಂದ ದೇವತೆಗಳ ಕೆಲಸವೂ ಸಿದ್ಧವಾಗುವುದು. ಆದಕಾರಣ ಭದ್ರೇ ! ನೀನು ಸೂರ್ಯೇಂದುಚಾರಳಾಗಿ ದಶಮಿಯ ಕೊನೆಯಭಾಗಕ್ಕೆ ಹೋಗು.

೧೧-೧೩. ನಿನ್ನ ಪಾಪವನ್ನು ನಾಶಪಡಿಸಿಕೊಳ್ಳಲು ತೀರ್ಥಯಾತ್ರೆ ಮಾಡು. ಅರುಣೋದಯವಾದಂದಿನಿಂದ ಸೂರ್ಯೋದಯವಾಗುವುದರೊಳಗೆ ನೀನು ವ್ರತವಲ್ಲಿ ಪ್ರಾಪ್ತಳಾಗಿ ಏಕಾದಶಿಯ ಫಲವನ್ನು ಹೊಂದು.

ಸ ತೂಪಕಾರಕಸ್ತುಭ್ಯಂ ಭವಿಷ್ಯತಿ ಸುರಪ್ರಿಯೇ ।
ಮುಹೂರ್ತದ್ವಯಮಾತ್ರಂ ತು ಜ್ಞೇಯಂ ಚಾತ್ರಾರುಣೋದಯಂ ॥೧೩॥

ಮುಹೂರ್ತಾಃ ಪಂಚದಶ ಚ ಸ್ಮೃತಾ ರಾತ್ರೇರ್ದಿನಸ್ಯ ಚ ।
ಜ್ಞೇಯಾಸ್ತೇ ಹ್ರಸ್ವದೀರ್ಘತ್ವೇ ತ್ರೈರಾಶಿಕವಿಧಾನತಃ ॥ ೧೪ ॥

ತ್ರಯೋದಶಾನ್ಮುಹೂರ್ತಾತ್ತು ರಾತ್ರೇರೂರ್ಧ್ವಸಮಾಗತಾ ।
ಲಬ್ಧ್ವೋಪವಾಸಿನಾಂ ಪುಣ್ಯಂ ಸ್ವಸ್ಥಾ ಭವ ಶುಚಿಸ್ಮಿತೇ ॥ ೧೫ ॥

ಯಮಸಂಸ್ಥಾಪನಾರ್ಥಾಯ ವೈಕುಂಠಧ್ವಂಸನಾಯ ಚ ।
ಪಾಖಂಡಾನಾಂ ವಿವೃದ್ಧ್ಯರ್ಥಂ ಪಾಪಸಂಚಯನಾಯ ಚ ॥ ೧೬ ॥
ದತ್ತಂ ತೇ ಮೋಹಿನಿ ಸ್ಥಾನಂ ಪ್ರತ್ಯೂಷಸಮಯಾಂಕಿತಂ ॥ ೧೭ ॥

---

ಸುರಪ್ರಿಯೇ? ವಿದ್ಧೈಕಾದಶೀವ್ರತವನ್ನಾಚರಿಸುವವನು ನಿನಗೆ ಉಪಕಾರಕನಾಗುವನು. ಈ ಸಂದರ್ಭದಲ್ಲಿ ಎರಡು ಮುಹೂರ್ತಕಾಲವನ್ನು ಅರುಣೋದಯವೆಂದು ತಿಳಿಯಬೇಕು.

೧೪. ರಾತ್ರಿ ಮತ್ತು ಹಗಲೂ ಸಹ ಹದಿನೈದು ಮುಹೂರ್ತಗಳ ಪರಿಮಿತಿಯುಳ್ಳದೆಂದು ತಿಳಿಯಬೇಕು. ಅವುಗಳ ವೃದ್ಧಿಹ್ರಾಸಗಳನ್ನು ತ್ರೈರಾಶಿಕ ವಿಧಾನದಿಂದ ನಿರ್ಧರಿಸಿಕೊಳ್ಳಬೇಕು.

೧೫. ಮಂದಹಾಸಯುಕ್ತಳಾದ ಮೋಹಿನಿಯೇ! ನೀನು ರಾತ್ರಿ ಹದಿಮೂರನೆಯ ಮುಹೂರ್ತವು ಕಳೆದಮೇಲೆ ಪ್ರಾಪ್ತಳಾಗಿ ಅಂತಹ ಉಪವಾಸಿಗಳ ಪುಣ್ಯವನ್ನು ತೆಗೆದುಕೊಂಡು ಸ್ವಸ್ಥಚಿತ್ತಳಾಗು.

೧೬-೧೭. ಮೋಹಿನಿಯೇ! ಯಮನನ್ನು ಅವನ ಅಧಿಕಾರದಲ್ಲಿ ನಿಲ್ಲಿಸುವುದಕ್ಕಾಗಿಯೂ, ಜನರು ವೈಕುಂಠವನ್ನು ಹೊಂದದಂತೆ ಮಾಡುವುದಕ್ಕಾಗಿಯೂ, ಪಾಷಂಡಿಗಳನ್ನು ವೃದ್ಧಿಗೊಳಿಸಲೋಸುಗವೂ, ಅವರಿಗೆ ಪಾಪವನ್ನು ಸಂಘಟಿಸುವುದಕ್ಕೋಸ್ಕರವೂ ಸಹ ನಿನಗೆ ಬೆಳಗಿನಜಾವದ ಸಮಯದಲ್ಲಿ ಸ್ಥಾನವನ್ನು ಕೊಟ್ಟಿರುವೆನು.

ವಿದ್ಧಂ ತ್ವಯೈಕಾದಶಿಕಾವ್ರತಂ ಯೇ
ಕುರ್ವಂತಿ ಕರ್ತಾರ ಇಹ ಪ್ರಯತ್ನಾತ್ ।
ತೇಷಾಂ ಭವೇದ್ಯತ್ಸುಕೃತಂ ಶುಭೇ ಸಿತಂ
ಭುಂಕ್ಷ್ವ ಪ್ರಸನ್ನಾ ಭವ ಭೂಸುರೇ ನೈ ॥ ೧೮ ॥

ಏವಂ ಪ್ರದಿಷ್ಟಾ ಕಮಲಾಸನಾದ್ಯೈಃ
ಸಾ ಮೋಹಿನೀ ಹೃಷ್ಟತರಾ ಬಭೂವ ।
ಮೇನೇ ಕೃತಾರ್ಥಂ ನಿಜಜೀವಿತಂ ಚ
ಸ್ವೀಯಪ್ರತೀತಾರ್ಥನಿಷೇವಣೇನ ॥ ೧೯ ॥

ಸಂಸಾಧಿತಂ ಕಾರ್ಯಮಿದಂ ಸುರಾಣಾಂ
ಭಸ್ಮಾವಶೇಷಂ ಹಿ ಗತೇಽಪಿ ದೇಹೇ ।
ಚೈತನ್ಯಮಾತ್ರೇ ಪವನಾತ್ಮಕೇಽಸ್ಮಿನ್
ಸಂಮಾರ್ಜಿತೋ ಭೂಪಕೃತಸ್ತು ಪಂಥಾಃ ॥ ೨೦ ॥

---

೧೮. ಭೂಸುರಯೇ! ದಶಮಿಯ ಪ್ರಾಂತಭಾಗದಿಂದ ವಿದ್ಧವಾದ ಏಕಾದಶೀವ್ರತವನ್ನು ಮೋಹದಿಂದ ಪ್ರಯತ್ನಪೂರ್ವಕವಾಗಿ ಮಾಡುವವರಿಗೆ ಸಂಭವಿಸುವ ಪುಣ್ಯವನ್ನು ಭೋಗಿಸಿ ನೀನು ಸಂತುಷ್ಟಳಾಗು.

೧೯. ಈರೀತಿಯಾಗಿ ಬ್ರಹ್ಮಾದಿದೇವತೆಗಳಿಂದ ಅನುಗ್ರಹಿಸಲ್ಪಟ್ಟ ಆ ಮೋಹಿನಿಯು ಬಹುಸಂತೋಷಪಟ್ಟಳು. ಮತ್ತು ತನಗೆ ನಿಯಮಿತವಾದ ಕೆಲಸವನ್ನು ಮಾಡಿದುದರಿಂದ ತನ್ನ ಜೀವನವು ಕೃತಾರ್ಥವಾಯಿತೆಂದು ತಿಳಿದಳು.

೨೦. ನನ್ನ ಶರೀರವು ಸುಟ್ಟು ಬೂದಿಯಾಗಿದ್ದರೂ, ವಾಯುರೂಪವಾದ ಈ ಚೈತನ್ಯ ಮಾತ್ರದಿಂದಲೇ ದೇವತೆಗಳ ಈ ಕಾರ್ಯವು ಸಾಧಿಸಲ್ಪಟ್ಟಿತು. ರುಕ್ಮಾಂಗದರಾಜಕೃತವಾದ ಮಾರ್ಗವು ಅಳಿಸಲ್ಪಟ್ಟಿತು.

ನೀತಂ ಮಯಾ ಚಾತ್ಮಕೃತಂ ಹಿ ವಾಕ್ಯಂ
ಪ್ರಹೃಷ್ಟಯಾ ವೈ ಯದುದಾಹೃತಂ ಹಿ ।
ಏವಂ ವಿಮೃಶ್ಯ ಕ್ಷಿತಿಪಾಲದೇವಾ೯
ಪ್ರಣಮ್ಯ ಹೃಷ್ಟಾ ಚ ಪುರೋಧಸಂ ಸ್ವಂ ॥ ೨೧ ॥

ಪ್ರಾಂತೇ ಸ್ಥಿತಾ ಸೂರ್ಯವಿಹೀನಸಂಜ್ಞೇ
ಕಾಲೇ ದಶಮ್ಯಾ ಜನಮೋಹನಾಯ ।
ಕೃಛ್ರಾಂತರೂಪಾ ನ ದಿನಂ ಚ ಭುಂಕ್ತೇ
ಪ್ರಕೃಷ್ಟರೂಪಾ ನರಕಾಯ ನೄಣಾಂ ॥ ೨೨ ॥

ಪ್ರಾಂತಸ್ಥಿತಾಂ ತಾಂ ರವಿಜೋ ನಿರೀಕ್ಷ್ಯ
ಪ್ರಹೃಷ್ಟವಕ್ತ್ರೋ ವಚನಂ ಜಗಾದ ।
ತ್ವಯಾ ಪ್ರತಿಷ್ಠಾ ಮಮ ಚಾರುನೇತ್ರೇ
ಕೃತಾತ್ರ ಲೋಕೇ ಪುನರೇವ ಸಮ್ಯಕ್ ।
ವಿಭೇದಿತೋ ರುಕ್ಮವಿಭೂಷಣಸ್ಯ
ಮನ್ಯೇ ಹಿ ಸಂಸ್ಥಃ ಪಟಹಸ್ಯ ಘೋಷಃ ॥ ೨೩ ॥

---

೨೧-೨೨. ಸಂತುಷ್ಟಳಾದ ನನ್ನಿಂದ ಉಕ್ತವಾದ ಮಾತು ಮೂರ್ತಿಮತ್ತಾಗಿ ನೆರವೇರಿಸಲ್ಪಟ್ಟಿತು ಎಂಬೀರೀತಿಯಾಗಿ ಯೋಚಿಸಿ ಸಂತೋಷಪಟ್ಟು ಮೋಹಿನಿಯು ಭೂಪಾಲಕರಾದ ದೇವತೆಗಳನ್ನೂ ತನ್ನ ಪುರೋಹಿತನನ್ನೂ ಸಹ ನಮಸ್ಕರಿಸಿ ಜನರನ್ನು ಮೋಹಪಡಿಸುವುದಕ್ಕೋಸ್ಕರ ದಶಮಿಯ ಕೊನೆಯ ಭಾಗವಾದ ಸೂರ್ಯನಿಲ್ಲದ ಉಷಃಕಾಲದಲ್ಲಿ ಸನ್ನಿಹಿತಳಾಗಿ ಆ ದಿನ ಭೋಜನಮಾಡದಿರುವವನಿಗೆ ದುಃಖಾಂತರೂಪಳಾಗಿ ಜನರಿಗೆ ನರಕಸಾಧಕವಾದ ಪ್ರಕೃಷ್ಟಸ್ವರೂಪವನ್ನು ತಾಳಿದಳು.

೨೩. ಸೂರ್ಯಪುತ್ರನಾದ ಯಮನು ದಶಮಿಯ ಪ್ರಾಂತಭಾಗಸ್ಥಿತಳಾದ ಆ ಮೋಹಿನಿಯನ್ನು ನೋಡಿ ಪ್ರಸನ್ನಮುಖನಾಗಿ ಹೀಗೆ ಮಾತನಾಡಿದನು. ಸುಂದರನಯನಳಾದ ಮೋಹಿನಿಯೇ! ನೀನು ನನ್ನನ್ನು ಈ ಲೋಕದಲ್ಲಿ ಪುನಃ ಪ್ರತಿಷ್ಠೆಮಾಡಿರುವೆ. ನಿನ್ನಿಂದ ರುಕ್ಮಾಂಗದರಾಜನ ಪಟಹಘೋಷವು ಚೆನ್ನಾಗಿ ಭೇದಿಸಲ್ಪಟ್ಟಿತೆಂದು ತಿಳಿದಿರುವೆನು.

ದೃಷ್ಟೇ ಕಾರ್ಯೇ ಜನಃ ಸರ್ವಃ ಪ್ರತ್ಯಯಂ ಕುರುತೇ ತ್ವಿತಿ || ೨೪ ||
ಸೂರ್ಯೋದಯಸ್ಪೃಶಾ ಹ್ಯೇಷಾ ದಶಮೀ ಗರ್ಹಿತಾ ಸದಾ |
ಅಸ್ಪೃಷ್ಟಮುದಯಂ ನ್ಯೂಣಾಂ ಮೋಹನಾಯ ಭವಿಷ್ಯತಿ || ೨೫ ||

ವಿಹಾಯತಾಂ ಯತ್ರಿಯಯೋಗಭುಕ್ತಿಂ
ಪಾದಸ್ಥಿತಾ ಸಾಪಿ ಹ್ಯದೃಶ್ಯರೂಪಾ |
ಸತ್ಯಂ ಹಿ ತೇ ನಾಮ ವಿಶಾಲನೇತ್ರೇ
ಯನ್ಮೋಹಿನೀತ್ಯೇವ ಜನೋ ಬ್ರವೀತಿ || ೨೬ ||

ವಿಮೋಹಯಿತ್ವಾ ಹಿ ಜನಂ ಸಮಸ್ತಂ
ಪಟೇ ಮದೀಯೇ ಲಿಪಿತಾಂ ಕರೋಷಿ |
ಇತ್ಯೇವ ಮುಕ್ತ್ವಾ ತನಯೋ ವಿವಸ್ವತಃ
ಪ್ರಣಮ್ಯ ತಾಂ ಬ್ರಹ್ಮಸುತಾಂ ಪ್ರಹೃಷ್ಟಃ || ೨೭ ||

---

೨೪. ಕಾರ್ಯವು ಕಂಡುಬಂದಮೇಲೆ ಸಕಲಜನರೂ ವಿಶ್ವಾಸ ಮಾಡುತ್ತಾರೆ.

೨೫-೨೬. ಸೂರ್ಯೋದಯ ಸ್ಪರ್ಶವಾದ ಈ ದಶಮಿಯು ಯಾವಾಗಲೂ ನಿಂದಿತವು. ಉದಯವ್ಯಾಪಿಯಲ್ಲವೆಂದು ಜನಗಳಿಗೆ ಮೋಹವನ್ನುಂಟುಮಾಡಿ ಅಂತಹದಿನದಲ್ಲಿ ಭೋಜನಾದಿಗಳನ್ನು ಬಿಡಿಸಿ ಪ್ರಾಂತಭಾಗಸ್ಥಿತಳಾದ ಆ ಮೋಹಿನಿಯು ಅದೃಶ್ಯರೂಪಳಾಗಿರುವಳು.

ವಿಶಾಲಾಕ್ಷಿಯೇ ! ಜನಗಳು ಹೇಳುವಂತಹ ಮೋಹಿನೀ ಎಂಬ ನಿನ್ನ ನಾಮಧೇಯವು ಅನ್ವರ್ಥಕವು.

೨೭-೩೦. ನೀನು ಸಮಸ್ತಜನರನ್ನೂ ಮೋಹಪಡಿಸಿ ನನ್ನ ಪಟದಲ್ಲಿ ಲಿಪಿಗಳುಂಟಾಗುವಂತೆ ಮಾಡಿರುವೆ ಎಂಬುದಾಗಿ ಹೇಳಿ, ಸೂರ್ಯಪುತ್ರನಾದ

ಜಗಾಮ ದೇವೈಃ ಸಹ ನಾಕಲೋಕಂ
ಕರೇ ಗೃಹೀತ್ವಾ ಲಿಪಿಲೇಖಿತಾರಂ ।
ಗತೇಷು ದೇವೇಷು ವಿಮೋಹಿನೀ ಸಾ
ಬ್ರಹ್ಮಾಣಮಾಸಾದ್ಯ ಸುರಾಸುರೇಶಂ ॥ ೨೮ ॥

ವಿಜ್ಞಾಪಯಾಮಾಸ ಪಿತಃ ಪುರೋಧಾ
ಮಮಾಯಮತ್ಯುಗ್ರತರಶ್ಚ ಕೋಪಾತ್ ।
ದಗ್ಧಂ ಶರೀರಂ ಮಮ ಲೋಕನಾಥ
ಪುನಃ ಪ್ರಪತ್ಸ್ಯೇಥ ತಥಾ ಕುರುಷ್ವ ॥ ೨೯ ॥

ವಿಮೋಹಿತಂ ಚೈವ ಜಗನ್ಮಯೇದಂ
ಪ್ರಾಂತೇ ಸಮಾಸ್ಥಾಯ ಯಮಸ್ಯ ತಿಥ್ಯಾಃ ।
ಜಿತೋ ಹಿ ರಾಜ್ಞಾ ಶಮನಃ ಪುರಾದ್ಯ
ಕೃತೋ ಜಯೀ ತಾತ ತವ ಪ್ರಭಾವಾತ್ ॥ ೩೦ ॥

---

ಯಮನು ಸಂತೋಷಪೂರ್ವಕವಾಗಿ ಬ್ರಹ್ಮಪುತ್ರಿಯಾದ ಆ ಮೋಹಿನಿಗೆ ನಮಸ್ಕಾರಮಾಡಿ ಲಿಪಿಯನ್ನು ಬರೆಯುವ ಚಿತ್ರಗುಪ್ತನ ಕೈಹಿಡಿದುಕೊಂಡು ದೇವತೆಗಳೊಡನೆ ಸ್ವರ್ಗಲೋಕಕ್ಕೆ ಹೊರಟನು.

ದೇವತೆಗಳು ಹೋದಬಳಿಕ ಆ ಮೋಹಿನಿಯು ಸುರಾಸುರೇಶನಾದ ಬ್ರಹ್ಮನಬಳಿಗೆ ಬಂದು, ತಂದೆಯೇ! ಅತಿಕ್ರೂರನಾದ ಪುರೋಹಿತನು ಕೋಪದಿಂದ ನನ್ನ ಶರೀರವನ್ನು ಸುಟ್ಟಿರುವನು. ಲೋಕನಾಥನೇ! ನನಗೆ ಪುನಃ ಆ ಶರೀರವು ಲಭಿಸುವಂತೆ ಅನುಗ್ರಹಮಾಡು. ನರಕಸಾಧನವಾದ ದಶಮೀತಿಥಿಯ ಪ್ರಾಂತಭಾಗದಲ್ಲಿದ್ದು ನಾನು ಈ ಜಗತ್ತನ್ನು ಮೋಹಪಡಿಸುವೆನು. ಪೂರ್ವದಲ್ಲಿ ರಾಜನಿಂದ ಯಮನು ಪರಾಜಿತನಾಗಿದ್ದನು. ತಾತಾ! ನಿನ್ನ ಪ್ರಭಾವದಿಂದ ಅವನು ಈಗ ಜಯಶೀಲನಾಗಿರುವನು.

ತವ ಕೃತ್ಯಮಿದಂ ತಾತ ಯತ್ಪುನರ್ದೇಹಧಾರಿಣೀ ।
ಭೂಯಾಮಹಂ ಜಗನ್ನಾಥಂ ಬ್ರಾಹ್ಮಣಂ ಸಾಂತಯಸ್ವ ಭೋಃ ॥ ೩೧ ॥

ತಚ್ಛ್ರುತ್ವಾ ಮೋಹಿನೀವಾಕ್ಯಂ ಬ್ರಹ್ಮಾ ಲೋಕವಿಧಾನಕೃತ್ ।
ಬ್ರಾಹ್ಮಣಂ ಸಾಂತ್ವಯಾಮಾಸ ಪುನರೇವ ಸುತಾಕೃತೇ ॥ ೩೨ ॥

ವಸೋ ತಾತ ನಿಬೋಧೇದಂ ಯದ್ಬ್ರವೀಮಿ ಹಿತಾವಹಂ ।
ತವ ಚಾಸ್ಯಾ ಮಹಾಭಾಗ ಸರ್ವಲೋಕಹಿತಾಯ ಚ ॥ ೩೩ ॥

ತ್ವಯೇಯಂ ಮೋಹಿನೀ ಕೋಪಾತ್ಕೃತಾ ಭಸ್ಮಾವಶೇಷಿತಾ ।
ಪುನಃ ಶರೀರಂ ಯಾಚೇತ ತದಾಜ್ಞಾಂ ದೇಹಿ ಮಾನದ ॥ ೩೪ ॥

ಮತ್ಪುತ್ರೀ ತವ ಯಾಜ್ಯೇಯಂ ದುರ್ಗತಿಂ ತಾತ ಗಚ್ಛತಿ ।
ತ್ವಯಾ ಮಯಾ ಚ ಸಂಪಾಲ್ಯಾ ಕೃತಕಾರ್ಯಾ ತಪಸ್ವಿನೀ ॥ ೩೫ ॥

---

೩೧. ತಾತ! ಪುನಃ ನಾನು ಶರೀರವನ್ನು ಧರಿಸುವಂತೆ ಮಾಡುವುದು ನಿನ್ನ ಕರ್ತವ್ಯವು. ಓ ಜಗನ್ನಾಥಾ! ಬ್ರಾಹ್ಮಣನನ್ನು ಸಮಾಧಾನಪಡಿಸು ಎಂಬುದಾಗಿ ವಿಜ್ಞಾಪಿಸಿಕೊಂಡಳು.

೩೨. ಮೋಹಿನಿಯು ಆ ಮಾತನ್ನು ಕೇಳಿ ಲೋಕವಿಧಾನ ಕರ್ತನಾದ ಆ ಬ್ರಹ್ಮನು ಮಗಳಿಗೋಸ್ಕರವಾಗಿ ಬ್ರಾಹ್ಮಣನನ್ನು ಸಂತೈಸಿಸಿದನು.

೩೩. ತಾತ! ವಸುವೇ! ನಿನಗೆ, ಈ ಮೋಹಿನಿಗೆ ಮತ್ತು ಸಕಲಲೋಕಕ್ಕೂ ಸಹ ಅನುಕೂಲವಾಗುವುದಕ್ಕಾಗಿ ನಾನು ಹೇಳುವ ಹಿತವಚನವನ್ನು ಲಾಲಿಸು-

೩೪. ಮಹಾಭಾಗ! ನೀನು ಈ ಮೋಹಿನಿಯನ್ನು ಕೋಪದಿಂದ ಸುಟ್ಟು ಬೂದಿಮಾಡಿರುತ್ತೀಯೆ. ಮಾನದಾಯಕನಾದ ಪುರೋಹಿತನೇ! ಇವಳು ಪುನಃ ಶರೀರವನ್ನು ಬೇಡುತ್ತಿರುವಳು. ಅದಕ್ಕೆ ಅಪ್ಪಣೆಯನ್ನು ಕೊಡು.

೩೫. ಇವಳು ನನ್ನ ಕುಮಾರಿಯು. ನಿನಗೆ ಯಾಜ್ಯಳು. ದುರ್ಗತಿಯನ್ನು ಹೊಂದಿರುವಳಾದಕಾರಣ ಕೃತಕಾರ್ಯಳಾದ ಈ ತಪಸ್ವಿನಿಯನ್ನು ನಾನೂ ನೀನೂ ಸಹ ಪಾಲಿಸಬೇಕು.

ಯದಿ ತ್ವಂ ಶುದ್ಧಭಾವೇನ ಮಾಂ ಜ್ಞಾಪಯಸಿ ಮಾನದ ।
ತತೋಽಹಮಸ್ಯಾ ಭೂಯೋಽಪಿ ದೇಹಮುತ್ಪಾದಯಾಮ್ಯಹಂ ॥ ೩೬ ॥

ಕಿಂತು ವಿಷ್ಣುದಿನಸ್ಯೈಷಾ ವೈರಿಣೀ ಪಾಪಕಾರಿಣೀ ।
ಯಥಾ ಶುದ್ಧ್ಯೇತ ವಿಪ್ರೇಂದ್ರ ತಥೈವಾಶು ವಿಧೀಯತಾಂ ॥ ೩೭ ॥

ತಚ್ಛ್ರುತ್ವಾ ವಚನಂ ತಸ್ಯ ಬ್ರಹ್ಮಣಃ ಸ ಪುರೋಹಿತಃ ।
ಯಾಜ್ಯಾಯಾ ದೇಹಯೋಗಾರ್ಥಮಾದಿದೇಶ ಮುದಾನ್ವಿತಃ ॥ ೩೮ ॥

ವಿಪ್ರವಾಕ್ಯಂ ಸಮಾಕರ್ಣ್ಯ ಬ್ರಹ್ಮಾ ಲೋಕಪಿತಾಮಹಃ ।
ಕಮಂಡಲುಜಲೇನಾಕ್ಷನ್ಮೋಹಿನ್ಯಾ ದೇಹಭಸ್ಮ ತತ್ ॥ ೩೯ ॥

ಸಮುಕ್ಷಿತೇ ಬ್ರಹ್ಮಣಾ ಲೋಕಕರ್ತ್ರಾ
ಸಾ ಮೋಹಿನೀ ದೇಹಯುತಾ ಬಭೂವ ।
ಪ್ರಣಮ್ಯ ತಾತಂ ಚ ವಸೋಃ ಪುರೋಧಸೋ
ಜಗ್ರಾಹ ಪಾದೌ ವಿನಯೇನ ನತ್ವಾ ॥ ೪೦ ॥

---

೩೬. ಮಾನದಾಯಕನೇ! ನೀನು ಪರಿಶುದ್ಧ ಮನಸ್ಸಿನಿಂದ ಅಪ್ಪಣೆ ಕೊಟ್ಟರೆ ನಾನು ಇವಳಿಗೆ ಪುನಃ ದೇಹವನ್ನು ಕೊಡುವೆನು.

೩೭. ಆದರೆ ಇವಳು ಹರಿದಿನಕ್ಕೆ ವೈರಿಯು. ಪಾಪಕೃತ್ಯವನ್ನು ಮಾಡಿರುವಳು. ಆದುದರಿಂದ ಬ್ರಾಹ್ಮಣವರ್ಯನೇ! ಇವಳು ಶುದ್ಧಳಾಗುವ ಪ್ರಕಾರವನ್ನು ಬೇಗ ಆಜ್ಞಾಪಿಸು.

೩೮. ಹೀಗೆ ಹೇಳಿದ ಬ್ರಹ್ಮನ ಮಾತನ್ನು ಕೇಳಿ ಪುರೋಹಿತನಾದ ಬ್ರಾಹ್ಮಣನು ಸಂತೋಷಪಟ್ಟು ಯಾಜ್ಯಳಾದ ಮೋಹಿನಿಗೆ ದೇಹವನ್ನುಂಟು ಮಾಡುವಂತೆ ಅಪ್ಪಣೆ ಮಾಡಿದನು.

೩೯. ಬ್ರಾಹ್ಮಣನ ಮಾತನ್ನು ಕೇಳಿ ಲೋಕಪಿತಾಮಹನಾದ ಬ್ರಹ್ಮನು ಮೋಹಿನೀದೇಹದ ಬೂದಿಯನ್ನು ಕಮಂಡಲೂದಕದಿಂದ ಪ್ರೋಕ್ಷಿಸಿದನು.

೪೦. ಲೋಕಕರ್ತೃವಾದ ಬ್ರಹ್ಮನು ಪ್ರೋಕ್ಷಿಸಿದ ಕೂಡಲೇ ಆ ಮೋಹಿನಿಯು ದೇಹಯುಕ್ತಳಾದಳು. ತರುವಾಯ ಅವಳು ತಂದೆಗೆ ನಮಸ್ಕಾರಮಾಡಿ ಪುರೋಹಿತನಾದ ವಸುವಿನಪಾದಗಳಿಗೆ ವಿನಯದಿಂದ ನಮಸ್ಕರಿಸಿದಳು.

ತತೋ ವಸುರ್ಯಾಜಕ ಏವ ರಾಜ್ಞೋ
ಮುದಾನ್ವಿತೋ ಯೋಜ್ಯನಿತಂಬಿನೀಂ ತಾಂ ।
ವಿಮೋಹಿನೀಂ ಸ್ವಾಮಿಸುತೋಜ್ಝಿತಾಂ ಚ
ಜಗಾದ ವಾಕ್ಯಂ ವಿಧುತಾಮಯೀದಾಂ ॥ ೪೧ ॥

ವಸುರುವಾಚ

ಕ್ರೋಧಸ್ತ್ಯಕ್ತೋ ಮಯಾ ದೇವಿ ಬ್ರಹ್ಮಣೋ ವಚನಾದಥ ।
ಗತಿಂ ತೇ ಕಾರಯಿಷ್ಯಾಮಿ ತೀರ್ಥಸ್ನಾನಾದಿಕರ್ಮಣಾ ॥ ೪೨ ॥

ಇತ್ಯುಕ್ತ್ವಾ ಮೋಹಿನೀಂ ವಿಪ್ರೋ ಬ್ರಹ್ಮಾಣಂ ಜಗತಾಂ ಪತಿಂ ।
ವಿಸಸರ್ಜ ನಮಸ್ಕೃತ್ಯ ಮೋಹಿನೀಪಿತರಂ ಮುದಾ ॥ ೪೩ ॥

ಮೋಹಿನ್ಯಾ ವಸುನಾ ಚೈವ ಪ್ರೀತ್ಯಾ ಬ್ರಹ್ಮಾ ವಿಸರ್ಜಿತಃ ।
ಜಗಾಮ ಲೋಕಂ ತಮಸಃ ಪಾರಮವ್ಯಕ್ತವರ್ತ್ಮನಾ ॥ ೪೪ ॥

---

೪೧. ತರುವಾಯ ರಾಜಪುರೋಹಿತನಾದ ವಸುವು ಸಂತುಷ್ಟನಾಗಿ ವಿಮೋಚಿತಳು, ಪತಿಸುತ ವಿರಹಿತಳು, ಯಾಜ್ಯಸ್ತ್ರೀಯೂ ಆದ ಆ ಮೋಹಿನಿಯನ್ನು ಕುರಿತು ಮಾತನಾಡಿದನು.

೪೨. ವಸುವು ಹೇಳಿದನು :—ದೇವಿಯೇ! ಬ್ರಹ್ಮನ ಮಾತಿನಿಂದ ನಾನು ಕೋಪವನ್ನು ಬಿಟ್ಟಿರುವೆನು. ತೀರ್ಥಸ್ನಾನ ಮುಂತಾದ ಪುಣ್ಯಕರ್ಮಗಳಿಂದ ನಿನಗೆ ಸದ್ಗತಿಯಾಗುವಂತೆ ಮಾಡಿಸುವೆನು.

೪೩. ಈರೀತಿಯಾಗಿ ಮೋಹಿನಿಯನ್ನು ಕುರಿತು ಹೇಳಿ ಬ್ರಾಹ್ಮಣನು ಸಂತೋಷದಿಂದ ಜಗತ್ಪತಿಯೂ, ಮೋಹಿನೀಜನಕನೂ ಆದ ಬ್ರಹ್ಮನನ್ನು ನಮಸ್ಕರಿಸಿ ಬೀಳ್ಕೊಟ್ಟನು.

೪೪. ಮೋಹಿನೀವಸುಗಳಿಂದ ಪ್ರೀತಿಪೂರ್ವಕವಾಗಿ ಬೀಳ್ಕೊಟ್ಟ ಬ್ರಹ್ಮನು ತಮಸ್ಸಿಲ್ಲದ ತನ್ನ ಲೋಕಕ್ಕೆ ಅವ್ಯಕ್ತಮಾರ್ಗದಿಂದ ಹೊರಟನು.

ಸ ವಸುರ್ಬ್ರಾಹ್ಮಣಶ್ರೇಷ್ಠೋ ರುಕ್ಮಾಂಗದಪುರೋಹಿತಃ |
ಮೋಹಿನೀಂ ಸಮನುಗ್ರಾಹ್ಯಾಂ ಮತ್ವಾ ಹೃದಿ ವಿಚಾರಯೇತ್ || ೪೫ ||
ಮುಹೂರ್ತಂ ಧ್ಯಾನಮಾಪನ್ನೋ ಬುಬುಧೇ ಕಾರಣಂ ಗತೇಃ || ೪೬ ||

ಇತಿ ಶ್ರೀನಾರದೀಯಮಹಾಪುರಾಣೋತ್ತರಭಾಗೇ ಮೋಹಿನೀ ಚರಿತೇ ಸಪ್ತತ್ರಿಂಶೋಽಧ್ಯಾಯಃ

---

೪೫. ರುಕ್ಮಾಂಗದಪುರೋಹಿತನೂ, ಬ್ರಾಹ್ಮಣಶ್ರೇಷ್ಠನೂ ಆದ ಆ ವಸುವು ಮೋಹಿನಿಯು ಅನುಗ್ರಹಮಾಡುವುದಕ್ಕರ್ಹಳೆಂದು ಮನವರಿತು ವಿಚಾರಮಾಡಿದನು.

೪೬. ಅವನು ಒಂದು ಮುಹೂರ್ತಕಾಲ ಧ್ಯಾನಾವಸ್ಥೆಯನ್ನು ಹೊಂದಿ ಗತಿಕಾರಣವನ್ನು ತಿಳಿದನು.

ಇಂತು ಶ್ರೀನಾರದೀಯಪುರಾಣೋತ್ತರಭಾಗದಲ್ಲಿ ಮೋಹಿನೀಚರಿತ್ರೆಯೊಳು ಮೂವತ್ತೇಳನೆಯ ಅಧ್ಯಾಯವು ಮುಗಿದುದು.

*

## ವಿಷಯಸಂಗ್ರಹ

ಮೋಹಿನಿಯು ಏಕಾದಶಿಗೆ ಸಮಾನವಾದ ವ್ರತವಿಲ್ಲ; ಅದರ ಸಮೀಪ ದಲ್ಲಿ ನನಗೆ ಸ್ಥಾನವು ಉಚಿತವೆಂದು ಭಾವಿಸಿರುವೆನು; ನೀವು ಅದನ್ನು ನನಗೆ ಅನುಗ್ರಹಿಸಬೇಕೆಂದು ದೇವತೆಗಳನ್ನು ಬೇಡಿದಳು. ಅವರು ಏಕಾದಶೀವಿಷಯ ವನ್ನೆಲ್ಲಾ ವಿವರಿಸಿ ದಶಮಿಯ ಪ್ರಾಂತಭಾಗದಿಂದ ವಿದ್ಧೈಕಾದಶಿಯು ಉಪವಾ ಸಾರ್ಹವಲ್ಲ, ಅದು ಬಹಳ ಸೂಕ್ಷ್ಮವಾದುದು; ಅದನ್ನರಿಯದೆ ಉಪವಾಸಮಾ ಡುವವರು ನರಕಭಾಗಿಗಳಾಗುವರು; ಅಂತಹ ಜನರಿಗೆ ಆ ವೇಧೆಯಲ್ಲಿ ಮೋಹ ವನ್ನು ಹುಟ್ಟಿಸುವುದಕ್ಕಾಗಿ ದಶಮಿಯ ಪ್ರಾಂತಭಾಗದಲ್ಲಿ ಮೋಹಿನಿಗೆ ಸ್ಥಾನವ ನ್ನಿತ್ತರು. ಮೋಹಿನಿಯು ಅದರಿಂದ ಸಂತುಷ್ಟಳಾಗಿ ತಂದೆಯಬಳಿಗೆ ಹೋಗಿ ನನ್ನ ಕಾರ್ಯವನ್ನು ಇದರಿಂದ ನಾನು ಸಾಧಿಸುವೆನೆಂದು ಹೇಳಿ ಪುರೋಹಿತನನ್ನು ಸಮಾಧಾನಗೊಳಿಸಿ ಬೂದಿಯಾಗಿರುವ ತನ್ನದೇಹವನ್ನು ಪುನಃ ಕೊಡಿಸಬೇ ಕೆಂದು ಪ್ರಾರ್ಥಿಸಿದಳು. ಅದರಂತೆ ಬ್ರಹ್ಮನು ಪುರೋಹಿತನನ್ನು ಪ್ರಸನ್ನೀ ಕರಿಸಿಕೊಂಡು ಕಮಂಡಲೂದಕದಿಂದ ಬೂದಿಯನ್ನು ಪ್ರೋಕ್ಷಿಸಲು, ತಕ್ಷಣದಲ್ಲಿ ಅದು ದೇಹವಾಗಿ ಮೋಹಿನಿಗೆ ದೊರಕಿತು. ಅದರಿಂದ ಮೋಹಿನಿಯು ಸಂತೋ ಷಪಟ್ಟಳು. ಯಮನು ಪುನಃ ತನಗೆ ಕರ್ತವ್ಯವು ದೊರಕಿದುದಕ್ಕಾಗಿ ಮೋಹಿನಿ ಯನ್ನಭಿನಂದಿಸಿ ತನ್ನಲೋಕಕ್ಕೆ ಹೊರಟನು. ಪುರೋಹಿತನೂ ಸಹ ಬ್ರಹ್ಮನ ಮಾತಿನಿಂದ ಕೋಪವನ್ನು ಬಿಟ್ಟು ಮೋಹಿನಿಯು ಅನುಗ್ರಾಹ್ಯಳೆಂದು ತಿಳಿದು ಯೋಗದೃಷ್ಟಿಯಿಂದ ಈ ಘಟನೆಯ ಕಾರಣವನ್ನರಿತನು.

ಮಂಗಳಂ

ಮೈಸೂರು
ಶ್ರೀಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ
ಪ್ರೊ:—ವೈ. ಆರ್. ರಂಗರಾವ್‌ರವರಿಂದ
ಮುದ್ರಿಸಲ್ಪಟ್ಟಿತು.